c

# ನೋವು

ಅನಕೃ

ಕಥಾ ಸಾಹಿತ್ಯ

CI

ನಿರಂಜನ : ನೋವು

IV. ರವೀಂದ್ರನಾಥ
ಠಾಕೂರರಿಗೆ

# ನೋವು

## [ನೂರು ಜುಟ್ಟು ಮೂರು ಜಡೆ]

ನಿರಂಜನ

ಕಥಾ ಸಾಹಿತ್ಯ

ಸಾಹಿತ್ಯ ಭಂಡಾರ
ಜಂಗಮ ಮೇಸ್ತ್ರಿಗಲ್ಲಿ, ಬಳೇಪೇಟೆ
ಬೆಂಗಳೂರು—೫೬೦೦೫೩
ದೂರವಾಣಿ - [illegible]

NOVU — A novel in Kannada by Niranjana, originally published under the title Nooru Juttu Mooru Jade. Publisher : Tejaswini Niranjana, Kathaa Saahitya, 515, 7th Main, 5th Block, Jayanagar South, Bangalore-560 041, India. Pages viii+232 Price: Rs. 6-00

First Edition 1965
Revised Edition 1976

© NIRANJANA

ಮುದ್ರಕರು :

ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ (ಪ್ರೈ) ಲಿಮಿಟೆಡ್
12/13, ಲಾಲ್‌ಬಾಗ್ ಫೋರ್ಟ್ ರೋಡ್, ಬೆಂಗಳೂರು – 560 004

Paper used for printing this book was made available by the Government of India at concessional rate through the Karnataka Publishers and Booksellers Association.

ಆತ್ಮೀಯರಾದ

**ಜಿ. ವೆಂ.**

ಅವರಿಗೆ

ಆರು ತಿಂಗಳ ಸವಿ ಸಾನ್ನಿಧ್ಯದ ನೆನಪಿಗೆ

# ಪ್ರಕಾಶಕರ ನುಡಿ

'ನೋವು' ಕಥಾ ಸಾಹಿತ್ಯದ ಮೂರನೆಯ ಪ್ರಕಟಣೆ. ಈ ಕಾದಂಬರಿ 'ನೂರು ಜುಟ್ಟು ಮೂರು ಜಡೆ' ಎಂಬ ಹೆಸರಿನಲ್ಲಿ ಪ್ರಕಾಶ ಸಾಹಿತ್ಯದವರಿಂದ ಮೊದಲು ಪ್ರಕಟವಾಯಿತು. ಬರೆದವರ ಅಪೇಕ್ಷೆಯಂತೆ ಶೀರ್ಷಿಕೆಯನ್ನು 'ನೋವು' ಎಂದು ಬದಲಿಸಿ ದ್ವಿತೀಯ ಮುದ್ರಣವನ್ನು ಈಗ ಹೊರತರುತ್ತಿದ್ದೇವೆ. ("ಸಾಮಾಜಿಕ ಸ್ಥಿತ್ಯಂತರವನ್ನು ಚಿತ್ರಿಸುವ ಈ ಕೃತಿಯಲ್ಲಿ ಬದಲಾವಣೆ ಉಂಟುಮಾಡುವ ನೋವು ಪ್ರಧಾನ ಸ್ಥಾನ ಪಡೆದಿದೆ.")

'ವಿಮೋಚನೆ', 'ರಂಗಮ್ಮನ ವಠಾರ' ಗಳಂತೆ ಈ ಕೃತಿಯ ಮಾರಾಟ ಬೆಲೆಯೂ ೬ ರೂಪಾಯಿ ಮಾತ್ರ.

ನಮ್ಮ ಮುಂದಿನ ಪ್ರಕಟಣೆ 'ನಂದಗೋಕುಲ'.

ಇಲ್ಲಿ ಬಳಸಿರುವ ಮುದ್ರಣ ಕಾಗದವನ್ನು ಪಡೆಯಲು ನೆರವಾದ ಕರ್ನಾಟಕ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘದ ಅಧ್ಯಕ್ಷ ಶ್ರೀ ಎಚ್. ಕಮಲಾನಾಥ್ ಅವರಿಗೂ ಸೊಗಸಾದ ಮುದ್ರಣಕ್ಕೆ ಕಾರಣರಾದ ಬೃಂದಾವನ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಎಂ. ಎಚ್. ಕೌಜಲಗಿ ಅವರಿಗೂ ಕಥಾ ಸಾಹಿತ್ಯ ಋಣಿಯಾಗಿದೆ.

ಮೇ ೧೫, ೧೯೭೬

**ತೇಜಸ್ವಿನೀ ನಿರಂಜನ**
ಕಥಾ ಸಾಹಿತ್ಯದ ಪರವಾಗಿ

೫೧೫, ೭ನೇ ಮುಖ್ಯ ರಸ್ತೆ,
೫ನೇ ಬ್ಲಾಕ್
ಜಯನಗರ ದಕ್ಷಿಣ
ಬೆಂಗಳೂರು — ೫೬೦ ೦೪೧

# ನೋವು

೧

" ಅತ್ತೆಮ್ಮಾ...... "

ಮಧ್ಯಾಹ್ನದ ಕೆಲಸ ಮುಗಿಸಿ ನಾಗಮ್ಮ, ತುಸು ಹೊತ್ತು ವಿಶ್ರಾಂತಿ ಪಡೆಯೋಣ ಎಂದು ನಡುಮನೆಯಲ್ಲಿ ಮೈಚೆಲ್ಲಿದ್ದರು. ಬೇಸಗೆಯ ಬೇಗೆ. ಮೈ ಬೆಂದು ಬೆವರೊಡೆದು ಅಲ್ಲಿಯೇ ಜೊಂಪು ಹತ್ತಿತ್ತು.

" ಅತ್ತೆಮ್ಮಾ...... "

ರಂಗಣ್ಣನಿಗೆ ಸಂಕೋಚವಾಯಿತು. ನಿದ್ದೆ ಬಂದಿದೆ. ಇನ್ನೊಮ್ಮೆ ಕರೆದು ಎಬ್ಬಿಸಲೋ ಬೇಡವೋ......

ಹೋಗಲಿ, ತನ್ನ ಕೊಠಡಿಗೆ ತಾನು ಮರಳುವುದು ಮೇಲು ಎಂದು ಆತ ನಿರ್ಧರಿಸಿ ದೊಡನೆಯೇ—ಯಾರೋ ಕರೆದಂತಾಯಿತಲ್ಲ, ರಂಗನದೇ ಸ್ವರ ಎಂದುಕೊಳ್ಳುತ್ತ, ನಾಗಮ್ಮ ಮೆಲ್ಲನೆ ಕಣ್ಣು ತೆರೆದರು.

ಪಡಸಾಲೆಯ ಬಾಗಿಲಲ್ಲಿ ಸೋದರಳಿಯ ನಿಂತಿದ್ದ.

" ಏನ್ ಮೊಗ ? "

ಅತ್ತೆಗೆ ಎಚ್ಚರವಾಯಿತು, ಎಂದು ರಂಗಣ್ಣನಿಗೆ ಸಮಾಧಾನ.

" ಸುಬ್ಬಿ ಎಲ್ಲಿ, ಅತ್ತೆಮ್ಮ ? "

ಇದನ್ನು ತಿಳಿಯುವುದಕ್ಕೋಸ್ಕರ ಮಲಗಿದ್ದವಳನ್ನು ಎಬ್ಬಿಸಬೇಕೆ ? ಹುಡುಗರು ಎಷ್ಟೆಂದರೂ ಹುಡುಗರೇ—ಎಂದು, ಭಾರವಾದ ಕಣ್ಣೆವೆಗಳನ್ನು ಮತ್ತೆ ಮುಚ್ಚಿಕೊಳ್ಳುತ್ತ, ನಾಗಮ್ಮ ಅಂದರು :

" ನಾ ಕಾಣೆ ಮೊಗ."

ಆ ಉತ್ತರ ಕೊಡುತ್ತಿದ್ದಾಗ ಮಸಕು ಮಸಕಾಗಿ ಅವರಿಗೆ ನೆನಪಾಯಿತು.

" ಸೀಬೆಕಾಯಿ ಕಿತ್ಕೋಬೇಕು ಅಂತಿದ್ಲು. ತ್ವಾಟಕ್ಕೆ ಓಗಿರ್‍ಬೌದು."

ರಂಗಣ್ಣನ ಅನುಮಾನ ಬಲಗೊಂಡಿತು.

" ಸರಿ ಅತ್ತೆಮ್ಮಾ. ನಾನೂ ತ್ವಾಟದ ಕಡೆ ಓಗ್ಬರ್‍ತೀನಿ," ಎಂದು ನುಡಿದು ಆತ ಚಪ್ಪಲಿ ಮೆಟ್ಟಿಕೊಂಡು ಹೊರಡಲು ಅಣಿಯಾದ.

ನಿದ್ದೆಯ ಪರದೆ ಸರಿಸಿ ನಾಗಮ್ಮನ ಪ್ರಜ್ಞೆಯ ಆಳಕ್ಕೆ ಆ ಮಾತು ಇಳಿದಾಗ ಅವರೆಂದರು :

" ಬಿಸಿಲಲ್ವೇನೋ... "

" ಸುಬ್ಬೀನ ಕರಕೊಂಡು ಬಂದ್ಬುಡ್ತೀನಿ."

" ಊಂ. ಒರಗಡೆ ಕದ ಎಳ್ಕೊಂಡು ಓಗಪ್ಪಾ " ಎಂದು, ಕ್ಷೀಣಿಸಿದ ಧ್ವನಿಯಲ್ಲಿ ನಾಗಮ್ಮ ಅಂದರು. ನಿದ್ದೆಯ ಗವಿಯಲ್ಲಿ ಅವರ ಮಾತು ಕಂತಿಹೋಯಿತು.

ಅಂಗಳಕ್ಕಿಳಿದು, ಹೊಲದ ಏರಿಯ ಮೇಲೆ ನಡೆದು, ತೋಟವನ್ನು ತಲಪಿದಾಗ

ರಂಗಣ್ಣನ ಮುಖ ಮೈ ಬಿಸಿಲಿನ ಝಳಕ್ಕೆ ಚುರುಗಟ್ಟಿದುವು. ಬಾಲ್ಯದಿಂದ ಆವರೆಗೆ ವರ್ಷದ ಹೆಚ್ಚಿನ ಭಾಗವನ್ನು ನಗರದಲ್ಲಿ ಕಳೆದು, ಬಿಸಿಲು ತಡೆಯಲಾರದಷ್ಟು ಸುಖಪುರುಷನಾಗಿ ಹೋದೆ—ಎಂದು ತನ್ನ ಮೇಲೆಯೇ ಸಿಟ್ಟಾದ ರಂಗಣ್ಣ.

ತೋಟದ ಗುಡಿಸಿಲಿನಲ್ಲಿ ಆಳು ಮಾದನಾಗಲೀ ಅವನಾಕೆ ನೀಲಿಯಾಗಲೀ ಇದ್ದಂತೆ ಕಾಣಲಿಲ್ಲ. ಅವರ ಮಕ್ಕಳಿಬ್ಬರು —ಹುಡುಗರು— ಹಲಸಿನ ಮರದ ಕೆಳಗೆ ಕುಂಟಬಿಲ್ಲೆ ಆಡುತ್ತಿದ್ದರು. ಸಣ್ಣ ಗೌಡರು ಬಂದರೆಂದು ಅವರು ಆಟ ನಿಲ್ಲಿಸಿದರು.

ದೊಡ್ಡವನನ್ನು ಕುರಿತು ರಂಗಣ್ಣ ಕೇಳಿದ:

"ನಮ್ಮ ಮನೆಯಿಂದ ಯಾರಾದರೂ ಈ ಕಡೆ ಬಂದ್ರೇನ್ಲಾ?"

"ಯಾರ್ನೂ ನೋಡ್ನಿಲ್ಲ," ಎಂದ ಹೈದ.

"ಚಿಕ್ಕಮ್ಮಾವ್ರು ಬರ್ನಿಲ್ವಾ?"

"ಬಂದಿದ್ರು ಬುದ್ಧಿ. ಒಸಿ ಒತ್ತಾಯ್ತು."

"ಮತ್ಯಾಕೋ ಯಾರ್ನೂ ನೋಡ್ನಿಲ್ಲ ಅಂದಿದ್ದು?"

"ದೊಡ್ಬುದ್ದಿಯೋರು ಬರ್ನಿಲ್ಲ ಅಂದ್ನಿ."

"ನಿನ್ನ ತಲೆ, ಸೀಬೆಕಾಯಿ ಕಿತ್ಕೊಟ್ಯಾ?"

"ಕೊಟ್ನಿ."

ಸೀಬೆಕಾಯಿಗೆಂದು ಸುಭದ್ರ ತೋಟಕ್ಕೆ ಬಂದುದು ಸುಳ್ಳಲ್ಲ ಹಾಗಾದರೆ. ತಂಗಾಳಿ ಬೀಸಿದಂತಾಯಿತು ರಂಗಣ್ಣನ ಮನಸ್ಸಿಗೆ. ಆದರೆ ಆ ಅಲೆಯನ್ನು ಬಿಸಿಲ ತೆರೆಯೊಂದು ಅಟ್ಟಿಸಿಕೊಂಡು ಬಂತು.

"ಈಗೆಲ್ಲಿ ಚಿಕ್ಕಮ್ಮಾವ್ರು?"

"ದಿಬ್ಬದ ಕಡೆ ಓದ್ರು" ಎಂದ ಹೈದ.

ರಂಗಣ್ಣನ ಗಂಟಲು ಗೊಗ್ಗರವಾಯಿತು. ಸಂಶಯಪಿಶಾಚಿ ಗಹಗಹಿಸಿತು. ಕೆಂಡ ಮೆಟ್ಟಿದವನಂತೆ ಆತ, ನಿಂತ ಸ್ಥಳದಿಂದ ಕದಲಿ, ದಿಬ್ಬದತ್ತ ನಡೆದ.

ದಿಬ್ಬದ ಆಚೆಗೂ ಈಚೆಗೂ ತಪ್ಪಲು. ಈ ಕಡೆಯ ತಪ್ಪಲಲ್ಲಿ ಕಣಿವೇಹಳ್ಳಿ ಮಲಗಿತ್ತು. ಆ ಕಡೆಯದು ನಿರ್ಜನ ಪ್ರದೇಶ. ಅಲ್ಲಿ ಇಳಿಜಾರು ನೆಲ ಕೊನೆಯಾಗುವ ಕಡೆ ಕಾಡು ಮೊದಲಾಗಿ ದಿಬ್ಬದ ಬಲಮಗ್ಗುಲಿಂದ ಒಂದು ಕಾಲು ದಾರಿ ಇಳಿದು, ಎರಡು ಮೈಲು ದೂರದಲ್ಲಿದ್ದ ಮೋಟಾರು ರಸ್ತೆಯ ಕಡೆಗೆ ಸಾಗಿತ್ತು. ಕಣಿವೇಹಳ್ಳಿಯಿಂದ ಹೊರಟು ಭಾಗ್ಯನಗರಕ್ಕೆ ಹೋಗುವವರು, ಅಲ್ಲಿಂದ ಇಲ್ಲಿಗೆ ಮರಳುವವರು ಹಿಡಿಯಬೇಕಾದ ದಾರಿ ಅದು. ದಿಬ್ಬ ದೊಡ್ಡದು. ಅಲ್ಲಲ್ಲಿ ಹಸಿರು ಹೊರೆ ಹೊತ್ತು ಮರಗಳು ನಿಂತಿದ್ದುವು. ನಡುನಡುವೆ ಕಾಡುಪೊದೆಗಳು, ಭೀಮಬಂಡೆಗಳು. ದಿಬ್ಬದ ತುದಿಯಲ್ಲೊಂದು ಈಶ್ವರನ ಗುಡಿ.

ರಂಗಣ್ಣ ಮೈಯೆಲ್ಲ ಕಣ್ಣಾಗಿ ದಿಬ್ಬವನ್ನೇರಿದ. ಬಾಲ್ಯದಲ್ಲಿ ಆಗಾಗ್ಗೆ, ಮುಂದೆ ಹಳ್ಳಿಗೆ ರಜಾದಿನಗಳಲ್ಲಿ ಬಂದಾಗ ಒಮ್ಮೊಮ್ಮೆ, ಪದ್ಮನಾಭನನ್ನೂ ಕರೆದುಕೊಂಡು ಆತ ಗುಡಿಯ ತನಕ ಏರಿಹೋಗಿ ಮುಚ್ಚಂಜೆಯ ವೇಳೆಗೆ ಇಳಿದು ಬರುವುದಿತ್ತು. ಆ ಪರಿಪಾಠಕ್ಕೆ ವ್ಯತ್ಯಯ ಒದಗಿ ಒಂದು ವರ್ಷವಾಯಿತಲ್ಲ? ಪ್ರಿ-ಯೂನಿವರ್ಸಿಟಿ ತರಗತಿ ಮುಗಿಸಿದ ಮೇಲೆ

ಪದ್ಮನಾಭ ಬಿ.ಎ.ಗೆ ಸೇರಿದ. ತಾನು ವೈದ್ಯಕೀಯದ ವಿದ್ಯಾರ್ಥಿಯಾದೆ. ಆಮೇಲೂ ಒಂದು ವರ್ಷ ಅವರ ಗೆಳೆತನಕ್ಕೆ ಚ್ಯುತಿ ಬರಲಿಲ್ಲ ಎನ್ನಬಹುದು. ಆದರೆ ಕಳೆದ ಬೇಸಗೆಯ ರಜದಲ್ಲಿ ಆ ಬಾಂಧವ್ಯ ಕಡಿದುಹೋಯಿತು.

ಪಾಯಜಾಮದ ಅಂಚು ಒಂದು ಪೊದೆಯ ಮುಳ್ಳುಕಡ್ಡಿಯಲ್ಲಿ ಸಿಲುಕಿಕೊಂಡಿತು. ರಂಗಣ್ಣ ಬಗ್ಗಿ ಅದನ್ನು ಬಿಡಿಸಿದ. ಕಿರುಬೆರಳು ತೂರಿಹೋಗುವಷ್ಟು ಪಾಯಜಾಮ ಹರಿದಿತ್ತು. ರಂಗಣ್ಣ ಮುಂದುವರಿದ. ಹಣೆಯ ಮೇಲೆ ಬೆವರ ಹನಿಗಳು ಮುತ್ತು ಗಟ್ಟಿದುವು. ಜುಬ್ಬದ ಮಗ್ಗುಲು ಜೇಬಿನಿಂದ ಕರವಸ್ತ್ರವನ್ನು ಹೊರತೆಗೆದು ಹಣೆಯನ್ನೂ ಮುಖವನ್ನೂ ಒರೆಸಿಕೊಂಡ.

ಎಲ್ಲಿರಬಹುದು ಸುಭದ್ರೆ? ಯಾವ ಮರದ ಕೆಳಗೆ? ಯಾವ ಬಂಡೆಯ ಪೊದೆಯ ಮರೆಯಲ್ಲಿ? ಒಬ್ಬಳೇ ಇರುವಳೊ? ಅಥವಾ, ಆತ ಮೊದಲೇ ಬಂದು ಕಾಯು ತ್ತಿರುವನೊ?

ಜತೆಯಾಗಿ ಅವರನ್ನು ಕಂಡೆ; ಆಗ ಮಾಡಬೇಕಾದುದೇನು? ಅವರ ಸಂಬಂಧ ಏನಿದ್ದೀತು? ಬರಿಯ ಮಾತುಕತೆಯೋ ಅಥವಾ—

ಇಂಥದೊಂದು ದುರ್ದಿನ ಒದಗಿಬಂದೀತೆಂದು ಕನಸು ಕೂಡಾ ಕಂಡಿರಲಿಲ್ಲವಲ್ಲ ತಾನು...

ನಡುವನ್ನು ತುಸು ಬಾಗಿಸಿ ಮೇಲಕ್ಕೆ ನಡೆಯುತ್ತಿದ್ದ ರಂಗಣ್ಣ ಆರು ತಿಂಗಳ ಹಿಂದೆ ತಂಗಿಗೂ ತನಗೂ ನಡೆದ ಸಂಭಾಷಣೆಯನ್ನು ಸ್ಮರಿಸಿಕೊಂಡ:

"ಸುಬ್ಬಿ, ನಿನ್ನ ಒಳ್ಳೇದಕ್ಕೆ ಹೇಳ್ತೀನಿ."

ಹುಬ್ಬುಗಳನ್ನು ಮೇಲಕ್ಕೆ ಸರಿಸಿ, ತನ್ನನ್ನು ನೋಡಿ ಅವಳೆಂದಿದ್ದಳು:

"ಏನು?"

"ಪದ್ಮನ ಜತೆ ಚೆಲ್ಲಾಟ ಬಿಟ್ಬಿಡು."

"ಅವನು ನಿನ್ನ ಗೆಳೆಯ. ಚೆಲ್ಲಾಟ ನೀನೇ ಆಡು. ನಾಯಾಕೆ ಆಡ್ಲಿ?"

ಕೆಂಪಡರಿದ ಮುಖ, ಕಣ್ಣುಗಳಿಂದ ಕಿಡಿ.

"ಅಪ್ಪನಿಗೆ ಗೊತ್ತಾದರೆ ನಿನ್ನ ಚಕ್ಕಳ ಸುಲೀತಾರೆ."

"ಓಗೋ, ಓಗೋ, ಕಂಡಿದೀನಿ. ಮಾತಾಡ್ತಾನೆ!"

"ಇನ್ಮುಂದೆ ಪದ್ಮನೂ ನೀನೂ ಇಬ್ಬರೇ ಕಿಲಿಕಿಲಿ ಮಾತ್ನಾಡಿದ್ರೆ ಹುಷಾರ್!"

"ಕಿಲಿಕಿಲಿ ನೀನೇ ಮಾಡು ನರ್ಸಮ್ಮಗಳ ಜತೆಗೆ."

"ಮುಚ್ಚು ಬಾಯಿ!"—ಅದೊಂದೇ ಸಂವಾದದಿಂದ ಕರಗಿಹೋಗಬೇಕೆ ಅಣ್ಣ-ತಂಗಿ ಯರ ನಡುವಿನ ಮಮತೆ?

ರಂಗಣ್ಣನಿಗೆ ಅನಿಸುತ್ತಿತ್ತು: ತಾಯಿಯನ್ನು ಕಳೆದುಕೊಂಡುದರಿಂದ ಹೀಗಾಯಿ ತೇನೋ? ಹೆತ್ತವಳು ಇದ್ದಿದ್ದರೆ ಸುಭದ್ರೆ ಖಂಡಿತ ಹದ್ದುಮೀರಿ ಹೋಗುತ್ತಿರಲಿಲ್ಲ. ತನಗೂ ತಂಗಿಗೂ ಐದು ವರ್ಷಗಳ ಅಂತರ. ಹತ್ತು ದಿನಗಳ ಹಸುಳೆಯನ್ನು ಬಿಟ್ಟು ಬಾಣಂತಿ ದೆಸೆಯಲ್ಲಿ ತಾಯಿ ಕಾಲವಾಗಿದ್ದಳು. ತಮ್ಮ ಸೋದರತ್ತೆ ತಾಯಿಯ ಸ್ಥಾನವನ್ನು ತುಂಬಿದುದರಿಂದ ಸುಭದ್ರೆ ಉಳಿದುಕೊಂಡಳು.

...ಒಂದು ಮರದ ಕೆಳಗೆ ನಿಂತು ತುಸು ದಣಿವಾರಿಸಿಕೊಂಡ ರಂಗಣ್ಣ. ಅಲ್ಲಿಂದ

ದೃಷ್ಟಿ ಹರಿಯುವ ತನಕವೂ ದಿಬ್ಬದ ಉದ್ದಗಲಕ್ಕೆ ಆತ ನೋಡಿದ. ಅವರಿಬ್ಬರು ತನಗೆ ಕಾಣಿಸುವ ಬದಲು ತಾನೇ ಅವರ ಕಣ್ಣಿಗೆ ಬಿದ್ದರೆ? ಸದ್ಯಃ ಅವರ ಸುಳಿವಿರಲಿಲ್ಲ. ದೂರದಲ್ಲಿ ಒಂದೆರಡು ಮರಗಳ ಕೆಳಗೆ ದನಕರುಗಳಿದ್ದುವು. ಒಣ ಹುಲ್ಲನ್ನು ತಿಂದುಬಂದು ನೆರಳಲ್ಲಿ ಮೆಲುಕು ಹಾಕುತ್ತಿದ್ದುವು. ಇಬ್ಬರು ಮೂವರು ದನಕಾಯುವ ಹುಡುಗರೂ ಇದ್ದರು.

ರಂಗಣ್ಣ ತನ್ನೆದುರು ನೇರವಾಗಿ ಹಳ್ಳಿಯ ಕಡೆ ನೋಡಿದ. ಸೋಮಾರಿಯಂತೆ ಹರಡಿಕೊಂಡಿದ್ದ ಗ್ರಾಮ. ಅಲ್ಲಲ್ಲಿ ಮರಗಳು, ಮನೆಗಳು. ಅವುಗಳ ಮೇಲಿಂದ ಬಿಸಿಲು ಥಕಥಕ ಕುಣಿಯುತ್ತಿತ್ತು.

ತುಸು ದೂರದಲ್ಲಿ ಅಂಕುಡೊಂಕಾದೊಂದು ಬೆಳ್ಳಿಯ ಗೆರೆ. ಅದು ಕ್ಷೀರ ನದಿ. ಯಾರು ಅದನ್ನು ಹಾಲು ಹೊಳೆ ಎಂದು ಕರೆದರೊ? ಯಾವ ಋಷಿಯೊ, ಯಾವ ಮುನಿಯೊ? ಎಷ್ಟೊಂದು ಕಾಡುಮೇಡುಗಳನ್ನು ಹಾದುಬರುತ್ತಿದೆಯೊ ಈ ಕ್ಷೀರ? ಬೇಸಗೆಯಲ್ಲೂ ಹಳ್ಳಿಗೆ ಸಾಲುವಷ್ಟು ನೀರಿರುತ್ತಿತ್ತು. ಈ ನದಿ ಇರುವುದರಿಂದಲ್ಲವೆ ಕಣಿವೇಹಳ್ಳಿ ಶ್ರೀಮಂತವಾಗಿರುವುದು? ಅದರ ನೀರನ್ನು ಕುಡಿದಲ್ಲವೆ ಹಳ್ಳಿಯ ಜನ ಬದುಕುತ್ತಿರುವುದು?

ಕ್ಷೀರ ನದಿಯ ನೆನಪಾದಾಗಲೆಲ್ಲ ರಂಗಣ್ಣನಿಗೆ ಆಶ್ಚರ್ಯವೆನಿಸುತ್ತಿತ್ತು. ಎಷ್ಟೊಂದು ಕ್ರಿಮಿಕೀಟಗಳಿರಬೇಡ ಆ ನದಿಯ ನೀರಿನಲ್ಲಿ? ಆದರೂ ಆ ನೀರನ್ನು ಕುಡಿದ ಜನರ ಆರೋಗ್ಯ ಕೆಡುವುದಿಲ್ಲವಲ್ಲ! ಗಂಗಾ ನದಿಯಲ್ಲಿ ಕೊಳೆತ ಹೆಣಗಳೇ ತೇಲಿಹೋಗುತ್ತವಂತೆ; ಅದರಷ್ಟು ಮಲಿನವಾದ ನದಿ ಇನ್ನೊಂದು ಇರಲಾರದಂತೆ. ಇಷ್ಟಿದ್ದರೂ ಅದರ ನೀರು ಪರಿಶುದ್ಧ. ಗಂಗೆಯ ಗುಣಗಳೇ ಈ ಕ್ಷೀರ ನದಿಯಲ್ಲೂ ಇರಬೇಕು.

ರಂಗಣ್ಣನೆಂದುಕೊಂಡ: ಸಿಗರೇಟು ಪ್ಯಾಕೆಟ್ಟನ್ನು ತನ್ನೊಡನೆ ತರಬೇಕಾಗಿತ್ತು. ಮನೆಯಲ್ಲಂತೂ ಸೇದುವಂತಿಲ್ಲ. ತಂಗಿಯನ್ನು ಹುಡುಕಲೆಂದು ಅವಸರದಲ್ಲಿ ಹೊರಟು ಬಿಟ್ಟೆ...ರಜೆ ಮುಗಿದು ಭಾಗ್ಯನಗರಕ್ಕೆ ಮರಳುವವರೆಗೂ ಸಿಗರೇಟನ್ನು ಮುಚ್ಚುಮರೆಯಿಲ್ಲದೆ ಸೇದುವ ಸ್ವಾತಂತ್ರ್ಯ ತನಗಿಲ್ಲ.

ಹಿಂದೆ ಒಮ್ಮೆ ತನ್ನ ಟ್ರಂಕಿನಲ್ಲಿ ಸಿಗರೇಟ್ ಪ್ಯಾಕೆಟು ಇದ್ದುದನ್ನು ಕಂಡುಹಿಡಿದು ಸುಭದ್ರೆ ಅಂದಿದ್ದಳು:

"ಓಹ್ಹೋ! ಇದು ಬೇರೆ ಶುರು ಮಾಡ್ಬಿಟ್ಟಿದೀಯಾ?"

ತಾನು ಗದರಿದ್ದ:

"ಮುಟ್ಬೇಡ! ಅಲ್ಲಿಡು!"

"ಕೆಟ್ಟ ಚಾಳಿ, ಕೆಟ್ಟ ಚಾಳಿ."

"ಮೆಡಿಕಲ್ ಸ್ಟೂಡೆಂಟ್‌ಗಳು ಸೇದ್ಲೇಬೇಕು."

"ರೂಲ್ಸ್ ಐತೇನೋ?"

"ಔದು ಮತ್ತೆ."

"ನಿನ್ನ ಗೆಣೇರು ಸೇದ್ತಾರೇ. ಅವರೇನೂ ಮೆಡಿಕಲ್ನೋರಲ್ವಲ್ಲ."

"ಸಾಕು ತಲೆಹರಟೆ. ಅಪ್ಪನಿಗೆಲ್ಲಾದರೂ ಹೇಳಿದೆಯೊ ಹುಷಾರ್!"

"ಯೋಳೊಲ್ಲ. ಏನ್ಕೊಡ್ತೀಯಾ ನಂಗೆ? ಇನ್ನೊಂದ್ಸಲ ಬರುವಾಗ ಸ್ನೋ ಬಾಟ್ಲಿ

ತಂದ್ಕೊಡ್ತೀಯಾ ? "

" ಹೂಂ......ಹೂಂ...... "

—'ನಿನ್ನ ಗೆಣೇರು ಸೇದ್ತಾರೆ...' ಹುಂ. ಗೆಳೆಯ ಅಂತ ಮನೆಯೊಳಗೆ ಅವನನ್ನು ಬರಬಿಟ್ಟಿದ್ದೇ ತಪ್ಪಾಯಿತು. ತನ್ನ ಹಿರಿಯರೂ ಅವನ ಹಿರಿಯರೂ ಸ್ನೇಹಿತರಾದರೇನಾಯಿತು ? ಇವನು ಜಿಗಣೆಯ ಹಾಗೆ ಅಂಟಿಕೊಳ್ಳಬೇಕೆ ಈ ಮನೆಗೆ ? ಈಗ ಒಂದೇ ದಾರಿ. ಜಿಗಣೆಯನ್ನು ಕಿತ್ತುಹಾಕಿ ಪಾದದ ಕೆಳಗೆ ಹೊಸಕುವ ಹಾಗೆ ಇವನನ್ನು...

'ನಿನ್ನ ಗೆಣೇರು ಸೇದ್ತಾರೆ.'

ಈಗ ನೆನಪಾಗುತ್ತಿದೆ. ಒಂದಲ್ಲ ಎರಡು ವರ್ಷಗಳಿಂದೀಚೆಗೆ ಸುಭದ್ರೆ ತನ್ನೊಡನೆ ಕಣ್ಣುಮುಚ್ಚಾಲೆಯಾಡುತ್ತಿದ್ದಾಳೆ. ಅಣ್ಣ—ತಂಗಿ ಯಾವ ವಿಷಯವನ್ನೆತ್ತಿಕೊಂಡು ಮಾತಾಡಿದರೂ ಪದ್ಮನ ಪ್ರಸ್ತಾಪವನ್ನು ಅವಳು ಮಾಡದೆ ಇರುತ್ತಿರಲಿಲ್ಲ.

ತಾನು ಕೆ. ಎಸ್. ರಂಗೇಗೌಡ, ಕಣಿವೇಹಳ್ಳಿ ಶಾಮೇಗೌಡರ ಮಗ ರಂಗೇಗೌಡ. ಡಾಕ್ಟರಾಗಿ ಇಂಗ್ಲೆಂಡಿಗೆ ಹೋಗಿ ಬಂದು, ರಾಜ್ಯದಲ್ಲೇ ಪ್ರಖ್ಯಾತನಾಗಿ ತನ್ನ ಮನೆತನದ ಕೀರ್ತಿಯನ್ನು ಎಲ್ಲೆಡೆಗೆ ಹಬ್ಬಬೇಕು ಎಂಬುದಲ್ಲವೆ ತನ್ನ ಕನಸು ? ಈಗ ಆ ಸ್ವಪ್ನದ ಹಾಲಿನಲ್ಲಿ ನೊಣವಾಗಿ ಬೀಳುವ ಮೊಂಡಾಟವಾಡಬೇಕೆ ಸುಭದ್ರೆ ?

ಇವಳನ್ನು ತಾನು ಸರಿದಾರಿಗೆ ತರಬೇಕು. ಆ ಪದ್ಮನಿಗೆ ಬುದ್ಧಿ ಕಲಿಸಬೇಕು.

ಸಿಗರೇಟು ಸೇದಲು ತನಗೆ ಕಲಿಸಿಕೊಟ್ಟವನು ಪದ್ಮನಾಭ. ಶರಟನ್ನು ಪ್ಯಾಂಟಿನೊಳಗೆ ಇಳಿಬಿಡಲು ಹೇಳಿಕೊಟ್ಟವನೂ ಅವನೇ. ಆಧುನಿಕ ಜಗತ್ತಿನ ವಿಸ್ಮಯಗಳ—ಹೋಟೆಲು, ರೆಸ್ಟುರಾ, ಸಿನಿಮಾ ಮಂದಿರಗಳ—ಪರಿಚಯವನ್ನು ತನಗೆ ಮಾಡಿಕೊಟ್ಟವನೂ ಆತನೇ. ಆದರೆ ದಿನ ಕಳೆದಂತೆ ಪದ್ಮನ ಸಹವಾಸ ರಂಗಣ್ಣನಿಗೆ ಬೇಸರವನ್ನುಂಟುಮಾಡಿತು. ವಿದ್ಯಾಕ್ಷೇತ್ರದಲ್ಲಿ ಅವರ ದಾರಿಗಳು ಕವಲೊಡೆದ ಮೇಲೆ ಆ ಬೇಸರ ಉತ್ಕಟವಾಯಿತು.

...ನಿಂತಲ್ಲಿಂದ ರಂಗಣ್ಣ ಮೇಲಕ್ಕೆ ಗುಡಿಯ ಕಡೆಗೆ ನೋಡಿದ. ಕಲ್ಲು ಮಂಟಪದಲ್ಲಿ ಯಾರೂ ಕಾಣಿಸಲಿಲ್ಲ. ಇಷ್ಟು ದೂರ ಹೇಗೂ ಬಂದೆ; ಅಲ್ಲಿಯತನಕ ಹೋಗಿ ದೇವರ ದರ್ಶನ ತೆಗೆದುಕೊಳ್ಳುವುದಲ್ಲವೆ ಮೇಲು ? ಅಲ್ಲದೆ, ಆ ಎತ್ತರದಿಂದ ನಾಲ್ಕೂ ನಿಟ್ಟಿನ ನೋಟ ಸಾಧ್ಯ.

ರಂಗಣ್ಣ ಮತ್ತೆ ದಿಬ್ಬವನ್ನೇರತೊಡಗಿದ.

ಮನಸಿನೊಳಗೆ ಮೂಡಿದೊಂದು ಪ್ರಶ್ನೆ ಜಟಿಲವಾಗಿ ಅವನಿಗೆ ಕಂಡಿತು.

—ಪದ್ಮನ ವಿಷಯದಲ್ಲಿ ತನಗೆ ಬೇಸರವೆನಿಸಿದ ಮೇಲೆ ಸುಭದ್ರೆ-ಪದ್ಮರ ಬಗೆಗೆ ತನ್ನಲ್ಲಿ ಶಂಕೆ ಹುಟ್ಟಿತೆ ? ಅಥವಾ, ಅವರಿಬ್ಬರನ್ನು ಕುರಿತ ಶಂಕೆ ಪದ್ಮನಾಭ ಹಾಗೂ ತನ್ನ ನಡುವೆ ವಿರಸಕ್ಕೆ ಕಾರಣವಾಯಿತೆ ?

ಮೊದಲಿನ ಯೋಚನೆ ತಪ್ಪು. ಎರಡನೆಯದೇ ಸರಿ—ಎಂದು ರಂಗಣ್ಣ ತೀರ್ಮಾನಿಸಿದ.

ಗುಡಿಗಿನ್ನು ಕೆಲವೇ ಹೆಜ್ಜೆ ಎನ್ನುವಾಗ ರಂಗಣ್ಣ ಆಯಾಸದಿಂದ ಏದುಸಿರು ಬಿಡುವಂತಾಯಿತು. ದೇವರ ಸಾಮೀಪ್ಯ ಭಕ್ತರಿಗೆ ಸುಲಭವಾಗಬಾರದೆಂದು ಹಿಂದಿನವರು ಗುಡ್ಡಗಳ ತುದಿಯಲ್ಲಿ ಗುಡಿಗಳನ್ನು ಕಟ್ಟಿದರೇನೊ ? ಪದ್ಮನಾಭನಿಗೆ ಇತಿಹಾಸದಲ್ಲಿ ಆಸಕ್ತಿ, ಕಥೆ ಪುಸ್ತಕಗಳಲ್ಲೂ ಆಸಕ್ತಿ. ಹಳ್ಳಿಯ ಹಿರಿಯರೊಡನೆ ಮಾತನಾಡಿ ಮಾತನಾಡಿ, ತರ್ಕಿಸಿ

ತರ್ಕಿಸಿ, ಅದೇನೋ ತೀರ್ಮಾನಕ್ಕೆ ಆತ ಬಂದಿದ್ದನಲ್ಲ? ಹದಿನೇಳನೆಯ ಶತಮಾನದ ಯಾವನೋ ಪಾಳೆಯಗಾರ ನಾಯಕ ಕಟ್ಟಿಸಿದ ಗುಡಿ ಇದು—ಅಂತ ಹೇಳಿದ್ದನಲ್ಲ?

ಹೊರಗೆ ಬಿಸಿಲು. ಕಾದ ಕಲ್ಲು. ಆದರೂ ಮುಖಮಂಟಪದ ನೆಲ ತಣ್ಣಗಿತ್ತು. ತಂಪಾದ ಗಾಳಿ ಬೇರೆ ಸದ್ದಿಲ್ಲದೆ ಬೀಸುತ್ತಿತ್ತು. ಅಲ್ಲಿ ಒಂದು ಕ್ಷಣ ರಂಗಣ್ಣ ಎಲ್ಲವನ್ನೂ ಮರೆತ. ಗುಡಿಯದು ಮುಕ್ತದ್ವಾರ, ಒಳಗೆ ಈಶ್ವರ ಲಿಂಗ, ದಿನದ ಪೂಜೆ ಮುಗಿಸಿ ಸೂರ್ಯ ನೆತ್ತಿಗೇರುವುದರೊಳಗೆ ಮರಳಿರಬೇಕು ಅರ್ಚಕ ಗಂಗಾಧರ ಶಾಸ್ತ್ರಿ. ಹಿಂದೆ ಸಂಜೆಯೂ ಅರ್ಚನೆ ಇರುತ್ತಿತ್ತಂತೆ. ಆದರೆ ಕಾಡು ಮೃಗಗಳ ಭಯದಿಂದ ದೇವರ ಸೇವೆ ಒಂದು ಬಾರಿಗೆ ಇಳಿದಿತ್ತಂತೆ. ಇದರ ವಿಷಯವಾಗಿಯೇ ಅಲ್ಲವೆ ಪದ್ಮನಾಭ ಯಾವುದೋ ವಚನವನ್ನು ಹೇಳುತ್ತಿದ್ದುದು?

—ರಂಗಣ್ಣ ದೇವರಿಗೆ ಕೈಮುಗಿದ.

...ಯಾವ ವಚನ ಅದು? ತಮಾಷೆಯಾಗಿತ್ತು. ಆತ ಅದನ್ನು ಆಗಾಗ್ಗೆ ಹೇಳಿ ಹೇಳಿ, ತಾನು ಕೇಳಿ ಕೇಳಿ, ತನಗೂ ಕಂಠಪಾಠವಾಗಿತ್ತಲ್ಲ?

ಬರ ಬರ

—ಹ್ಞಾ!

ಬರಬರ ಭಕ್ತಿ ಮರೆಯಾಯಿತ್ತು ಕಾಣಿರಣ್ಣಾ

—ಮುಂದೇನು?

ಮೊದಲ ದಿನ ಹಣೆ ಮುಟ್ಟಿ, ಮರುದಿನ

ಕೈ ಮುಟ್ಟಿ, ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ.

ಹಹ! ವಚನ ಎಷ್ಟು ಸಮಂಜಸ! ಪದ್ಮನಾಭ ಬುದ್ಧಿವಂತ. ಹೈಸ್ಕೂಲಿನಲ್ಲಿದ್ದಾಗಲಂತೂ ತನಗಿಂತಲೂ ಹೆಚ್ಚು ಬುದ್ಧಿವಂತ. ಆದರೆ ಮುಂದೆ? ಬರ ಬರ ವಿದ್ಯೆಯಲ್ಲಿ ಭಕ್ತಿ ಮರೆಯಾಯಿತ್ತು...

ಮುಖಮಂಟಪದಲ್ಲಿ ಕುಳಿತು ಸುತ್ತಲೂ ಒಮ್ಮೆ ದೃಷ್ಟಿ ಬೀರಿ, ನಿಟ್ಟುಸಿರು ಬಿಟ್ಟು, ರಂಗಣ್ಣ ಯೋಚಿಸಿದ:

ನಾವು ಭಕ್ತಿಯಿಂದ ನಡೆದುಕೊಳ್ಳುತ್ತೇವೆ. ಆದರೆ ದೇವರ ಕೆಲಸವೇನು? ಅವನು ಮೂಕನೆ? ಕುರುಡನೆ? ಅನ್ಯಾಯದ ದಾರಿಯಲ್ಲಿ ಯಾರಾದರೂ ನಡೆಯಲು ಹೊರಟರೆ ಅವರಲ್ಲಿ ವಿವೇಕ ಮೂಡುವಂತೆ ಮಾಡಬಾರದೆ ಆತ?

ತನಗೊಂದು ಹುಚ್ಚು. ಪದ್ಮನಾಭನಲ್ಲಿ ವಿವೇಕ ಮೂಡೀತೆಂದು ಭಾವಿಸುವುದು ಬರಿಯ ಭ್ರಮೆ. ಅವನು ವಿವೇಕಿಯಾದರೇನು? ಆಗದಿದ್ದರೇನು? ಒಡಹುಟ್ಟಿದವ ಳನ್ನು ತಾನು ಅಂಕೆಯಲ್ಲಿ ಇಟ್ಟುಕೊಂಡರಾಯಿತು......

ಎಷ್ಟು ಹೊತ್ತಾಯಿತೊ? ಕೈ ಗಡಿಯಾರವನ್ನು ತಂದಿರಲಿಲ್ಲ. ಕಟ್ಟಿಕೊಳ್ಳಲು ಸಂಕೋಚ. ಅದರ ಪೂರ್ಣ ಉಪಯೋಗ ನಗರದಲ್ಲಿ ಮಾತ್ರ. ಆದರೂ ಜೇಬಿನೊಳಗಿಟ್ಟು ಕೊಂಡು ಬರಬಹುದಾಗಿತ್ತು. ಗುಡ್ಡ ಹತ್ತಲು ನಾಲ್ವತ್ತೈದು ನಿಮಿಷ. ಒಂದು ಗಂಟೆಯೇ ಎನ್ನೋಣ. ನಾಲ್ಕು ದಾಟಿರಬಹುದು.

ಎಲ್ಲಿ ಹುಡುಕಲಿ ಇವರನ್ನು?

ತಂದೆ ಹೊಸಳ್ಳಿಗೆ ಹೋದವರು ಸಂಜೆಗೆ ಮರಳಬಹುದು. ಅವರು ಮನೆಯಲ್ಲಿಲ್ಲ ಅಂತ ಇಷ್ಟು ಧೈರ್ಯ ಸುಭದ್ರೆಗೆ.

ತಂದೆ ಕನಲಿದ ರುದ್ರನಾದರೆ ಮರಗಿಡಗಳೂ ನಡುಗಬೇಕು. ಈ ಪ್ರಕರಣ ಅವರ ತನಕ ಹೋಗದೆಯೇ ಮುಕ್ತಾಯವಾದರೆ ಚೆನ್ನು. ಆಗದೇ ಇದ್ದರೆ, ಮುಂದಿನ ಮಾತು ಬೇರೆ, ನೋಡೋಣ.

"ಅಂಬಾ"......

—ಸಮೀಪದಿಂದಲೇ ಒಂದು ಹಸು ತನ್ನ ಜೋಡಿಯನ್ನು ಕರೆಯಿತು.

ರಂಗಣ್ಣ ಕತ್ತು ಹೊರಳಿಸಿ ಅದನ್ನು ದಿಟ್ಟಿಸಿದ. ಕಪಿಲೆ, ಶ್ರೀನಿವಾಸಯ್ಯನವರ ಮನೆಯದೇ ಇರಬೇಕು. ಅಲೆಯುತ್ತ ಒಂದೇ ಬಂದುಬಿಟ್ಟಿದೆ. ಅಗೋ, ಕೆಳಕ್ಕೆ ಐದಾರು ಹಸು, ಎತ್ತುಗಳು ಮೇಯುತ್ತಿವೆ. ಅವೂ ಅವರವೇ. ದನಕಾಯುವ ಹುಡುಗ ಕಪಿಲೆಯನ್ನು ಕರೆಯುತ್ತಿದ್ದಾನೆ.

ಆ ಹಸು ಏಕೆ "ಅಂಬಾ" ಎಂದಿತು ? ಪದ್ಮನನ್ನು ದೂರದಿಂದ ಕಂಡು ಗುರುತು ಹಿಡಿಯಿತೊ ಕಡೆಗೆ ?

ಇರಲಾರದು, ಪದ್ಮನಾಭನಿಗೆ ಹಸುಗಳ ಮೇಲೆ ಪ್ರೀತಿ ಇಲ್ಲ. ಆತ ಹಳ್ಳಿಗೆ ಬಂದರೂ ಅತಿಥಿ ಇದ್ದ ಹಾಗೆ.

ಕಣಿವೇಹಳ್ಳಿಯಲ್ಲಿ ಕಳೆದ ಎರಡು ತಲೆಮಾರುಗಳಿಂದ ಅವರ ಮನೆತನವೇ ಆತಿಥ್ಯ ಸ್ವೀಕರಿಸಿದೆ ಎನ್ನಬಹುದಲ್ಲ ?

ಪದ್ಮನಾಭನ ತಾತ ತನ್ನ ಚಿಕ್ಕ ವಯಸ್ಸಿನಲ್ಲಿ ಮಲೆನಾಡು ಕಡೆಯಿಂದ ಹೆಂಡತಿಯೊಡನೆ ಇಲ್ಲಿಗೆ ಬಂದರಂತೆ. ಆಗಿನ ಅರ್ಚಕರ ಮನೆಯಲ್ಲಿ ಬಿಡಾರ ಹೂಡಿದರಂತೆ. ಸೊಗಸಾದ ಊರು, ಇಲ್ಲಿಯೇ ಉಳಿದು ಬಾಳಿ ಬೆಳೆದರಾದೀತು ಎಂದರಂತೆ. ಕೈಯಲ್ಲಿ ಸ್ವಲ್ಪ ಹಣವಿತ್ತು. ಲೇವಾದೇವಿ ಮಾಡಿದರು. ಕ್ರಮೇಣ ಒಂದೊಂದಾಗಿ ಅನೇಕ ಹೊಲಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡರು.

ರಂಗಣ್ಣ ತನ್ನ ಗೆಳೆಯನನ್ನು ಒಮ್ಮೆ ಕೇಳಿದ್ದ :

"ಈ ಸಾಲ ಕೊಡೋದಿದೆಯಲ್ಲ, ಇದು ಒಳ್ಳೇ ಕಸಬೇನಪ್ಪ ?"

– ಪದ್ಮನಾಭನೆಂದಿದ್ದ :

"ದೇಶದ ಸರಕಾರವೇ ಸಾಲದ ಮೇಲೆ ನಡೀತಿರುವಾಗ ಇಂಥ ಪ್ರಶ್ನೆಗೆ ಅವಕಾಶವೇ ಇಲ್ವಲ್ಲೋ ......"

"ಏನೋಪ್ಪ, ರೈತಾಪಿ ಜನ ಸಾಲಗಾರರ ಬಲೆಯಿಂದ ಪಾರಾದಾಗ ಮಾತ್ರ ದೇಶದ ಉದ್ಧಾರ ಸಾಧ್ಯ ಅನಿಸುತ್ತೆ."

ತನ್ನ ಪೂರ್ವಜರ ಕಥೆಯನ್ನು ಪದ್ಮನಾಭ ಹೇಳಿದ್ದು ಆ ದಿನ. ಇತಿಹಾಸದ ಭಕ್ತ ಹಿಂದಿನದನ್ನೆಲ್ಲ ಕೇಳಿ ತಿಳಿದಿದ್ದ. ಅವನ ತಂದೆಯ ತಾಯಿ, ಹಣ್ಣು ಮುದುಕಿ, ಇನ್ನೂ ಬದುಕಿದ್ದರು.

"ನಮ್ಮ ತಾತ ಸಾಲ ಕೊಟ್ಟು ಶ್ರೀಮಂತನಾದ ಅಂತ ಒಪ್ಕೋತೀನಿ, ಆದರೆ ಆಸ್ತಿ ಮಾಡಿದ್ಮೇಲೆ ಅವನು ಸ್ವತಃ ನೇಗಿಲು ಹಿಡಿದು ಉಳ್ತಿದ್ನಂತೆ."

"ಪೌರೋಹಿತ್ಯ ಮಾಡೋದೆಲ್ಲಿ, ಭೂಮಿ ಸಾಗುವಳಿ ಎಲ್ಲಿ! ಆಶ್ಚರ್ಯವಪ್ಪ."

"ಮಂತ್ರ ಹೇಳಿ ಮಾವಿನಕಾಯಿ ಉದುರಿಸಿದವನು ನಮ್ಮ ತಾತ!"

—ರಂಗಣ್ಣ ನೀಳವಾಗಿ ಉಸಿರುಬಿಟ್ಟ. ಇನ್ನಿಲ್ಲವಲ್ಲ ಆ ಬಗೆಯ ಮಾತುಕತೆಗಳು. ಮಂತ್ರ ಹೇಳಿ ಮಾವಿನಕಾಯಿ ಉದುರಿಸಿದರಂತೆ. ಮಾವಿನ ಹಣ್ಣಿನ ಸುಗ್ಗಿ ಈಗ. ಆದರೆ ಕಣಿವೇಹಳ್ಳಿಯಲ್ಲಿ ವಾಟೆಗಳಿಗೂ ಬರಗಾಲವಾಗಿದೆಯಲ್ಲ! ಬಲಿಯುವುದಕ್ಕೆ ಮುನ್ನವೇ ಕಾಯಿಗಳನ್ನು ಕಿತ್ತು ಭಾಗ್ಯನಗರಕ್ಕೆ ಸಾಗಿಸುತ್ತಿದ್ದಾರೆ. ಅದರಲ್ಲೂ ಹೆಚ್ಚು ಕಾಯಿ ಸರಬರಾಜಾಗುವುದು ಶ್ರೀನಿವಾಸಯ್ಯನವರ ಮಾವಿನ ತೋಪಿನಿಂದ. ಪದ್ಮನ ಅಣ್ಣ ಗೋವಿಂದ ಆರಂಭಿಸಿರುವ ಸೊಸೈಟಿ ಈ ವ್ಯಾಪಾರ ಮಾಡುತ್ತಿದೆ. ಹೈಸ್ಕೂಲಲ್ಲಿ ಒಂದೆರಡು ವರ್ಷ ಓದಿ, ಹೆಚ್ಚಿನ ವಿದ್ಯಾಭ್ಯಾಸದ ಗೋಜಿಗೆ ಹೋಗದೆ, ಹಳ್ಳಿಗೆ ಗೋವಿಂದ ವಾಪಸಾಗಿದ್ದ. ಮುಂದೆ ನಾಲ್ಕೈದು ವರ್ಷಗಳಲ್ಲೇ ಹಳ್ಳಿಯನ್ನು ಉದ್ಧರಿಸಲು ಹೊರಟಿದ್ದ! ಅವನ ಚಟುವಟಿಕೆಗಳಿಗೆ ತನ್ನ ತಂದೆಯೂ ಪ್ರೋತ್ಸಾಹವೀಯುತ್ತಿದ್ದಾರೆ ಎಂದು ರಂಗಣ್ಣನಿಗೆ ಕಸಿವಿಸಿ.

ಎದ್ದು ರಂಗಣ್ಣ ಎರಡೂ ತೋಳುಗಳನ್ನು ಕೊಡವಿ ಮೈಮುರಿದ. ಕಪಿಲೆ ಹಸು ಕೆಳಕ್ಕಿಳಿದು ಸಂಗಡಿಗರನ್ನು ಸೇರಿಕೊಂಡಿತು. ಬಿಸಿಲು ಬಾಡಿತ್ತು.

ಇವರು ಕಾಣಲಿಲ್ಲ. ಸುಭದ್ರೆ ಈ ಕಡೆಗೆ ಬರಲಿಲ್ಲವೇನೋ, ನಿಧಾನವಾಗಿ ಇಳಿಯುತ್ತ ನೋಡಿಕೊಂಡು ಹೋಗೋಣ—ಎಂದುಕೊಂಡು ಪಾಯಜಾಮ ಮತ್ತೊಮ್ಮೆ ಮುಳ್ಳಿಗೆ ಸಿಲುಕಿ ಹರಿಯದಿರಲೆಂದು, ಕಟಿ ಭಾಗದಲ್ಲಿ ಅದರ ಲಾಡಿಯನ್ನು ಹಿಡಿದು ಸ್ವಲ್ಪ ಮೇಲಕ್ಕೆ ಎಳೆದ. ಜಲಬಾಧೆ ತೀರಿಸಬೇಕೆನ್ನಿಸಿ ಗುಡಿಯ ಹಿಂಭಾಗಕ್ಕೆ ಹೋದ. ಛೆ! ಪವಿತ್ರ ಸ್ಥಳದಲ್ಲಿ ಈ ಕೆಲಸ ಮಾಡಬಾರದು ಎಂದು, ತುಸು ದೂರ ನಡೆದು ಒಂದು ಪೊದೆಯ ಬುಡಕ್ಕೆ ನೀರೆರೆದ.

ರಂಗಣ್ಣ ಇಳಿಯತೊಡಗಿದುದು ಬೇರೆ ದಿಕ್ಕಿನಿಂದ.

ಅಲ್ಲೇ ಕೆಳಗೆ ಒಂದೆಡೆ ಕಾಗೆಗಳು ವಿಕಾರವಾಗಿ ಕೂಗಿಕೊಳ್ಳುತ್ತಿದ್ದುವು. ಒಂದೆರಡು ಹದ್ದುಗಳು ಮೇಲೆ ಎತ್ತರದಲ್ಲಿ ವೃತ್ತಗಳನ್ನು ರಚಿಸುತ್ತಿದ್ದುವು.

ರಂಗಣ್ಣನಿಗೆ ಅನಿಸಿತು:

ಏನೋ ಪ್ರಾಣಿ ಸತ್ತುಬಿದ್ದಿರಬೇಕು.

ಪ್ರಾಣಿಗಳನ್ನು ಕುಯ್ಯುವ, ಪರೀಕ್ಷಿಸುವ ವೃತ್ತಿಯವನು ರಂಗಣ್ಣ. ಈಗ ಮಾತ್ರ ಆ ಜಾಗದಿಂದ ದೂರ ಸರಿದು ನಡೆಯತೊಡಗಿದ.

(ವಾಸನೆ ತಿನ್ನುವವರು ಯಾರು?)

ಸುತ್ತಲೂ ಬಂಡೆಗಳಿಂದ ಆವೃತವಾಗಿದ್ದ ಹೊಂಡ. ಪದ್ಮ ಹೇಳುತ್ತಿದ್ದ: ನಾಯಕರ ಕಾಲದಲ್ಲಿ ವಧಸ್ಥಾನವಾಗಿದ್ದಿರಬೇಕು ಅದು.

ಒಮ್ಮೆ ಅಂಥ ಮಾತಿಗೆ ರಂಗಣ್ಣನೆಂದಿದ್ದ:

"ಬರೀ ಬುರುಡೆ."

ಪದ್ಮ ಕೊಟ್ಟ ಉತ್ತರ:

"ಹಾಗಾದರೆ ಇತಿಹಾಸವೆಲ್ಲ ಬುರುಡೇನೇ."

ಇಷ್ಟು ಮಾತ್ರ ನಿಜ: ಆ ಹೊಂಡದ ಹತ್ತಿರಕ್ಕೆ ಹಳ್ಳಿಯವರು ಹೆಚ್ಚಾಗಿ ಹೋಗು

ತ್ತಿರಲಿಲ್ಲ.

ಆ ಸ್ಥಳದಿಂದ ರಂಗಣ್ಣ ಸಾಕಷ್ಟು ದೂರವಿದ್ದನಾದರೂ ಅವನ ದೃಷ್ಟಿ ಆಗಾಗ್ಗೆ ಅತ್ತ ಸರಿಯಿತು.

ಒಮ್ಮೆ ನೋಡಿದಾಗ, ಇದ್ದಕ್ಕಿದ್ದಂತೆ ರಂಗಣ್ಣನ ಪಾದಗಳು ಬೇರುಬಿಟ್ಟುವು.

ಇಬ್ಬರು ಆ ಹೊಂಡದತ್ತ ನಡೆದು ಬರುತ್ತಿದ್ದರು.

ಹುಡುಗಿ, ಹುಡುಗ.

ಹೆಣ್ಣು, ಗಂಡು.

ಸುಭದ್ರೆ, ಪದ್ಮನಾಭ.

ರಂಗಣ್ಣನ ಮೈ ಉರಿಯಿತು. ಎದೆಗುಂಡಿಗೆಯ ಬಡಿತ ತೀವ್ರಗೊಂಡಿತು.

ಅಂತೂ ಸಿಕ್ಕಿದರು !

ರಂಗಣ್ಣ ಸರಸರನೆ ಅತ್ತ ಸರಿಯತೊಡಗಿದ.

ಆದರೆ ಅವರಿಬ್ಬರು ಅದೇನು ಕಂಡರೊ? ಹೊಂಡದ ಅಂಚಿನಿಂದ ಒಮ್ಮೆಲೆ ಹಳ್ಳಿಯ ಕಡೆಗೆ ತಿರುಗಿದರು; ಒಟ್ಟಿಗೆ ಬೇಗ ಬೇಗನೆ ನಡೆದರು. ರಂಗಣ್ಣನದೊಂದೇ ಯೋಚನೆ:

'ನನ್ನನ್ನು ನೋಡಿಬಿಟ್ರು. ಓಡಿಹೋಗ್ತಿದಾರೆ.'

ರಂಗಣ್ಣ ನಡಿಗೆಯನ್ನು ತೀವ್ರಗೊಳಿಸಿದ.

ಸ್ವಲ್ಪ ದೂರ ಇಬ್ಬರೂ ಸಾಗಿದ ಮೇಲೆ ಪದ್ಮ, ಸುಭದ್ರೆ ಬೇರೆ ಬೇರೆಯಾದರು.

ಕೂಗಿ ಕರೆಯಬೇಕು ಎನ್ನಿಸಿತು ರಂಗಣ್ಣನಿಗೆ. ಗಂಟಲೊಣಗಿತು.

'ನಾನು ಸೋತೆ' ಎಂದುಕೊಂಡು, ಹೊಂಡದ ಅಂಚಿನಲ್ಲಿ ನಿಂತ.

ದೊಡ್ಡದೊಂದು ಗಿಡುಗ ಭರ್ರೆಂದು ಹೊಂಡದಿಂದೆದ್ದು ಕರ್ಕಶವಾಗಿ ಕಿರಿಚಿಕೊಳ್ಳುತ್ತ ರೆಕ್ಕೆ ಬಡಿಯುತ್ತ ರಂಗಣ್ಣನ ಸಮೀಪದಿಂದಲೇ ಹಾರಿಹೋಯಿತು. ಅದರ ರೆಕ್ಕೆ ತನಗೆ ತಗಲದಂತೆ ರಂಗಣ್ಣ ಸರಕ್ಕನೆ ಮೈ ಬಾಗಿಸಿ ತಪ್ಪಿಸಿಕೊಂಡು ಉದ್ಗರಿಸಿದ:

"ಅಬ್ಬ !"

ಅವನ ದೃಷ್ಟಿ ಹೊಂಡದ ತಳವನ್ನು ಕಂಡಿತು.

"ಆ !"

ಆರ್ತನಾದದಂತಹ ಒಂದು ಧ್ವನಿ ರಂಗಣ್ಣನ ಅರಿವಿಲ್ಲದೆ ಅವನ ಗಂಟಲಿನಿಂದ ಹೊರಟಿತು. ಮೊಣಕಾಲುಗಳು ಕಂಪಿಸಿದುವು—ತಲೆ ಗಿರ್ರನೆ ತಿರುಗಿದಂತಾಯಿತು. ಮೈ ಬೆವರೊಡೆಯಿತು. ಹೊಂಡಕ್ಕೆ ಬೀಳುವೆನೇನೋ ಎಂದು ಅವನಿಗೆ ಭಯವಾಯಿತು. ಆತ ಪ್ರಯಾಸಪಟ್ಟು ಎರಡು ಹೆಜ್ಜೆ ಹಿಂದಕ್ಕೆ ಸರಿದ.

ಅಲ್ಲಿ ಏನನ್ನು ಕಂಡ ರಂಗಣ್ಣ ?

ಅಂಗಾತ ಬಿದ್ದಿದ್ದ ಕಪ್ಪು ಬಣ್ಣದ ಒಂದು ನಿರ್ಜೀವ ದೇಹವನ್ನು. ಮುಖ ಊದಿಕೊಂಡಿತ್ತು. ಕಣ್ಣು ಗುಡ್ಡೆಗಳು ಹೊರಕ್ಕೆ ಬಂದಿದ್ದುವು.

ಭಾಗ್ಯನಗರದ ಆಸ್ಪತ್ರೆಯಲ್ಲಿ ಎಷ್ಟೋ ಶವಗಳನ್ನು ಮುಟ್ಟಿದ್ದ, ಕುಯ್ದಿದ್ದ ರಂಗಣ್ಣ ಕಣಿವೇಹಳ್ಳಿಯ ದಿಬ್ಬದಲ್ಲಿ ಭಯಭೀತನಾದ.

ಕೊಲೆ ? ಸಾವು ?

ಯಾರ ಶವ ? ಯಾರದು ?

ಪ್ರಯತ್ನಪಟ್ಟು ಮತ್ತೊಮ್ಮೆ ಅದರತ್ತ ರಂಗಣ್ಣ ನೋಡಿದ. ಮೃತ ಶರೀರದ ಮುಖ ಅವನಿಗೆ ಪರಿಚಿತವಾಗಿತ್ತು.

೨

—ಮುನಿಯ ಸತ್ತುಹೋದ !

—ಮುನಿಯನ ಕೊಲೆಯಾಗಿದೆ !

ಆಕಾಶ ತಲೆಯ ಮೇಲೆ ಕಳಚಿಬಿದ್ದಂತಾಯಿತು ಆರಾಮಕುರ್ಚಿಯಲ್ಲಿ ಕುಳಿತಿದ್ದ ಶ್ರೀನಿವಾಸಯ್ಯನವರಿಗೆ.

ಐವತ್ತು ಚಿಲ್ಲರೆ ವರ್ಷಗಳ ಬದುಕಿನಲ್ಲಿ ರೈತರು ಹಾವು ಕಡಿದು ಸತ್ತುದನ್ನು, ಹುಲಿ ತಿಂದು ಹತರಾದುದನ್ನು ಮಳೆಗಾಲದಲ್ಲಿ ನದಿಯ ಪಾಲಾದುದನ್ನು ಶ್ರೀನಿವಾಸಯ್ಯ ಕಂಡಿದ್ದರು. ಆದರೆ ಕೊಲೆ — ಎಂದೂ ಕಣಿವೇಹಳ್ಳಿಯಲ್ಲಿ ಆಗಿರಲಿಲ್ಲ.

ಅವರು ಅಂಗವಸ್ತ್ರವನ್ನು ಎಡ ಭುಜದಿಂದ ಎತ್ತಿ ಬಲ ಭುಜಕ್ಕೆ ವರ್ಗಾಯಿಸಿದರು. ಕಂಕುಳುಗಳಿಂದ ಬೆವರು ಹನಿಗೂಡಿ ಧಾರೆಗಟ್ಟಿ ಹರಿಯಿತು. ಹೊಟ್ಟೆ, ಎದೆಗೂಡನ್ನು ಸಂಧಿಸುವ ಪದರ ತೇವಗೊಂಡಿತು. ದಂಗು ಬಡೆದಿದ್ದ ಮೆದುಳನ್ನು ತಟ್ಟಿ ಎಚ್ಚರಿಸುವವರಂತೆ ಬೊಕ್ಕತಲೆಯ ಮೇಲೆ ಅವರು ಅಂಗೈ ಆಡಿಸಿದರು. ಮೀಸೆ ಮತ್ತಷ್ಟು ಬಾಗಿ ಜೋತಿತು.

ಹೇಳಿದ ಮೇಲೂ ಇವರು ಸುಮ್ಮನಿರುವರಲ್ಲ ಎಂದು ರಂಗಣ್ಣ ವಿಸ್ಮಿತನಾದ. ತನ್ನ ಕೆಲಸ ಮಾಡಿದಮೇಲೆ ತುಸು ಸಮಾಧಾನವೆನಿಸಿತಾದರೂ ಶ್ರೀನಿವಾಸಯ್ಯ ಗರಬಡಿದವರಂತೆ ಕುಳಿತೇ ಇದ್ದುದನ್ನು ಕಂಡು ಅವನಿಗೆ ಆಶ್ಚರ್ಯವಾಯಿತು.

ಶ್ರೀನಿವಾಸಯ್ಯನ ಹುಬ್ಬುಗಳು ಪರಸ್ಪರ ಹತ್ತಿರಕ್ಕೆ ಸರಿದುವು. ಹಣೆ ನೆರಿಗೆ ಕಟ್ಟಿತು.

ಅವರು ಯೋಚಿಸಲೆತ್ನಿಸಿದರು :

—'ಈ ಹುಡುಗ ಇಲ್ಲಿ ಯಾಕಿದ್ದಾನೆ ?'

—'ನನ್ನಲ್ಲಿಗೆ ಬಂದು ಯಾಕೆ ಈ ಸುದ್ದಿ ಮುಟ್ಟಿಸಿದ ?'

—'ಊರಿಗೆ ಮುಖ್ಯಸ್ಥ ಪಟೇಲ ಶಾಮೇಗೌಡ; ನಾನಲ್ಲ. ಇಂಥ ಸಮಸ್ಯೆ ಏನು ಬಂದರೂ ಇದಿರಿಸಬೇಕಾದವನು ಆತ, ನಾನಲ್ಲ.'

"ಮಗೂ."

ಶ್ರೀನಿವಾಸಯ್ಯ ವಾತ್ಸಲ್ಯದಿಂದ ರಂಗಣ್ಣನನ್ನು ಯಾವಾಗಲೂ ಸಂಬೋಧಿಸುತ್ತಿದ್ದುದು ಆ ರೀತಿಯಾಗಿ.

"ಏನ್ಸಾರ್ ?"

ತಂದೆ ಹೇಳುವುದಿತ್ತು : "ಅಯ್ಯನೋರಿದಾರೋ ನೋಡ್ಕೊಂಡ್ಬಾ." ಅಯ್ಯ—

ಅಯ್ಯ. ರಂಗಣ್ಣನೂ ಅನ್ನುತ್ತಿದ್ದನಲ್ಲ: "ಅಯ್ಯನೋರಿದಾರೋ ನೋಡ್ಕೊಂಬಾ ಅಂದ್ರು." ಆದರೆ ಮೆಡಿಕಲ್ ಕಾಲೇಜು ಸೇರಿದಮೇಲೆ—ಪದ್ಮನೊಡನೆ ವಿರಸ ಆದಮೇಲೆ—ರಂಗಣ್ಣ ಶ್ರೀನಿವಾಸಯ್ಯನವರನ್ನು ಸಾರ್ ಎಂದು ಸಂಬೋಧಿಸತೊಡಗಿದ್ದ. "ಸಾರ್"—ಯಾವ ಅರ್ಥವನ್ನು ಬೇಕಾದರೂ ಹೊರಡಿಸುವ ಪದ. ದೈನ್ಯದಿಂದ: ದಯವಿಟ್ಟು ಬನ್ನಿ, ಸಾರ್. ಅಥವಾ ಸಿಟ್ಟಿನಿಂದ, ಏನೂಂತ ತಿಳ್ಕೊಂಡಿದೀರಿ ಸಾರ್?]

"ಶಾಮಣ್ಣ ಮನೇಲಿಲ್ವಾ?"

"ಹೊಸಳ್ಳಿಗೆ ಹೋಗಿದಾರೆ ಸಾರ್."

"ಇವತ್ತೇ ಬರ್‍ತಾನೆ ಅಲ್ವೆ?"

"ಹೂಂ. ಏಳು ಘಂಟೆಯೊಳಗೆ ಬರಬೌದು."

ಶ್ರೀನಿವಾಸಯ್ಯಗೆ ಈಗ ಅರ್ಥವಾಯಿತು, ರಂಗಣ್ಣ ತನ್ನಲ್ಲಿಗೆ ಯಾಕೆ ಬಂದ ಎಂಬುದು.

ಒಳ್ಳೇ ಗ್ರಹಚಾರ—ಎಂದು ಅರ್ಥ ತಮ್ಮಷ್ಟಕ್ಕೆ ಅವರು ಗೊಣಗಿದರು.

"ಗೋಪೂ," ಎಂದು ಹಿರಿಯ ಮಗನನ್ನು ಕರೆದರು.

ಒಂದು ವರ್ಷದ ಮಗುವನ್ನೆತ್ತಿಕೊಂಡು ಬಂದು ಪಡಸಾಲೆಯತ್ತ ಇಣಿಕಿ ನೋಡಿ, "ನದೀ ಕಡೆಗೆ ಹೋಗಿದಾರೆ," ಎಂದಳು ಶ್ರೀನಿವಾಸಯ್ಯನವರ ಸೊಸೆ, ಭಾಗೀರಥಿ.

ಸಂದರ್ಭ ಏನು ಎಂದು ತಿಳಿಯದೆ ರಂಗಣ್ಣನನ್ನು ಅವಳು ನೋಡಿ ಮುಗುಳು ನಕ್ಕಳು.

"ಅಮ್ಮ ಎಲ್ಲಿ?" ಎಂದು ಕೇಳಿದರು ಶ್ರೀನಿವಾಸಯ್ಯ.

"ಅಡಿಗೆ ಮನೇಲಿದಾರೆ."

"ನಾನು ಕರೆದೇಂತ ಹೇಳು."

ಭಾಗೀರಥಿ ಒಳಕ್ಕೆ ಹೋದಳು.

ತಮ್ಮ ಬೊಕ್ಕತಲೆಯ ಮೇಲೆ ಮತ್ತೊಮ್ಮೆ ಅಂಗೈ ಆಡಿಸಿದರು ಶ್ರೀನಿವಾಸಯ್ಯ. ತಾಯಿಯನ್ನು ಕೇಳದೆ ಯಾವ ಹೆಜ್ಜೆಯನ್ನೂ ಎಂದೂ ಇಟ್ಟವರಲ್ಲ ಅವರು.

ರಂಗಣ್ಣ ಬೇಸರಗೊಳ್ಳುತ್ತ ಶ್ರೀನಿವಾಸಯ್ಯನವರನ್ನು ದಿಟ್ಟಿಸಿದ. ಆರಾಮಕುರ್ಚಿಯಲ್ಲಿ ಅವರ ಶರೀರ ಕ್ಷಣದಿಂದ ಕ್ಷಣಕ್ಕೆ ಕುಗ್ಗುತ್ತ ನಡೆದಂತೆ ಕಂಡಿತು. ತನ್ನ ತಂದೆಗೂ ಇವರಿಗೂ ಎಷ್ಟು ಅಂತರ! ತಂದೆಯಾಗಿದ್ದರೆ ಇಷ್ಟು ಹೊತ್ತಿಗೆ ಮನೆ ಬಿಟ್ಟು ಹೊರಟು ಹಳ್ಳಿಯ ಪ್ರಮುಖರನ್ನು ಕರೆದು, ಮುಂದಿನ ಕ್ರಮ ಕೈಗೊಳ್ಳುತ್ತಿದ್ದರು.

ನಿಂತೇ ಇದ್ದ ರಂಗಣ್ಣ ಪಡಸಾಲೆಯ ಗೋಡೆಯತ್ತ ನೋಡಿದ. ಅವನಿಗೆ ಪರಿಚಿತವಾಗಿದ್ದ ದೇವರ ಪಟಗಳು. ಗೋಡೆಯ ಗೂಟದ ಮೇಲೆ ನೇತುಬಿದ್ದಿದ್ದ ಶರಟು, ಟೋಪಿ, ಶ್ರೀನಿವಾಸಯ್ಯನವರದು. ಪಟಗಳ ನಡುವೆ ಕುಟುಂಬದ ಭಾವಚಿತ್ರಗಳು. ಒಂದರ ಹೊರತಾಗಿ ಉಳಿದುದನ್ನೆಲ್ಲ ರಂಗಣ್ಣ ಹಿಂದೆ ನೋಡಿದವನೇ. ಆ ಹೊಸದು? ಪದ್ಮನಾಭನ ಹಿರಿಯಣ್ಣ ಗೋಪಾಲನ ಮದುವೆಯ ವೇಳೆ ತೆಗೆದುದಿರಬೇಕು—ಎಂದು ತೋರಿತು. ಸೋಮಪುರದಲ್ಲಿ ಅಲ್ಲವೆ ಮದುವೆಯಾದದ್ದು? ಅಲ್ಲಿಯೇ ತೆಗೆಸಿರಬೇಕು....

ಶ್ರೀನಿವಾಸಯ್ಯನವರ ತಾಯಿ ಪಡಸಾಲೆಗೆ ಬಂದರು. ಎಪ್ಪತ್ತೈದು ದಾಟಿದ್ದರೂ ನಡುಬಾಗದ ಜೀವ. ಕ್ಷೌರಿಕನ ಕತ್ತಿಗೆ ಬಲಿಯಾಗಲು ಸಿದ್ಧವಾಗಿದ್ದ ಬಿಳಿಯ ಕುಚ್ಚುಕೂದಲ ಬೆಳೆ ತಲೆಯನ್ನು ಆವರಿಸಿ ಅವರ ಸೆರಗಿನೊಳಗಿಂದ ಇಣಿಕಿನೋಡುತ್ತಿತ್ತು. ರಂಗಣ್ಣ ಬಂದಿದ್ದಾನೆ

ಎಂದು ಭಾಗೀರಥಿ—ಅವರ ಮೊಮ್ಮಗನ ಮಡದಿ—ಅವರಿಗೆ ತಿಳಿಸಿದ್ದಳು. ಯಾಕೆ ಬಂದಿದ್ದಾನೊ ? ಶಾಮಣ್ಣನ ಮನೆಯಲ್ಲಿ ಯಾರಿಗಾದರೂ ಅನಾರೋಗ್ಯವೊ ಏನೊ—ಎಂದುಕೊಳ್ಳುತ್ತ ಅವರು ಅಡುಗೆಮನೆಯಿಂದ ಹೊರಬಂದರು.

ಎತ್ತರದ ನಿಲುವು, ಗೋದಿಗೆಂಪು ಮೈ......

" ಏನ್ಮಗೂ, ಚೆನ್ನಾಗಿದೀಯಾ ? "

ಲಯಬದ್ಧವಾದ ಮಾತು. ಇಂಪಾದ ಸ್ವರ.

ರಂಗಣ್ಣ ಉತ್ತರವೀಯುವುದಕ್ಕೆ ಮುಂಚೆಯೇ ಅವರು ಮತ್ತೂ ಅಂದರು :

" ಒಂದು ವಾರವಾಯ್ತಲ್ಲೋ ಭಾಗ್ಯನಗರದಿಂದ ಬಂದು ? ದೊಡ್ಡಮ್ಮನ್ನ ನೋಡೋಕೆ ಈ ಮೊದಲೇ ಬರಬಾರದಾಗಿತ್ತೇನೋ ? "

ಆ ಧ್ವನಿ ತನ್ನ ಮೈದಡವಿ ಮುತ್ತಿಟ್ಟಂತಾಯಿತು ರಂಗಣ್ಣನಿಗೆ. ಅದು, ತಾನು ಈ ಜಗತ್ತಿಗೆ ಬರಲು ನೆರವಾದ ವ್ಯಕ್ತಿ. ಸುಭದ್ರೆಯ ಮುಖವನ್ನು ಮೊದಲು ಕಂಡವರೂ ಆಕೆಯೇ. ತನ್ನ ತಾಯಿಯನ್ನು ಉಳಿಸುವುದು ಅವರಿಂದ ಆಗಿರಲಿಲ್ಲ ನಿಜ. ಆದರೂ ಅವರು ತನಗೆ ಆತ್ಮೀಯರು.

" ಬರಬೇಕಾಗಿತ್ತು ದೊಡ್ಡಮ್ಮ. ಆದರೆ ಏನೋ ಕೆಲಸ......"

" ಹೂನಪ್ಪಾ. ನಾಳೆ ಡಾಕ್ಟರಾಗುವವನು."

ಒಲವು ತುಂಬಿಕೊಂಡೇ ಛೇಡಿಸುವ ಮಾತು.

" ನಿಮ್ಮೆದುರು ಯಾವಾಗಲೂ ನಾನು ಮಗುವೇ ದೊಡ್ಡಮ್ಮ."

(ಹಳ್ಳಿಯವರಿಗೆಲ್ಲ " ದೊಡ್ಡಮ್ಮ " ಆ ವೃದ್ಧೆ).

ಈ ಪರಿಸ್ಥಿತಿಯಲ್ಲಿ ಇಂಥ ಮಾತುಕತೆ ಆಭಾಸಕರ ಎನ್ನುವಂತೆ ಶ್ರೀನಿವಾಸಯ್ಯ ಗಾಳಿಯಲ್ಲಿ ಕೈಯಾಡಿಸಿದರು.

ಅವರೆಂದರು :

" ಅಮ್ಮ ! ಮುನಿಯನನ್ನು ದಿಬ್ಬದ ಹೊಂಡದಲ್ಲಿ ಯಾರೋ ಕೊಂದ್ಹಾಕಿದಾರಂತೆ. ರಂಗಣ್ಣ ಹೇಳ್ತಿದಾನೆ. ಹೆಣಾನ ನೋಡಿ ಬಂದ್ನಂತೆ. ಶಾಮಣ್ಣ ಊರಲ್ಲಿಲ್ಲ. ಈಗ ಏನ್ಮಾಡೋಣ ? "

ದೊಡ್ಡಮ್ಮ ಎವೆ ಮುಚ್ಚದೆ ನಿಂತು ಮಗನ ಮಾತುಗಳನ್ನು ಆಲಿಸಿದರು. ಒಂದು ಕ್ಷಣ ಸುಮ್ಮನಿದ್ದರು. ಏನನ್ನೋ ಹೇಳುತ್ತಲಿದ್ದವರಂತೆ ತುಟಿಗಳು ಮೌನವಾಗಿ ಚಲಿಸಿದುವು.

ಕಟ್ಟಿಕೊಂಡಿದ್ದ ಗಂಟಲನ್ನು ಸರಿಪಡಿಸಿ ಅವರೆಂದರು:

" ಪಾಪಿ ಮುಂಡೇಗಂಡ. ಏನೋ ಮಾಡೋಕ್ಹೋಗಿ ಪ್ರಾಣಾನೇ ಕಳಕೊಂಡ್ನಲ್ಲಾ... "

ಧ್ವನಿ ಅಲೆಅಲೆಯಾಗಿ ಗಾಳಿಯೊಡನೆ ಲೀನವಾಯಿತು.

ಮತ್ತೊಂದು ಕ್ಷಣ ಮಾತಿಲ್ಲದೆ ನಿಂತ ಬಳಿಕ ದೊಡ್ಡಮ್ಮ ಅಂದರು :

" ಏಳು ಶೀನ, ಕೃಷ್ಣೇಗೌಡನನ್ನ ಕರೆಸು. ಮುನಿಯನ ಹೆಂಡತಿಗೂ ಮಗನಿಗೂ ವಿಷಯ ಗೊತ್ತಿದೆಯೋ ಇಲ್ಲವೋ. ಮಾದನಿಗೆ ಹೇಳಿಕಳಿಸು. ತಮ್ಮ ಜನವನ್ನ ಕರ್ಕೊಂಡ್ಬರ್ತಾನೆ. ಕತ್ತಲಾಗೋದರೊಳಗೆ ಶವವನ್ನ ಹಳ್ಳಿಗೆ ತಂದ್ಬಿಡ್ಲಿ. ಶಾಮಣ್ಣ ಇವತ್ತು ಬರ್ತಾನೆ, ಅಲ್ವೆ ? "

ರಂಗಣ್ಣನೆಂದ :

" ಹೂಂ."

" ಸರಿ. ಆಮೇಲೆ ಶವ ಸಂಸ್ಕಾರ ಮಾಡಿದರಾಯ್ತು."

ಅಷ್ಟು ಹೇಳಿ ದೊಡ್ಡಮ್ಮ, ಆಗಲೇ ನಿಂತಿದ್ದ ಮಗನ ಕಡೆ ನೋಡಿ, " ಅಂಗಿ ಹಾಕ್ಕೋ " ಎಂದರು.

ಶ್ರೀನಿವಾಸಯ್ಯ ಶರಟು ತೊಟ್ಟುಕೊಳ್ಳುತ್ತಿದ್ದಂತೆ ದೊಡ್ಡಮ್ಮ ಮಾತು ಮುಂದು ವರಿಸಿದರು:

" ದಿಬ್ಬದ ಹೊಂಡ ಕೆಟ್ಟ ಜಾಗ. ಹಾವು ಕಚ್ಚಿತೋ, ದೆವ್ವ ಬಡೀತೋ ಯಾರು ಬಲ್ಲ ? "

ಶ್ರೀನಿವಾಸಯ್ಯ ತಾಯಿಯ ಮುಖ ನೋಡಿದರು.

" ಏನಮ್ಮ ನೀನು ಹೇಳ್ತಿರೋದು ? ಯಾರೋ ಕೊಂದ್ಹಾಕಿದಾರೆ ಅಂತಾನೆ ರಂಗಣ್ಣ ! "...

ದೊಡ್ಡಮ್ಮ ಅಂದರು:

" ಈ ಮಗೂಗೆ ಏನು ಗೊತ್ತಾಗುತ್ತೆ ಅದೆಲ್ಲ ? ನಮ್ಮ ಹಳ್ಳಿಯವರೇ ಕೊಂದರೂಂತ ಹೇಳೋಕಾಗುತ್ತೇನೋ ? ಶಾಮಣ್ಣನ್ನ ಕೇಳಿ ನೋಡು ಬೇಕಾದರೆ. ಅದೇನಿದ್ದರೂ ಪಂಚಾಯತಿಯವರು ತೀರ್ಮಾನ ಮಾಡ್ತಾರೆ. ನೀನು ಹೋಗು."

ಶ್ರೀನಿವಾಸಯ್ಯ ತಮ್ಮ ಕರಿಯ ಟೋಪಿಯನ್ನು ಇಟ್ಟುಕೊಳ್ಳಲೋ ಬೇಡವೋ ಎಂದು ಅನುಮಾನಿಸಿ, ಟೋಪಿಯನ್ನು ಗೂಟದಲ್ಲೇ ಬಿಟ್ಟು ಬಾಗಿಲಲ್ಲಿ ನಿಂತಿದ್ದ ರಂಗಣ್ಣನನ್ನು ದಾಟಿ ಹೊರಬಂದು, ಜಗಲಿಯ ಮೂಲೆಯಲ್ಲಿದ್ದ ಎಕ್ಕಡ ಮೆಟ್ಟಿಕೊಂಡು, " ಬರ್ತೀನಿ ಅಮ್ಮ" ಎಂದು ಅಂಗಳಕ್ಕಿಳಿದರು.

ಹಾಗೆ ಅವರು ಇಳಿಯುವುದಕ್ಕೂ ಪದ್ಮನಾಭ ಒಳಕ್ಕೆ ಬರುವುದಕ್ಕೂ ಸರಿಹೋಯಿತು.

" ಪದ್ಮ ಬಂದ. ನೀವಿಬ್ರೂ ಇಲ್ಲೇ ಮಾತಾಡ್ತಾ ಇರಿ ರಂಗ " ಎಂದು ನುಡಿದು, ದೊಡ್ಡಮ್ಮ ಒಳಹೋದರು.

ಮೊದಲೇ ಕಳೆಗುಂದಿದ್ದ ಪದ್ಮನಾಭನ ಮುಖ ರಂಗಣ್ಣನನ್ನು ನೋಡಿದೊಡನೆ ಪೂರ್ಣ ಕಪ್ಪಿಟ್ಟಿತು. ಅವನು ಪಡಸಾಲೆಗೆ ಬರದೆ ಜಗಲಿಯಲ್ಲೇ ನಿಂತ.

ಆ ನಿಮಿಷದಲ್ಲಿ ರಂಗಣ್ಣನ ಪಾಲಿಗೆ ಮಧ್ಯಾಹ್ನದ ಅನಂತರದ ಘಟನೆಗಳೆಲ್ಲ ಪುನಃ ಜೀವ ತಳೆದುವು. ದೊಡ್ಡಮ್ಮನ ದರ್ಶನದಿಂದ ಶಾಂತವಾಗಿದ್ದ ಮನಸ್ಸು ಮರಳಿ ಕೆರಳಿತು. ಮುನಿಯನ ಕೊಲೆ (ಸಾವು ?) ಹೇಗೆ ಆಗಿರಬಹುದೆಂಬುದನ್ನು ತರ್ಕಿಸಹೊರಟಿದ್ದ ರಂಗಣ್ಣ ಯೋಚನೆಯ ಜಾಲದಿಂದ ಹೊರಬಂದು ಪದ್ಮನಾಭನಿಗೆ ಇದಿರಾದ.

ಅವನ ಅಂತರಾಳದಲ್ಲಿ ಪದಗಳು ಗುಡುಗಿದುವು:

—ನೀಚ !

—ಪಾಪಿ !

ರಂಗಣ್ಣನೆಂದುಕೊಂಡ :

" ಮುನಿಯನ ಬದಲು ಈತ ಬಿದ್ದಿರಬಾರದಾಗಿತ್ತೆ ಆ ಹೊಂಡದಲ್ಲಿ ? "

ದೊಡ್ಡಮ್ಮನನ್ನು ಕರೆದು ಇವನ ಪಾಪ ಕಾರ್ಯದ ಬಗ್ಗೆ ಹೇಳಲೆ ? ಎನಿಸಿತು.

ಇವನ ಮೇಲೆ ಬಿದ್ದು ಕತ್ತು ಹಿಸುಕಿಬಿಡಬೇಕು ಎಂದು ಬಂಜೆ ಕ್ರೋಧ ಹೊಗೆಯಾಡಿತು.

ನೇರವಾಗಿ ರಂಗಣ್ಣನನ್ನು ನೋಡದೆ ಅಧೀರನಾಗಿ ನಿಂತ ಪದ್ಮನಾಭ, ಈಗೇನು ಮಾಡಲಿ ? ಒಳಗೆ ಬಂದ ರೀತಿಯಲ್ಲೇ ತೆಪ್ಪಗೆ ಹೊರಟುಬಿಡಲೆ ? ಎಂದು ಯೋಚಿಸಿದ.

ಆದರೂ ಧೈರ್ಯ ತಳೆದು, ಕ್ಷೀಣ ಧ್ವನಿಯಲ್ಲಿ ಅವನೆಂದ :

" ಯಾವಾಗ್ಬಂದೆ ? "

" ಇದೇ ಈಗ್ಬಂದೆ," ಎಂದು ಹೇಳಿ, ನಿಮಿಷ ತಡೆದು, ತುಟಿ ಕೊಂಕಿಸಿ ರಂಗಣ್ಣ ಮತ್ತೂ ಅಂದ :

" ನೀನೇ ಮೊದಲು ತಲಪಬೇಕಾಗಿತ್ತು. ಬಳಸು ದಾರಿ ಹಿಡಿದೇಂತ ಕಾಣುತ್ತೆ."

ಪದ್ಮನಾಭ ಜಗಲಿಯಲ್ಲಿ ನಿಂತಲ್ಲೇ ನಿಂತ.

" ಏನು ಹಾಗಂದ್ರೆ ? ಯಾವ ಬಳಸು ದಾರಿ ? "

" ಅಡ್ಡದಾರಿ ಕಣಪ್ಪ ! "

" ವ್ಯಂಗ್ಯ ಮಾತಾಡ್ತಿದೀಯೊ ? "

" ವ್ಯಂಗ್ಯ ಯಾತಕ್ಕೆ ? ದಿಬ್ಬದಿಂದಲ್ವೆ ನೀನೀಗ ಬಂದದ್ದು ? "

ತಡವರಿಸಿ ಪದ್ಮನಾಭನೆಂದ :

" ಅ–ಲ್ಲ... "

" ಅಲ್ಲ—ಬಿಸ್ಮಿಲ್ಲ. ನಾಚ್ಕೆ ಆಗೊಲ್ವೇನೊ ? "

" ನಾಚ್ಕೆ ? ಯಾತಕ್ಕೆ ? "

" ನೀನು ಹೇಡಿ ! ಆಗ್ಲೇ ನಿನ್ನ ಹಿಡಿದ್ಬಿಡ್ತಿದ್ದೆ. ಓಡಿ ತಪ್ಪಿಸ್ಕೊಂಡೆ."

" ನಾಲಿಗೆ ಉದ್ದ ಬೆಳೆಸ್ತಿದೀಯಲ್ಲೊ... "

" ಒಳಗ್ಹೋಗು, ಕನ್ನಡೀಲಿ ಮುಖ ನೋಡ್ಕೊ. ಹೆಣ ನೋಡಿ ಇಷ್ಟೊಂದು ಹೆದರ್ಕೊಂಡಿದೀಯಲ್ಲ ! "

" ಯಾವ ಹೆಣ ? ಯಾರ ಹೆಣ ? "

" ಮುನಿಯನ್ದು. ನಿನ್ನ ಮುಖ ನೋಡಿದರೆ ಅವನ ಕತ್ತು ಹಿಸುಕಿ ನೀನೇ ಕೊಂದ ಹಾಗಿದೆಯಲ್ಲ ! "

" ಷಟಪ್ ! ಹೊರಡಿಲ್ಲಿಂದ ! "

" ನಿನ್ನ ಮನೆ ಅನ್ನೋ ಅಧಿಕಾರದಿಂದ ಹೇಳ್ತಿದೀಯೇನಯ್ಯ ? ಇಲ್ಲೇ ಇರೋಕೆ ಬಂದಿದೀನಿ ಅಂದ್ಕೊಂಡಿಯಾ ? ಹೊರಡ್ತೀನಿ. ಇನ್ನೊಮ್ಮೆ ಈ ಮನೆಗೆ ಕಾಲಿಡೋದಿಲ್ಲ, ನೆನಪಿರ್ಲಿ ! "

" ಥ್ಯಾಂಕ್ಸ್. "

ರಂಗಣ್ಣ ನಿಂತಲ್ಲಿಂದ ಕದಲಿ ಹೊರ ಬಾಗಿಲಿನತ್ತ ಹೆಜ್ಜೆ ಇರಿಸಿದ. ಪದ್ಮನಾಭನ ಬಳಿ ನಿಂತು, ಕೆಂಗಣ್ಣುಗಳಿಂದ ಅವನನ್ನು ದುರುಗುಟ್ಟಿ ನೋಡಿದ. ರಂಗಣ್ಣನ ಕೈಗಳು ಮುಷ್ಟಿ ಕಟ್ಟಿದ್ದುವು. ಪದ್ಮನಾಭನ ಮುಖಕ್ಕೊಂದು ಗುದ್ದಲೇ ಎನ್ನಿಸಿತು. ಆ ಯೋಚನೆಯಿಂದ ಅವನ ಮೈ ಕಂಪಿಸಿತು.

"ಥುತ್ !" ಎಂದಿಷ್ಟೆ ಧ್ವನಿ ಹೊರಡಿಸಿ ರಂಗಣ್ಣ ಬಾಗಿಲನ್ನು ದಾಟಿದ. ಪಡಸಾಲೆಯ ಒಳಬಾಗಿಲಿನಾಚೆಯಿಂದ ದೊಡ್ಡಮ್ಮನ ಧ್ವನಿ ಕೇಳಿಸಿತು.

"ರಂಗ ಹೋದ್ನೇನೊ ಪದ್ಮ ?"

ಪದ್ಮನಾಭ ಉತ್ತರಿಸಲಿಲ್ಲ. ಪಡಸಾಲೆಯ ಎಡಕ್ಕಿದ್ದ ತನ್ನ ಕೊಠಡಿಯನ್ನು ಹೊಕ್ಕ. ಬೆಳಗ್ಗೆ ಮುಖ ಕ್ಷೌರಕ್ಕೆಂದು ಕಿಟಕಿಗೆ ಸಿಲುಕಿಸಿದ್ದ ಕನ್ನಡಿ ಅಲ್ಲೇ ಇತ್ತು. ಆ ಕನ್ನಡಿಯ ಬಳಿ ಸಾರಿ ಅದರಲ್ಲಿ ತನ್ನ ಮುಖ ನೋಡಿಕೊಂಡ.

ಆ ಕಿಟಕಿಯಿಂದ ಕಾಣಿಸುತ್ತಿತ್ತು. ಅಂಗಳ ದಾಟಿ, ಹೊಲಗಳ ಏರಿಯ ಮೇಲಿಂದ ಕಣಿವೇಹಳ್ಳಿಯ ಏಕಮಾತ್ರ ರಸ್ತೆಯ ಕಡೆಗೆ ನಡೆದಿದ್ದ ರಂಗಣ್ಣನ ಹಿಮ್ಮೈ......

...ಆ ರಸ್ತೆಯಲ್ಲಿ ರಂಗಣ್ಣ ಹತ್ತು ಹೆಜ್ಜೆ ಹೋಗಿದ್ದನೋ ಇಲ್ಲವೋ ಹಳ್ಳಿಯ ಹತ್ತಾರು ಜನ ಆ ಕಡೆ ಈ ಕಡೆಗಳಿಂದ ಅವನ ಬಳಿಗೆ ಬಂದರು. ಎಲ್ಲ'ರೂ ಅವನನ್ನು ಪ್ರಶ್ನಿಸುವವರೇ.

"ಎಷ್ಟು ಹೊತ್ತಿಗೆ ನೋಡಿದಿರಿ ರಂಗಣ್ಣ ?"

"ಸಾಯಂಕಾಲ."

"ಎದರ್ಕೆ ಆಗ್ನಿಲ್ವಾ ?"

"ಯಾಕಪ್ಪ ಎದರ್ಬೇಕು ?"

"ಗಾಯ ಗೀಯ ಇತ್ತಾ ?"

"ಕಾಣ್ಲಿಲ್ಲ."

"ದೆವ್ವ ಬಡಿದಿರ್ಬೇಕು ?"

"ಹ್ಯಾಗೆ ಹೇಳಾನ ?"

ಇನ್ನೊಬ್ಬನೆಂದ :

"ದೆವ್ವವೂ ಇಲ್ಲ, ಮಣ್ಣೂ ಇಲ್ಲ. ಅವನು ಸಾಯೋಕೆ ಯಾರು ಕಾರಣ ಅಂತ ನನಗೆ ಗೊತ್ತು."

ಮತ್ತೊಬ್ಬ ಆಕ್ಷೇಪಿಸಿದ :

"ಮಾಡಿದವರ ಪಾಪ ಆಡಿದವರ ಬಾಯಲ್ಲಿ. ನಿನಗ್ಯಾತಕ್ಕಪ್ಪ ಅದೆಲ್ಲ ?"

ಹಿಂಬಾಲಿಸುತ್ತ ಬಂದ ಜನರ ಗುಂಪಿನೊಡನೆ ರಂಗಣ್ಣ ಮುಂದುವರಿದ. ಕೃಷ್ಣೇಗೌಡನ ಮನೆಯ ಮುಂದೆ ಜನ ನೆರೆದಿದ್ದರು. ಆ ಜನರ ಮಧ್ಯೆ ಶ್ರೀನಿವಾಸಯ್ಯ ನಿಂತಿದ್ದರು.

ಮಾತುಗಳು ಕೇಳಿಸುತ್ತಿದ್ದುವು.

"ಬನ್ನಿ ಕೃಷ್ಣೇ ಗೌಡರೆ, ಮಾದನನ್ನು ಕರೆಯೋಣ. ಕತ್ಲಾದ್ಮೇಲೆ ಶವ ತರೋದು ಕಷ್ಟ."

"ಮುಚ್ಚಂಜೆ ಒತ್ನಲ್ಲಿ ಆ ಹೊಂಡದೊಳಕ್ಕೆ ಜನ ಇಳೀತಾರೋ ಇಲ್ವೋ ?"

"ಏನಾದ್ರೂ ಮಾಡ್ಬೇಕಪ್ಪ. ಲಾಟೀನು, ಟಾರ್ಚು ಏನೇನಿದೆಯೋ ತಗೊಂಡ್ಹೋಗೋಣ."

"ನಿಂಗಿಗೆ ಯೋಳ್ಕಳ್ಸಿ. ಅವರ ಐದನನ್ನು ಕರೀರಿ."

"ಅಕಾ, ಅವಳೇ ಬರ್‍ತಾ ಅವ್ಳೆ."

ರಂಗಣ್ಣನ ಜತೆಗಿದ್ದವರು ಅವನನ್ನು ಬಿಟ್ಟು ಕೃಷ್ಣೇಗೌಡನ ಮನೆಯ ಮುಂದಿದ್ದವರನ್ನು

ಸೇರಿಕೊಂಡರು. ಅವರೆಲ್ಲರ ದೃಷ್ಟಿ ರಸ್ತೆಯುದ್ದಕ್ಕೂ ರೋದಿಸುತ್ತ ಓಡಿ ಬರುತ್ತಿದ್ದ ನಿಂಗಿಯ ಮೇಲೆ ನೆಟ್ಟಿತು. ಮೈ ಮುಚ್ಚಿದ್ದ ಮಾಸಲು ಚಿಂದಿ ಸೀರೆ. ಕೆದರಿದ ತಲೆಗೂದಲು. ಬೇಟೆಗಾರರ ಬಲೆಯೊಳಗೆ ಬಿದ್ದ ಕಾಡು ಮಿಕದಂತೆ ಅವಳು ತತ್ತರಿಸುತ್ತಿದ್ದಳು.

ಜನರಿಂದ ದೂರ ನಿಂತು ಕುಕ್ಕರ ಕುಳಿತು ಮೊಣಕಾಲುಗಳಿಗೆ ಹಣೆ ಜಪ್ಪಿಕೊಳ್ಳುತ್ತ, ಮುಷ್ಟಿಗಳಿಂದ ಎದೆ ಬಡಿದುಕೊಳ್ಳುತ್ತ, ತಲೆಗೂದಲನ್ನು ಕಿತ್ತು ಕಿತ್ತು ಎಳೆಯುತ್ತ ಅವಳು ಕಿವಿಯೊಡೆಯುವಂತೆ ಅತ್ತಳು.

"ದಣಿಗಳೇ, ಅಪ್ಪಗಳೇ, ಅಯ್ಯನವರೇ, ನನ್ನ ಇರಿಯನ್ನ ಉಳಿಸ್ಕೊಡಿ! ಅವನು ಸತ್ತಾಕಿಲ್ಲ! ಕಂಡಿತ ಸತ್ತಾಕಿಲ್ಲ!"

ಆ ಆಕ್ರಂದನದೆದುರು, ದಿಬ್ಬಕ್ಕೆ ನಾಳೆ ಹೋದರಾಗದೆ ಎಂದು ಯೋಚಿಸಿದ ಕೆಲವರು ಮನಸ್ಸು ಬದಲಾಯಿಸಿದರು.

ಮುನಿಯನ ಜನರೇ ಆದ ಮಾದ, ಈರ, ಬಸಯ್ಯ ಓಡಿಬಂದರು. ಲಾಟೀನು ಟಾರ್ಚು ಗಳೂ ಬಡಿಗೆ ದೊಣ್ಣೆಗಳೂ ಸಿದ್ಧವಾದುವು.

ಶ್ರೀನಿವಾಸಯ್ಯ ಅಂದರು:

"ನೀನು ಹಟ್ಟಿಗ್ಹೋಗು, ನಮ್ಜತೆ ಬರಬೇಡ."

ನಿಂಗಿ ರೋದಿಸಿದಳು:

"ಅಂಗನ್ಬ್ಯಾಡಿ ಅಯ್ಯನರೇ! ಅಂಗನ್ಬ್ಯಾಡಿ ಅಯ್ಯನರೇ!"

ಬೇರೆ ಒಬ್ಬಿಬ್ಬರು ಗದರಿಸಿ ನೋಡಿದರು:

"ಓಗು! ಅಟ್ಟೀಲಿರು!"

ಆದರೆ ನಿಂಗಿ ಕೇಳಲಿಲ್ಲ. ಆಕೆಯೂ ಮೌನವಾಗಿ ಕಂಬನಿ ಸುರಿಸುತ್ತಿದ್ದ ಹದಿನಾಲ್ಕರ ಹರೆಯದ ಅವಳ ಮಗನೂ ಜನರ ಗುಂಪನ್ನು ಹಿಂಬಾಲಿಸಿದರು.

ರಂಗಣ್ಣ ಒಬ್ಬನೇ ಬೀದಿಯುದ್ದಕ್ಕೂ ನಡೆದ. ತನ್ನ ಮನೆಯ ಕಡೆಗೆ ಸಾಗಿದ್ದ ಕವಲು ದಾರಿಯನ್ನು ತುಳಿದ. ನದಿಯಿಂದ ಬಂದ ಕಾಲಿವೆ ತಮ್ಮ ಹೊಲಗಳನ್ನು ಮುಟ್ಟಿದ ಕಡೆ, ಒಂಟಿಯಾಗಿದ್ದ ಬಂಡೆಕಲ್ಲಿನ ಮೇಲೆ ಕುಳಿತ.

ಪಶ್ಚಿಮ ಕೆಂಪಗಾಗಿತ್ತು. ಅದರ ಹಿನ್ನೆಲೆಯಲ್ಲಿ ದೂರದ ಮರಗಳ ಹಸಿರೆಲೆಗಳು ಕಪ್ಪಗೆ ಕಾಣಿಸುತ್ತಿದ್ದುವು.

ರಂಗಣ್ಣ ವ್ಯಥಿತನಾಗಿ ತನ್ನೆದುರು ದೃಷ್ಟಿಯನ್ನು ಅಲೆಯ ಬಿಟ್ಟ. ನೆಲ ಒಣಗಿತ್ತು. ಕಾಲಿವೆಯ ತಳದಲ್ಲಿ ನಯವಾದ ಮರಳಿತ್ತು.

ಹೊಲಗಳಾಚೆಗೆ ಮಂಗಳೂರು ಹೆಂಚಿನ ಮನೆ, ತನ್ನದು. (ಇದು ಕಣಿವೇಹಳ್ಳಿಯ ಎರಡೇ ಎರಡು ಹೆಂಚಿನ ಮನೆಗಳಲ್ಲಿ ಒಂದು. ಶಾಮೇಗೌಡರೂ ಶ್ರೀನಿವಾಸಯ್ಯನವರೂ ಒಂದೇ ವರ್ಷ ಛಾವಣಿಗೆ ಹೆಂಚುಗೂಡಿಸಿದ್ದರು.)

ರಂಗಣ್ಣ ನೆನಪಿನ ಆಳದೊಳಕ್ಕೆ ಕೈ ಇಕ್ಕಿ ನೋಡಿದ. ತನಗಾಗ ನಾಲ್ಕೋ ಐದೋ ವರ್ಷ. ಆಗಿನ್ನೂ ಪದ್ಮನಾಭನ ತಾಯಿ ಬದುಕಿದ್ದರು. ಸುಭದ್ರೆ ಹುಟ್ಟಿರಲಿಲ್ಲ. ತನ್ನ ತಾಯಿ ಬಸುರಿ. ಪದ್ಮನನ್ನು ಎತ್ತಿಕೊಂಡು ಆತನ ತಾಯಿ ಮನೆಗೆ ಬಂದಿದ್ದರು.

"ಬಾಪ್ಪ, ಬಾ. ನಿನ್ನ ಗೆಳೆಯನನ್ನ ಕರಕೊಂಡು ಬಂದಿದೀನಿ," ಎಂದಿದ್ದರು, ದೂರ

ನಿಂತಿದ್ದ ತನ್ನನ್ನು ಉದ್ದೇಶಿಸಿ.

ತಾನು ನಾಚಿಕೊಂಡು ತಾಯಿಯ ಸೆರಗಿನ ಹಿಂದೆ ಅವಿತಿದ್ದೆ. ಸಂಜೆಯ ಹೊತ್ತು. ಛಾವಣಿಗೆ ಹೆಂಚು ಹಾಕುತ್ತಿದ್ದುದರಿಂದ ಮನೆಯೊಳಗೆಲ್ಲಾ ಅವ್ಯವಸ್ಥೆ. ಅಂಗಳದಲ್ಲಿ ತನ್ನ ತಾಯಿ ಪದ್ಮನ ತಾಯಿಗಾಗಿ ಚಾಪೆ ಹಾಸಿದ್ದರು.

"ಆಲು ಕೊಡ್ಲೇ ? " ಎಂದಿದ್ದರು ತನ್ನ ತಾಯಿ.

ಪದ್ಮನನ್ನು ನೆಲದ ಮೇಲೆ ಇಳಿಬಿಟ್ಟು ಅವರ ತಾಯಿ ಅಂದಿದ್ದರು :

"ಏನೂ ಬ್ಯಾಡಿ ; ನನಗೇನೂ ಬ್ಯಾಡಿ, ಸೀತಮ್ಮ."

ಅವರನ್ನು ಅವರ ಪಾಡಿಗೆ ಬಿಟ್ಟು ತಾನೂ ಪದ್ಮನೂ ಮನೆಯ ಹಿಂದೆ ಅಲೆಯಲು ಹೋಗಿದ್ದೆವು. ಪದ್ಮನ ತಾಯಿಗೂ ತನ್ನ ತಾಯಿಗೂ ಮಕ್ಕಳ ನೆನಪಾದುದು ಪದ್ಮನ ತಾಯಿ ಹೊರಡಲೆಂದು ಎದ್ದಾಗ. ಅವರಿಬ್ಬರೂ ತಮ್ಮನ್ನು ಹುಡುಕಿದ್ದೇ ಹುಡುಕಿದ್ದು.

ತಾವು ಸಿಕ್ಕಾಗ, "ಈ ಹುಡುಗರನ್ನ ನೋಡ್ಕೊಳ್ಳೋದು ಕಷ್ಟವಪ್ಪಾ ಕಷ್ಟ," ಎಂದಿದ್ದರು ಪದ್ಮನ ತಾಯಿ.

ರಂಗಣ್ಣನೆಂದುಕೊಂಡ :

ಅವರು ಬೇರೆ, ನಾವು ಬೇರೆ. ಒಂದಾಗಬೇಕು ಎಂದರೂ ಅದು ಹೇಗೆ ಸಾಧ್ಯ ?

ಕತ್ತಲು ಕವಿಯತೊಡಗಿದಂತೆ ರಂಗಣ್ಣ ಎದ್ದು ಮನೆಗೆ ನಡೆದ.

ಚಪ್ಪಲಿ ಕಳಚಿಟ್ಟು ಬಂದು ಅಂಗಳದ ಮೂಲೆಯಲ್ಲಿ ಕೈಕಾಲು ತೊಳೆದು ಪಡಸಾಲೆಯನ್ನು ಪ್ರವೇಶಿಸಿದ. ಅಲ್ಲಿ ದೀಪ ಉರಿಯುತ್ತಿತ್ತು. ಗೋಡೆಯಲ್ಲಿ ಚಿತ್ತಾರ. ದೇವರ ಪಟಗಳು ಕಡಮೆ. ಬಾಗಿಲ ಮೇಲ್ಗಡೆ ದೊಡ್ಡದಾದೊಂದು ಬಣ್ಣ ಬಳಿದ ಭಾವಚಿತ್ರ. ರಂಗಣ್ಣನ ತಾತನದು. ಒಬೀರಾಯನ ಕಾಲದಲ್ಲಿ ಭಾಗ್ಯನಗರದಲ್ಲಿ ತೆಗೆದ ಒಂದು ಚಿತ್ರದ ನೆರವಿನಿಂದ ಅದನ್ನು ಮಾಡಿಸಿತ್ತು.

ಶ್ಯಾಮೇಗೌಡರ ತಂದೆ ದ್ಯಾವೇಗೌಡರು......

ತಮ್ಮ ಮನೆತನದ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರು......

...ಎಲ್ಲಿಯೂ ಸುಭದ್ರೆಯ ಸುಳಿವಿರಲಿಲ್ಲ.

ರಂಗಣ್ಣ ಒಳಗೆ ಹಣಿಕಿ ನೋಡಿ ಕೇಳಿದ :

"ಅತ್ತೆಮ್ಮಾ, ಸುಬ್ಬಿ ಎಲ್ಲಿ ? "

"ತಲೆನೋವಂತೆ ಕಣಪ್ಪಾ. ಮಲಕ್ಕೊಂಡವಳೆ. ಒಸಿ ನೋಡು. ಬ್ಯಾಡ ಅಂದ್ರೂ ಬಿಸಿಲ್ನಾಗೆ ಅಲೀತೀರಿ...... "

ಒಳಗಿನ ಕೊಠಡಿಗೆ ರಂಗಣ್ಣ ಹೋದ. ಕತ್ತಲಲ್ಲಿ ನೆಲದ ಮೇಲೆ ಹಾಸಿಗೆ ಹಾಸಿ ಸುಭದ್ರಾ ಮಲಗಿದ್ದಳು.

ರಂಗಣ್ಣ ನಿಂತುಕೊಂಡೇ ಕೇಳಿದ :

"ಸುಬ್ಬೀ, ಮುನಿಯ ಸತ್ತ. ನಿನಗೆ ಗೊತ್ತಿಲ್ಲ ತಾನೆ ? "

ಉತ್ತರ ಬರಲಿಲ್ಲ.

ರಂಗಣ್ಣ ಮುಂದುವರಿದ :

"ಹೋಗಲಿ. ಅವನು ಯಾಕೆ ಸತ್ತ ಅನ್ನೋದಾದ್ರೂ ಗೊತ್ತೊ ? "

ಅದಕ್ಕೂ ಉತ್ತರವಿಲ್ಲ.

"ಗೊತ್ತಿಲ್ಲಾಂತಾದ್ರೆ ನಾನ್ಹೇಳ್ತೀನಿ ಕೇಳು. ಮುನಿಯ ಕುಲದ ಮರ್ಯಾದೆ ಮೀರಿ ನಡೆಯೋಕ್ಹೋದ. ಅದಕ್ಕೆ ಸತ್ತ."

ಮಲಗಿದ್ದಲ್ಲಿಂದ ಸುಭದ್ರಾ ಚಿಟ್ಟನೆ ಚೀರಿದಳು.

೩

ಶಾಮೇಗೌಡರು ಹೊಸಳ್ಳಿಯಿಂದ ಮರಳಿ ಸ್ವಗ್ರಾಮವನ್ನು ಸೇರಿದಾಗ ಸೂರ್ಯ ಮುಳುಗಿ ಒಂದು ಘಳಿಗೆಯಾಗಿತ್ತು. ಮುನಿಯನ ಶವವನ್ನು ದಿಬ್ಬದ ಹೊಂಡದಿಂದ ಎತ್ತಿ, ಕೆಳಕ್ಕೆ ತಂದಿದ್ದರು.

ದಾರಿಯಲ್ಲಿ ಶಾಮೇಗೌಡನನ್ನು ಸಂಧಿಸಿ ಮೊದಲು ಸುದ್ದಿ ತಿಳಿಸಿದವನು ಶ್ರೀನಿವಾಸಯ್ಯ ನವರ ಎರಡನೆಯ ಮಗ ಗೋವಿಂದ.

"ಶಿವ, ಶಿವ !" ಎಂದರು ಗೌಡರು.

ಅವರು ಕಟ್ಟುಮಸ್ತಾದ ಆಳು. ಆಯುಸ್ಸಿನ ಮಧ್ಯಾಹ್ನ ದಾಟಿದ್ದರೂ ಯೌವನದ ಕಳೆಯಿದ್ದ ಎಣ್ಣೆಗಪ್ಪು ಮುಖ. ಎದ್ದು ಕಾಣಿಸುತ್ತಿದ್ದ ಮೂಗಿನ ಕೆಳಗೆ ಗಿರಿಜಾ ಮೀಸೆ. ಕಪ್ಪು ಬಿಳಿ ತಲೆಗೂದಲನ್ನು—ಬಿಗಿದು ಕಟ್ಟಿದ್ದ ಪುಟ್ಟ ಚಂಡಿಕೆಯನ್ನು—ಮರೆಮಾಡಿದ್ದ ಬಿಳಿಯ ರುಮಾಲು. ಎತ್ತಿ ಕಟ್ಟಿದ್ದ ಪಂಚೆ ಜುಬ್ಬಗಳ ಮೇಲೆ ಕಪ್ಪು ಕೋಟು. ಇಸ್ತ್ರಿ ಮಾಡಿ ಮಡಚಿ ಕತ್ತನ್ನು ಬಳಸಿ ಎದೆಯ ಮೇಲೂ ಬೆನ್ನ ಮೇಲೂ ಇಳಿಬಿದ್ದಿದ್ದ ಜರಿ ಶಾಲು. ಕಂಕುಳಲ್ಲಿ ಹಗಲಿನ ಬಿಸಿಲಿನಿಂದ ಆಶ್ರಯ ಪಡೆಯಲೆಂದು ಕೈಯಲ್ಲಿ ಒಯ್ದಿದ್ದ ಕೊಡೆ.

ದಿನವಿಡೀ ಸುತ್ತಿದ್ದರೂ ಆಯಾಸವಾಗದೇ ಇದ್ದ ಗೌಡರು ಈಗ ಮುನಿಯ ಕೊಲೆ ಯಾದನೆಂದು ಕೇಳಿದಾಗ ಅಂಗೈಯಿಂದ ಮುಖ ಒರೆಸಿಕೊಂಡರು.

ನೆಟ್ಟ ದೃಷ್ಟಿಯಿಂದ ಗೋವಿಂದನನ್ನು ನೋಡಿ ಅವರು ಕೇಳಿದರು:

"ಅಯ್ನೋರೆಲ್ಲಿ ?"

"ಅಣ್ಣಯ್ಯ ಮಾರಿಚಾವಡೀಲಿದಾರೆ."

"ಹೆಣ ?"

"ಮಾದ ತಮ್ಮ ಕೇರಿಗೆ ಹೊರಿಸ್ಕೊಂಡು ಹೋದ."

"ನಡಿ, ಗೋವಿಂದ. ಶವ ಇಷ್ಟು ನೋಡ್ಕಂಡು ಬರಾನ."

ಗೋವಿಂದನ ಟಾರ್ಚು ಆಗೊಮ್ಮೆ ಈಗೊಮ್ಮೆ ಬೆಳಕು ಹಾಯಿಸಿತು. ಆ ಇರುಳಲ್ಲಿ ಗೌಡರ ಜೀಕು ಎಕ್ಕಡಗಳೂ ಗೋವಿಂದನ ಚಪ್ಪಲಿಗಳೂ ಲಯಬದ್ಧವಾಗಿ ಸದ್ದುಮಾಡಿದವು.

ತನ್ನ ಯೋಚನೆಗಳಿಗೆ ಮಾತಿನ ರೂಪ ಕೊಡಲೆತ್ನಿಸುತ್ತ ಗೋವಿಂದ ಕತ್ತಲಲ್ಲಿ ತನ್ನ ಟೋಪಿಯನ್ನೊಮ್ಮೆ ಮುಟ್ಟಿ ನೋಡಿದ.

ಗಂಟಲು ಸರಿಪಡಿಸಿ ಅವನೆಂದ :

"ನಗರಕ್ಕೆ ಹೋಗಿ ಪೋಲೀಸ್ನೋರಿಗೆ ಕಂಪ್ಲೇಂಟು ಕೊಡಬೇಕಾಗುತ್ತೋ ಏನೋ."

ನಡೆಯುತ್ತ ಮುಂದೇನು ಮಾಡಬೇಕೆಂದು ಆಲೋಚಿಸುತ್ತಲಿದ್ದ ಗೌಡರು ಈ ಹುಡುಗ 'ಪೋಲೀಸರು' ಎಂದಂತಾಯಿತಲ್ಲ—ಎಂದು "ಏನಂದೆ ಗೋವಿಂದ?" ಎಂದು ಕೇಳಿದರು.

ಆತ ಪುನಃ ಅಂದ:

"ಪೋಲೀಸರಿಗೆ ಕಂಪ್ಲೇಂಟು ಕೊಡಬೇಕಾಗುತ್ತೇನೋ ಅಂತ."

ಗೌಡರು ಧ್ವನಿ ಏರಿಸಿದರು:

"ಪೋಲೀಸರಿಗೆ? ಯಾತಕ್ಕೆ?"

"ಹಾಗಲ್ಲ, ಮುಂದೆ ಯಾರಾದರೂ ಏನಾದರೂ..."

"ಯಾರು? ಏನು? ಕಣಿವೇಹಳ್ಳೀಲಿ ಪೋಲೀಸರಿಗೆ ಏನು ಕೆಲಸ ಗೋವಿಂದ?"

"ಹಾಗಲ್ಲ..."

ಗೌಡರಿಗೆ ಸಿಟ್ಟು ಬಂತು.

"ಮತ್ತೆ ಹ್ಯಾಗೆ?"

ನಿಧಾನವಾಗಿ ಗೋವಿಂದನೆಂದ:

"ಮುನಿಯ ಸಾಯೋದಕ್ಕೆ ಏನು ಕಾರಣ ಅಂತ......"

"ಸಾಯೋದಕ್ಕೆ ಸಾವಿರ ಕಾರಣ. ಗೋವಿಂದಪ್ಪ, ನೀನು ಚಿಕ್ಕೋನು. ಇಲ್ಲದ್ದೆಲ್ಲ ಯೋಚಿಸ್ಕೊಂಡು ತಲೆ ಕೆಡಿಸ್ಕೋಬ್ಯಾಡ."

ಗೋವಿಂದ ಎದುರಾಡಲಿಲ್ಲ. ಉಗುಳು ನುಂಗಿದ. ಮತ್ತೊಮ್ಮೆ ಟೋಪಿಯನ್ನು ಮುಟ್ಟಿ, ಅತ್ತಿತ್ತ ಸರಿಸಿ, ಸರಿಯಾಗಿಟ್ಟುಕೊಂಡ.

ನಡೆಯುತ್ತಿದ್ದವರಿಗೆ ನಿಂಗಿಯ ರೋದನ ಕೇಳಿಸತೊಡಗಿತು. ಆ ಶೋಕಧ್ವನಿ ಅಲೆಯಲೆಯಾಗಿ ಸುತ್ತಲೂ ಹಬ್ಬುತ್ತಿತ್ತು.

ಕೇರಿಯ ಹೊರಗೆ ಆಕಾಶ ನೋಡುತ್ತ ಮಲಗಿತ್ತು, ಮುನಿಯನ ನಿರ್ಜೀವ ದೇಹ. ನೆಲದ ಮೇಲೆ ಕೃಷ್ಣೇಗೌಡನ ಲಾಟೀನು. ಗಂಡನ ಶವದ ಮೇಲೆ ಬಿದ್ದು ಬಿದ್ದು ನಿಂಗಿ ಗೋಳಾಡುತ್ತಿದ್ದಳು. ಈರ–ಮಾದರ ಹೆಂಡತಿಯರೂ ಅಳುತ್ತಿದ್ದರು. ಮೂವತ್ತು ನಾಲ್ವತ್ತು ಜನರ ಗುಂಪು ಬೆಳಕಿಗಿಂತ ತುಸು ದೂರದಲ್ಲಿ ಅರ್ಧವೃತ್ತ ರಚಿಸಿತ್ತು.

ಯಾವನೋ ಅಂದ:

"ಗೌಡರು ಬಂದ್ರು."

ಬೇರೆಯೂ ಇಬ್ಬರು ಮೂವರು ಒಟ್ಟಾಗಿ ಅಂದರು:

"ಗೌಡರು ಬಂದ್ರು."

ಇನ್ನು ಪರವಾಗಿಲ್ಲ — ಎಂಬ ಧ್ವನಿಯಿತ್ತು ಆ ಮಾತಿನಲ್ಲಿ.

ಒಬ್ಬ ಕಂದೀಲನ್ನು ಶವದ ಸಮೀಪಕ್ಕೆ ತಂದು ಎತ್ತಿ ಹಿಡಿದ, ಗೌಡರಿಗೆ ಕಾಣಿಸಲಿ ಎಂದು.

ಶಾಮೇಗೌಡರು ತುಸು ಬಾಗಿ ನೋಡಿದರು. ಊದಿಕೊಂಡಿದ್ದ ಮುಖ ಒಂದು ಬದಿಗೆ ಜೋತಿತ್ತು. ಮೈಯಲ್ಲಿ ಯಾವ ಗಾಯವೂ ಇರಲಿಲ್ಲ. ಕತ್ತು ಹಿಸುಕಿ ಉಸಿರು ಕಟ್ಟಿಸಿ ಪ್ರಾಣ ತೆಗೆದಿರಬೇಕೆಂಬುದು ಸ್ಪಷ್ಟವಾಗಿತ್ತು. ಉಟ್ಟಿದ್ದ ಮಾಸಲು ಅಡ್ಡಪಂಚೆಗೂ ಹಳೆಯ ಅಂಗಿಗೂ ಅಲ್ಲಲ್ಲಿ ಹಸಿಮಣ್ಣು ಮೆತ್ತಿತ್ತು.

ಮನಸಿನೊಳಗಿದ್ದುದನ್ನು ಬದಿಗೆ ತಳ್ಳಿ, ತಲೆ ಎತ್ತಿ ಗೌಡರೆಂದರು:

"ಮನಿಷ್ಯ ಮಾಡಿರೋ ಕೆಲಸ ಇದಲ್ಲ."

ಗೌಡರ ಧ್ವನಿ ಕೇಳಿದ ನಿಂಗಿ ಮತ್ತಷ್ಟು ಗಟ್ಟಿಯಾಗಿ ಎದೆ ಬಡಿದುಕೊಂಡು ಅಳ ತೊಡಗಿದಳು.

ಒಬ್ಬನೆಂದ:

"ಸುಮ್ನಿರು. ಓದ ಜೀವ ಬತ್ತದಾ?"

ನಿಂಗಿ ಪ್ರಲಾಪಿಸಿದಳು:

"ಒಲ ಒಲ ಅಂತ ಉಚ್ಕೊಂಡೆ ಮಾಡ್ದ. ಬ್ಯಾಡ ಅಂದ್ರೆ ಕೇಳ್ನಿಲ್ಲಪೋ..."

ನೆರೆದವರು ಗೌಡರು ಇನ್ನೇನು ಹೇಳುವರೋ ಎಂದು ಅವರ ಕಡೆಗೇ ನೋಡಿದರು. ಶಾಮೇಗೌಡರು ತಲೆಯಾಡಿಸಿ ನಿಟ್ಟುಸಿರು ಬಿಟ್ಟರೇ ಹೊರತು, ಏನನ್ನೂ ಆಡಲಿಲ್ಲ.

ಜನಸಂದಣಿಯಿಂದ ಮಾತುಗಳು ಬಂದುವು:

—"ಕೈಚೀಲ ಎಣದತ್ರಾನೇ ಬಿದ್ದಿತ್ತು."

—"ಒಂದು ಸಣ್ಣ ಸರ್ಟು, ಎಲೆ ಅಡಿಕೆ, ಒಂದೊಂದು ರೂಪಾಯಿನ ಐದು ನೋಟು, ಅಷ್ಟೇ."

—"ಸರ್ಟು ಐದನಿಗೇಂತ ಕೊಂಡಿರ್ಬೇಕು."

—"ಕಾಸು ಯಾರೂ ಮುಟ್ಟಿಲ್ಲ."

ಧ್ವನಿ ಏರಿಸಿ ಗೊಗ್ಗರ ಗಂಟಲಲ್ಲಿ ಗೌಡರೆಂದರು:

"ಯೋಳ್ಲಿಲ್ವ? ಮನಿಷ್ನಾದೋನು ಮಾಡಿರೋ ಕೆಲಸ ಇದಲ್ಲ."

ಜನರ ಗುಂಪಿನಿಂದ ಮಾತುಗಳು ಮತ್ತೂ ಕೇಳಿಸಿದುವು:

—"ವಕೀಲರ್ನ ನೋಡೋಕೆ ಅಂತ ನಿನ್ನೆ ಒತ್ತಾರೆ ನಗರಕ್ಕೆ ಓದ್ನಂತೆ."

—"ನಿನ್ನೆ ರಾತ್ರಿ ವಾಪ್ಸು ಬರುವಾಗ ಇಂಗಾಗಿರ್ಬೇಕು."

—"ಪಾಪ! ಒಳ್ಳೇ ಕೆಲಸಗಾರ!"

—"ತನ್ನದೇ ಒಲ ಇರಬೇಕೂಂತ ಎರಡೆಕರೆ ಕೊಂಡ. ಅನುಬೋಗಿಸೋ ಅದೃಷ್ಟ ಇರ್ನಿಲ್ಲ." ಗಟ್ಟಿಯಾಗಿ ಗೌಡರೆಂದರು:

"ಈರ! ಮಾದ! ಹೆಣ ಇಟ್ಕೊಂಡು ಸುಮ್ಕೆ ಯಾಕ್ನಿಂತಿದೀರಾ? ಮುಂದಿನ ಕೆಲಸ ಮುಗಿಸ್ಬಿಡಿ."

ಗವಿಯಾಗಿದ್ದ ಗಂಟಲಿನಿಂದ ಮಾದನೆಂದ:

"ಆಗಲಿ, ಒಡೆಯಾ."

"ಓಗಿ ನಿಮ್ನಿಮ್ಮನೆಗಳಿಗೆ" ಎಂದರು ಗೌಡರು ನೆರೆದಿದ್ದವರತ್ತ ನೋಡಿ.

ಊರ ಅಕ್ಕಸಾಲಿಗ ವೀರಾಚಾರಿ ನಿಂತಿದ್ದ, ಜನರ ನಡುವೆ.

"ಆಚಾರಿ, ಇಲ್ಲಿ ಬಾ," ಎಂದರು ಗೌಡರು.

ಆತ ಹತ್ತಿರ ಬಂದಾಗ, ಪಿಸು ಧ್ವನಿಯಲ್ಲಿ, "ಅಬ್ದುಲ್ಲ ಹಟ್ಟೀಲಿದ್ರೆ ಕರಕೊಂಡ್ಬಾ," ಎಂದರು.

ಒಳಗಿನ ಸಂದೇಹದ ಕೆಂಡಕ್ಕೆ ತಿದಿಯೊತ್ತಿದಂತಾಗಿ ವೀರಾಚಾರಿ, ಅಬ್ದುಲ್ಲ ವಾಸವಾಗಿದ್ದ

ಹಳ್ಳಿಯ ಹೊರ ವಲಯದತ್ತ ಧಾವಿಸಿದ.

ಗೌಡರು ಗೋವಿಂದನೊಡನೆ, ಹಾಗೂ ಹಿಂಬಾಲಿಸಿ ಬಂದ ಇತರ ಮೂವರು ನಾಲ್ವರೊಡನೆ, ಚಾವಡಿಯ ಕಡೆಗೆ ನಡೆದರು. ಹೆಜ್ಜೆಗಳು ಭಾರವಾಗಿದ್ದುವು. ಹಗಲೆಲ್ಲ ಬಿಸಿಲನ್ನು ಸಹಿಸಿಕೊಂಡಿದ್ದ ಅವರ ಕಣ್ಣುಗಳು ಈಗ ಉರಿಯತೊಡಗಿದುವು.

ಟಾರ್ಚನ್ನು ಆಗೊಮ್ಮೆ ಈಗೊಮ್ಮೆ ಉರಿಸುತ್ತ ಆರಿಸುತ್ತ ಗೌಡರ ಮಗ್ಗುಲಲ್ಲಿ ಅವರಿಗಿಂತ ಒಂದು ಹೆಜ್ಜೆ ಹಿಂದೆ ನಡೆದಿದ್ದ ಗೋವಿಂದ, ತನ್ನ ಯೋಚನೆಗಳ ಕುದುರೆಯ ಕಡಿವಾಣವನ್ನು ಸಡಿಲಿಸಿದ.

ತನಗೆ ಕೇಳಿಸಲಿಲ್ಲವೆ? ಅಬ್ದುಲ್ಲ ಮನೆಯಲ್ಲಿದ್ದರೆ ಕರಕೊಂಡ್ಬಾ—ಎಂದರು ಗೌಡರು. ಯಾಕೆ ? ಸಂಶಯ ಪರಿಹಾರಕ್ಕೊ? ಸಂಶಯ ಏನು ಬಂತು? ಅಂಗೈ ಹುಣ್ಣಿಗೆ ಬೇಕೆ ಕನ್ನಡಿ ? ಮುನಿಯನನ್ನು ಯಾರು ಕೊಂದಿರಬಹುದು? ಆ ಪ್ರಶ್ನೆಗೆ ಕಣಿವೇಹಳ್ಳಿಯ ಎಳೇ ಮಗು ಕೂಡಾ ಉತ್ತರ ಕೊಟ್ಟೀತು; ಸರಿಯಾದ ಉತ್ತರ ಕೊಟ್ಟೀತು. ಅದಕ್ಕೇ ತಾನು ಅಂದದ್ದು: ಪೋಲೀಸರಿಗೆ ಕಂಪ್ಲೇಂಟು ಕೊಡಬೇಕಾಗುತ್ತೇನೋ ಅಂತ. ಮುನಿಯನ ಜೀವ ದೊಡ್ಡದಾಗಿ ಇವರಿಗೆ ಕಾಣಿಸದೇ ಇರಬಹುದು. ಅಥವಾ, ಸತ್ತವನು ಸತ್ತ, ಇನ್ನು ಯಾಕೆ ಹಗರಣ ? —ಅಂತ ಇರಬಹುದು. ಅಬ್ದುಲ್ಲನ ಕುರೂಪಿ ಹೆಂಡತಿಯ ಮುಖ ನೋಡಿ ಯಾರೂ ಅವನನ್ನು ಫಾಶೀ ಶಿಕ್ಷೆಯಿಂದ ಉಳಿಸಹೋಗುವುದಿಲ್ಲ. ಮತ್ತೆ? ಶಾಮೇಗೌಡರ ರಾಜ್ಯ ಕಣಿವೇಹಳ್ಳಿ. ಪೋಲೀಸರು ಇಲ್ಲಿಗೆ ಬರುವುದು ಅವರಿಗೆ ಇಷ್ಟವಿಲ್ಲ....

ಒಬ್ಬರಿಗೆ ಇಷ್ಟವಿಲ್ಲ ಅಂತ ಇಷ್ಟೊಂದು ಕೌತುಕದ ಘಟನೆ ಹೊರಗಿನ ಲೋಕಕ್ಕೆ ತಿಳಿಯದೆ ಹೋಗಬೇಕೆ? ತಾನೇ ನಗರಕ್ಕೆ ಹೋಗಿ ಪೋಲೀಸರಿಗೆ ಒಂದು ಮೂಕರ್ಜಿ ಕೊಟ್ಟರೇನಾದೀತು? ಓರ್ವ ಸುದ್ದಿಗಾರರಿಂದ ಅಂತ, ಪತ್ರಿಕೆಗಳಿಗೆ ಬಾತ್ಮಿ ಕಳಿಸಿದರೇನಾದೀತು? ಹೇಗೂ ನಗರಕ್ಕೆ ಹೋದಾಗಲೆಲ್ಲ ವೃತ್ತಪತ್ರಿಕೆ ಕೊಂಡು ತರುವುದು ತನಗೆ ಅಭ್ಯಾಸವಾಗಿದೆ. ಒಮ್ಮೆ ಆ ಪತ್ರಿಕೆಯ ಸಂಪಾದಕರನ್ನೇ ಮುಖತಃ ಕಂಡು ನಿಜ ಸಂಗತಿ ತಿಳಿಸಿಬಿಟ್ಟರಾಯಿತು. ಶಾಮೇಗೌಡರಿಗೆ ಗೊತ್ತಾದರೆ ಮಾತ್ರ ಅವಾಂತರವಾಗಬಹುದು. ಅಪ್ಪಯ್ಯ ಕೊಗಾಡ ಬಹುದು. ಆದರೆ, ಇದಕ್ಕೆಲ್ಲ ಹೆದರಿ ಸುಮ್ಮನಿರಬೇಕೆ ತಾನು?

ಅಸ್ಪೃಶ್ಯರ ಉದ್ಧಾರ ಮಾಡಿ—ಅಂತ ಗಾಂಧಿ ಹೇಳಿದಾಗ ತಾನು ಹುಟ್ಟಿರಲಿಲ್ಲ, ನಿಜ. ಆದರೇನಾಯಿತು? ಅದರ ಮಹತ್ವ ತನಗೆ ತಿಳಿಯದೆ? ಈಗ ಗಾಂಧಿ ಇಲ್ಲ; ಸತ್ತು ಅನೇಕ ವರ್ಷಗಳಾದುವು. ಅವನ ಜತೆ ಅವನ ಉಪದೇಶಗಳೂ ಸತ್ತುವೆ ?

ಗೋವಿಂದನಿಗೆ ನಗು ಬಂತು. ಆತ ಗಾಂಧೀ ಅನುಯಾಯಿ ಎಂದಲ್ಲ. ಆದರೂ ಹಳ್ಳಿಯ ರಾಜಕಾರಣದಲ್ಲಿ ಗಾಂಧೀ ತತ್ವದ ಪ್ರತಿಪಾದನೆಯಿಂದ ಲಾಭವಾಗುವಂತಿದ್ದರೆ ಆ ಕೆಲಸ ಯಾಕೆ ತಾನು ಮಾಡಬಾರದು ?

ಎಂಟು ತಿಂಗಳಾಯಿತಲ್ಲ ಮುನಿಯ ಬಂದು ಹೊಲ ಕೊಳ್ಳುವ ವಿಷಯ ತನ್ನೊಡನೆ ಪ್ರಸ್ತಾಪಿಸಿ ?

ಆಗ ತಾನೆಂದಿದ್ದೆ:

"ಕೊಂಡ್ಕೋ ಮುನಿಯ, ಭೂಮಿತಾಯಿಽನ ಬ್ರಾಹ್ಮಣರಾಗಲೀ ಗೌಡರಾಗಲೀ ಗುತ್ತಿಗೆ ಹಿಡಿದಿದಾರಾ ? ಕೊಂಡ್ಕೋ."

ಹುಚ್ಚ ಬಹಳ ಅಳುಕಿದ್ದ.

"ಅಂಗನ್ಬಾರದು, ಒಡೆಯಾ. ಏನೋ ಆಸೆ. ನಾನು ಸತ್ಮ್ಯಾಕೆ ನನ್ನ ಐದ ಆ ಒಲದಾಗೆ ಧುಡ್ಡು ಒಟ್ಟೆ ಒರಕೋತವ್ನೆ."

"ನಿಜ, ಕಣಯ್ಯ. ಸಿದ್ಧಪ್ಪ ಎಷ್ಟು ಕೇಳ್ತಾನೆ ?"

"ಐನೂರು ರೂಪಾಯಿ."

"ಶಾನೇ ಜಾಸ್ತಿ."

"ಮುನ್ನೂರಕ್ಕೆ ಒಪ್ಪಿಸ್ಬೋದು."

"ಸೊಸೈಟೀಲಿ ಹಣವಿಲ್ಲ. ಇಲ್ದೇ ಹೋಗಿದ್ರೆ ನಿನಗೆ ಸಾಲ ಕೊಡ್ತಿದ್ದೆ."

"ಇಷ್ಟು ವರ್ಸ ಜೀವ ತೇದು ತೇದು ಮುನ್ನೂರು ಉಳಿಸಿವ್ನಿ, ಒಡೆಯಾ."

"ಭಲೆ! ಹಾಗಿರ್ಬೇಕು. ಸೊಸೈಟಿಲಾದ್ರೂ ಇಟ್ಟಿದ್ರೆ ಬಡ್ಡಿ ಬರ್ತಿತ್ತಲ್ಲೋ. ಎಲ್ಲಿ—ನೆಲದ ಕೆಳಗೆ ಹೂತಿಟ್ಟಿದ್ಯಾ?"

ಮುನಿಯ ಹೌದೋ ಇಲ್ಲವೋ ಎನ್ನುವಂತೆ ನಕ್ಕಿದ್ದ. ಉತ್ತರ ಕೊಟ್ಟಿರಲಿಲ್ಲ.

ತಾನು ಅಂದಿದ್ದೆ:

"ಎಲ್ಲಾ ಸರಿ, ಮುನಿಯ. ಶಾನುಭೋಗರ್ನ ಹಿಡಿದು ಕಾಗದ ಪತ್ರ ಮಾಡ್ಕೊಂಡೆ ಅನ್ನು. ಸಿದ್ಧಪ್ಪನ ಒಕ್ಕಲಾಗಿ ಅಬ್ದುಲ್ಲ ಇದಾನಲ್ಲ. ಅವನನ್ನ ಎಬ್ಬಿಸಿ ಹೊಲ ನಿನ್ನ ವಶಕ್ಕೆ ಕೊಡ್ತಾನಂತೊ ?"

"ಓ—"

"ಹಾಗಾದರೆ ಸರಿ. ಅಬ್ದುಲ್ಲ ಆಮೇಲೆ ತಕರಾರು ಮಾಡ್ಬಾರ್ದು ನೋಡು."

"ಯಾಕ್ಮಾಡಾನು? ಯಾವೂರಿಂದ್ಲೋ ಬಂದೋನು. ಒಕ್ಕಲಾಗಿ ಇದಾನೆ. ಈ ಅಳ್ಳಿ ಬಿಟ್ಟ; ಇನ್ನೊಂದಳ್ಳಿಗ್ಹೋದ."

"ನಿಜ ಅನ್ನು," ಎಂದಿದ್ದ ಗೋವಿಂದ.

ಮುಂದೆ ಕಾಗದ ಪತ್ರಗಳಾದುವು. ಸಿದ್ಧಪ್ಪ ಹೊಲವನ್ನು ಮುನಿಯನಿಗೆ ಮಾರಿ ಸಂಸಾರ ಸಮೇತನಾಗಿ ಹಳ್ಳಿ ಬಿಟ್ಟು ನಗರಕ್ಕೆ ಹೋದುದೂ ಆಯಿತು. ಆದರೆ ಅಬ್ದುಲ್ಲ ಹೊಲವನ್ನು ಮುನಿಯನ ಸ್ವಾಧೀನಕ್ಕೆ ಕೊಡಲಿಲ್ಲ!

ಮುನಿಯ ಪಟೇಲರಿಗೆ ದೂರುಕೊಟ್ಟ. ಹಳ್ಳಿಯ ಪ್ರಮುಖರಿಗೆ ಹೇಳಿದ. ಪ್ರಯೋಜನವಾಗಲಿಲ್ಲ.

ಹೊಲ ಉಳ್ಳವನಾಗಲು ಮುನಿಯ ಮಾಡುತ್ತಿದ್ದ ಯತ್ನದ ಬಗೆಗೆ ಯಾರೂ ಸಹಾನುಭೂತಿ ವ್ಯಕ್ತಪಡಿಸಲಿಲ್ಲ.

ಶಾಮೇಗೌಡರೆಂದರು:

"ತಾಳಿದವ ಬಾಳುತಾನೆ, ಮುನಿಯ. ಒಸಿ ದಿನ ಓಗ್ಲಿ."

ಕೃಷ್ಣೇಗೌಡನೆಂದ :

"ಮುಂಚೆ ಅಬ್ದುಲ್ಲ ಸಿದ್ಧಪ್ನಿಗೆ ಗೇಣಿ ಒಪ್ಪಿಸ್ತಿದ್ದ. ಇನ್ನು ನಿನಗೆ ಕೊಡ್ಲಿ."

ಆದರೆ ಮುನಿಯನಿಗೆ ಆ ಸಲಹೆ ಇಷ್ಟವಿರಲಿಲ್ಲ. ಸ್ವತಃ ತಾನೇ ಸಾಗುವಳಿ ಮಾಡಬೇಕೆಂಬ ಆಸೆ ಆತನಿಗೆ.

ಶ್ರೀನಿವಾಸಯ್ಯ ಅಂದರು:

"ಸುಮ್ನಿರೋದು ಬಿಟ್ಟು ಇದೆಲ್ಲ ಯಾಕೋ ಕಟ್ಕೊಂಡೆ?"

ಯಾರಿಗೂ ತಿಳಿಯದಂತೆ ಮುನಿಯ ಗೋವಿಂದನ ಬಳಿಗೆ ಬಂದಿದ್ದ.

"ದಾರಿ ಕಾಣ್ಸಿ, ಒಡೆಯಾ."

ಗೋವಿಂದ ಆತನಿಗೆ ಕಾಣಿಸಿದ್ದು ನಗರದ ದಾರಿ. ವಕೀಲರೊಬ್ಬರ ಮನೆಗೆ ಪ್ರದಕ್ಷಿಣೆ ಹಾಕಿ ಆ ದಾರಿ ತಲಪಿದ್ದು ನ್ಯಾಯಸ್ಥಾನವನ್ನು.

ಕಾಗದದ ಮೇಲೆ ತನ್ನದಾಗಿದ್ದ ಹೊಲವನ್ನು ಮುನಿಯ ವೆಂಕಟಪ್ಪನಿಗೆ ಒತ್ತೆ ಇಟ್ಟು ಚಕ್ರಬಡ್ಡಿಯ ಮೇಲೆ ನೂರು ರೂಪಾಯಿ ಸಾಲ ಪಡೆದ. ಆ ಹಣದಿಂದ ಒಂದಂಶ ಗೋವಿಂದನಿಗೆ ಕಾಣಿಕೆಯಾಗಿ ಬಂತು. ಉಳಿದುದು ವಕೀಲರಿಗೆ ಸಂದಾಯವಾಯಿತು.

ಅಬ್ದುಲ್ಲನೂ ವಕೀಲರನ್ನು ನೇಮಿಸಬಹುದು; ಬೇಕಿದ್ದರೆ ಅವನಿಗೂ ಒಬ್ಬ ವಕೀಲರ ಪರಿಚಯ ಮಾಡಿಸಿಕೊಡಬೇಕು— ಎಂದುಕೊಂಡಿದ್ದ ಗೋವಿಂದ. ಆದರೆ ಅಬ್ದುಲ್ಲನಿಗೆ ಆ ವಿಷಯದಲ್ಲಿ ಆಸಕ್ತಿ ಇದ್ದಂತೆ ತೋರಲಿಲ್ಲ.

ಮುನಿಯನಿಗೆ ತಿಳಿಯದಂತೆ ಎಚ್ಚರಿಕೆ ವಹಿಸಿ ಗೋವಿಂದನೇ ಒಮ್ಮೆ ಅಬ್ದುಲ್ಲನನ್ನು ಮಾತನಾಡಿಸಿದ.

"ಏನಾದರೂ ಮಾಡ್ಬೇಕಪ್ಪ ನೀನು."

ಅಬ್ದುಲ್ಲನ ಮಾತು ಕಟುವಾಗಿತ್ತು:

"ಎಂಡತಿ ಮಕ್ಕಳ್ನ ಕೊಂದ್ಹಾಕಿ ನಾನು ತಲೆ ಒಡ್ಕೊಳ್ಲಾ?"

"ಹಾಗಲ್ಲ, ಅಬ್ದುಲ್ಲ."

"ಮತ್ತೆ?"

"ಮತ್ತೆ ಅಂದ್ರೆ? ನಗರಕ್ಕೆ ಹೋಗ್ಬೇಕು. ದೊಡ್ಡ ವಕೀಲರು ಯಾರನ್ನಾದರೂ ಕೇಳಿ ನೋಡ್ಬೇಕು."

"ಬ್ಯಾಡಿ ಅಯ್ನೋರೇ. ನನಗೆ ಬ್ಯಾಡಿ ಅದೆಲ್ಲ."

"ಸರಿ! ನೀನು ಹೊಲ ಬಿಡ್ಬೇಕೂಂತ ಕೋರ್ಟ್ನಲ್ಲಿ ನಾಳೆ ಆರ್ಡರಾದ್ರೆ?"

"ಅಯ್ಯೋ, ಬಿಡಿ ಬುದ್ಧಿ. ಆ ಕಾಲಕ್ಕೆ ನೋಡ್ಕೊಳ್ಳಾನ."

ಗೋವಿಂದನಿಗೆ ಉತ್ಸಾಹ ಭಂಗವಾಗಿತ್ತು.

...ಹೀಗೆ, ಮುನಿಯನ ಪ್ರಕರಣವನ್ನು ಚೆನ್ನಾಗಿ ಬಲ್ಲ ಅವನಿಗೆ ತಿಳಿಯದೆ ಆತನ ಅವಸಾನಕ್ಕೆ ಯಾರು ಕಾರಣ ಎಂಬುದು?

ಅವನೊಬ್ಬನೇ ಅಲ್ಲ; ಹಳ್ಳಿಯ ಎಲ್ಲರೂ, ಒಂದಕ್ಕೆ ಒಂದು ಸೇರಿಸಿ ಎರಡಾಯಿತು ಎಂದು ಹೇಳಬಲ್ಲವರೇ.

...ಜನ ಹಾಗೆ ಹೇಳುವುದು ಶಾಮೇಗೌಡರಿಗೆ ಇಷ್ಟವಿರಲಿಲ್ಲ.

...ಅವರು ಬಿರುಸಾಗಿ ಮಾರಿಗುಡಿಯತ್ತ ನಡೆದರು.

ಒಂದು ತಪ್ಪು ಮಾಡಿದ ಮುನಿಯ, ಮತ್ತೊಂದು ತಪ್ಪು ಮಾಡಿದ. ಹೊಲ ಕೊಳ್ಳುವ ಯೋಚನೆ ಮಾಡಿದ್ದೇ ತಪ್ಪು. ಆದಾದಮೇಲೆ ಕೋರ್ಟಿಗೆ ಹೋದದ್ದು ಎರಡನೆಯ ತಪ್ಪು.

ಶಾಮೇಗೌಡರು ಮುನಿಯನನ್ನು ಕೇಳಿದ್ದರು:

"ಯಾರು ನಿನಗೆ ವಕೀಲರ ಅಡ್ರೆಸ್ ಕೊಟ್ಟೋರು?"

ಮುನಿಯ ಗೋವಿಂದನ ಹೆಸರು ಹೇಳಲಿಲ್ಲ.

"ಯಾರ್ನೋ ಕೇಳ್ಕಂಡೋದೆ, ಒಡೆಯಾ."

ಈ ಕಾರಭಾರ ಗೋವಿಂದನದೇ ಇರಬೇಕೆಂಬ ಬಗೆಗೆ ಸಂದೇಹವಿಲ್ಲ ಗೌಡರಿಗೆ. ಆದರೆ ಬಹಿರಂಗವಾಗಿ ಹಾಗೆ ಹೇಳುವಂತಿಲ್ಲ. ಸ್ನೇಹಿತನ ಮನಸ್ಸು ನೋಯಿಸಬಾರದೆಂದು, ಶ್ರೀನಿವಾಸಯ್ಯನವರೊಡನೆ ಆ ಪ್ರಸ್ತಾಪವನ್ನು ಮಾಡಿರಲೂ ಇಲ್ಲ.

ಈಗ ಆಗಬಾರದ್ದು ಆಗಿಹೋಯಿತು.

ಬೆಂಕಿ ಮನೆಯನ್ನು ಅರ್ಧ ಸುಟ್ಟದ್ದಾಯಿತು; ಉಳಿದರ್ಧವನ್ನಾದರೂ ಉಳಿಸಬೇಕು.

ಯಾವುದೋ ಮನೆ ಉರಿಯುತ್ತಿದ್ದರೆ, ಅದರ ಹತ್ತಿರ ನಿಂತು ಮೈ ಕಾಯಿಸಿಕೊಳ್ಳುವ ಪ್ರವೃತ್ತಿ ಎಷ್ಟು ಕೆಟ್ಟದ್ದು! ಒಳ್ಳೆಯ ಸಮಯ ನೋಡಿ ಗೋವಿಂದನಿಗೆ ತಾವು ಬುದ್ಧಿ ಹೇಳಬೇಕು. ಅವನ ತಂದೆ ಆ ಕೆಲಸ ಮಾಡದಿದ್ದರೆ ತಾವಾದರೂ ಮಾಡಬೇಕು......

....ಚಾವಡಿ ಸಮೀಪಿಸಿತು.

ಅಲ್ಲಿ ಕಂದೀಲು ಉರಿಸಿದ್ದರು. ಪಂಚಾಯತಿಯ ವಿಷಯದಲ್ಲಿ ಯಾವಾಗಲೂ ಹೊರಗಿನವರು ಶ್ರೀನಿವಾಸಯ್ಯ. ಅವರು ಒತ್ತಟ್ಟಿಗೆ ಕುಳಿತಿದ್ದರು. ಚಾವಡಿಯ ಮಧ್ಯದಲ್ಲಿ ಕೃಷ್ಣೇಗೌಡ ಮತ್ತು ಇತರರಿದ್ದರು.

ಶಾಮೇಗೌಡರು ಬಂದಾಗ ಮಾತು ಅಡಗಿ ಮೌನ ನೆಲೆಸಿತು.

ಗೌಡರು ಶ್ರೀನಿವಾಸಯ್ಯನವರ ಮಗ್ಗುಲಲ್ಲಿ ಕುಳಿತರು.

ಒಂದು ನಿಮಿಷ ಸುಮ್ಮನಿದ್ದು ಗೌಡರು ಶ್ರೀನಿವಾಸಯ್ಯನವರೊಡನೆ, ಇತರರಿಗೂ ಕೇಳಿಸುವಂತೆ ಗಟ್ಟಿಯಾಗಿಯೇ, "ಏನೋ ಲೋಪ ಆಗೋ ಹಂಗೆ ನಡಕಂಡಿದೀವೀಂತಾಯ್ತು. ಊರ ದೈವ ಮುನಿದಿದೆ. ಮುನಿಯ ಬಲಿಯಾದ. ಪಾಪ!" ಎಂದರು.

ಎಲ್ಲರನ್ನೂ ದಹಿಸುತ್ತಿದ್ದ ಸಂಶಯದ ಬೆಂಕಿಗೆ ಆ ಮಾತು ನೀರಾಯಿತು. ಇನ್ನು ಉಳಿದದ್ದು ಕಪ್ಪು ಕೆಂಡಗಳಿಂದ ಹೊರಡುತ್ತಿದ್ದ ಬಿಸಿ ಹೊಗೆ.

ಅಷ್ಟರಲ್ಲಿ ವೀರಾಚಾರಿ ಬಂದ, ಶಾಮೇಗೌಡರ ಬಳಿ ಬಾಗಿ ಕುಳಿತು ಇಳಿದನಿಯಲ್ಲಿ ಅಂದ:

"ಮಗನಿಗೆ ಎಣ್ಣು ನೋಡಾಕೆ ಅಂತ ನಿನ್ನೆ ಒತ್ತಾರೇನೇ ಚಿತ್ರಾಪುರಕ್ಕೆ ಓದ್ನಂತೆ. ವಾಪ್ಸು ಬರೋಕೆ ಎಂಟತ್ತು ದಿವಸ ಆದಾತೂಂತ ಅವನ ಎಣ್ತಿ ಯೋಳ್ತಾಳೆ."

"ಸರಿ!"

ಕಿವಿ ನಿಮಿರಿಸಿ ನಿಂತಿದ್ದ ಗೋವಿಂದನಿಗೆ ಆ ಮಾತು ಕೇಳಿಸಿತು.

ಚಾವಡಿಯ ಮಧ್ಯದಿಂದಲೂ ಒಬ್ಬನೆಂದ:

"ಯಾರು ಅಬ್ದುಲ್ಲನೇ? ಅವನು ಊರಲ್ಲಿಲ್ಲ."

"ಸರಿ! ಸರಿ!" ಎಂದರು ಗೌಡರು, ಗಟ್ಟಿಯಾಗಿ.

ಅಬ್ದುಲ್ಲ ಇಲ್ಲವೆಂಬ ಸುದ್ದಿಯಿಂದ, ಹೊಗೆಯಾಡುತ್ತಿದ್ದ ಇದ್ದಲು ಚೂರುಗಳೂ ತಣ್ಣಗಾದುವು.

"ನಡೀರಿ ಅಯ್ನೋರೇ, ಆಯ್ತಲ್ಲ," ಎಂದರು ಗೌಡರು, ಏಳುತ್ತ.

ಚಾವಡಿಯಲ್ಲಿದ್ದವರೆಲ್ಲ ಎದ್ದು, ಮುನಿಯ–ಪಾಪ–ಸತ್ತನಲ್ಲ ಎಂದು ಮಾತನಾಡುತ್ತ ಚೆದರಿದರು.

ಶ್ರೀನಿವಾಸಯ್ಯ ಮಗನ ಕಡೆ ನೋಡಿ ಅಂದರು :

"ಮನೆಗೆ ಹೋಗು, ಗೋವಿಂದ. ನಾನು ಈಗ ಬಂದೆ."

ಗೋವಿಂದ ಕೇಳಿದ:

"ಟಾರ್ಚು ಬೇಕಾ?"

"ಬೇಡ," ಎಂದರು ಶ್ರೀನಿವಾಸಯ್ಯ; ಕ್ಷಣ ಬಿಟ್ಟು, "ಕೊಟ್ಟಿರು," ಎಂದರು.

ನಿಧಾನವಾಗಿ ನಡೆಯತೊಡಗಿದ ತಂದೆಯನ್ನೂ ಗೌಡರನ್ನೂ ಬಿಟ್ಟು ಗೋವಿಂದ ಮನೆಯ ಕಡೆ ಹೆಜ್ಜೆ ಹಾಕಿದ.

ಅವನಿಗನಿಸಿತು:

ಐವತ್ತು ದಾಟಿದವರು ಹೀಗೆಯೇ. ಪ್ರತಿಯೊಂದು ಚೂರು ಪ್ರಗತಿಗೂ ಇವರು ಅಡ್ಡಿ. ಹಳೆಯ ಕಟ್ಟುಪಾಡುಗಳಿಗೆ ಅನುಸಾರವಾಗಿಯೇ ಇವರು ನಡೆಯಬೇಕು. ಶಾಮೇಗೌಡರ ಮಾತಂತಿರಲಿ. ವಯಸ್ಸಿನಲ್ಲಿ ಚಿಕ್ಕವನಾದ ಕೃಷ್ಣೇಗೌಡನಿಗಾದರೂ ಬುದ್ಧಿ ಬೇಡವೆ? ದೇಶಕ್ಕೆ ಸ್ವಾತಂತ್ರ್ಯ ಬಂದು ಹತ್ತು ಹನ್ನೆರಡು ವರ್ಷ ಸಂದಿವೆ. ನಡೆದಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಎಲ್ಲ ಓಟು ಕೊಟ್ಟಿದ್ದಾರೆ. ಹೊಸ ಶಾಸನಗಳು ಜಾರಿಗೆ ಬಂದಿದೆ. ಆದರೆ ಈ ಜನರ ಪಾಲಿಗೆ ಲೋಕದಲ್ಲಿ ಯಾವ ಬದಲಾವಣೆಯೂ ಆಗಿಲ್ಲ....

ಮನೆ ತಲಪಿದಾಗ ಗೋವಿಂದನೆಂದುಕೊಂಡ :

"ಯಾರ ಹಂಗೇನು ನನಗೆ ? ಆದಷ್ಟು ಬೇಗನೆ–ಊಹೂಂ–ನಾಳೆಯೇ ನಗರಕ್ಕೆ ಹೋಗಿ ಬರಬೇಕು...."

ಸ್ವಲ್ಪ ದೂರ ಮೌನವಾಗಿ ನಡೆದ ಶ್ರೀನಿವಾಸಯ್ಯ – ಶಾಮೇಗೌಡರು, ದಾರಿ ಕವಲೊಡೆದಿದ್ದ ನಿರ್ಜನ ಪ್ರದೇಶದಲ್ಲಿ ಕೆಲ ನಿಮಿಷ ನಿಂತರು.

ಗೌಡರೆಂದರು :

"ಅಬ್ದುಲ್ಲ ನಿನ್ನೆಯೇ ಊರು ಬಿಟ್ಟಿದ್ದು ಒಳ್ಳೇದಾಯ್ತು."

"ಹೌದು," ಎಂದರು ಶ್ರೀನಿವಾಸಯ್ಯ.

"ಅವನು ಬಂದ್ಮೇಕೆ ಮುನಿಯನ ಮಗನಿಗೆ ಹೊಲ ಕೊಡಿಸ್ಬಿಡ್ಬೇಕು."

"ಸರಿ.... ಕೋರ್ಟು—"

"ಅದೇನು ಮಾಡ್ತದೆ? ಕಾಗದ ಪತ್ರ ಸರಿಯಾಗೈತೆ. ಹೊಲ ಬಿಟ್ಕೊಡು ಅಂತ ಪ್ರತಿವಾದಿಗೆ ತಾಕೀತು ಮಾಡ್ತದೆ, ಅಷ್ಟೆ."

"ಹುಂ."

"ಅವನು ಊರು ಬಿಟ್ಟು ಓದ್ರೂ ಸರಿ; ಇಲ್ಲೇ ಕೂಲಿ ನಾಲಿ ಮಾಡಿದ್ರೂ ಸರಿ."

"ಹುಂ."

ಗೌಡರ ನಾಲಿಗೆಯ ತುದಿವರೆಗೂ ಬಂತು: 'ಗೋವಿಂದನಿಗಷ್ಟು ಹೇಳಿ–ಗಲಾಟೆ ಮಾಡ್ಬೇಡ ಅಂತ' ಎಂಬ ಮಾತು.

ಆದರೂ, 'ಇವತ್ತು ಬೇಡ ಇನ್ನೊಂದು ದಿವಸ ಹೇಳೋಣ' ಎಂದು ಅದನ್ನು ಅವರು ತಡೆದರು.

ಗೌಡರು ನಿಟ್ಟುಸಿರುಬಿಟ್ಟರು, ಶ್ರೀನಿವಾಸಯ್ಯ ಕೂಡಾ.

"ನಡೀರಿ ಇನ್ನು," ಎಂದರು ಗೌಡರು.

ಶ್ರೀನಿವಾಸಯ್ಯ ಮೌನವಾಗಿ ಪಾದಕಿತ್ತರು.

...ಮನೆ ಸೇರುವುದಕ್ಕೆ ಮುಂಚೆ ಶಾಮೇಗೌಡರು ಅದೆಷ್ಟು ಸಾರಿ ನೀಳವಾಗಿ ಉಸಿರು ಬಿಟ್ಟರೊ, ಅದೆಷ್ಟು ಸಾರೆ ತಲೆಯಲ್ಲಾಡಿಸಿದರೊ.

ಅವರೆಂದುಕೊಂಡರು:

ಮುನಿಯ ತಾನಾಗಿಯೆ ಸಾವನ್ನು ಬರಮಾಡಿದಂತಾಯಿತು. ಕುಲ ಮರ್ಯಾದೆ ಮೀರಿ ಅವನು ಹೋಗಬಾರದಿತ್ತು. ಅಬ್ದುಲ್ಲನೂ ಬಹಳ ತಪ್ಪು ಮಾಡಿದ. ಹೊರಗಿನ ಜನವನ್ನ ಇಲ್ಲಿ ನೆಲೆ ಊರಲು ತಾವು ಬಿಡಬಾರದಾಗಿತ್ತು. ನೋಟಕ್ಕೆ ಎಷ್ಟೊಂದು ಸಾತ್ವಿಕ! ಕಡಮೆ ಮಾತು. ಹೃದಯ ಮಾತ್ರ ರಾಕ್ಷಸನದು ಅಂತ ಯಾರಿಗೆ ಗೊತ್ತಿತ್ತು?

...ಅಂಗಳಕ್ಕೆ ಕಾಲಿರಿಸಿದ ಅಣ್ಣನನ್ನು ಕಂಡು ಬಾಗಿಲಲ್ಲಿ ನಿಂತಿದ್ದ ನಾಗಮ್ಮ ಅಂದರು:

"ಬಂದೆಯಾ?"

ಗೌಡರು ಕೇಳಿದರು:

"ಸ್ನಾನಕ್ಕೆ ನೀರೈತಾ?"

"ಐತೆ, ಒಗೆದ ಬಟ್ಟೇನೂ ಮಡಗಿವ್ನಿ."

ಗೌಡರು ಕೊಡೆ, ಎಕ್ಕಡಗಳನ್ನು ಬಾಗಿಲಲ್ಲಿ ಬಿಟ್ಟು ಮನೆಯನ್ನು ಪ್ರವೇಶಿಸದೆ ಹಿಂಬದಿಗೆ ಹೋದರು. ಶುಚಿರ್ಭೂತರಾಗಿ ಒಳಗೆ ಬಂದರು.

ಊಟಕ್ಕೆ ಕುಳಿತಾಗ ಗೌಡರು ಕೇಳಿದರು:

"ಉಡುಗರ್ದು ಆಯ್ತೇನು?"

"ಆಯ್ತು," ಎಂದರು ನಾಗಮ್ಮ, ತುಟಿಕಚ್ಚಿ.

ಬೇರೆ ದಿನವಾಗಿದ್ದರೆ ಉಣ್ಣುತ್ತ, ಹೊಸಳ್ಳಿಗೆ ಹೋದ ಕೆಲಸವೇನಾಯಿತೆಂದು ಶಾಮೇ ಗೌಡರು ಹೇಳಬೇಕು.

ಆದರೆ ಇವತ್ತು ಮೌನದ ಊಟ.

ಗೌಡರಿಗೋ ಊಟದ ಕಡೆಗೆ ಲಕ್ಷ್ಯವಿರಲಿಲ್ಲ. ಹಸಿವಿನ ಶಮನಕ್ಕೆಂದು ಎರಡು ತುತ್ತು ಉಂಡು ಅವರೆದ್ದರು.

"ಸುಬ್ಬಿಗೆ ಜರ. ಒಮ್ಮೆ ಚೀರ್ಕೊಂಡ್ಲು. ಮುನಿಯಂದು ಕೇಳಿ ಇಂಗಾಗಿರ್ಬೋದು..."—

ಗೌಡರ ಹುಬ್ಬುಗಳು ಮೇಲೇರಿದುವು.

"ಮತ್ತೆ ಹುಡುಗರ ಊಟ ಆಯ್ತು ಅಂದೆ."

"ರಂಗನ್ದಾಯ್ತು."

[ಮೊದಲೇ ಆ ಮಾತು ಹೇಳಿದ್ದರೆ ಅಣ್ಣ ಉಣ್ಣುತ್ತಿರಲಿಲ್ಲ ಎಂದು ತಿಳಿಯದೆ ನಾಗಮ್ಮನಿಗೆ ?]

ಶಾಮೇಗೌಡರು ಮಗಳು ಮಲಗಿದ್ದಲ್ಲಿಗೆ ಹೋಗಲೆಂದು ಪಡಸಾಲೆಗೆ ಬಂದರು.

ಜಗಲಿಯಲ್ಲಿ ರಂಗಣ್ಣ ನಿಂತಿದ್ದ.

"ಅಪ್ಪ, ಒಸಿ ಈ ಕಡೆ ಬನ್ನಿ," ಎಂದು, ಕೈಸನ್ನೆಮಾಡಿ ತಗ್ಗಿದ ಧ್ವನಿಯಲ್ಲಿ ತಂದೆಯನ್ನು ಅವನು ಕರೆದ.

೪

ಮಗ ರಂಗಣ್ಣ ಸನ್ನೆ ಮಾಡಿ ತಮ್ಮನ್ನು ಕರೆದಾಗ ಶಾಮೇಗೌಡರು ಹುಬ್ಬು ಗಂಟಿಕ್ಕಿ, "ಏನೋ ಅದು?" ಎಂದು ಕೇಳಿದರು.

ಆದರೆ, ಹಾಗೆ ಪ್ರಶ್ನಿಸಿದ ಮರುಕ್ಷಣವೆ, ರಂಗಣ್ಣ ಡಾಕ್ಟರ್ ಪರೀಕ್ಷೆಗೆ ಓದುತ್ತಿರುವವನು ಎಂಬುದು ನೆನಪಾಗಿ, ತನ್ನ ತಂಗಿಯ ಅಸ್ವಾಸ್ಥ್ಯದ ವಿಷಯ ಆತ ಏನನ್ನೋ ಹೇಳಬಯಸುತ್ತಿರಬಹುದೆನಿಸಿ, ತುಸು ಅಧೀರರಾಗಿಯೇ ಮಗನನ್ನು ಸಮೀಪಿಸಿದರು.

ರಂಗಣ್ಣ ಅಂಗಳಕ್ಕಿಳಿದ. ಅಡ್ಡಪಂಚೆಯನ್ನಷ್ಟೆ ಉಟ್ಟಿದ್ದ ಗೌಡರು ಅವನನ್ನು ಹಿಂಬಾಲಿಸಿದರು.

ಈಗ ಕಾತರ ತುಂಬಿದ ಧ್ವನಿಯಲ್ಲಿ ಗೌಡರು ಕೇಳಿದರು:

"ಸುಬ್ಬಿಗೆ ಏನಾಗದೆ?"

ಅಪ್ರಿಯವಾದರೂ ಹೇಳಬೇಕಾದುದು ತನ್ನ ಕರ್ತವ್ಯ ಎಂಬ ನಿರ್ಧಾರಕ್ಕೆ ಬಂದಿದ್ದ ರಂಗಣ್ಣ ತನ್ನ ಉಸಿರೆಳೆದು ಬಿಟ್ಟು, ಗಂಟಲು ಸರಿಪಡಿಸಿದ.

"ಸುಬ್ಬಿ ಮುನಿಯನ ಹೆಣ ನೋಡಿ ಹೆದರ್ಕೊಂಡವಳೆ, ಅಪ್ಪ."

"ಹ್ಞಾ? ಎಲ್ನೋಡಿದ್ಲು?"

"ಅಲ್ಲೇ; ದಿಬ್ಬದ ಹೊಂಡದಲ್ಲೇ."

"ದಿಬ್ಬದ್ಹೊಂಡ್ದಲ್ಲಿ ? ಅಲ್ಲಿಗ್ಯಾಕೋದ್ಲು ?"

"ಅಲ್ಲಿ... ಅಲ್ಲಿ..."

ರಂಗಣ್ಣ ತಡವರಿಸಿದ. ಪದಗಳು ಕೈಕೊಟ್ಟುವು.

ಶಾಮೇಗೌಡರ ಮೀಸೆ ಅಲುಗಿತು.

"ಏನೋ ಅದು ?"

ಮುಚ್ಚಿಕೊಂಡಿದ್ದ ತನ್ನ ತುಟಿಗಳನ್ನು ಪ್ರಯತ್ನಪೂರ್ವಕವಾಗಿ ತೆರೆದು ರಂಗಣ್ಣನೆಂದ:

"ಸುಬ್ಬಿ ಪದ್ಮನ ಜತೆ ದಿಬ್ಬದ ತಾವ ಹೋಗಿದ್ಲು."

ಡಕ್ ಡಕ್ ಡಕ್ ಎಂದು ವಿಪರೀತ ಸದ್ದು ಮಾಡಿತು ಗೌಡರ ಎದೆಗುಂಡಿಗೆ. ತೋಪು ಗುಂಡುಗಳನ್ನು ಉಗುಳುವಂತೆ ಅವರೆಂದರು:

"ಯಾಕೆ ? ಯಾವಾಗ ?"

ಪಡಸಾಲೆಯ ಗೋಡೆ ಗೂಡಿನಲ್ಲಿದ್ದ ಕಂದೀಲು ಬೆಳಕು ಬಾಗಿಲಿನೆಡೆಗೆ ಹರಿದು ಹಿರಿದಾಗುತ್ತ, ಅಂಗಳಕ್ಕಿಳಿದು ಮಂದವಾಗಿ ಕೃಷ್ಣ ಪಕ್ಷದ ಇರುಳಲ್ಲಿ ಲೀನವಾಗಿತ್ತು. ಆಕಾಶದಲ್ಲಿ ನಕ್ಷತ್ರಗಳು. ಆ ನಸುಬೆಳಕಿನಲ್ಲಿ ತಂದೆ ಮತ್ತು ಮಗ ಪರಸ್ಪರರ ಶರೀರದ ಸ್ಥೂಲ ರೇಖೆಗಳನ್ನಷ್ಟೇ

ಕಾಣುತ್ತಿದ್ದರು, ಮುಖಭಾವವನ್ನಲ್ಲ.

ಸುಬ್ಬಿ ಪದ್ಮನ ಜತೆ ದಿಬ್ಬದ ತಾವ ಯಾಕೆ ಹೋದಳು ಎಂದು ಕೇಳುವರಲ್ಲ ಅಪ್ಪ ? ಆ ಪ್ರಶ್ನೆಗೆ ಉತ್ತರ ಬೇರೆ ಹೇಳಬೇಕೆ ತಾನು ?

ರಂಗಣ್ಣನೆಂದುಕೊಂಡ: ಯಾವಾಗ ? ಎಂಬುದಕ್ಕೆ ಉತ್ತರವಿತ್ತರಾಯಿತು.

"ಮಧ್ಯಾಹ್ನ ಅಪ್ಪ. ನಾಲ್ಕು ಐದರ ಸುಮಾರಿಗೆ."

ಘಂಟೆ ಮುಖ್ಯವಾಗಿರಲಿಲ್ಲ ಶಾಮೇಗೌಡರಿಗೆ.

"ಆಗಲು? ಆಡೇ ಆಗಲು?"

"ಹೂಂ ಅಪ್ಪ."

ಮತ್ತೊಮ್ಮೆ "ಯಾಕೆ?" ಎಂದು ಕೇಳಲಿಲ್ಲ ಅವರು. ಕರ್ಕಶವಾಗಿದ್ದ ಅದುರುತ್ತಿದ್ದ ಸ್ವರದಲ್ಲಿ ಅವರೆಂದರು:

"ಓಗೋಕೆ ಯಾಕ್ಬಿಟ್ಟೆ ? ನೀನು ಏನ್ಮಾಡ್ತಿದ್ದೆ ?"

"ಸೀಬೇಕಾಯಿ ಕಿತ್ಕಂಬರ್‍ತೀನಿ ಅಂತ ಅತ್ತೆಮ್ಮನಿಗೆ ಹೇಳಿ ನಂಗೆ ತಿಳಿದ್ಹಾಗೇನೇ ಓಗ್ಬುಟ್ಲು. ನಾನು ಹುಡುಕ್ಕೊಂಡೋದೆ. ದಿಬ್ಬದ ಹೊಂಡದತ್ತ ಹೆಣ ನೋಡಿ ಎದರ್‍ಕೊಂಡು ಇಬ್ರೂ ಓಡ್ತಿದ್ದಾಗ ನಾನು ಕಂಡೆ."

ಒಂದು ನಿಮಿಷ ಶಾಮೇಗೌಡರು ಏನನ್ನೂ ಹೇಳಲಿಲ್ಲ.

ತಂಗಾಳಿ ಬೀಸಿತು. ಆದರೆ ಶಾಮೇಗೌಡರ ಪಾಲಿಗೆ ಅದು ಬಿರುಗಾಳಿ. ಅವರು ತರಗೆಲೆ.

ಹೆಪ್ಪುಗಟ್ಟುತ್ತಿದ್ದ ನೀರಲ್ಲಿ ಮೈ ಅದ್ದಿ ಎದ್ದವರಂತೆ ಗೌಡರು ನಡುಗಿದರು, ಆ ನಡುಕದಿಂದ ಕಟ ಕಟ ಕಟ ಎಂದುವು ಅವರ ಹಲ್ಲುಗಳು. ಚಿಟ್ ಚಿಟ್ ಚಿಟ್ ಎನ್ನುತ್ತಿತ್ತು ತಲೆ. ಸಣ್ಣಗೆ ಕಾಣಿಸಿಕೊಂಡು ಒಮ್ಮೆಲೆ ವ್ಯಾಪಿಸಿದ ಒಳಗಿನ ಯಾತನೆ ನರಳಾಟದ ಸದ್ದನ್ನು ಅವರ ಬಾಯಿಯಿಂದ ಹೊರಡಿಸಿತು. ಕಾಲುಗಳು ಕ್ಷೀಣಗೊಂಡಂತೆ ಕಂಡು, ನಿಂತಿರುವುದಾಗದೆ, ಅಂಗಳದ ದಂಡೆಯ ಮೇಲೆ ಅವರು ಕುಳಿತರು. ಅಲ್ಲಿಂದಲೂ ಆಗೊಮ್ಮೆ ಈಗೊಮ್ಮೆ ಕ್ಷೀಣವಾಗಿ ನರಳಾಟ ಕೇಳಿಸಿತೇ ಹೊರತು ಮಾತಲ್ಲ.

ರಂಗಣ್ಣ ಆತಂಕಗೊಂಡ. ತಂದೆಗೆ ಹೇಳದೇ ಇದ್ದರೂ ಆಗುತ್ತಿತ್ತೇನೊ ಎನಿಸಿತು.

ಅವನು ಬಲ್ಲ. ಬೇರೆ ದಿನವಾಗಿದ್ದರೆ, ಸುಭದ್ರೆಯ ಜ್ವರದ ಪ್ರಸ್ತಾಪವೂ ಇಲ್ಲದಿರುತ್ತಿದ್ದರೆ, ತಂದೆ ಒಳಕ್ಕೆ ಧಾವಿಸಿ ತಂಗಿಯ ಭೂತ ಬಿಡಿಸುತ್ತಿದ್ದರು. ಆದರೆ ಈ ದಿನ ಅವರು ನಿತ್ಯದ ಮನುಷ್ಯನಲ್ಲ.

ಗೌಡರು ಕುಳಿತೇ ಇದ್ದರು. ಏನು ಮಾಡಬೇಕೆಂದು ರಂಗಣ್ಣನಿಗೆ ತೋಚಲಿಲ್ಲ. ತಾನು ಒಳಗೆ ಹೋಗುವುದು ಮೇಲು ಎನಿಸಿತು. ತಂದೆಗೆ ಕೇಳಿಸಲಿ ಎಂದು ಬಾಯಿ ತೆರೆದು ಗಟ್ಟಿಯಾಗಿ ಆತ ಉಸಿರು ಬಿಟ್ಟ.

ಗೌಡರು ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ.

ಆ ಕ್ಷಣ ಕೊಟ್ಟಿಗೆಯಿಂದ ಎಳೆಗರು 'ಅಂಬಾ' ಎಂದಿತು. ಅದರ ತಾಯಿ 'ಹ್ಞಾ–' ಎಂದು ಉತ್ತರವಿತ್ತಿತು.

ತುಸು ಮುದುಡಿದ್ದ ಗೌಡರು ನೆಟ್ಟಗೆ ಕುಳಿತರು. ಅವರ ತಲೆ ಯಾಂತ್ರಿಕವಾಗಿ ಕೊಟ್ಟಿಗೆಯಿದ್ದ ದಿಕ್ಕಿಗೆ' ಹೊರಳಿತು.

ಅಂಥ ಸಂದರ್ಭಗಳಲ್ಲಿ ಮಗ ಮನೆಯಲ್ಲಿದ್ದರೆ, "ರಂಗಾ, ಅದೇನೂಂತ ನೋಡ್ಕೊಂಡ್ಬಾ," ಎಂದು ಅವರು ಹೇಳಬೇಕು.

ಎಳೆಗರು 'ಅಂಬಾ' ಎಂದಿದೆ, ಹೋಗಿ ನೋಡಬೇಕಾದುದು ಧರ್ಮ—ಎಂದು ಅವರ ಒಳದನಿ ಕ್ಷೀಣವಾಗಿ ನುಡಿಯುತ್ತಿತ್ತು. ಆದರೆ ಅವರನ್ನು ತಟ್ಟಿ ಎಚ್ಚರಿಸುವಷ್ಟು ಆ ಧ್ವನಿ ಬಲವಾಗಿರಲಿಲ್ಲ.

ಕರು ಯಾಕೆ ಕೂಗಿತು? ಅಣ್ಣನ ಸದ್ದಿಲ್ಲವಲ್ಲ? ಯಾರ ಮಾತೂ ಕೇಳಿಸುತ್ತಿಲ್ಲವಲ್ಲ? —ಎಂದು ಚಿಂತಿಸುತ್ತ ನಾಗಮ್ಮ ಅಡುಗೆ ಮನೆಯಲ್ಲಿದ್ದವರು ಪಡಸಾಲೆಗೆ ಬಂದರು. ಕಂದೀಲನ್ನೆತ್ತಿಕೊಂಡು ಅಂಗಳಕ್ಕಿಳಿದರು. ಅದರ ಬೆಳಕಿನ ಝರಿಯಲ್ಲಿ ಸೋದರನನ್ನೂ ಅಳಿಯನನ್ನೂ ಕಂಡರು.

ಅವರೆಂದರು :

"ಕರ ಅಂಬಾ ಅಂತು. ನೋಡ್ಕಂಬತ್ತೀನಿ."

ರಂಗಣ್ಣ ಕೇಳಿದ:

"ನಾನೂ ಬರಲಾ ಅತ್ತೆಮ್ಮ?"

"ಬ್ಯಾಡ, ಯಾತಕ್ಕೆ?"

ಶಾಮೇಗೌಡರ ದೃಷ್ಟಿ ತಂಗಿಯ ಮೇಲೆ ನೆಟ್ಟಿತು. ಆಕೆಯನ್ನೂ ಕಂದೀಲನ್ನೂ ಅದು ಹಿಂಬಾಲಿಸಿತು.

ಕೊಟ್ಟಿಗೆಯಲ್ಲಿ ಏನಾಯಿತೆಂಬುದನ್ನು ತಿಳಿಯಲು ತಂಗಿಯ ಪುನರಾಗಮನವನ್ನು ಇದಿರು ನೋಡುವವರಂತೆ ಗೌಡರು ಮೂಕರಾಗಿ ಕುಳಿತರು.

ಕೆಲ ನಿಮಿಷಗಳಲ್ಲೆ ನಾಗಮ್ಮ ಹಿಂತಿರುಗಿದಾಗ ರಂಗಣ್ಣ ಕೇಳಿದ:

"ಏನಾಯ್ತು ಅತ್ತೆಮ್ಮ?"

"ಯಾನಿಲ್ಲ ಮೊಗ. ಕಾಲಿಗೆ ಅಗ್ಗ ಸುತ್ಕಂಡಿತ್ತು."

ಶಾಮಣ್ಣನ ಮನಸ್ಸೆಂದಿತು: ಏನೂ ಆಗಿರಲಿಲ್ಲ. ಕಾಲಿಗೆ ಹಗ್ಗ ಸುತ್ತಿಕೊಂಡಿತ್ತು. ಅಷ್ಟೆ, ಅಷ್ಟೆ......

...ರಂಗ ಕಡ್ಡಿಯನ್ನು ಗುಡ್ಡ ಮಾಡಿ ಹೇಳಿದನೋ ಹೇಗೆ? ಕಾಲಿಗೆ ಸುತ್ತಿಕೊಂಡಿದ್ದ ಹಗ್ಗವನ್ನು ಹಾವು ಎಂದು ಆತ ಭಾವಿಸಿಲ್ಲವಷ್ಟೆ? ಹಾವೊ ಹಗ್ಗವೊ... ಹಗ್ಗವೇ ಆದರೂ ಏನು ಕಡಮೆಯೆ ? ಅದು ಉರುಳಾಗಬಹುದಲ್ಲ ?

ಅಂಗಳದ ಮಧ್ಯದಲ್ಲಿ ನಾಗಮ್ಮ ನಿಂತರು. ಇದೇನು ತಂದೆ ಮಗ ಇಲ್ಲಿ? ಮುನಿಯ ಸತ್ತ ಅಂತ ಇಷ್ಟೊಂದು ಮೌನವಾಗಿ [ಗುಸುಗುಸು ಮಾತನಾಡುತ್ತಾ] ಅಂಗಳದ ಮೂಲೆಯಲ್ಲಿ ಇರಬೇಕೆ ಇವರು ?

ಸುಬ್ಬಿ. ಸುಬ್ಬಿಯ ಮೈ ಕಾದಿದೆ. ಈಗ ಹೇಗಿದೆಯೊ ?

ನಾಗಮ್ಮ ಕೇಳಿದರು :

"ಇಲ್ಯಾಕೆ ಕುಂತಿದೀ ಅಣ್ಣ?"

ತಮ್ಮದಲ್ಲದ ಧ್ವನಿಯಲ್ಲಿ ಗೌಡರೆಂದರು:

"ನೀನು ಒಳಕ್ಕೋಗು, ನಾಗೂ."

ಮುನಿಯ ಸತ್ತ ಎಂದು ನಾಗಮ್ಮನವರಿಗೆ ವ್ಯಥೆ ಇಲ್ಲವೆಂದಲ್ಲ. ಆದರೆ, ಆಕಾಶವೇ ಕಳಚಿಬಿದ್ದಂತೆ ಧೈರ್ಯಗೆಡಬೇಕೆ ಗಂಡಸರು? ಅವರಿಗೆ ಆಶ್ಚರ್ಯ. ಅಣ್ಣ ಎಂದೂ ಹೀಗೆ ವರ್ತಿಸಿದವನಲ್ಲ. ಇವತ್ತು ಯಾಕೆ?

ಗಂಡನ ಮನೆಯಲ್ಲಿರಲಿ, ತವರು ಮನೆಯಲ್ಲಿರಲಿ, ಎಂದೂ ಇದಿರು ಮಾತು ಆಡಿದವರಲ್ಲ ನಾಗಮ್ಮ. ಅವರು ಮನೆಯ ಒಳಹೊಕ್ಕು ಕಂದೀಲನ್ನು ಅದರ ಸ್ಥಾನದಲ್ಲಿರಿಸಿದರು. ಅಣ್ಣನ ಹಾಸಿಗೆ ಬಿಡಿಸಿದರು. ಸುಭದ್ರೆ ಮಲಗಿದ್ದ ಕೊಠಡಿಗೆ ಹೋದರು. ಅಲ್ಲಿ ಸೀಮೆ ಎಣ್ಣೆಯ ಬುಡ್ಡಿ ಉರಿಯುತ್ತಿತ್ತು. ಸುಭದ್ರೆಯ ಮಗ್ಗುಲಲ್ಲಿ ಕುಳಿತು, ತಮ್ಮ ಅಂಗೈಯಿಂದ ಆಕೆಯ ಹಣೆ ಮುಟ್ಟಿ ನೋಡಿದರು. ಕಾದ ಕೆಂಡ. ಹಸ್ತ ಸ್ಪರ್ಶಕ್ಕೆ ಹುಡುಗಿಗೆ ಎಚ್ಚರವಾಗಲಿಲ್ಲ. ಅವಳು ನಿದ್ರಿಸುತ್ತಿದ್ದಳು. ಆದರೆ ತುಟಿಗಳು ಸದ್ದಿಲ್ಲದೆ ಚಲಿಸುತ್ತಿದ್ದುವು. ಕನವರಿಸುತ್ತಿರಬೇಕು.

ಅಲ್ಲಾ—ಬೆಳಗ್ಗೆ ಎಲ್ಲಾ ಓಡಾಡಿಕೊಂಡಿದ್ದವಳು ಇದ್ದಕ್ಕಿದ್ದ ಹಾಗೆ ಮಲಗಿಬಿಟ್ಟಳಲ್ಲ!

—ಅದು ವಿಚಿತ್ರವಾಗಿ ಕಂಡಿತು ನಾಗಮ್ಮನಿಗೆ.

ಒಳಗಿನ ಒಂದು ಸಂಕಟ ಅವರ ಯೋಚನೆಯನ್ನು ಕೆದಕಿತು; ದೃಷ್ಟಿ ತಾಕಿರಬಹುದು. ದೊಡ್ಡವಳಾದ ಮೇಲೂ ಮಗಳನ್ನು ಶಾಮಣ್ಣ ಮನೆಯಲ್ಲಿ ಇರಿಸಿಕೊಳ್ಳಬಾರದಾಗಿತ್ತು.

ಆ ಪ್ರಸ್ತಾಪ ತಾನು ಮಾಡಿದಾಗಲೆಲ್ಲ ಅಣ್ಣ ಎನ್ನುತ್ತಿದ್ದನಲ್ಲ?

"ಈಗಿನ ಕಾಲದಲ್ಲಿ ಪರವಾಗಿಲ್ಲ ನಾಗೂ. ಮಕ್ಕಳಿಗೆ ತಡವಾಗಿ ಮದುವೆ ಮಾಡ್ಬೌದು."

ಎಷ್ಟು ತಪ್ಪು! ನಾಗಮ್ಮನಿಗೆ ತಿಳಿಯದು ಎಂದಲ್ಲ. ಹೊಸಳ್ಳಿಯ ಗೌಡರ ಎರಡನೆಯ ಮಗ ವಕೀಲಿ ಓದುತ್ತಿದ್ದಾನೆ. ಆ ಪರೀಕ್ಷೆ ಮುಗಿದು ನಾಲ್ಕು ಕೈ ಕೋಟು ಹಾಕಿಕೊಳ್ಳುವ ವರೆಗೂ ಮದುವೆ ಬೇಡವಂತೆ ಅವನಿಗೆ. ಆತನೇ ಅಳಿಯನಾಗಬೇಕೆಂದು ಅಣ್ಣನ ಹಂಬಲ.

ಈಗಿನ ಕಾಲದ ವಿಚಾರವೊಂದೂ ಅರ್ಥವಾಗದು ನಾಗಮ್ಮನಿಗೆ. ಹನ್ನೆರಡನೆಯ ವಯಸ್ಸಿನಲ್ಲಿ ಅಲ್ಲವೆ ತನಗೆ ಮದುವೆಯಾದದ್ದು? ಹನ್ನೆರಡೊ ಅಥವಾ ಹನ್ನೊಂದೊ? ಸುಬ್ಬಿಗೋ ಹದಿನೇಳು ದಾಟಿದೆ. ಮೈ ಕೈ ತುಂಬಿವೆ. ದೃಷ್ಟಿ ತಾಕದೆ ಇನ್ನೇನಾದೀತು?....

ಆ ಜಾಡು ಹಿಡಿದು ನಾಗಮ್ಮನವರ ಯೋಚನೆ ಸಾಗಿತು. ಕಣ್ಣುಗಳು ತೇವಗೊಂಡು ಎರಡು ಅಶ್ರುಬಿಂದು ಒಸರಿದುವು.

ಹೊರಗೆ ರಂಗಣ್ಣ ತಂದೆಗೆ ಹೇಳಿದ:

"ಅಪ್ಪ, ಒಳಕ್ಕೋಗೋಣ."

"ಹ್ನ?" ಎಂದರು, ಅಂತರ್ಮುಖಿಯಾಗಿದ್ದ ಗೌಡರು, ಪ್ರಶ್ನೆ ಸರಿಯಾಗಿ ಕೇಳಿಸದೆ.

"ಒಳಕ್ಕೋಗೋಣ, ಅಪ್ಪ."

"ನೀನು ಓಗು, ಮನಿಕ್ಕೋ."

ರಂಗಣ್ಣ ಒಬ್ಬನೇ ಮನೆಯೊಳಕ್ಕೆ ನಡೆದ.

ಪಡಸಾಲೆಯಲ್ಲಿದ್ದ ಪಲ್ಲಂಗದ ಮೇಲೆ ಗೌಡರ ಶಯನ. ರಂಗಣ್ಣನ ಕೊಠಡಿ ಅಂಗಳಕ್ಕೆ ತಾಗಿಕೊಂಡು ಇತ್ತು, ಸುಬ್ಬಿ–ನಾಗಮ್ಮರಿದ್ದ ಕೋಣೆಯ ಮಗ್ಗುಲಲ್ಲಿ. ಅವನ ಕೊಠಡಿಯಲ್ಲಿ, ಅದೇ ವರ್ಷ ಗೌಡರು ಮಗನಿಗಾಗಿ ಮಾಡಿಸಿದ್ದ ಮೇಜಿನ ಮೇಲೆ, ಭಾಗ್ಯನಗರದಿಂದ ರಂಗಣ್ಣ ಕೊಂಡು ತಂದಿದ್ದ ಲ್ಯಾಂಪ್ ಉರಿಯುತ್ತಿತ್ತು. ಅದರ ಬತ್ತಿಯನ್ನು ರಂಗಣ್ಣ ಕಿರಿದುಗೊಳಿಸಿದ.

ಅವನ ಕೋಣೆಯಿಂದ ಮಗ್ಗುಲ ಕೊಠಡಿಗೆ ಹೋಗುವ ಬಾಗಿಲು ತೆರೆದಿತ್ತು. ರಂಗಣ್ಣ ಅತ್ತ ಸರಿದು ಬಾಗಿಲಲ್ಲಿ ನಿಂತ.

ಸೋದರಳಿಯನನ್ನು ನೋಡಿ ನಾಗಮ್ಮ ಅಂದರು:

"ಒತ್ತಾರೆ ಅಯ್ನೋರಲ್ಲಿಗೆ ಓಗಿ, ದೊಡ್ಡಮ್ಮಾವರ್ನ ಕೇಳಿ, ಅವುಸದಿ ಇಸಕೊಂಡು ಬರಬೇಕಲ್ಲ ಮೊಗ."

ಅಯ್ಯನವರು—ದೊಡ್ಡಮ್ಮನವರು. ವಸ್ತುಸ್ಥಿತಿಯ ಅರಿವಿಲ್ಲದ ಅತ್ತೆ....

"ಬೆಳಗ್ಗೆ ನೋಡಾನ, ಅತ್ತೆಮ್ಮ. ಜ್ವರ ಬಿಟ್ಟಾತು. ಈಗ ನೀವು ಮನಿಕ್ಕೊಳ್ಳಿ."

"ಅಣ್ಣ ಒಳಕ್ಬಂದ್ನಾ?"

"ಇಲ್ಲ. ಬರ್ತಿನಿ, ನೀನು ಹೋಗು ಅಂದ್ರು."

ಆ ವಾರವಷ್ಟೇ ರಂಗಣ್ಣ ಅಂದುಕೊಂಡಿದ್ದನಲ್ಲ? ಒಂದು ಬ್ಯಾಗ್ ಕೊಳ್ಳಬೇಕು. ಭಾಗ್ಯನಗರದಲ್ಲಾದರೆ ಮೆಡಿಕಲ್ ವಿದ್ಯಾರ್ಥಿಯ ವಶ ಡಾಕ್ಟರರ ಬ್ಯಾಗ್ ಕಂಡರೆ ಜನ ನಗಬಹುದು. ಹಳ್ಳಿಯಲ್ಲಿ ಹಾಗಲ್ಲವಲ್ಲ. ಅದು ಭೂಷಣ. ಸಣ್ಣಪುಟ್ಟ ಸಾಮಾನ್ಯ ರೋಗಗಳಿಗಾಗುವ ಔಷಧಿಗಳನ್ನು ಕೊಂಡು ಆ ಬ್ಯಾಗಿನಲ್ಲಿಡಬೇಕು. ಪದ್ಮನಾಭನ ಅಜ್ಜಿಯ ಬೇರು ನಾರುಗಳನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲದಂತಾಯಿತಲ್ಲ ಕಣಿವೇಹಳ್ಳಿಯಲ್ಲಿ? ರಜಾ ದಿನಗಳಲ್ಲಿ ಊರಿಗೆ ಬಂದಾಗ ನಾಲ್ಕು ಜನರಿಗೆ ಒಳ್ಳೆಯ ಔಷಧಿ ಸಿಗುವಂತಾಗಬೇಕು...,

ಆ ಯೋಚನೆ ಇನ್ನೂ ಸ್ವಲ್ಪ ಮುಂಚಿತವಾಗಿ ಹೊಳೆದಿದ್ದರೆ, ಸುಬ್ಬಿಗೆ ಜ್ವರ ಬಂತೆಂದು ಚಿಂತಿಸಬೇಕಾದುದಿರಲಿಲ್ಲ.

ಜ್ವರ ಎಷ್ಟಿದೆ ಎಂದು ನೋಡಲು ಒಂದು ಥರ್ಮಾಮಿಟರ್ ಕೂಡಾ ಇರಲಿಲ್ಲ ಮನೆಯಲ್ಲಿ.

ತಾನು ಕಂಡಿದ್ದ ಶುಶ್ರೂಷೆಗಳನ್ನು ನೆನಪಿಗೆ ತಂದುಕೊಳ್ಳಲು ರಂಗಣ್ಣ ಯತ್ನಿಸಿದ. ಜ್ವರದ ತಾಪ ಹೆಚ್ಚಿದ್ದ ರೋಗಿಗೆ ಏನು ಮಾಡಬೇಕು? ಹಣೆಗೆ ತಣ್ಣೀರಿನ ಪಟ್ಟಿ—ಕೋಲ್ಡ್ ಪ್ಯಾಕ್.

ಹಾಗೆ ಪಟ್ಟಿ ಇಡುವಂತೆ ಅತ್ತೆಗೆ ಸೂಚಿಸಲು ರಂಗಣ್ಣ ಬಾಯಿ ತೆರೆದ. ಆದರೆ ಆಕೆ ಏನೆನ್ನುವರೋ ಎಂದು ಅಳುಕಿದ. ಬಯ್ದಾರೋ? ಅವರ ದೃಷ್ಟಿಯಲ್ಲಿ, ಅಯ್ಯನವರ ಮನೆಯ ದೊಡ್ಡಮ್ಮನನ್ನು ಬಿಟ್ಟು ಬೇರೆ ಯಾರಿಗೂ ಔಷಧೋಪಚಾರ ತಿಳಿಯದಲ್ಲ ?

ನಾಗಮ್ಮ ಮತ್ತೊಮ್ಮೆ ಸುಭದ್ರೆಯ ಹಣೆ ಮುಟ್ಟಿ ನೋಡಿದರು. ಶಾಮೇಗೌಡರನ್ನು ನೆನಪಿಗೆ ತರುವ ಮುಖ. ಗೌಡರ ಮೀಸೆ ಅವರ ವ್ಯಕ್ತಿತ್ವಕ್ಕೆ ಅಲಂಕಾರಪ್ರಾಯವಾಗಿತ್ತು. ನಾಗಮ್ಮನಿಗಾದರೋ, ಬದುಕಿನುದ್ದಕ್ಕೂ ಅವರು ಕಷ್ಟಿಯುಂಡುದಕ್ಕೆ ಸಾಕ್ಷಿಯಾಗಿದ್ದುವು ಮುಖದ ಮೇಲಿನ ನೇಗಿಲ ಗೆರೆಗಳು ಎರಡು :

ರಂಗಣ್ಣನಿಗೆನಿಸಿತು: ಈ ಮನೆಯಲ್ಲಿ ಎರಡು ಜೋಡಿ. ವಯಸ್ಸಾದ ಅಣ್ಣ ತಂಗಿಯದು ಒಂದು; ಎಳೆಯ ಸೋದರ ಸೋದರಿಯರದು ಒಂದು.

ಹಣೆಯಿಂದ ಅಂಗೈಯನ್ನು ನಿಧಾನವಾಗಿ ಹಿಂದಕ್ಕೆ ತೆಗೆದು, ರಂಗಣ್ಣನತ್ತ ನೋಡಿ, ನಾಗಮ್ಮ ಅಂದರು:

"ಭಾರಿ ಜೊರ, ಮೊಗ."

" ಎದರ್ಬೇಡಿ, ಅತ್ತೆಮ್ಮ. ನಾಳೆಗೆ ವಾಸಿಯಾಯ್ತದೆ."

ಧೈರ್ಯ ನೀಡುವ ಮಾತುಗಳನ್ನಾಡುವುದು ಡಾಕ್ಟರಾದವನ ವೃತ್ತಿಗುಣ.

ನಾಗಮ್ಮನೆಂದರು :

" ಆಗಲಿ ಮೊಗ. ನಿನ್ನ ನಾಲಿಗೆ ಗುಣದಿಂದ ಅಂಗೇ ಆಗಲಿ. ನಿದ್ದೆ ಬಂದ್ಬಿಟ್ಟೈತೆ. ಎಚ್ಚರಾದ್ರೆ ಒಂದಿಷ್ಟು ಅಲಾದರೂ ಕುಡಿಸ್ಬೌದಾಗಿತ್ತು."

" ಏನೂ ಬೇಡಿ, ಅತ್ತೆಮ್ಮ. ಒಂದು ರಾತ್ರೆ ಉಪವಾಸ ಇದ್ರೇನೇ ಒಳ್ಳೇದು."

"ಊಂ. ನೀನು ಮನಿಕ್ಕೋ, ರಂಗ."

ರಂಗಣ್ಣ ಸುರುಳಿ ಸುತ್ತಿದ್ದ ತನ್ನ ಹಾಸಿಗೆಯನ್ನು ಬಿಡಿಸಿದ. ಮಲಗಲು ಮನಸ್ಸಾಗಲಿಲ್ಲ. ಮೇಜಿನ ಕೆಳಗಿದ್ದ ಸ್ಟೂಲನ್ನು ಹೊರಕ್ಕೆಳೆದ. ಲ್ಯಾಂಪಿನ ಬತ್ತಿಯನ್ನು ಹಿರಿದುಗೊಳಿಸಿದ. ಗೋಡೆಯ ಗೂಡಿನಲ್ಲಿ ಅವನ ಅಧ್ಯಯನದ ಮೂರು ಪುಸ್ತಕಗಳಿದ್ದವು. ಅವುಗಳ ಮಗ್ಗುಲಲ್ಲಿ ಕೈಗಡಿಯಾರವಿತ್ತು. ವೇಳೆ ನೋಡಿದ. ಹತ್ತೂವರೆ ಘಂಟೆ. ವಾಚನ್ನೂ 'ಸಾವಿಲ್ಸ್ ಮೆಡಿಸಿನ್' ಗ್ರಂಥವನ್ನೂ ಎತ್ತಿಕೊಂಡು, ಮೇಜಿನ ಮೇಲಿರಿಸಿ, ಸ್ಟೂಲಿನ ಮೇಲೆ ಕುಳಿತು, ಪುಸ್ತಕವನ್ನು ಬಿಡಿಸಿ, ಪರಿವಿಡಿಯನ್ನು ನೋಡಿ, ಪುಟಗಳನ್ನು ಕಂಡುಹಿಡಿದು ಓದತೊಡಗಿದ.

ಸ್ವಲ್ಪ ಹೊತ್ತಾದ ಮೇಲೆ ಪಡಸಾಲೆಯ ಗೋಡೆ ಗಡಿಯಾರದಲ್ಲಿ ಒಂದು ಬಾರಿಸಿತು. ರಂಗಣ್ಣನ ದೃಷ್ಟಿ ಎದುರಿಗಿಟ್ಟುಕೊಂಡಿದ್ದ ವಾಚಿನತ್ತ ಹರಿಯಿತು. ಅದರಲ್ಲಿ ಹತ್ತೂ ಐವತ್ತು. ಮನೆ ಗಡಿಯಾರ ಇಪ್ಪತ್ತು ನಿಮಿಷ ಹಿಂದೆ—ಎಂದುಕೊಂಡ.

ಕತ್ತು ತಿರುಗಿಸಿ ಮಗ್ಗುಲ ಕೊಠಡಿಯತ್ತ ನೋಡಿದ. ಸುಭದ್ರೆಯ ಪಕ್ಕದಲ್ಲಿ ತಮ್ಮ ಚಾಪೆಯನ್ನೂ ಕಂಬಳಿಯನ್ನೂ ಹಾಸಿಕೊಂಡು, ಅದರ ಮೇಲೆ ಬೆನ್ನು ಬಾಗಿಸಿ ಕುಳಿತೇ ಇದ್ದರು ನಾಗಮ್ಮ.

ರಂಗಣ್ಣ ಎದ್ದು ಹಿತ್ತಲ ಬಾಗಿಲಿಗೆ ಹೋಗಿ ಬಂದ. ಜಗಲಿಯಲ್ಲಿ ನಿಂತು ಅಂಗಳದತ್ತ ದಿಟ್ಟಿಸಿದ. ಘನೀಭವಿಸಿದ್ದ ಇರುಳಲ್ಲಿ ಅವನ ತಂದೆಯೊಂದು ಪ್ರತಿಮೆಯಾಗಿದ್ದರು. 'ಅಪ್ಪಾ' ಎಂದು ಕರೆಯೋಣವೆ ಎನ್ನಿಸಿತು. ಆದರೆ ಧೈರ್ಯ ಬರಲಿಲ್ಲ. ತನ್ನ ಕೊಠಡಿಗೆ ಹೋಗಿ ಲ್ಯಾಂಪ್ ಆರಿಸಿ ಹಾಸಿಗೆಯ ಮೇಲೆ ಉರುಳಿದ.

ಆ ದಿನದ ಘಟನೆಗಳೆಲ್ಲ ಮತ್ತೊಮ್ಮೆ ರಂಗಣ್ಣನ ಕಣ್ಣೆದುರು ಸುಳಿದವು. ಮುನಿಯನ ಶವವೂ ಅವನಿಗೆ ಕಾಣಿಸಿತು. ಕಣ್ಣುಗಳನ್ನು ಆತ ಭದ್ರವಾಗಿ ಮುಚ್ಚಿಕೊಂಡ.

ಅವನಿಗೆನ್ನಿಸಿತು :

'ಸುಬ್ಬಿ ಹೆದರಿ ಜ್ವರ ಬರಿಸಿಕೊಂಡುದು ಒಳ್ಳೇದೇ ಆಯ್ತು. ಇದಾದ ಮೇಲೆ ತುಳಿದ ಅಡ್ಡ ದಾರಿಯಿಂದ ಸರಿದಾರಿಗೆ ಅವಳು ವಾಪಸಾಗಲೂಬಹುದು.'

ಹಾಗೆಯೇ ಅವನಿಗೆ ನಿದ್ದೆ ಬಂತು. ಕನಸಿನಲ್ಲಿ ಆತ ಭಾಗ್ಯನಗರಕ್ಕೆ ಹೋಗಿ ಒಬ್ಬ ಔಷಧಿ ವ್ಯಾಪಾರಿಯಿಂದ ಕೆಲ ಔಷಧಿಗಳನ್ನು ಕೊಂಡ....

....ಮಗನನ್ನು ಗೌಡರು ಒಳಕ್ಕೆ ಕಳುಹಿಸಿದ ಮೇಲೆ ಅವರ ಮನಸ್ಸು ನಿರಾತಂಕವಾಗಿ ಅತ್ತಿತು. ಕಣ್ಣುಗಳು ಒಣ ನೆಲ. ಒಳಗೆ ಮಾತ್ರ, ಗುಡುಗು.

ಯಾಕೆ ಹೀಗಾಯಿತು? ಯಾಕೆ ಹೀಗಾಯಿತು?

ಪದ್ಮನ ಜತೆ ಸುಬ್ಬಿ ದಿಬ್ಬದ ಹತ್ತಿರ ಹೋದಳೆಂದು ಮಗ ಮೊದಲು ಹೇಳಿದಾಗ

ಶಾಮೇಗೌಡರು ದಂಗಾಗಿದ್ದರು. ಆದರೆ ಕೆಲವೇ ನಿಮಿಷಗಳಲ್ಲಿ ಅದರ ಪೂರ್ಣ ಅರ್ಥ ಅವರಿಗಾಯಿತು. ನೀರಿಲ್ಲದ ಆಳ ಬಾವಿಯಲ್ಲಿಳಿದು ಉಸಿರು ಕಟ್ಟಿಸಿಕೊಂಡಂತಾಯಿತು ಅವರಿಗೆ.

ಮಗಳಿಗೆ ಹೊಡೆಯಬಹುದು, ಬಡಿಯಬಹುದು, ಬುದ್ಧಿ ಕಲಿಸಬಹುದು. ಅದು ದೊಡ್ಡ ಮಾತಲ್ಲ. ಆ ನಂಬಿಕೆ ಗೌಡರಿಗೆ ಇಲ್ಲದಿಲ್ಲ.

ಆದರೆ, ತಮ್ಮ ಮಗಳನ್ನು ಶ್ರೀನಿವಾಸಯ್ಯನ ಮಗನೊಂದಿಗೆ ಹಳ್ಳಿಯವರು ಕಂಡಿರ ಬಹುದಲ್ಲ? ಹಾಡೇ ಹಗಲು ಅವನೊಟ್ಟಿಗೆ ಅಲೆಯಲು ಹೋದಳಲ್ಲ ಬಸವಿ? ನೋಡಿದ ಜನ ಆಡದೆ ಇರುತ್ತಾರೆಯೆ? ಈ ವಯಸ್ಸಿನಲ್ಲಿ ಅಪನಿಂದೆಗೆ ಅಪಖ್ಯಾತಿಗೆ ತುತ್ತಾಗುವಂತಾಯಿತೆ ತಾವು ?....

ಆ ಹುಡುಗ ಪದ್ಮ ನಗರದಲ್ಲಿ ಶೋಕಿ ಜೀವನ ನಡೆಸುತ್ತಿರಬೇಕು. ರಜೆಯಲ್ಲಿ ಇಲ್ಲಿಗೆ ಬಂದರೆ ಸುಮ್ಮನಿರಲಾಗುವುದಿಲ್ಲವಲ್ಲ. ಅವನ ಮುಟ್ಟಾಟಕ್ಕೆ ಭೇರೆ ಯಾರೂ ಸಿಗದೆ ಹೋದರೆ ಹಳ್ಳಿಯಲ್ಲಿ? ತಮ್ಮ ಮಗಳೇ ಬೇಕಾದಳೆ?

ಬೇರೆ ಬೇರೆ ಜನವಾದರೂ ಈವರೆಗೆ ಒಡಹುಟ್ಟಿದವರ ಹಾಗಿದ್ದೆವು ಶ್ರೀನಿವಾಸಯ್ಯ ಮತ್ತು ತಾವು. ಈವರೆಗೆ ಅಂದರೆ, ಇನ್ನು ಆ ಬಾಂಧವ್ಯ ಸಾಧ್ಯವಿಲ್ಲ ಎಂದಲ್ಲವೆ? ಶ್ರೀನಿವಾಸಯ್ಯನ ತಂದೆ ಗೋಪಾಲಕೃಷ್ಣಯ್ಯನವರೊಡನೆ ತಮ್ಮ ತಂದೆ ಎಷ್ಟು ಬೇಕೋ ಅಷ್ಟು ಸಂಬಂಧ ಇರಿಸಿಕೊಂಡಿದ್ದರು. ತಮ್ಮ ಕಾಲದಲ್ಲಿ ಪರಸ್ಪರ ಗೌರವ ಗಾಢಸ್ನೇಹವಾಯಿತು. ತಮ್ಮ ಮಕ್ಕಳ ಕಾಲಕ್ಕೆ—

ಗೌಡರಿಗೆ ವ್ಯಥೆಯಾಯಿತು, ಪಶ್ಚಾತ್ತಾಪವಾಯಿತು. ತಾವೂ ತಮ್ಮ ತಂದೆ ದ್ಯಾವೇ ಗೌಡರಂತೆ ಆ ಮನೆತನದೊಡನೆ ಎಷ್ಟು ಬೇಕೋ ಅಷ್ಟೇ ಸಂಬಂಧ ಇರಿಸಿಕೊಂಡಿದ್ದರೆ ಈ ದುಸ್ಥಿತಿ ಒದಗುತ್ತಿರಲಿಲ್ಲ....

....ಗೌಡರು ಎದೆಯ ಕೂದಲ ಮೇಲೆ ಕೈಯಾಡಿಸಿದರು. ಚಳಿ ಎನಿಸಿತು. ಮಗನ ಕೊಠಡಿಯ ಕಡೆ ನೋಡಿದರು. ದೀಪವಿರಲಿಲ್ಲ.

ಏಳಲು ಯತ್ನಿಸಿದರು. ಆದರೆ ಬಲಗಾಲಿಗೆ ಜೋಮು ಹಿಡಿದಿತ್ತು. ಆ ಕಾಲನ್ನು ಚಾಚಿ, ತೊಡೆಗೆ ಚಿವುಟಿದರು. ಮುಷ್ಟಿಯಿಂದ ಗುದ್ದಿದರು. ಕ್ರಮೇಣ ಕಾಲು ಜೀವ ತಳೆಯಿತು. ಬಹಿರ್ದೆಶೆಗೆ ಹೋದರು. ಆದರೆ ದೇಹ ಕಡಿದೊಗೆದ ಮರವಾಗಿತ್ತಲ್ಲ ? ಅವರಿಗೆನಿಸಿತು: ಬಹಳ ಹೊತ್ತಿನಿಂದ ಈ ಶರೀರ ತನ್ನ ಕ್ರಿಯೆಗಳನ್ನೆಲ್ಲ ನಿಲ್ಲಿಸಿಬಿಟ್ಟಿರಬೇಕು.

ಮಲಗುವುದಕ್ಕೆ ಮುಂಚೆ ಗೌಡರು ಕೊಟ್ಟಿಗೆಗೆ ಹೋಗಿ ಎತ್ತುಗಳನ್ನೂ ಹಸುಗಳನ್ನೂ ನೋಡಿ ಮಾತನಾಡಿಸಿ ಬರಬೇಕು. ಮನೆಯ ಒಳಬಂದವರು, ಹೋಗಿ ಬರುವುದಲ್ಲವೆ ಮೇಲು—ಎಂದು, ಕಂದೀಲಿಗೆ ಕೈ ಚಾಚಿದರು. ಕಂದೀಲು ಎಟಕಲಿಲ್ಲ. ಗೋಡೆಯನ್ನು ಸಮೀಪಿಸಿಯೇ ಇರಲಿಲ್ಲ ಅವರು. ಬೇಡ ಇವತ್ತು ಬೇಡ ಎಂದುಕೊಂಡರು. ಮೆಲ್ಲನೆ ಜಗಲಿಗೆ ಹೋಗಿ ತಲೆ ಬಾಗಿಲಿನ ಅಗಣಿ ಹಾಕಿ ಬಂದರು.

ಕೋಣೆಗಳ ಬಾಗಿಲುಗಳನ್ನು ಮುಚ್ಚಿತ್ತು. ರಂಗಣ್ಣನಾಗಲೀ ನಾಗಮ್ಮನಾಗಲೀ ಚಿಲಕ ಹಾಕುತ್ತಿರಲಿಲ್ಲ. ಬೇಕಿದ್ದರೆ, ಕದ ನೂಕಿ ಮಗಳು ಮಲಗಿರುವುದನ್ನು ತಾವು ನೋಡ ಬಹುದು. ಜ್ವರ ಬಂದಿದೆಯಲ್ಲವೆ ಅವಳಿಗೆ ? ಹೆದರಿಕೊಂಡಳು ಅಲ್ಲವೆ ?

ಗೌಡರು ಪಲ್ಲಂಗದ ಮೇಲೆ ಕುಳಿತರು.

ಮುನಿಯನ ಸಾವಿನ ಪ್ರಕರಣವೊಂದನ್ನು ಸರಿಪಡಿಸುವ ಹೊಣೆ ಹೊತ್ತ ಘಳಿಗೆಯಲ್ಲೇ ಈ ಹೊರೆ ಹೇರಲ್ಪಡಬೇಕೆ ತಮ್ಮ ಮೇಲೆ ?

ಆ ಗೋವಿಂದ. ಅದೇನೋ ಅಂದನಲ್ಲ ? ಪೋಲೀಸರಿಗೆ ತಿಳಿಸ್ಬೇಕೇನೋ ಅಂತ.... ಎಂಥ ತಂದೆಯ ಹೊಟ್ಟೆಯಲ್ಲಿ ಎಂಥ ಮಗ....ಸೊಸೈಟಿ ಮಾಡ್ತೇನೆ ಅಂದ. ಸರಿಯಪ್ಪ—ಅಂದೆ. ಈಗ ನೋಡಿದರೆ ಪುಢಾರಿಯ ಹಾಗೆ ಮಾತಾಡ್ತಾನೆ. ಅಷ್ಟೂ ತಿಳಿಯದೆ ತಮಗೆ? ಹಳ್ಳಿಯ ಒಗ್ಗಟ್ಟು ಮುರಿದು ಪಾರ್ಟಿ ಕಟ್ಟುವ ಇರಾದೆ ಅಲ್ಲವೆ ಅವನದು?

ಗೋವಿಂದ ಹಾಗಾದರೆ, ಪದ್ಮ ಹೀಗೆ.

ಇಂಥವರಿರುವ ಹಳ್ಳಿ ಕೆಡದೆ ಉಳಿದೀತೆ?

ಪಾದಗಳನ್ನು ಒಂದಕ್ಕೊಂದು ತೀಡಿ ಧೂಳು ಕೊಡವಿ ಗೌಡರು ಮಲಗಿಕೊಂಡರು, ದಿಂಬಿಗೆ ತಲೆ ಇಟ್ಟು.

ನಿದ್ರೆ ಅವರ ಸಮೀಪಕ್ಕೆ ಸುಳಿಯಲಿಲ್ಲ.

ವೇಳೆ ಕ್ರಮಿಸುತ್ತಿತ್ತು. ಅದಕ್ಕಿಂತ ನಿಧಾನವಾಗಿ ಗೋಡೆ ಗಡಿಯಾರ ಚಲಿಸುತ್ತಿತ್ತು. ಅದು ಮಂದಗತಿಯ ಚಲನೆ ಎಂಬ ಅರಿವಿಲ್ಲದೆಯೇ, ಈ ಗಡಿಯಾರದ ಟಿಕ್‌ಟಾಕ್‌ಗಳಿಗೆ ಡರಣ್ ಡರಣ್‌ಗಳಿಗೆ ಗೌಡರು ಕಿವಿಗೊಟ್ಟರು. ಒಂದೆರಡು ಸಲ ಕೇಳಿಬಂದ ಸುಭದ್ರೆಯ ನರಳಾಟವನ್ನು ಆಲಿಸಿದರು.

ನಡುವಿರುಳು ದಾಟಿ ಹೊಸ ದಿನದ ಲೆಕ್ಕ ಶುರುವಾಯಿತು.

ಘಳಿಗೆಗಳು ಕಳೆದುವು.

ಕೋಳಿ ಕೂಗಿತು.

ಗೌಡರ ಉರಿಯುತ್ತಿದ್ದ ಕಣ್ಣುಗಳು ಗತಿಸಿದ್ದ ಹೆಂಡತಿಯ ನೆನಪಾಗಿ ಮಂಜಾದುವು.

ಒಮ್ಮೆಲೆ, "ಹಿಂದಿನ ಹಾಗೆ ಇನ್ನು ಮುಂದೆ ನಡೆಯೋದು ಸಾಧ್ಯವಿಲ್ಲ," ಎಂಬ ಮಾತು ಅವರ ಬಾಯಿಯಿಂದ ಹೊರಬಿತ್ತು.

'ನಾಳೆ ಶ್ರೀನಿವಾಸಯ್ಯನನ್ನು ನಾನು ಕಾಣಬೇಕು,' ಎಂದುಕೊಂಡರು.

## ೫

ಮೊದಲ ಕೋಳಿಯ ಕೂಗಿನೊಡನೆ ನಾಗಮ್ಮ ಎದ್ದರು. ರಾತ್ರಿ ಎರಡು ಮೂರು ಸಾರೆ ಎಚ್ಚರಗೊಂಡಿದ್ದ ಅವರಿಗೆ ಗಾಢನಿದ್ರೆಯೇನೂ ಬಂದಿರಲಿಲ್ಲ.

ಸುಭದ್ರೆಯ ಮೈಯಿನ್ನೂ ಬೆಚ್ಚಗಿತ್ತು, ಬೆವರಿರಲಿಲ್ಲ.

ಅಣ್ಣ ರಾತ್ರಿ ಇಡೀ ಜಾಗರವಿದ್ದುದು ನಾಗಮ್ಮನಿಗೆ ತಿಳಿಯದು. ಪಡಸಾಲೆಗೆ ಬಂದ ಅವರ ಮೂಗಿಗೆ ಕಂದೀಲು ಹೊರಸೂಸುತ್ತಿದ್ದ ಕೆಟ್ಟವಾಸನೆ ಬಡಿಯಿತು. ಕಂದೀಲನ್ನು ಆರಿಸಲು ಮರೆತು ಮಲಗಿರಬೇಕು ಅಣ್ಣ; ಎಣ್ಣೆ ತೀರಿ ಬತ್ತಿಯ ತುದಿ ಸುಟ್ಟಿದೆ — ಎಂದು ಕೊಂಡರು.

ಪಡಸಾಲೆಯಲ್ಲಿ ತಂಗಿಯ ಆಕೃತಿ ಕಂಡು ಶಾಮೇಗೌಡರು ಕೇಳಿದರು:

" ಸುಬ್ಬಿಗೆ ಜ್ವರ ಎಂಗೈತೆ?"

" ಬಿಟ್ಟೇ ಇಲ್ಲ," ಎಂದರು ನಾಗಮ್ಮ.

ತೆರೆದ ಕಣ್ಣುಗಳಿಂದ ಥಾವಣಿ ನೋಡುತ್ತ ಸುಮ್ಮನಿದ್ದರು ಗೌಡರು,

ನಾಗಮ್ಮನೇ ಅಂದರು:

" ಅಯ್ನೋರ ಮನೆಗೋಗಿ ಅವುಸದಿ ತರಬೇಕು."

ಗೌಡರು ಏನನ್ನೂ ಹೇಳಲಿಲ್ಲ.

ಸ್ವಲ್ಪ ಹೊತ್ತಿನಲ್ಲಿಯೇ ಕೊಟ್ಟಿಗೆಯ ಕೆಲಸಕ್ಕೆಂದು ಮನೆಯ ಆಳು ಕರಿಯನೂ ಅವನ ಹೆಂಡತಿಯೂ ಬಂದರು.

ಹಕ್ಕಿಗಳು ಚಿಲಿಪಿಲಿಗುಟ್ಟಿದುವು. ದನಕರುಗಳು ಅಂಬಾ ಎಂದುವು. ಕೋಳಿಗಳು, ನಮ್ಮ ಕರ್ತವ್ಯ ನಾವು ನಿರ್ವಹಿಸಿದ್ದೇವೆ, ನೀವು ಎದ್ದಿದೀರಿ, ತುಂಬಾ ಸಂತೋಷ—ಎನ್ನುವಂತೆ ಮತ್ತೊಮ್ಮೆ ಕೊ ಕೊ ಕೋ ಎಂದು ರಾಗವೆಳೆದುವು.

ನಿದ್ರಾವಸ್ಥೆಯನ್ನು ಕಳೆದು ಏಳುತ್ತಿದ್ದ ಜಗತ್ತಿನ ಬಗೆಬಗೆಯ ಧ್ವನಿಗಳಿಗೆ ಕಿವಿಗೊಡುತ್ತ ಗೌಡರು ಮಲಗಿದರು.

ಶ್ರೀನಿವಾಸಯ್ಯನನ್ನು ತಾವು ಕಾಣುವುದು ಖಂಡಿತ. ಅದೂ ವಿಲಂಬವಿಲ್ಲದೆ ಈ ದಿನವೇ. ಆದರೆ ಅದೇ ಮನೆಗೆ ಹೋಗಿ ಆ ಮಹಾತಾಯಿಯ ಮುಂದೆ ನಿಂತು, ಮಗಳಿಗೆ ಜ್ವರ, ಔಷಧಿ ಕೊಡಿ, ಎಂದು ಹೇಗೆ ಕೇಳಲಿ? ಈ ಜ್ವರ ಇಳಿದು ಸುಭದ್ರೆ ಓಡಾಡುವಂತಿದ್ದರೆ ಚೆನ್ನಾಗಿ ರುತ್ತಿತ್ತು. ಅವಳಿಗೂ ಬುದ್ಧಿ ಮಾತು ಹೇಳುವುದಿದೆಯಲ್ಲ?

ಇನ್ನು ಏಳಬೇಕು ಎಂದು ಎರಡು ಮೂರು ಸಾರೆ ಅಂದುಕೊಂಡರು ಗೌಡರು. ಆದರೆ ದೇಹ 'ನನ್ನಿಂದಾಗದು' ಎನ್ನುತ್ತಿತ್ತು.

" ಅತ್ತೇ...."

ಸುಭದ್ರೆ ಮಲಗಿದ್ದ ಕೊಠಡಿಯಿಂದ ಅವಳ ಧ್ವನಿ ಕ್ಷೀಣವಾಗಿ ಕೇಳಿಬಂತು.

ಮಗಳದೇ ಸ್ವರ ಎಂದು ಅರಿತ ಗೌಡರ ಕಿವಿ ನಿಮಿರಿತು.

" ಅತ್ತೆಮ್ಮ......"

ಅವರೆಗೂ ಏಳಲಾಗದೆ ಮಲಗಿದ್ದ ಗೌಡರು ತಕ್ಷಣವೆ ಎದ್ದರು. ಏನು ಬೇಕಾಗಿದೆಯೋ ಮಗುವಿಗೆ? –ಎನ್ನುತ್ತ ಆ ಕೋಣೆಯತ್ತ ಧಾವಿಸಿದರು. ಬುಡ್ಡಿ ದೀಪದ ಮಬ್ಬು ಬೆಳಕಿನಲ್ಲಿ ಮಗಳ ಮುಖ ಗೌಡರಿಗೆ ಕಾಣಿಸಿತು. ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡ ತಬ್ಬಲಿ ಕೂಸು. ಇಷ್ಟು ವರ್ಷ ಬೆಳೆಸಿ ದೊಡ್ಡದು ಮಾಡಿ ಇನ್ನೊಂದು ಮನೆಗೆ ಕಳಿಸಬೇಕು ಎನ್ನುವಷ್ಟರಲ್ಲೆ — ಹೀಗೆ. ಗೌಡರ ಕರುಳು ತುಡಿಯಿತು.

" ಏನ್ಬೇಕು ಮಗೂ? "

" ಅಪ್ಪಾ...."

" ಏನಮ್ಮಿ ?"

( ಎಷ್ಟೊಂದು ಕಾಲವಾಯಿತು ಮಗಳನ್ನು ಹೀಗೆ ತಾವು ಸಂಬೋಧಿಸಿ ? )

" ಅತ್ತೆಮ್ಮನ್ನ ಕರೀರಿ."

ಏನೋ ಕುಟುಕಿದಂತಾಯಿತು ಗೌಡರಿಗೆ. ತಮ್ಮೊಡನೆ ಹೇಳಲಾರದ ವಿಷಯವೆ ?

ತಮಗಿಂತ ಹೆಚ್ಚಿನವಳಾದಳೆ ನಾಗಮ್ಮ ?

ಹಾಗೆ ಯೋಚಿಸಿದವರಿಗೆ ಬೇರೆಯೂ ಒಂದಂಶ ಹೊಳೆಯಿತು. ಈ ಕಂದ ಎಳೆಯ ಮಗುವಲ್ಲ, ಬೆಳೆದ ಹುಡುಗಿ. ಹೆಂಗಸಿನೊಡನೆ ಆಡುವ ಮಾತು ಇದ್ದೀತು. ಜಲಬಾಧೆಯೊ, ಇನ್ನೇನು ಅವಸರವೊ, ಪಾಪ.

ಗೌಡರು ಸರಕ್ಕನೆ ತಿರುಗಿ ಅಡುಗೆ ಮನೆಗೆ ಹೋದರು. ಅಲ್ಲಿಂದ ಹಿತ್ತಿಲ ಬಾಗಿಲಿಗೆ ನಡೆದರು. ಅಲ್ಲಿ ನಾಗಮ್ಮ ಬಣವೆಯಿಂದ ಒಣಹುಲ್ಲನ್ನೆತ್ತಿಕೊಂಡು ಹೋರಿಗಳತ್ತ ಹೋಗುತ್ತಲಿದ್ದರು.

ಕಾತರ ತುಂಬಿದ ಸ್ವರದಲ್ಲಿ ಗೌಡರೆಂದರು :

"ನಾಗೂ, ಸುಬ್ಬಿ ಕೂಗತಾ ಅವಳೆ. ಬಿರ್ರನೆ ಬಾ."

ಎದೆಗೆ ಆತುಕೊಂಡಿದ್ದ ಹುಲ್ಲನ್ನು ಕೆಳಕ್ಕೆ ಚೆಲ್ಲಿ ನಾಗಮ್ಮ ಒಳಕ್ಕೆ ಓಡಿದರು. ತಂಗಿಯನ್ನು ಗೌಡರು ನಿಧಾನವಾಗಿ ಹಿಂಬಾಲಿಸಿದರು.

ಪಡಸಾಲೆಯಲ್ಲಿದ್ದ ಅವರಿಗೆ, ಸುಭದ್ರೆ ಎದ್ದು ನಿಲ್ಲಲು ನಾಗಮ್ಮ ನೆರವಾಗುತ್ತಿದ್ದುದು ಕಂಡಿತು.

ಸುಭದ್ರೆಗೆ ತೋಳಿನ ಆಸರೆಯಿತ್ತು ನಡೆಸುತ್ತ ಬಂದ ನಾಗಮ್ಮ, ಅಣ್ಣನನ್ನು ಉದ್ದೇಶಿಸಿ ಅಂದರು:

"ಏನಿಲ್ಲ. ಬಚ್ಚಲು ಮನೆಗೆ ಓಗ್ಬೇಕಂತೆ. ನೀನು ಮನಿಕ್ಕೋ."

ಗೌಡರು ನಿಟ್ಟುಸಿರುಬಿಟ್ಟರು. ಮತ್ತೆ ಮಲಗುವುದು ಅವರಿಗೆ ಬೇಕಾಗಿರಲಿಲ್ಲ. ಗೋಡೆಯ ಗೂಟದಲ್ಲಿ ತೂಗಾಡುತ್ತಿದ್ದ ಅಂಗಿಯನ್ನು ತೊಟ್ಟುಕೊಂಡು, ಅಂಗವಸ್ತ್ರವನ್ನು ಹೆಗಲ ಮೇಲೇರಿಸಿ, ಎಕ್ಕಡ ಮೆಟ್ಟಿಕೊಂಡು ಅವರು ಮನೆಬಿಟ್ಟರು. ತೋಟದ ಕಡೆಗೆ ನಡೆದರು. ಮಾದ ಎದ್ದಂತೆ ಕಾಣಿಸಲಿಲ್ಲ [ಮುನಿಯನನ್ನು ಮಣ್ಣು ಮಾಡುವ ಕೆಲಸ ಮುಗಿಸಿ ತಡವಾಗಿ ಆತ ಹಟ್ಟಿಗೆ ಮರಳಿರಬೇಕು]. ತೋಟವನ್ನು ಬಿಟ್ಟು ಗೌಡರು ಹೊಲಗಳತ್ತ ತಿರುಗಿದರು. ಅರುಣೋದಯದ ಫಲವಾಗಿ ದೂರದಲ್ಲಿ ಮೂಡಲು ರಕ್ತರಂಜಿತವಾಗಿತ್ತು. ಏರಿಯ ಮೇಲೆ ಹೆಜ್ಜೆ ಹಾಕಿದರು. ನೀರ ಕಾಲುವೆ ದಾಟಿ, ನದಿಯತ್ತ ಹೊರಳಿದರು.

ಬೇಸಗೆಯಲ್ಲಿ ಬಡವಾಗಿ ಕಿರಿದಾಗಿ ಹರಿಯುತ್ತಿದ್ದ ಹೊಳೆ. ನದೀ ಪಾತ್ರ ತುಂಬ ಬಿಳಿಯ ಮರಳು. ಮೇಲು ದಿಕ್ಕಿನಲ್ಲಿ ನದಿಯ ದಡವನ್ನು ತಲಪಿದ ಗೌಡರು ಹೊಳೆಯುದ್ದಕ್ಕೂ ಕೆಳಕ್ಕೆ ದೃಷ್ಟಿ ಹಾಯಿಸಿದರು. ಮನುಷ್ಯರ ಮಾತಿನ ಧ್ವನಿ ಕೇಳಿಸಿತು. ['ಹಳ್ಳಿಯವರೆದ್ದಿದಾರೆ. ನೀರು ಒಯ್ಯುತ್ತಿರಬೇಕು !'] ಬೀಸುತ್ತಿದ್ದ ತಣುಪು ಗಾಳಿಗೆ ಮೈಯೊಡ್ಡಿ ಗೌಡರು ನಿಂತಲ್ಲೆ ನಿಂತರು.

ಹಿಂದಿನ ದಿನ ಮುನಿಯನನ್ನು ಕೊಲೆ ಮಾಡಿದ್ದರು. ಧೂರ್ತ ಹುಡುಗನೊಬ್ಬ ತಮ್ಮ ಮಗಳ ಅಪಕ್ವ ಮನಸ್ಸಿನ ಲಾಭ ಪಡೆಯಲೆತ್ನಿಸಿದ್ದ. ಆದರೂ ಕಣಿವೇಹಳ್ಳಿಯ ವಾತಾವರಣ ಪ್ರಶಾಂತವಾಗಿತ್ತು. ಇರುಳು ಕಳೆದು ಬೆಳಗಾದೊಡನೆಯೇ ನಿತ್ಯ ವ್ಯಾಪಾರದಲ್ಲಿ ಹಳ್ಳಿ ಮತ್ತೆ ನಿರತವಾಗಿತ್ತು....

....ಗೌಡರು ದೇಹಬಾಧೆ ತೀರಿಸಿಕೊಂಡರು. ಹರಿಯುತ್ತಿದ್ದ ನೀರನ್ನು ಅಂಗೈಗಳಿಂದ ಎತ್ತಿ ಮುಖಕ್ಕೆ ಎರಚಿ ಬರಿಯ ಬೆರಳಿನಿಂದ ಹಲ್ಲುಜ್ಜಿ ಮುಖ ಮಾರ್ಜನ ಮಾಡಿದರು.

ನಶಿಸಿದ್ದ ಚೇತನ ಅಂಗಾಂಗಗಳಲ್ಲಿ ಪುನಃ ಪ್ರವಹಿಸಿದಂತಾಯಿತು.

—ಸಂಕಟ ಬಂತೆಂದು ಅಧೀರರಾಗುವುದುಂಟೆ ?

—ಆಗಬಾರದ್ದು ಆಗಿ ಹೋಯಿತು. ಇದು ಬದಲಾದ ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಸ್ಥೈರ್ಯದಿಂದ ಎದುರಿಸಬೇಕು.

ಚೇತೋಹಾರಿಯಾಗಿದ್ದ ಗಾಳಿಯನ್ನು ಶ್ವಾಸಕೋಶಗಳಲ್ಲಿ ತುಂಬಿಕೊಂಡು ಶಾಮೇಗೌಡರು ಗೃಹಾಭಿಮುಖವಾಗಿ ನಡೆದರು.

....ಮನೆಯಲ್ಲಿ ರಂಗಣ್ಣನಾಗಲೇ ಎದ್ದಿದ್ದ. ಬಿನಾಕಾ ಟೂತ್‌ಪೇಸ್ಟಿನಿಂದ ದಂತ ಪಂಕ್ತಿಗಳನ್ನು ತಿಕ್ಕಿ ಮುಖ ತೊಳೆದುಕೊಂಡಿದ್ದ.

ಈ ಕೆಲ ವರ್ಷಗಳಲ್ಲಿ ಮನೆಯಲ್ಲಿ ಕಾಫಿ ರೂಢಿಯಾಗಿತ್ತು. ನಾಗಮ್ಮ ದೋಸೆ ಹುಯ್ಯಬೇಕು.

ಆದರೆ ಈ ದಿನ ಪ್ರತಿಯೊಂದೂ ಸ್ವಲ್ಪ ನಿಧಾನ.

ರಂಗಣ್ಣ ತಂಗಿಯ ಕೊಠಡಿಗೆ ಹೋದ. ಅಣ್ಣನ ದೃಷ್ಟಿಯನ್ನು ಸಂಧಿಸಿದೊಡನೆಯೇ ಸುಭದ್ರೆ ಮಗ್ಗುಲಿಗೆ ಮುಖ ತಿರುಗಿಸಿದಳು.

ತಂಗಿಯ ಕಣ್ಣುಗಳಲ್ಲಿ ತಿರಸ್ಕಾರದ ನೋಟವನ್ನು ರಂಗಣ್ಣ ಗುರುತಿಸಿದ. ಅವನಿಗೆ ಸಿಟ್ಟು ಬಂತು. ಹಿಡಿದ ಅಡ್ಡ ದಾರಿಯನ್ನೇ ಮುಂದೆಯೂ ತುಳಿಯುವೆ ಎಂದು ಆಕೆ ಭಾವಿಸಿದ್ದರೆ ಅದು ಭ್ರಮೆ. ಅಣ್ಣನಾದವನು ಏನು ತಪ್ಪು ಮಾಡಿದ ಅಂತ ವೈರಿಯ ಹಾಗೆ ಅವನನ್ನು ಕಾಣಬೇಕು?

"ಸುಬ್ಬೀ...."

ತಾನಾಗಿಯೇ ರಂಗಣ್ಣನ ಬಾಯಿಯಿಂದ ಆ ಶಬ್ದ ಹೊರಬಿತ್ತು.

ಸುಭದ್ರೆ ಹಾಂ ಎನ್ನಲಿಲ್ಲ, ಹೂಂ ಎನ್ನಲಿಲ್ಲ.

ರಂಗಣ್ಣ ಮಂಡಿಯೂರಿ ಆಕೆಯ ಅಂಗೈಯನ್ನು ಮುಟ್ಟಿದ. ಕೊಸರಿಕೊಳ್ಳಲು ಅವಳು ಯತ್ನಿಸಿದಳು. ಆದರೆ ಅವಳ ತೋಳಿಗೆ ಅಷ್ಟು ಶಕ್ತಿ ಇರಲಿಲ್ಲ. ಮಣಿಗಂಟು ಹಿಡಿದು ನಾಡಿ ಬಡಿತವನ್ನು ಪರೀಕ್ಷಿಸಿದ. [ಡಾಕ್ಟರುಗಳು ಮಾಡುವುದು ಹೀಗೆ.] ಮೈಯಂತೂ ಬೆಚ್ಚಗಿತ್ತು.

ತಂಗಿಯ ಕೈಯನ್ನು ರಂಗಣ್ಣ ಬಿಟ್ಟ. ಅವಳನ್ನು ಮತ್ತೆ ಮಾತನಾಡಿಸುವ ಗೊಡವೆಗೆ ಹೋಗಲಿಲ್ಲ.

ಕೊಠಡಿ ಬಿಟ್ಟು ಪಡಸಾಲೆಗೆ ಬಂದ.

ಅಲ್ಲಿ ನಾಗಮ್ಮ ಅವನಿಗೆ ಎದುರಾದರು.

"ಕಾಫಿ ಆಯ್ತು. ಕುಡ್ಕೊಂಡು ಅಯ್ನೋರ ಮನೆಗೆ ಓಗ್ಬಾ, ಮೊಗ," ಎಂದರು ಆಕೆ.

ಮುಂದಿನ ಅನಿವಾರ್ಯ ಸಂಭಾಷಣೆಗೆ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿದ್ದ ರಂಗಣ್ಣ ಕೇಳಿದ:

"ಯಾಕೆ ಅತ್ತೆಮ್ಮ?"

ಅವರಿಗೆ ಆಶ್ಚರ್ಯವಾಯಿತು.

"ಯಾಕೆ ? ಸುಬ್ಬಿಗೆ ಅವುಸದಿ ತರೋದು ಬೇಡವಾ ?"

"ಔಷಧಿ? ಅಲ್ಲಿಂದ ? ಅವರೇನು ಡಾಕ್ಟರಾ ?"

"ಇದೇನು ಮೊಗ ಇಂಗಂತೀಯಾ. ನಮ್ಮ ಅಳ್ಳಿಯಾಗೆ ಅವುಸದಿ ಇನ್ನ್ಯಾರು ಕೊಡ್ತಾರೆ ?"

"ರೋಗ ಪರೀಕ್ಷೆ ಮಾಡೋಕೆ ತಿಳೀದೋರಿಂದ ಔಷಧಿ ತಗೋಬಾರ್ದು ಅತ್ತೆಮ್ಮ...,"

ನಾಗಮ್ಮ ಅವಾಕ್ಕಾದರು. ತೆರೆದ ಬಾಯಿಯನ್ನೂ ತೆರೆದ ಕಣ್ಣುಗಳನ್ನೂ ಒಂದು ಕ್ಷಣ ಅವರು ಮುಚ್ಚದೇಹೋದರು.

"ರಂಗ, ಇಂಥಾ ಇಚಾರ ನನಗೆ ಒಸದು. ಇಸ್ಟು ವರ್ಸ ದೊಡ್ಡಮ್ಮನೋರೆ ಅಲ್ವಾ ಅವುಸದಿ ಕೊಟ್ಟಿದ್ದು? ನಿನಗೆ ಕಾಯಿಲೆ ಕಸಾಲೆ ಆದಾಗ್ಲೂ ಅವರೇ ಅಲ್ಲವಾ ನೋಡ್ಕೊಂಡಿದ್ದು?"

"ಇರಬೌದು, ಅತ್ತೆಮ್ಮ. ಗತಿ ಇಲ್ದೆ ಅಲ್ಲಿಗೆ ಓಗ್ತಿದ್ವಿ. ಈಗ—"

"ಈಗ ?"

"ನಾನು ಡಾಕ್ಟರ್ ಪರೀಕ್ಷೆಗೆ ಓದ್ತಿರೋದು ನಿಮಗೆ ಗೊತ್ತಿಲ್ವ, ಅತ್ತೆಮ್ಮ ?"

"ಗೊತ್ತೈತೆ, ಮೊಗ."

ಏನು ಗೊತ್ತಿತ್ತೋ ಏನು ಗೊತ್ತಿರಲಿಲ್ಲವೋ. ತಮ್ಮಿಂದೇನೋ ತಪ್ಪಾಗಿದೆ ಎಂಬ ಭಾವವಿತ್ತು ನಾಗಮ್ಮನವರ ಧ್ವನಿಯಲ್ಲಿ.

ಆ ಕ್ಷಣದಲ್ಲಿ ರಂಗಣ್ಣನ ಆತ್ಮವಿಶ್ವಾಸ ದ್ವಿಗುಣಿತವಾಯಿತು.

ಅವನೆಂದ:

"ಇನ್ನು ಈ ಮನೇಲಿ ಏನ್ ಖಾಯಿಲೆ ಬಂದ್ರೂ ನಾನೇ ನೋಡ್ಕೋತೀನಿ, ಅತ್ತೆಮ್ಮ."

ತಗ್ಗಿದ ಸ್ವರದಲ್ಲಿ ನಾಗಮ್ಮ ಅಂದರು:

"ಅಂಗೇ ಆಗಲಪ್ಪ."

ಹಾಗೆ ಹೇಳಿದರೇನೋ ನಿಜ. ಆದರೆ ಸದ್ಯದ ಜ್ವರಕ್ಕೆ ಏನು ಮಾಡ್ತೀಯಾ ?—ಎಂದು ಕೇಳಬೇಕೆನಿಸಿತು. ಅಷ್ಟರಲ್ಲಿ ಗೌಡರು ಬಂದರು. ದೋಸೆ ಹುಯ್ಯಲೆಂದು ನಾಗಮ್ಮ ಒಳಕ್ಕೆ ಹೋದರು.

ಅತ್ತೆಯೊಡನೆ ಮಾತನಾಡಿದ ಠೀವಿಯಲ್ಲೇ ರಂಗಣ್ಣ ತಂದೆಯೊಡನೆ ಔಷಧಿಯ ಪ್ರಸ್ತಾಪ ಮಾಡಿದ.

"ನಾನು ನಗರಕ್ಕೆ ಓಗ್ಬರ್ತೀನಿ, ಅಪ್ಪ."

ಅಂಗವಸ್ತ್ರವನ್ನು ಗೂಟಕ್ಕೆ ತೂಗಹಾಕಿ, ಗೌಡರು ಕೇಳಿದರು :

"ಯಾಕೆ? ಸುಬ್ಬಿಗೆ ಜ್ವರ ಅಂತಾಳೆ ನಾಗೂ. ಮನೇಲೆ ಇರೋದು ಮೇಲಲ್ವ ?"

"ಜ್ವರಕ್ಕೆ ಔಷಧಿ ತಕಂಬರ್ತೀನಿ."

"ನಗರದಿಂದ್ಲೆ ?"

"ಹೂಂ ಅಪ್ಪ, ಅಲ್ಲಿ ನನ್ನ ಪ್ರೊಫೆಸರಿದ್ದಾರೆ—ಡಾಕ್ಟ್ರು. ಯಾವ ಔಷಧಿ ಅಂತ ಅವರ್ನ ಕೇಳಿ, ಕೊಂಡ್ಕೊಂಡು ಬರ್ತೀನಿ."

"ಈಗ ಓದ್ರೆ ನೀನು ಬರೋದು ರಾತ್ರಿಗೇ ಅನ್ನು."

"ಇಲ್ಲಪ್ಪ. ಸಾಯಂಕಾಲ ನಾಲ್ಕು ಗಂಟೆಯೊಳಗೆ ಬಂದ್ಬಿಡ್ತೌದು."

"ಅಷ್ಟರ ತನಕ ಸುಬ್ಬಿಗೆ ಏನೂ ಕೊಡೋದು ಬೇಡ ಅಂತಲೊ?"

"ಏನೂ ಬೇಡ. ಈಗ ಜ್ವರ ಅಷ್ಟಿಲ್ಲ. ಸಾಯಂಕಾಲದೊಳಗೆ ಹೇಗೂ ಔಷಧಿ ಕೊಟ್ಟೇ

ಕೊಡ್ತೀವೆ."

"ಸರಿ. ದುಡ್ಡು ಇಟ್ಕೊಂಡಿರು. ಎಷ್ಟುರೂಪಾಯಿ ಆಗಬೌದು ಅವುಸದಿಗೆ?"

"ಗೊತ್ತಿಲ್ಲಪ್ಪ. ಬಸ್‌ಚಾರ್ಜ್ ಅಲ್ದೆ ಒಂದ್ಹತ್ತೂರುಪಾಯಿ ತಕ್ಕಂಡಿರ್‍ತೀನಿ."

"ಅಂಗೇ ಮಾಡು. ಬರೀ ಒಟ್ಟೇಲಿ ಓಗ್ಬೇಡ. ಒಳಗೆ ಏನಾದರೂ ಆಗಿದ್ರೆ ತಿಂದ್ಕಂಡೋಗು. ರಸ್ತೆಗಂಟ ಕರಿಯ ಜತೆಗಿರ್‍ಲಿ."

"ಕರಿಯ ಯಾತಕ್ಕೆ? ಒಬ್ನೇ ಹೋಗ್ತೀನಿ."

ಗೌಡರ ಮೂಗು ಹೌದೋ ಅಲ್ಲವೋ ಎನ್ನುವಂತೆ ಕುಣಿಯಿತು.

"ಯೋಳಿದ್ದು ಕೇಳು, ರಂಗ."

"ಹೂಂ, ಅಪ್ಪ."

ಹದಿನೈದು ನಿಮಿಷಗಳಲ್ಲಿ ರಂಗಣ್ಣ ಸಿದ್ಧನಾದ. ಅಂಗಳದಲ್ಲಿ ಕರಿಯ ಚಿಕ್ಕ ಒಡೆಯನ ದಾರಿ ನೋಡಿದ.

ಗೌಡರು ಪಲ್ಲಂಗದ ಮೇಲೆ ಕುಳಿತೇ ಮಗನನ್ನು ಬೀಳ್ಕೊಟ್ಟರು.

ರಂಗನೆಂದ:

"ಮೂರು ಘಂಟೆಗೆ ಕರಿಯನನ್ನ ರಸ್ತೆಗೆ ಕಳಿಸ್ಕೊಡಿ. ಬರುವಾಗ ಸಾಮಾನು ಗೀಮಾನು—"

"ಹ್ಞಾ—ಹ್ಞಾ...... ಕಳಿಸೋವ," ಎಂದರು ಗೌಡರು.

ರಂಗಣ್ಣ ಹೋದ ಬಳಿಕ ಗೌಡರು ಮೆಲ್ಲನೆದ್ದು ಗೋಡೆಯ ಗೂಟದ ಕಡೆಗೆ ನಡೆದರು. ಅವರಂತೂ ಬೆಳಗ್ಗಿನ ವೇಳೆ ತಿಂಡಿ ತೀರ್ಥ ಮುಟ್ಟುವ ಅಭ್ಯಾಸದವರಲ್ಲ. ಕಪ್ಪು ಬಣ್ಣದ ಕೋಟು ಧರಿಸಿದರು. ರುಮಾಲನ್ನು ತಲೆಗೆ ಸುತ್ತಿದರು.

ನೋಟವೆಲ್ಲ ಪ್ರಶ್ನಾರ್ಥಕ ಚಿಹ್ನವಾಗಿ ಒಳಬಾಗಿಲಲ್ಲಿ ನಿಂತ ನಾಗಮ್ಮನವರನ್ನು ಉದ್ದೇಶಿಸಿ, "ಬರ್‍ತೀನಿ ಈಗ," ಎಂದರು.

ನಾಗಮ್ಮ ತಲೆಬಾಗಿಲವರೆಗೂ ಅಣ್ಣನನ್ನು ಹಿಂಬಾಲಿಸಿದರು.

ರಂಗಣ್ಣ ಅತ್ತೆಗೆ ಹೇಳದೆ ಹೊರಡುವವನಲ್ಲ ಎಲ್ಲಿಗೂ. ಆದರೆ ಈ ದಿನ ಅವಸರವಾಗಿ ಹೊರಟುಬಿಟ್ಟಿದ್ದ.

ನಾಗಮ್ಮ ಕೇಳಿದರು:

"ರಂಗ ಎಲ್ಲೋದ, ಅಣ್ಣ?"

"ನಗರಕ್ಕೆ. ಇವತ್ತೇ ಬಂದ್ಬಿಡ್ತಾನೆ."

ಅಳುಕುತ್ತ ಅಳುಕುತ್ತ ನಾಗಮ್ಮ ಕೇಳಿದರು:

"ನೀನು ಆಯ್ನೋರಲ್ಲಿಗೆ ಓಗ್ತಿದೀಯಾ?"

"ಹೂಂ, ಜಲ್ದಿ ಬಂದ್ಬಿಡ್ತೀನಿ. ಸುಬ್ಬೀನ ರವಷ್ಟು ನೋಡ್ಕೊ."

"ನೋಡ್ಕೋತೀನಣ್ಣ...."

ಅಣ್ಣ ಅಂಗಳ ದಾಟಿ ಹೋದ ಮೇಲೂ ನಾಗಮ್ಮ ಬಾಗಿಲಲ್ಲಿ ಕೆಲ ನಿಮಿಷ ಚೌಕಟ್ಟಿಗೊರಗಿ ನಿಂತರು. ಅವರಿಗನ್ನಿಸಿತು: ಯಾಕೊ ಸಪ್ಪಗಿದಾನಲ್ಲ ಅಣ್ಣ? ಮುನಿಯ ಸತ್ತ [ಕೊಲೆಯಾದ] ಕಾರಣದಿಂದ ಹೀಗೆ ಆಗಿರಬೇಕು. ಎಷ್ಟೆಂದರೂ ಪಟೇಲ, ಹಳ್ಳಿಗೆ ಹಿರಿಯ.

ಜವಾಬುದಾರಿಯ ಹೊರೆಹೊತ್ತ ಹೆಗಲು ಬಾಗುವುದು ಸ್ವಾಭಾವಿಕ. ಇಷ್ಟಿದ್ದೂ ಮಗಳಿಗಾಗಿ ಔಷಧಿ ತರಲೆಂದು ಅಯ್ಯನವರಲ್ಲಿಗೆ ಅಣ್ಣ ಹೋದುದು ದೊಡ್ಡ ವಿಷಯ.

ಹುಡುಗ ಹುಚ್ಚು ಹುಚ್ಚು ಮಾತುಗಳನ್ನೇನೋ ಆಡಿದನಲ್ಲ? ಇನ್ನು ಈ ಮನೇಲಿ ಕಾಯಿಲೆ ಏನ್ ಬಂದ್ರೂ ಅವನೇ ನೋಡ್ಕೋತಾನಂತೆ.... ಆಗಲಿ, ಆಗಲಿ. ಹಾಗೇ ಆಗಲಿ.... ಸದ್ಯಃ ಸುಬ್ಬಿಯ ಜ್ವರಕ್ಕೆ ದೊಡ್ಡಮ್ಮ ಇಷ್ಟು ಔಷಧಿ ಕೊಟ್ಟರೆ ಸಾಕು.

ಬಾಗಿಲು ಬಿಟ್ಟು ಪಡಸಾಲೆಯತ್ತ ಮರಳಿದ ನಾಗಮ್ಮಗೆ ಸುಭದ್ರ ಮೆಲುದನಿಯಲ್ಲಿ ಕರೆದುದು ಕೇಳಿಸಿತು.

"ಅತ್ತೆಮ್ಮಾ, ಒಸಿ ಬನ್ನೀ...."

"ಬಂದೆ ಮೊಗ," ಎನ್ನುತ್ತ ನಾಗಮ್ಮ ಅತ್ತ ಹೋದರು.

....ಪಟೇಲ ಶಾಮೇಗೌಡರು ದಾರಿ ನಡೆದರು. ಮೇಲೇರುತ್ತಿದ್ದ ಸೂರ್ಯನ ತೀಕ್ಷ್ಣತೆ ಹೆಚ್ಚುತ್ತಲಿತ್ತು. ನಿನ್ನೆಯಂತೆಯೇ ಇವತ್ತೂ. ಇನ್ನು ಹೆಚ್ಚೆಂದರೆ ಎರಡು ವಾರ. ಮುಂಗಾರು ಮಳೆ ಆರಂಭವಾಗುವುದು. ಆಗ ಹೊಲದಲ್ಲಿ ಬಿಡುವಿಲ್ಲದ ಕೆಲಸ.

ಅಬ್ದುಲ್ಲ ಬಂದೊಡನೆ ಮುನಿಯನ ಹೊಲವನ್ನು ಅವನ ಹೆಂಗಸಿಗೆ ಕೊಡಿಸಿಬಿಡಬೇಕು. ಸಿದ್ಧಪ್ಪ ಹಣ ತೆಗೆದುಕೊಂಡು ಹೊರಟುಬಿಟ್ಟುದರಿಂದ ಇಷ್ಟೆಲ್ಲ ಅನರ್ಥವಾಯಿತು. ಅಬ್ದುಲ್ಲನನ್ನು ಒಕ್ಕಲೆಬ್ಬಿಸಿ, ಜಮೀನನ್ನು ತೆರವು ಮಾಡಿಸಿ, ಮುನಿಯನ ವಶಕ್ಕೆ ಕೊಟ್ಟು ಹೋಗಬೇಕಿತ್ತು ಆತ. ತಾವಾಗಲೀ ಹಳ್ಳಿಯ ಇತರ ಪ್ರಮುಖರಾಗಲೀ ಆ ಬಗ್ಗೆ ಏನೂ ಆಸಕ್ತಿ ವಹಿಸಲಿಲ್ಲ ಎಂಬುದು ನಿಜ. ಪ್ರಾಯಶಃ ಮುನಿಯನಿಗೆ ಆಗಲೇ ನ್ಯಾಯ ದೊರಕಿಸಿ ಕೊಟ್ಟಿದ್ದರೆ ಅವನ ಪ್ರಾಣ ಉಳಿಯುತ್ತಿತ್ತೋ ಏನೊ. ಅದೇನಿದ್ದರೂ ಇಡಿಯ ಹಳ್ಳಿಯನ್ನು ಎದುರುಹಾಕಿಕೊಂಡು, ಹೊಲ ಕೊಳ್ಳಲು ಹೋದುದು ಮುನಿಯನ ತಪ್ಪು.

ಇದರಲ್ಲಿ ಗೋವಿಂದ ಮುನಿಯನಿಗೆ ಸ್ವಲ್ಪ ನೆರವಾದ. ಸಂಶಯವಿಲ್ಲ. ಬಡಗಿ ಅದೇನೋ ಮಾಡಿದನಲ್ಲ. ಹಾಗೆ. ಏನಾದರೂ ಉದ್ಯೋಗ ಕೈಗೊಂಡು ತನ್ನಷ್ಟಕ್ಕೆ ತಾನಿರಬಾರದೆ ಗೋವಿಂದ ?

ಶ್ರೀನಿವಾಸಯ್ಯನ ಮನೆ ಬಂತು. ['ನಾನು ಮಾತನಾಡಲೇಬೇಕಾದ ಘಳಿಗೆ ಇದೊಳ್ಳೆಯ ಪೀಕಲಾಟ !']

ಅಂಗಳದಲ್ಲಿ ಮಲಗಿದ್ದ ಕಂತ್ರಿನಾಯಿ ಎದ್ದು ಒಮ್ಮೆ ಬಗುಳಿತು. ಅಷ್ಟೆ ತನ್ನ ಕೆಲಸ ಎಂದು, ಮುದುಡಿಕೊಂಡು ನಿದ್ದೆ ಹೋಯಿತು.

ನಾಯಿ ಬಗುಳಿದುದನ್ನು ಕೇಳಿದ ದೊಡ್ಡಮ್ಮ ಮನೆ ಬಾಗಿಲಲ್ಲಿ ಕಾಣಿಸಿಕೊಂಡರು. ಅಲ್ಲೆ ನಿಂತಿದ್ದ ಗೌಡರನ್ನು ನೋಡಿ, "ಯಾರು ಶಾಮಣ್ಣನಾ? ಬಾ, ಕೂತ್ಕೋ, ಏನು ಇಷ್ಟೊಂದು ವಿರಾಮವಾಗಿ ಬಂದೆ?" ಎಂದರು.

ಗೌಡರು ಸ್ವಲ್ಪವಷ್ಟೇ ಮಂದಸ್ಮಿತರಾಗಿ, "ಅಯ್ಯನೋರತ್ರ ಒಸಿ ಮಾತಾಡ್ಬೇಕಾಗಿತ್ತು" ಎಂದರು.

"ಸ್ನಾನ ಮಾಡ್ತಿದಾನೆ, ಇಷ್ಟರಲ್ಲೇ ಬಂದ್ಬಿಡ್ತಾನೆ."

ಮಾತು ಗೀತೆಲ್ಲ ಮುನಿಯನ ವಿಚಾರವಾಗಿಯೇ ಎಂದು ಶ್ರೀನಿವಾಸಯ್ಯನ ತಾಯಿಯ ಊಹೆ. ಹೆಚ್ಚನ್ನು ತಿಳಿಯಲು ಗೌಡರನ್ನು ಅವರು ಕೆದಕಲಿಲ್ಲ. ಬದಲು, "ರಂಗಣ್ಣನನ್ನ

ನಿನ್ನೆ ನೋಡ್ದೆ. ಗುರ್ತೇ ಸಿಗದ ಹಾಗೆ ಬೆಳೆದ್ಬಿಟ್ಟಿದಾನೆ.... ಸುಭದ್ರೆ—ನಾಗಮ್ಮ ಚೆನ್ನಾಗಿ ದಾರಾ ?" ಎಂದು ಕೇಳಿದರು.

ಆ ವೃದ್ಧೆಯ ಮಾತುಗಳೋ ಪುಂಗೀನಾದ. ತಲೆ ಆಡಿಸಬೇಕೆ ಗೌಡರು ? ಅದಕ್ಕೆ ಅವರು ಸಿದ್ಧರಿರಲಿಲ್ಲ.

ಒತ್ತರಿಸಿ ಬಂದ ಉಗುಳನ್ನು ಗಂಟಲೊಳಕ್ಕೆ ಕೆಳಕ್ಕೆ, ತಳ್ಳಿ, "ಚೆಂದಾಕಿದಾರೆ," ಎಂದರು, ಜಗಲಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ.

ಅಗಲವಾದ ಜಗಲಿ. ಅಲ್ಲಿ ಒಂದು ಬೆಂಚೂ ಇತ್ತು. ಪಡಸಾಲೆಯಲ್ಲಿತ್ತು, ಶಾಮಣ್ಣ ಕುಳಿತಿದ್ದುದರ ಜೋಡಿ ಕುರ್ಚಿ. ಅಲ್ಲಿ ಪಲ್ಲಂಗವಿರಲಿಲ್ಲ. ಶಾಮೇಗೌಡರ ಮನೆಯಲ್ಲಾದರೆ ನೇಗಿಲುಗಳು ತೂಗಾಡುವ ದೃಶ್ಯ ಜಗಲಿಯಲ್ಲಿ. ಇಲ್ಲಿ ಅದಿಲ್ಲ. ಕೊಟ್ಟಿಗೆಯಲ್ಲೇ ನೇಗಿಲುಗಳಿಗೆ ಸ್ಥಾನ.

ಇದ್ದಕ್ಕಿದ್ದಂತೆ ಶಾಮಣ್ಣ ಮಿತಭಾಷಿಯಾದನಲ್ಲ ಎಂದು ಶ್ರೀನಿವಾಸಯ್ಯನವರ ತಾಯಿಗೆ ಸ್ವಲ್ಪ ಅಚ್ಚರಿ. ಹಾಗೆ ನೋಡಿದರೆ ಅವರ ಮನೆಯಲ್ಲೂ ನಿನ್ನೆಯ ಹಗಲಿನ ಹಾಗೆ ಇವತ್ತಿನ ಬೆಳಗು ಇರಲಿಲ್ಲ. ಗೋವಿಂದ ಸುಮ್ಮನೆ ಕಿರಿಚಾಡುತ್ತಿದ್ದ. ಪದ್ಮ ತುಟಿಪಿಟ್ಕೆನ್ನುತ್ತಿರಲಿಲ್ಲ. ಶ್ರೀನಿವಾಸಯ್ಯ ಇನ್ನೂ ಚೇತರಿಸಿಕೊಂಡಿರಲಿಲ್ಲ....

ಒಳಗೆ ಶ್ರೀನಿವಾಸಯ್ಯನವರ ಧ್ವನಿ ಕೇಳಿಸಿ ನಿಂತುಹೋಯಿತು.

ಅವರ ತಾಯಿ ಕರೆದು ಹೇಳಿದರು:

"ಶೀನಾ, ಶಾಮಣ್ಣ ಬಂದಿದಾನೇ."

ಅಷ್ಟು ಹೇಳಿ, ಕರೆಯ ಅಲೆಗಳನ್ನು ತಾವೂ ಹಿಂಬಾಲಿಸಿ, ಆಕೆ ಒಳ ಹೋದರು.

ಮುಂದೆ ಎರಡು ನಿಮಿಷಗಳಲ್ಲಿ, ಬೋಳು ತಲೆಯನ್ನೂ ಅದಕ್ಕೆ ಮೂರು ಕಡೆಗಳಿಂದ ಅಂಚಾಗಿ ನಿಂತಿದ್ದ ಬಿಳಿಗೂದಲನ್ನೂ ಅಂಗವಸ್ತ್ರದಿಂದ ತಿಕ್ಕುತ್ತ ಶ್ರೀನಿವಾಸಯ್ಯ ಬಂದರು. ನಡುವಿಗೆ ಅವರು ಸುತ್ತಿಕೊಂಡಿದ್ದುದು ತುಸು ದೊಡ್ಡದಾದ ಇನ್ನೊಂದು ಅಂಗವಸ್ತ್ರವನ್ನೇ.

ಜಗಲಿಯಲ್ಲಿ ಖಾಲಿ ಕುರ್ಚಿ ಇರದುದನ್ನು ಗಮನಿಸಿ, ಪಡಸಾಲೆಯಲ್ಲಿದ್ದುದನ್ನು ಎತ್ತಿ ತಂದಿರಿಸಿ, ಕುಳಿತು, ತಲೆಯ ನೀರೊರೆಸುವ ಕೆಲಸವನ್ನು ಶ್ರೀನಿವಾಸಯ್ಯ ಮುಂದುವರಿಸಿದರು.

ಇಂಥದೇ ಸನ್ನಿವೇಶದಲ್ಲಿ ಹಿಂದೆಯೂ ಅವರನ್ನು ಗೌಡರು ಕಂಡುದಿತ್ತು. ಆಗ ಒಂದೆರಡು ಸಲ ಗೆಳೆಯನನ್ನು ಕೀಟಲೆ ಮಾಡಿದ್ದರು.

"ಈ ಪಾಟಿ ತಿಕ್ಕಿದ್ರೆ ಇರೋ ಮೂರು ಕೂದಲೂ ಒಂಟೋಗ್ತವೆ ರಾಯರೇ."

ಸಲಿಗೆ ಎಂದಾಗ ಅಯ್ಯನವರು ರಾಯರಾಗುತ್ತಿದ್ದರು.

ಈ ದಿನ ಗೌಡರು ಆ ಮಾತನ್ನು ಆಡಲಿಲ್ಲ. ಅವರ ದೃಷ್ಟಿ ಶ್ರೀನಿವಾಸಯ್ಯನವರ ಕೂದಲು ಮುಚ್ಚಿದ್ದ ವಕ್ಷಸ್ಥಲದ ಮೇಲೂ ಒದ್ದೆ ಜನಿವಾರದ [ಅದಕ್ಕೆ ಬಿಗಿದಿದ್ದ ಬೀಗದ ಕೈಯ] ಮೇಲೂ ಅಲೆಯಿತು.

ಇಬ್ಬರೂ ಸುಮ್ಮನಿದ್ದರು. ಮೌನವಾಗಿ ಕುಳಿತಿರುವಷ್ಟು ಹಳೆಯದಾಗಿತ್ತು ಅವರ ಸ್ನೇಹ

ತಲೆಯ ಮೇಲೆ ನೀರಿನ ತೇವ ಉಳಿದಿಲ್ಲವೆಂಬುದು ಸ್ಪಷ್ಟವಾದ ಬಳಿಕ ಶ್ರೀನಿವಾಸಯ್ಯ

ಗೌಡರ ಕಡೆ ನೋಡಿ, "ಏನ್ಸಮಾಚಾರ? ವಿಶೇಷವೇನೂ ಇಲ್ಲ ತಾನೆ ?" ಎಂದರು.

"ಅಂಥಾದ್ದೇನೂ ಇಲ್ಲ," ಎಂದರು ಗೌಡರು.

"ಅಬ್ದುಲ್ಲನ್ನ ಈ ಊರಿಂದ ಕಳಿಸ್ಬಿಟ್ರೆ ವಾಸಿಯೇನೊ ?"

"ಸದ್ಯ ಬ್ಯಾಡಿ."

"ಮತ್ತೆ ಹೊಲ?"

"ಮುನಿಯನ ಎಂಡತಿಗೆ ಕೊಡಿಸ್ಬಿಡಾನ. ಸ್ವಲ್ಪ ಸಮಯ ಇಲ್ಲೇ ಎಲ್ಲಾದರೂ ಅಬ್ದುಲ್ಲ ಕೆಲಸ ಮಾಡ್ತಿರ್ಲಿ. ಆಮ್ಯಾಕೆ ಯಾವುದಾದರೂ ಪರವೂರಿಗೆ ಒಂಟೋಗ್ಲಿ."

"ಸರಿ. ಮುನಿಯ ಸತ್ತ ವಿಷಯದಲ್ಲಿ ಯಾರಿಗೂ ಸಂಶಯ–"

"ಎಲಾ ! ನೀವೂ ಗೋವಿಂದನ ಹಾಗೆ ಮಾತಾಡ್ತೀರಲ್ಲ."

"ಏನೆಂದ ಗೋವಿಂದ?"

"ಪೋಲೀಸರಿಗೆ ಕಂಪ್ಲೇಂಟು ಕೊಡೋದು ಒಳ್ಳೇದು ಅಂತ."

"ಛೆ ! ಛೆ ! ಶುದ್ಧ ತಲೆಹರಟೆ."

"ಆಗಂತ ಇನ್ನೊಂದ್ಸಲಿ ಅನ್ನಿ. ನೋಡಿ, ಹದ್ದು ಮೀರಿ ಓಗ್ತಾನೆ. ಅಂಕೆ ತಪ್ಪಿದ ಮ್ಯಾಕೆ ಕಪಿ ಲಂಕೇನ ಸುಡ್ತು. ಅಂಗಾಗ್ಬಾರ್ದು."

ಮಗ ಗೋವಿಂದನನ್ನು ಕುರಿತ ಟೀಕೆಯಿಂದಲ್ಲ, ಆ ಪದಗಳಲ್ಲಿ ಕಂಡುಬಂದ ಉದ್ವೇಗದಿಂದ ಶ್ರೀನಿವಾಸಯ್ಯ ಚಕಿತರಾದರು. ಸಾಲದುದಕ್ಕೆ ಗೌಡರ ಮನಸ್ಸಿನ ಕಹಿಗೆ ಅವರ ಮುಖ ಕನ್ನಡಿ ಹಿಡಿದಿತ್ತು.

ಶ್ರೀನಿವಾಸಯ್ಯ ಅಂದರು:

"ನಾನು ಅವನಿಗೆ ಬುದ್ಧಿ ಹೇಳ್ತೀನಿ."

ಪದ್ಮನಾಭನ ಬಗೆಗೆ ಹೇಳಲು ಬಂದಿದ್ದ ಗೌಡರು ಗೋವಿಂದನನ್ನು ಕುರಿತು ಆಡಿದ್ದರು. ಶ್ರೀನಿವಾಸಯ್ಯ ಮಗನನ್ನು ಬಯ್ದರೆಂದು ಸಿಟ್ಟಾಗಿರಲಿಲ್ಲ. ಸಾತ್ವಿಕ ಮನುಷ್ಯ. 'ಬುದ್ಧಿ ಹೇಳ್ತೀನಿ' ಎಂದಿದ್ದರು.

ಗೌಡರು ನಿಟ್ಟುಸಿರುಬಿಟ್ಟರು. ಥಟ್ಟನೆ ಎದ್ದು, "ಬರ್ತೀನಿ," ಎಂದರು.

ಶ್ರೀನಿವಾಸಯ್ಯನೂ ಎದ್ದರು,

ಅಷ್ಟರಲ್ಲಿ ಪಡಸಾಲೆಯನ್ನು ಹಾದು ಪದ್ಮನಾಭ ಅಡುಗೆ ಮನೆಗೆ ಹೋದುದು ಗೌಡರಿಗೆ ಕಾಣಿಸಿತು.

ಅಂಗಳಕ್ಕಿಳಿದು ನಿಂತು, ತಮ್ಮನ್ನು ಹಿಂಬಾಲಿಸಿ ಬಂದು ಮೆಟ್ಟಿಲ ಮೇಲಿದ್ದ ಶ್ರೀನಿವಾಸಯ್ಯ ನವರಿಗೆ ಗೌಡರೆಂದರು:

"ಇನ್ನೊಂದು ಇಸ್ಯ. ನಿಮ್ಮ ಕಿರೇ ಮಗ ಪದ್ಮ ಇನ್ನು ನಮ್ಮಲ್ಲಿಗೆ ಬರಬಾರ್ದು. ಪ್ಯಾಟೇಲಿ ಕಲಿತದ್ದನ್ನ ಅಳ್ಳೀಲಿ ಬಿಚ್ಚೋದೆ ?"

ಶ್ರೀನಿವಾಸಯ್ಯ ದಂಗಾದರು.

"ಶಾಮಣ್ಣ ! ಏನು ಹಂಗಂದ್ರೆ ? ಪದ್ಮ ಏನ್ಮಾಡ್ದ ?"

"ಏನು ಮಾಡಿದ್ನೋ ಏನು ಬಿಟ್ನೋ....ದೇವರು ನೋಡ್ಕಂತಾನೆ. ಬೆಳೆದ ಉಡುಗರ್ನ ಅದ್ದು ಬಸ್ಸಿನಲ್ಲಿ ಮಡಗೋದು ಕಸ್ಟ. ಸ್ವಲ್ಪ ಉಸಾರಾಗಿ ನೋಡ್ಕಳ್ಳಿ."

ಇಷ್ಟು ಹೇಳಿ ಗೌಡರು ಧಡಧಡನೆ ಹೊರಟು ಹೋದರು.

ಶಿಲಾ ವಿಗ್ರಹವಾಗಿದ್ದರು ಶ್ರೀನಿವಾಸಯ್ಯ. ದೂರಹೋಗುತ್ತಲಿದ್ದ ಶಾಮೇಗೌಡರನ್ನು ಎವೆಮುಚ್ಚದೆ ಅವರು ದಿಟ್ಟಿಸಿದರು.

ಗೌಡರು ಅಂಗಳ ದಾಟುತ್ತಿದ್ದಂತೆ ಶ್ರೀನಿವಾಸಯ್ಯನವರ ಗಂಟಲು ಗೊರಗೊರ ಎಂದಿತು.

ಒಡೆದ ಧ್ವನಿಯಲ್ಲಿ ಅವರು ಕೂಗಿ ಕರೆದರು:

"ಶಾಮಣ್ಣಾ! ಶಾಮಣ್ಣಾ!"

ಕೇಳಿಯೂ ಕೇಳಿಸದವರಂತೆ ಶಾಮೇಗೌಡರು ಮುಂದಕ್ಕೆ ನಡೆದರು.

ಅವರ ಆಕೃತಿ ಕಿರಿದಾಗುವವರೆಗೂ ನಿಂತಲ್ಲೆ ನಿಂತಿದ್ದು, ಬಳಿಕ ಒಳದಿಕ್ಕಿಗೆ ಮುಖ ಮಾಡಿ, ಏರುತ್ತಲಿದ್ದ ಸ್ವರದಲ್ಲಿ ಶ್ರೀನಿವಾಸಯ್ಯ ಕರೆದರು:

"ಪದ್ಮಾ ! ಏ ಪದ್ಮನಾಭಾ ! "

## ೬

ರಂಗಣ್ಣ ಮೋಟಾರು ರಸ್ತೆಯನ್ನು ತಲಪಿದಾಗ ಘಂಟೆ ಹತ್ತಾಗಿತ್ತು. ಸೋಮಪುರದಿಂದ ಭಾಗ್ಯನಗರಕ್ಕೆ ಹೋಗುವ ಬಸ್ಸು ಆ ದಾರಿಯಾಗಿ ಬರುವುದು ಹತ್ತೂವರೆ ಗಂಟೆಗೆ. ನಡಿಗೆ ನಿಧಾನವಾದರೆ ಬಸ್ಸು ತಪ್ಪಿ ಹೋದೀತೆಂದು ಬೇಗಬೇಗನೆ ಹೆಜ್ಜೆ ಇರಿಸಿದ್ದ ರಂಗಣ್ಣ. ಚಿಕ್ಕ ಒಡೆಯನ ಭೆಂಗಾವಲಿಗೆಂದು ಬಂದಿದ್ದ ಕರಿಯ, ರಂಗಣ್ಣನ ಬೆನ್ನ ಹಿಂದಿನಿಂದ ಸ್ವಲ್ಪ ದೂರ ನಡೆಯುತ್ತ ಸ್ವಲ್ಪ ದೂರ ಓಡುತ್ತ ಬರಬೇಕಾಯಿತು.

ಮಾರ್ಗದ ಬದಿಯಲ್ಲೊಂದು ಆಲದ ಮರ. ಅದರ ಕೆಳಗಿತ್ತು ಇಪ್ಪತ್ತೆಂಟನೆಯ ಮೈಲಿಕಲ್ಲು. ರಸ್ತೆ ಎತ್ತರಕ್ಕಿತ್ತು. ತಿರುವು ಬೇರೆ. ಅರ್ಧ ಫರ್ಲಾಂಗಿನುದ್ದಕ್ಕೂ ಕಲ್ಲಿನ ಅಂಚು ಗೂಟಗಳನ್ನು ಹೂತಿದ್ದರು. ಬಸ್ಸಿಗಾಗಿ ಕಾಯಬೇಕಾದ ಪ್ರಸಂಗ ಬಂದಾಗ, ಪ್ರಯಾಣಕ್ಕೆಂದು ಕಣಿವೇಹಳ್ಳಿಯಿಂದ ಎಂದಾದರೊಮ್ಮೆ ಬರುತ್ತಿದ್ದವರು ಆ ಕಲ್ಲುಗಳ ಮೇಲೆ ಆಸೀನರಾಗಿ ವಿಶ್ರಾಂತಿ ಪಡೆಯುತ್ತಿದ್ದರು.

ಅಂತಹದೊಂದು ಕಲ್ಲಿನ ಮೇಲೆ ಕುಳಿತು ರಂಗಣ್ಣನೆಂದ:

"ಇನ್ನು ಹೋಗು, ಕರಿಯ."

ಕರಿಯನ ತಲೆಯ ಮೇಲೆ ರುಮಾಲಿನಂತೆ ಸುತ್ತಿದ್ದ ಅಂಗವಸ್ತ್ರವಿತ್ತು. ಹೆಬ್ಬೆರಳನ್ನು ಅದರೊಳಕ್ಕೆ ತುರುಕಿ ಕರಿಯ ತಲೆ ತುರಿಸಿಕೊಂಡ.

"ಬಸ್ಸು ಅತ್ತಿಸಿ ಓತೀನಿ," ಎಂದ ಆತ.

"ಅಂಗೇ ಮಾಡು."

ರಂಗಣ್ಣ ಕೈಗಡಿಯಾರ ನೋಡಿದ. ಇನ್ನು ಇಪ್ಪತ್ತೈದು ನಿಮಿಷ. ಹೆಚ್ಚೆಂದರೆ ಮತ್ತೂ ಹತ್ತು ನಿಮಿಷ.

ಕರಿಯನಿಗಾದರೋ ಬಸ್ಸು ನೋಡುವ ಆಸೆ. ಅಲ್ಲದೆ ಬಸ್ಸು ಕಾಣಿಸಿದೊಡನೆ ಚಿಕ್ಕ ಗೌಡರು ಅವನ ಕೈಗೆ ಪುಡಿಕಾಸು ಹಾಕುವುದು ಕಳೆದ ಎರಡು ವರ್ಷಗಳಿಂದ ನಡೆದುಬಂದಿರುವ

ಪದ್ಧತಿ. ಆ ಕಾಸು ಮುಂದೆ ಸಂದಾಯವಾಗುವುದು ವೆಂಕಟಪ್ಪನಿಗೆ, ಬೀಡಿ ಕೊಳ್ಳುವುದ ಕ್ಕೋಸ್ಕರ.

ಸೆಖೆ ಎಂದು ಕೋಟು ತೊಡದೆ ಬುಶ್ ಶರಟು ಧರಿಸಿದ್ದ ರಂಗಣ್ಣ. ಪ್ಯಾಂಟಿನ ಜೇಬಿನಿಂದ ಸಿಗರೇಟು ಪ್ಯಾಕೆಟನ್ನೂ ಬೆಂಕಿಪೊಟ್ಟಣವನ್ನೂ ಹೊರತೆಗೆದು ಒಂದನ್ನು ಆತ ಹಚ್ಚಿದ.

ಕಣಿವೇಹಳ್ಳಿಯಿಂದ ನಡೆದು ಬರುತ್ತಿದ್ದಾಗ ಕರಿಯ ಮುನಿಯನ ಮರಣದ ಬಗೆಗೆ ಮಾತನಾಡಿದ್ದ. ದೆವ್ವ ಬಡಿದು ಮುನಿಯ ಸತ್ತನೆಂಬುದನ್ನು ತೋರಿಕೆಗೆ ಕರಿಯ ಒಪ್ಪಿದ್ದ ನಾದರೂ ಹೊಲಕ್ಕೆ ಸಂಬಂಧಿಸಿದ ವ್ಯಾಜ್ಯ ಈಸಾವಿಗೆ ಕಾರಣ ಎಂಬ ಶಂಕೆ ಅವನನ್ನು ಬಾಧಿಸಿತ್ತು. ಚಿಕ್ಕ ಗೌಡರ ಅಭಿಪ್ರಾಯ ತಿಳಿಯುವ ತವಕ ಅವನಿಗೆ.

" ಸತ್ತವನನ್ನ ಮಣ್ಣುಮಾಡಿ ಆದ್ಮೇಲೆ ಇನ್ನು ಯಾಕೆ ಆ ಮಾತು?"

—ಎಂಬ ಚುಟುಕು ಉತ್ತರದಿಂದ ಆ ಮಾತುಕತೆಯನ್ನು ಮುಕ್ತಾಯಗೊಳಿಸಿದ್ದ ರಂಗಣ್ಣ.

ಮುಂದೆ ಕರಿಯ, ನಗರದ ಬಗೆಗೆ, ರಂಗಣ್ಣನ ವೈದ್ಯಕೀಯ ಅಧ್ಯಯನದ ಬಗೆಗೆ ಅದೂ ಇದೂ ಕೇಳಿದ್ದ. ಹ್ಞಾ—ಹ್ಞು—ಸ್ವರಗಳಿಗಿಂತ ಹೆಚ್ಚಿನ ಉತ್ತರವನ್ನು ರಂಗಣ್ಣ ನೀಡಲಿಲ್ಲ. ಇವತ್ತು ಚಿಕ್ಕ ಒಡೆಯರ ಮನಸ್ಸು ಸರಿಯಾಗಿಲ್ಲ — ಎಂದು ಕೊನೆಯಲ್ಲಿ ಕರಿಯ ಸುಮ್ಮನಾಗಿದ್ದ.

ಈಗ ಆತ ಆಲದ ಮರದ ಬಿಳಲಿನಿಂದ ಒಂದು ಚೂರನ್ನು ಕಿತ್ತು ಹಲ್ಲುಗಳ ಮಧ್ಯೆ ಕಚ್ಚಿಕೊಂಡು, ಮರದ ಬುಡದಲ್ಲಿ ಕುಳಿತ.

ಸಿಗರೇಟು ಸೇದುತ್ತ ರಂಗಣ್ಣ ಯೋಚಿಸಿದ: ಈವರೆಗೂ ಗಾಳಿಯಲ್ಲಿ ತೇಲುತ್ತಿದ್ದೆ; ಇದೀಗ ನೆಲದ ಮೇಲೆ ನಡೆಯತೊಡಗಿದ್ದೇನೆ. ಚಿಕ್ಕವನೆಂದು ಉಪೇಕ್ಷೆ ಮಾಡಿಲ್ಲ; ನನ್ನ ಮಾತಿಗೆ ಅಪ್ಪ ಬೆಲೆ ಕೊಟ್ಟಿದಾರೆ.

—ನೇರವಾಗಿ ಆಸ್ಪತ್ರೆಗೆ ಹೋಗಿ 'ಮೆಡಿಸಿನ್ ಪ್ರೊಫೆಸರ'ನ್ನು ಕಾಣಬೇಕು. ತಂಗಿಯ ರೋಗ ಲಕ್ಷಣ ತಿಳಿಸಿ ಸಲಹೆ ಪಡೆಯಬೇಕು. ಸಾಧ್ಯವಾದರೆ ಆಸ್ಪತ್ರೆಯ ಔಷಧ ಭಂಡಾರ ದಿಂದಲೇ ಮಾತ್ರೆ—ಕ್ಯಾಪ್ಸೂಲ್‌ಗಳನ್ನು ಎತ್ತಿಕೊಂಡರಾಯಿತು. ಅಲ್ಲಿ ಸಿಗದಿದ್ದರೆ ಔಷಧ ಅಂಗಡಿಗಳು ಇದ್ದೇ ಇವೆಯಲ್ಲ. ಹೌಸ್ ಸರ್ಜನ್ ಶಟಗೋಪನ್ ತನಗೆ ಪರಿಚಯ. ಎರಡು ಮೂರು ಔಷಧದ ಅಂಗಡಿಗಳ ಒಡೆಯರು ಅವನ ಮಿತ್ರರು. ಜತೆಯಲ್ಲಿ ಕರೆದುಕೊಂಡು ಹೋಗಬೇಕು. ಕಡಮೆ ಬೆಲೆಗೆ ಔಷಧಿಗಳು ಸಿಗುತ್ತವೆ. ಬ್ಯಾಗು? ಇರುವ ಹಣ ಸಾಲದು. ಶಟಗೋಪನ್ ಒಂದು ಮಾತು ಹೇಳಿದರೆ ಸಾಲವಾಗಿ ಬ್ಯಾಗ್ ಪಡೆಯಬಹುದು. ರಜಾ ಮುಗಿದು ಕಾಲೇಜಿಗೆ ವಾಪಸಾದಾಗ ದುಡ್ಡು ಕೊಟ್ಟರಾಯಿತು.

—ತನ್ನ ಊರವರ ದೃಷ್ಟಿಯಲ್ಲಿ ತಾನಿನ್ನೂ ಹುಡುಗ. ಆದರೆ ಬ್ಯಾಗ್ ನೋಡಿದ ಮೇಲೆ ಅವರ ದೃಷ್ಟಿ ಖಂಡಿತ ಬದಲಾಗುತ್ತದೆ. ಒಬ್ಬಿಬ್ಬರಿಗೆ ಗುಣವಾದ ಮೇಲಂತೂ ಹಳ್ಳಿಗೆ ಬಂದಾಗಲೆಲ್ಲ ಜನ ತನ್ನನ್ನು ಮುತ್ತುತ್ತಾರೆ.

—ಹೀಗೆ ಕೊನೆಗೊಮ್ಮೆ ಪದ್ಮನ ಅಜ್ಜಿಯ ಗಡ್ಡೆ ಬೇರುಗಳ ಗೊಡ್ಡು ಔಷಧೋಪಚಾರ ಕಣಿವೇಹಳ್ಳಿಯಲ್ಲಿ ಕೊನೆಗಾಣುತ್ತದೆ.

ಕಿರಿದಾಗಿದ್ದ ಸಿಗರೇಟನ್ನು ತನ್ನ ಹಿಂದಿದ್ದ ತಗ್ಗಿಗೆ ರಂಗಣ್ಣ ಎಸೆದ.

ಕರಿಯ ಎದ್ದುನಿಂತ. ಆತನಿಗೆ ಆ ತುಣುಕಿನ ಮೇಲೆ ಕಣ್ಣು. ಓಡಿ ಹೋಗಿ ಎತ್ತಿಕೊಂಡು ಆರಿಸಿ ಕಿವಿಯ ಹಿಂದಿಟ್ಟುಕೊಳ್ಳುವ ಆಸೆ. ಹಳ್ಳಿಗೊಮ್ಮೆ ರೆವೆನ್ಯೂ ಇನ್ಸ್‌ಪೆಕ್ಟರು ಬಂದಿದ್ದಾಗ

ಅವರು ಸೇದಿ ಚುರುಟಿ ಎಸೆದಿದ್ದ ಸಿಗರೇಟಿನ ತುಂಡನ್ನು ಅವನು ಎತ್ತಿಕೊಂಡಿದ್ದ. ಉರಿಯುವ ಸೌದೆಗೆ ಮುಟ್ಟಿಸಿ ಅದನ್ನು ಸೇದಲು ನೋಡಿದ್ದ. ಕೆಂಡಗಳ ಕಾವಿಗೆ ಮುಖ ಕಾದಿತ್ತು. ಹೊಗೆಸೊಪ್ಪಿನ ಹಾಗೂ ಕಾಗದದ ಹೊಗೆ ಗಂಟಲೊಳಕ್ಕೆ ಹೋಗಿ ಕೆಮ್ಮು ಬಂದಿತ್ತು. ಊರಿನ ಶಾಲೆಯ ಇಬ್ಬರು ಉಪಾಧ್ಯಾಯರಲ್ಲಿ ಒಬ್ಬರು ನಶ್ಯದವರು, ಇನ್ನೊಬ್ಬರು ಬೀಡಿಯವರು. ಅಯ್ಯನವರ ಮಗ ಗೋವಿಂದ ಊರಿನ ಯುವಕರು ರಂಗ ಕಟ್ಟಿದ್ದ ದಿವಸ ಆಟ ನಡೆಯುತ್ತಿದ್ದಾಗ ಜನರ ಗುಂಪಿನಿಂದ ದೂರ ನಿಂತು ಕತ್ತಲಲ್ಲಿ ಸಿಗರೇಟು ಕುಡಿದದ್ದನ್ನು ಕರಿಯ ಬಲ್ಲ. ನಗರಕ್ಕೆ ಹೆಚ್ಚಾಗಿ ಹೋಗಿ ಬರುವ ಅಭ್ಯಾಸವಿರುವುದು ಕಣಿವೇಹಳ್ಳಿಯಲ್ಲಿ ಅವನೊಬ್ಬನಿಗೇ. ಅಲ್ಲಿನ ಹೋಟೆಲುಗಳ ವೈಭವದ ವರ್ಣನೆಯನ್ನು ಒಮ್ಮೆ ಗೋವಿಂದ ಮಾಡಿದುದನ್ನು ಕರಿಯ ದೂರ ನಿಂತು ಕೇಳಿದ್ದ.

—ಆಗ ಗೋವಿಂದ ಅಂದಿದ್ದನಲ್ಲ ?

"ನೀವು ಕೂಪಮಂಡೂಕಗಳು ಕಣ್ರೋ."

ಒಬ್ಬ ಕೇಳಿದ್ದ:

"ಅಂದ್ರೇನು ಗೋವಿಂದಪ್ಪ ?"

"ಬಾವಿಯೊಳಗಿನ ಕಪ್ಪೆಗಳು ಅಂತ. ವರ್ಷಕ್ಕೆ ಒಂದ್ಸರ್ತಿನಾದ್ರೂ ನಗರಕ್ಕೆ ಹೋಗಿ ನೀವು ಪ್ರಪಂಚ ನೋಡ್ಬೇಕು ಕಣ್ರೋ. ಇಲ್ದೇ ಹೋದ್ರೆ ಹಳ್ಳೀ ಗಮಾರ್ರು ಹಳ್ಳೀ ಮುಕ್ಕರು ಅಂತ ಶಹರದೋರು ನಿಮ್ಮನ್ನ ಲೇವಡಿ ಮಾಡ್ತಾರೆ."

ಯಾರೋ ಒಬ್ಬನೆಂದಿದ್ದ [ಶಂಕರ ಇರಬೇಕು] :

"ಕಣಿವೇ ಅಳ್ಳೀ ಪೈಕಿ ನೀ ಒಬ್ಬ ಪರ್ಪಂಚ ನೋಡಿದೀಯಲ್ಲ. ಅಷ್ಟು ಸಾಕು ಬಿಡು, ಗೋವಿಂದಪ್ಪ."

ಸುತ್ತಲಿದ್ದವರು ನಕ್ಕಿದ್ದರು.

ಅದು ನೆನಪಾಗಿ ಕರಿಯನಿಗೂ ಈಗ ನಗಬೇಕೆನ್ನಿಸಿತು. ಆದರೂ ರಂಗಣ್ಣನ ಕಡೆಗೊಮ್ಮೆ ನೋಡಿ ಸುಮ್ಮನಾದ. ದೃಷ್ಟಿ ರಂಗಣ್ಣ ಎಸೆದಿದ್ದ ಸಿಗರೇಟಿನ ತುಂಡಿನತ್ತ ಮತ್ತೆ ಹೊರಳಿತು. ಹೊಗೆ ಇರಲಿಲ್ಲ — ಬೂದಿಯಾಗಿ ಹೋಗಿತ್ತು ಸಿಗರೇಟು.

—ಚಿಕ್ಕ ಗೌಡರಿಗೆ ಧೈರ್ಯ. ಕಣಿವೇಹಳ್ಳಿಯಲ್ಲಿ ಸೇದದವರು ಇಲ್ಲಿ ತನ್ನೆದುರಿಗೇ ಸೇದಿದರು. ಹಳ್ಳಿಗೆ ಹೋಗಿ ಈ ಸಂಗತಿಯನ್ನು ಗೌಡರಿಗೆ ತಾನು ಹೇಳಿದರೊ?

ಆ ತುಂಟ ಯೋಚನೆ ಕರಿಯನನ್ನು ಕುಲುಕಿತು. ಆತ ಸಣ್ಣನೆ ನಕ್ಕ.

ಅದನ್ನು ನೋಡಿ ರಂಗಣ್ಣ ಕೇಳಿದ:

"ಏನದು ಕರಿಯ?"

ಪ್ರಶ್ನೆ ಕರಿಯನನ್ನು ಗಾಬರಿಗೊಳಿಸಿತು.

"ಏನಿಲ್ರಾ...."

"ಇಲ್ವಾ ? ನಗ್ತಾ ಇದ್ದೆ ಮತ್ತೆ ?"

"ಏನೇನೂ ಇಲ್ರಾ.... ಅಕಾ, ಬಸ್ಸು !"

ಏನೇನೂ ಇಲ್ರಾ—ಎಂದು ಕರಿಯ ಅನ್ನುತ್ತಿದ್ದಂತೆಯೇ ದೂರದಲ್ಲಿ ಕಡಿದಾದ ರಸ್ತೆಯನ್ನು ಏರಿ ಬರುತ್ತಿದ್ದ ಬಸ್ಸಿನ ಸದ್ದು ಕೇಳಿಸಿತು.

ರಂಗಣ್ಣ ಕೈ ಅಡ್ಡ ಹಿಡಿಯಲು ಸಿದ್ಧನಾದ. ಕರಿಯನ ನೆನಪಾಗಿ ಪಾಕೀಟಿನಿಂದ ಹತ್ತು ಪೈಸೆ ನಾಣ್ಯವೊಂದನ್ನು ತೆಗೆದುಕೊಟ್ಟ. ತಲೆಗೆ ಸುತ್ತಿದ್ದ ಅಂಗವಸ್ತ್ರವನ್ನು ಬಿಚ್ಚಿ ಅದರ ಒಂದು ತುದಿಯಲ್ಲಿ ಆ ನಾಣ್ಯವನ್ನು ಬಿಗಿದುಕಟ್ಟಿದ ಕರಿಯ.

ಬಸ್ಸು ಬಂತು. ರಂಗಣ್ಣ, ಕರಿಯ ಇಬ್ಬರೂ ತೋಳುಗಳನ್ನು ಅಡ್ಡ ಹಿಡಿದುದೂ ಆಯಿತು.

ಆ ಕೆಂಪು ವಾಹನ ವೇಗ ಕಡಮೆ ಮಾಡುವ ಲಕ್ಷಣ ಕಾಣಿಸಲಿಲ್ಲ. ಅದು ತೀರಾ ಹತ್ತಿರ ಬಂದಂತೆ ರಂಗಣ್ಣ ಕಿರಿಚಿದ:

"ಹೋಲ್ಡಾನ್ ! ಓಲ್ಡಾನ್ ! ವನ್ ಸೀಟ್ !"

ಡ್ರೈವರನಿಂದ ಉತ್ತರ ಸೀಟಿಲ್ಲ ಎಂಬ ಕೈಸನ್ನೆ.

ಅವರಿಬ್ಬರನ್ನೂ ಬಸ್ಸು ದಾಟಿ ಹೋದಂತೆ, ಜನ ಕುಳಿತು ನಿಂತು ತೂಗಾಡಿ ಆ ವಾಹನ ಜೇನುಗೂಡಾಗಿದ್ದುದನ್ನು ರಂಗಣ್ಣ ಕಂಡ.

ಧೂಳು ಮೇಲಕ್ಕೆ ಏರಿತು. ನಿರಾಶೆಯ ಆ ಘಳಿಗೆಯಲ್ಲೂ ರಂಗಣ್ಣ ಕಣ್ಣು ಮೂಗು ಗಳನ್ನು ಮುಚ್ಚಿಕೊಂಡ. ಎದ್ದ ಧೂಳು ಮತ್ತೆ ಕೆಳಕ್ಕಿಳಿಯಿತು. ನಿಸ್ತೇಜ ಮುಖದಿಂದ ಅಂಗೈಯನ್ನು ರಂಗಣ್ಣ ತೆಗೆದ.

ಪೆಚ್ಚುಮೋರೆ ಹಾಕಿಕೊಂಡು ಕರಿಯ ಕೇಳಿದ:

"ಈಗ ಏನ್ಮಾಡಾಣ್ರಾ ?"

"ಮಾಡೋದೇನು, ಇನ್ನೊಂದು ಬಸ್ಸಿಗಾಗಿ ಕಾಯೋದು."

ಸಾಧಾರಣವಾಗಿ ಆ ರೀತಿ ಆಗುತ್ತಿರಲಿಲ್ಲ. ಆದರೆ ಈ ದಿನವೇ ಹೀಗಾಗಬೇಕೆ ? ಇನ್ನೊಂದು ಬಸ್ಸು ಬರುವುದು ಸುಮಾರು ಹನ್ನೆರಡು ಘಂಟೆಗೆ. ಅದರಲ್ಲಿ ತಾನು ಪ್ರಯಾಣ ಬೆಳೆಸಿದರೆ ಭಾಗ್ಯನಗರ ಸೇರುವುದು ಒಂದೂವರೆ ಘಂಟೆಗೆ. ಅಷ್ಟು ಹೊತ್ತಿಗೆ ಪ್ರೊಫೆಸರು ಮನೆಗೆ ಹೋಗಿರುತ್ತಾರೆ. ಶಟಗೋಪನ್ ಸಿಗುವನೋ ಇಲ್ಲವೋ... ಕೆಲಸ ಮುಗಿಸಿ ನಾಲ್ಕು ಘಂಟೆಗೆ ತಾನು ಹಳ್ಳಿಗೆ ಮರಳುವುದಂತೂ ಸುಳ್ಳು ಮಾತು....

ಹಳ್ಳಿಯಿಂದ ಹೊರಟು ಬಂದಾಗ ರಂಗಣ್ಣನಿಗಿದ್ದ ಉತ್ಸಾಹ ಮಾಯವಾಗಿ, ಹೀಗೂ ಆಯಿತಲ್ಲ – ಎಂದು ಆತ ಚಡಪಡಿಸಿದ.

ಮುಖ ಬೆವರುತ್ತಿತ್ತು. ಕರವಸ್ತ್ರವನ್ನು ಹೊರಕ್ಕೆ ತೆಗೆದು ಬೆವರು ಒರೆಸಿಕೊಂಡ. ಮೌನದಲ್ಲಿ ಕೆಲ ನಿಮಿಷಗಳು ಕಳೆದ ಮೇಲೆ ಕರಿಯನಿಗೆ ಆತನೆಂದ:

"ನೀನು ವಾಪ್ಸು ಹೋಗು. ಬಸ್ನಲ್ಲಿ ಸೀಟು ಸಿಗಲಿಲ್ಲ, ಇನ್ನೊಂದು ಬಸ್ನಲ್ಲಿ ಹೋಗ್ತಾರೆ ಅಂತ ಮನೇಲಿ ಹೇಳು."

ಬಿಸಿಲಲ್ಲಿ ಚಿಕ್ಕ ಗೌಡರೊಬ್ಬರನ್ನೇ ಬಿಟ್ಟು ಹಿಂತಿರುಗಬೇಕೆ ಕರಿಯ?

ಮನಸ್ಸು ಒಡಂಬಡದೆ ಅವನೆಂದ:

"ಬಸ್ಸು ಬರೋಗಂಟಾ ನಿಂತಿರ್ತೀನಿ ಒಡೆಯಾ."

"ಬ್ಯಾಡ. ನಾ ಹೇಳೋದು ಕೇಳು. ಮನೇಲಿ ಕೆಲಸ ಇರ್ತದೆ. ಈಗ್ಲೇ ಹೋಗು. ಸಾಯಂಕಾಲ ಆರು ಘಂಟೆಯೊಳಗೆಲ್ಲಾ ಇಲ್ಲಿಗೆ ಬಂದ್ಬಿಡು."

ನಿರುಪಾಯನಾಗಿ ಕರಿಯ, "ಹೂಂ." ಎಂದ.

ಆಳು ಹೋಗುತ್ತಲೇ ರಂಗಣ್ಣ ಮತ್ತೆ ಅಂಚುಗಲ್ಲಿನ ಮೇಲೆ ಕುಳಿತ.

ದೂರದಲ್ಲಿ ಬಿಸಿಲು ಕುಣಿಯತೊಡಗಿತು. ಗಾಳಿ ಬಿಸಿಯಾಯಿತು.

ಹೊತ್ತು ಕಳೆಯಿತು.

ರಂಗಣ್ಣ ಆಲದ ಮರದ ನೆರಳಲ್ಲಿ ಅತ್ತಿತ್ತ ನಡೆಯಲಾರಂಭಿಸಿದ.

ಹಾಗೆ ನಡೆಯುತ್ತಿದ್ದವನ ದೃಷ್ಟಿಗೆ ಬಿಳಿಯಚುಕ್ಕೆಯೊಂದು ಕಾಣಿಸಿತು, ಕಣಿವೇಹಳ್ಳಿಯಿಂದ ಬರುವ ಕಾಲುದಾರಿಯಲ್ಲಿ. ಅದು ಚಲಿಸುವ ಚುಕ್ಕೆ. ಹತ್ತಿರಕ್ಕೆ ಬಂದಂತೆ ದೊಡ್ಡದಾಯಿತು. ಸಂಶಯವೇ ಇರಲಿಲ್ಲ. ಆತ ಗೋವಿಂದ.

'ಇವನ ಮನೆ ಹಾಳಾಯಿತು. ಎಲ್ಲಾ ಬಿಟ್ಟು ಇವತ್ತು ಈತನ ದರ್ಶನ ಆಗಬೇಕೆ ?' ಎಂದು ರಂಗಣ್ಣ ಮನಸ್ಸಿನಲ್ಲಿ ರೇಗಿದ.

ದೂರದಿಂದಲೇ ರಂಗಣ್ಣನನ್ನು ಗುರುತಿಸುವುದು ಗೋವಿಂದನಿಗೆ ಕಷ್ಟದ ಕೆಲಸವಾಗಿರಲಿಲ್ಲ. ರಂಗಣ್ಣ ಅಲ್ಲಿರುವುದನ್ನು ಕರಿಯನಿಂದ ಆತ ಆಗಲೇ ಅರಿತಿದ್ದ.

ಅವನನ್ನು ಬಾಧಿಸಿದ ಪ್ರಶ್ನೆ ಎಂದರೆ:

'ಎಲ್ಲಾ ಬಿಟ್ಟು ಇವತ್ತು ಯಾಕೆ ಈತ ಹೊರಟಿದ್ದಾನೆ ?'

ಗೋವಿಂದ ಮನೆ ಬಿಡಲು ಅಣಿಯಾಗುತ್ತಿದ್ದಂತೆ ಅವನ ತಂದೆಯ ಕೂಗಾಟ ಕೇಳಿಸಿತ್ತು:

"ಪದ್ಮ ಎಲ್ಲಿ ಹೋದ? ಪದ್ಮನಾಭ ಎಲ್ಲಿ ಹೋದ?"

ಶಾಮೇಗೌಡರನ್ನು ಅಲ್ಲಿ ಕಂಡ ಕ್ಷಣವೇ ಪದ್ಮನಾಭ ಹಿತ್ತಿಲ ಬಾಗಿಲಿನಿಂದ ಹೊರಬಿದ್ದಿದ್ದ.

ದೇವರ ಮನೆಯಿಂದ ದೊಡ್ಡಮ್ಮ ಕೇಳಿದ್ದರು:

"ಏನು ಶೀನ ?"

"ಶಾಮಣ್ಣ ಏನೆಂದ ಗೊತ್ತೆ ಅಮ್ಮ?"

ಮುಂದಿನ ಮಾತು ಕೇಳಿಸಿರಲಿಲ್ಲ. ಮೆಲ್ಲಗೆ ಮಾತನಾಡು ಎಂದು ದೊಡ್ಡಮ್ಮ ಹೇಳಿರಬೇಕು. ಬಹಳ ಹೊತ್ತು ತಂದೆಯೂ ಅಜ್ಜಿಯೂ ಅಲ್ಲೇ ಗುಸುಗುಸು ಮಾತನಾಡಿದರಲ್ಲ ?

ಕುತೂಹಲ ಕೆರಳಿ, ಅದೇನು ತಿಳಿದೇ ಬಿಡೋಣ ಎಂದು ಗೋವಿಂದ ದೇವರ ಮನೆಯತ್ತ ಹೋದ. ಆತ ಮರೆಯಲ್ಲಿ ನಿಲ್ಲುವುದಕ್ಕೆ ಮುಂಚೆ ಅವನನ್ನು ಕಂಡ ಶ್ರೀನಿವಾಸಯ್ಯ ಕೇಳಿದರು:

"ಏನೋ ಗೋವಿಂದ ?"

"ಏನಿಲ್ಲ, ಅಣ್ಣಯ್ಯ. ಸ್ವಲ್ಪ ನಗರಕ್ಕೆ ಹೋಗ್ಬಿಟ್ಟು ಬರ್ತೀನಿ."

"ಯಾಕೊ ನಗರಕ್ಕೆ ?"

"ಸೊಸೈಟೀದು ಸ್ವಲ್ಪ ಕೆಲಸ ಇದೆ ಅಣ್ಣಯ್ಯ."

"ಮುನಿಯನ ವಿಷಯ ಅಲ್ಲಿ ಕೀಟಲೆ ಮಾಡೋಕೆ ಹೋದೀಯೆ, ಹುಷಾರ್!"

"ಇಲ್ಲ, ಅಣ್ಣಯ್ಯ."

ದೊಡ್ಡಮ್ಮ ಅಂದರು:

"ಸಾಯಂಕಾಲ ಜಾಗ್ರತೆ ಬಂದ್ಬಿಡು, ಗೋವಿಂದ."

"ಹೂಂ ದೊಡ್ಡಮ್ಮ."

"ಮತ್ಯಾಕೆ ನಿಂತಿದೀಯೊ ? ಹೋಗು!" ಎಂದು ಗದರಿದ್ದರು ಶ್ರೀನಿವಾಸಯ್ಯ.

ಗೋವಿಂದ ಹೊರಟು ಬಂದಿದ್ದ. ಊಹಿಸುವುದೇನೋ ಸಾಧ್ಯವಿತ್ತು. ತನ್ನ ತಮ್ಮನೂ

ಗೌಡರ ಮಗಳು ಸುಬ್ಬಿಯೂ ಪರಸ್ಪರ ಸಲಿಗೆಯಿಂದಿದ್ದಾರೆ ಎಂದು ಗೋವಿಂದ ಬಲ್ಲ. ಅದಿರಬಹುದೆ? ಮುನಿಯನ ಪ್ರಕರಣಕ್ಕೆ ಸಂಬಂಧಿಸಿ ತಂದೆಯೊಡನೆ ಮಾತನಾಡಲು ಶಾಮೇ ಗೌಡರು ಬಂದಿದ್ದಾರೆ ಎಂದುಕೊಂಡಿದ್ದ ಗೋವಿಂದ, ಮೊದಲು. ಅದಲ್ಲವೆಂಬುದು ಪದ್ಮನನ್ನು ತಂದೆ ಕೂಗಿ ಕರೆದಾಗ ಸ್ಪಷ್ಟವಾಗಿತ್ತು.

ಮನೆಯಿಂದ ಹೊರಟ ಗೋವಿಂದ ಕೃಷ್ಣೇಗೌಡನ ಮನೆಯಲ್ಲಿ ಕೆಲ ನಿಮಿಷಗಳಿದ್ದ. ಅನಂತರ, ಮುನಿಯ ಸತ್ತ ವಿಷಯವಾಗಿ ಜನ ಏನು ಹೇಳುತ್ತಾರೆ ಎಂದು ತಿಳಿಯಲು ದಾರಿಯಲ್ಲಿ ಒಬ್ಬಿಬ್ಬರೊಡನೆ ಮಾತನಾಡುತ್ತ ನಿಂತ. ಅಬ್ದುಲ್ಲ ನಿಜವಾಗಿಯೂ ಊರಲ್ಲಿಲ್ಲವೆಂಬುದನ್ನು ಖಚಿತ ಮಾಡಿಕೊಂಡ. ಮುಂದೆ ಅಲ್ಲಿಂದ ಮೋಟಾರು ರಸ್ತೆಯ ಕಡೆಗೆ ನಡೆದ.

ಈಗ ರಂಗಣ್ಣನನ್ನು ಕಂಡು ಗೋವಿಂದನಿಗೆ ಸಂತೋಷವಾಯಿತು. ಇವನೊಡನೆ ಮಾತಾಡಿ ತನ್ನನ್ನು ಕಾಡಿದ್ದ ಒಂದೆರಡು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಆತ ಭಾವಿಸಿದ.

ರಸ್ತೆಯ ಅಂಚನ್ನು ಏರುತ್ತಿದ್ದಂತೆ ರಂಗಣ್ಣನ ಕಡೆ ನೋಡಿ ಗೋವಿಂದ ತೋಳು ಬೀಸಿದ. ಪ್ರತಿವಂದನೆಯಾಗಿ ಯಾವ ಸನ್ನೆಯನ್ನೂ ಮಾಡಲಿಲ್ಲವಾದರೂ ಬಸ್ಸು ಬರುವ ತನಕ ಗೋವಿಂದನ ಸಾಮಿಪ್ಯದಲ್ಲಿ ಹೊತ್ತು ಕಳೆಯಲು ರಂಗಣ್ಣ ಸಿದ್ಧನಾದ.

ಹತ್ತಿರ ಬಂದು ಗೋವಿಂದನೆಂದ:

"ಇದೇನು ರಂಗಣ್ಣ ಇವತ್ತು ನಗರಕ್ಕೆ ?"

"ನಾನು ನಗರಕ್ಕೆ ಹೋಗ್ತಿದೀನಿ ಅಂತ ಯಾರು ಹೇಳಿದ್ರು ?" ಎಂದು ರಂಗಣ್ಣ ಮರು ಪ್ರಶ್ನೆ ಹಾಕಿದ.

"ಇನ್ಯಾರು? ಕರಿಯ. ಅಷ್ಟು ಗೊತ್ತಾಗೊಲ್ವ? ಹಳ್ಳಿಗೆ ವಾಪ್ಸು ಬರ್ತಿದ್ದ, ಸಿಕ್ದ."

"ನಿಜ, ನನ್ನನ್ನ ಬಿಡೋಕೆ ಬಂದಿದ್ದ."

"ನಿನಗೇನಪ್ಪ. ಆಳುಗಳು ಬರ್ತಾರೆ. ನನ್ನಂಥವರು ಒಂಟಿಯಾಗಿ ನಡೀಬೇಕು... ಹು.... ನಾನು ಕೇಳಿದ್ದಕ್ಕೆ ಉತ್ತರ ಸಿಗ್ಲಿಲ್ವಲ್ಲ ?"

"ಏನು ?"

"ಇವತ್ತೇನು ಈ ಪ್ರಯಾಣ ಅಂತ. ರಜಾ ಇನ್ನೂ ಇದೆ, ಅಲ್ವ ?"

"ಅರ್ಜೆಂಟ್ ಕೆಲಸ. ಡೀನ್ ಬರಹೇಳಿದಾರೆ."

"ಹಾಗೋ? ಡೀನ್ ಅಂದರೆ ಪ್ರಿನ್ಸಿಪಾಲ್ ಇದ್ದ ಹಾಗೆ ಅನ್ನು."

"ಹೆಚ್ಚು ಕಮ್ಮಿ ಹಾಗೇ."

"ಬಸ್ಸು ನಿಲ್ಲಿಸ್ಲಿಲ್ವಂತೆ."

"ಇಲ್ಲ. ಸೀಟಿರ್ಲಿಲ್ಲ."

"ಸೀಟಿಲ್ದಿದ್ರೆ ಏನಾಯ್ತು? ನಾನಾಗಿದ್ದಿದ್ರೆ ನಿಲ್ಲಿಸ್ಬಿಡ್ತಿದ್ದೆ."

"ಹ್ಯಾಗೊ ?"

"ನನ್ನ ಟೋಪಿ–ಡ್ರೆಸ್ಸು ನೋಡಿದ್ರೆ ಯಾವ ಡ್ರೈವರಾದರೂ ನಿಲ್ಲಿಸ್ತಾನೆ."

ಮೊದಲಿನಿಂದಲೂ ಗೋವಿಂದ ರಂಗಣ್ಣನನ್ನು ಸಂಬೋಧಿಸುತ್ತಿದ್ದುದು ಏಕವಚನದಲ್ಲೇ. ಈಗ ರಂಗಣ್ಣನಿಗೆ ಅದು ಒಪ್ಪಿಗೆ ಇಲ್ಲ. ಹಾಗೆಂದು ಬಾಯಿ ಬಿಟ್ಟು ಹೇಳುವುದು ಹೇಗೆ?

ಪ್ರತಿಯಾಗಿ ತಾನೂ ಏಕವಚನದಲ್ಲಿ ಗೋವಿಂದನೊಡನೆ ಮಾತನಾಡಬಹುದು. ಆಗ?

ಈಗಲೇ ಆ ರೀತಿ ಮಾತಾಡಲೆ?.... ಎಂದುಕೊಂಡ ರಂಗಣ್ಣ. ತುಸು ಅಳುಕಿದ. ಇವತ್ತು ಬೇಡ, ಇನ್ನೊಂದು ದಿವಸ ನೋಡೋಣ.... ಎಂದು ತೀರ್ಮಾನಿಸಿದ.

"ಅಲ್ವೆ ಮತ್ತೆ ! ಎಂ. ಎಲ್. ಎ. ಹಾಗೆ ಕಾಣ್ತೀರಾ. ಯಾರಿಗೆ ಗೊತ್ತು? ಒಂದು ದಿವಸ ಎಂ. ಎಲ್. ಎ. ಆದರೂ ಆದೀರೇ."

"ಹೆಹ್ಹೆ ! ಶಾಮೇಗೌಡರ ಮನೆತನದ ಬೆಂಬಲ ನನಗಿದ್ರೆ ಆಗದೇ ಇದ್ದೇನಾ? "

"ನಿಮ್ಮ ಬ್ರೀಫ್ ಕೇಸ್ ಚೆನ್ನಾಗಿದೆ."

"ಪ್ಲಾಸ್ಟಿಕ್ಕಿಂದು. ಐದು ರೂಪಾಯಿ ಕೊಟ್ಟೆ. ಕಾಗದ ಪತ್ರ ಇಡೋಕೆ ಬೇಕಲ್ಲ ಒಂದು."

"ಬೇಕು, ಬೇಕು."

ರಂಗಣ್ಣನಿಗನ್ನಿಸಿತು: ಇವನಿಗೆ ಈ ಬ್ರೀಫ್‌ಕೇಸ್, ತನಗೆ ಡಾಕ್ಟರರ ಬ್ಯಾಗು; ಇವನದೂ ಒಂದು ವೃತ್ತಿಯೇ.

ಗೋವಿಂದ ಕೇಳಿದ:

"ಇತ್ತೀಚೆಗೆ ಪದ್ಮನೂ ನೀನೂ ಜತೇಲಿ ಓಡಾಡೋದು ಕಮ್ಮಿಯಾದ ಹಾಗಿದೆಯಲ್ಲ? ಎಲ್ಲಿ, ಒಂದು ಸಿಗರೇಟು ಕೊಡು."

"ನಾನೆಲ್ರಿ ಸೇದ್ತೀನಿ ಸಿಗರೇಟು ?"

"ಬಿಡು ರಂಗಣ್ಣ ಅದೆಲ್ಲ."

ರಂಗಣ್ಣ ಕೊಟ್ಟ ಪ್ಯಾಕೆಟಿನಿಂದ ಒಂದನ್ನು ಎತ್ತಿಕೊಂಡು, ಇನ್ನೊಂದನ್ನು ರಂಗಣ್ಣನಿಗಾಗಿ ಗೋವಿಂದ ಮುಂದಕ್ಕೆ ಚಾಚಿದ.

"ನನಗೆ ಬೇಡ. ನೀವು ಸೇದಿ. ಮ್ಯಾಚಿಸ್ ಕೊಡ್ಲೊ ?"

ಪ್ಯಾಕೆಟನ್ನು ಮುಚ್ಚಿ ಹಿಂತಿರುಗಿಸಿ ಗೋವಿಂದನೆಂದ:

"ಮ್ಯಾಚಿಸ್ ನಮ್ಮ ಹತ್ರ ಯಾವಾಗಲೂ ಇರುತ್ತೆ. ಸಿಗರೇಟು ಸಿಕ್ಕಿದರೆ ಸಾಕು, ಹಚ್ಕೊಂಡ್ಬಿಡ್ತೀವಿ !"

"ಪುಢಾರಿಗಳೂಂದ್ರೆ ಹೀಗೇನೊ ?"

"ನನ್ನ ಯಾರ‍್ರಪ್ಪ ಪುಢಾರಿ ಅಂತಾರೆ? ನಾನೊಬ್ಬ ಕಾರ್ಯಕರ್ತ. ಸ್ವಯಂಸೇವಕ. ಜನತೆಗೋಸ್ಕರ ಕೈಲಾದದ್ದು ಮಾಡ್ತೀನಿ. ಎಲ್ಲಿ ನನ್ನ ಪ್ರಶ್ನೆಗೆ ಉತ್ತರ ಬರ‍್ಲಿಲ್ವಲ್ಲಾ?"

"ಯಾವುದು? "

"ಪದ್ಮನೂ ನೀನೂ ಒಟ್ಟಿಗೆ ಓಡಾಡೋದು—"

"ಓ ಅದಾ? ನನಗೆ ಪುರುಸೊತ್ತಿಲ್ಲ. ಸ್ಟಡೀಸ್ ಜಾಸ್ತಿ."

"ಇನ್ನೆಷ್ಟು ವರ್ಷ ಉಳೀತಪ್ಪ ಡಿಗ್ರಿ ತಗೊಳ್ಳೋಕೆ?"

"ಮೂರು ವರ್ಷ."

"ಇನ್ನೂ ಮೂರು ವರ್ಷವೆ?"

"ಅದೇನು ಬಿ. ಎ., ಬಿ.ಎಸ್.ಸಿ. 'ಥರ ಅಂದ್ಕೊಂಡ್ರೊ ?"

"ಪಾಸಾಗೋದು ಕಷ್ಟವಿಲ್ಲ, ಅಲ್ವೆ ?"

"ಬುದ್ಧಿವಂತರಿಗೆ ಕಷ್ಟವಿಲ್ಲ. ದಡ್ಡರು ಎಂಟು ಹತ್ತು ವರ್ಷ ತಗೋತಾರೆ."

"ಒಂದು ಸರ್ತಿ ನಿನ್ನ ಹಾಸ್ಟೆಲಿಗೆ ಬರಬೇಕು."

ಬನ್ನಿ, ಎನ್ನಲಿಲ್ಲ ರಂಗಣ್ಣ; ಬರಬೇಡಿ, ಎನ್ನಲಿಲ್ಲ.

"ಹೊಸಳ್ಳಿ ಗೌಡರ ಮನೆಗೆ ಹೆಣ್ಣು ಕೊಟ್ಟು ಸಂಬಂಧ ಬೆಳೆಸ್ಕೋಬೇಕೂಂತಿದಾರಂತೆ ನಿಮ್ತಂದೆ."

"ಹುಂ."

"ಅವನೂ ನಗರದಲ್ಲಿ ಓದ್ತಿದಾನಂತೆ."

"ಹೌದು. ವಕೀಲಿ ಪರೀಕ್ಷೆಗೆ."

"ನಮ್ಮ ಪದ್ಮಂದೇನೋ ಬಿ. ಎ. ಆದ್ಮೇಲೆ ಅಲ್ಲಿಗೆ ನಿಂತು ಹೋಗುತ್ತೇಂತ ಕಾಣುತ್ತೆ."

"ಹ್ಞಂ."

"ಏನಾದರೂ ಮಾಡಿ ನಮ್ಮ ಮಾಧ್ಯಮಿಕ ಶಾಲೇನ ಹೈಸ್ಕೂಲು ಮಾಡಿಸ್ಬೇಕು ಅಂತ ನಮ್ತಂದೆ ಹೇಳ್ತಿದಾರೆ."

"ಒಳ್ಳೇದೇನೇ."

"ಅಲ್ಲಿ ಪದ್ಮ ಮೇಸ್ಟ್ರಾಗ್ಬಹುದು."

ರಂಗಣ್ಣ ಏನನ್ನೂ ಹೇಳಲಿಲ್ಲ. ದೂರದಲ್ಲಿ ವಾಹನದ ಸದ್ದು ಕೇಳಿಸಿತು. ಆತ ವಾಚ್ ನೋಡಿದ. ಅಷ್ಟು ಬೇಗನೆ ಸರಕಾರಿ ಬಸ್ಸು ಬರುವುದು ಶಕ್ಯವಿರಲಿಲ್ಲ. ಬಾಯಲ್ಲಿ ಒಸರಿ ನಿಂತಿದ್ದ ಎಂಜಲನ್ನು ಥುಕ್ಕೆಂದು ಪಕ್ಕಕ್ಕೆ ಉಗುಳಿದ.

ಬರುತ್ತಲಿದ್ದುದು ಲಾರಿ. ಡ್ರೈವರನ ಪಕ್ಕದಲ್ಲಿ ಮೂವರಿದ್ದರು. ಹೇರು ತುಂಬಿತ್ತು. ಹೇರಿನ ತುದಿಯಲ್ಲಿ ನಾಲ್ವರು.

ಗೋವಿಂದ ಕೈ ಅಡ್ಡ ಹಿಡಿದ. ಲಾರಿ ನಿಂತಿತು.

ಡ್ರೈವರನೆಂದ:

"ಇಬ್ರಾಗಾಕಿಲ್ಲ. ಒಬ್ರಾದ್ರೆ ಬನ್ನಿ. ಅದೂ ಇಕ್ಕಟ್ಟು."

ಗೋವಿಂದ ರಂಗಣ್ಣನನ್ನು ಕೇಳಿದ:

"ಬಹಳ ಅರ್ಜೆಂಟಾ ರಂಗಣ್ಣ ?"

"ಹೌದು."

"ಹಾಗಾದರೆ ನೀನು ಹೋಗು. ನಾನು ಹಿಂದಿನಿಂದ ಕಾರ್ನಲ್ಲೊ ಬಸ್ನಲ್ಲೊ ಬರ್ತೀನಿ. ಒಂದು ರೂಪಾಯಿ ಇವರಿಗೆ ಕೊಟ್ಬಿಡು. [ಡ್ರೈವರನತ್ತ ನೋಡಿ] ಈ ಡಾಕ್ಟ್ರನ್ನ ಕರಕೊಂಡು ಹೋಗಪ್ಪ, ಡ್ರೈವರ್."

ಲಾರಿಯ ಚಾಲಕನೆಂದ:

"ಆಕ್ರಾಯಿ ಹತ್ರ ಇಳೀಬೇಕು, ಸಾರ್."

"ಇಳೀತಾರೆ, ಇಳೀತಾರೆ."

ಲಾರಿಯ ಒಳಗಿದ್ದವರು 'ಡಾಕ್ಟರಿ'ಗಾಗಿ ಒಂದಿಷ್ಟು ಜಾಗ ಮಾಡಿಕೊಟ್ಟರು.

ಡ್ರೈವರ್ ತನಗೆ ವಂದಿಸದೇ ಹೋಗಬಹುದೆಂದು ಗೋವಿಂದನೇ ಅಂದ:

"ನಮಸ್ಕಾರ, ಡ್ರೈವರ್. ತುಂಬಾ ಥ್ಯಾಂಕ್ಸ್."

"ನಮಸ್ಕಾರ ಸಾರ್," ಎಂದ ಆತ, ನ್ಯೂಟ್ರಲ್ಲಿನಲ್ಲಿದ್ದ ಗೇರನ್ನು ಮೊದಲಿಗೆ ಬದಲಾ

ಯಿಸುತ್ತ.

...ಅಂತೂ ರಂಗಣ್ಣ ಭಾಗ್ಯನಗರವನ್ನು ತಲಪಿದ. ಊರ ಹೊರಗಿನಿಂದ ಸಿಟಿ ಬಸ್ಸಿನಲ್ಲಿ ಕುಳಿತು ನೇರ ಆಸ್ಪತ್ರೆಗೆ ಹೋದ. ಅವನ ಪ್ರಾಧ್ಯಾಪಕರ ಭೇಟಿ ಸಾಧ್ಯವಾಯಿತು. ಶಟಗೋಪನ್ ಸಿಕ್ಕಿದ. ಬಂದ ಕೆಲಸ ವಾಯಿತು.

ಭೇದಿಗೆ, ಜ್ವರಕ್ಕೆ, ತಲೆನೋವಿಗೆ, ಮಲಬದ್ಧತೆಗೆ, ಎಂದೆಲ್ಲ ಕೆಲ ಸಾಮಾನ್ಯ ಔಷಧಿ ಗಳನ್ನು ಕೊಂಡ.

ಔಷಧದಂಗಡಿಯಲ್ಲೇ ಡಾಕ್ಟರರ ಬ್ಯಾಗೂ ದೊರೆಯಿತು. ಮಾರಾಟದವನು ಹೌಸ್ ಸರ್ಜನ್ ಶಟಗೋಪನ್‌ಗೋಸ್ಕರವೇ ಆ ಬ್ಯಾಗು ಎಂದುಕೊಂಡ.

ಶಟಗೋಪನ್ ಹೇಳಿದುದೂ ಹಾಗೆಯೇ:

"ನನ್ನ ಹೆಸರಲ್ಲಿ ಕ್ರೆಡಿಟ್ ಬಿಲ್ ಹಾಕ್ಬಿಡಿ."

ರಂಗಣ್ಣನೊಡನೆ ಪಿಸುದನಿಯಲ್ಲಿ ಶಟಗೋಪನ್ ಅಂದ:

"ಸಿರಿಂಜ್ ಬೇಡ್ವೆ ?"

ಇಂಜೆಕ್ಷನ್ ಕೊಡಲು ಕಲಿತಿರಲಿಲ್ಲ ರಂಗಣ್ಣ.

"ಈಗ ಬೇಡ," ಅಂದ...

ತಿಂಡಿ ಕಾಫಿ. ಎರಡು ಪ್ಯಾಕೆಟ್ ಸಿಗರೇಟುಗಳ ಖರೀದಿ.

ನಾಲ್ಕೂವರೆಗೆ ಬಸ್ಸು ಸೋಮಪುರದ ಕಡೆಗೆ ಹೊರಟಿತು.

ಕಣಿವೇಹಳ್ಳಿಯ ಕಾಲುದಾರಿ ಮೋಟಾರು ರಸ್ತೆಯನ್ನು ಸಂಧಿಸುವಲ್ಲಿ ಕರಿಯ ನಿಂತಿದ್ದ.

ಬ್ಯಾಗಿನೊಡನೆ ಕೆಳಗಿಳಿದ ಯುವಕ 'ಡಾಕ್ಟರ'ನ್ನು ಬಸ್ಸಿನಲ್ಲಿದ್ದವರೆಲ್ಲ ಕೌತುಕದಿಂದ ಗೌರವ ದಿಂದ ನೋಡುವವರೇ.

ಕರಿಯ ಬ್ಯಾಗನ್ನು ಇಸಕೊಂಡು ತನ್ನ ತಲೆಗೇರಿಸಿದ.

ಕತ್ತಲಾಗುವುದರೊಳಗೆ ಅವರು ಹಳ್ಳಿ ತಲಪಿದರು.

...ಅಂದು ರಾತ್ರೆ ಎಂಟರ ಸುಮಾರಿಗೆ ಗೋವಿಂದ ಭಾಗ್ಯನಗರದಿಂದ ಕಣಿವೇಹಳ್ಳಿಗೆ ವಾಪಸಾದ.

ಅವನ ಜತೆಯಲ್ಲಿ ಅಪರಿಚಿತರು ಒಬ್ಬರು ಇದ್ದರು.

## ೭

ಪದ್ಮನಾಭನ ಕೊಠಡಿಯ ಬಾಗಿಲು ಮುಚ್ಚಿತ್ತು. ಹೊರಗಡೆ ನಿಂತು ದೊಡ್ಡಮ್ಮ ಕರೆದರು:

"ಪದ್ಮ, ಏ ಪದ್ಮ."

ಉತ್ತರ ಬರಲಿಲ್ಲವೆಂದು ಅವರು ಬಾಗಿಲನ್ನು ತಳ್ಳಿದರು. ಅದು ತೆರೆದುಕೊಂಡಿತು. ಒಳಗಿನಿಂದ ಅಗಣಿ ಹಾಕಿರಲಿಲ್ಲ. ಅಲ್ಲಿ ಕತ್ತಲು. ಅದೇನೂ ದೊಡ್ಡಮ್ಮನಿಗೆ ಅಡ್ಡಿಯಾಗದು. ಆ ಮನೆಯ ಅಂಗುಲ ಅಂಗುಲವನ್ನೂ ಅವರು ಬಲ್ಲರು.

ನೇರವಾಗಿ ಹೆಜ್ಜೆ ಇಟ್ಟು ಪದ್ಮನಾಭನ ಕುರ್ಚಿ ಮೇಜುಗಳಿದ್ದಲ್ಲಿಗೆ ಅವರು ಬಂದರು. ಅವರು ನಿರೀಕ್ಷಿಸಿದ್ದಂತೆಯೇ ಪದ್ಮ ಒರಗಿ ಕುಳಿತಿದ್ದ. ಅಂಗೈಗೆ ಆನಿಸಿದ ತಲೆ.

ಮೊಮ್ಮಗನ ಕ್ರಾಪನ್ನು ನೇವರಿಸಿ ದೊಡ್ಡಮ್ಮ ಅಂದರು:

"ಪದ್ಮ, ಊಟಕ್ಕೇಳು ಮಗೂ."

ಆ ಬೆಳಗ್ಗೆ ಪದ್ಮನಾಭ ಕಾಫಿ ತಿಂಡಿ ಮುಟ್ಟಿರಲಿಲ್ಲ. ಊಟ ಮಾಡಿರಲಿಲ್ಲ. ಅಜ್ಜಿ ಒಂದು ಲೋಟ ಹಾಲನ್ನು ಇಟ್ಟು ಹೋಗಿದ್ದರು. ಅದನ್ನಷ್ಟು ಕುಡಿದಿದ್ದ. ಶ್ರೀನಿವಾಸಯ್ಯ ಹೊಲಗಳತ್ತ ಹೋದಮೇಲೆ, ಪದ್ಮ ಮಾವಿನ ತೋಪಿನಲ್ಲಿ ಸ್ವಲ್ಪ ಹೊತ್ತು ಕಳೆದಿದ್ದ. ಮರಳಿ ಬಂದು ತನ್ನ ಕೊಠಡಿಯನ್ನು ಸೇರಿಕೊಂಡಿದ್ದ. ಯಾರೊಡನೆಯೂ ಮಾತಿಲ್ಲ, ಕತೆಯಿಲ್ಲ.

ಮಾಧುರ್ಯ ಕಳೆದುಕೊಂಡಿದ್ದ ಗಂಟಲಲ್ಲಿ ಪದ್ಮನಾಭನೆಂದ:

"ನನಗೇನೂ ಬೇಡ, ದೊಡ್ಡಮ್ಮ."

"ಹುಚ್ಚ ! ಬರೀ ಹೊಟ್ಟೇಲಿ ಮಲಕೋತಾರೇನೋ ಯಾರಾದರೂ ?"

"ಇವತ್ತು ನನಗೇನೂ ಬೇಡ."

"ಮಧ್ಯಾಹ್ನ ನಾನೂ ಏನೂ ತಗೊಂಡಿಲ್ಲ."

"ಯಾಕೆ ದೊಡ್ಡಮ್ಮ ?"

"ನೀನು ಉಪವಾಸವಿದ್ದೆಯಲ್ಲ ?"

"ಈಗ ಊಟ ಮಾಡು."

"ನಾನು ಒಪ್ಪೊತ್ತಿನವಳು, ಮರೆತೆಯಾ ?"

"ಈಗೇನ್ಮಾಡಂತೀಯಾ ?"

"ಏಳು. ಭಾಗೀರಥಿ ಉಪ್ಪಿಟ್ಟು ಮಾಡಿದಾಳೆ. ಇಬ್ಬರೂ ತಗೊಳ್ಳೋಣ. ನಿನಗೊಂದು ತುತ್ತು ಮಜ್ಜಿಗೆ ಅನ್ನಾನೂ ಬಡಿಸ್ತೀನಿ."

"ಅಣ್ಣಯ್ಯನ ಊಟ ಆಗಲಿ."

"ಅವನು ಸಂಧ್ಯಾವಂದನೇಲಿದಾನೆ. ಅವರೆಲ್ಲಾ ಆ ಮೇಲೆ ಊಟ ಮಾಡ್ತಾರೆ. ಏಳು."

ಪದ್ಮನಾಭ ಎದ್ದ. ಕಾರಣ ಅಜ್ಜಿಯ ಮೇಲಣ ಮಮತೆಯೊ? ತಾಳ ಹಾಕುತ್ತಿದ್ದ ಹೊಟ್ಟೆಯೊ? ಉತ್ತರಿಸಲು ಅವನು ಸಿದ್ಧನಿರಲಿಲ್ಲ.

ಆತ ಮೌನವಾಗಿ ಅಜ್ಜಿಯನ್ನು ಹಿಂಬಾಲಿಸಿ, ಕೈಕಾಲು ತೊಳೆದುಕೊಂಡು, ಅತ್ತಿಗೆ ಇಟ್ಟಿದ್ದ ಮಣೆಯ ಮೇಲೆ ಅಜ್ಜಿಯ ಮಗ್ಗುಲಲ್ಲಿ ಕುಳಿತ.

ಕನಸಿನ ರಾಜ್ಯದಲ್ಲಿ ತೇಲಿಹೋಗುತ್ತಿದ್ದವನನ್ನು ಹಿಡಿದು ಕುಲುಕಿ ನೆಲಕ್ಕೆ ಅಪ್ಪಳಿಸಿದಂತಾಗಿತ್ತು ಪದ್ಮನಾಭನ ಪರಿಸ್ಥಿತಿ.

ಚೀರಾಡಿದ ತಂದೆಯ ಕೈಗೆ ಬೆಳಗ್ಗೆ ಅವನು ಸಿಕ್ಕಿರಲಿಲ್ಲ. ಮೊಮ್ಮಗನಿಗೆ ತಿಳಿಯಹೇಳುವ ಹೊಣೆಯನ್ನು ದೊಡ್ಡಮ್ಮ ವಹಿಸಿಕೊಂಡಿದ್ದರು, ನಿರ್ವಹಿಸಿದ್ದರು.

"ಏನೋ ಹುಡುಗರು ಮಕ್ಕಳಾಟ ಆಡಿವೆ. ಸಾಸಿವೆಕಾಳನ್ನು ಗುಡ್ಡ ಮಾಡೋದೆ? ಶಾಮಣ್ಣನಿಗೆ ಬುದ್ಧಿ ಇಲ್ಲಾಂತ ನಿನಗೂ ಬುದ್ಧಿ ಬೇಡ್ವೆ ಶೀನ ?"

"ಅಮ್ಮ ! ಹಿರಿಯರ ಕಾಲದಿಂದ ನಡೆದು ಬಂದಿರೋ ಸ್ನೇಹಕ್ಕೆ ಚ್ಯುತಿ ಬರೋ ಹಾಗೆ ಶಾಮಣ್ಣ ಮಾತಾಡ್ದ. ಅವನ ಜತೆ ವಿರಸ ಮಾಡ್ಕೊಂಡು ಈ ಹಳ್ಳೀಲಿ ನಾವೇನು ಸುಖ

ಉಂಡೇವು ?"

"ನಿಜ ಕಣೋ. ಅದಕ್ಕೇ ನಾನು ಹೇಳೋದು. ಊರಿಗೇ ಬೆಂಕಿ ಬಿದ್ದಿದೆ ಅನ್ನೋ ಹಾಗೆ ಆಡ್ಬೇಡ. ಏನೋ ಒಂದು ಮಾತಾಯ್ತು. ಅದನ್ನ ಮರೆತು ಬಿಡ್ಬೇಕು."

"ಹುಂ. ಪದ್ಮನಿಗೆ ನಾಲ್ಕು ಬಾರಿಸಿದ್ಮೇಲೆ ಮರೆಯೋದು ಸುಲಭವಾಗುತ್ತೆ."

"ಅದನ್ನ ನನಗೆ ಬಿಟ್ಬಿಡು, ಶೀನ."

"ಕಿರಿಯ ಮೊಮ್ಮಗ ಅಂತ ನೀನು ಮುದ್ದಿಸಿ ಮುದ್ದಿಸಿ ಅವನು ಹಾಳಾಗಿ ಹೋಗಿದಾನೆ."

"ಇರಬಹುದು. ಹಾಳಾಗಿ ಹೋಗಿದ್ದರೆ ನಾನೇ ಸರಿಪಡಿಸ್ತೀನಿ."

"ಹಾಗಾದರೆ ನಾನು ಕೈ ಬಿಟ್ಟೆ. ನೀನುಂಟು, ನಿನ್ನ ಮೊಮ್ಮಗನುಂಟು. ಏನು ಬೇಕಾದರೂ ಮಾಡ್ಕೊಳ್ಳಿ."

"ನೀನು ಸುಮ್ನಿದ್ದು ಬಿಡು, ಶೀನ. ಎಲ್ಲಾ ಸರಿಹೋಗುತ್ತೆ."

"ಆಗಲಮ್ಮಾ, ಆಗಲಿ."

ದೊಡ್ಡಮ್ಮನ ಮನಸ್ಸು ಆತಂಕಕ್ಕೆ ಒಳಗಾಗಿರಲಿಲ್ಲ ಎಂದಲ್ಲ. ಆದರೆ ಆ ದುಗುಡವನ್ನು ಹೊರಗೆ ತೋರಿಸಿಕೊಳ್ಳುವಂತಿತ್ತೆ ? ಮನೆಯೊಳಗಿನ ಸಣ್ಣ ವಿಷಯ (ಹೋಗಲಿ, ದೊಡ್ಡದೇ ಆದರೂ) ಮನೆಯೊಳಗೇ ಇತ್ಯರ್ಥವಾಗಬೇಕು; ಆಳುಗಳು ಆಡಿಕೊಳ್ಳುವಂತಾಗಬಾರದು. ಉಗುರಿನಿಂದ ಆಗುವುದಕ್ಕೆ ಕೊಡಲಿ ಎತ್ತಬೇಕೆ?

ಮಗನೊಡನೆ ದೇವರ ಮನೆಯಲ್ಲಿ ಮಾತು ಆದ ಸ್ವಲ್ಪ ಹೊತ್ತಿನಲ್ಲಿ ಹಿತ್ತಿಲ ಬಾಗಿಲಿನಿಂದ ಪದ್ಮನಾಭ ಒಳಬಂದುದನ್ನು ದೊಡ್ಡಮ್ಮ ಕಂಡರು.

ಪಡಸಾಲೆಯಲ್ಲಿದ್ದ ಶ್ರೀನಿವಾಸಯ್ಯನವರ ಕಣ್ಣುಗಳು ಮಗನನ್ನು ನೋಡಿ ಕಿಡಿಕಾರಿದುವು. ಅತೀವ ತಿರಸ್ಕಾರದ ಭಾವನೆಯಿಂದ ಅವರ ಮುಖದ ಸ್ನಾಯುಗಳು ಮಿಸುಕಿದುವು.

ತಂದೆ–ಅಜ್ಜಿಯ ಸಂವಾದ ಪದ್ಮನಾಭನಿಗೆ ಕೇಳಿಸಿರಲಿಲ್ಲವಾದರೂ, ತನ್ನ ಬದುಕಿನ ದುರ್ಭರ ಘಳಿಗೆಯೊಂದು ಒದಗಿ ಬಂದುದನ್ನು ಅವನು ಅರಿತಿದ್ದ. ಸ್ವಲ್ಪ ಹೊತ್ತಿನ ಮಟ್ಟಿಗೆ ಮನೆಯಿಂದ ಹೊರಹೋಗುವುದೊಳಿತೆಂದು ಬಟ್ಟೆ ಬರೆ ಹಾಕಿಕೊಳ್ಳತೊಡಗಿದ.

ಅಷ್ಟರಲ್ಲಿ ದೊಡ್ಡಮ್ಮ ಒಳಕ್ಕೆ ಬಂದರು. ತಮ್ಮ ಹಿಂದೆ ಬಾಗಿಲು ಮುಚ್ಚಿ ಅಗಣಿ ಹಾಕಿದರು.

"ಎಲ್ಲಿಗೆ ಹೊರಟೆ?" ಎಂದು ಅವರು ಕೇಳಿದರು.

"ಎಲ್ಲಿಗೂ ಇಲ್ಲ, ಹೀಗೇ...."

"ಇವತ್ತು ಕೆಟ್ಟ ದಿವಸ ಪದ್ಮ. ಮನೆ ಬಿಟ್ಟು ಹೋಗ್ಬೇಡ."

"........."

ಉಡುಪು ಬದಲಾಯಿಸುವ ಕೆಲಸವನ್ನು ಪದ್ಮನಾಭ ಅರ್ಧಕ್ಕೇ ನಿಲ್ಲಿಸಿದ.

"ನನಗೆ ಎಪ್ಪತ್ತೈದು ದಾಟಿತು, ಪದ್ಮ."

"ಬಳಸು ಮಾತು ಯಾಕೆ ದೊಡ್ಡಮ್ಮ? ಏನಿದೆಯೋ ಹೇಳಿ ಬಿಡು."

"ಇನ್ನು ಹೆಚ್ಚು ವರ್ಷ ನಾನು ಬದುಕಿಯೋದಿಲ್ಲ, ಮಗೂ."

"............"

"ಇಷ್ಟು ಕಾಲ ನನಗೆ ಅದು ಬೇಕು ಇದು ಬೇಕು ಅಂತ ನಾನು ಬಾಯಿ ಬಿಟ್ಟು ಕೇಳಿಲ್ಲ....

ನಿನ್ನ ತಾಯಿ ಇದ್ದಾಗಲೂ ನೀನು ನನಗೇ ಅಂಟಿಕೊಳ್ತಿದ್ದೆ. ನೀವೆಲ್ಲ ತಬ್ಬಲಿಗಳಾದ ಮೇಲೂ ನನ್ನ ಕೈ ಅನ್ನ ಉಂಡೇ ನೀನು ಬೆಳೆದೆ. ಸಾಕಿದ ಅಜ್ಜಿ ಮೇಲೆ ನಿನಗೆ ಪ್ರೀತಿ ಇದೆಯೇನಪ್ಪ ?"

" ಏನು ದೊಡ್ಡಮ್ಮ ಇದೆಲ್ಲ ?"

" ಪ್ರೀತಿ ಇದ್ದರೆ ನಾನೊಂದು ಕೇಳ್ತೀನಿ. ನಡಸ್ಕೊಡು."

" ............ "

" ಸುಮ್ಮನಿದೀಯಲ್ಲೊ. ಹೂಂ ಅನ್ನೋಲ್ವೆ? "

" ಹೇಳು ದೊಡ್ಡಮ್ಮ."

" ಕಿರೇ ಮೊಮ್ಮಗನ ನಡತೆ ನೋಡಿ ಮುದುಕಿ ಕೊರಗಿ ಕೊರಗಿ ಸತ್ತೋದ್ಲು ಅಂತ ಜನ ಆಡ್ಕೊಳ್ಳದ ಹಾಗೆ ಮಾಡಿಕೊಡಪ್ಪ."

" ಈಗೇನಾಯಿತು ?"

" ಸುಬ್ಬೀನ ಕಂಡರೆ ನಿನಗೆ ಇಷ್ಟವೇನೊ ಪದ್ಮ ?"

" ............ "

" ನೀನೂ ಸುಬ್ಬಿಯೂ ಅಣ್ಣ ತಂಗಿ ಹಾಗೆ. ನಿಮ್ಮ ವಿಷಯ ಅಪಖ್ಯಾತಿ ಬರೋ ಮಾತು ಯಾರಾದರೂ ಆಡಿದರೆ ಅವರ ನಾಲಿಗೆಗೆ ಹುಳ ಬೀಳ್ಲಿ."

" ............ "

" ಇಷ್ಟೇ ಪದ್ಮ. ತನ್ನ ಮಗಳ ಹತ್ತಿರ ನೀನು ಮಾತಾಡೋದು ಶಾಮಣ್ಣನಿಗೆ ಇಷ್ಟ ವಿಲ್ಲವಂತೆ. ನೀನು ಅಲ್ಲಿಗೆ ಹೋಗಲೇಬೇಡ."

" ............ "

" ಕಾಫಿ ತಿಂಡಿಗೆ ಬಾ."

" ನನಗೇನೂ ಬೇಡ ದೊಡ್ಡಮ್ಮ."

" ಮುದುಕಿ ಏನೋ ಅಂದ್ಲೂಂತ ಬೇಜಾರಾಯ್ತೇನಪ್ಪ? ಗೋವಿಂದನಿಗೂ ನಿನಗೂ ಮದುವೆಯಾಗಿ, ಇನ್ನಿಬ್ಬರು ಗೃಹಲಕ್ಷ್ಮಿಯರು ಮನೆಗೆ ಬಂದು, ನಿಮ್ಮ ಮಕ್ಕಳನ್ನೂ ಎತ್ತಿ ಆಡಿಸಿ, ನಿಮ್ಮ ಕಣ್ಣೆದುರಲ್ಲೇ ಸಾಯಬೇಕೂಂತ ನನ್ನ ಆಸೆ, ಪದ್ಮ– ಪ್ರೀತಿಯ ಮೊಮ್ಮಗ ಕುಲಕ್ಕೆ ಕಳಂಕಪ್ರಾಯನಾದ ಅಂತ ಕಣ್ಣೀರಿಟ್ಟು ಕೊರಗಿ ನಾನು ಸಾಯೋ ಹಾಗೆ ಮಾಡ್ಬೇಡ."

" ಸಾಕು, ಸಾಕು ದೊಡ್ಡಮ್ಮ. ದಯವಿಟ್ಟು ಒಳಗೆ ಹೋಗು."

" ಹೋಗ್ತೀನಿ ಕಂದ. ಕಾಫಿ ತಿಂಡಿ ಇಲ್ಲಿಗೇ ತಗೊಂಡ್ಬರ್‍ಲಾ ?"

" ಬೇಡ, ನನ್ನಾಣೆ. ಹಸಿವಾದರೆ ನಾನೇ ಕೇಳ್ತೀನಿ."

" ನಿನ್ನಿಷ್ಟ" ಎಂದು ಹೇಳಿ ದೊಡ್ಡಮ್ಮ ನಿಟ್ಟುಸಿರು ಬಿಟ್ಟು, ಅಗಣಿ ತೆಗೆದರು.

" ಇವತ್ತು ಕೆಟ್ಟ ದಿವಸ. ಮನೆ ಬಿಟ್ಟು ಹೋಗ್ಬೇಡ ಅಂತ ಆಗ್಩ೇ ಅಂದಿದೀನಿ,"

—ಎಂದು ಮತ್ತೊಮ್ಮೆ ನೆನಪು ಮಾಡಿಕೊಟ್ಟು ಹೊರಬಿದ್ದರು. ತಾವು ಆಡಿದುದನ್ನು ಜೀರ್ಣಸಿಕೊಳ್ಳಲು ಮೊಮ್ಮಗನಿಗೆ ಏಕಾಂತ ಬೇಕು ಎಂದು, ಬಾಗಿಲನ್ನೆಳೆದು ಮುಚ್ಚಿಕೊಂಡರು.

ಆ ಏಕಾಂತದಲ್ಲಿ ಪದ್ಮನಾಭನ ಮನಸ್ಸು ಬಹಳ ಹೊತ್ತು ರೋದಿಸಿತು. ತಂದೆ ಚೀರಾಡಿ ಏನಾದರೂ ಅಂದಿದ್ದರೆ ಖಂಡತುಂಡವಾಗಿ ತಾನೂ ಉತ್ತರಿಸಬಹುದಿತ್ತು. ಆದರೆ ಮಮತೆಯ ಅಜ್ಜಿಗೆ ಹೇಗೆ ತಾನೇ ಆತ ಇದಿರಾಡಬಲ್ಲ ?

ಸುಭದ್ರೆಯ ಮನಸ್ಸಿನಲ್ಲಿ ಏನಿತ್ತೋ ಏನಿರಲಿಲ್ಲವೋ, ಪದ್ಮನಾಭ ಅವಳನ್ನು ಬಯಸಿದ್ದು ನಿಜ. ಕಾರಣವಿಷ್ಟೆ: ಕಾಲೇಜಿನ ತನ್ನ ತರಗತಿಯ ಹೆಣ್ಣೊಬ್ಬಳಿಗೆ ಅವನು ಮರುಳಾಗಿದ್ದ. ಇನ್ನೇನು ತನ್ನ ಹೃದಯವನ್ನು ಅವಳೆದುರು ತೋಡಿಕೊಳ್ಳಬೇಕು ಎನುಷ್ಟರಲ್ಲೆ ಆಕೆ ತನ್ನ ರವಕೆಯೊಳಗೆ ಅಷ್ಟು ದಿನ ಹುದುಗಿಸಿದ್ದ ಮಾಂಗಲ್ಯ ಚಿಹ್ನೆಯನ್ನು ಹೊರಕ್ಕೆ ಮೆರೆಸಿದ್ದಳು.

ಆ ಮನೋವ್ಯಾಕುಲದೊಡನೆ ಊರಿಗೆ ಬಂದ ಪದ್ಮನಾಭ, ಸುಭದ್ರೆಯನ್ನು ಕಂಡಾಗ ಒಮ್ಮೆಲೆ ಬೆಚ್ಚಿಬಿದ್ದ. ಇವಳಿಗೂ ಅವನು ಬಯಸಿದ ಹೆಣ್ಣಿಗೂ ರೂಪದಲ್ಲಿ ಹೋಲಿಕೆ ಇದ್ದಂತೆ ಕಂಡಿತು ! ಅಷ್ಟು ದಿನ ಅದನ್ನವನು ಗಮನಿಸಿಯೇ ಇರಲಿಲ್ಲ. ಪರಿಣಾಮ : ಸುಭದ್ರೆಯ ಸಾನ್ನಿಧ್ಯಕ್ಕಾಗಿ ಪರದಾಟ.

ಆ ಗುಂಗಿನಲ್ಲಿ ಅವಳನ್ನು ಪದ್ಮನಾಭ ಕೇಳಿದ್ದ:

"ನೀನು ನನ್ನ ಮದುವೆಯಾಗ್ತೀಯಾ, ಸುಬ್ಬಿ?"

"ಐ, ಅದೆಂಗಾತದೆ ?"

"ಯಾಕೆ? ನೀನು ಯಾರ ಹೆಂಡತೀನೂ ಅಲ್ವಲ್ಲ ?"

"ಇಸ್ಸೀ !"

"ಅಂದರೆ? ನಾನು ಒಪ್ಪಿಗೆ ಇಲ್ಲ ಅಂತಲಾ ? "

"ನಿಮ್ಮನ್ನ ನಾನು ಒಪ್ಕಂಡು ಎಷ್ಟೋ ವರ್ಸ ಆಯ್ತು."

"ಎಲಾ ಕಳ್ಳಿ ! ಇಷ್ಟು ದಿನ ಹೇಳೇ ಇರ್ಲಿಲ್ಲ...."

"ನಾಚ್ಕೆ."

"ಹಾಗಾದರೆ ನಡಿ. ದಿಬ್ಬದ ಹೊಂಡಕ್ಕೆ ಹೋಗೋಣ. ನಾಚ್ಕೆ ಬಿಟ್ಟು ಒಪ್ಪಿಗೆ ಅನ್ನೋದನ್ನ ತೋರಿಸ್ಕೊಡು."

"ಹೆಂಗೆ?"

"ತುಟಿಗೆ ತುಟಿ...."

"ಥುತ್ ಥುತ್ !"

"ಹಾಗಾದರೆ ಠೂ ಬಿಟ್ಟೆ."

"ನೀವು ಕೆಟ್ಟೋರು."

"ಯಾಕೆ ? ನಿಂತುಬಿಟ್ಟೆಯಲ್ಲ ! ಎತ್ಕೊಂಡು ಹೋಗ್ಲೇನು ?"

"ನನಗೆ ಭಯ."

"ನಾನಿದೀನಿ ಸುಬ್ಬೀ."

ಅವಳೊಬ್ಬಳಿಗೇ ಅಲ್ಲ; ದಿಬ್ಬದ ಹೊಂಡದಲ್ಲಿ ಮುನಿಯನ ಶವವನ್ನೂ ಅದರ ಮೇಲೆ ಎರಗುತ್ತಿದ್ದ ಹದ್ದುಗಳನ್ನೂ ಕಂಡೊಡನೆ ಇಬ್ಬರಿಗೂ ಭಯವಾಗಿತ್ತು. ಹುಲಿ ಬಂತೆಂದು ಬಾಲ ಎತ್ತಿ ಓಡುವ ಬಡಪಶುಗಳಾಗಿ ಅವರು ಅಲ್ಲಿಂದ ಹಳ್ಳಿಗೆ ಓಡಿಬಂದಿದ್ದರು.

ಅದಾದ ಮೇಲೆ ಈ ಘಟನೆ......

ಆ ಹಗಲು ಪದ್ಮನಾಭ ಬಹಳ ಯೋಚಿಸಿದ. ಅವನಿಗನಿಸಿತು: ಅರೆನಿದ್ದೆಯಲ್ಲಿದ್ದವ ತಡಕಾಡುವ ಹಾಗೆ ವರ್ತಿಸಿದ್ದೆನಲ್ಲವೆ ? ಈಗ ಪೂರ್ತಿ ಎಚ್ಚರವಾಗಿದೆ. ಸುಬ್ಬಿಯನ್ನ ಮದುವೆಯಾಗಬೇಕೆಂಬ ಛಲ ತನಗಿಲ್ಲವಲ್ಲ! ಪ್ರೇಮಕ್ಕಾಗಿ ತ್ಯಾಗ ಮಾಡಬಹುದ

ಎಷ್ಟೋ ಜನ ಹಿಂದೆ ಮಾಡಿದ್ದಾರೆ; ಮುಂದೆಯೂ ಮಾಡುತ್ತಾರೆ. ಆದರೆ ಸುಬ್ಬಿಯ ಮೇಲೆ ತನಗೆ ಪ್ರೇಮ ಎಲ್ಲಿಯದು? ಇಲ್ಲ ಎಂದಾದ ಮೇಲೆ ಯಾಕೆ ಗಾಬರಿಯಾಗಬೇಕು ತಾನು? ರಂಗಣ್ಣ ದಿಬ್ಬದ ಮೇಲಿದ್ದ. ತಮ್ಮನ್ನು ಕಂಡಿದ್ದ. ಕಾಣಲಿ. ಸಲ್ಲದುದೇನನ್ನೂ ತಾವು ಮಾಡಿಲ್ಲವಲ್ಲ ? ಅಷ್ಟಕ್ಕೂ ಪ್ರಕರಣ ಈಗ ಮುಗಿದಂತೆಯೇ. ಅಬ್ಬ! ಹೀಗೂ ಆಗಬಹುದೆಂದು ಯಾರು ಊಹಿಸಿದ್ದರು ?

ಪದ್ಮನಾಭನಿಗೆ ಅವಮಾನವಾಗಿತ್ತು. ಆದರೆ ದೊಡ್ಡಮ್ಮ ಆರೋಪಗಳನ್ನೇನೂ ಸದ್ಯಃ ಹೊರಿಸಲಿಲ್ಲ ! ರಂಗಣ್ಣನಿಗೂ ತನಗೂ ಒಂದು ಕಾಲದಲ್ಲಿ ಸ್ನೇಹವಿತ್ತು. ಮುಂದೆ ಅವನಾಗಿಯೇ ದೂರ ಹೋದ. ಆ ಕಾರಣಕ್ಕಾದರೂ ಸುಭದ್ರೆಯನ್ನು ಹತ್ತಿರಕ್ಕೆ ಸೆಳೆದುಕೊಂಡು ರಂಗಣ್ಣನ ಮುಖ ಭಂಗ ಮಾಡಲು ತಾನು ಇಚ್ಛಿಸಿದ್ದೆ—ಎಂದರೆ, ಸ್ವಲ್ಪ ಮಟ್ಟಿಗೆ ಅದು ನಿಜವೇ.

ರಂಗಣ್ಣನನ್ನು ಕೆರಳಿಸಿದೆ ಎಂದು ತಾನು ಸಮಾಧಾನಪಟ್ಟುಕೊಳ್ಳಬಹುದು—ಎಂದುಕೊಂಡ ಪದ್ಮನಾಭ.

ಒಟ್ಟಿನಲ್ಲಿ?

ವಿಚಾರಗಳ ಮೊತ್ತ ಪದ್ಮನಾಭನನ್ನು ಅಣಕಿಸಿತು:

"ಈ ಕೆಲಸ ನಾನು ಮಾಡಬಾರದಾಗಿತ್ತು."

ಮತ್ತೆ ಮತ್ತೆ ಆ ಮಾತನ್ನು ಆತ ತನ್ನಷ್ಟಕ್ಕೆ ಆಡಿಕೊಂಡ.

ಮಧ್ಯಾಹ್ನ ಹಸಿವಾಗಿತ್ತು. ಎದ್ದು ಊಟಕ್ಕೆ ಹೋದನೋ ಸ್ವಾಭಿಮಾನಕ್ಕೆ ಕುಂದು–ಕಣ್ಣು ಮುಚ್ಚಿ ಮಲಗಿದ.

ದೊಡ್ಡಮ್ಮ ಬಂದು ನೋಡಿದರು. ಆದರೆ ಮೈ ಮುಟ್ಟಿ ಮೊಮ್ಮಗನನ್ನು ಎಬ್ಬಿಸಲಿಲ್ಲ. ಲೋಟ ತುಂಬ ಹಾಲನ್ನು ಮೇಜಿನ ಮೇಲಿಟ್ಟು ಹೋದರು.

ಕತ್ತಲಾದ ಮೇಲೆ ಅವರು ಬಂದು ಕರೆದಾಗ ತಕ್ಷಣವೇ ಏಳಲು ಪದ್ಮನಾಭ ಸಿದ್ಧನಾಗಿದ್ದ. ಆದರೂ ತನಗೆ ಸೋಲಾಯಿತೆಂಬುದನ್ನು ತೋರಿಸಿಕೊಳ್ಳದೆಯೇ ಆತ ದೊಡ್ಡಮ್ಮನನ್ನು ಹಿಂಬಾಲಿಸಿದ್ದ.

......ಅಜ್ಜಿ——ಮೊಮ್ಮಗನ ಪಾರಣೆಯಾಗುತ್ತಿದ್ದಂತೆ ಹೊರಗೆ ಗೋವಿಂದ ಹಾಗೂ ಇನ್ನೊಬ್ಬರ ಸ್ವರಗಳು ಕೇಳಿಸಿದುವು.

ಅಪರಿಚಿತ ಧ್ವನಿ :

"ಕೈ ಕಾಲು ತೊಳಕೊಂಡೇ ಒಳಗೆ ಹೋಗೋಣ."

ಗೋವಿಂದ:

"ಅಂಗಳದ ಮೂಲೇಲಿ ನೀರಿದೆ. ಬನ್ನಿ."

"ನಿಮ್ಮ ತಂದೆಯವರು ಇದ್ದಾರೇಂತ ಕಾಣುತ್ತೆ."

"ಇಷ್ಟು ಹೊತ್ನಲ್ಲಿ ಎಲ್ಲರೂ ಮನೇಲಿರ್ತಾರೆ. ಬಹುಶಃ ಅಣ್ಣಯ್ಯ ಸಂಧ್ಯಾವಂದನೆಗೆ ಕೂತಿರ್ಬೇಕು."

"ಕತ್ತಲಾದ್ಮೇಲೆ ಹಳ್ಳಿಗೆ ಬಂದ ಹಾಗಾಯ್ತು. ಸೋಮಪುರ ಎಕ್ಸ್‌ಪ್ರೆಸ್‌ನಲ್ಲೇ ಸೀಟು ಸಿಕ್ಕಿದ್ದಿದ್ರೆ ಸೂರ್ಯ ಮುಳುಗೋದಕ್ಕೆ ಒಂದು ಘಳಿಗೆ ಮುಂಚೇನೆ ಬರ್ತಿದ್ದೆವೂಂತ

ಕಾಣ್ತದೆ."

"ಹೌದು. ತಾಳಿ. ಟವೆಲ್ ತರ್ತೀನಿ."

"ಬೇಡಿ, ಗೋವಿಂದರಾವ್. ಟವೆಲು ಯಾಕೆ ? ತಾನೇ ಒಣಗ್ತದೆ."

ಆ ಸ್ವರದ ಪರಿಚಯ ಪದ್ಮನಾಭನಿಗಿರಲಿಲ್ಲ.

'ಗೋವಿಂದ ಯಾರನ್ನೋ ಕರಕೊಂಡು ಬಂದ ಹಾಗಿದೆ. ಕಣಿವೇಹಳ್ಳಿಯವರಲ್ಲಾಂತ ಕಾಣುತ್ತೆ.'

ಮತ್ತೆ ಹೊರಗಿನಿಂದ ಮಾತುಗಳು ಕೇಳಿಸಿದುವು..

"ಬನ್ನಿ. ಕೂತ್ಕೊಳ್ಳಿ. ನಾನು ಈ ಯೂನಿಫಾರ್ಮ್ ಬಿಚ್ಚಿ ಬರ್ತೀನಿ."

"ಹಹ್ಹ! ಆಗಲಿ ಗೋವಿಂದರಾವ್."

ಗೋವಿಂದ ಪದ್ಮನಾಭನ [ಹಾಗೂ ತನ್ನ] ಕೊಠಡಿಗೆ ಹೋದ.

ಅಷ್ಟರಲ್ಲಿ ಶ್ರೀನಿವಾಸಯ್ಯ ಪಡಸಾಲೆಗೆ ಬಂದರು. ಜಗಲಿಯಲ್ಲಿ ಯಾರೋ ಕುಳಿತಿದ್ದು ದನ್ನು ಕಂಡು [ಅಸ್ಪಷ್ಟ ಸಂಭಾಷಣೆ ಅವರಿಗೂ ಕೇಳಿಸಿತ್ತು] ಅಲ್ಲಿಗೆ ನಡೆದರು.

ಅಪರಿಚಿತ ಎದ್ದು ನಿಂತು, "ನಮಸ್ಕಾರ," ಎಂದು ಕೈಜೋಡಿಸಿದರು.

"ನಮಸ್ಕಾರ, ನಮಸ್ಕಾರ. ಗೋವಿಂದನ ಜತೆ ಬಂದಿರೊ? ತಮ್ಮ ಪರಿಚಯ ನನಗಿಲ್ಲ ಅಂತ ತೋರುತ್ತೆ."

ಶ್ರೀನಿವಾಸಯ್ಯ ಇನ್ನೊಂದು ಕುರ್ಚಿಯಲ್ಲಿ ಆಸೀನರಾದ ಮೇಲೆ ಬಂದವರು ಕುಳಿತು ಕೊಂಡರು. ಆತನೆಂದರು:

"ಉಂಟು, ಇಲ್ಲ. ಹ್ಯಾಗೆ ಹೇಳಿದರೂ ಸರಿಯೇ."

ಎಲ್ಲೋ ಇವನನ್ನು ಕಂಡಿದೀನಲ್ಲ—ಎನಿಸಿತು ಶ್ರೀನಿವಾಸಯ್ಯನವರಿಗೆ. ನೆನಪು ಮಾಡಿಕೊಳ್ಳುವ ಪ್ರಯತ್ನದಲ್ಲಿ ಹಣೆ ನೆರಿಗೆ ಕಟ್ಟಿತು. ಪ್ರಯೋಜನವಾಗಲಿಲ್ಲ.

ಆತನೆ ಮುಂದುವರಿಸಿದರು:

"ಮೂರು ವರ್ಷಗಳಿಗೆ ಹಿಂದೆ ತಾವೂ—ಈ ಊರಿನ ಗೌಡರೂ ನನ ಲ್ಲಿ ಆತಿಥ್ಯ ಸ್ವೀಕರಿಸಿದ್ದಿರಿ. ಅದನ್ನು ಆತಿಥ್ಯ ಅಂತ ಕರೀಬಹುದೋ ಬಾರದೊ ಅದು ಮಾತ್ರ ಗೊತ್ತಿಲ್ಲ."

ಶ್ರೀನಿವಾಸಯ್ಯ ಯೋಚಿಸಿದರು:

ಮೂರು ವರ್ಷಗಳಿಗೆ ಹಿಂದೆ ತಾವೂ ಶಾಮೇಗೌಡರೂ ಜತೆಯಾಗಿ ಮಕ್ಕಳನ್ನು ಕಾಲೇಜುಗಳಿಗೆ ಸೇರಿಸುವುದಕ್ಕೋಸ್ಕರ ಭಾಗ್ಯನಗರಕ್ಕೆ ಹೋಗಿದ್ದರು. ಆತಿಥ್ಯ ಸ್ವೀಕರಿಸಿದ್ದರೆ ಅದು ಅಲ್ಲಿಯೇ ಇರಬೇಕು... .ಅಲ್ಲಿ — ಹಾಂ !

ಅಷ್ಟರಲ್ಲಿ ಗೋವಿಂದ ಮಾತನಾಡುತ್ತ ಅವರಿದ್ದಲ್ಲಿಗೆ ಬಂದ.

"ಇವರು ನ್ಯೂ ಗಣೇಶ ಭವನದ ಮಾಲಿಕರು ಅಣ್ಣಯ್ಯ. ಗಣೇಶ ಭವನ ಗೊತ್ತಿಲ್ವೆ ? ನಗರದ ಬಸ್‌ಸ್ಟ್ಯಾಂಡಿನ ದಕ್ಷಿಣದಲ್ಲಿ ಭೋಲಾಪಂತ್ ರಸ್ತೇಲಿದೆ. ನೀವಲ್ಲೇ ಹಿಂದೆ ಇಳ ಕೊಂಡಿದ್ರಿ."

"ಆ ಆತಿಥ್ಯವಾ ? ಹೊಹ್ಹೊ ! ಸಂತೋಷ ಸಂತೋಷ !"

ಆ ಮನುಷ್ಯನೆಂದರು:

"ನನ್ನ ಹೆಸರು ವಿಷ್ಣುಮೂರ್ತಿ ಅಂತ."

"ನೆನಪಾಯ್ತು, ನೆನಪಾಯ್ತು."

ದೊಡ್ಡಮ್ಮ ಪಡಸಾಲೆಯ ಬಾಗಿಲಿಗೆ ಬಂದು ನಿಂತರು. ವಿಷ್ಣುಮೂರ್ತಿಯನ್ನು ತಾವೇ ಕರಕೊಂಡು ಬಂದೆವೆಂಬಂತೆ ಶ್ರೀನಿವಾಸಯ್ಯ ಉತ್ಸಾಹಿತರಾಗಿ ಆತನ ಪರಿಚಯವನ್ನು ತಮ್ಮ ತಾಯಿಗೆ ಮಾಡಿಕೊಟ್ಟರು.

ದಿನದ ಕಹಿ ನೆನಪುಗಳನ್ನು ಮರೆಯಲು ಈ ಆಗಂತುಕ ಬಂದನೆಂದು ಶ್ರೀನಿವಾಸಯ್ಯನಿಗೆ ಆನಂದವಾಗಿತ್ತು:

ವಿಷ್ಣುಮೂರ್ತಿ ಥಟ್ಟನೆದ್ದು ದೊಡ್ಡಮ್ಮನೆದುರು ನಡುಬಾಗಿಸಿ ಪಾದ ಗಳಿಗೆ ನಮಿಸಿದರು.

"ಏಳಿ. ದೇವರು ನಿಮಗೆ ಒಳ್ಳೇದು ಮಾಡಲಿ," ಎಂದರು ದೊಡ್ಡಮ್ಮ. ವಯಸ್ಸಿನಲ್ಲಿ ತಮ್ಮ ಮಗನಿಗಿಂತ ಸ್ವಲ್ಪ ಮಾತ್ರ ಚಿಕ್ಕವನಿರಬಹುದಾದ ಈತ ಮೊಮ್ಮಗ ಗೋವಿಂದನಿಗೆ ಅದೆಂಥ ಸ್ನೇಹಿತ—ಎಂದು ಅವರು ಸೋಜಿಗಪಟ್ಟರು.

"ಒಳಗೆ ಬನ್ನಿ," ಎಂದು ಶ್ರೀನಿವಾಸಯ್ಯ ವಿಷ್ಣುಮೂರ್ತಿಯನ್ನು ಪಡಸಾಲೆಗೆ ಕರೆ ತಂದರು. ಅಲ್ಲಿ ರತ್ನಗಂಬಳಿಯನ್ನು ಹಾಸಿತ್ತು.

"ಎರಡು ನಿಮಿಷ ಕೂತ್ಕೊಳ್ಳಿ," ಎಂದರು.

ಎರಡು ನಿಮಿಷಗಳ ಆ ಅವಕಾಶ ಒಳಗೆ ಊಟಕ್ಕೆ ಅಣಿ ಮಾಡಲು. ಅದರ ಉಸ್ತುವಾರಿಗೆ ದೊಡ್ಡಮ್ಮ ಹೋದರು.

ಕೊಠಡಿಗೆ ಹೋಗುವುದಕ್ಕೋಸ್ಕರ ಪದ್ಮನಾಭ ನಡುಮನೆಗೆ ಬಂದ. ಶ್ರೀನಿವಾಸಯ್ಯ ಅವನತ್ತ ನೋಡಿಯೂ ನೋಡದವರಂತಿದ್ದರು.

ಗೋವಿಂದನೆಂದ:

"ಇವನು ನನ್ನ ತಮ್ಮ. ನಿಮಗೆ ಗೊತ್ತಲ್ಲ ?"

ವಿಷ್ಣುಮೂರ್ತಿ ತಲೆಯಾಡಿಸಿದರು.

"ಓಹೋ ಓಹೋ ! ಗೊತ್ತಿಲ್ಲದೆ ಉಂಟೆ?"

ಕಂದೀಲಿನ ಬೆಳಕಿನಲ್ಲಿ ಪದ್ಮನಾಭ ಆ ವ್ಯಕ್ತಿಯನ್ನು ಗುರುತಿಸಿದ. ತನ್ನ ಅಣ್ಣನನ್ನು ಕಾಣಲೆಂದು ಮೂರು ನಾಲ್ಕು ಸಾರೆ ಆ ಮನುಷ್ಯನ ಭೋಜನ ಮತ್ತು ವಸತಿ ಗೃಹಕ್ಕೆ ಪದ್ಮನಾಭ ಹೋದುದಿತ್ತು.

ಸಂದೇಹವೇನಾದರೂ ಉಳಿದಿದ್ದರೆ ಪರಿಹಾರವಾಗಲೆಂದು ವಿಷ್ಣುಮೂರ್ತಿ ಅಂದರು:

"ಗೋವಿಂದರಾವ್ ನಗರಕ್ಕೆ ಬಂದಾಗ ಉಳಿದುಕೊಳ್ಳೋದು ನಮ್ಮಲ್ಲೇ."

"ತಿಳೀತು, ತಿಳೀತು," ಎಂದರು ಶ್ರೀನಿವಾಸಯ್ಯ. ತನ್ನ ಕೋಣೆಗೆ ಹೊರಟ ಪದ್ಮನಾಭ ನನ್ನುದ್ದೇಶಿಸಿ, "ಪದ್ಮ, ಮನೆಗೆ ಬಂದವರಿಗೆ ನಮಸ್ಕಾರ ಮಾಡಿದಿಯೇನೊ ?" ಅಂದರು.

ಪದ್ಮನಾಭ ಗಂಟಿಕ್ಕಿದ ಮುಖದಿಂದ ನಮಸ್ಕರಿಸಿ ಹೋದ.

"ಏನೂ ಪರವಾಗಿಲ್ಲ, ಏನೂ ಪರವಾಗಿಲ್ಲ," ಎಂದರು, ವಿಷ್ಣುಮೂರ್ತಿ.

ದೊಡ್ಡಮ್ಮ ಒಳಬಾಗಿಲಲ್ಲಿ ಕಾಣಿಸಿಕೊಂಡು, "ಏಳಬಹುದು. ಸ್ನಾನಕ್ಕೆ ನೀರು ತೋಡಿದೆ," ಎಂದರು.

ಸ್ನಾನ, ಪ್ರಯಾಣ ಮಾಡಿ ಬಂದಿದ್ದವರಿಗೆ, ಮೈಲಿಗೆ ಕಳೆಯಲು.

ಜಗಲಿಯ ಮೂಲೆಯಲ್ಲಿರಿಸಿದ್ದ ಚೀಲದಿಂದ ವಿಷ್ಣುಮೂರ್ತಿ ಬದಲಿ ಉಡುಪನ್ನೆತ್ತಿ

ಕೊಂಡರು.

ಸ್ನಾನ ಮುಗಿಸಿ ಚುಟುಕಾಗಿ ಸಂಧ್ಯಾವಂದನೆಯನ್ನೂ ಮಾಡಿದರು.

ಹಿರಿಯವನು– ಗೋಪಾಲ– ಮಗುವಿನೊಡನೆ ಆಟವಾಡುತ್ತ ತನ್ನ ಕೊಠಡಿಯಲ್ಲಿದ್ದ. ದೊಡ್ಡಮ್ಮ ಅಲ್ಲಿಗೆ ಬಂದು, "ನೀನು ಊಟಕ್ಕೆ ಹೋಗು, ಗೋಪೂ. ಮಗೂನ ನಾನು ನೋಡ್ಕೊಳ್ತೀನಿ" ಎಂದರು.

ಊಟದ ಮನೆಯಲ್ಲಿ ಸಾಲಾಗಿ ಎಲೆ ಹಾಕಿದ್ದರು. ಶ್ರೀನಿವಾಸಯ್ಯನವರ ಎಡಕ್ಕೆ ವಿಷ್ಣು ಮೂರ್ತಿ, ಅವರ ಎಡಕ್ಕೆ ಗೋವಿಂದ, ತಂದೆಯ ಬಲದಲ್ಲಿ ಗೋಪಾಲ.

"ಪದ್ಮನ ಊಟ ಆಯ್ತೇನು?" ಎಂದು ಶ್ರೀನಿವಾಸಯ್ಯ ಗಟ್ಟಿಯಾಗಿ ಕೇಳಿದರು.

"ಆಗಲೇ ಆಯ್ತು," ಎಂದಳು ಭಾಗೀರಥಿ.

"ಒಪ್ಪವಾದ ಸಂಸಾರ, ಒಪ್ಪವಾದ ಸಂಸಾರ. ಎಷ್ಟೊಂದು ಅನ್ಯೋನ್ಯವಾಗಿದೀರಿ; ಎಷ್ಟೊಂದು ಸ್ನೇಹದಿಂದಿದೀರಿ! ಇಂಥ ಕುಟುಂಬವನ್ನು ನೋಡಿದರೆ ಸಾಕು, ಹೊಟ್ಟೆ ತುಂಬುತ್ತೆ" ಎಂದರು ವಿಷ್ಣುಮೂರ್ತಿ.

ಉಣ್ಣುತ್ತ ಸ್ವಂತದ ವಿಷಯ ಹೇಳುತ್ತ, ವಿಷ್ಣುಮೂರ್ತಿ ಅಂದರು:

"ನನ್ನ ವಂಶವೃಕ್ಷವೇನೋ ದೊಡ್ಡದೇ. ಪೂರ್ವಜರು ಸ್ಥಿತಿವಂತರು. ಘಟ್ಟದ ಕೆಳಗೆ ಈಗಲೂ ಅವರ ಕುಟುಂಬ ಇದೆ. ನನ್ನ ತಂದೆ ಏನೋ ಸಣ್ಣ ಕಾರಣಕ್ಕಾಗಿ ಮನೆಬಿಟ್ಟು ಘಟ್ಟದ ಸೀಮೆಗೆ ಬಂದರು. ದಿನಸಿನ ವ್ಯಾಪಾರ ಮಾಡಿದರು. ಅವರಿಗೆ ನಾನು, ನನ್ನ ತಮ್ಮ ಇಬ್ಬರೇ. ನಾನು ನಗರಕ್ಕೆ ಬಂದು ನೆಲೆಸಿದೆ. ನನ್ನ ತಮ್ಮನ ಸಂಸಾರ ತೀರ್ಥಪುರದಲ್ಲಿದೆ. ತಂದೆ ತೀರಿ ಹೋದ ಮೇಲೆ ಅವರ ಉದ್ಯೋಗವನ್ನು ಆತ ಮುಂದುವರಿಸ್ತಿದಾನೆ."

"ಹೋಟೆಲು ಉದ್ಯಮ ಲಾಭದಾಯಕ, ಅಲ್ವೆ ?" ಎಂದರು ಶ್ರೀನಿವಾಸಯ್ಯ.

"ಲಾಭ, ಲಾಭವಾಗದಿದ್ದರೆ ನಷ್ಟ. ಇದ್ದುದನ್ನು ಇದ್ದ ಹಾಗೆ ಹೇಳುವುದು ನನ್ನ ಅಭ್ಯಾಸ. ಒಂದು ಕಾಲದಲ್ಲಿ ಒಬ್ಬ ಸಪ್ಲೈ ಹುಡುಗ ಆಗಿದ್ದೆ. ಈಗ ಮೂವತ್ತು ನಾಲ್ವತ್ತು ಜನರಿಗೆ ಉದ್ಯೋಗ ಒದಗಿಸಿದ್ದೇನೆ. ಇದೆಲ್ಲ ದೇವರ ಆಟ; ಮನುಷ್ಯನದೇನೂ ಇಲ್ಲ. ಹೋದ ವರ್ಷ ನಮ್ಮ ತಂದೆಯವರ ಹುಟ್ಟೂರಿನಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಮಾಡಿಸಿದೆ."

"ಹೋಟೆಲು ಕಟ್ಟಡ ಸ್ವಂತದ್ದು, ಅಲ್ವೆ ?"

"ಹೌದು; ಅದು ಮತ್ತು ಅದರ ಹಿಂದಿರುವ ಮನೆ ಸ್ವಂತದ್ದೇ."

"ಸಂಸಾರ ದೊಡ್ಡದೂಂತ ಕಾಣ್ತದೆ."

"ತಕ್ಕಮಟ್ಟಿಗೆ ದೊಡ್ಡದೇ. ಗಂಡು ಹೆಣ್ಣು ಸೇರಿ ಒಟ್ಟು ಏಳು ಮಕ್ಕಳು."

"ಸಾರು ತಾ," ಎಂದು ಸೊಸೆಗೆ ನಿರ್ದೇಶವಿತ್ತು ಶ್ರೀನಿವಾಸಯ್ಯ ಅಂದರು:

"ನೀವು ಇಷ್ಟು ದೂರ ಬಂದಿರೋದು ನೋಡಿದರೆ, ಇಲ್ಲಿ ಹೊಲ ಕೊಂಡುಕೊಳ್ಳೋ ಲಕ್ಷಣ ಕಾಣಿಸ್ತಿದೆ. ನಾನು ಹೇಳಿದ್ದು ಸರಿಯಾ ವಿಷ್ಣುಮೂರ್ತಿಗಳೇ ?"

ವಿಷ್ಣುಮೂರ್ತಿ ಒಂದು ಕ್ಷಣ ಸುಮ್ಮನಿದ್ದು, ಅಂದರು:

"ದೈವೇಚ್ಛೆ ಇದ್ದರೆ ಅದೂ ಆದೀತು, ಸ್ವಾಮಿ."

ಗೋವಿಂದನೆಂದ:

"ಅಣ್ಣಯ್ಯ, ವಿಷ್ಣುಮೂರ್ತಿಗಳು ಈಗ ಬಂದಿರೋ ಉದ್ದೇಶ ಬೇರೆ. ವಿಶ್ವಾಸದ

ಒಬ್ಬನನ್ನು ಸಂಬಳಕ್ಕಿಟ್ಟು ಈ ಊರಲ್ಲೊಂದು ಹೋಟೆಲು ತೆರೀಬೇಕೂಂತ ಇವರ ಅಪೇಕ್ಷೆ."

ಮೌನಪ್ರಿಯನಾದ ಗೋಪಾಲ ಸಣ್ಣನೆ ನಕ್ಕ.

"ಹೌದೆ ?" ಎಂದರು ಶ್ರೀನಿವಾಸಯ್ಯ, ಬೆರಗಾಗಿ.

ವಿಷ್ಣುಮೂರ್ತಿ ನುಡಿದರು:

"ದುಡ್ಡಿನ ಆಸೆಗೋಸ್ಕರ ಅಲ್ಲ ಸ್ವಾಮಿ, ಖಂಡಿತ ಅಲ್ಲ. ನನಗೆ ಇಷ್ಟವಾಗಿರೋ ಒಬ್ಬ ಹುಡುಗನಿಗೆ ಸ್ವತಂತ್ರ ಜೀವನ ಮಾರ್ಗ ತೋರಿಸೋಣ ಅಂತ. ಈಗ ಅವನು ನಮ್ಮಲ್ಲಿ ಕ್ಯಾಷಿಯರ್ ಆಗಿದಾನೆ. ಒಟ್ಟಿನಲ್ಲಿ ಇದಕ್ಕೆ ತಮ್ಮ ಆಶೀರ್ವಾದ ಬೇಕು."

ಏನು ಹೇಳಬೇಕೆಂದು ತೋಚದೆ ಶ್ರೀನಿವಾಸಯ್ಯ ಗಟ್ಟಿಯಾಗಿ ನಕ್ಕರು.

ಸೊಸೆಯ ಕಡೆ ತಿರುಗಿ, "ಅನ್ನ, ಮಜ್ಜಿಗೆ," ಎಂದರು.

ಮುಂದೆ ಮೌನದ ಊಟ.

ಕೊನೆಯಲ್ಲಿ ಶ್ರೀನಿವಾಸಯ್ಯ, "ನಮ್ಮ ಆಶೀರ್ವಾದ ದೊಡ್ಡದಲ್ಲ, ವಿಷ್ಣುಮೂರ್ತಿಗಳೇ. ಮುಖ್ಯವಾಗಿ ಇದಕ್ಕೆ ಹಳ್ಳಿಯ ಪಟೇಲರ ಒಪ್ಪಿಗೆ ಬೇಕು. ನಿನ್ನೆಯವರೆಗಾದರೆ ನಾನು ಹೇಳಿದ ಮಾತನ್ನು ಅವರು ತೆಗೆದು ಹಾಕ್ತಿರಲಿಲ್ಲ. ಇವತ್ತೂ ಹಾಗೆಯೇ ಅಂತ ಧೈರ್ಯವಾಗಿ ಹೇಳಲಾರೆ. ನಾಳೆ ನೀವು ಶಾಮೇಗೌಡರನ್ನು ನೋಡಿ."

"ನೋಡ್ತೀನಿ, ನೋಡ್ತೀನಿ," ಎಂದರು ವಿಷ್ಣುಮೂರ್ತಿ.

## ೮

ಬೆಳಗ್ಗೆ ಎದ್ದು ಮುಖಮಾರ್ಜನಾದಿಗಳು ಮುಗಿದೊಡನೆ ವಿಷ್ಣುಮೂರ್ತಿ, "ಸ್ವಲ್ಪ ಶಾಮೇಗೌಡರಲ್ಲಿಗೆ ಹೋಗಿ ಬರೋಣವೆ, ಗೋವಿಂದರಾವ್ ?" ಎಂದು ಕೇಳಿದರು.

"ನಡೀರಿ," ಎಂದ ಗೋವಿಂದ.

ವಿಷ್ಣುಮೂರ್ತಿ ಚೀಲದಿಂದ ಆರು ಮೂಸಂಬಿ ಹಣ್ಣುಗಳನ್ನು ತೆಗೆದು ಹೊರಗಿರಿಸಿದರು. ಚೀಲದಲ್ಲಿ ಮತ್ತೂ ಆರು ಉಳಿದುವು. ದೊಡ್ಡದಾದೊಂದು ನಿಂಬೆಯ ಹಣ್ಣೂ ಇತ್ತು. ಆ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು, ಹೊರಕ್ಕಿರಿಸಿದ ಹಣ್ಣುಗಳ ಕಡೆ ಬೊಟ್ಟು ಮಾಡಿ, "ಗೋವಿಂದರಾವ್, ಇದನ್ನಿಷ್ಟು ಒಳಕ್ಕೆ ಸಾಗಿಸ್ಬಿಡಿ," ಎಂದರು.

ನಕ್ಕು ಗೋವಿಂದನೆಂದ:

"ಗೌಡರ ಮನೆಗೆ ಸರಿ. ಇಲ್ಲಿಗೆ ಯಾತಕ್ಕೆ ?"

"ರಂಪ ಮಾಡ್ಬೇಡಿ. ಒಳಗೆ ಅಜ್ಜಿಯವರ ವಶ ಕೊಟ್ಟು ಬನ್ನೀಪ್ಪ."

"ಆಗಲಿ, ಆಗಲಿ."

ಅಷ್ಟನ್ನು ಮಾಡಿದ ಗೋವಿಂದ, ಮನೆಬಿಟ್ಟು, ವಿಷ್ಣುಮೂರ್ತಿ ಜತೆ ಶಾಮೇಗೌಡರ ಮನೆಯತ್ತ ನಡೆದ.

ಅಪರಿಚಿತನೊಬ್ಬ ಗೋವಿಂದನೊಂದಿಗೆ ಬಂದು ಶ್ರೀನಿವಾಸಯ್ಯನವರಲ್ಲಿ ವಸತಿ ಮಾಡಿದ್ದು ರಾತ್ರಿಯೇ ಶಾಮೇಗೌಡರ ಕಿವಿಗೆ ಬಿದ್ದಿತ್ತು. ನೋಡಿದವನೊಬ್ಬ ಬಂದು ತಿಳಿಸಿದ್ದ.

ನಗರಕ್ಕೆ ಹೋದ ಗೋವಿಂದ ಇನ್ನೊಬ್ಬನನ್ನು ಕರೆದುಕೊಂಡು ಬಂದಿದ್ದಾನೆ. ಯಾಕೆ ? ಯಾರಿರಬಹುದು ಆತ ? ಯೋಚಿಸಿದಷ್ಟೂ ಸಂದೇಹದ ಸುಳಿ ಗೌಡರನ್ನು ಕೆಳಕ್ಕೆ ಎಳೆಯಿತು.

ಇಷ್ಟು ಧೈರ್ಯ ಇವನಿಗೆ, ನೋಡಿಯೇ ಬಿಡೋಣ—ಎಂದು ಮೀಸೆಯ ಮೇಲೆ ಕೈಯಾಡಿಸಿದ್ದರು.

ಬಂದವನು ಪೋಲೀಸ್ ಖಾತೆಯವನಿರಬೇಕೆಂದು ಗೌಡರ ಊಹೆ. ದಫೇದಾರ ಅಥವಾ ಇನ್ಸ್‌ಪೆಕ್ಟರ್. ಬಂದಿರುವುದು ಸಾದಾ ಉಡುಪಿನಲ್ಲಿ. ಆದರೆ ವೇಷಪಲ್ಲಟ ಯಾಕೆ ? ಇದು ಗೋವಿಂದನ ಕುತಂತ್ರವಿರಬೇಕು. ತಿಳಿಯದ ಹಾಗೆ ಗುಟ್ಟಾಗಿ ತನಿಖೆ ನಡೆಸಿ—ಮುನಿಯನ ಮರಣಕ್ಕೆ (ಕೊಲೆಗೆ) ಸಂಬಂಧಿಸಿ—ಬಂದವನು ವರದಿ ಒಪ್ಪಿಸಬಹುದು. ಮುಂದೆ ಗುಮಾನಿಯ ಮೇಲೆ ಬಂಧನಗಳಾಗಬಹುದು. ಅದಕ್ಕಾಗಿ ಪೋಲೀಸ್ ಪಡೆ ಬರಬಹುದು.

ಇಷ್ಟೊಂದು ಅಹಂಕಾರ ! ಒಂದು ಕೈ ನೋಡೋದೇ ಸೈ —ಎಂದು ಗೌಡರು ಮತ್ತೊಮ್ಮೆ ಮೀಸೆ ಮುಟ್ಟಿದ್ದರು.

ಸಂಜೆಯೇ ಮಗ ರಂಗಣ್ಣ ಮರಳಿದಾಗ ಗೌಡರಿಗೆ ಹೆಮ್ಮೆ ಎನಿಸಿತ್ತು, ಬ್ಯಾಗನ್ನು ನೋಡಿ. ಮಗನನ್ನು ಡಾಕ್ಟರಾಗುವಂತೆ ಓದಲು ಬಿಟ್ಟಿದ್ದು ಒಳ್ಳೇದಾಯಿತು. ಸುತ್ತಲಿನ ಹತ್ತಿಪ್ಪತ್ತು ಹಳ್ಳಿಗಳಲ್ಲಿ ಯಾರ ಮಗ ಕಟ್ಟಿದ್ದಾನೆ ಡಾಕ್ಟರ್ ಪರೀಕ್ಷೆಗೆ?

ಮಗಳಿಗೆ ಜ್ವರವಿನ್ನೂ ಇತ್ತು. ರಂಗಣ್ಣ ತಂದ ಔಷಧಿಯಿಂದ ಅದು ಗುಣವಾಗಬೇಕು. ಆಗದೆ ಇದ್ದೀತೆ? ಅಂತೂ ಶ್ರೀನಿವಾಸಯ್ಯನ ಮನೆಗೆ ಹೋಗಿ ಮದ್ದು ಕೊಡಿ, ಎಂದು ಕೇಳುವ ಸಂದರ್ಭ ಒದಗದಿದ್ದರೆ ಸಾಕು.

ಮಗನನ್ನು ಶಾಮೇಗೌಡರು ಕೇಳಿದ್ದರು:

"ಅವುಸದಿ ತಂದಾ ?"

"ಹೂಂ."

"ಏನೆಂದ್ರು ?"

"ಬರೇ ಜರ. ಸರೋಗ್ತದೆ."

"ಯಾವಾಗ ಕೊಡ್ತೀಯಾ ಅವುಸದೀನ ?"

"ಈಗಲೇ."

"ಕೊಡು ಮತ್ತೆ."

"ಕೊಟ್ಟೆ."

ಗೋವಿಂದನ ಜತೆ ಅಪರಿಚಿತನೊಬ್ಬ ಬಂದಿರುವ ಸುದ್ದಿ ಆ ರಾತ್ರೆ ಕೆಲ ಕ್ಷಣ ಗೌಡರನ್ನು ಚಿಂತೆಗೀಡುಮಾಡಿದ್ದರೂ ಅವರು ಚೆನ್ನಾಗಿ ನಿದ್ರಿಸಿದರು.

ಮಾರನೆಯ ಬೆಳಗ್ಗೆ ಹೊಲದ ಉಳುಮೆಗೆ ಸಂಬಂಧಿಸಿ ಮಾತನಾಡುತ್ತ ನಿಂತಿದ್ದಾಗ ತಮ್ಮ ಮನೆಯ ಕಡೆ ಇಬ್ಬರು ಬರುತ್ತಿದ್ದುದನ್ನು ಅವರು ಗೌಡರು ಗಮನಿಸಿದರು. ಗೋವಿಂದ ಮತ್ತು ಇನ್ನೊಬ್ಬ. ಗೌಡರ ದೃಷ್ಟಿಯನ್ನು ಹಿಂಬಾಲಿಸಿದ ಆಳು—ಹಿಂದಿನ ರಾತ್ರೆ ಸುದ್ದಿ ತಂದವನು—, "ಅವರೇ," ಎಂದ.

ಧೋತರ, ಶರಟು, ತಲೆಯ ಕ್ರಾಪು. ದೃಢಕಾಯ, ಗೌರಾಂಗ. ಕೈಯಲ್ಲಿ ಚೀಲ.

[ವೇಷ ಮರೆಸಿದ ಪೋಲೀಸನೇ.]

ಹತ್ತಿರ ಬಂದಾಗ, ಇವನನ್ನೆಲ್ಲೋ ನೋಡಿದೀನಿ—ಎನಿಸಿತು ಗೌಡರಿಗೆ.

ಅಂಗಳಕ್ಕೆ ಕಾಲಿರಿಸಿದ ಗೋವಿಂದ ಗೌಡರನ್ನು ನೋಡಿದೊಡನೆ ಹಲ್ಲು ಕಿರಿದ. ಅವನ ಪಾಲಿಗೆ ಗೌಡರಿಗೆ ನಮಸ್ಕರಿಸುವುದೆಲ್ಲ ಬರಿಯ ಉಪಚಾರ. ಆದರೆ ವಿಷ್ಣುಮೂರ್ತಿಯವರಿಗೆ ಹಾಗಲ್ಲವಲ್ಲ. ಎರಡೂ ಕೈ ಜೋಡಿಸಿ, ಗಟ್ಟಿಯಾಗಿ, "ನಮಸ್ಕಾರ," ಎಂದರು. ವಂದನೆಯ ಜತೆಯಲ್ಲಿ ದೇಶಾವರಿ ನಗೆ ಬೀರಿದರು.

ಗೌಡರು ಗೋಣನ್ನು ತುಸು ಆಡಿಸಿ ಗತ್ತಿನಿಂದ ಮೌನವಾಗಿ ವಂದನೆ ಸ್ವೀಕರಿಸಿದರು. ಒಂದಕ್ಕೊಂದು ಅಂಟಿದ್ದ ತುಟಿಗಳನ್ನು ಬೇರ್ಪಡಿಸಿ, "ಪಟೇಲರನ್ನು ನೋಡೋಕೆ ಬಂದಿರೊ ?" ಎಂದು ಕೇಳಿದರು.

ವಿಷ್ಣುಮೂರ್ತಿ ತಬ್ಬಿಬ್ಬಾದರು. ದೂರದಲ್ಲಿದ್ದಾಗಲೇ 'ಅವರೇ ಗೌಡರು' ಎಂದು ಪಿಸುನುಡಿದಿದ್ದನಲ್ಲ ಗೋವಿಂದ? ಈತ ಪಟೇಲರ ತಮ್ಮನೇ ಹಾಗಾದರೆ ? ಅಥವಾ...

ಗೋವಿಂದನೆಂದ :

"ಇವರು ಭಾಗ್ಯನಗರದಿಂದ ಬಂದಿದಾರೆ."

"ಹೌದೋ ? ಯಾವಾಗ ಬರೋಣಾಯ್ತೋ ?"

"ನಿನ್ನೆ ರಾತ್ರಿ."

"ನೀನು ಕರಕೊಂಬಂದೋ ?"

"ಅವರೇ ಹೊರಟಿದ್ರು. ದಾರೀಲಿ ಸಿಕ್ಕಿದ್ರು."

"ಹಾಗೋ ?"

ಒಂದು ಥರ ಇದಾರಲ್ಲ ಗೌಡರು—ಎಂದುಕೊಂಡ ಗೋವಿಂದ. ಇಂಥದೇ ಕಾರಣ ಇದಕ್ಕೆ ಎಂದು ಅವನಿಗೆ ಹೊಳೆಯದೇ ಇದ್ದರೂ ತಾನು ಎಚ್ಚರದಿಂದಿರುವುದು ಮೇಲು ಎನಿಸಿತು.

ಅವನೆಂದ:

"ಭಾಳ ರಾತ್ರೆಯಾಗಿತ್ತು. ನೇರ ನಿಮ್ಮಲ್ಲಿಗೇ ಹೊರಟಿದ್ರು. ಅಪರಾತ್ರೇಲಿ ಪಟೇಲರಿಗೆ ತೊಂದರೆ ಕೊಡೋದು ಯಾಕೆ? ನಮ್ಮಲ್ಲೇ ಉಳಕೊಳ್ಳಿ—ಅಂದೆ."

"ಊರಿಗೆ ಯಾರೇ ಬಂದ್ರೂ ಮೊದಲು ಪಟೇಲರಲ್ಲಿಗೆ ಬರೋದು ಕಟ್ಟಳೆ, ಅಲ್ಲವಾ ಗೋವಿಂದಪ್ಪ ?"

"ಹೌದು, ಹೌದು. ಆದರೆ, ನಮ್ಮ ಮನೆ ಬೇರೆ ನಿಮ್ಮ ಮನೆ ಬೇರೆ ಅಲ್ವಲ್ಲಾ ಅಂದ್ಕೊಂಡೆ."

ಸಂಭಾಷಣೆಯನ್ನು ಆಲಿಸುತ್ತಿದ್ದ ವಿಷ್ಣುಮೂರ್ತಿ ಕಾರ್ಯೋನ್ಮುಖರಾದರು. ಇವರೇ ಪಟೇಲರೆಂಬುದು ನಿಜವಾಯಿತು. ನಿಂಬೆಹಣ್ಣನ್ನು ಚೀಲದಿಂದ ತೆಗೆದು ಗೌಡರ ಕೈಯಲ್ಲಿರಿಸಿ ವಂದಿಸಿದರು.

ನೀವು ಯಾವ ಡಿಪಾರ್ಟ್‌ಮೆಂಟಿನವರು ?—ಎಂದು ಕೇಳಲು ಹೊರಟಿದ್ದ ಶಾಮೇ ಗೌಡರು, ಹುಬ್ಬು ಮೇಲೇರಿಸಿ, "ಏನಿದೆಲ್ಲ ?" ಎಂದರು.

"ಏನಿಲ್ಲ, ಏನಿಲ್ಲ. ತಮ್ಮೊಡನೆ ಕೊಂಚ ಮಾತಾಡ್ಬೇಕೂಂತ ಭಾಗ್ಯನಗರದಿಂದ ಬಂದೆ."

ನಿಂಬೆಹಣ್ಣೂ ಆ ಮನುಷ್ಯನ ವಿನಯವೂ ಶಾಮೇಗೌಡರನ್ನು ಸ್ವಲ್ಪ ಮೃದುಗೊಳಿಸಿದ್ದುವು. ಒಬ್ಬ ಆಳಿನ ಕಡೆ ನೋಡಿ, "ಪಡಸಾಲೇಲಿ ಜಮಖಾನ ಹಾಸು; ದಿಂಬಿಡು," ಎಂದರು.

ಆ ಕೆಲಸ ನಡೆದಾಗ, "ನಗರದಿಂದ ಬಂದಿರಿ...." ಎಂದು ವಿಷ್ಣುಮೂರ್ತಿಯತ್ತ ನೋಡಿ ಅಂದರು.

"ಹೌದು. "

"ಬನ್ನಿ. ಒಳಕ್ಕೆ ಓಗಾನ."

ಬಂದವರು ಜಮಖಾನದ ಮೇಲೂ ಗೌಡರು ಪಲ್ಲಂಗದ ಮೇಲೂ ಕುಳಿತರು.

"ಏನ್ಸಮಾಚಾರ ? ತನಿಖೆ—ಗಿನಿಖೆಗೆ ಬಂದಿರೋ ?"

ಗೋವಿಂದ ನಸುನಕ್ಕ. ಗೌಡರ ವಿಚಿತ್ರವೆನ್ನಿಸುವ ವರ್ತನೆಗೆ ಕಾರಣ ಈಗ ಆತನಿಗೆ ತಿಳಿಯಿತು. ('ನೀನು ಕರಕೊಂಬಂದೋ ?') ಗಟ್ಟಿಯಾಗಿ ನಗಬೇಕೆನ್ನಿಸಿತು ಅವನಿಗೆ.

ವಿಷ್ಣುಮೂರ್ತಿ ಗೋವಿಂದನ ಮುಖ ನೋಡಿದರು. ಮುನಿಯನ ಸಾವು ಅವರಿಗೆ ತಿಳಿಯದ ವಿಷಯ.

ಗೋವಿಂದನೆಂದ :

"ನಗರದಲ್ಲಿ ಬಸ್‌ಸ್ಟ್ಯಾಂಡ್ ಹತ್ತಿರ ನ್ಯೂ ಗಣೇಶ ಭವನ ಹೋಟೆಲಿದೆಯಲ್ಲ? ಅದರ ಮಾಲಿಕರು ಇವರು; ವಿಷ್ಣುಮೂರ್ತಿ ಅಂತ."

"ನ್ಯೂ ಗಣೇಶ ಭವನ ? —ಹಾಗೋ? ......ನಾನು ಏನೋ ಅಂದ್ಕೊಂಡ್ನೆಲ್ಲ. ಅಲ್ಲ, ನಿಮ್ಮನ್ನ ಈ ಮುಂಚೆ ಕಂಡಿದೀನಿ. ನಿಮ್ಮ ಓಟ್ಲಲ್ಲಿ......"

"ನಮ್ಮ ಅಲ್ಪ ಆತಿಥ್ಯ ತಾವು ಸ್ವೀಕರಿಸಿದ್ದಿರಿ."

"ಉಂ."

ಗೌಡರು, ಬಲಗೈಯ ತೋರು ಬೆರಳಿನಿಂದ ಮೀಸೆಯ ಎರಡು ಕುಡಿಗಳನ್ನೂ ಮೇಲಕೆ ಹಾರಿಸಿದರು.

"ನಗರದ ಜನ, ಇಂಥ ಹಳ್ಳಿಗೆ ಬಂದಿದೀರಿ. ಏನು, ಜಮೀನು ಖರೀದಿ ಯೋಚ್ನೆಯೊ ?"

ವಿಷ್ಣುಮೂರ್ತಿಗೆ ಸೋಜಿಗವೆನಿಸಿತು. ಶ್ರೀನಿವಾಸಯ್ಯನೂ ಅಂಥದೇ ಪ್ರಶ್ನೆ ಕೇಳಿದ್ದರು.

ವಿವರಣೆಯನ್ನು ಗೋವಿಂದ ಕೊಡಲಿಲ್ಲ. ಆತ ಸುಮ್ಮನಿದ್ದುದನ್ನು ಕಂಡು ವಿಷ್ಣು ಮೂರ್ತಿಯವರೇ ಅಂದರು:

"ತಮ್ಮ ಹಳ್ಳಿ ನಗರಕ್ಕೆ ಹತ್ತಿರವಾಗಿದೆ. ಇಲ್ಲಿ ಹೋಟೆಲಿಲ್ಲ ಅಂತ ಗೋವಿಂದರಾಯರಿಂದ ತಿಳೀತು. ತಾವು ಅನುಕೂಲ ಮಾಡಿಕೊಟ್ಟರೆ ಸಣ್ಣದೊಂದು ಹೋಟೆಲು ತೆರೆಯೋಣ ಅಂತ..."

"ಓಟ್ಲೆ ? ಅಹ್ಹಹ್ಹ !"

"ನಾನು ಹೇಳಿದ್ದರಲ್ಲಿ ತಪ್ಪೇನಾದರೂ ಇದ್ದರೆ ಕ್ಷಮಿಸ್ಬೇಕು."

"ತಪ್ಪು ? ತಪ್ಪು ಎಂಗಿದ್ದಾತು ಸ್ವಾಮಿ ? [ಗೋವಿಂದನತ್ತ ತಿರುಗಿ] ಅಲ್ಲ ಗೋವಿಂದಪ್ಪ, ನೀನು ಒಂದು ಕ್ಷಣಾನೂ ಸುಮ್ಕಿರಾಕಿಲ್ವಲ್ಲಯ್ಯ, [ವಿಷ್ಣುಮೂರ್ತಿಯತ್ತ ಹೊರಳಿ] ನಮ್ಮ ಹಳ್ಳಿ ಮುಂದುವರೀಬೇಕೂಂತ ಇವನಿಗೆ ಭೋ ಆಸೆ. ಇರೋ ಸಾಲೆ ಐಸ್ಕೂಲಾಗ್ಬೇಕು ; ಪೋಲೀಸ್ ಚೌಕಿ ಬರ್ಬೇಕು; ಓಟ್ಲು ಬೇಕು... ಇನ್ನೇನಪ್ಪ ?"

ಗೋವಿಂದನೆಂದ:

"ನನ್ನ ನೀವು ಗೇಲಿ ಮಾಡ್ತಿದೀರಿ."

"ಛೆ ! ಛೆ ! ಚಿಕ್ಕೋರತ್ರ ಒಳ್ಳೆ ಇಚಾರಗಳಿರ್ತವೆ. ನನ್ನ ಮಗನನ್ನೇ ನೋಡಿ. ಇನ್ನೂ ಡಾಕ್ಟರ್ ಪರೀಕ್ಷೆ ಪ್ಯಾಸಾಗಿಲ್ಲ; ಅಷ್ಟರೊಳಗೆ ಇಂಗ್ಲಿಷ್ ಅವುಸದಿ ಗಿವುಸದಿ ಕೊಡ್ತಾ ಅವನೆ."

"ಎಲಾ !" ಎಂದುಕೊಂಡ ಗೋವಿಂದ. ಕಾಪಿಲೆ ಮಲಗಿರುವವರು ಯಾರು? ಔಷಧಿ ಕೊಟ್ಟಿರುವುದು ಯಾರಿಗೆ? ದೊಡ್ಡಮ್ಮನಿಗೆ ಈ ವಿಷಯ ತಿಳಿಸಬೇಕು ಎಂದು ಯೋಚಿಸಿದ.

ಅಂಗಳದಲ್ಲಿ ಆಳುಗಳು ನಿಂತು ಕಟಕಟೆಯ ಎಡೆಯಿಂದ ಪಡಸಾಲೆಯತ್ತ ನೋಡುತ್ತಿದ್ದರು.

"ಓಗ್ರೋ," ಎಂದರು, ಗೌಡರು.

ಆಳುಗಳು ಚೆದರಿದಾಗ ಗೌಡರೆಂದರು:

"ಒರಗಿನ ಜನ ಬಂದು ಇಲ್ಲಿ ನೆಲೆ ಊರಿ ಸಾಲ ಕೊಡೋದು, ದಿನಸಿನ ಅಂಗಡಿ ಇಡೋದು ಓಟ್ಲು ಮಡಗೋದು ಇದೆಲ್ಲಾ ನನಗೆ ಇಷ್ಟವಿಲ್ಲ. ಇರೋ ವಿಷಯ ಮುಚ್ಚು ಮರೆ ಇಲ್ದೆ ಯೋಳ್ಬಿಡ್ತೀನಿ. ಓಟ್ಲು ಗೀಟ್ಲು ಬಂದ್ರೆ ಅಳ್ಳಿ ಜನ ಅರಟೆಗೆ ಕುಂತ್ಕೋತಾರೆ. ಮೊದಲೇ ಸೋಮಾರಿಗ್ಳು."

ವಿಷ್ಣುಮೂರ್ತಿ ಹರ್ಷಚಿತ್ತನಂತೆ ನಟಿಸಲೆತ್ನಿಸಿದರೂ ಸಾಧ್ಯವಾಗಲಿಲ್ಲ. ಮುಖ ಮ್ಲಾನವಾಯಿತು.

ತಮ್ಮ ಮಾತುಗಳು ಪರಿಣಾಮಕಾರಿಯಾದುವೆಂದು ಗೌಡರು ಸಂತುಷ್ಟರಾದರು.

ರಾಯಭಾರ ವಿಫಲವಾಗುವುದೋ ಏನೋ ಎಂದು ಗೋವಿಂದ ಕಳವಳಗೊಂಡ.

ಅವನೆಂದ:

"ಜನ, ವಿದ್ಯಾವಂತರಾಗ್ಬೇಕು ಅಂತಾರೆ. ಅದನ್ನ ತಪ್ಪಿಸೋಕಾಗುತ್ತಾ ? ಕಾಫಿ ಕುಡೀತೀವಿ, ಹೋಟ್ಲಗೋಗ್ತೀವಿ ಅಂತಾರೆ. ಬೇಡ ಅನ್ನೋಕಾಗುತ್ತಾ? ಆಧುನಿಕ ಸಂಗತಿಗಳ್ನ ಅಂಗೈ ಅಡ್ಡ ಹಿಡಿದು ತಡೆಯೋದು ಹಾಗೆ ಸಾಧ್ಯ ?"

ಗೌಡರಿಗೆ ಸಿಟ್ಟು ಬಂತು. ಆದರೂ ಅದನ್ನು ತೋರಗೊಡದೆ ಅವರು ಕಿರುನಗೆ ಸೂಸಿದರು.

ಪರಿಸ್ಥಿತಿ ಹತೋಟಿ ತಪ್ಪಿಹೋಗಬಾರದೆಂದು ವಿಷ್ಣುಮೂರ್ತಿ, ಚೀಲದಿಂದ ಮೂಸಂಬಿ ಹಣ್ಣುಗಳನ್ನು ಹೊರಕ್ಕೆ ತೆಗೆದು ಸಾಲಾಗಿ ಜೋಡಿಸಿದರು. ಗೌಡರ ಕಡೆ ನೋಡಿ ಅವರೆಂದರು :

"ಅಲ್ಪ ಕಾಣ್ಕೆ. ಸ್ವೀಕರಿಸ್ಬೇಕು."

"ಛೆ ! ಛೆ ! ನಮ್ಮೂರಿಗೆ ಬಂದೋರಿಗೆ ಏನಾದರೂ ಕೊಡಬೇಕಾದೋರು ನಾವು."

"ಹೆಹ್ಹೆ ! ಅದನ್ನ ಕೊಟ್ಬೇರಂತೆ. ಆ ಸಹಾಯ ಕೇಳೋಕೆ ನಾನು ಬಂದಿದೀನಿ."

ಗೌಡರು ತುಸು ಪ್ರಸನ್ನರಾಗಿ, "ಏನಪ್ಪ, ಎಂಥ ಸಹಾಯ ಆಗ್ಬೇಕಪ್ಪ ನನ್ನಿಂದ ?" ಎಂದು ಕೇಳಿದರು.

" ಓಟ್ಲು ಇಡಿಸ್ಕೊಟ್ಟು ನಮ್ಮವನೇ ಒಬ್ಬ ಹುಡುಗನಿಗೆ ಜೀವನಕ್ಕೆ ದಾರಿ ಮಾಡ್ಕೊಡೋಣಾಂತಿದೀನಿ. ಅನುಮತಿ ಕೊಡ್ಬೇಕು. ಹೋಟ್ಲಿಗಾಗಿ ಸಣ್ಣದೊಂದು ಕಟ್ಟಡ ಬಾಡಿಗೆಗೆ ಕೊಡಿಸ್ಬೇಕು."

" ಇಷ್ಟೇ ತಾನೆ? ಆಗಲಪ್ಪ. ನಾನು ಬೇಡ ಅನ್ನೋದಿಲ್ಲ. ಊರಿನ ಬೇರೆ ಪ್ರಮುಖರೂ ಬೇಡ ಅನ್ನಲಾರರು."

" ಉಪಕಾರವಾಯ್ತು."

" ಯಾವಾಗ ಶುರುಮಾಡ್ತೀರಾ ?"

" ಆಷಾಢಮಾಸ ದಾಟಿದ್ಮೇಲೆ ಒಳ್ಳೇ ದಿನ ನೋಡಿ..."

" ಉಂ."

" ತಾವು ಉದ್ಘಾಟನೆ ಮಾಡ್ಬೇಕು."

ಗೋವಿಂದ ಚಕಿತನಾಗಿ ವಿಷ್ಣುಮೂರ್ತಿಯವರನ್ನು ದಿಟ್ಟಿಸಿದ. ತಲೆದೂಗುವಂತಿತ್ತು ಅವರ ವ್ಯವಹಾರ ಕೌಶಲ.

ಗೌಡರೆಂದರು:

" ಏನು ? ಭಾಷಣವೊ ? ಹಹ್ಹ ! ಗೋವಿಂದಪ್ಪ ಸೊಸೈಟಿ ಶುರು ಮಾಡ್ದಾಗ ಒಮ್ಮೆ ಆ ಕೆಲಸ ಒಪ್ಕೊಂಡಿದ್ವಿ. ಅದ್ಯಾಕೊ ನಮಗೂ ಸರ್ಹೋಗೋದಿಲ್ಲ. ಅದೇನಿದ್ದರೂ ಗೋವಿಂದಪ್ಪನಂಥವರಿಗೇ ಸೈ. ಸಭೆ ಭಾಷಣ ಅಂದರೆ ಅವನಿಗೆ ಭೋ ಇಷ್ಟ."

ಗೋವಿಂದನಿಗೆ ಕಚಗುಳಿ ಇಟ್ಟಂತಾಯಿತು.

ವಿಷ್ಣುಮೂರ್ತಿ ಅಂದರು:

" ನಮ್ಮ ಹೋಟ್ಲಿನ ಹೊಸ ಕಟ್ಟಡದ ಉದ್ಘಾಟನೆಗೆ ಸಚಿವ ಮಾರಪ್ಪನವರನ್ನ ಕರೆಸಿದ್ವಿ."

" ಹಾಗೋ ?"

" ತಮ್ಮ ಊರಿನ ಕೆಲಸ; ತಮ್ಮ ಅಮೃತ ಹಸ್ತದಿಂದಲೇ...."

" ನೋಡಾನ, ನೋಡಾನ,...ಇನ್ನೂ ಟೈಮೈತೆ..."

ಮೂಸಂಬಿ ಹಣ್ಣುಗಳತ್ತ ಮತ್ತೊಮ್ಮೆ ನೋಡಿದ ಗೌಡರೆಂದರು:

" ನೀವು ತರಬಾರದಾಗಿತ್ತು, ತಂದಿದೀರಿ. ಮೊನ್ನೆಯಿಂದ ನನ್ನ ಮಗಳಿಗೆ ಸ್ವಲ್ಪ ಜ್ವರ, ರಸ ಹಿಂಡಿ ಕೊಡೋದಕ್ಕಾಯ್ತದೆ. ತಗೋತೀವಿ."

ವಿಷಯ ತಿಳಿದ ಗೋವಿಂದ ನಸುನಕ್ಕ.

ಅಷ್ಟು ಹೇಳಿ ಅವರು ಆಳನ್ನು ಕರೆದರು:

" ಏ ಕರಿಯ ! ಈ ಅಯ್ನೋರ ಚೀಲತುಂಬಾ ಒಳ್ಳೇ ರಸಪುರಿ ಹಣ್ಣು ತುಂಬಿಸ್ಕೊಡು. ಅವರ ಹಿಂದೆ ಹೊತ್ಕೊಂಡೋಗು."

" ಬೇಡ ಬೇಡ, ಎಲ್ಲಾದರೂ ಉಂಟೆ ?"

" ಏನು ಬೇಡ ? ಗೋವಿಂದಪ್ಪ, ಕೊಡು ಆ ಚೀಲಾನ ಕರಿಯನಿಗೆ. ನಿಮ್ಮ ತೋಟದಲ್ಲೂ ಮಾವಿನ ಫಸಲು ಚೆಂದಾಕಿ ಆಗ್ಬೈತೆ ಅಂತ ಗೊತ್ತು. ಆದರೂ ನಮ್ಮನೇದೂ ಇರಲಿ."

ಹತ್ತಿರ ಬಂದ ಕರಿಯನಿಗೆ ಗೋವಿಂದ ಚೀಲವನ್ನು ಕೊಟ್ಟ.

ಗೌಡರು ಮಗನನ್ನು ಕರೆದರು :

"ರಂಗಾ."

ರಂಗಣ್ಣ ಕಾಣಿಸಿಕೊಂಡ. ಗೌಡರು ಕೇಳಿದರು:

"ಸುಬ್ಬಿಗೆ ಜರ ಬಿಟ್ಟೈತಾ? ಡಿಕ್ರಿ ಇಟ್ಟು ನೋಡ್ದಾ ?"

"ಹುಂ. ಈಗ ಕಮ್ಮಿ," ಎಂದ ರಂಗಣ್ಣ, ಜಮಖಾನದ ಮೇಲೆ ಕುಳಿತಿದ್ದ ಇಬ್ಬರನ್ನೂ ಮೂಸಂಬಿ ಹಣ್ಣುಗಳನ್ನೂ ನೋಡಿ.

"ಸುಬ್ಬಿಗೆ ಈ ಹಣ್ಣಿನ ರಸ ಕೊಡಬೌದು, ಅಲ್ಲವಾ ?"

"ಕೊಡಬಹುದು," ಎಂದು ನುಡಿದು, ರಂಗಣ್ಣ ಒಳಕ್ಕೆ ಸರಿದ.

"ಮಗ. ಇವನೇ ಡಾಕ್ಟ್ರಾಗೋನು," ಎಂದರು ಗೌಡರು ಅಭಿಮಾನದಿಂದ.

ತುಸು ಯೋಚಿಸಿ ಶಾಮೇಗೌಡರು ಗೋವಿಂದನೊಡನೆ ಅಂದರು:

"ಓಗ್ತಾ ಈ ಇವರಿಗೆ ಗ್ರಾಮಚಾವಡಿ ಮಗ್ಗುಲಲ್ಲಿ ಒಂದು ಖಾಲಿ ಮನೆ ಐತಲ್ಲ, ಅದನ್ನ ತೋರ್ಸು. ಕೃಷ್ಣೇಗೌಡನ್ದು. ಇವರಿಗೆ ಒಪ್ಗೆ ಆದ್ರೆ, ಹೇಳಿ ಕೊಡ್ತಾನ."

"ಹೂಂ," ಎಂದ ಗೋವಿಂದ.

"ಯಾವುದಾದರೂ ಸರಿಯೆ. ಒಪ್ಗೆ ಆಗ್ದೆ ಏನು? ನೋಡ್ಕೊಂಡು ಹೋಗ್ತೀನಿ," ಎಂದರು ವಿಷ್ಣುಮೂರ್ತಿ.

ಹೋಟೆಲು ಮಾಲಿಕನ ಬಗೆಗೆ ಗೌಡರು ಒಂದೆರಡು ಪ್ರಶ್ನೆ ಕೇಳಿದರು. ಉತ್ತರಿಸಿದ ವಿಷ್ಣುಮೂರ್ತಿ ತಾವು ಸ್ಥಿತಿವಂತರೆಂಬುದನ್ನು ಸೂಚಿಸದಿರಲಿಲ್ಲ.

ಕೆಲ ನಿಮಿಷಗಳಲ್ಲಿ ಅವರು ಎದ್ದು ಗೌಡರಿಗೆ ಕೃತಜ್ಞತೆ ಸೂಚಿಸಿ, ಹೊರಟರು. ಮಾವಿನ ಹಣ್ಣುಗಳಿಂದ ಬೀಗುತ್ತಿದ್ದ ಚೀಲ ಹೊತ್ತುಕೊಂಡು ಕರಿಯ ಅವರನ್ನು ಹಿಂಬಾಲಿಸಿದ.

ದಾರಿಯಲ್ಲಿ ಗೋವಿಂದ ಯೋಚಿಸಿದ:

ಸುಬ್ಬಿಗೆ ಜ್ವರ. ಈಗ ಕಮ್ಮಿ. ಇಂಗ್ಲಿಷ್ ಔಷಧಿ. ಹಾಗಾದರೆ ರಂಗಣ್ಣ ಭಾಗ್ಯನಗರಕ್ಕೆ ನಿನ್ನೆ ಹೋದುದು ಔಷಧಿ ತರಲು. ತನಗೆ ಹೇಳಲೇ ಇಲ್ಲ. ತುರ್ತು ಕೆಲಸ; ಡೀನ್‌ರನ್ನು ಕಾಣಬೇಕು—ಎಂದ. ಗೌಡರು ನಿನ್ನೆ ಬೆಳಗ್ಗೆ ಮನೆಗೆ ಬಂದು ತಂದೆಯವರನ್ನು ಕಂಡರು. ಮಾತನಾಡಿಸಿದ ದೊಡ್ಡಮ್ಮನಿಗೆ ಮಗಳ ಅಸ್ವಾಸ್ಥ್ಯದ ವಿಷಯ ತಿಳಿಸಲಿಲ್ಲ.

ಏನೋ ನಡೆಯುತ್ತಿದೆ—ಎನಿಸಿತು ಗೋವಿಂದನಿಗೆ.

"ಸುಮ್ಮನಿದೀರಲ್ಲ ಗೋವಿಂದರಾವ್ ?" ಎಂದು ಕೇಳಿದರು ವಿಷ್ಣುಮೂರ್ತಿ.

"ಏನಿಲ್ಲ, ಏನಿಲ್ಲ" ಎಂದ ಗೋವಿಂದ.

ಮನೆ ತಲಪಿದಾಗ ವಿಷ್ಣುಮೂರ್ತಿಯನ್ನು ಕುರಿತು ಶ್ರೀನಿವಾಸಯ್ಯ ಕೇಳಿದರು:

"ಏನಾಯ್ತು ಹೋದ ಕೆಲಸ ? ಗಂಡೋ ಹೆಣ್ಣೋ ?"

ತಾವು ವಿಜಯಿ ಎಂಬುದನ್ನು ಮುಖಭಾವದಿಂದಲೇ ತೋರಿಸುತ್ತ, "ಹೆಣ್ಣು !" ಎಂದು ವಿಷ್ಣುಮೂರ್ತಿ ನಕ್ಕರು.

ಗೋವಿಂದನೆಂದ:

"ಹೈಸ್ಕೂಲು, ಹೋಟೆಲು ಇಂಥದೆಲ್ಲ ಪಟೇಲರಿಗೆ ಇಷ್ಟವಿಲ್ವಂತೆ. ಆದರೂ ವಿಷ್ಣುಮೂರ್ತಿಯವರಿಗೆ ಅನುಮತಿ ಕೊಟ್ರು."

" ಹುಂ," ಎಂದರು ಶ್ರೀನಿವಾಸಯ್ಯ.

" ಈಗ ಹೊರಟರೆ ಹನ್ನೊಂದು ಘಂಟೆಯ ಬಸ್ಸು ಸಿಗುತ್ತಾ ?" ಎಂದು ವಿಷ್ಣುಮೂರ್ತಿ ಕೇಳಿದರು.

"ಏನವಸರ ? ಇದ್ದು ಹೋಗಿ. ಊಟ ಮಾಡ್ಕೊಂಡು..." ಎಂದರು ಶ್ರೀನಿವಾಸಯ್ಯ.

" ಗ್ರಾಮ ಚಾವಡಿ ಹತ್ತಿರದ ಮನೆ ಬೇರೆ ನೀವು ನೋಡ್ಬೇಕು," ಎಂದು ಗೋವಿಂದ ನೆನಪು ಹುಟ್ಟಿಸಿದ.

" ಹೋಗ್ತಾ ನೋಡ್ತೀನಿ. ನಗರದಲ್ಲಿ ಕೆಲಸ ಧಂಡಿಯಾಗಿ ಬಿದ್ದಿದೆ."

" ಎರಡು ಘಂಟೆಗೆ ನಿಮಗೊಂದು ಬಸ್ಸು ಸಿಗುತ್ತೆ. ಸೀಟು ಕೊಡಿಸಿ ಕಳಿಸೋ ಜವಾಬ್ದಾರಿ ನನ್ದು," ಎಂದ ಗೋವಿಂದ.

" ಸರಿ."

ಗೋವಿಂದ ಅಜ್ಜಿಗೆ ತಿಳಿಸಬೇಕಾದ ವಿಷಯದ ನೆನಪಾಗಿ, " ದೊಡ್ಡಮ್ಮ !" ಎಂದು ಕೂಗುತ್ತ ಒಳಕ್ಕೆ ಹೋದ.

ವಿಷ್ಣುಮೂರ್ತಿ ಶ್ರೀನಿವಾಸಯ್ಯನವರ ಕಡೆ ತಿರುಗಿ, " ಬಂದ ಕೆಲಸ ಅರ್ಧ ಆಯ್ತು," ಎಂದರು.

" ಅರ್ಧ ?"

" ಹೌದು. ಉಳಿದದ್ದು ನಿಮ್ಮ ಹತ್ತಿರ ಈಗ ನಾನು ಪ್ರಸ್ತಾಪಿಸಬೇಕು. "

" ಹೇಳೋಣಾಗಲಿ."

ವಿಷ್ಣುಮೂರ್ತಿ ಅರ್ಧ ಕ್ಷಣ ಸುಮ್ಮನಿದ್ದು, ಗಂಟಲು ಸರಿಪಡಿಸಿಕೊಂಡರು.

## ೬

ಗೋಪಾಲ ಮರಗಳಿಂದ ಕಾಯಿ ಇಳಿಸಲು ಮಾವಿನ ತೋಪಿಗೆ ಆಳುಗಳೊಡನೆ ಹೋಗಿದ್ದ.

ಅವನ ಹೆಂಡತಿ ಭಾಗೀರಥಿ ಅಡುಗೆಮನೆಯಲ್ಲಿದ್ದಳು. ಆ ಬೆಳಗ್ಗೆ ಅವಳು ಕೇಳಿದ್ದ ಮಾತುಕತೆ ಒಂದು ಬಗೆಯ ಗೊಂದಲದಲ್ಲಿ ಆಕೆಯನ್ನು ಕೆಡವಿತ್ತು; ವಿಸ್ಮಯ ಒಂದೆಡೆ, ಸಂತೋಷ ಇನ್ನೊಂದೆಡೆ.

ಗೋವಿಂದ ಮತ್ತು ಅಜ್ಜಿ......

" ದೊಡ್ಡಮ್ಮ, ಕೇಳಿದೆಯಾ ? ಸುಬ್ಬಿಗೆ ಜ್ವರವಂತೆ."

" ಹೌದೆ?"

" ಮೊನ್ನೆಯಿಂದ."

" ಆಹಾ? ಶಾಮಣ್ಣ ನಿನ್ನೆ ಬಂದಿದ್ದ; ಹೇಳ್ಲೇ ಇಲ್ಲ."

" ಅವರು ಬಂದು ಹೇಳೋ ಕಾಲ ಕಳೆದ್ಹೋಯ್ತು, ದೊಡ್ಡಮ್ಮ."

" ಹಾಗಂದರೇನು ಗೋವಿಂದೂ ?"

"ನಿನ್ನೆ ನಾರು ಬೇರಿನ ಕಷಾಯ ಅವರಿನ್ನೂ ಮುಟ್ಕೋದಿಲ್ಲ."

"........."

"ಏನು ಕಾಹಿಲೆಯಾದರೂ ಡಾಕ್ಟರ್ ರಂಗೇಗೌಡರು ಇಂಗ್ಲಿಷ್ ಔಷಧಿ ಕೊಡ್ತಾರೆ."

"ಹಾಗೆಲ್ಲ ಗೇಲಿ ಮಾಡ್ಬಾರ್ದು, ಗೋವಿಂದೂ. ಡಾಕ್ಟ್ರ ಪರೀಕ್ಷೆಗೆ ಒದ್ಗಿರೋನು. ಔಷಧಿ ಕೊಟ್ರೆ ಏನ್ತಪ್ಪು ?"

"ನಾನೆಲ್ಲಿ ಗೇಲಿ ಮಾಡ್ದೆ ದೊಡ್ಡಮ್ಮ ? ಇರೋ ಸಂಗತಿ ಹೇಳ್ದೆ."

"ಸುಬ್ಬಿಗೆ ಈಗ ಹ್ಯಾಗಿದೆಯಂತೆ ?"

"ನಾವು ಕೂತಿದ್ದಾಗಲೇ ರಂಗಣ್ಣನ್ನ ಕರೆದು ಶಾಮೇಗೌಡ್ರು ಕೇಳಿದ್ರು: ಸುಬ್ಬಿಗೆ ಜರ ಬಿಟ್ಟೈತಾ ? ಡಿಕ್ರಿ ಇಟ್ಟು ನೋಡ್ದಾ ?—ಅಂತ. ಡಿಕ್ರಿ ಅಂದ್ರೆ ಮಿಾಟರು. ಈಗ ಕಮ್ಮಿ—ಅಂದ ರಂಗಣ್ಣ."

"ಗುಣವಾಗಲಪ್ಪ ಸದ್ಯಃ..."

"ನಿನ್ನೆ ರಂಗಣ್ಣ ನಗರಕ್ಕೆ ಹೋಗಿ ಔಷಧಿ ತಂದ. ಹೋಗೋಕೆ ಬಸ್ ಸಿಗ್ದೆ ರಸ್ತೇಲಿ ಒದ್ದಾಡ್ತಾ ಇದ್ದ; ನಾನೇ ಒಂದು ಲಾರಿ ನಿಲ್ಸಿ ಸೀಟು ಮಾಡಿಸ್ಕೊಟ್ಟು ಕಳಿಸ್ದೆ. ತಂಗಿ ಜ್ವರ ಅಂತ ಒಂದು ಮಾತು ಅಂದ್ನೆ ? ಕಾಲೇಜಿಂದು ಅರ್ಜೆಂಟ್ ಕೆಲ್ಸ, ಅಂತ ಸುಳ್ಳು ಹೇಳ್ದ."

"ಇರಲಿ ಬಿಡು, ಗೋವಿಂದ. ಏನೋ ಪಾಪ, ಬೇಸರವಾಗಿರ್ಬೇಕು, ಹೇಳ್ಲಿಲ್ಲ. ಇನ್ನೊಬ್ಬರ ವಿಷಯ ನಾವು ಒಳ್ಳೇದು ಯೋಚಿಸ್ಬೇಕೇ ಹೊರ್ತು ಯಾವತ್ತೂ ಕೆಟ್ಟದು ಯೋಚಿಸ್ಬಾರ್ದು."

"ಇಲ್ಲ ದೊಡ್ಡಮ್ಮ, ಇಲ್ಲ. ನಾನ್ಯಾಕೆ ಕೆಟ್ಟದು ಯೋಚಿಸ್ಲಿ ?... ಅಂದ ಹಾಗೆ ದೊಡ್ಡಮ್ಮ, ನಿನ್ನೆ ಗೌಡರು ಇಲ್ಲಿಗೆ ಬಂದಿದ್ದರಲ್ಲ—ಆಮೇಲೆ ಅಣ್ಣಯ್ಯನೂ ನೀನೂ ಮಾತಾಡ್ತಾ ಇದ್ರಿ. ಏನು ಸಮಾಚಾರ ?"

"ಏನೋ ಸಣ್ಣ ವಿಷಯ. ಕಡ್ಡೀನ ಗುಡ್ಡ ಮಾಡಬಾರ್ದಪ್ಪ. ಮಾತಾಯ್ತು. ಮರೆತ್ಬಿಡ್ಬೇಕು."

"ನಿನಗೆ ಹೇಳೋಕೆ ಇಷ್ಟ ಇಲ್ಲ, ಬಿಡು. ಹ್ಯಾಗಾದರೂ ಗೊತ್ತಾಗಿಯೇ ಆಗುತ್ತೆ ನಂಗೆ."

"ಇಂಥಾ ವಿಷಯದಲ್ಲೆಲ್ಲ ನೀನು ಕೈ ಹಾಕಬಾರ್ದು, ಗೋವಿಂದ."

"ಓಯೆಸ್, ದೊಡ್ಡಮ್ಮ."

"ನಗರದೋರು ಊಟ ಮಾಡ್ಕೊಂಡು ಹೋಗ್ತಾರೆ ತಾನೆ ?"

"ಹಾಗೇಂತ ಅಣ್ಣಯ್ಯ ಅವರಿಗೆ ಹೇಳ್ತಾ ಇದ್ರು."

"ಸರಿ, ಮತ್ತೆ. ಅವರ ಸ್ನಾನಗೀನಕ್ಕೆಲ್ಲ ಏರ್ಪಾಟು ಮಾಡು. ಬೇಕಿದ್ದರೆ ಸ್ವಲ್ಪ ಹೊತ್ತು ತಿರುಗಾಡ್ಕೊಂಡು ಬನ್ನಿ."

"ಏನಿದೆ ಇಲ್ಲಿ ತಿರುಗಾಡ್ಕೊಂಡು ಬರೋದಕ್ಕೆ ? ನೀನೂ ಸರಿ !"

"ಯಾಕೆ ? ಏನಿಲ್ಲ ನಮ್ಮೂರಲ್ಲಿ ? ನದಿಗೆ ಹೋಗ್ಬನ್ನಿ, ಗುಡಿಗೆ ಹೋಗ್ಬನ್ನಿ."

"ಬರ್ತಾರೋ ಕೇಳ್ಕೋಡ್ತೀನಿ."

ಗೋವಿಂದ ಪಡಸಾಲೆಗೆ ನಡೆದಿದ್ದ. ಸ್ನಾನ ಮಾಡಿಸಲು ಮಗುವನ್ನು ಕರೆದೊಯ್ಯಲೆಂದು ಭಾಗೀರಥಿ ತನ್ನ [ಗೋಪಾಲ ಹಾಗೂ ತನ್ನ] ಕೊಠಡಿಗೆ ಬಂದಳು.

ಗೋವಿಂದ ಪಡಸಾಲೆಯಲ್ಲಿರಲಿಲ್ಲ. [ವಿಷ್ಣುಮೂರ್ತಿ ಮತ್ತು ತಂದೆ ಆಡುತ್ತಿದ್ದ ಮಾತನ್ನು ತಾನು ಬಂದೊಡನೆ ನಿಲ್ಲಿಸಿದರೆಂದು ಗೋವಿಂದ ನೇರವಾಗಿ ತನ್ನ ಕೋಣೆಗೆ ಸಾಗಿದ್ದ. ಅಲ್ಲಿ ಯಾವುದೋ ಆಂಗ್ಲ ಕಾದಂಬರಿಯನ್ನು ನೋಡುವುದರಲ್ಲಿ ಮಗ್ನನಾಗಿದ್ದ ಪದ್ಮನಾಭ.]

ಭಾಗೀರಥಿ ಮಗುವಿನ ಬಟ್ಟೆ ಆಯ್ದುಕೊಳ್ಳುತ್ತಿದ್ದಾಗ ಸ್ವಾರಸ್ಯಕರ ಮಾತುಕತೆ ಕೇಳಿಸಿತು. ತಕ್ಷಣವೆ ಅಲ್ಲಿಂದ ಹೊರಡಲಾಗದೆ, ಬಾಗಿಲು ಮರೆ ಮಾಡಿ, ಆಕೆ ಕೊಠಡಿಯಲ್ಲೇ ನಿಂತಳು.

ಶ್ರೀನಿವಾಸಯ್ಯ ಮತ್ತು ವಿಷ್ಣುಮೂರ್ತಿ :

"ಗೋವಿಂದನ ಜತೆ ನೀವೇನಾದರೂ ಈ ವಿಷಯ ಮಾತಾಡಿದೀರಾ ವಿಷ್ಣುಮೂರ್ತಿಗಳೆ ?"

"ಛೆ ! ಛೆ ! ಹಾಗೆ ಮಾಡೇನಾ ?"

"ಅವನಿಗೇನೋ ನಿಮ್ಮನ್ನು ಕಂಡರೆ ಇಷ್ಟ. ಜಾತಕ ಸರಿ ಹೋದರೆ—"

"ಅದಕ್ಕೇನು? ಮದುವೆಗೆ ನಿಂತಿರುವ ಇಬ್ಬರು ಹುಡುಗಿಯರ ಜಾತಕಗಳನ್ನೂ ತಂದ್ಕೊಡ್ತೀನಿ. ಅಥವಾ ತಾವೇ ತಮ್ಮ ಚಿರಂಜೀವರ ಜಾತಕಗಳನ್ನ ಕೊಟ್ಟರೆ...."

"ಪದ್ಮನಾಭನ ವಿಷಯ ನಾನೇನೂ ಹೇಳಲಾರೆ. ಗೋವಿಂದನದೂ ಅಷ್ಟೆ...... ಹೇಗೂ ಇರ್ತೀರಲ್ಲ......ಅಮ್ಮನನ್ನು ಒಂದು ಮಾತು ಕೇಳಿ ಹೇಳ್ತೀನಿ."

"ಅವಶ್ಯವಾಗಿ, ಅವಶ್ಯವಾಗಿ. ಕೇಳಬೇಕಾದ್ದೇ."

"ನಿನ್ನೆ ನಗರ ಬಿಟ್ಟಾಗಲೇ ಇದೆಲ್ಲಾ ಯೋಚಿಸ್ಕೊಂಡಿದ್ರೊ ?"

"ಇಲ್ಲಪ್ಪ! ಹೆಣ್ಣು ಹೆತ್ತವರು ಅಳಿಯಂದಿರನ್ನ ಹುಡುಕೋದು ಸ್ವಾಭಾವಿಕ ಅನ್ನಿ. ಗೋವಿಂದರಾಯರ ವಿಷಯದಲ್ಲಿ ಕುತೂಹಲವೇನೋ ಇತ್ತು. ಆದರೆ ಇದು ಆತುರಪಡೋ ಸಂಗತಿ ಅಲ್ವಲ್ಲ." ಎಂದರು ಕೃಷ್ಣಮೂರ್ತಿ, ಉಗುಳು ನುಂಗಿ,

"ಅದ್ಸರಿ ಅನ್ನಿ... ಹೋಟೆಲಿಡೋ ಅದ್ಯಾವುದೋ ಖಾಲಿಮನೆ ಇದೆ ಅಂತ ಗೌಡರು ಅಂದ್ರಂತಲ್ಲ. ನೋಡ್ಕೊಂಡು ಬರ್ತೀರೇನು ? ಗೋವಿಂದಾ, ಗೋವಿಂದೂ..."

ಹೊರ ಕೊಠಡಿಯಿಂದ ಗೋವಿಂದನ ಉತ್ತರ ಬಂತು :

"ಬಂದೆ ಅಣ್ಣಯ್ಯಾ..."

ಭಾಗೀರಥಿ ಮಗುವನ್ನೆತ್ತಿಕೊಂಡು ಸ್ನಾನದ ಮನೆಗೆ ಹೋದಳು.

ತಾನು ಕೇಳಿದ ಸಂಭಾಷಣೆಗಳನ್ನು ಮೆಲುಕು ಹಾಕುತ್ತ, ಒಮ್ಮೆ ಮುಖ ಗಂಟಿಕ್ಕಿಕೊಳ್ಳುತ್ತ, ಒಮ್ಮೆ ನಗುತ್ತ ಭಾಗೀರಥಿ ಮಗುವಿಗೆ ಸ್ನಾನ ಮಾಡಿಸಿದಳು. ತಾಯಿಯ ಮನಸ್ಸು ಎಲ್ಲಿಯೋ ಅಲೆಯುತ್ತಿತ್ತೆಂದು ಮಗು ನಿತ್ಯಕ್ಕಿಂತ ತುಸು ಹೆಚ್ಚಾಗಿ ಅತ್ತಿತು. ಮರಿಮಗ ಗಟ್ಟಿಯಾಗಿ ಅಳುತ್ತಿರುವನಲ್ಲ, ಯಾಕೆ? ಎಂದು ನೋಡಲು ದೊಡ್ಡಮ್ಮ ಅತ್ತ ಬಂದರು. ಬಚ್ಚಲು ಮನೆಯ ಬಾಗಿಲಲ್ಲಿ ನಿಂತು ಅವರು ರಾಗವೆಳೆದರು.

"ಯಾಕೋ ಶ್ರೀಪಾದೂ ? ನೀರು ಬಿಸಿಯೇನೋ ?"

ಯೋಚನೆಗಳ ಗುಂಗು ಕಳೆದ ಭಾಗೀರಥಿ, "ಇಲ್ಲ ದೊಡ್ಡಮ್ಮ, ನೀರು ಹದವಾಗಿದೆ," ಎಂದಳು.

ಹಿರಿಯರ ಧ್ವನಿಗಳನ್ನು ಕೇಳಿ ಒಂದು ಕ್ಷಣ ಮಗು ಸುಮ್ಮನಾಯಿತು.

ಅಷ್ಟರಲ್ಲಿ ಶ್ರೀನಿವಾಸಯ್ಯ ಪಡಸಾಲೆಯಿಂದ, "ಅಮ್ಮ ಸ್ವಲ್ಪ ಇಲ್ಲಿ ಬಾ," ಎಂದು ಕರೆದುದು ಕೇಳಿಸಿತು.

ಅಲ್ಲಿಗೆ ಹೋದ ತಾಯಿಗೆ ಶ್ರೀನಿವಾಸಯ್ಯ, "ಮಾತಾಡ್ಬೇಕು. ಕೂತ್ಕೊ," ಎಂದರು.

ಆಗಲೆ ಮಿಂದು ಮಡಿಯುಟ್ಟಿದ್ದ ದೊಡ್ಡಮ್ಮ ನಿಂತುಕೊಂಡೇ, "ಏನು ಶೀನ ?" ಎಂದು ಕೇಳಿದರು.

ಗೋಡೆಗಾಗಲೀ ಬಾಗಿಲ ಚೌಕಟ್ಟಿಗಾಗಲೀ ಆಧರಿಸದೆ ನೆಟ್ಟಗೆ ನಿಂತಿದ್ದ ತಾಯಿಯನ್ನು ಕಂಡು ಶ್ರೀನಿವಾಸಯ್ಯನಿಗೆ, ಇವಳೀಗ ಈ ಸಂಸಾರದ ಆಧಾರ ಸ್ತಂಭ ಎನಿಸಿತು.

ಶ್ರೀನಿವಾಸಯ್ಯ ಆರಂಭಿಸಿದರು:

"ನಗರದಿಂದ ಬಂದಿದಾರಲ್ಲ ಆತ ನೆಂಟಸ್ತನದ ಪ್ರಸ್ತಾಪ ಮಾಡಿದಾರೆ."

ದೊಡ್ಡಮ್ಮನ ಮುಖದ ಮೇಲಿನ ಜೀವನಾನುಭವದ ಗೆರೆಗಳು ಮಿಸುಕಿದುವು. ಒಣಗಿದ್ದ ಅವರ ತುಟಿಗಳು ಮುಗುಳುನಗೆಯನ್ನು ಸೂಸಿ ಸಜೀವವಾದುವು.

"ಹೌದೆ ? ಅಷ್ಟಲ್ದೆ ಇಷ್ಟು ದೂರ ಯಾರಾದರೂ ಬರ್ತಾರೆಯೇ ?"

"ಮನುಷ್ಯನೇನೋ ಅನುಕೂಲಸ್ಥ. ಇಬ್ಬರು ಹುಡುಗೀರಿಗೆ ಮದುವೆ ವಯಸ್ಸಂತೆ."

"ಮದುವೆ ವಯಸ್ಸಂದ್ರೇನೊ ಶೀನು ? ಎಂಟೆ, ಹತ್ತೆ, ಹನ್ನೆರಡೆ ?"

ಹಾಗೆ ಕೇಳುತ್ತ ದೊಡ್ಡಮ್ಮನಿಗೆ ನಗು ಬಂತು.

ಶ್ರೀನಿವಾಸಯ್ಯನೂ ಸಣ್ಣಗೆ ನಕ್ಕರು.

"ಇಪ್ಪತ್ತೊ ಇಪ್ಪತ್ತೆರಡೊ ? ಯಾರಿಗೆ ಗೊತ್ತಮ್ಮ ?"

"ಜಾತಕ ತರಿಸು. ಗೊತ್ತಾಗುತ್ತೆ."

"ನೀನು ಒಪ್ಪಿದರ ಕಳಿಸೋಕೆ ಹೇಳೋಣಾಂತಿದ್ದೆ. ನಾವು ಇಷ್ಟಪಡೋದಾದ್ರೆ ಗೋವಿಂದ–ಪದ್ಮನಾಭ ಇಬ್ಬರನ್ನೂ ಅಳಿಯಂದಿರಾಗಿ ಸ್ವೀಕರಿಸೋಕೆ ಆತ ಸಿದ್ದ."

ಶ್ರೀನಿವಾಸಯ್ಯ ಹಾಗೆ ಹೇಳುತ್ತಿದ್ದಂತೆ ಭಾಗೀರಥಿ ಮಗುವಿನೊಡನೆ ಪಡಸಾಲೆಗೆ ಬಂದು ಧಡಧಡನೆ ತನ್ನ ಕೋಣೆಗೆ ಹೋದಳು.

"ಮಗೂನ ಮಲಗಿಸಿಬಿಡು," ಎಂದರು ದೊಡ್ಡಮ್ಮ.

"ಹೂಂ" ಎಂದಳಾಕೆ, ಬಾಗಿಲನ್ನು ಮರೆ ಮಾಡುತ್ತ. ತಾನು ಬರುವುದರೊಳಗೆ ಅದೇನು ಮಾತಾಡಿಬಿಟ್ಟರೊ ? ಈ ಮಗು ಅಳದೇ ಇದ್ದರೆ ಮಾತು ಕೇಳಿಸಬಹುದು. ಒಮ್ಮೆ ಇದು ತೆಪ್ಪಗೆ ಮಲಗಿದರೆ ಸಾಕಪ್ಪ ಎಂದುಕೊಂಡು, ಮಗನನ್ನು ತೊಟ್ಟಿಲಲ್ಲಿ ಮಲಗಿಸಿ ಭಾಗೀರಥಿ ತೂಗತೊಡಗಿದಳು.

ಶ್ರೀಪಾದನೋ ಜೋ ಜೋ ರಾಗ ಕೇಳಿಯೇ ಮಲಗುವ ಅಭ್ಯಾಸದ ಮಗು. ಆದರೂ ಅತ್ತ ಕಿವಿಗಳನ್ನು ಪಡಸಾಲೆಗೆ ಮೀಸಲಿಟ್ಟು "ಜೋ ಜೋ ಕಂದ" ಎಂದು ಪಲ್ಲವಿ ಹಾಡಿದಳು ಭಾಗೀರಥಿ.

ದೊಡ್ಡಮ್ಮ ಮಗನಿಗೆ ಅಂದರು:

"ಒಂದೇ ಮನೆಯಿಂದ ಇಬ್ಬರು ಹುಡುಗಿಯರನ್ನ ತರೋದು ಅಷ್ಟೊಂದು ಚೆನ್ನಾಗಿ ರೋಲ್ಲ ಶೀನ."

"ನನಗೂ ಹಾಗೇ ಅನಿಸುತ್ತೆ."

"ಇನ್ನೆಲ್ಲಾದರೂ ಪದ್ಮನಿಗೆ ಹೆಣ್ಣು ನೋಡ್ಬೇಕು. ಏನೇ ಆಗಲಿ, ಗೋವಿಂದನಿಗೂ ಪದ್ಮನಿಗೂ ಒಟ್ಟಿಗೆ ಈ ವರ್ಷವೇ ಮದುವೆ ಮಾಡ್ಬಿಡೋದು ಯೋಗ್ಯ."

"ಹೌದಮ್ಮ.... ಪದ್ಮನ ಓದು ಇನ್ನೊಂದು ವರ್ಷ ಇದೆ. ಅದು ಮುಗಿಯೋ ತನಕ ಕಾಯೋದು ಬೇಡ ಅಂತೀಯಾ ?"

"ಓದಿಗೇನು ? ಮದುವೆ ಆದ್ಮೇಲೂ ಓದಿ ಮುಗಿಸ್ತಾನೆ."

"ನಿಜವೇ. ಆದರೆ ಪದ್ಮ ಒಪ್ಪಬೇಕಲ್ಲ."

"ಅವನನ್ನು ಒಪ್ಸೋದು ದೊಡ್ಡ ಕೆಲಸವೆ ? ರೂಪವಂತೆಯಾಗಿರೋ ಹುಡುಗೀನ ಮೊದಲು ನೋಡು. ಸ್ವಲ್ಪ ಓದಿರ್ಬೇಕು."

"ವಿಷ್ಣುಮೂರ್ತಿಯ ಮಕ್ಕಳೂ ವಿದ್ಯಾವತಿಯರೇ. ಎಸ್.ಎಸ್.ಎಲ್.ಸಿ.ಯಾಗಿದೆ."

"ಗೋವಿಂದನಿಗಿಂತ ಜಾಸ್ತಿ ಓದಿದ ಹಾಗಾಯ್ತಲ್ಲ!"

"ಅದೇನಿದ್ದರೂ ಗೋವಿಂದನ ವಿಷಯದಲ್ಲಿ ಆತನಿಗೆ ಭಾರೀ ವಾತ್ಸಲ್ಯ. ಅಲ್ದೆ, ವಿದ್ಯೆ ಕಮ್ಮಿ ಅಂತ ಬುದ್ಧಿ ಕಮ್ಮಿಯೇ ?"

"ಗೋವಿಂದ ನಿಭಾಯಿಸ್ಕೊಳ್ತಾನೆ, ಬಿಡು. ಪದ್ಮನಾಭನಿಗೆ ಹಾಗಲ್ಲ, ಅವನಿಗೆ ಸೋಂಕಿರೋ ಜಾಡ್ಯ ಇದೆಯಲ್ಲ, ಅದನ್ನ ನಿವಾರಿಸುವಂಥ ಹುಡುಗಿ ಬೇಕು. ಅರ್ಥವಾಯ್ತೆ?"

"ಹೂನಮ್ಮ."

"ಹಳ್ಳೀ ಹುಡುಗೀನ ಅವನು ಮದುವೆಯಾಗೋದು ಕಾಣೆ."

ಹಾಗೆ ನುಡಿದ ದೊಡ್ಡಮ್ಮನಿಗೆ ಗೋಪಾಲನ ಕೊಠಡಿಯಿಂದ ಯಾವ ಸದ್ದೂ ಬರುತ್ತಿಲ್ಲ ಎಂಬುದು ಗೋಚರಕ್ಕೆ ಬಂತು.

ಅವರೆಂದರು:

"ಭಾಗೀ, ಶ್ರೀಪಾದು ಮಲಗಿದ್ನೆ ? ಅಡುಗೆಮನೆಗೆ ಹೋಗಮ್ಮ." ಮಾವನ ಹಾಗೂ ಅವರ ಅಮ್ಮನ ಮಾತುಕತೆಗೆ ಕಿವಿಗೊಟ್ಟು ಬಾಗಿಲ ಮರೆಯಲ್ಲಿ ನಿಂತಿದ್ದ ಭಾಗೀರಥಿ ನಿದ್ದೆ ಹೋಗಿದ್ದ ಮಗುವನ್ನು ಬಿಟ್ಟು ಹೊರಕ್ಕೆ ಬರಬೇಕಾಯಿತು. ಏನೋ ತಪ್ಪು ಮಾಡಿದವಳಂತೆ ವಿವರ್ಣವಾಗಿತ್ತು ಮುಖ.

ಹಿರಿಯ ಮೊಮ್ಮಗನ ಮಡದಿ ಅವಿತು ಕೇಳಿದಳೆಂಬುದನ್ನು ದೊಡ್ಡಮ್ಮ ಗಮನಿಸಿದ ರಾದರೂ ಸಿಟ್ಟಾಗಲಿಲ್ಲ. ಮನೆಯ ಮಾತು ಕೇಳಿಸಿಕೊಂಡರೆ ತಪ್ಪೇನು ? ನಾಳೆ ಅವಳೇ ಅಲ್ಲವೆ ಮನೆತನದ ಹಿರಿಯ ಯಜಮಾನಿತಿಯಾಗಿ ಎಲ್ಲವನ್ನೂ ತೂಗಿಸಿಕೊಂಡು ಹೋಗ ಬೇಕಾದವಳು ?

ಒಳಹೋಗುತ್ತಲಿದ್ದ ಭಾಗೀರಥಿಗೆ ಅವರೆಂದರು:

"ಒಂದಿಷ್ಟು ಚಿತ್ರಾನ್ನ, ಶ್ಯಾವಿಗೆ ಖೀರು ಮಾಡ್ಬೇಕಮ್ಮ. ಹಪ್ಪಳ ಸಂಡಿಗೆ ಕರೀಬೇಕು. ಹೋಗು ಮಡಿ ಉಟ್ಕೊ. ನಾನೂ ಬರ್‍ತೀನಿ."

"ಹೂಂ," ಎಂದು ಭಾಗೀರಥಿ ಅಡುಗೆಮನೆ ಸೇರಿದಳು.

ದೊಡ್ಡಮ್ಮ ಮಗನಿಗೆ ಅಂದರು:

"ಜಾತಕ ಸರಿಹೋಯ್ತೂಂತಾದ್ಮೇಲೆ ನೀನೊಮ್ಮೆ ನಗರಕ್ಕೆ ಹೋಗಿ ನೋಡ್ಕೊಂಡ್ಬಾ."

"ಏನನ್ನ?"

"ವಿಷ್ಣುಮೂರ್ತಿ ಇರೋ ಮನೆ, ಅವನ ಮಕ್ಕಳು..."

"ಸರಿ. ಪದ್ಮನಿಗೆ ಹುಡುಗಿ ಹುಡುಕೋ ವಿಷಯ ಹ್ಯಾಗೆ ಮಾಡೋಣ ? ಗಂಗಾಧರ ಶಾಸ್ತ್ರಿಗಳಿಗೆ ಹೇಳೋಣವೆ?"

"ಶಾಸ್ತ್ರಿಗಳು ಸೋಮಪುರದಲ್ಲಿ ಹುಡುಕ್ತಾರು. ಸುತ್ತುಮುತ್ತ ಹಳ್ಳಿಗಳಲ್ಲಿ ನೋಡ್ತಾರು. ನಗರದ ಕಡೆ ಅವರಿಗಷ್ಟು ಬಳಕೆ ಇಲ್ಲ, ಶೀನ."

"ನಿಜ. ಈಗೇನು ಮಾಡೋಣ ?"

"ವಿಷ್ಣುಮೂರ್ತಿಗೇ ಒಂದು ಮಾತು ಹೇಳ್ಬಹುದು. ನೋಡೋಣ."

ಅಷ್ಟು ನುಡಿದು ದೊಡ್ಡಮ್ಮ ಅಡುಗೆಮನೆಗೆ ಹೊರಡಲು ಅಣಿಯಾದರು. ಹೋಗುತ್ತ, "ಏಳು ಶೀನ. ಸ್ನಾನ, ಪೂಜೆ ಮುಗಿಸ್ಬಿಡು," ಎಂದರು.

"ಹೂನಮ್ಮ," ಅಂದರು, ಶ್ರೀನಿವಾಸಯ್ಯ.

...ವಿಷ್ಣುಮೂರ್ತಿಯನ್ನು ಕರೆದುಕೊಂಡು ಹಳ್ಳಿ ನೋಡಲು ಹೊರಟ ಗೋವಿಂದ ಕೃಷ್ಣೇಗೌಡನ ಪರಿಚಯವನ್ನು ವಿಷ್ಣುಮೂರ್ತಿಗೆ ಮಾಡಿಕೊಟ್ಟ.

"ಓಟ್ಲೋ? ಭೋ ಸಂತೋಷ. ಬೇಜಾರಾದಾಗ ಕಾಫಿಗೀಫಿ ಕುಡೀಬೌದು," ಎಂದ ಕೃಷ್ಣೇಗೌಡ.

ಗೋವಿಂದನೆಂದ:

"ವಿಷ್ಣುಮೂರ್ತಿಗಳೇ, ಕೃಷ್ಣೇಗೌಡರು ಸಾಮಾನ್ಯರು ಅಂದ್ಕೊಬೇಡಿ. ಪಟೇಲ ಶಾಮೇಗೌಡ್ರು ವಯಸ್ನಲ್ಲಿ ಹಿರೇರು. ನನ್ನಂಥ ಹುಡುಗರು ಏನಾದರೂ ಮನಸ್ಸು ಬಿಚ್ಚಿ ಮಾತಾಡೋದಿದ್ರೆ ಇವರ ಹತ್ರಾನೇ."

ಕೃಷ್ಣೇಗೌಡ ನಕ್ಕು ಅಂದ:

"ಗೋವಿಂದಪ್ಪನ ಮಾತು ನಂಬಬೇಡಿ, ಸೋಮಿಯೋರೆ. ಇವನು ಭೋ ಕಿಲಾಡಿ."

ವಿಷ್ಣುಮೂರ್ತಿಯೆಂದರು:

"ಹ್ಹೆ ಹ್ಹೆ ! ನಿಮ್ಮ ಪರಿಚಯವಾದ್ದು ನನ್ನ ಭಾಗ್ಯ. ನಗರಕ್ಕೆ ಬಂದಾಗಲೆಲ್ಲ ನಮ್ಮಲ್ಲೇ ನೀವು ಉಳ್ಕೋಬೇಕು."

ಕೈಗಳನ್ನು ಜೋಡಿಸಿಯೇ ಅವರು ವಿನಂತಿ ಮಾಡಿದರು.

"ಆಗಲಿ, ಆಗಲಿ. ನಗರದಲ್ಲೂ ಇಲ್ಲೂ ಎರಡೂ ಕಡೆ ಎಂಗ್ಮಾಡ್ತೀರಪ್ಪ ?"

ಗೋವಿಂದನೆಂದ:

"ಅಲ್ಲಿಯ ರಾಜ್ಯ ಬಿಟ್ಟು ಇವರು ಎಲ್ಲಿಗೆ ಬರೋದುಂಟೆ ? ತಮ್ಮ ಕಡೆಯ ಒಬ್ಬನನ್ನು ಇಲ್ಲಿ ಇಡ್ತಾರೆ."

ತುಸು ಧ್ವನಿ ತಗ್ಗಿಸಿ ಆತ್ಮೀಯವಾಗಿ ವಿಷ್ಣುಮೂರ್ತಿ ಅಂದರು :

"ನಿಮ್ಮಲ್ಲಿ ಗುಟ್ಟೇನು? ಈ ಹೋಟೆಲು ನನ್ನ ಸ್ವಂತಕ್ಕಲ್ಲ, ನಮ್ಮ ಕಡೆಯ ಒಬ್ಬ ಹುಡುಗನ ಜೀವನಕ್ಕೆ ಮಾರ್ಗವಾಗ್ಬೇಕೂಂತ ಈ ಏರ್ಪಾಡು."

"ಅಂಗೋ ಸಮಾಚಾರ? ಸರಿ, ಕಾಫಿ ಕುಡಿಯೋರ್ಗೆ ಓಟ್ಲು ಯಾರದಾದರೇನು? ಅಲ್ವಾ ಗೋವಿಂದಪ್ಪ ?"

"ಇವರು ಹೋಟ್ಲು ಶುರು ಮಾಡೋದು ನಿಮ್ಮನ್ನ ಅವಲಂಬಿಸಿದೆ ಕೃಷ್ಣೇಗೌಡರೆ," ಎಂದ ಗೋವಿಂದ.

"ನಮ್ಮನ್ನೇ ?"

"ಹೂ ಮತ್ತೆ. ಗ್ರಾಮ ಚಾವಡಿ ಪಕ್ಕದ ಖಾಲಿ ಕಟ್ಟಡ ನೀವು ಕೊಟ್ಟರೆ ಕಾಫಿ–ಚಾ."

"ಕೊಡಾನ, ಕೊಡಾನ."

ವಿಷ್ಣುಮೂರ್ತಿ ನಿತ್ಯ ಮುಗುಳ್ನಗೆಯನ್ನು ತುಟಿಗಳ ಮೇಲೆ ಮೂಡಿಸಿ, "ಕಟ್ಟಡ ನೋಡ್ಕೊಂಡು ಬರೋಣವೆ ?" ಎಂದರು.

"ಅದಕ್ಕೇನಂತೆ ? ನಡೀರಿ," ಎಂದ ಕೃಷ್ಣೇಗೌಡ.

...ಗೋವಿಂದನೂ ಅವನ ಭಾವೀ ಮಾವನೂ ಹಳ್ಳಿಯಲ್ಲಿ ನಡೆದಾಡುತ್ತಿದ್ದಾಗ, ಅಡುಗೆಮನೆಯಲ್ಲಿ ಕಾರ್ಯನಿರತಳಾದ ಭಾಗೀರಥಿ, "ಒಳ್ಳೇದಾಯ್ತು. ಒಬ್ಬಳೇ ದುಡಿಯೋದು ತಪ್ಪುತ್ತೆ. ಇನ್ನಿಬ್ಬರು ಬರ್ತ್ತಾರಲ್ಲ," ಎಂದುಕೊಂಡಳು.

ಒಂದು ಸಂಗತಿಯಿಂದ ಮಾತ್ರ ಅವಳಿಗೆ ಸ್ವಲ್ಪ ಭಯವೆನಿಸಿತ್ತು. ಶಾಮೇಗೌಡನ ಸಂಸಾರಕ್ಕೂ ಈ ಮನೆಗೂ ಇದ್ದ ಸ್ನೇಹ ಮುಗಿಯಿತಲ್ಲ? ಇದರಿಂದ ಕೆಡುಕೇನಾದರೂ ಆಗಬಹುದೆ? ಮೈದುನ ಪದ್ಮ ಗೌಡರ ಮಗಳ ಜತೆ ಸಲಿಗೆಯಿಂದ ವರ್ತಿಸಬಹುದು ಅಂತ ಯಾರು ಎಣಿಸಿದ್ದರು ? ಹಾಗೆ ಮಾಡಬಾರದಿತ್ತು. ನಗರಕ್ಕೆ ಹೋಗಿ ಕಾಲೇಜಿನಲ್ಲಿ ಓದುವವರೆಲ್ಲ ಹೀಗೆಯೇ ಇರುತ್ತಾರೋ ಏನೋ. ಒಮ್ಮೆ ಮೈದುನನ ಕೊಠಡಿಯಿಂದ ಹೊಗೆ ಬಂತೆಂದು ಅಲ್ಲಿಗೆ ಓಡಿದ್ದಳಲ್ಲ ? ಕಿಟಿಕಿ ಬಾಗಿಲುಗಳನ್ನು ಮುಚ್ಚಿತ್ತು. ಆದರೂ ಸಂದಿಯಿಂದ ಬಂದಿತ್ತು, ಹೊಗೆ. ಬಾಗಿಲು ತಳ್ಳಿದಾಗ ಕಂಡುದೇನು? ಕೈಯಲ್ಲಿ ಸಿಗರೇಟು ಹಿಡಿದಿದ್ದ ಪದ್ಮನಾಭ ಬೆಚ್ಚಿಬಿದ್ದಿದ್ದ. ಅವನ ತೆರೆದ ಬಾಯಿಯಿಂದ ಹೊಗೆ ಹೊರಡುತ್ತಿತ್ತು. [ಅದನ್ನು ಸ್ಮರಿಸಿಕೊಂಡು ಭಾಗೀರಥಿಗೆ ನಗು ಬಂತು.] ಮನೆಯಲ್ಲಿ ಬೇರೆ ಯಾರೂ ಆಗ ಇರಲಿಲ್ಲ. ಭಾಗೀರಥಿ ಅಂದಿದ್ದಳು:

"ಆಹ್ಹಾ ! ದೊಡ್ಡಮ್ಮನಿಗೆ ಹೇಳ್ಲಾ?"

ಪದ್ಮನಾಭ ಅಂಗಲಾಚಿದ್ದ:

"ಬೇಡಿ, ಅತ್ತಿಗೆ. ದಯವಿಟ್ಟು ಬೇಡಿ."

"ದೊಡ್ಡಮ್ಮನೇ ಬಂದರೂಂತ ಹೆದರಿದಿರೇನೋ?"

"ಹಾಗಲ್ಲ ಅತ್ತಿಗೆ. ಪ್ಲೀಸ್!"

"ನಂಗೆ ಇಂಗ್ಲಿಷ್ ಬರೋಲ್ಲ. ಅಬ್ಬ ! ಎಂಥ ಥಾಟು !"

"ಬಾಗಿಲು ಎಳ್ಕೊಳ್ಳಿ, ಅತ್ತಿಗೆ. ಹಚ್ಚಿದ್ದನ್ನ ಸೇದ್ಬಿಡ್ತೀನಿ."

"ಇನ್ನು ಯಾವತ್ತೂ ಕುಡೀಕೂಡ್ದು, ಹಾಂ?"

"ಇಲ್ಲ, ಇಲ್ಲ...."

ಭಾಗೀರಥಿ ದೊಡ್ಡಮ್ಮನಿಗೆ ಹೇಳಿರಲಿಲ್ಲ. ಆದರೆ ಆ ರಾತ್ರೆ ಗಂಡನಿಗೆ ವರದಿ ಮಾಡಿದ್ದಳು.

ಗೋಪಾಲ ಅಂದುದಿಷ್ಟೆ:

"ಹುಂ. ಅಂತೂ ದುಡ್ಡು ಪೋಲು ಮಾಡೋಕೆ ಕಲ್ತಿದಾನೆ."

ಅಲ್ಲಿಗೆ ಆ ಪ್ರಕರಣ ಮುಗಿದಿತ್ತು.

ಇನ್ನು ಪದ್ಮನ ಹೆಂಡತಿಯಾಗಿ ಬರುವವಳು ರೂಪಸಿ. ಗೋವಿಂದನ ಕೈಹಿಡಿಯು

ವವಳೋ ಹೋಟೆಲು ಮಾಲಿಕನ ಮಗಳು.

ಇವರೆಲ್ಲ ಎಲ್ಲಿರುತ್ತಾರೆ ? ಯಾವ ಕೋಣೆಗಳಲ್ಲಿ ?

ಮದುವೆಯಾದ ಮೇಲೆ ಪದ್ಮ ಓದು ಮುಗಿಸಬಹುದು ಅಂದರು. ಆಗ ಅವನ ಹೆಂಡತಿ ಇಲ್ಲಿಯೇ ಇರುತ್ತಾಳೊ ? ಅಥವಾ ತವರು ಮನೆಯಲ್ಲೊ ?

ಆ ಯೋಚನೆಗಳ ಮಧ್ಯೆ ಭಾಗೀರಥಿಗೆ ಅನಿಸಿತು:

ತಾನೊಮ್ಮೆ ತವರಿಗೆ ಹೋಗಿಬರಬೇಕು.

...ದೊಡ್ಡಮ್ಮ ಬಂದು ದಿನದ ಅಡುಗೆಯ ಆಡಳಿತ ಸೂತ್ರಗಳನ್ನು ವಹಿಸಿಕೊಂಡರು. ಮಗು ಎದ್ದಿತೆ ? –ಎಂದೊಮ್ಮೆ ನೋಡಿಬಂದ ಭಾಗೀರಥಿ ಲವಲವಿಕೆಯಿಂದ ದೊಡ್ಡಮ್ಮನಿಗೆ ನೆರವಾದಳು.

...ಆ ದಿನ ಸೂರ್ಯ ನಡುನೆತ್ತಿಗೆ ಬರುವುದಕ್ಕೆ ಮುನ್ನವೇ ಶ್ರೀನಿವಾಸಯ್ಯನವರ ಮನೆಯಲ್ಲಿ ಎಲೆ ಹಾಕಿದರು. ಪದ್ಮನಾಭನೂ ಜತೆಯಲ್ಲಿ ಕುಳಿತ.

ದೊಡ್ಡಮ್ಮ ಒಂದೆಡೆ ನಿಂತು ನಿರ್ದೇಶಗಳನ್ನಿತ್ತರು. ಭಾಗೀರಥಿ ಬಡಿಸಿದಳು.

ವಿಷ್ಣುಮೂರ್ತಿ ಅಡುಗೆಯನ್ನು ಹೊಗಳುತ್ತ, ಹಳ್ಳಿಯ ಗುಣಗಾನ ಮಾಡುತ್ತ, ಹೊಟ್ಟೆ ತುಂಬ ಉಂಡರು.

ಶ್ರೀನಿವಾಸಯ್ಯ ಊಟದ ಮಧ್ಯೆ ಅಂದರು :

"ಎಲ್ಲಿಯ ನೀರಿನ ಋಣ ಎಷ್ಟೆಷ್ಟರವರೆಗಿರುತ್ತೋ ಅಷ್ಟರವರೆಗೆ ಆಯಾ ಕಡೆ ಮನುಷ್ಯ ಇರಲೇಬೇಕು."

"ಪರಮ ಸತ್ಯ, ಪರಮ ಸತ್ಯ" ಎಂದರು ವಿಷ್ಣುಮೂರ್ತಿ.

ಶ್ರೀನಿವಾಸಯ್ಯ ತಮ್ಮ ತಂದೆಯನ್ನು ಸ್ಮರಿಸಿಕೊಂಡಿದ್ದರು. ಆತ ಅಲ್ಲಿಗೆ ಬಂದುದರಿಂದಲ್ಲವೆ ಕಣಿವೇಹಳ್ಳಿ ಅವರ ಊರಾದುದು? ಅವರು ಅಲ್ಲಿ ಹುಟ್ಟಿದುದು? ವಂಶದ ಗಿಡ ಬೆಳೆದು ಮರವಾದುದು?

ಕೆಲ ನಿಮಿಷ, ಆಲೋಚನೆಗಳ ಜಾಡು ಹಿಡಿದು ಅವರು ನಡೆದರೂ ಬಹಿರಂಗವಾಗಿ ಏನನ್ನೂ ಹೇಳಲಿಲ್ಲ:

ಸಾಧಾರಣವಾಗಿ ಊಟದ ವೇಳೆಯಲ್ಲಿ ಬಹಳ ಮಾತನಾಡುವವನು ಗೋವಿಂದ. ಇವತ್ತು ಅವನು ಹೆಚ್ಚಿನ ಮಟ್ಟಿಗೆ ಮೌನವಾಗಿದ್ದ.

ಮಾವನಾಗುವವನ ಮುಂದೆ ನಾಲಿಗೆ ಸಡಿಲ ಬಿಡಲು ಹುಡುಗ ಹಿಂತೆಗೆಯುತ್ತಿದ್ದಾನೆ, ಎಂದುಕೊಂಡರು ದೊಡ್ಡಮ್ಮ.

ಊಟವಾದ ಮೇಲೆ ಪಡಸಾಲೆಯಲ್ಲಿ ವೀಳ್ಯ ಹಾಕಿಕೊಳ್ಳಲು ಕುಳಿತವರು ಇಬ್ಬರೇ: ವಿಷ್ಣುಮೂರ್ತಿ ಮತ್ತು ಶ್ರೀನಿವಾಸಯ್ಯ.

"ಇನ್ನು ಹತ್ತೇ ನಿಮಿಷ ಟೈಮು. ನಾವು ಹೊರಡ್ಬೇಕು," ಎಂದು ಹೇಳಿ ಗೋವಿಂದ ಹೊರಕೊಠಡಿಗೆ ಹೋದ.

ದೊಡ್ಡಮ್ಮ ಬಂದು ಬಾಗಿಲ ಬಳಿ ನಿಂತರು.

"ಅಮ್ಮ ಇನ್ನೂ ಉಂಡಿಲ್ಲ. ಊಟ ಆಗಿದ್ದರೆ ಚೆನ್ನಾಗಿತ್ತು," ಎಂದರು ವಿಷ್ಣುಮೂರ್ತಿ.

ದೊಡ್ಡಮ್ಮ ನಕ್ಕು ಅಂದರು:

“ನಮ್ಮ ಊಟ ದೊಡ್ಡದಲ್ಲ. ಹೆಂಗಸರದು ಯಾವಾಗಲೂ ತಡವೇ.”

ನಿಷ್ಕಾರಣವಾದ ವಿಳಂಬಕ್ಕೆ ಅವಕಾಶವೀಯದೆ ವಿಷ್ಣುಮೂರ್ತಿ ಕೇಳಿದರು :

“ಏನು ತೀರ್ಮಾನಿಸೋಣಾಯಿತು ?”

ಶ್ರೀನಿವಾಸಯ್ಯ ದೊಡ್ಡಮ್ಮನ ಮುಖ ನೋಡಿದರು.

ಆಕೆ ಅಂದರು :

“ಜಾತಕಗಳನ್ನು ಕಳಿಸ್ಕೊಡಿ. ಶೀನ ನೋಡ್ತಾನೆ. ಸರಿಹೋದರೆ ಗೋವಿಂದ ಹುಡುಗೀನ ನೋಡೋ ಶಾಸ್ತ್ರ ಮುಗಿಸೋಣ. ಹಾಗೇ ನಿಮ್ಮ ಗುರುತಿನವರಿಗೆ ಹೇಳಿ, ನಮ್ಮ ಪದ್ಮನಿಗೆ ಒಳ್ಳೇ ಸಂಬಂಧ ನಗರದಲ್ಲಿಯೇ ಎಲ್ಲಾದರೂ ಕುದಿರಿಸೋಕಾಗುತ್ತೊ ನೋಡಿ.”

ವಿಷ್ಣುಮೂರ್ತಿ, ಸುಣ್ಣ ಮುಟ್ಟಿಸಿ ತೀಡಿ ಉಂಡೆಯಾಗಿ ಮಾಡಿದ್ದ ಹೊಗೆಸೊಪ್ಪಿನ ಚೂರನ್ನು ಬಾಯಿಯೊಳಕ್ಕೆ ಎಸೆದು,

“ಅರ್ಥವಾಯ್ತು. ಹಾಗೇ ಆಗಲಿ. ಕಿರಿಯವನಿಗೆ ವಧು ದೊರಕಿಸೋ ಜವಾಬ್ದಾರಿ ನನಗಿರಲಿ,” ಎಂದರು.

“ಆಗೋದಾದರೆ ಇಬ್ಬರ ಮದುವೇನೂ ಒಟ್ಟಿಗೆ ಆಗ್ಬೇಕು, ಬೇಗ್ನೆ ಈ ವರ್ಷವೇ,” ಎಂದು ದೊಡ್ಡಮ್ಮ ಸ್ಪಷ್ಟಪಡಿಸಿದರು.

“ದೇವರು ನಡೆಸ್ಕೊಡ್ತಾನೆ,” ಎಂದು ಹೇಳಿ ವಿಷ್ಣುಮೂರ್ತಿ ಎದ್ದರು.

ಹೊರಗೆ ಆಳು ತುಂಬಿದ ಬುಟ್ಟಿಯೊಡನೆ ಸಿದ್ಧವಾಗಿದ್ದ.

“ಏನದು ?” ಎಂದು ಕೇಳಿದರು ವಿಷ್ಣುಮೂರ್ತಿ.

“ಗೌಡರು ಕೊಟ್ಟ ರಸಪುರಿ. ರುಚಿ ನೋಡುವುದಕ್ಕೆ ನಮ್ಮ ತೋಟದ್ದೂ ಒಂದಿಷ್ಟು,” ಎಂದರು ಶ್ರೀನಿವಾಸಯ್ಯ.

“ಮಾವಿನ ಹಣ್ಣಿನ ಸೀಕರ್ಣೆ ಅಂದರೆ ನಮ್ಮವಳಿಗೆ ಇಷ್ಟ. ಮಕ್ಕಳಿಗೂ ಅಷ್ಟೆ. ಇನ್ನು ನಾಲ್ಕು ದಿವಸ ಅವರಿಗೆ ಹಬ್ಬ... ಅಪ್ಪಣೆ ಕೊಡಿ.”

“ಹೋಗಿ ಬನ್ನೀಪ್ಪಾ,” ಎಂದು ನುಡಿದು ದೊಡ್ಡಮ್ಮ ಒಳಕ್ಕೆ ನಡೆದರು.

ಶ್ರೀನಿವಾಸಯ್ಯ ಅವರನ್ನು ಬೀಳ್ಕೊಡಲು ಅಂಗಳದವರೆಗೂ ಹೋದರು.

ಭಾಗೀರಥಿ ಊಟ ಮುಗಿಸಿ (ಎದ್ದಿದ್ದ ಮಗುವಿಗೂ ಉಣ್ಣಿಸಿ) ಕೊಠಡಿಗೆ ಬಂದಾಗ ತಡವಾಗಿತ್ತು. ಗೋಪಾಲನಿಗೆ ಮಂಪರು ಹತ್ತಿತ್ತು.

ಅವನ ಮೈ ಮುಟ್ಟಿ ಎಚ್ಚರಿಸಿ ಭಾಗೀರಥಿ ಅಂದಳು :

“ರೀ, ರೀ, ನನಗೆ ಏನನ್ನಿಸ್ತೆ ಗೊತ್ತಾ ?”

## ೧೦

ಮೂರು ನಾಲ್ಕು ದಿನಗಳಲ್ಲಿ ಸುಭದ್ರೆ ಮೊದಲಿನಂತಾದಳು. ಮೊದಲಿನಂತೆ ಎನ್ನುವುದು ಸಮರ್ಪಕವೆನ್ನಿಸದೇನೋ ? ರಂಗಣ್ಣ ತಂದ ಸಲ್ಫಾ ಮಾತ್ರೆಗಳನ್ನು ತಿನ್ನಲು ಆಕೆ ನಿರಾಕರಿಸಿದ್ದಳು. ನಾಗಮ್ಮ ಒತ್ತಾಯಪಡಿಸಿ ನುಂಗಿಸಿದರು. ಅದರ ಪ್ರಭಾವದಿಂದ ಆ

ರಾತ್ರಿ ಕಳೆಯುವುದರೊಳಗೇ ಜ್ವರ ಇಳಿಮುಖವಾಯಿತು. ಮತ್ತೂ ಒಂದು ದಿನ ಅತ್ತೆಮ್ಮ ಕೊಟ್ಟ ಮಾತ್ರೆಗಳನ್ನು ಅವಳು ತಿಂದಳು. ಜ್ವರ ಪೂರ್ತಿ ಬಿಟ್ಟು ಹೋಯಿತು. ಮುಂದಿನ ಎರಡು ದಿನಗಳಲ್ಲಿ ನಿಶ್ಶಕ್ತಿಯೂ ಮಾಯವಾಯಿತು.

ಹೀಗೆ ಸುಭದ್ರೆ ದೇಹಸ್ಥಿತಿಗೆ ಸಂಬಂಧಿಸಿ ಮೊದಲಿನಂತಾದಳು.

ಮಾನಸಿಕವಾಗಿ ಮಾತ್ರ ಅವಳಲ್ಲಿ ತೀವ್ರ ಬದಲಾವಣೆಯಾಗಿತ್ತು. ಮ್ಲಾನವಾದ ಮುಖ. ಸ್ನಾನ ಮಾಡುತ್ತಿದ್ದಳು; ಆದರೆ ಸಿಂಗರಿಸಿಕೊಳ್ಳುತ್ತಿರಲಿಲ್ಲ. ಸ್ವಲ್ಪ ಮಂಕು ಕವಿದವರ ಹಾಗಿತ್ತು ಅವಳ ನಡವಳಿಕೆ.

ತಮ್ಮ ಶಂಕೆಯನ್ನು ಪಿಸುದನಿಯಲ್ಲಿ ಬಹಿರಂಗಪಡಿಸಿದರು ನಾಗಮ್ಮ:

"ದಿಬ್ಬದ್ದೊಂಡದ ದೆಯ್ಯ ಸೋಂಕಿರ್ಬೇಕಣ್ಣ. ವೀರಾಚಾರೀನ ಒಸಿ ಕರೆಸಿ ಕೇಳ್ಬಾರ್ದಾ ?"

ಬೇರೆ ಸಂದರ್ಭವಾಗಿದ್ದರೆ ಶಾಮೇಗೌಡರು ಹೂಂ ಅನ್ನುತ್ತಿದ್ದರು. ಆದರೆ ಈ ಸಲ ಅವರು ಬೇರೆ ಉತ್ತರವಿತ್ತರು:

"ಬ್ಯಾಡ ನಾಗೂ. ಇನ್ನೂ ಎರಡ್ದಿವ್ಸ. ಸರ್ಹೋಯ್ತದೆ."

"ಅದೆಂಗೆ ?"

"ದೆಯ್ಯ ಸೋಂಕಿಲ್ಲ ನಾಗೂ. ಅಯ್ಯನೋರ ಚಿಕ್ಕುಡುಗ ಅದಾನಲ್ಲ ಅವನೇ ದೆಯ್ಯ."

"ಅದೇನಾಯ್ತು ?"

"ಅದೊಂದಾಯ್ತು. ಅಷ್ಟು ತಿಳ್ಕೊ, ಸಾಕು."

"ಸುಬ್ಬಿ ಎಳೇ ಮೊಗ."

"ಊ. ಅಲ್ಲಾ ಅಂದ್ನೆ ? ನಿನ್ನ ಮನಸ್ಸಮಾಧಾನಕ್ಕೆ ಮಾರಮ್ಮಂಗೆ ಅರಕೆ ಒತ್ಕೊ."

...ಅಣ್ಣನೊಡನೆ ಮಾತನಾಡಿ ಇತ್ಯರ್ಥವಾಗದೇ ಹೋದ ವಿಷಯವನ್ನು ನಾಗಮ್ಮ ಅಳಿಯನೊಡನೆ ಪ್ರಸ್ತಾಪಿಸಿದರು.

"ಸುಬ್ಬಿ ಯಾಕೋ ಒಂತರಾ ಅವ್ಳಲ್ಲ, ರಂಗ...."

– "ನೀವು ಸುಮ್ಮಿರಿ, ಅತ್ತೆಮ್ಮ. ಜ್ವರ ಬಿಟ್ಟಿದೆ, ಸರ್ಹೋಗ್ತಾಳೆ."

"ಇಂಗ್ಲೀಸು ಅವುಸದಿ. ಆಲು ಗೀಲು ಜಾಸ್ತಿ ಕುಡೀಬೇಕು; ಅಲ್ಲವಾ ರಂಗ ?"

"ಹೂಂ ಅತ್ತೆಮ್ಮ. ನಮ್ಮಲ್ಲೇನು ಹಾಲಿಗೆ ಕಮ್ಮೀನಾ ? ಕುಡಿಸಿ."

"ಆದರೂ ಮಾರಮ್ಮನಿಗೊಂದು ಅರಕೆ ಒತ್ಕೊಳ್ಳೋದು ಮೇಲು ಅನಿಸ್ತೈತೆ."

"ಅಷ್ಟಾದರೂ ಮಾಡದೆ ಬಿಟ್ಟೀರಾ ? ಒತ್ಕೊಳ್ಳಿ, ಯಾರು ಬೇಡ ಅಂತಾರೆ ? ಗುಡಿ ಮೇಲಿನ ದೇವರಿಗೂ ಒಂದ್ಹರಕೆ ಬಿತ್ಕೊಂಡ್ರೆ ಚೆನ್ನ."

"ಊನಪ್ಪ ರಂಗ. ಅಂಗೇ ಮಾಡಾನ."

"ಮೂಲೇಲಿ ಮೈ ಮುದುಡ್ಕೊಂಡು, ಕುಂತ್ಕೊಳ್ಳೋ ಬದಲು ಒಂದಿಷ್ಟು ಆಚೀಚೆ ಓಡಾಡು ಅನ್ನಿ ಸುಬ್ಬಿಗೆ."

"ಯೋಳ್ತೀನಿ. ಅಯ್ಯನೋರ ಚಿಕ್ಕುಡುಗ ಏನ್ಮಾಡ್ದ ?"

"ಏನಿಲ್ಲ, ಏನಿಲ್ಲ. ಆಟಕ್ಕೆ ಕರ್ದ, ಅಷ್ಟೆ."

"ನೀನೂ ಓಗ್ಲಿಲ್ವ ?"

ಆ ಬೇಸರದ ಮಧ್ಯೆಯೂ ನುಸುಳಿ ಬಂದ ನಗೆಯನ್ನು ಹತ್ತಿಕ್ಕಿ ರಂಗಣ್ಣನೆಂದ:

"ಮೊದಲು ಸುಬ್ಬಿ ಓದ್ಲು. ಆ ಮೇಲೆ ನಾನ್ಹೋದೆ."

"ಎಂಥ ಆಟ ?"

"ಆಟ ಆಡ್ಲಿಲ್ಲ ಅತ್ತೆಮ್ಮ. ವಾಪ್ಸು ಬಂದ್ಬುಟ್ವೊ."

ಹಣೆ ನೆರಿಗೆ ಕಟ್ಟಿಕೊಂಡು ನಾಗಮ್ಮ ಯೋಚಿಸಿದರು : ಇದೇನಿರಬಹುದು ? ಏನಿದರ ಅರ್ಥ ?

ಉತ್ತರ ಹೊಳೆಯಲಿಲ್ಲ. ನಿಟ್ಟುಸಿರುಬಿಡುತ್ತ ತಲೆ ಕೊಡವಿದರು.

....ಸಿಕ್ಕುಗಟ್ಟಿದ್ದ ನಾಗಮ್ಮನ ಯೋಚನೆಗಳು ಬಿಟ್ಟುಕೊಂಡುದು ಆ ಸಂಜೆ.

ಸೋದರ ಸೊಸೆಯ ಬಳಿ ಸಾರಿ ಅವರೆಂದರು:

"ಬಾ ಮೊಗ. ತಲೆ ಬಾಚಿ ಕಟ್ತೇನಿ."

"ಬ್ಯಾಡಿ, ಅತ್ತೆಮ್ಮ."

"ಬ್ಯಾಡ್ವಂತೆ. ಬಾ, ಬಾ. ಜಗಲಿಯಾಗೆ ಕುಂತ್ಕಳ್ಳಾನ. ಅಲ್ಲಿ ಬೆಳಕೈತೆ."

"ನಾನೊಲ್ಲೆ, ಅತ್ತೆಮ್ಮ. ರಂಗಣ್ಣ ಬಯ್ತಾನೆ."

""ಬಯ್ತಾನಾ, ಯಾಕೆ?"

"ನಾನು ತಲೆ ಬಾಚ್ಕೊಳ್ಳೋದು ಅವನಿಗೆ ಇಸ್ಟ ಇಲ್ಲ."

"ಓ ಓ ಓ.... ಒಳ್ಳೇ ಯೋಳ್ದೆ. ನಡಿ. ನಾನವನನ್ನ ತರಾಟೆಗೆ ತಕಂತೀನಿ. ಮನೆಗೆ ಬರ್ಲಿ."

"ಮನೆಯಾಗಿಲ್ಲವಾ ಅವ್ನು ?"

"ಇಲ್ಲ. ಒರಗೋಗವನೆ."

ಸುಭದ್ರೆ ನಾಗಮ್ಮನ ಜತೆ ಜಗಲಿಗೆ ಬಂದಳು. ನಾಗಮ್ಮ ಕೊಬರಿ ಎಣ್ಣೆಯ ಬಟ್ಟಲು ತಂದು ಸೊಸೆಯ ಕೂದಲಿಗೆ ಎಣ್ಣೆ ಸವರಿದರು. ಸೋಮಪುರದ ಜಾತ್ರೆಯಲ್ಲಿ ಶಾಮೇಗೌಡರು ಕೊಂಡು ತಂದಿದ್ದ ದಂತದ ಬಾಚಣಿಗೆಯಿಂದ ತಲೆಗೂದಲು ಸಿಕ್ಕು ಬಿಡಿಸಿದರು.

ಸುಬ್ಬಿಯ ಕೂದಲು ನೀಳವೂ ಅಲ್ಲ, ಮೋಟೂ ಅಲ್ಲ. ಆದರೂ ಸಮೃದ್ಧವಾಗಿತ್ತು. ಎರಡೂ ಕೈಗಳಿಂದ ಬಾಚಿ ಹಿಡಿಯುವಷ್ಟು. ನಾಗಮ್ಮನಿಗೆ ನೆನಪಿತ್ತು. ಅಂಥದೇ ತಲೆಗೂದಲಿತ್ತು ಸುಬ್ಬಿಯ ತಾಯಿಗೆ. ಅವಳು ಈ ಮನೆಗೆ ಬರುವುದಕ್ಕೆ ಮುಂಚೆ ತಾವು ಹೊರಟು ಹೋಗಿದ್ದರು ನಿಜ. ಹೋದ ಮನೆಯಲ್ಲಿ ಎಲ್ಲವೂ ಇತ್ತು, ತಮ್ಮ ಗಂಡನ ಆರೋಗ್ಯವೊಂದರ ಹೊರತಾಗಿ. ತಾವು ವಿಧವೆಯಾಗುವುದಕ್ಕೆ ಮುನ್ನ ಗಂಡನ ಜತೆ ಒಂದೆರಡು ಸಾರೆ ನಾಗಮ್ಮ ತವರು ಮನೆಗೆ ಬಂದಿದ್ದರು. ಅವರ ತಾಯಿ ಆಗಿನ್ನೂ ಜೀವಂತವಾಗಿದ್ದ ದಿನಗಳು. ಮುಂದೆ ಅನೇಕ ವರ್ಷಗಳ ಕಾಲ ತವರು ಅವರಿಗೆ ದೂರವಾಗಿತ್ತು. ಸುಬ್ಬಿ ತಬ್ಬಲಿಯಾದಾಗ ನಾಗಮ್ಮನವರ ಅಣ್ಣ ಆಕೆಯ ಗಂಡನ ಮನೆಗೆ ಬಂದು, ಕಂಬನಿ ಒರೆಸಿದ ಕಣ್ಣುಗಳನ್ನು ತಿಕ್ಕಿಕೊಳ್ಳುತ್ತ, "ನಾಗೂನ ಕಳಿಸ್ಕೊಡಿ, ಒಂದು ವರ್ಷ ಕಣಿವೇಹಳ್ಳಿಯಾಗಿರ್ಲಿ," ಎಂದಿದ್ದರು.

ಅಣ್ಣನ ದುಃಖದಲ್ಲಿ ಭಾಗಿಯಾದರೂ, ತಮ್ಮ ಬದುಕು ಕೃತಾರ್ಥವಾಯಿತೆಂಬ ಭಾವನೆಯಿಂದ ನಾಗಮ್ಮ ಒಡಹುಟ್ಟಿದವನನ್ನು ಹಿಂಬಾಲಿಸಿ, ಹಾಲು ಹಸುಳೆಯ ಆರೈಕೆಯ ಭಾರ ಹೊತ್ತಿದ್ದರು.

ತಮಗೆ ವೈಧವ್ಯ ಪ್ರಾಪ್ತವಾಯಿತು; ಅಣ್ಣನ ಹೆಂಡತಿ ಸತ್ತಳು. ನಿಷ್ಕಾರಣವಾಗಿ

ವಿಧಿ ಕ್ರೂರವಾಗಿದೆ ಎಂದು ಅವರಿಗೆ ಅನೇಕ ವೇಳೆ ಅನಿಸುತ್ತಿತ್ತು.

ತಮ್ಮದೇ ಮಗು ಎಂಬಷ್ಟು ಮಮತೆಯಿಂದ ತಾವು ಬೆಳೆಸಿದ ಹುಡುಗಿ ಸುಬ್ಬಿ. ಪಾಲನೆ ಪೋಷಣೆಗೆ ಸಂಬಂಧಿಸಿ ರಂಗಣ್ಣ–ಸುಭದ್ರೆಯರ ನಡುವೆ ಅವರು ತಾರತಮ್ಯ ಮಾಡಿದರು, ಎಂದಲ್ಲ. ಆ ಬಗೆಯ ಯೋಚನೆ ಅವರಿಗೆ ಕನಸಿನಲ್ಲಿಯೂ ಸಾಧ್ಯವಿಲ್ಲದ್ದು. ಆದರೂ, ರಂಗ ಆಗಲೇ ಐದಾರು ವರ್ಷ ದೊಡ್ಡವ. ತನಗೊಬ್ಬಳು ತಾಯಿ ಇದ್ದಳು ಎಂಬುದನ್ನು ಸದಾಕಾಲವೂ ನೆನಪಿಡುವ ಮಟ್ಟಿಗೆ ಭಾಗ್ಯಶಾಲಿ. ಸುಬ್ಬಿಗಾದರೋ ನಾಗಮ್ಮನೇ ಅಮ್ಮ.

ಆದರೂ, ಅಮ್ಮನೆಂದೇ ಸುಭದ್ರೆ ತಮ್ಮನ್ನು ಕರೆಯಬೇಕೆಂಬ ಹಟ ಇತ್ತೆ ಅವರಿಗೆ ? ರಂಗಣ್ಣ 'ಅತ್ತೆಮ್ಮಾ' ಎನ್ನುತ್ತಿದ್ದ; ತೊದಲತೊಡಗಿದಾಗ ಸುಬ್ಬಿಯೂ ಅಣ್ಣನನ್ನು ಅನುಕರಿಸಿ 'ಅತ್ತೇ' ಎಂದಿದ್ದಳು.

ಆ ಮಾತಿಗೆ ಹದಿನೈದು ವರ್ಷಗಳೋ ಹದಿನಾರೋ ಆದುವಲ್ಲ ?

"ಸುಬ್ಬೀ."

"ಏನು ಅತ್ತೆಮ್ಮಾ ?"

"ಯಾನ್ಮಾಡ್ತಿದೀಯಾ ?"

ಸಣ್ಣಗೆ ನಕ್ಕಳು ಹುಡುಗಿ. ನಾಗಮ್ಮನ ಹೊಟ್ಟೆ ತುಂಬಿತು.

"ಎರಳು ಆಕಿಸ್ಕೋತ ಕುಂತಿವ್ನಿ, ಅತ್ತೆಮ್ಮಾ !"

"ಊಂ. ಮೊಗ. ಸುಮ್ಕಿದೀಯಲ್ಲ, ಅದಕ್ಕಂದೆ."

ಹುಡುಗಿ ಮೌನ. [ಮತ್ತೆ ಅಂತರ್ಮುಖಿಯಾದಳು ಸುಭದ್ರೆ.]

ನಾಗಮ್ಮನೇ ಅಂದರು:

"ಪದ್ಮಣ್ಣ ಈ ಕಡೆ ಬರ್ನೇ ಇಲ್ಲ."

"........."

"ಜಗಳ ಆತಾ ಸುಬ್ಬಿ ?"

"ಅವರ್ನ ಕಂಡರೆ ರಂಗಣ್ಣ ಉರಿ ಕಾರ್ತಾನೆ, ಅತ್ತೆಮ್ಮ."

"ಯಾರ್ನ ?"

"ಅವರ್ನ; ಅಯ್ಯನೋರ ಮನೆಯೋರ್ನ."

"ಅವರು ಬ್ಯಾರೆ ಜನ, ನಾವು ಬ್ಯಾರೆ ಜನ ಸುಬ್ಬಿ."

"........."

"ಆದರೂ ಜಗಳ ಮಾತ್ರ ಸರಿಯಲ್ಲ. ಅವರುಡ್ಗ ಪದ್ಮ ನಿನ್ನಾವ ಯಾನಾದರೂ ಅಂದ್ನ ?"

"ಬ್ಯಾಡಿ ಅತ್ತೆಮ್ಮ! ಆ ಮಾತು ಬ್ಯಾಡಿ."

ಹುಡುಗಿ ಗದ್ಗದಿತೆ. [ಬೊಗಸೆ ಕಣ್ಣುಗಳು ನೀರಲ್ಲಿ ತೇಲಾಡಿದುವು.]

"ಅಳಬಾರ್ದು ಸುಬ್ಬಿ. ಅಳಬ್ಯಾಡ ಕಂದ."

ನಾಗಮ್ಮ ಹಣಿಗೆಯನ್ನು ಕೆಳಗಿಟ್ಟು ಹುಡುಗಿಯ ಭುಜಗಳನ್ನು ಹಿಡಿದು ತಿರುಗಿಸಿ ಮುಖ ನೋಡಿದರು. ತಮ್ಮ ತೊಡೆಯ ಮೇಲೆ ಆಕೆಯನ್ನೊರಗಿಸಿಕೊಂಡು, ತಮ್ಮ ಸೆರಗಿ

ನಿಂದ ಆ ಕಣ್ಣುಗಳನ್ನು ಒರೆಸಿದರು. ಒರೆಸುತ್ತ ಸ್ವತಃ ತಮ್ಮ ಕಣ್ಣುಗಳೇ ತೇವಗೊಂಡುದನ್ನು ನಾಗಮ್ಮ ಅರಿತರು. ಅವರು ಸುಭದ್ರೆಯನ್ನು ಎತ್ತಿ ಕೂಡಿಸಿ ಬೆನ್ನು ತೀಡಿದರು.

ಹೊರಗೆ ಅಂಗಳದಲ್ಲಿ ಮಬ್ಬುಗತ್ತಲು ಆವರಿಸಿದಂತೆ, ಎಲ್ಲವೂ ಮಸಕಾಗತೊಡಗಿತ್ತು.

" ಎಲಾ, ಕತ್ತಲಾಯ್ತಲ್ಲ ! ಇನ್ನೂ ದನಗೋಳು ಅಟ್ಟಿಗೇ ಬಂದಿಲ್ಲ ... " ಎಂದು ನಾಗಮ್ಮ ಧ್ವನಿ ತೆಗೆದು ಉದ್ಗರಿಸಿದರು.

ಇದ್ದಕ್ಕಿದ್ದಂತೆ ತಣ್ಣನೆ ಗಾಳಿ ಬೀಸಿತು.

" ಓ. ಮಳೆ ಬತ್ತದೆ ಸುಬ್ಬೀ ! ಇದು ಮ್ವಾಡ !"

" ಹೂಂ, ಅತ್ತೆಮ್ಮ."

ನಾಗಮ್ಮ, ಯುವತಿಯರನ್ನು ನಾಚಿಸುವ ಉತ್ಸಾಹದಿಂದ, ಸುಭದ್ರೆಯನ್ನು ಹಿಡಿದು ನಿಲ್ಲಿಸಿ ತಾವು ಎದ್ದರು. ಅವರ ಮುಖದ ಗೆರೆಗಳು ಮಾಯವಾದುವು. ಇನ್ನು ಉಳುಮೆ, ಬಿತ್ತನೆ. ನಿರಂತರ ಚಟುವಟಿಕೆಯ ದಿನಗಳು.

ಮಳೆಯನ್ನು ಸ್ವಾಗತಿಸಲು ಸಿದ್ಧರಾಗುತ್ತ ನಾಗಮ್ಮ ಅಂದರು:

" ಉಲ್ಲು ಒರಗೇ ಬಿದ್ದವೆ. ಎತ್ತಾಕ್ಬರ್ತೀನಿ, ಸುಬ್ಬೀ."

ಹೊರಟ ಅವರನ್ನು ಅನುಸರಿಸುತ್ತ, " ನಾನೂ ಬಂದೇ, " ಎಂದಳು ಸುಭದ್ರೆ.

ಮೋಡಗಳು ಮತ್ತಷ್ಟು ದಟ್ಟೈಸಿದುವು. ದನಕರುಗಳೂ ಹೋರಿಗಳೂ ಬಾಲ ನೆಟ್ಟಗೆ ಮಾಡಿಕೊಂಡು ಕೊಟ್ಟಿಗೆಗೆ ಓಡಿಬಂದುವು.

" ಬಂದಿರಾ, ಬನ್ನಿ... " ಎಂದರು ನಾಗಮ್ಮ.

ದಿಬ್ಬದ ತಪ್ಪಲಲ್ಲಿ ಹುಲ್ಲಿನ ಒಣಕಡ್ಡಿಗಳನ್ನು ಆರಿಸಿ ತಿಂದು ಬೇಸತ್ತಿದ್ದ ಬಡಪಾಯಿಗಳು. ಇನ್ನು ಕೆಲವೇ ದಿನಗಳಲ್ಲಿ ಸುತ್ತುಮುತ್ತೆಲ್ಲ ಹೇರಳ ಹಸಿರು. ಮುಂದಿನ ಆ ದಿನಗಳನ್ನು ನೆನೆಸಿಕೊಂಡು ಸಂತುಷ್ಟರಾಗಿ ನಾಗಮ್ಮ ದನಕರುಗಳ ಮೈದಡವಿದರು.

ಸುಭದ್ರೆ ತನ್ನ ಪ್ರೀತಿಯ ಹಸುವಿನ ಕತ್ತು ತುರಿಸಿದಳು.

ದನಕರುಗಳನ್ನು ಮೇಯಿಸಲು ಒಯ್ದಿದ್ದ ಮಾದನ ಹಿರಿಯ ಮಗ ಅವುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಲು ನೆರವಾದ......

... ಸಂಜೆ ನದಿಯ ಕಡೆಗೆ ರಂಗಣ್ಣ ತಿರುಗಾಡುತ್ತ ಹೋಗಿದ್ದ. ಇನ್ನೂ ಹದಿನೈದು ಇಪ್ಪತ್ತು ದಿನ ಹಳ್ಳಿಯಲ್ಲಿರಬೇಕು. ಹೊತ್ತು ಕಳೆಯುವುದು ಕಷ್ಟವಾಗಿತ್ತು. ಅವ ನೆಂದುಕೊಂಡ: ಇದಕ್ಕೇ ಇರಬೇಕು, ಪದ್ಮನಂಥವರು ಕಥೆ ಪುಸ್ತಕ ಓದುವ ಅಭ್ಯಾಸವಿಟ್ಟಿರು ವುದು.

ಕಾಲೇಜಿನಲ್ಲಿ ಅವನ ಸಹಪಾಠಿಯೊಬ್ಬ—ವಸತಿಗೃಹದ ಒಡನಾಡಿ—ಬಹಳ ಓದು ವಾತ. ಇಂಗ್ಲಿಷ್ ಭಾಷೆಯ ಅಗ್ಗದ ಕಾದಂಬರಿಗಳೆಂದರೆ ಅವನಿಗೆ ಇಷ್ಟ. ಹಳೆಯ ಪುಸ್ತಕ ಗಳ ಅಂಗಡಿಯಿಂದಲೋ ದಿನಕ್ಕೆ ಪುಸ್ತಕಕ್ಕೆ ಹತ್ತು ಪೈಸೆ ಬಾಡಿಗೆ ಪಡೆಯುವ ಎರವಲು ಭಂಡಾರಗಳಿಂದಲೋ ಪುಸ್ತಕಗಳನ್ನು ತರುತ್ತಿದ್ದ.

ಅವನು ಆಗಾಗ್ಗೆ ಹೇಳುವುದಿತ್ತು :

" ಇಂಥ ಪುಸ್ತಕಗಳನ್ನ ಓದೋದರಿಂದ್ಲೇ ಕಣಮ್ಮ ಲೈಫ್ ಗೊತ್ತಾಗೋದು."

ಬೇಸಗೆಯ ರಜಾದಲ್ಲಿ ಒಂದು ತನ್ನೊಡನಿರಲಿ ಎಂದು, ಆ ಗೆಳೆಯನನ್ನು ಕೇಳಿ ಅತನ

ಸ್ವಂತದ್ದೊಂದು ಪುಸ್ತಕವನ್ನು ರಂಗಣ್ಣ ಎರವಲು ತಂದಿದ್ದ. ಆಂಗ್ಲ ಹೆಣ್ಣೊಬ್ಬಳು ಮೋಹಕ ಭಂಗಿಯಲ್ಲಿ ಹೆಚ್ಚು ಕಡಮೆ ಪೂರ್ಣ ನಗ್ನವಾಗಿದ್ದ ತನ್ನ ದೇಹವನ್ನು ಪ್ರದರ್ಶಿಸುವ ಚಿತ್ರವಿತ್ತು ಹೊದಿಕೆಯ ಮೇಲೆ. ಮೊದಲೇ ಯಾರೋ ಹೊದಿಕೆಯನ್ನು ಸಡಿಲಿಸಿದ್ದರು. ರಂಗಣ್ಣ ಅದನ್ನು ತೆಗೆದು ಗೆಳೆಯನಿಗೆ ಕೊಟ್ಟಿದ್ದ.

"ಜಾಕೀಟು ತೆಗೆದು ಎಸೆದ್ಬಿಟ್ಟೆಯಲ್ಲಮ್ಮ!" ಎಂದು ಪರಿಹಾಸ್ಯಮಾಡಿದ್ದ ಆ ಮಿತ್ರ.

ಕಣಿವೇಹಳ್ಳಿಗೆ ಬಂದ ರಂಗಣ್ಣ ಅದನ್ನು ಓದಲು ಯತ್ನಿಸಿದ್ದ. ಉದ್ದಕ್ಕೂ ಮುಗ್ಧ ಬಾಲೆಯೊಬ್ಬಳನ್ನು ಪುಂಡರು ಬಗೆಬಗೆಯಾಗಿ ಬಳಸಿಕೊಂಡುದರ ಚಿತ್ರಣ. ಮೆದುಳು ಬಿಸಿಯೇರುವ ಹಾಗಿತ್ತು ಬರವಣಿಗೆಯ ರೀತಿ. ಅರ್ಧ ಓದಿ ಆದಮೇಲೆ ಅಲ್ಲಿಗೇ ನಿಲ್ಲಿಸಿಬಿಟ್ಟಿದ್ದ ರಂಗಣ್ಣ. ಮುಂದೆ ಓದಲು ಮನಸ್ಸಾಗಿರಲಿಲ್ಲ.

ಆ ಪುಸ್ತಕದ ನೆನಪಾಗಿ, ನಡೆಯುತ್ತಿದ್ದ ರಂಗಣ್ಣನಿಗೆ ನಗು ಬಂತು.

ತಂದೆಗೆ ಇಂಗ್ಲಿಷ್ ಬರದು; ತಂಗಿಗೂ ಬರದು. ಹೀಗಾಗಿ ಆ ಪುಸ್ತಕ ತನ್ನಲ್ಲಿ ಸುರಕ್ಷಿತ. ಪುಸ್ತಕವಲ್ಲ, ತಾನು ಸುರಕ್ಷಿತ!

ಕೃಷ್ಣೇಗೌಡ ದೂರದಿಂದ ರಂಗಣ್ಣನನ್ನು ಕಂಡ. ಆತನೊಡನೆ ಹರಟೆಗೆ ನಿಲ್ಲುವ ಇಷ್ಟವಿಲ್ಲ ರಂಗಣ್ಣನಿಗೆ. ಕೃಷ್ಣೇಗೌಡನೋ ಕರೆದೇ ಬಿಟ್ಟ.

"ರಂಗಣ್ಣ, ನಿಲ್ಲು ಮಾರಾಯ. ಎಲ್ಲಿಗೆ ಸವಾರಿ?"

ರಂಗಣ್ಣ ನಿಂತು ಕೃಷ್ಣೇಗೌಡ ಹತ್ತಿರಕ್ಕೆ ಬಂದೊಡನೆ, "ನದೀಗಂಟ ಓಗಿದ್ದೆ ಮಾವ," ಎಂದ.

"ಒಬ್ನೇ? ಎಲ್ಲಿ ಪದ್ಮ? ಈಚೆಗೆ ಅವನ ಜತೆ ಓಡಾಟ ಇಲ್ವಂತಲ್ಲ..."

"ಆತನ್ದು ಬಿ.ಎ. ಕ್ಲಾಸು; ನನ್ದು ಮೆಡಿಕಲ್ ಕಾಲೇಜು."

"ನಮಗೇನು ಗೊತ್ತಾಗ್ತದಪ್ಪ ಅದೆಲ್ಲ? ಇಬ್ಬರೂ ನಗರದಾಗಿದೀರಿ, ಸ್ನೇಹಿತರು ಅಂತ ತಿಳ್ಕಂಡಿದ್ವಿ."

"ನಗರದಾಗೆ ಇದ್ರೂ ನಮ್ಮ ದಾರಿಗ್ಳು ಬೇರೆ ಬೇರೆ."

"ಉಂ! ಮನೆಯಾಗೆಲ್ರೂ ಚೆಂದಾಕಿದಾರಾ? ನಿನ್ತಂಗಿಗೆ ಜರ ಅಂತ ಕೇಳ್ದೆ."

"ಆಗ್ಲೇ ವಾಸಿಯಾಯ್ತು."

"ನೀನೇ ಔಷಧಿ ಕೊಟ್ಯಂತೆ."

"ಹ್ಞ."

"ಪರವಾಗಿಲ್ಲ ಬಿಡು! ನಮ್ಮ ಹಳ್ಳಿಗೆ ಡಾಕ್ಟ್ರ ಬಂದಂಗಾಯ್ತು. ಗೋವಿಂದಪ್ಪ ಅದೇನೋ ಯಾರ್ಕೈಲೋ ಓಟ್ಲಿಡ್ಸೋಕೆ ನೋಡ್ತಾ ಅವನೆ."

"ಹೌದು, ಅದ್ಯಾರೋ ಅಪ್ಪನತ್ರಕ್ಕೆ ಬಂದಿದ್ರು."

ಹೀಗೆಯೇ ಮತ್ತೂ ಎರಡು ನಿಮಿಷ ಆ ಮಾತು ಈ ಮಾತು.

"ಬರ್ತೀನಿ ಮಾವ," ಎಂದು ಹೇಳಿ ರಂಗಣ್ಣ ಹೊರಟುಬಿಟ್ಟ.

ಆತ ನಡೆಯುತ್ತಲಿದ್ದ ಹಾಗೆ ಹವೆ ಬದಲಾಯಿತು.

ಗಾಳಿ ಬೀಸಿತು. ಎಲ್ಲೋ ಪಶ್ಚಿಮದಲ್ಲಿ ಸಣ್ಣಗೆ ಕಾಣಿಸಿದೊಂದು ಮೋಡ ದೊಡ್ಡ ದೊಡ್ಡದಾಗಿ ಆಕಾಶವನ್ನೇ ಆಕ್ರಮಿಸಿತು.

"ಓ್ಹ! ಇವತ್ತು ಮಳೆ ಸುರಿದೇ ಸುರೀತದೆ," ಎಂದುಕೊಂಡು ರಂಗಣ್ಣ ಮನೆಯ ಕಡೆಗೆ ಬೇಗ ಬೇಗನೆ ಕಾಲಿರಿಸಿದ.

ನಡೆಯುತ್ತ ಆತ ಯೋಚಿಸಿದ :

ಸುಬ್ಬಿಗೆ ತಾನು ಔಷಧಿ ಕೊಟ್ಟು ಗುಣಮಾಡಿದೆನೆಂಬ ಸುದ್ದಿ ಊರೆಲ್ಲ ಹಬ್ಬಿರಬೇಕು. ಸದ್ಯಃ ಸ್ವಲ್ಪದರಲ್ಲಿ ಗುಣವಾಯಿತಲ್ಲ ! 'ಜ್ವರ ಏನೇನೂ ಇಳಿಮುಖವಾಗದಿದ್ದರೆ ಟೈಫಾಯ್ಡಿಗೆ ತಿರುಗಿದೆ ಅಂತ ಭಾವಿಸಬೇಕು; ಹಾಗೇನಾದರೂ ಆದರೆ ಬಂದು ಹೇಳು'— ಎಂದಿದ್ದರು ಅವನ ಪ್ರೊಫೆಸರು. ಹಾಗೆ ಆಗಿರಲಿಲ್ಲ.

ಪದ್ಮನ ಯೋಚನೆಯನ್ನು ಪೂರ್ತಿಯಾಗಿ ಬಿಟ್ಟಿರಬಹುದಲ್ಲವೆ ತಂಗಿ ? ಆದರೆ ತನ್ನೊಡನೆ ಮಾತ್ರ ಅವಳ ನಡವಳಿಕೆ ಮೊದಲಿನಂತಿರಲಿಲ್ಲ. ಕೆಲವು ದಿನ ಸಿಟ್ಟಿರುವುದು ಸಹಜ. ಸ್ವಲ್ಪ ಕಾಲವಾದ ಮೇಲೆ ಆ ಸಿಟ್ಟು ಇಳಿಯಲೇ ಬೇಕು. ಅಣ್ಣನಾದ ತಾನು ಬಯ್ದಿದ್ದರೆ ಅದು ತಂಗಿಯಾದ ತನ್ನ ಒಳಿತಿಗೆ ಅಂತ ತಿಳಿಯುವಷ್ಟು ಬುದ್ಧಿ ಇಲ್ಲವೆ ಅವಳಿಗೆ ?

ಗಾಳಿ ಭೋರೆಂದಿತು. ರಂಗಣ್ಣ ಹರ್ಷಿತನಾದ. ಈ ಮೊದಲ ಮಳೆಯಾದೊಡನೆಯೇ ದುಡಿಮೆ ಆರಂಭ. ಮುಂಗಾರು ಮಳೆ ಶುರುವಾಗುವುದಕ್ಕೆ ಮುಂಚೆಯೇ ತಾನು ನಗರದಲ್ಲಿರ ಬೇಕು. ಅಷ್ಟು ದಿನ, ಹೊಲಗಳಲ್ಲಿ ನಡೆಯುವ ಚಟುವಟಿಕೆಯನ್ನು ತಾನು ಈಕ್ಷಿಸಬಹುದು...

ಬೇಗ ಬೇಗನೆ ಹೆಜ್ಜೆ ಹಾಕಿದ ರಂಗಣ್ಣ, ದನಕರುಗಳು ತನಗಿಂತ ತುಸು ಮುಂದೆಯೇ ಮನೆಯ ಕಡೆಗೆ ಹೋಗುತ್ತಿದ್ದುದನ್ನು ಕಂಡ.

... ಮನೆಯೊಳಗೆ ಯಾರೂ ಇರಲಿಲ್ಲ. ಅತ್ತೆ ಕೊಟ್ಟಿಗೆಯಲ್ಲಿದ್ದರು.

ಅದರ ಹಿಂಭಾಗದಲ್ಲಿ ಮರಗಳ ತೋಪಿನಲ್ಲಿ ಸುಭದ್ರೆಯನ್ನು ಕಂಡಂತಾಯಿತು ರಂಗಣ್ಣ ನಿಗೆ. ಆತ ಅಲ್ಲಿಗೆ ಹೋದ.

ಕಳೆದ ಮಳೆಗಾಲದಲ್ಲಿ ಒಮ್ಮೆ ಬಿರುಗಾಳಿಗೆ ಸಿಲುಕಿ ಒಂದು ಮಾವಿನ ಮರ ಬೇರು ಸಹಿತ ಕಿತ್ತು ಬಿದ್ದಿತ್ತು. ರೆಂಬೆ ಕೊಂಬೆಗಳನ್ನು ಕತ್ತರಿಸಿ ಆದಮೇಲೆ ಕಾಂಡ ಅಲ್ಲಿಯೇ ಉಳಿದಿತ್ತು.

ಅದರ ಮೇಲೆ ಸುಭದ್ರೆ ಕುಳಿತಿದ್ದಳು.

ರಂಗಣ್ಣ ಅವಳನ್ನು ಸಮೀಪಿಸಿ "ಮಳೆ ಬರೋಹಂಗೈತೆ," ಎಂದ.

ಅವಳು ಹೂಂ ಎನ್ನಲಿಲ್ಲ. ನಿರ್ವಿಕಾರಭಾವದಿಂದ ಅಣ್ಣನ ಮುಖವನ್ನು ನೋಡಿ ದಳು.

ರಂಗಣ್ಣ ದಿಮ್ಮಿಯ ಒಂದು ಮೂಲೆಯಲ್ಲಿ ಕುಳಿತ. ಆತನನ್ನು ನೇರವಾಗಿ ನೋಡ ಲಿಚ್ಛಿಸದೆ ಸುಭದ್ರೆ ವಿರುದ್ಧ ದಿಕ್ಕಿನಲ್ಲಿ ತನ್ನ ದೃಷ್ಟಿಯನ್ನು ಹರಿಯಬಿಟ್ಟಳು.

ರಂಗಣ್ಣ ಕೇಳಿದ :

"ಇನ್ನೂ ನಿತ್ರಾಣ ಅನಿಸ್ತದಾ ?"

ಸುಭದ್ರೆ ತುಟಿಗಳನ್ನು ಬೇರ್ಪಡಿಸದೆ ತಲೆಯನ್ನಷ್ಟೆ ಅಲ್ಲಾಡಿಸಿ ಇಲ್ಲವೆಂದಳು.

"ಅವತ್ತು ಏನೋ ಅಂದೆ ಅಂತ ಇನ್ನೂ ಮುನಿಸ್ಕೊಂಡಿದೀಯಾ ?"

ಸುಭದ್ರೆ—ನಿರುತ್ತರ.

"ನನ್ನ ನೀನು ಅರ್ಥ ಮಾಡ್ಕೋಬೇಕು ಸುಬ್ಬೀ."

6

ಠಪ್ ಠಪ್ಪೆಂದು ಮಳೆಹನಿಗಳು ಬಿರುಸಾಗಿ ಬಿದ್ದುವು.

ರಂಗಣ್ಣ ಕೆಳಕ್ಕೆ ಹಾರಿದ.

"ನಡೀ ಸುಬ್ಬೀ. ಮೈ ತೋಯಿಸ್ಕೋಬಾರದು. ಮತ್ತೆ ಜ್ವರ ಬಂದಾತು," ಎಂದ.

ಸುಬ್ಬಿ ಇಳಿದು ನಿಂತಳು. ತಾನು ಮರುಮಾತಾಡದೆ ಮನೆಗೆ ಹೊರಟ ಅಣ್ಣನನ್ನು ಹಿಂಬಾಲಿಸಿದಳು.

...ಕರಿಯನನ್ನು ಕರೆದುಕೊಂಡು ಸಂಜೆ ಮಾರಿ ಚಾವಡಿಯತ್ತ ಹೋದ ಶಾಮೇ ಗೌಡರು ಆದಿನ ಮಳೆಯನ್ನು ಸ್ವಾಗತಿಸಲು ಸಿದ್ಧರಾಗಿದ್ದರು. ಮಧ್ಯಾಹ್ನದ ಹೊತ್ತು ಭಣ ಗುಟ್ಟಿದ ನೆಲವೂ ಬೆವರಿದ ಮೈಯೂ ಆ ಸಂಜೆ ಮಳೆಯಾಗಬಹುದೆಂಬ ನಿರೀಕ್ಷೆಗೆ ಎಡೆ ಕೊಟ್ಟಿದ್ದುವು.

ಹೊತ್ತು ಕಳೆದಂತೆ ವಾತಾವರಣದಲ್ಲಾಗುತ್ತಿದ್ದ ಬದಲಾವಣೆಯನ್ನು ಗಮನಿಸಿ, ಇವತ್ತು ಮಳೆ ಖಂಡಿತ ಎಂದುಕೊಂಡರು ಗೌಡರು.

ಈ ಮಳೆಯಾದೊಡನೆಯೇ ಮಾವಿನಕಾಯಿಗಳನ್ನೆಲ್ಲ ಕುಯ್ಯಿಸಿ ಫಸಲನ್ನು ನಗರಕ್ಕೆ ದಾಟಿಸಿ ಬಿಡಬೇಕು. ಸೊಸೈಟಿಯ ಮೂಲಕ ಗೋವಿಂದ ಈ ಕೆಲಸ ಮಾಡಿದ್ರ ಸರಿ; ಇಲ್ಲ ವಾದರೆ ತಾವೇ ಆಳುಗಳನ್ನು ಕಳುಹಿಸಿ ಮಾರಾಟ ಮುಗಿಸಿಬಿಡಬೇಕು.

ಹೊಲ ಉಳಲು ಎಂದಿನಂತೆ ಕೃಷ್ಣೇಗೌಡ ತನ್ನ ಆಳುಗಳನ್ನೂ ಹೋರಿಗಳನ್ನೂ ಕಳುಹಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಅವನ ಹೊಲಗಳ ಉಳುಮೆಗೆ ತಮ್ಮ ಹೋರಿ ಗಳನ್ನೂ ಆಳುಗಳನ್ನೂ ತಾವು ಕಳುಹಿಸಬೇಕು......

ಮುನಿಯನ ಹೆಂಡತಿ ನಿಂಗಿ ಕಾಯಿಲೆ ಮಲಗಿರುವಳೆಂಬ ಸುದ್ದಿಯನ್ನು ಕರಿಯ ತಂದ.

ಗೌಡರು ಹೇಳಿದರು :

"ಏನಾಗೈತಂತೆ ?"

"ಜರ ಅಂತೆ."

ರಂಗನನ್ನು ಕೇಳಬೇಕು; ಸುಬ್ಬಿಗೋಸ್ಕರ ತಂದ ಮಾತ್ರೆಗಳೇನಾದರೂ ಉಳಿದಿದ್ದರೆ ಕೊಡಿಸಬೇಕು—ಎಂದು ಮನಸ್ಸಿನಲ್ಲಿ ಗುರುತು ಹಾಕಿಕೊಂಡರು ಗೌಡರು.

ಅಬ್ದುಲ್ಲ ನಾಪತ್ತೆಯಾಗಿ ಮುನಿಯನ ಹೊಲದ ಪ್ರಶ್ನೆಯೊಂದು ಬಗೆಹರಿಯದೆ ಉಳಿಯಿತಲ್ಲ ಎಂಬ ಕಸಿವಿಸಿ ಗೌಡರ ಮನಸ್ಸಿಗೆ ನೆಟ್ಟ ಮುಳ್ಳಾಗಿತ್ತು.

ಭಾರವಾದ ಕಪ್ಪು ಮೋಡಗಳು ಕಣಿವೇಹಳ್ಳಿಯ ಮೇಲೆ ಚಪ್ಪರ ಕಟ್ಟಿದಾಗ ಗೌಡರು, "ನೀನು ಹೋಗು," ಎಂದು ಕರಿಯನಿಗೆ ಆದೇಶವಿತ್ತು, ತಾವು ಮನೆಯ ಕಡೆಗೆ ಹೊರಟರು.

ಅವರು ನೀರ ಕಾಲಿವೆಯನ್ನು ದಾಟುವ ವೇಳೆಗೆ ಹನಿಗಳು ಬಿದ್ದು ಧೋ ಧೋ ಎಂದು ಮಳೆ ಸುರಿಯಲಾರಂಭಿಸಿತು.

ಅವರು ಮನೆ ಸೇರಿದಾಗ ಮೈ ಪೂರ್ತಿ ತೋಯ್ದು ಉಡುಪಿನಿಂದ ನೀರು ಧಾರೆಗಟ್ಟಿ ಹರಿಯುತ್ತಿತ್ತು. ಗೌಡರು ಮಾತ್ರ ಉಲ್ಲಸಿತರಾಗಿದ್ದರು.

ಜಗಲಿಯಲ್ಲಿ ನಿಂತು, "ಸುಬ್ಬೀ, ಮೈ ಒರೆಸ್ಕೋ ಬೇಕಲ್ಲ ಮೊಗ," ಎಂದರು.

ಮಗಳ ಧ್ವನಿ ಕೇಳಿಸಿತು:

"ಬಂದೆ ಅಪ್ಪ."

... ಸುಬ್ಬಿ ತಂದೆಯ ಕೋಟನ್ನು ಜಗಲಿಯಲ್ಲೇ ತೂಗುಹಾಕಿದಳು, ನೀರು ತೊಟ್ಟಿಕ್ಕಿ ಬೆಳಗಾಗುವ ಹೊತ್ತಿಗೆ ಒಣಗಲೆಂದು. ಉಳಿದ ಉಡುಪುಗಳನ್ನು ಹಿಂಡಿ ಪಡಸಾಲೆಯಲ್ಲಿ ಹಗ್ಗದ ಮೇಲೆ ಹರಡಿದಳು.

ಮನೆ ಒಂದೆರಡು ಕಡೆ ಸೋರುತ್ತಿತ್ತು. ಆ ನೀರನ್ನು ಹಿಡಿಯಲೆಂದು ನಾಗಮ್ಮ ಪಾತ್ರೆಗಳನ್ನು ತಂದಿಟ್ಟಳು.

"ಅಡ್ಡ ಮಳೆಗೆ ಯಾವಾಗ್ಲೂ ಅಂಗೇನೇ," ಎಂದರು ಗೌಡರು.

ಮನೆಯೊಳಕ್ಕೆ ನುಗ್ಗಿದ ಕತ್ತಲನ್ನು ಕಂದೀಲು ಇದಿರಿಸಿತು.

ನಾಗಮ್ಮ ಒಳಗೆ ಊಟಕ್ಕೆ ಅಣಿಮಾಡುತ್ತಿದ್ದಾಗ, ಹೊರಗೆ ಬಾಗಿಲನ್ನು ಯಾರೋ ತಟ್ಟಿದಂತಾಯಿತು. ಗಾಳಿಯ ಕೆಲಸ—ಎನಿಸಿತು ಗೌಡರಿಗೆ.

ಎರಡು ನಿಮಿಷ ಬಿಟ್ಟು ಮತ್ತೆ ಬಾಗಿಲ ಸದ್ದಾಯಿತು. ಧಪಧಪ ಬಡಿತವಲ್ಲ; ಕ್ಷೀಣ ಸಪ್ಪಳ.

"ಯಾರದು ?" ಎಂದರು ಗೌಡರು ಮಳೆಯ ಜೋರೋ ಧ್ವನಿಯನ್ನು ಮೀರಿಸಿ.

ಉತ್ತರ ಬರಲಿಲ್ಲ. ಬದಲು ಮನುಷ್ಯನ ಕೆಮ್ಮು ಮಳೆಯ ಸದ್ದಿನೊಡನೆ ಬೆರೆಯಿತು.

ಗೌಡರು ಎದ್ದು ಬಂದು ಹೊರಬಾಗಿಲನ್ನು ತೆರೆದರು.

ಅಲ್ಲಿ ಒಂದು ಬದಿಯಲ್ಲಿ, ಮಳೆಯಿಂದ ಪೂರ್ತಿ ತೋಯ್ದಿದ್ದ ಒಬ್ಬ ಮನುಷ್ಯ ಮೈ ಮುದುಡಿಕೊಂಡು ಎರಡೂ ಕೈಗಳನ್ನು ಎದೆಯ ಮಟ್ಟಕ್ಕೊಯ್ದು ಜೋಡಿಸಿ ನಿಂತಿದ್ದ.

"ಯಾರಪ್ಪ ?" ಎಂದರು ಗೌಡರು ದರ್ಪದಿಂದ.

ತಗ್ಗಿದ ಸ್ವರದಲ್ಲಿ ಉತ್ತರ ಬಂತು:

"ನಾನು."

ಧ್ವನಿಯನ್ನು ಗುರುತಿಸಿದ ಗೌಡರು ಉದ್ಗರಿಸಿದರು:

"ಅಬ್ದುಲ್ಲ !"

## ೧೧

"ಬಿಡು, ಏಳು," ಎಂದು ಗೌಡರು ಎಷ್ಟು ಹೇಳಿದರೂ, ಅಬ್ದುಲ್ಲ ಪಾದಗಳನ್ನು ಬಿಡಲಿಲ್ಲ. ಮೈಯಿಂದ ಒಸರುತ್ತಿದ್ದ ಮಳೆಯ ನೀರಿನಿಂದಲ್ಲ, ಬೆಚ್ಚನೆಯ ಕಣ್ಣೀರಿನಿಂದ ಗೌಡರ ಪಾದಗಳನ್ನು ಅವನು ತೊಳೆದ.

ಗೌಡರು ಮತ್ತೊಮ್ಮೆ ಅಂದರು:

"ಬಿಡು ಅಬ್ದುಲ್ಲ, ಏಳು !"

ಮೂಗು ಬಾಯಿಗಳಿಂದ ಬಿಸಿಯುಸಿರನ್ನು ಹೊರಬಿಡುತ್ತ ರೋದಿಸುತ್ತಿದ್ದ ಅಬ್ದುಲ್ಲ ಗೊಗ್ಗರ ಧ್ವನಿಯಲ್ಲಿ ಅಂದ:

"ನನಗೆ ಅಭಯ ಕೊಡಿ, ಒಡೆಯಾ."

"ಕಾಲು ಬಿಡಪ್ಪ."

"ಕಾಪಾಡ್ತೇನೇಂತ ಅಂದ್ರೇನೇ ನಾನು ಏಳೋದು, ಒಡೆಯಾ."

"ಉಚ್ಚಪ್ಪ, ಏಳು. ನಿನ್ನ ಜೀವಕ್ಕೆ ಅನ್ಯಾಯಾಗೋದಿಲ್ಲ."

ಗೌಡರು ಅಷ್ಟು ಹೇಳಿದ ಮೇಲೆ ಅಬ್ದುಲ್ಲ ತನ್ನ ಹಿಡಿತವನ್ನು ಸಡಿಲಿಸಿ ಮೆಲ್ಲನೆ ಎದ್ದು ನಿಂತ.

ಜಗಲಿಗೆ ಇರಿಚಲು ಬೀಸುತ್ತಿತ್ತು.

"ಒಳಗ್ಬಾ," ಎಂದರು ಗೌಡರು.

"ಬ್ಯಾಡಿ ಒಡೆಯಾ. ನಾನಿಲ್ಲೇ ಇರ್‍ತೀನಿ."

ಪಡಸಾಲೆಯಲ್ಲಿ ಇದ್ದೊಂದು ಕುರ್ಚಿಯನ್ನು ಗೌಡರು ದರದರನೆ ಎಳೆದುಕೊಂಡು ಬಾಗಿಲ ಬಳಿಗೆ ತಂದು, ಅದರ ಮೇಲೆ ಕುಳಿತರು.

ಹೊರಗೆ ಯಾರೋ ಬಂದರಲ್ಲ, ಎಂದು ರಂಗಣ್ಣ ಪಡಸಾಲೆಯ ಬಾಗಿಲ ಕಡೆಗೆ ಹಣಿಕಿ ನೋಡಿದ.

ಅದನ್ನು ಕಂಡ ಗೌಡರೆಂದರು:

"ರಂಗ ಒಳಗೆ ಹೋಗು."

ಆದರೆ, ಆ ಅರ್ಧ ಕ್ಷಣದಲ್ಲಿ, ಬಂದಿದ್ದ ಮನುಷ್ಯನನ್ನು ರಂಗಣ್ಣ ಗುರುತಿಸಿದ್ದ. ಆತ ಹೇಳುವುದನ್ನು ಕೇಳಬೇಕೆನಿಸಿತಾದರೂ ತಂದೆಯ ಅಪೇಕ್ಷೆಯಂತೆ ಒಳಕ್ಕೆ ಮರೆಯಾದ.

"ಇದೇನೋ ಮಾಡಿಬಿಟ್ಟೆಯಲ್ಲಪ್ಪ, ಅಬ್ದುಲ್ಲ," ಎಂದು ಗೌಡರು ಆರಂಭಿಸಿದರು.

ಕಣ್ಣುಗಳನ್ನು ಒರೆಸುತ್ತ, ನಡುವೆ ಬಿಕ್ಕುತ್ತ, ಅಬ್ದುಲ್ಲನೆಂದ:

"ಶೈತಾನ ನನ್ನನ್ನಿಡಿದ್ಬಿಟ್ಟಿತ್ತು, ಒಡೆಯಾ. ಇಷ್ಟು ವರ್ಸ ನಾನು ನಟ್ಟಿದ್ದ ಬೆಳೆಸಿದ್ದು ಎಲ್ಲಾ ಒಂಟೋಯ್ತದಲ್ಲಾ ಅಂತ ನನ್ಗೆ ಉಚ್ಚಿದ್ದಂಗಾಗಿತ್ತು, ಒಡೆಯಾ. ಸಾಯಿಸಿದ್ರೂ ಸರಿ. ಅಂತ ಅನ್ಕಂಡಿದ್ದೆ. ಆದ್ರೆ ನಿಜವಾಗ಼್ೂ ಅವ್ನು ಸತ್ತೋಗ್ತಾನೆ ಅಂತ ತಿಳ್ಕಂಡಿರ್‍ಲಿಲ್ಲ, ಒಡೆಯಾ. ಕೋರ್ಟ್ನಲ್ಲಿ ಅವನ್ಗೇ ಜಯ ಆತದೇಂತ ಗೊತ್ತಾಯ್ತು. ಆ ಸಿಟ್ನಲ್ಲಿ ಕಾದು ನಿಂತ್ಕೊಂಡು ಅವನ ಮ್ಯಾಕೆ ಆರಿ ಕತ್ತು ಇಸಕ್ದೆ, ಒಡೆಯಾ. ಸತ್ತೇ ಓದ. ಎಳ್ಕೊಂಡು ದಿಬ್ಬದೊಂಡದಾಗೆ ಬಿಟ್ಟು, ಹಟ್ಟಿಗ್ಬಂದು, ಚಿತ್ರಾಪುರಕ್ಕೋಗಿ ಮಗನಿಗೆ ಎಣ್ಣು ನೋಡ್ಕಂಬತ್ತೀನೀಂತ ಎಣ್ತಿಗ್ಹೇಳಿ ನಾನು ಓಡ್ಹೋದೆ, ಒಡೆಯಾ. ಇಂಗಾಯ್ತದೆ ಅಂತ ನಂಗೆ ಗೊತ್ತಾಗ್ನಿಲ್ಲ..."

ಸಾತ್ವಿಕನೆಂದೇ ಎಲ್ಲರೂ ಬಗೆದಿದ್ದ—ಗೋಹತ್ಯೆ ಮಾಡುವವನಲ್ಲ ಎಂದು ಆಣೆ ಇಟ್ಟು ನುಡಿದು ಅದರಂತೆಯೇ ಅಷ್ಟು ವರ್ಷ ನಡೆದಿದ್ದ— ಅಬ್ದುಲ್ಲ ಒಳಗಿನಿಂದ ಹೊಗೆಯಾಡಿ ಈ ರೀತಿ ಸಿಡಿಯಬಹುದೆಂದು ಯಾರು ಭಾವಿಸಿದ್ದರು?

ಅವನನ್ನೇ ದಿಟ್ಟಿಸಿ ನೋಡಿ ತಲೆ ಆಡಿಸಿ ಗೌಡರು ನಿಟ್ಟುಸಿರು ಬಿಟ್ಟರು.

ಅವರೆಂದರು:

"ಸಿಟ್ಟಿನ ಕೈಲಿ ಜುಟ್ಟು ಕೊಟ್ಟೆ ಅಬ್ದುಲ್ಲ. ಈ ಕೆಲಸ ನೀನು ಮಾಡಬಾರದಾಗಿತ್ತು."

"ಔದು, ಒಡೆಯಾ. ನಾನು ದೊಡ್ಡ ತಪ್ಪು ಮಾಡ್ದೆ. ಯಾವ ಸೀಕ್ಸೆ ಕೊಟ್ಟರೂ ನಾನು ಅನುಭೋಗಿಸ್ಬೇಕು."

ಕ್ಷಣ ಮೌನವಾಗಿದ್ದು ಗೌಡರೆಂದರು:

"ಒಂದು ಜೀವ ಓಯ್ತೂಂತ ಇನ್ನೊಂದು ಜೀವ ತೆಗೆಯೋದು ಮನುಷ್ಯ ಮಾಡಿರೋ ಕಾನೂನು. ಅದು ಸರಿ ಅಂತ ದೇವರೇಳಿಲ್ಲ. ಈಗ್ನೋಡು. ನಿನ್ನಿಂದಾಗಿರೋ ತಪ್ಪು ನಿನ್ಕೈಲಾದಸ್ಟು ನೀನು ಸರಿಪಡಿಸ್ಬೇಕು. ಮನಸ್ಸು ಸ್ವಚ್ಛ ಇಟ್ಕೊಂಡು ಅದನ್ನ ಮಾಡಿದಿಯೋ ದೇವರು ನಿನ್ನನ್ನ ಕ್ಷಮಿಸ್ತಾನೆ.

ಅಬ್ದುಲ್ಲ ಧ್ವನಿ ತೆಗೆದು ಅಳತೊಡಗಿದ. ನಿಂತಿದ್ದವನು ನೆಲದ ಮೇಲೆ ಕುಸಿಕುಳಿತ. ಹತ್ತಿರವೇ ಇದ್ದ ಗೌಡರ ಕಾಲುಗಳನ್ನು ಮತ್ತೊಮ್ಮೆ ಹಿಡಿಯಲೆಂಬಂತೆ ಮೈಯನ್ನು ತುಸು ಮುಂದಕ್ಕೆ ಚಾಚಿದ.

ಗೌಡರು ಪಾದಗಳನ್ನು ಕುರ್ಚಿಯ ಕೆಳಕ್ಕೆ ಎಳೆದುಕೊಂಡು "ಏನಂತೀಯಾ ಅಬ್ದುಲ್ಲ? ನಾನು ಯೋಳಿದ್ದು ಸರಿಯೊ?" ಎಂದು ಕೇಳಿದರು.

"ಔದು, ಒಡೆಯಾ. ಏನು ಮಾಡು ಅಂತೀರೋ ಅದನ್ನ ಮಾಡ್ತೀನಿ."

"ಒಂದನೇದು, ನಾಳೆಯೇ ನೀನು ನಿಂಗಿಗೆ ಒಲ ಬಿಟ್ಟುಕೊಡೋದು. ಎರಡ್ನೇದು, ಮುನಿಯ ಎಂಕಟಪ್ಪನಿಂದ ಕೋರ್ಟು ಕರ್ಚಿಗೇಂತ ನೂರು ರೂಪಾಯಿ ಸಾಲ ಪಡೆದಿದ್ನಲ್ಲ? —ಅದನ್ನ ನೀನು ತೀರಿಸೋದು."

"ಒಲ ನಾಳೇನೇ ಬಿಡ್ತೀನಿ, ಒಡೆಯಾ."

"ಅಳ್ಳೀ ಒರಗಡೆ ಎಲ್ಲಾದ್ರೂ ಗುಡ್ಲು ಕಟ್ಕೋ. ನೂರು ರೂಪಾಯಿಗೇನ್ಮಾಡ್ತೀಯಾ?"

"ನನ್ತಾವ ಒಂದತ್ತಿಪ್ಪತ್ತು ರೂಪಾಯಿ ಇದ್ದಾತು, ಒಡೆಯಾ. ಎಣ್ತೀದು ಒಂದು ಒಂದೆಳೆ ಸರ ಐತೆ."

"ವೀರಾಚಾರಿಗೆ ಅದನ್ನ ಕೊಡು. ಯಾರ್ಗಾದ್ರೂ ಮಾರ್ಕೊಟ್ಟಾನು."

"ನಿಮ್ಗೇ ತಂದ್ಕೊಡ್ತೀನಿ."

ಧ್ವನಿ ಏರಿಸಿ ಗೌಡರೆಂದರು:

"ಬ್ಯಾಡ."

ಮತ್ತೆ ಮೊದಲಿನ ಧ್ವನಿಯಲ್ಲೇ ಅವರು ಮುಂದುವರಿದರು:

"ವೀರಾಚಾರೀಗೇ ಕೊಡು. ದುಡ್ಡೇನಾರ ಕಮ್ಮಿ ಬಿದ್ರೆ ನಾನು ಕೊಟ್ಬಿರ್ತೀನಿ."

"ಊಂ."

"ಎಲ್ಲೋಗಿದ್ದೆ ಅಂತ ಅಳ್ಳಿಯೋರು ಕೇಳ್ತಾರೆ. ಮಗನಿಗೆ ಎಣ್ಣು ನೋಡಾಕೆ, ಚಿತ್ರಾಪುರಕ್ಕೆ—ಅನ್ನು. ಮುನಿಯನ ಇಸ್ಯ ಯಾರಾದ್ರೂ ಮಾತಾಡಿದ್ರೆ ಸುಮ್ಸುಮ್ಕೆ ಗಾಬರಿ ಬೀಳ್ಬೇಡ. ಪಾಪ, ಸತ್ತೋದ—ಅನ್ನು. ನಾಡಿದ್ನಿಂದ ನೀನು ನಿನ್ಹೆಣ್ತಿ ಮಕ್ಕಳೆಲ್ಲ ನಮ್ಮ ಒಲಕ್ಕೆ ದುಡಿಯೋಕ್ಬನ್ನಿ. ಸರಿಯೋ?"

"ಊಂ, ಒಡೆಯಾ."

"ದೆಯ್ಯ ಬಡಿದು ಮುನಿಯ ಸತ್ತ ಅಂತ ಪುಕಾರು ಉಟ್ಟಿಸಿದೀವಿ. ಅದಕ್ಕೆ ಯೆತಿರಿಕ್ತ ಕಾಣದ ಹಾಗೆ ನೀನು ಧೈರ್ಯವಾಗಿ ನಡಕೋ."

"ಊಂ."

"ಪೋಲೀಸರ್ನ ಕರೀಬೇಕೂಂತಿದ್ರು. ನಾನು ತಡ್ದೆ. ಇನ್ನು ಕೋರ್ಟಿನ್ದು ಒಂದಿದೆ.

ನಿನಗೂ ಮುನಿಯನ ಕುಟುಂಬಕ್ಕೂ ರಾಜಿಯಾಗದೆ ಅಂತ ಪತ್ರ ಬರಸ್ಬೇಕು. ಅದು ದೊಡ್ಡಲ್ಲ. ನಾಳೇನೇ ಮಾಡ್ಸಾನ."

"ಊಂ."

"ಏಳು, ಓಗು."

ಉಳಿದಿದ್ದ ತುಸು ಅಳಲನ್ನು ಕೊನೆಯ ಬಾರಿಗೆ ಬಿಕ್ಕಿ ಬಿಕ್ಕಿ ಹೊರಚೆಲ್ಲಿ, ನೀಳವಾಗಿ ಉಸಿರೆಳೆದು ಬಿಟ್ಟು, ಅಬ್ದುಲ್ಲ ಗೌಡರ ಪಾದಗಳಿಗೆ ಮತ್ತೊಮ್ಮೆ ನಮಿಸಿದ.

ತೀರಾ ಒಣಗಿದ್ದ ಧ್ವನಿಯಲ್ಲಿ ಅವನೆಂದ:

"ನೀವು ಅಲ್ಲಾ ಇದ್ದ ಹಾಗೆ."

"ಅಲ್ಲಾ ಮ್ಯಾಕಿದ್ದಾನೆ, ಅಬ್ದುಲ್ಲ. ನೀನು ಓಗು."

ಅಬ್ದುಲ್ಲ ಎದ್ದು ನಿಂತ. ಆದರೆ ಮತ್ತೂ ಹೊರಡಲು ಹಿಂಜರಿಯುತ್ತಿದ್ದುದನ್ನು ಗಮನಿಸಿದ ಗೌಡರು ತಾವೂ ಎದ್ದು, "ಓಗು ನಿದ್ದೆಮಾಡು," ಎಂದರು.

ಮುದುಡಿದ್ದ ಎರಡೂ ಕೈಗಳನ್ನು ಪುನಃ ಜೋಡಿಸಿ, ಬಾಗಿ ನಮಿಸಿ, ತಾನು ಯಾರಿಗೂ ಅಡ್ಡಿಯಾಗಬಾರದೆನ್ನುವಂತೆ ಬಾಗಿಲ ಚೌಕಟ್ಟಿಗೆ ಮೈ ತಗಲಿಸಿಕೊಂಡು ಅಬ್ದುಲ್ಲ ಅಂಗಳಕ್ಕಿಳಿದ.

ಮಳೆಯ ರಭಸ ಕಡಮೆಯಾಗಿತ್ತು. ಮಿಂಚು ಆಗಾಗ್ಗೆ ಕಣ್ಣು ಒರೆಸಿ ಕೋರೈಸುತ್ತಿತ್ತು; ಗುಡುಗು ಶಬ್ದಿಸುತ್ತಿತ್ತು.

ಅಬ್ದುಲ್ಲ ಬೇಗಬೇಗನೆ ಹೆಜ್ಜೆ ಇರಿಸುತ್ತ ಹೊರಟುಹೋದ.

...... ಹೋಗಿ ನಿದ್ದೆಮಾಡು—ಎಂದು ಅವನಿಗೇನೋ ಗೌಡರು ಅಂದಿದ್ದರು. ಆದರೆ, ಸ್ವತಃ ಅವರನ್ನು ಆ ರಾತ್ರೆ ನಿದ್ದೆ ಬಹಳ ಹೊತ್ತು ಕಾಡಿಸಿತು.

ಮಳೆ ಮಧ್ಯರಾತ್ರಿಯವರೆಗೂ ಸಣ್ಣನೆ ಬರುತ್ತಲಿದ್ದು ಕೊನೆಗೊಮ್ಮೆ ನಿಂತು ಹೋಯಿತು. ಆತನಕ ಬೀಳುತ್ತಿದ್ದ ಹನಿಗಳ ಸದ್ದಿಗೆ ಕಿವಿಗೊಡುತ್ತ ಗೌಡರು ಯೋಚಿಸಿದರು:

ಕೋರ್ಟಿನಲ್ಲಿ ಅಬ್ದುಲ್ಲನ ಮೇಲಣ ಮೊಕದ್ದಮೆ ಎಲ್ಲಿ ತನಕ ಬಂದಿದೆಯೋ? ಮುನಿಯನ ಪರ ವಾದಿಸಿರುವ ವಕೀಲ ಎಂಥವನೋ? ನ್ಯಾಯಸ್ಥಾನದ ಹೊರಗಡೆ ಆಗುವ ರಾಜಿಗೆ ಅವನೇನು ಅಡ್ಡಿಮಾಡುವನೊ? ನಿಂಗಿ, ಆಕೆಯ ಮಗ, ಅಬ್ದುಲ್ಲ ಇವರು ಮೂವರನ್ನೂ ನಗರಕ್ಕೆ ಕರೆದುಕೊಂಡು ಹೋಗುವುದು ಆಗದ ಮಾತು. ರಾಜೀಪತ್ರವನ್ನು ಇಲ್ಲಿಯೇ ಮಾಡಿಸಬೇಕು. ಅದನ್ನು ನಗರಕ್ಕೆ ಒಯ್ದು ಕಾನೂನಿಗೆ ಸಂಬಂಧಿಸಿದ ಕೆಲಸಮಾಡಿ ಮುಗಿಸುವವರು ಯಾರು? ಗೋವಿಂದನಿಗೆ ಅದನ್ನು ವಹಿಸಿಕೊಡಬೇಕು. ಆತ ನಡುವೆ ಪುಢಾರಿ ಕೆಲಸವನ್ನೇನಾದರೂ ಮಾಡಿ ತೊಂದರೆ ಕೊಟ್ಟರೊ? ಅವನು ಹದ್ದುಮೀರಿ ಹೋಗದ ಹಾಗೆ ಬಿಗಿಯಾಗಿ ವರ್ತಿಸಬೇಕು. ನಾಳೆ ಬೆಳಗ್ಗೆಯೇ ಅವನನ್ನು ಕರೆಸಿ ಮಾತನಾಡಬೇಕು...

ಒಂದು ಕ್ಷಣ ಗೌಡರಿಗೆನ್ನಿಸಿತು: ಅಬ್ದುಲ್ಲನ ಪ್ರಕರಣದ ವಿಷಯದಲ್ಲಿ ಶ್ರೀನಿವಾಸಯ್ಯನವರ ಸಲಹೆ ಪಡೆಯುವುದು ಬೇಡವೆ ತಾವು? ಅವರಿಂದ ಆಜ್ಞಪ್ತನಾದರೆ ಗೋವಿಂದ ಸರಿಯಾಗಿ ನಡೆದುಕೊಳ್ಳಬಹುದು.

ಮರುಕ್ಷಣವೆ, ಅಂಥ ಯೋಚನೆಗಾಗಿ ಗೌಡರು ತಮ್ಮನ್ನು ತಾವೇ ಟೀಕಿಸಿಕೊಂಡರು: ತಾವು ಕಣಿವೇಹಳ್ಳಿಯ ಪಟೇಲರು, ಶ್ರೀನಿವಾಸಯ್ಯ ಅಲ್ಲ. ಇತರರ ಹಾಗೆ ಗೋವಿಂದನೂ

ಹಳ್ಳಿಯ ಒಬ್ಬ ಸಾಮಾನ್ಯ ಪ್ರಜೆ. ಗ್ರಾಮ ಶಾಸನಕ್ಕೆ ಅವನು ಹೊರತಲ್ಲ......ತಾವು ಋಜು ಮಾರ್ಗಾವಲಂಬಿಯಾದಷ್ಟು ಕಾಲ ತಮ್ಮನ್ನು ಜರೆಯುವ ಧೈರ್ಯ ಯಾರಿಗಿದೆ ?

......ಯೋಚನೆಗಳು ಮುಗಿದು, ಮಳೆಯೂ ಪೂರ್ತಿಯಾಗಿ ನಿಂತಿದೆ ಎಂದು ಮನವರಿಕೆಯಾದಾಗ, ಗೌಡರೆದ್ದು ಕೊಟ್ಟಿಗೆಗೆ ಹೋಗಿ ಬಂದರು; ಜಲಬಾಧೆ ತೀರಿಸಿದರು. ತಲೆಬಾಗಿಲಿನ ಅಗಣಿ ಹಾಕಿ, ಕಂಬಳಿಯನ್ನು ಕತ್ತಿನವರೆಗೂ ಎಳೆದು, ಕಣ್ಣುಗಳನ್ನು ಮುಚ್ಚಿಕೊಂಡರು.

ಮುಂದೆ ಸ್ವಲ್ಪ ಹೊತ್ತಿನಲ್ಲೇ ಅವರಿಗೆ ನಿದ್ದೆ ಬಂತು.

......ಬೆಳಗ್ಗೆ ಗೌಡರು ಎದ್ದ ಕೆಲ ನಿಮಿಷಗಳಲ್ಲೇ ಆಳುಗಳು ಬಂದರು.

ಉತ್ಸಾಹ, ಸಡಗರ.

ಉಳುವ ಕೆಲಸ ಆರಂಭವಾದುದನ್ನು ಸ್ವಲ್ಪ ಹೊತ್ತು ಆಳುಗಳ ಮಧ್ಯೆ ಇದ್ದು, ಈಕ್ಷಿಸಿ, ರಂಗಣ್ಣನನ್ನೂ ಕರೆದುಕೊಂಡು, ಗೌಡರು ಮನೆಗೆ ಮರಳಿದರು.

ತಮ್ಮನ್ನು ಹಿಂಬಾಲಿಸಿ ಬಂದ ಕರಿಯನಿಗೆ ಅವರೆಂದರು :

"ಆ ನಿಂಗಿಯನ್ನಿಷ್ಟು ಕರಕೊಂಡ್ಬಾ. ಅವಳ ಹೈದನೂ ಬರ್ಲಿ. ಅಂಗೇ ಆ ಗೋವಿಂದಪ್ಪನಲ್ಲಿಗೆ ಓಗಿ ಯೋಳು : ಪಟೇಲರು ಕರೆದವರೆ ; ತಕ್ಷಣ ಬರಬೇಕಂತೆ—ಅಂತ. ಬರ್‍ತಾ ಎಂಕಟಪ್ಪನನ್ನೂ ಕರಕೊಂಡ್ಬಾ."

ಅಂತಹ ದೌತ್ಯವೆಂದರೆ ಕರಿಯನಿಗೆ ಯಾವಾಗಲೂ ಎರಡು ರೆಕ್ಕೆ ಬಂದ ಹಾಗೆ. ಆತ ಹೊರಟುಹೋದ.

ತಮ್ಮ ಆ ದಿನದ ಕಾರ್ಯಕ್ರಮವೇನೆಂಬುದನ್ನು ಮಗನಿಗೆ ಹೇಳಬೇಕು—ಎನಿಸಿತು ಗೌಡರಿಗೆ ಒಮ್ಮೆ. ಆದರೆ ಏನು ಪ್ರಯೋಜನ ? ಅವನು ಅದರಲ್ಲಿ ಆಸಕ್ತಿ ತೋರುವ ಸಂಭವ ಕಡಮೆ. ಎಷ್ಟೋ ಸಲ ಕಾಡಿದ್ದ ಒಂದು ಯೋಚನೆಯ ಚೇಳು ಈಗ ಪುನಃ ಅವರನ್ನು ಕುಟುಕಿತು. ತಮ್ಮ ಅನಂತರ ರಂಗಣ್ಣ ಪಟೇಲನಾಗುವನೆ ? ಗೌಡರು ಬಲ್ಲರು —ಆಗಲಾರ. ಮುಂದೆ ಡಾಕ್ಟರಾಗುವವನು ಪಟೇಲ ಯಾಕಾದಾನು ? ಎರಡನೆಯ ಸಂತಾನವೂ ಗಂಡಾಗಿದ್ದಿದ್ದರೆ ಕಿರಿಯವನು ಹಳ್ಳಿಯಲ್ಲೇ ಇದ್ದುಕೊಂಡು ಪಟೇಲನಾಗುತ್ತಿದ್ದ.

ಗ್ರಾಮದ ಹಿರಿತನದ ಕಥೆ ಆ ರೀತಿಯಾದರೆ, ಆಸ್ತಿಪಾಸ್ತಿಗಳ ಗತಿಯೊ ? ಗೇಣಿ ಒಕ್ಕಲುಗಳನ್ನಲ್ಲವೆ ನಂಬಬೇಕು ರಂಗಣ್ಣ ? ಸುಬ್ಬಿಯ ಕೈ ಹಿಡಿಯುವವನು ವಕೀಲ, ನಿಜ. ಸರಕಾರದ ವಿಚಿತ್ರ ಕಾನೂನುಗಳಿಂದ ಅವನು ಮನೆತನವನ್ನು ರಕ್ಷಿಸುತ್ತಾನೆ. ಆದರೆ ತಮ್ಮ ಮನೆತನದ ಪೀಳಿಗೆಯಾಗಿ ಈ ಹಳ್ಳಿಯಲ್ಲಿ ಉಳಿಯುವವರು ಯಾರು ?

ತಮ್ಮ ಅನಂತರ ಕೃಷ್ಣೇಗೌಡನ ಮಗ ಪಟೇಲನಾಗುತ್ತಾನೆ. ಆಗಲಿ, ಆಗಲಿ !......

......ನಿಂಗಿಗೆ ಜ್ವರ ಎಂಬುದು ನೆನಪಾಗಿ ಗೌಡರು ಮಗನೊಡನೆ ಅಂದರು :

"ರಂಗ, ಮುನಿಯನ ಎಣ್ತಿಗೆ ಜರವಂತೆ. ಮಾತ್ರೆ ಗೀತ್ರೆ ಯಾನಾದರೂ ಇದ್ದರೆ ಕೊಡು."

ರಂಗಣ್ಣನಿಗೆ ತಂದೆ ಹಾಗೆ ಕೇಳಿದರೆಂದು ಹೆಮ್ಮೆ.

"ಕೊಡ್ತೀನಿ," ಎಂದ ಆತ.

ಸೂರ್ಯನ ಹೊಂಗಿರಣಗಳು ಕಣಿವೇಹಳ್ಳಿಯನ್ನು ಬೆಳಗುತ್ತಿದ್ದುವು. ದೀರ್ಘ ಸ್ನಾನ

ದಿಂದ ಶುಚಿರ್ಭೂತವಾಗಿದ್ದ ಗೌಡರ ಮನೆ, ಅಂಗಳ ಎಲ್ಲವೂ ಮೈಕಾಯಿಸಿಕೊಳ್ಳುತ್ತಿದ್ದುವು.

ಸುಭದ್ರೆ ಅಡುಗೆ ಕೆಲಸದಲ್ಲಿ ನಾಗಮ್ಮನಿಗೆ ನೆರವಾಗುತ್ತ ಒಳಗಿದ್ದಳು.

ರಂಗಣ್ಣ ಬ್ಯಾಗಿನಿಂದ ಆರು ಮಾತ್ರೆಗಳನ್ನು ತೆಗೆದು ಪುಡಿಕೆ ಕಟ್ಟಿದ.

ಪಡಸಾಲೆಯಲ್ಲಿ ರಾತ್ರೆ ಹರಡಿದ್ದ ಬಟ್ಟೆಗಳು ಒಣಗಿದ್ದುವು, ಗೌಡರು ಅವನ್ನು ಎತ್ತಿ ಮಡಚಿದರು......

......ನಿಂಗಿಗೆ ಗೌಡರ ಆದೇಶವನ್ನು ಕರಿಯ ಮುಟ್ಟಿಸಿದಾಗ ಆಕೆ ಗೋಗರೆದಳು :

"ನಂಗೆ ಜರಾ. ಯಾಕೆ ಕರೆದವರೊ ?

ಕರಿಯನೆಂದ :

"ಸುಮ್ಕೆ ಐದನ್ನ ಕರಕೊಂಡು ಓಗು. ಚಿಕ್ಕ ಗೌಡರು ಅವುಸದಿ ಕೊಡ್ತವರೆ."

ರಂಗಣ್ಣ ಡಾಕ್ಟರಾಗುವವನೆಂಬುದನ್ನೇನೂ ನಿಂಗಿ ಅರಿಯಳು. ದೊಡ್ಡ ಗೌಡರು ಕೊಟ್ಟರೇನು ? ಚಿಕ್ಕ ಗೌಡರು ಕೊಟ್ಟರೇನು ? ಔಷಧಿ ಬೇಡಿ ತರಲು ಅಯ್ಯನವರಲ್ಲಿಗೆ ಮಗನನ್ನು ಕಳುಹಿಸಿದರಾದೀತು ಎಂದುಕೊಂಡಿದ್ದಳು ಆಕೆ. ಮೊದಲ ಎರಡು ದಿನ ಈ ಜ್ವರ ದಲ್ಲೇ ತಾನು ಸತ್ತರೆ ವಾಸಿ ಎಂದಿದ್ದವಳು, ಮುಂದೆ ಜ್ವರ ಇಳಿಯದಿದ್ದಾಗ, ಮಗನ ಮುಖ ನೋಡಿ, ತಾನು ಸತ್ತರೆ ಇವನಿಗೆ ಯಾರು ದಿಕ್ಕು ?—ಎಂದು ದುಃಖಿಸಿ, ಮದ್ದು ಸ್ವೀಕರಿಸುವ ತೀರ್ಮಾನಕ್ಕೆ ಅವಳು ಬಂದಿದ್ದಳು. ಈಗ ಅಯ್ಯನವರಲ್ಲಿಗೆ ಹೈದ ಹೋಗುವ ಬದಲು ಅವನೂ ತಾನೂ ಗೌಡರಲ್ಲಿಗೆ ಹೋದರಾಯಿತು ಎಂದುಕೊಂಡು, ಕರಿಯನ ಸೂಚನೆಯಂತೆ ನಿಂಗಿ ಎದ್ದಳು.

ಅಯ್ಯನವರ ಮನೆಯನ್ನು ಕರಿಯ ತಲುಪಿದಾಗ ಹೊಲದ ಉತ್ತನೆಗೆ ನಿರ್ದೇಶ ಗಳನ್ನಿತ್ತು ಉಸ್ತುವಾರಿಗೆ ಗೋಪಾಲನನ್ನು ಬಿಟ್ಟು ಆಗತಾನೇ ಮನೆಗೆ ಹಿಂದಿರುಗಿದ್ದರು ಶ್ರೀನಿವಾಸಯ್ಯ.

"ಏನು ಬಂದೆ ?"ಎಂದು ಅವರು ಕರಿಯನನ್ನು ಕೇಳಿದರು.

"ಗೋವಿಂದಪ್ನೋರ್ನ ಕರಕೊಂಡ್ಬಾ ಅಂದ್ರು ಗೌಡರು."

ಆ ರೀತಿ ಶಾಮೇಗೌಡರಿಂದ ಆ ಮನೆಗೆ ಕರೆ ಬಂದುದು ಅದೇ ಮೊದಲು. ಶಾಮಣ್ಣ ತಾನೇ ಬರದೆ ಆಳನ್ನು ಕಳುಹಿಸಿದನಲ್ಲ—ಎಂದು ಶ್ರೀನಿವಾಸಯ್ಯ ಸ್ವಲ್ಪ ಖಿನ್ನರಾದರು. ಆದರೆ ಆಳಿನ ಮುಂದೆ ಬಹಿರಂಗವಾಗಿ ತೋರ್ಪಡಿಸುವ ಭಾವನೆ ಅದಲ್ಲವಲ್ಲ ?

"ಗೋವಿಂದಾ, ಶಾಮಣ್ಣನ ಮನೆಗೆ ನೀನು ಹೋಗ್ಬೇಕಂತೆ ಕಣೋ," ಎಂದು ಅವರು ಮಗನಿಗೆ ಕೇಳಿಸುವಂತೆ ಕೂಗಿ ನುಡಿದರು....

ತಂದೆಗೆ ಕೇಳಿಸದಂತೆ ಗೋವಿಂದ, "ಅಂತೂ ಪಟೇಲರಿಂದ ಬುಲಾವ್ ಬರೋಕೆ ಶುರು ವಾಯ್ತು," ಎಂದು ಗೊಣಗಿದ.

ಆ ದಿನ ನಗರಕ್ಕೆ ಹೋಗುವ ಸಂದರ್ಭ ಒದಗಬಹುದೆಂದು ವೇಸ್ಟ್ ಕೋಟನ್ನೂ ಟೋಪಿಯನ್ನೂ ಒಗೆದು ಮಡಚಿ, ಸುರುಳಿ ಸುತ್ತಿದ್ದ ಹಾಸಿಗೆಯ ಕೆಳಗೆ 'ಇಸ್ತ್ರಿ'ಗಾಗಿ ಇಟ್ಟಿದ್ದ. ಈಗ ಅದವನ್ನು ಹೊರತೆಗೆದ, ತೊಟ್ಟುಕೊಳ್ಳಲು.

"ಶಾಮಣ್ಣನ ಮನೆಗೆ ಹೋಗ್ಬೇಕಾದ್ರೂ ಈ ಡ್ರೆಸ್ ಹಾಕ್ಕೋಬೇಕೇನೋ ?" ಎಂದು ಶ್ರೀನಿವಾಸಯ್ಯ ಮಗನನ್ನು ಛೇಡಿಸಿದರು.

ತಂದೆಯೇನು ಬಲ್ಲರು ಆ ಡ್ರೆಸ್ಸಿನ ಮಹತ್ವ ? ಅಂತಹ ಕಟೂಕ್ತಿಗಳನ್ನೆಲ್ಲ ಲಕ್ಷಿಸುವವನಲ್ಲ ಗೋವಿಂದ.

ಆತನೆಂದ :

"ಬಂದರೆ ಇನ್ನು ಒಂದು ಘಂಟೆಯೊಳಗೇ ಅವರು ಬರಬೌದು. ಗೌಡರಲ್ಲಿಗೆ ಹೇಳಿ ಕಳಿಸಿ ಅಣ್ಣಯ್ಯ."

"ಹೂಂ, ಹೂಂ. ನೀನು ಹೋಗು. ಶಾಮಣ್ಣ ಯಾಕೆ ಕರೆದನೋ ಕೇಳ್ಕೊಂಡ್ಬಾ."

'ದಿರಿಸು' ಹಾಕಿಕೊಂಡು ಹೊರಟ ಗೋವಿಂದನನ್ನು ಕರಿಯ ಹಿಂಬಾಲಿಸಿದ.

ಗೌಡರು ತನ್ನನ್ನು ಯಾಕೆ ಕರೆದಿರಬಹುದೆಂಬ ಊಹಾಪೋಹದಲ್ಲಿ ನಿರತನಾಗಿದ್ದ ಗೋವಿಂದ, ಅದೂ ಇದೂ ಎಣಿಕೆ ಹಾಕಿ, ಕರಿಯನನ್ನು ಕೇಳಿದ :

"ನನ್ನೊಬ್ಬನನ್ನೇ ಕರಕೊಂಡ್ಬಾ ಅಂದ್ರೊ, ಗೌಡರು ?"

"ಇಲ್ರಾ. ನಿಂಗೀನೂವೆ ಅವಳ ಐದನ್ನೂವೆ ಬರಯೋಳವರೆ. ಅಂಗೇನೇಯ ಎಂಕಟಪ್ನೋರ್ನೂವೆ ಕರ್ಕಂಬಾ ಅಂದವರೆ."

ಗೋವಿಂದ ಲೆಕ್ಕಹಾಕಿದ: ಮುನಿಯನಿಗೆ ಸಂಬಂಧಿಸಿದ್ದೇ ಏನೋ ಇರಬೇಕು. ಅಬ್ದುಲ್ಲ ಬಂದಿದಾನೋ ಹ್ಯಾಗೆ ?

"ಅಬ್ದುಲ್ಲನ್ನ ಕಂಡಿಯಾ, ಕರಿಯ ?"

"ಇಲ್ರಾ ! ಆವತ್ತು ಒಂಟೋದವ್ನು ಬಂದೇ ಇಲ್ಲ."

ಮಳೆ ಸುರಿದು ನೆಲ ತೋಯ್ದ ಸಂಭ್ರಮದಲ್ಲಿ, ರಾತ್ರಿಯ ವೇಳೆ ಅಬ್ದುಲ್ಲ ತನ್ನ ಹಟ್ಟಿ ಸೇರಿದನೆಂಬುದು ಹಳ್ಳಿಯ ಜನರಿಗೆ ತಿಳಿದಿರಲಿಲ್ಲ.

ಗೋವಿಂದ ಮತ್ತೊಮ್ಮೆ ಯೋಚಿಸಿದ. ಅಬ್ದುಲ್ಲ ಇಲ್ಲದಿದ್ದರೂ ಕೋರ್ಟಿನ ವ್ಯವಹಾರಕ್ಕೆ ಸಂಬಂಧಿಸಿ ಏನನ್ನೋ ಕೇಳಲು ತನ್ನನ್ನು ಕರೆದಿದ್ದಾರೆ, ಎಂದುಕೊಂಡ.

ಅರ್ಧ ಹಾದಿ ನಡೆದ ಮೇಲೆ ಕರಿಯ, "ನೀವು ಓಗ್ತಾ ಇರಿ. ಎಂಕಟಪ್ನೋರಿಗೆ ಯೋಳ್ಬರ್ತೀನಿ," ಎಂದು ಬೇರೆ ದಾರಿ ಹಿಡಿದ.

ಗೋವಿಂದ ಗೌಡರಲ್ಲಿಗೆ ಬಂದಾಗ ನಿಂಗಿ ತನ್ನ ಮಗನೊಡನೆ ಅಂಗಳದ ಮೂಲೆಯಲ್ಲಿ ಕುಳಿತಿದ್ದಳು. ಅವಳ ಕೈಯಲ್ಲೊಂದು ಕಾಗದದ ಪುಡಿಕೆ ಇತ್ತು. ಗೋವಿಂದನನ್ನು ನೋಡಿ ಆಕೆ ಎದ್ದು ನಿಂತಳು.

"ಕುಂತ್ಕೋ, ಕುಂತ್ಕೋ..." ಎಂದು ನುಡಿದು ಗೋವಿಂದ, ಮನೆಯನ್ನು ಹೊಕ್ಕು, ಹೊರಗೆ ಜಗಲಿಯಲ್ಲಿ ಚಾಪೆಯ ಮೇಲೆ ಕುಳಿತಿದ್ದ ಗೌಡರಿಗೆ ವಂದಿಸಿದ.

"ಬಾ, ಗೋವಿಂದಪ್ಪ," ಎಂದರು ಗೌಡರು, ಚಾಪೆಯನ್ನು ಅಂಗೈಯಿಂದ ತಟ್ಟುತ್ತ. ಗೋವಿಂದನನ್ನು ನೆಟ್ಟ ದೃಷ್ಟಿಯಿಂದ ನೋಡಿ ಅವರೆಂದರು :

"ಅಬ್ದುಲ್ಲ ಬಂದವನೆ."

ಗೋವಿಂದನ ಕಣ್ಣುಗಳು ಅರಳಿದುವು.

"ಹಾಗೇನು ? ಬಹಳ ಗುಟ್ಟಾಗಿ ಬಂದಂತಿದೆಯಲ್ಲ ! ಹಳ್ಳೀಲಿ ಯಾರಿಗೂ ಗೊತ್ತೇ ಇಲ್ಲ."

ಗೋವಿಂದನ ಮೇಲಿನ ತಮ್ಮ ದೃಷ್ಟಿಯನ್ನು ತೆಗೆಯದೆಯೇ ಗೌಡರೆಂದರು :

"ಗುಟ್ಟು ಗಿಟ್ಟು ಒಂದೂ ಇಲ್ಲ. ಗೋವಿಂದಪ್ಪ. ಚಿತ್ರಾಪುರಕ್ಕೆ ಓಗಿದ್ದೋನು ನಿನ್ನೆ ರಾತ್ರಿ ವಾಪ್ಸಾದ. ಇಲ್ಲಿಗ್ಬಂದಿದ್ದ. ಮುನಿಯ ಸತ್ತೋದ ಅಂತ ಭೋ ಬೇಜಾರು ಮಾಡ್ಕೊಂಡವ್ನೆ."

ತನ್ನ ಕಣ್ಣುಗಳನ್ನು ಕಿರಿದುಗೊಳಿಸಿ ಅಪನಂಬಿಕೆಯಿಂದ ಗೌಡರನ್ನು ನೋಡುತ್ತ ಗೋವಿಂದನೆಂದ:

"ಸಹಜ, ಸಹಜವೇ!"

ಗೋವಿಂದನ ಕಿರುನಗೆ ಅಸಹ್ಯವೆನಿಸಿ ಗೌಡರೆಂದರು:

"ತಮಾಷಿ ಸಂಗ್ತಿ ಏನಪ್ಪ ಐತೆ ಇದರಾಗೆ?"

"ತಮಾಷಿ ಏನ್ಬಂತು?"

"ಮತ್ತೆ ನಗ್ತೀಯಲ್ಲ."

"ಇಲ್ವಲ್ಲ!"

"ಸರಿ, ಬಿಡು. ಈ ಕೋರ್ಟು ಯವಾರ ಇನ್ನು ಸಾಕು, ಅಂತಾನೆ ಅಬ್ದುಲ್ಲ. ಒಲ ನಿಂಗಿಗೆ ಬಿಟ್ಕೊಡ್ತಾನಂತೆ."

"ಈ ಬುದ್ಧಿ ಅವನಿಗೆ ಮೊದಲೇ ಇದ್ದಿದ್ರೆ ಮುನಿಯನ ಜೀವ ಉಳೀತಿತ್ತು, ಪಾಪ!"

"ದೆಯ್ಯ ಬಡ್ಕೋ ಹಾವು ಕಡ್ಕೋ ಮುನಿಯ ಸತ್ತದ್ದಕ್ಕೂ ಇದಕ್ಕೂ ಏನಪ್ಪ ಸಂಬಂಧ?"

"ನಿಜ, ನಿಜ. ಸಂಬಂಧವಿಲ್ಲ!"

"ಸರಿ, ಮತ್ತೆ. ಕೋರ್ಟಿನ ತೀರ್ಪು ಬರೋಕ್ಮುಂಚೇನೆ..."

"ಆ ತೀರ್ಪು ಅಬ್ದುಲ್ಲನ ವಿರುದ್ಧ ಆಗೋದು ಗ್ಯಾರಂಟಿ. ಮುನಿಯನ ಹೆಂಡ್ತಿಗೆ ಹೊಲ ಸಿಕ್ಕಿಯೇ ಸಿಗುತ್ತೆ."

"ನಾನು ಇಲ್ಲ ಅನ್ನೋದಿಲ್ಲ, ಗೋವಿಂದಪ್ಪ. ಮುನಿಯ ಕೋರ್ಟಿಗೆ ಓಗ್ಲೇ ಬಾರ್ದಾಗಿತ್ತು. ನಾವಿಲ್ಲಿಲ್ವ ಇಲ್ಲಿ? ಓದ; ಆಯ್ತು. ಈಗ ಕೋರ್ಟು ತೀರ್ಪು ಕೊಟ್ಟು ಪ್ರಕರಣ ಮುಕ್ತಾಯವಾಯ್ತು ಅನ್ನೋದ್ಕಿಂತ, ನಾವೇ ರಾಜಿ ಮಾಡಿದ್ರೆ ಕಣಿವೇಹಳ್ಳಿ ಮಾನ ಉಳೀತದೋ ಇಲ್ವೋ ಒಸಿ ಯೋಳು."

ಬರುತ್ತಲಿದ್ದ ವೆಂಕಟಪ್ಪನನ್ನು ಕುಳಿತಲ್ಲಿಂದಲೇ ಗೋವಿಂದ ನೋಡಿದ:

ಗೌಡರಿಗೆ ಇದಿರು ಆಡುವುದರಿಂದ ಯಾವು ಪ್ರಯೋಜನವೂ ಇಲ್ಲ ಎಂಬುದು ಆತನಿಗೆ ಸ್ಪಷ್ಟವಾಗಿತ್ತು. ಆಡಲಾಗದೇ ಉಳಿದ ಮಾತುಗಳನ್ನು ಒಳಗೇ ಗಂಟುಕಟ್ಟಿ ಅವನ ಮುಖ ಕೆಂಪಡರಿತು.

ಆತನೆಂದ:

"ನನ್ನಿಂದ ಆಗಬೇಕಾದ್ದೇನು? ಹೇಳಿ."

"ಅಕಾ ಎಂಕಟಪ್ಪ ಬಂದ. ರಾಜೀ ಪತ್ರ ಬರಸ್ತೇನೆ. ಅದನ್ನ ನಗರಕ್ಕೆ ತಗೊಂಡ್ಹೋಗಿ ನಿನ್ನ ವಕೀಲರಿಗೆ ಕೊಟ್ಟು—"

"ನನ್ನ ವಕೀಲರು?"

"ಮುನಿಯನ ವಕೀಲರು ಕಣಪ್ಪ, ಅಂ—ಅದನ್ನ ಕೋರ್ಟ್ನಲ್ಲಿ ದಾಖಲ್ಮಾಡಿಸಿ, ಈ

ಕೇಸು ನಿಕಾಲೆ ಮಾಡಿಸ್ಬಿಡು."

"ರಾಜೀಪತ್ರ ಅಲ್ಲೇ ಬರೆಸೋಣ. ಅಬ್ದುಲ್ಲ, ನಿಂಗಿ, ಅವಳ ಮಗ ಎಲ್ರೂ ನಗರಕ್ಕೆ ಬರ್ಲೇಳಿ."

ಛೆ! ಛೆ! ಅದೆಲ್ಲಾ ಯತಕ್ಕೆ? ಠಸೆ ಕಾಗ್ದಕ್ಕೆ ವಾದಿ ಪ್ರತಿವಾದಿಗಳಿಬ್ರೂ ಹೆಬ್ಬೆಟ್ಟೊತ್ತಿ. ನಾವು ಸಹಿ ಮೊಹರು ಆಕ್ತೀವಿ. ಶಾನುಭೋಗರ್ರೂ ಆಕಿಸ್ಕೊಡ್ತೀನಿ. ಅಷ್ಟು ಸಾಲ್ದೇನಪ್ಪ?"

"ನಿಮ್ಮಿಷ್ಟ. ವಕೀಲರು ಏನ್ಹೇಳ್ತಾರೋ?!"

"ಫೀಸು ಕೇಳಾರು! ಅವರಿಗೆ ಏನಾದ್ರೂ ಕೊಡಾನ. ಅಂಗೇನೇ ನಿನ್ಕರ್ಚಿಗೂನೂ..."

"ನನ್ನ ಖರ್ಚಿಗೆ? ಹೆಹ್ಹೆ! ಬೇಡ. ನಗರಕ್ಕೆ ನಾನು ಹೋಗೋದು ಬರೋದು ಇದ್ದೇ ಇರುತ್ತೆ."

"ಇಲ್ಲ ಅಂದ್ನೆ ಗೋವಿಂದಪ್ಪ? ಆದರೆ ಈ ಕೆಲಸ ಇವತ್ತೇ ಆಗ್ಬೇಕು, ನೋಡು... ಬಾ ಎಂಕ್ಟಪ್ಪ, ಕುಂತ್ಕೊ."

ಒಳಗೆ ಬಂದ ವೆಂಕಟಪ್ಪ ಚಾಪೆಗಿಂತ ತುಸು ದೂರದಲ್ಲಿ ನೆಲದ ಮೇಲೆಯೇ ಗೋಡೆ ಗೊರಗಿ ಕುಳಿತು, ಗೌಡರ ಹಾಗೂ ಗೋವಿಂದಪ್ಪನ ಮುಖಗಳನ್ನು ನೋಡಿದ. ನಿಂಗಿಯನ್ನು ಕಂಡ ಅವನಿಗೆ, ಮುನಿಸು ಪಡೆದ ಸಾಲ ಸಂದಾಯವಾದರೂ ಆಗಬಹುದು; ಆ ಹೊಲ ತನಗೆ ದಕ್ಕದು—ಎನಿಸಿತ್ತು.

ಗೋವಿಂದನೆಂದ:

"ಇವತ್ತಾದರೆ ಇವತ್ತು. ನಮ್ಮ ಹಳ್ಳಿಗೋಸ್ಕರ ಇಷ್ಟು ಸೇವೆ ನನ್ನಿಂದಾಗದು ಅಂತಲೆ?"

ಗೌಡರು ಕರಿಯನತ್ತ ಹೊರಳಿ, "ಅಬ್ದುಲ್ಲನ್ನ ಕರಕೊಂಡ್ಬಾ," ಎಂದರು.

"ಅವ್ನು ಊರಾಗಿಲ್ಲ," ಎಂದ ಕರಿಯ.

"ಇಲ್ವಂತೆ. ಮುಠ್ಠಾಳ! ಓಗು. ಚಿತ್ರಾಪುರದಿಂದ ಬಂದವ್ನೆ."

ಅಬ್ದುಲ್ಲ ಬಂದಿರುವನೆಂದು ಕೇಳಿ "ಓ" ಎಂದು ವೆಂಕಟಪ್ಪ ಉದ್ಗರಿಸಿದ.

ಅಷ್ಟರಲ್ಲಿ ಗೋವಿಂದನ ಮನೆಯ ಆಳು ಬೀರ ಬಂದುದು ಕಾಣಿಸಿತು.

"ನಿಮ್ಮನೆಯೋನು, ಅಲ್ವೆ?" ಎಂದರು ಗೌಡರು.

"ಹೂಂ. ಏನೋ ಅದು?" ಎಂದ ಗೋವಿಂದ, ಧ್ವನಿ ಏರಿಸಿ.

ಆತ ಗೌಡರಿಗೆ ನಮಿಸಿ, ಗೋವಿಂದನತ್ತ ತಿರುಗಿ ಅಂದ:

"ನಗರದಿಂದ ಯಾರೋ ಬಂದವರೆ. ನೀವು ಬರಬೈಕಂತೆ."

"ಹೋಗು, ಬರ್ತೀನಿ," ಎಂದ ಗೋವಿಂದ.

ನಗರದಿಂದ ಬಂದವರು ಇಂಥವರೇ ಎಂಬುದು ತಿಳಿದಿದ್ದರೂ ಗೋವಿಂದ, "ಸರಿ. ಯಾರೋ ಬಂದಿದಾರಂತೆ. ಹೋಗಿ ನೋಡ್ತೀನಿ. ನಿಮ್ಮ ಕೆಲಸ ನೀವು ಮಾಡಿ ಮುಗಿಸಿ. ರಾಜೀಪತ್ರ ಲಕೋಟೆಯೊಳಗೆ ಹಾಕಿ ನಮ್ಮನೆಗೆ ಕಳಿಸ್ಬಿಡಿ." ಎಂದ.

ಅಂಗಾರೆ ಇವತ್ತೇ ನಗರಕ್ಕೆ ಓಗ್ತಿ ಅನ್ನು."

"ಇವತ್ತು ಆಗುತ್ತೋ ಇಲ್ವೋ? ನಾಳೆಯಂತೂ ಖಂಡಿತ."

"ಆಗಲಪ್ಪ, ಓಗು."

ಗೋವಿಂದ ಎದ್ದು ಹೋದ. ಆತ ಅಂಗಳ ದಾಟಿದೊಡನೆ ವೆಂಕಟಪ್ಪನೆಂದ :

"ಅಂಗೂ ಇಂಗೂ ಗೋವಿಂದಪ್ಪ ಪುಢಾರಿ ಅನ್ನಿಸ್ಕೊಂಬಿಟ್ಟ. ಅವನನ್ನ ನೋಡಾಕೆ ನಗರದಿಂದಲೂ ಬರ್‍ತವರೆ."

ಗೌಡರು ಏನನ್ನೂ ಹೇಳಲಿಲ್ಲ. ವೆಂಕಟಪ್ಪನನ್ನು ಬಿರುನೋಟದಿಂದ ನೋಡಿದರು. ಎಡಗೈಯ ತೋರು ಬೆರಳಿನಿಂದ ತಮ್ಮ ಮೀಸೆಯ ತುದಿಗಳನ್ನು ಒಂದೊಂದಾಗಿ ಚಿಮ್ಮಿಸಿದರು.

## ೧೨

ಗಂಡನ ಮೈಮುಟ್ಟಿ ಎಬ್ಬಿಸಿ ಭಾಗೀರಥಿ ಅಂದಿದ್ದಳು :

"ರೀರೀ ನನಗೇನನ್ಸುತ್ತೆ, ಗೊತ್ತಾ ?"

ಗೋಪಾಲ ಗಡಬಡಿಸಿ ಎದ್ದು, "ಏನು ? ಏನಾಯ್ತೇ ?" ಎಂದು ಕೇಳಿದ.

ಭಾಗೀರಥಿ ನಕ್ಕು ಅಂದಳು :

"ಕನಸು ಬಿದ್ದವರ ಹಾಗೆ ಆಡ್ತೀರಲ್ಲ ! ಈ ತನಕ ಏನೂ ಆಗಿಲ್ಲ. ಇನ್ನು ಆಗುತ್ತೆ."

"ಹೌದೇ ? ಅದೇನು ಒಗಟು ನಿನ್ದು ?"

"ಮದುವೆ ಆಗುತ್ತೆ ಕಣ್ರೀ."

"ಯಾರಿಗೆ ?"

"ನಿಮ್ಮ ತಮ್ಮಂದಿರಿಗೆ."

"ಇಷ್ಟೇನಾ ? ಅದಕ್ಕೆ ಎಬ್ಬಿಸ್ಬೇಕೆ ?"

"ಇದೇನು ಚಾಳಿ ನಿಮ್ದು ? ಹಗಲು ನಿದ್ದೆ."

ಕೊಠಡಿಯ ಬಾಗಿಲಿಗೆ ಭಾಗೀರಥಿ ಅಗಣಿ ತಗಲಿಸಿದ್ದಳು. ಆದರೂ ಮಾತುಕತೆಯೆಲ್ಲ ಪಿಸುದನಿಯಲ್ಲೇ ಆಗಬೇಕು. ಪಡಸಾಲೆಯಲ್ಲಿ ಓಡಾಡುವವರಿಗೆ ಕೇಳಿಸಬಾರದಲ್ಲ ?

ನೆಲದ ಮೇಲೆ ಕುಳಿತಿದ್ದ ಭಾಗೀರಥಿ ಗಂಡ ಮಲಗಿದ್ದ ಚಾಪೆಯ ಬಳಿಗೆ ಸರಿದಳು.

ಗೋಪಾಲ ಹೇಳಿ ಕೇಳಿ ಸಂಕೋಚ ಸ್ವಭಾವದವನು.

ಆತನೆಂದ :

"ಶ್ರೀಪಾದು ಎಲ್ಲಿ ?"

"ದೊಡ್ಡಮ್ಮನ ಜತೆಗಿದಾನೆ," ಎನ್ನುತ್ತ ಭಾಗೀರಥಿ, ಒಲವು ತುಂಬಿದ ನೋಟ ದಿಂದ ಗಂಡನ ಕಣ್ಣುಗಳನ್ನು ನೋಡಿದಳು.

ತಾವು ಇಬ್ಬರೇ, ಯಾರ ಅಡ್ಡಿಯೂ ಇಲ್ಲ, ಎಂಬುದನ್ನು ಖಚಿತಪಡಿಸಿಕೊಂಡ ಗೋಪಾಲ, ಕುಳಿತಿದ್ದ ಭಾಗೀರಥಿಯ ನಡುವನ್ನು ತನ್ನ ತೋಳಿನಿಂದ ಬಳಸಿದ, ಬಿಗಿಯಾಗಿ.

ಭಾಗೀರಥಿ ಗಂಡನ ಎದೆಯ ಮೇಲಿನ ಕೂದಲುಗಳ ಸಿಕ್ಕು ಬಿಡಿಸಿದಳು, ಬೆರಳುಗಳಿಂದ.

ಗೋಪಾಲ ಇನ್ನೊಂದು ತೋಳನ್ನು ಭಾಗೀರಥಿಯ ಮುಂಭಾಗದಿಂದ ಬಳಸಿ ಆಕೆ ಯನ್ನು ತನ್ನೆದೆಗೆ ಎಳೆದುಕೊಂಡ.

ಗಂಡನ ಗಲ್ಲವನ್ನು ತನ್ನ ತುಟಿಗಳಿಂದ ಒದ್ದೆಮಾಡಿ ಭಾಗೀರಥಿ ಅಂದಳು :

"ನಾನು ಹೇಳಿದ್ದು ಕೇಳಿಸ್ತಾ ? "

" ಏನು ಹೇಳ್ದಿ ? "

ಗೋಪಾಲ ಹಿಡಿತವನ್ನು ಸಡಿಲಿಸಿ ಒಂದು ಅಂಗೈಯಿಂದ ಹೆಂಡತಿಯ ಮೈಯನ್ನೆಲ್ಲ ತಡವಿದ.

" ಅದೇ ನನ್ನ ಮೈದುನಂದಿರಿಗೆ ಮದುವೆಯಾಗುತ್ತೆ ಅನ್ನೋ ವಿಷಯ."

" ಆಗಲಿ."

"ಈ ಮನೇಲಿ ಏನಾಗ್ತಿರುತ್ತೆ ಅನ್ನೋದು ನಿಮ್ಮ ಗೋಚರಕ್ಕೇ ಬರೋದಿಲ್ಲ."

" ನೀನಿದೀಯಲ್ಲಾ ತಿಳ್ಕೊಂಡು ಹೇಳೋದಕ್ಕೆ."

" ಆ ಹೋಟ್ಲಿನೋರು ಬಂದಿದ್ದರಲ್ಲ ? ಗೋವಿಂದನಿಗೆ ಅವರೇ ಮಾವ ಅಂತ ಕಾಣುತ್ತೆ."

"ಅನುಕೂಲವಾಯ್ತು ಬಿಡು. ಇನ್ನು ನಗರಕ್ಕೆ ಅವನು ಹೋದಾಗ ತಿಂಡಿ ತೀರ್ಥಕ್ಕಾಗಿ ಕಾಸು ಬಿಚ್ಚಬೇಕಾದ್ದಿಲ್ಲ."

" ಸರಿ. ಬೀಗರು ಅಂದ್ಮೇಲೆ ನಾವೂ ನಗರಕ್ಕೆ ಹೋಗಿ ಬರ್ಬಾದು."

"ನಮಗೆ ಏನು ಕೆಲಸವಿರುತ್ತೆ ಅಲ್ಲಿ ? "

" ಇಲ್ಲಿಂದ ಮೂವತ್ತು ಮೈಲಿ ಕೂಡಾ ಇಲ್ಲ. ಇಷ್ಟು ಸಮೀಪ. ಆದರೂ ನಾನು ನಗರ ಕಂಡಿಲ್ಲ."

" ಅಷ್ಟು ಆಸೇಂತಾದ್ರೆ ಒಮ್ಮೆ ಹೋಗಿ ಬರೋಣ."

ಗೋಪಾಲ ಹೆಂಡತಿಯನ್ನು ತನ್ನೆಡೆಗೆ ಮತ್ತಷ್ಟು ಎಳೆದುಕೊಳ್ಳಲು ನೋಡಿದ.

ಗಂಡನ ಇಂಗಿತವನ್ನು ಅರಿತ ಹೆಂಡತಿ ಅಂದಳು :

" ಬೇಡಿ."

ಗೋಪಾಲ ತನ್ನ ಹಿಡಿತವನ್ನು ಸಡಿಲಗೊಳಿಸಿದ.

ಈಗ ಅವನದು ಮುನಿಸಿನ ಮೌನ. ಅದು ಅಲ್ಪಾಯುವೆಂಬುದನ್ನು ಭಾಗೀರಥಿ ಬಲ್ಲಳು.

ಅವಳೆಂದಳು :

" ಇನ್ನಿಬ್ಬರು ಸೊಸೆಯರು ಬಂದರೆ ಕೆಲಸ ಹಂಚ್ಕೋಬಹುದು."

" ಹ್ಞ" ಎಂದ ಗೋಪಾಲ ಗೊಗ್ಗರ ಗಂಟಲಲ್ಲಿ.

" ಆದರೆ ಇಷ್ಟೊಂದು ಸಂಸಾರಗಳಿಗೆ ಜಾಗ ಎಲ್ಲಿ ಸಾಕಾಗುತ್ತೆ ಅಂದ್ರೆ... "

" ನಿನಗ್ಯಾಕೆ ಅದರ ಯೋಚ್ನೆ ? ದೊಡ್ಡಮ್ಮ ನೋಡ್ಕೋತಾರೆ. ಅಣ್ಣಯ್ಯ ನೋಡ್ಕೋತಾರೆ. ಇಷ್ಟು ದೊಡ್ಡ ಮನೆ ಇದೆ, ಜಾಗ ಸಾಲ್ದಂತೆ ! "

ಗೋಪಾಲ ಎದ್ದು ಮೈಮುರಿದು, ಆಕಳಿಸಿದ. ನೇಗಿಲುಗಳನ್ನು ದುರಸ್ತಿ ಮಾಡಿಸಬೇಕು. ಕಮ್ಮಾರನಲ್ಲಿಗೆ ತಾನು ಹೋಗಿ ಬರಬೇಕು.

ಭಾಗೀರಥಿ ಕೇಳಿದಳು :

" ಹೊರಟ್ರಾ ? "

" ಹೂಂ, ಭೈರಪ್ಪನಲ್ಲಿಗೆ ಹೋಗ್ಬೇಕು."

" ಮಳೆ ಶುರುವಾಗೋಕ್ಮುಂಚೆ ಒಮ್ಮೆ ಸೋಮಪುರಕ್ಕೆ— "

" ಯಾಕೆ ? ನಿಮ್ಮಮ್ಮನ್ನ ನೋಡೋ ಆಸೆಯಾಗಿದೆಯೆ ? "

"ನಿಮ್ಮ ಶರ್ಟು ಎರಡೂ ಹರಿದಿವೆ. ಹೊಲಿಸೋದು ಬೇಡ್ವೆ?"

"ಸೀರೇನೂ ಒಂದು ಕೊಳ್ಬೇಕು, ಅಲ್ಲ?"

"ಶ್ರೀಪಾದೂಗೆ ಅಂಗಿ ಚಡ್ಡಿ—"

"ನೋಡೋಣ, ನಾವು ಹೋದಾಗಲೇ ಅಲ್ಲಿ ಅಡ್ಡ ಮಳೆ ಬಿದ್ರೆ ಕೆಲಸಕ್ಕೆ ತೊಂದರೆ ಯಾಗುತ್ತೆ. ದೊಡ್ಡಮ್ಮ ಏನಂತಾರೋ? ಸ್ವಲ್ಪ ದಿವಸ ಹೋಗ್ಲಿ..."

"ಸ್ವಲ್ಪ ದಿವಸ ಹೋದ್ರೆ, ಸುಗ್ಗಿ ತನಕ ಮನೆ ಬಿಡೋಕೆ ಆಗೋಲ್ಲ. ಮದುವೆ ಗಲಾಟೆ ಬೇರೆ. ಹೊಸ ಸೊಸೆಯರು ಬರುವಾಗ ನಾನು ಬರೀ ಮೈಲಿದ್ದರೆ ಚೆನ್ನಾಗಿರುತ್ತೆ!"

"ಬರೀ ಮೈಲಿರ್ತೀಯಾ? ಯಾಕೆ? ಏನೂ ಯೋಚಿಸ್ಬೇಡ. ಮದುವೇಗ್ಮುಂಚೆ ಜವಳಿ ಖರೀದಿ ಇದ್ದೇ ಇರುತ್ತೆ."

"ಎಲ್ಲರ ಜತೇಲೇ ನಮಗೂ ತರಬೇಕೇನೋ? ನಿಮ್ಮ ಸ್ವಂತಕ್ಕೇಂತ ಸ್ವಲ್ಪ ದುಡ್ಡಿ ಟ್ಕೊಳ್ಳೀ ಅಂದ್ರೆ......"

"ಯಾಕೀಗ ದುಡ್ಡು?"

"ಬಂಗಾರವಂತೂ ಇಲ್ವಲ್ಲ. ಉಡೋ ಬಟ್ಟೆಗೂ ಬರಗಾಲಾಂತಾದ್ರೆ, ಜನ ನಗ್ತಾರೆ ಅಷ್ಟೆ."

"ನಗಲಿ ಬಿಡು."

"ಅಲ್ವೆ! ತಾಳತಂಬೂರಿ ಹಿಡಕೊಂಡರಾಯ್ತು."

"ಭಾಗೀ! ಎಂಥ ಮಾತೇ ಅದು!"

ಗೋಪಾಲ ಅಂಗಿ ತೊಟ್ಟುಕೊಂಡ. ಭುಜದ ಬಳಿ ಹರಿದಿತ್ತು. ಭಾಗೀರಥಿ ಅದನ್ನು ಹೊಲಿಯಬಹುದಾಗಿತ್ತು. ಆದರೆ ಆ ಕೆಲಸ ಅವಳು ಮಾಡಲೊಲ್ಲಳು. (ಹರಿದುದನ್ನೆಲ್ಲ ಹೊಲಿಯುತ್ತಾ ಇದ್ದರೆ ಹೊಸ ಬಟ್ಟೆ ಕೊಳ್ಳಲು ಸೋಮಪುರಕ್ಕೆ ಹೋಗುವುದು ಸುಳ್ಳು!)

"ನನ್ನ ಇಲ್ಲಿ ಮಾತಾಡ್ಸೋರಿಲ್ಲ. ನನಗೆ ಯಾರೂ ದಿಕ್ಕಿಲ್ಲ. ನಾನು ಯಾರಿಗೂ ಬೇಡಾ ದೋಳು...... ಇಹಿ ... ಇಹಿ ..."

ಭಾಗೀರಥಿಯ ಮುಖ ಕೆಂಪಡರಿ, ಮೂಗಿನ ಹೊಳ್ಳೆಗಳು ಅದುರಿ, ಕಣ್ಣುಗಳಿಂದ ನೀರು ಒಸರಲು ಆರಂಭವಾಯಿತು.

ದಂಪತಿಗೆ ತಿಳಿಯದಂತೆಯೇ ಮಾತಿನ ಧ್ವನಿ ಏರಿಬಿಟ್ಟಿತ್ತು.

ಒಳಗಿನಿಂದ ದೊಡ್ಡಮ್ಮ ಕರೆದರು;

"ಭಾಗೀ, ಇಲ್ಲಿ ಬಾಮ್ಮಾ."

ಹಾಗೆ ಕರೆದುದು ದಂಪತಿಯ ಕಿವಿಗೆ ಬೀಳಲಿಲ್ಲ.

ಮತ್ತೊಮ್ಮೆ ದೊಡ್ಡಮ್ಮ ಅಂದರು:

"ಭಾಗೀ, ಇಲ್ಲಿ ಬಾಮ್ಮಾ. ಶ್ರೀಪಾದೂನ ಎತ್ಕೋ."

ಇದು ಗೋಪಾಲನ ಕಿವಿಗೆ ಬಿದ್ದಿತು. ಹೆಂಡತಿಯ ಕಂಠ ಅಡುಗೆ ಮನೆಗೆ ಕೇಳಿಸಿದೆ ಎಂಬುದು ಆತನಿಗೆ ಹೊಳೆಯಿತು.

ತಾಯಿ ಅಳುತ್ತಿದ್ದುದು ಮಗುವಿಗೆ ಹೇಗೆ ತಿಳಿಯಿತೋ? ಶ್ರೀಪಾದ ಒಳಗೆ ಓ ಓ ಎಂದು ರೋದಿಸತೊಡಗಿದ.

"ಕೇಳಿಸೋಲ್ವೆ? ದೊಡ್ಡಮ್ಮ ಕರೀತಾರೆ, ಮಗು ಅಳ್ತಿದೆ. ಒಳಗ್ಹೋಗು," ಎಂದು ನುಡಿದು ಗೋಪಾಲ ಮನೆಯಿಂದ ಹೊರಬಿದ್ದ.

ಹೊರಗಿನ ಬಿಸಿಲು ಅವನ ಕಣ್ಣುಗಳನ್ನು ಕುಕ್ಕಿತು. ಆದರೆ ನಾಲ್ಕು ಹೆಜ್ಜೆ ಹೋಗು ವಷ್ಟರಲ್ಲೇ ಬಯಲಿನ ಗಾಳಿ ಸೇವಿಸಿ ಅವನು ಪ್ರಸನ್ನನಾದ. ಹೆಂಡತಿಯೊಡನೆ ಆದ ಸಂಭಾಷಣೆ ಅವನಿಗೆ ಮರೆತೇಹೋಯಿತು.

ಒಂದು ನಿಮಿಷ ತಡವಾಗಿ (ಕಣ್ಣುಗಳನ್ನು ಒರೆಸಿ ಆದ ಮೇಲೆ) ಭಾಗೀರಥಿ ಒಳಗೆ ಹೋದಳು. ಮಗುವನ್ನು ದೊಡ್ಡಮ್ಮನೇ ರಮಿಸಬಹುದಾಗಿತ್ತು. ಮಗುವಿನ ತಾಯಿ ಬರಲಿ ಎಂದು ಅಳಲು ಬಿಟ್ಟಿದ್ದರು.

ಗೋಮೆ ಮಾಡಿ ಸ್ವಚ್ಛವಾಗಿದ್ದ ಅಡುಗೆಮನೆಯನ್ನೊಮ್ಮೆ ದಿಟ್ಟಿಸಿ ದೊಡ್ಡಮ್ಮ, ತಮ್ಮ ಹಿರಿಯ ಮೊಮ್ಮಗನ ಮಡದಿಯನ್ನು ಕೇಳಿದರು:

"ಏನಮ್ಮ? ಏನಂದ ಗೋಪೂ?"

"ಏನಿಲ್ಲ, ದೊಡ್ಡಮ್ಮ."

"ಮೋಡ ಕವೀದೆ ಮಳೆ ಬರುತ್ತಾ? ಏನಾದರೂ ಗೋಪು ಅಂದಿರ್ಬೇಕು, ಪರವಾಗಿಲ್ಲ, ಹೇಳು."

ಶ್ರೀಪಾದನ ಕಣ್ಣುಗಳಲ್ಲಿದ್ದ ನೀರನ್ನೂ ಭಾಗೀರಥಿ ತನ್ನ ಸೆರಗಿನ ತುದಿಯಿಂದ ಒರೆಸಿದಳು.

"ಏನೂ ಇಲ್ಲ ದೊಡ್ಡಮ್ಮ."

"ಮತ್ತೆ?"

"ಅವರ ಷರಟು ಎರಡೂ ಹರಿದಿವೆ. ಹೊಸದು ಹೊಲಿಸ್ಕೋಬಾರದೆ ಅಂತ ಕೇಳ್ದೆ. ಅದಕ್ಕೆ ಸಿಟ್ಟು ಬಂತು. ಅವರಿಗೆ ಹರಕಲೇ ಇಷ್ಟವಂತೆ."

"ಅಷ್ಟೇನೆ? ಗೋವಿಂದನದೂ ಪದ್ಮನದೂ ಮದುವೆ ಈ ವರ್ಷ ಇರುತ್ತೆ. ಆಗ ಹೊಸ ಜವಳಿ ಖರೀದಿ ಆಗಲೇಬೇಕಲ್ಲ. ಒಂದಿಷ್ಟು ಒಡವೆಗಳನ್ನೂ ಆ ಹೊತ್ತಿಗೆ ಮಾಡಿಸ್ಬೇಕು."

ಭಾಗೀರಥಿ ಏನನ್ನೂ ಹೇಳಲಿಲ್ಲ. ಸದ್ಯಕ್ಕಂತೂ ಸೋಮಪುರಕ್ಕೆ ಹೋಗುವ ಆಸೆಯನ್ನು ಕಟ್ಟಿಕೊಳ್ಳದಿರುವುದು ಮೇಲು—ಎಂದು ಆಕೆಗೆ ಅನಿಸಿತು.

"ಯಾವತ್ತು, ದೊಡ್ಡಮ್ಮ, ಮದುವೆ?"

—ಮಾತಿನ ಚುಕ್ಕಾಣಿಯನ್ನು ಭಾಗೀರಥಿ ತಿರುವಿದಳು.

"ಎಲ್ಲಿ—ಆ ವಿಷ್ಣುಮೂರ್ತಿ ಜಾತಕಗಳನ್ನು ಕಳಿಸ್ಬೇಕು. ಹುಡುಗೀನ ಗೋವಿಂದ ನೋಡ್ಬೇಕು; ಪದ್ಮನಿಗೆ ಹೆಣ್ಣು ಗೊತ್ತಾಗ್ಬೇಕು. ನಿಶ್ಚಿತಾರ್ಥ ಮೊದಲು ಆಗ್ಬೇಕೋ ಬೇಡ್ವೋ? ಆಮೇಲೆ ಮದುವೆ."

"ಯಾವೂರಲ್ಲಿ ದೊಡ್ಡಮ್ಮ?"

"ಈಗ್ಲೇ ಹ್ಯಾಗೆ ಹೇಳೋಣ?......ಗೋಪು ಹೋದ್ನೋ?"

"ಹ್ಞು. ಭೈರಪ್ನತ್ರ ಕೆಲ್ಸ ಇದೆ ಅಂದ್ರು."

"......ಹೆಂಗಸರದೇನಮ್ಮ ಇದೆ? ಮಕ್ಕಳು ಮನೆ ಅಂತ ಹೊತ್ತು ಕಳೀತೀವಿ. ಗಂಡಸರ ಹೊರಗಿನ ಸಂಕಷ್ಟ ನಮಗೇನು ಗೊತ್ತಾಗುತ್ತೆ? ದುಡಿದು ಸಂಪಾದಿಸಿ ತಂದು

ಹಾಕೋರು ಅವರು. ಚಾಪೆಯ ಉದ್ದ ನೋಡಿ ಅಷ್ಟಕ್ಕೆ ಕಾಲು ಚಾಚಿ, ಸಂಸಾರವನ್ನು ನಾವು ತೂಗಿಸಿಕೊಂಡು ಹೋದರಾಯ್ತು."

ಭಾಗೀರಥಿ ಮಾತು ಕೊಡಿಸಲಿಲ್ಲ. ದೊಡ್ಡಮ್ಮ ಹಿತ್ತಲ ಕಡೆಗೆ ಹೊರಟುದನ್ನು ಕಂಡ ತಾನೂ ಮಗುವನ್ನೆತ್ತಿಕೊಂಡು ಪಡಸಾಲೆಗೆ ಬಂದಳು. ಅಲ್ಲಿ ಶ್ರೀನಿವಾಸಯ್ಯ ಹಾಸಿಗೆಯ ಮೇಲೆ ಗೊರಕೆ ಹೊಡೆಯುತ್ತ ಮಲಗಿದ್ದರು. ಭಾಗೀರಥಿ ಜಗಲಿಗೆ ನಡೆದಳು.

ಗಂಡಸರ ಸಂಕಷ್ಟದ ವಿಷಯ ದೊಡ್ಡಮ್ಮ ಯಾಕೆ ಹಾಗೆ ಹೇಳಿದರು ? ಎಂಬ ಯೋಚನೆ ಅವಳ ಮನಸ್ಸನ್ನು ದಣಿಸಿತು. ಅವರ ಹಿರಿಯ ಮೊಮ್ಮಗನನ್ನು ತಾನು ಕಾಡುತ್ತಿದ್ದೇನೆ, ಎಂದೆ ? ತನ್ನನ್ನು ಕುರಿತ ಟೀಕೆಯೇ ಆ ಮಾತು ?

ಭಾಗೀರಥಿಗನಿಸಿತು:

ಈ ಸಂಸಾರದಲ್ಲಿ ಅವರೇ ಅತ್ಯಂತ ಹಿರಿಯರು. ಏನನ್ನು ಬೇಕಾದರೂ ಹೇಳುವ ಹಕ್ಕು ಅವರಿಗಿದೆ. ನಾನು ಹೊರಗಿನಿಂದ ಬಂದವಳು. ನನ್ನ ಮಾತು ಇಲ್ಲೇನು ನಡೆಯುತ್ತೆ ?

ಶ್ರೀಪಾದನಿಗೆ ಮತ್ತೆ ನಿದ್ದೆಯ ಹೊತ್ತು. ಭಾಗೀರಥಿ ಅವನನ್ನು ಕೊಠಡಿಗೊಯ್ದು ಮಲಗಿಸಿದಳು.

ಬಳಿಕ ಒಣಗಿದ ಬಟ್ಟೆಗಳನ್ನು ತಂದು ಮಡಚೋಣವೆಂದು ಹೊರಹೋದಳು.

...ಬಿಸಿಲು ಬಾಡುವ ವೇಳೆಗೆ ವಿಷ್ಣುಮೂರ್ತಿಯವರನ್ನು ಬಸ್ಸು ಹತ್ತಿಸಿ ಬರಲು ಹೋಗಿದ್ದ ಗೋವಿಂದ ವಾಪಸಾದ.

"ಯಾಕೆ ತಡ ? ಸೋಮಪುರದ ಬಸ್ಸು ಸಿಗ್ಲಿಲ್ವೇ ?" — ಎಂದು ದೊಡ್ಡಮ್ಮ ಕೇಳಿದರು.

"ಸಿಕ್ತು. ಕಳಿಸ್ಕೊಟ್ಟೆ. ಆದರೆ ಭಾರೀ ಬಿಸಿಲು, ದೊಡ್ಡಮ್ಮ. ವಿಷ್ಣುಮೂರ್ತಿಗಳು ಸುಸ್ತಾಗಿ ಹೋದ್ರು. ಬರ್‍ತಾ ನಾನು ಕೃಷ್ಣೇಗೌಡನ ಮನೇಲಿ ಸ್ವಲ್ಪ ಹೊತ್ತು ಕೂತಿದ್ದೆ." ಎಂದ ಗೋವಿಂದ.

ಅಜ್ಜಿ ಮೊಮ್ಮಗನ ಸಂಭಾಷಣೆ ಅಡುಗೆ ಮನೆಯಲ್ಲಿದ್ದ ಭಾಗೀರಥಿಗೆ ಕೇಳಿಸುತ್ತಿತ್ತು. ಡಬ್ಬಗಳ ಸಂದಿಯಲ್ಲಿ ತುಂಬಿದ್ದ ಧೂಳನ್ನು ಝಾಡಿಸುವುದರಲ್ಲಿ ನಿರತಳಾಗಿದ್ದ ಭಾಗೀರಥಿ ಕಿವಿ ನಿಮಿರಿಸಿ ಹೊರಗಿನ ಮಾತುಗಳನ್ನು ಆಲಿಸಿದಳು.

"ಈ ಹಳ್ಳಿ ನೋಡಿ ಅದೇನು ಇಷ್ಟವಾಯ್ತೋ ವಿಷ್ಣುಮೂರ್ತಿಗಳಿಗೆ ?" ಎಂದು ನಕ್ಕರು ದೊಡ್ಡಮ್ಮ.

"ನಮ್ಮ ತಾತನಿಗೆ ಈ ಹಳ್ಳಿ ಯಾಕೆ ಇಷ್ಟವಾಯ್ತು ಹೇಳು ದೊಡ್ಡಮ್ಮ ? ಇದೇ ಅಮರಾವತಿ, ಇಲ್ಲೇ ಇರ್‍ತೀನಿ — ಅಂದ್ರಲ್ಲ ?"

"ನಿಜಾಂತಿಟ್ಕೋ."

"ಅದರಲ್ಲೂ ವಿಷ್ಣುಮೂರ್ತಿಗಳು ಯಾವುದಕ್ಕೂ ದುಡುಕಿ ಕೈ ಹಾಕೋ ಮನುಷ್ಯನೇ ಅಲ್ಲ."

"ಲೋಕಾನುಭವಿ. ಅಂದಹಾಗೆ ಜಾತಕದ್ದೇನಾದರೂ ಮಾತು ಬಂತೆ ?"

"ಇನ್ನು ಎರಡು ಮೂರು ದಿನದಲ್ಲಿ ಗಜಾನನ ಕೈಯಲ್ಲಿ ಕೊಟ್ಟು ಕಳಿಸ್ತೀನಿ ಅಂದ್ರು."

ವೈಯಕ್ತಿಕ ವಿಷಯ ಎಂದು ಸಂಕೋಚ ಪಡಲಿಲ್ಲ ಗೋವಿಂದ.

"ಯಾರು ಗಜಾನನ ?"

"ಅದೇ ಅವರ ದೂರದ ಸಂಬಂಧಿಕ. ಅವನಿಗೋಸ್ಕರವೇ ನಮ್ಮ ಅಮರಾವತೀಲಿ ಹೋಟ್ಲಿಡೋದು."

"ನಿನಗೆ ಇವರೆಲ್ಲಾ ಪರಿಚಯ ಅನ್ನು."

"ಓಹೋ !"

"ಸರಿಹೋಯ್ತು ! ಅಲ್ವೋ, ಹುಡುಗೀರ್ನೂ ನೋಡಿದೀಯೇನೊ ?"

ಗೋವಿಂದ ಸ್ವಲ್ಪಮಟ್ಟಿಗೆ ನಾಚಿದ; ಇನ್ನೂ ಸ್ವಲ್ಪ ಮಟ್ಟಿಗೆ ನಾಚಿದವನಂತೆ ನಟಿಸಿದ.

"ಎಂಥ ಪ್ರಶ್ನೆ ಕೇಳ್ತೀಯಾ ದೊಡ್ಡಮ್ಮ......"

"ಈಗಿನ ಕಾಲದ ಹುಡುಗ್ರು. ಅಲ್ದೆ ನೀನು ನಗರಕ್ಕೆ ಹೋದಾಗ್ಲೆಲ್ಲಾ ಅವರಲ್ಲಿ ತಾನೆ ಉಳ್ಕೊಳ್ಳೋದು ?"

"ಅವರ ಹೋಟ್ಲಲ್ಲಿ ದೊಡ್ಡಮ್ಮ ; ಮನೇಲಲ್ಲ."

"ಹೋಟ್ಲಿನ ಕೆಲಸವೆಲ್ಲ ಗಂಡಸರೇ ಮಾಡ್ತಾರೆ, ಅನ್ನು."

"ಹೌದು, ಮತ್ತೆ !"

"ಅಡುಗೇನೂ ಗಂಡಸರದೇನೇ."

"ಅಲ್ದೆ ! ವಿಷ್ಣುಮೂರ್ತಿಗಳ ಮನೆ ಹೆಂಗಸರು ಬಂದು ಮಾಡ್ತಾರೆ ಅಂದ್ಕೊಂಡಿಯಾ ? ಸರಿ, ಸರಿ !"

"ಪದ್ಮನಿಗೆ ಹೆಣ್ಣು ನೋಡೋ ವಿಷಯ ಏನಾದರೂ ಅಂದ್ರ ?"

"ಹ್ಞ. ಹೋಗ್ತಾ ದಾರಿ ಉದ್ದಕ್ಕೂ ಆ ಸಂಬಂಧ ಹ್ಯಾಗೆ ? ಈ ಸಂಬಂಧ ಹ್ಯಾಗೆ ? ಅಂತ ಯೋಚ್ನೆ ಮಾಡ್ತಾನೇ ಇದ್ರು."

"ನಂಬಿಗಸ್ಥ. ಒಂದು ಜವಾಬ್ದಾರಿ ಹೊತ್ಕೊಂಡ್ರೆ ನಿರ್ವಹಿಸೋ ಮನುಷ್ಯ."

"ಅವರಿಗೇನು ದೊಡ್ಡಮ್ಮ ! ಹೋಟ್ಲಲ್ಲಿ ಫೋನಿದೆ. ಕೂತಲ್ಲಿಂದಲೇ ಯಾವ ಮೂಲೇಲಿ ಇರೋವರ ಜತೆ ಬೇಕಾದರೂ ಮಾತಾಡ್ತಾರೆ."

"ಅದೆಂಥಾದ್ದೊ ?"

"ಫೋನ್ ದೊಡ್ಡಮ್ಮ. ಕಪ್ಪಗೆ ಹೀಗೆ ಇರುತ್ತೆ. ಕರ್‌ಕರ್ ಅಂತ ಯಾವ ನಂಬರ್ ಬೇಕೋ ತಿರುಗ್ಸೋದು. ಒಂದು ತುದೀನ ಕಿವಿಗಿಡೋದು. ಇನ್ನೊಂದು ತುದಿ ಬಾಯಿಗಿಡೋದು."

"ಬಿಡಪ್ಪ. ನನಗ್ಯಾತಕ್ಕೆ ಅದೆಲ್ಲ ? ಅಂತೂ, ಪದ್ಮನಿಗೆ ಹೆಣ್ಣು ನೋಡೋ ಕೆಲಸಾನೂ ಮಾಡ್ತಾರೆ, ಅನ್ನು."

"ಓ. ಆಗ್ಲೇ ಅಂತಿದ್ರು. ಯಾರೋ ಒಬ್ರು ಹೋಟೆಲ್ ಮಾಲಿಕರ ಮಗಳಿದಾಳಂತೆ. ಹೋದ ವರ್ಷ ಎಸ್.ಎಸ್.ಎಲ್.ಸಿ. ಮಾಡಿದ್ಲಂತೆ. ಇನ್ನೊಂದು, ಒಬ್ಬರು ಲಾಯರಿ ಮಗಳು. ಇನ್ನೂ ಒಂದು ಹೇಳಿದ್ರಪ್ಪ—ಹ್ಞ—ಒಬ್ಬರು ಶಿರಸ್ತೇದಾರರ ಮಗಳು..."

"ಅಂತೂ ಪರವಾಗಿಲ್ಲ."

"ಆದರೆ ಒಂದು, ದೊಡ್ಡಮ್ಮ. ಹೇಗಾದರೂ ಮಾಡಿ ಇಲ್ಲಿಂದ ಟಾರ್ ರಸ್ತೆವರೆಗಿರೋ ಕಾಲು ದಾರೀನ ಅಗಲ ಮಾಡಿಸಿ ಎತ್ತಿನ ಬಂಡಿ, ಟಾಂಗಾ ಓಡಾಡೋ ಹಾಗೆ..."

" ಓಹೋಹೋ ! "

" ಯಾಕೆ ದೊಡ್ಡಮ್ಮ ? ಹಳ್ಳಿಯವರೆಲ್ಲಾ ಮನಸ್ಸು ಮಾಡಿದ್ರೆ ಎರಡು ಮೈಲಿ ಕಚ್ಚಾ ರಸ್ತೆ ಮಾಡೋದು ಕಷ್ಟವೆ ? ಈಗ ಶ್ರಮದಾನ ಅಂತ ಒಂದಿದೆ... "

"ಎಂಥ ದಾನ ? "

" ಶ್ರಮ—ದಾನ. ದುಡಿಮೇನ ದಾನಮಾಡೋದು. ಪ್ರತಿಫಲ ತಗೊಳ್ದೆ ಕೆಲ್ಸ ಮಾಡೋದು. ದೇಶವನ್ನೆಲ್ಲ ಈ ರೀತಿ ಸುಧಾರಿಸ್ಬೇಕೂಂತ ಮುಖಂಡ್ರು ಹೇಳ್ತಾರೆ."

" ಹೋಗು. ಒಳಗೆ ಭಾಗೀರಥಿ ಕಾಫಿ ಇಟ್ಟಿದಾಳೇನೋ ನೋಡು. ಭೈರಪ್ಪನ ಮನೆಗೆ ಹೋದ ಗೋಪಾಲ ಇನ್ನೂ ಬಂದಿಲ್ಲ."

" ಗಜಾನನ ಹೋಟ್ಲಿಟ್ಮೇಲೆ ಕಾಫಿಗೇನೂ ತೊಂದರೆಯಾಗೊಲ್ಲ."

" ಛಿ ! ಮನೇಲಿ ಮಾಡಿಸೋದು ಬಿಟ್ಟು ಅಲ್ಲಿ ಹೋಗಿ ಕುಡೀತಾ ಕೂತ್ಕೋತಾರೇನೊ? "

" ಹಹ್ಹ ! ಇನ್ನೊಂದು ಹೇಳೋಕೆ ಮರೆತೆ. ಕಚ್ಚಾ ರಸ್ತೆ ಆದ್ಮೇಲೆ ಒಂದು ಕುದುರೆ ಗಾಡಿ—ಸಾರೋಟು—ಇಡಬೇಕೂಂತ ವಿಷ್ಣುಮೂರ್ತಿಗಳ ಯೋಚನೆ. ನಮಗೆ ಬೇಡದೇ ಹೋದಾಗ ಬಾಡಿಗೆಗೆ ಕೊಡಬಹುದು."

ದೊಡ್ಡಮ್ಮ ದಂಗಾದರು.

"ನಾವು ಬಾಡಿಗೆಗೆ ಗಾಡಿ ಇಡೋದೇ ? ಭಗವಂತ ! "

" ನಾವಲ್ಲ ದೊಡ್ಡಮ್ಮ. ಗಜಾನನ ಇಡ್ತಾನೆ."

" ಸಾಕಪ್ಪ. ಒಳಗ್ಹೋಗು."

ಗೋವಿಂದ ನಕ್ಕು,

" ನೋಡ್ತಿರು ದೊಡ್ಡಮ್ಮ, ನೋಡ್ತಿರು," ಎನ್ನುತ್ತ ಒಳಗೆ ಹೋದ, ಅತ್ತಿಗೆಯನ್ನು ಹುಡುಕಿಕೊಂಡು.

ಬಾಗಿಲ ಬಳಿಯಲ್ಲಿ ಮರೆಯಲ್ಲಿ ನಿಂತಿದ್ದ ಭಾಗೀರಥಿ, ದೊಡ್ಡಮ್ಮ ಗೋವಿಂದನಿಗೆ ಒಳಗ್ಹೋಗು ಎಂದೊಡನೆಯೇ, ಅಡುಗೆಮನೆಯ ಒಲೆಯನ್ನು ಸಮೀಪಿಸಿದ್ದಳು.

ದೊಡ್ಡಮ್ಮ ಯೋಚನೆಗೀಡಾದರು; ಹುಡುಗರಿಗೆ ಇಷ್ಟು ಸ್ವಾತಂತ್ರ್ಯ ಕೊಡುವುದು ಸರಿಯೆ ? ಗೋವಿಂದ ತನಗೊಬ್ಬ ಮಾವನನ್ನು ತಾನೇ ಆರಿಸಿಕೊಂಡಂತೆ ಆಯಿತಲ್ಲ ? ಈ ಹಳ್ಳಿಯಲ್ಲಿ ಹೋಟೆಲಿಡುವ ವಿಚಾರವೊಂದನ್ನು ಆತ ಬಿಟ್ಟಿದ್ದರೆ ಚೆನ್ನಾಗಿತ್ತು. ಬೀಗರ ಕಡೆಯವರು ಹಳ್ಳಿಯಲ್ಲೇ ಇರುವುದು ಲೇಸಲ್ಲ. ಇನ್ನು ರಸ್ತೆಮಾಡುವ, ಕುದುರೆ ಗಾಡಿ ಇಡುವ ವಿಚಾರಗಳೊ ? ದೊಡ್ಡಮ್ಮ ನಿಟ್ಟುಸಿರುಬಿಟ್ಟು ತಲೆಯಲ್ಲಾಡಿಸಿದರು...

ಸಂಜೆ ತಿರುಗಾಡಲು ಹೋಗಿದ್ದ ಶ್ರೀನಿವಾಸಯ್ಯ ದೀಪ ಹಚ್ಚುವ ವೇಳೆಗೆ ಮನೆಗೆ ಬಂದರು.

" ವಿಷ್ಣುಮೂರ್ತಿಗಳಿಗೆ ಬಸ್ ಸಿಗ್ತೇನೋ ?" ಎಂದು ಗೋವಿಂದನನ್ನು ಕೇಳಿದರು.

" ಸಿಗ್ತು, ಅಣ್ಣಯ್ಯ. ನಿಲ್ಲಿಸಿ, ಸೀಟು ಮಾಡ್ಕೊಟ್ಟೆ," ಎಂದ ಗೋವಿಂದ.

ಪದ್ಮನಾಭ ಹಿಡಿದ ಪುಸ್ತಕವನ್ನು ಬಿಡದೆ ಲಾಂದ್ರದ ಬೆಳಕಿನಲ್ಲಿ ಓದುತ್ತ ಕುರ್ಚಿಗೆ ಅಂಟಿಕೊಂಡಿದ್ದ. ಅವನ ಕೋಣೆಯ ಬಾಗಿಲ ಮುಂದೆ ಶ್ರೀನಿವಾಸಯ್ಯ ಒಮ್ಮೆ ನಿಂತರು. ಕಿರಿಯ ಮಗನನ್ನು ನೋಡಿದರು ಏನನ್ನೂ ಆಡದೆ ಮುಂದಕ್ಕೆ ಚಲಿಸಿದರು.

ಗೋಪಾಲ ಮನೆಗೆ ಬಂದ.

"ರಿಪೇರಿ ಕೆಲಸವೆಲ್ಲ ಆಯ್ತೇನೋ ?" ಎಂದು ಶ್ರೀನಿವಾಸಯ್ಯ ತಮ್ಮ ಮಗನತ್ತ ನೋಡಿ ಕೇಳಿದರು.

ಗೋಪಾಲನೆಂದ :

"ಆಯ್ತು. ಭೈರಪ್ಪನಿಗೆ ದುಡ್ಡು ಬೇಕಂತೆ."

"ಎಲಾ ! ದುಡ್ಡೆ ? ಭತ್ತ ಅಲ್ವೆ ಯಾವಾಗ಼್ೂ ಕೊಡೋದು ?"

"ಇನ್ನು ಮುಂದೆ ದುಡ್ಡೇ ಚೆನ್ನಾಗಿರುತ್ತೆ, ಅಂದ. ನಾವು ಬೇಕಾದರೆ ಅರ್ಧ ದುಡ್ಡು ಅರ್ಧ ಭತ್ತ ಕೊಡಬಹುದಂತೆ."

"ಆಗಲಪ್ಪ, ಆಗಲಪ್ಪ. ಶಾಮಣ್ಣ ಇದಕ್ಕೆ ಒಪ್ಪಿದಾನಂತೊ ?"

"ಅಲ್ಲಿಯತನಕ ಭೈರಪ್ಪ ಹೋಗಿಲ್ಲ. ಪಟೇಲರ ಮನೆ ಒಂದು ಬಿಟ್ಟು ಬೇರೆಯವರಿಂದೆಲ್ಲ ದುಡ್ಡ ತಗೋತಾನೆ."

"ಸರಿ, ಇನ್ನು ಆಳುಗಳೂ ದುಡ್ಡೇ ಕೇಳ್ತಾರೆ."

"ಹೌದು."

"ಇರಲಿ, ನೋಡೋಣ."

ಗೋಪಾಲ ಮತ್ತು ತಂದೆ ಆಡಿದುದೆಲ್ಲ ಗೋವಿಂದನಿಗೆ ಕೇಳಿಸಿತು.

ಅವನೆಂದುಕೊಂಡ :

'ಬದುಕಿದೆ. ಭೈರಪ್ಪ ಕೊಟ್ಟ ಭಾಷೇನ ಮುರೀಲಿಲ್ಲ. ಧಾನ್ಯರೂಪದ ವೇತನ ಸರಿಯಲ್ಲ ಅಂತ ನಾನು ಅವನಿಗೆ ಲೆಕ್ಚರ್ ಕೊಟ್ಟದ್ದು ನಿಷ್ಪ್ರಯೋಜಕವಾಗಲಿಲ್ಲ.'

ಹಳ್ಳಿಯ ವ್ಯವಹಾರಗಳಲ್ಲಿ ಹಣವೇ ವಿನಿಮಯ ಸಾಧನವಾದರೆ ದೊಡ್ಡ ಕ್ರಾಂತಿಯನ್ನೇ ತಾನು ಮಾಡಿದಂತೆ. ಜನರ ಕೈಯಲ್ಲಿ ದುಡ್ಡಿಲ್ಲದೇ ಹೋದರೆ ಗಜಾನನ ಹೋಟ್ಲು ಹೇಗೆ ನಡೆದೀತು ? ಅಕ್ಕಿ ಭತ್ತ ತಂದು ಕೊಟ್ಟು ಕಾಫಿ ಕುಡಿಯುವುದಕ್ಕಾದೀತೆ ?

ಗೋವಿಂದ ಸಂತೋಷಪಟ್ಟುಕೊಂಡು ತನ್ನೊಳಗೇ ಉದ್ಗರಿಸಿದ :

'ಭೈರಪ್ಪ ಒಳ್ಳೇ ಕೆಲಸ ಮಾಡ್ದ.'

...ರಾತ್ರೆ ಭಾಗೀರಥಿ ದೊಡ್ಡಮ್ಮನೂ ಗೋವಿಂದನೂ ಆಡಿಕೊಂಡುದನ್ನು ಗಂಡನಿಗೆ ತಿಳಿಸಲೆಂದು ಬಾಯಿ ತೆರೆದಳು.

ಆದರೆ ಗೋಪಾಲ ಹೆಂಡತಿಗೆ ಮಾತನಾಡಗೊಡಲಿಲ್ಲ. ಮಧ್ಯಾಹ್ನದ ಸಿಟ್ಟು ಹಾಗೆಯೇ ಇತ್ತು. ಅದನ್ನು ಕರಗಿಸುವುದಕ್ಕೋಸ್ಕರ ಆತ ಭಾಗೀರಥಿಯನ್ನು ಬರಸೆಳೆದುಕೊಂಡ...

ಗೋಪಾಲನಿಗೆ ನಿದ್ದೆ ಬರತೊಡಗಿದಾಗ ಭಾಗೀರಥಿ ವರದಿ ಒಪ್ಪಿಸಿದಳು :

ಪದ್ಮನಿಗಾಗಿ ಸಂಬಂಧಗಳು ; ಕಚ್ಚಾ ರಸ್ತೆ ; ಬಾಡಿಗೆ ಟಾಂಗಾ...

ಗಂಡ ಸಂಪೂರ್ಣ ನಿದ್ರಾವಶನಾದನೆಂದು ಅರಿತಾಗ ಭಾಗೀರಥಿ ಮಾತು ನಿಲ್ಲಿಸಿದಳು.

ಹೋಟೆಲಿಡಲು ಬರುವ ಗಜಾನನ ಎಂಥವನೊ ? ಅಂಥವನಿರಬಹುದೆ ? ಇಂಥವನಿರಬಹುದೆ ? —ಎಂದು ಯೋಚಿಸುತ್ತ ಹೊತ್ತು ಕಳೆದು, ಭಾಗೀರಥಿ ಮಗ್ಗುಲು ಹೊರಳಿದಳು.

...ಮಳೆ ಬಂದು ನೆಲ ತೊಯ್ದು ಕಣಿವೇಹಳ್ಳಿಯ ಜನ ಹೊಲಗಳಿಗೆ ಇಳಿದ ದಿನ, ಗಜಾನನ ಅಲ್ಲಿಗೆ ಬಂದ.

೧೩

ಕ್ಷೇಮ ॥ ಶ್ರೀ ॥ ಕ್ಷೇಮ

ಭಾಗ್ಯನಗರ

ತಾ..................

ಕಣವೇಹಳ್ಳಿ ಜಮೀನ್ದಾರ್ ಶ್ರೀಮಾನ್ ಶ್ರೀನಿವಾಸಯ್ಯನವರಲ್ಲಿ ವಿಷ್ಣುಮೂರ್ತಿ ಮಾಡುವ ವಿಜ್ಞಾಪನೆಗಳು.

ಅದೇನೆಂದರೆ :

ತಮ್ಮಲ್ಲಿಂದ ವಾಪಸಾದವನು ತಕ್ಷಣವೇ ಜಾತಕಗಳನ್ನು ಕಳಿಸಬೇಕು ಅಂತ ಇರಾದೆ ಇತ್ತು. ಆದರೆ ಜಾತಕಗಳನ್ನು ತೆಗೆದುಕೊಂಡು ಗಜಾನನನೇ ಹೋಗಿ ಬರುವುದು ಒಳ್ಳೆಯದು ಅಂತ ಕಂಡದ್ದರಿಂದ ಸ್ವಲ್ಪ ದಿವಸ ತಡವಾಯಿತು. ಅವನು ಊರಿಗೆ ಹೋದವನು ಹೆರಿಗೆಗೆ ಹೋಗಿದ್ದ ಹೆಂಡತಿ ಮತ್ತು ಮಗುವನ್ನು ಕರೆದುಕೊಂಡು ನಿನ್ನೆಯಷ್ಟೇ ಬಂದ. ಕ್ಷಮಿಸಬೇಕು.

ನನ್ನ ಹಿರೇಮಗಳು ಚಿ। ಸೌ। ಕಾಮಾಕ್ಷಿ ಮತ್ತು ಎರಡನೆಯವಳಾದ ಚಿ। ಸೌ। ಕನಕಲತಾ ಇವರ ಜಾತಕಗಳನ್ನೂ ನನ್ನ ಸ್ನೇಹಿತರಾದ ಲಾಯರ್ ಮೋಹನರಾಯರ ಮಗಳ ಜಾತಕವನ್ನೂ ಕಳಿಸಲಾಗಿದೆ. ಪರಾಂಬರಿಸಬೇಕು. ಚಿ। ಕಾಮಾಕ್ಷಿಯದು ಸರಿ ಹೋಗದಿದ್ದರೆ ಅವಳಿಗೆ ಗಂಡು ಗೊತ್ತಾಗುವತನಕ ಎರಡನೆಯವಳ ವಿವಾಹವನ್ನು ತಡೆಯಬೇಕಾಗುತ್ತದೆ. ಮೋಹನರಾಯರ ಸಂಬಂಧ ಸರಿಹೋದರೆ ಒಳ್ಳೆಯದು. ಈಗಿನ ಕಾಲದಲ್ಲಿ ಲಾಯರು ಬೀಗರಾಗುವುದರಿಂದ ಎಷ್ಟು ಅನುಕೂಲ ಅಂತ ತಮಗೆ ಬಿಡಿಸಿ ಹೇಳಬೇಕಾದ್ದಿಲ್ಲವಲ್ಲ ! ಆ ಜಾತಕ ತಮ್ಮ ಕಿರಿಯ ಚಿರಂಜೀವಿಯದಕ್ಕೆ ಕೂಡಿ ಬರದಿದ್ದರೆ, ನನ್ನ ಬೇರೆ ಇಬ್ಬರು ಮಿತ್ರರಿದ್ದಾರೆ. ಅವರ ಪುತ್ರಿಯರ ಜಾತಕಗಳನ್ನು ಕಳಿಸಲಾಗುವುದು.

ಇದಾದ ತರುವಾಯ ವಧು ಪರೀಕ್ಷೆಗೆ ಅಂತ ತಾವು ಮಕ್ಕಳೊಡನೆ ನಗರಕ್ಕೆ ಬಂದು ಬಡವನ ಆತಿಥ್ಯ ಸ್ವೀಕರಿಸಬೇಕಾಗಿ ವಿನಮ್ರ ಪ್ರಾರ್ಥನೆ.

ತಮ್ಮ ಊರಲ್ಲಿ ಹೋಟೆಲಿಡುವವನು ನನಗೆ ಬೇಕಾದ ಹುಡುಗ ಎಂದಿದ್ದೆನಲ್ಲ ? ಅವನೇ ಗಜಾನನ. ಈಗ ತಮ್ಮಲ್ಲಿಗೆ ಬಂದವನು ಕಟ್ಟಡವನ್ನು ವಶಕ್ಕೆ ತೆಗೆದುಕೊಂಡು ಪೂರ್ವ ತಯಾರಿ ಮಾಡಿ ವಾಪಸಾಗುತ್ತಾನೆ. ಮುಂದೆ ಸಾಮಾನು ಇತ್ಯಾದಿಗಳನ್ನು ತರುತ್ತಾನೆ. ಟಾರ್ ರಸ್ತೆಯಿಂದ ಹಳ್ಳಿಯವರೆಗೆ ಅವನಿಗೆ ಆಳುಗಳ ಸಹಾಯ ಬೇಕಾದೀತು. ಅದನ್ನು ತಾವು ಒದಗಿಸಬೇಕಾಗಿ ಕೋರಲಾಗಿದೆ. ನಿಶ್ಚಿತಾರ್ಥಕ್ಕೆ ನಾವೆಲ್ಲ ಬರುತ್ತೇವಲ್ಲ; ಆಗ ಹೋಟೆಲಿನ ಉದ್ಘಾಟನೆಯನ್ನು ಮಾಡಬಹುದಾಗಿದೆ.

ಹೆಚ್ಚಿಗೆ ಬರೆಯಲು ಶಕ್ಯನಲ್ಲ.

ನನಗೆ ತಮ್ಮ ಪರಿಚಯವಾದದ್ದು ಪರಮ ಭಾಗ್ಯ ಎಂದು ಭಾವಿಸಿದ್ದೇನೆ. ಮುಂದೆ ಆಗಲಿರುವ ಸಂಬಂಧದಿಂದ ಎರಡೂ ಕುಟುಂಬಗಳ ಸಂಪದಭಿವೃದ್ಧಿಯಾಗಲೆಂದು

ಶ್ರೀ ಪರಮಾತ್ಮನಲ್ಲಿ ನಿತ್ಯವೂ ಬೇಡಿಕೊಳ್ಳುತ್ತಿದ್ದೇನೆ.

ಇಂತಿ, ನಮಸ್ಕಾರಗಳು,

**ಟಿ. ಎಸ್. ವಿಷ್ಣುಮೂರ್ತಿ**

ಗಜಾನನ ತಂದ ಕಾಗದವನ್ನು ಶ್ರೀನಿವಾಸಯ್ಯ ಸಮಾಧಾನಚಿತ್ತರಾಗಿ ಓದಿದರು. ಓದಿ ಆದ ಮೇಲೆ ಲಕೋಟೆಯಲ್ಲಿದ್ದ ಮೂರು ಜಾತಕಗಳನ್ನು ಹೊರತೆಗೆದರು.

ಅಷ್ಟರಲ್ಲಿ ಗೋವಿಂದ ಬಂದ.

ಮಗನನ್ನು ಕಂಡೊಡನೆ ಶ್ರೀನಿವಾಸಯ್ಯ ಕೈಯಲ್ಲಿ ಇದ್ದುವನ್ನೆಲ್ಲ ಒತ್ತಟ್ಟಿಗಿಟ್ಟು, ಮೂಗಿನ ಮೇಲಿಂದ ಕನ್ನಡಕವನ್ನು ತೆಗೆದು ಮಡಚಿ, ಮಗನೊಡನೆ, "ಈತ ನಗರದಿಂದ ಬಂದಿದಾನೆ ; ವಿಷ್ಣುಮೂರ್ತಿಗಳು ಕಳಿಸಿದಾರೆ," ಎಂದರು.

ಗೋವಿಂದ ಜಮಖಾನದ ಮೇಲೆ ಕುಳಿತಿದ್ದ ಯುವಕನನ್ನು ನೋಡಿ, "ಏನೋ ಗಜಾನನ ? ಯಾವಾಗ್ಬಂದೆ ಊರಿಂದ ?" ಎಂದು ಕೇಳಿದ.

"ನಮಸ್ಕಾರ, ಗೋವಿಂದರಾವ್. ನಿನ್ನೆ ಬಂದೆ," ಎಂದು ಗಜಾನನ ಉತ್ತರಿಸಿದ.

ಪ್ರತಿವಂದನೆ ಮಾಡುವ ಗೊಡವೆಗೆ ಹೋಗದೆ ಗೋವಿಂದನೆಂದ:

"ಇವತ್ತು ನೀನು ಬರಬಹುದೂಂತ ಲೆಕ್ಕ ಹಾಕಿದ್ದೆ."

"ಹ್ಯಾಗೆ?"

"ವಿಷ್ಣುಮೂರ್ತಿಗಳು ಹೇಳಿದ ಪ್ರಕಾರ ಮೊನ್ನೆ ತಪ್ಪಿದರೆ ನಿನ್ನೆ ನೀನು ಬರಬೇಕಾಗಿತ್ತು. ಬರಲಿಲ್ಲ. ಇವತ್ತು ಬೆಳಗ್ಗೆ ಕಾಗೆ ಒಂದೇ ಸಮ ಕಾ ಕಾ ಅನ್ತು. ನೀನು ಬಂದೇ ಬಿಟ್ಟೆ. ಎಂಟು ಗಂಟೆ ಬಸ್ನಲ್ಲಿ ಹೊರಟಿಯೊ?"

"ಹೌದು."

"ಅದರಲ್ಲೇ ಬರ್ತೀಯಾ ಅಂದ್ಕೊಂಡಿದ್ದೆ."

"ಮೊನ್ನೆನೇ ಬರ್ತಿದ್ದೆ. ಆದರೆ, ದಿನ ಚೆನ್ನಾಗಿಲ್ಲ ಅಂತ ಮಾವ ಮನೆಯಲ್ಲಿ ಎರಡು ದಿವಸ ಹೆಚ್ಚಿಗೆ ಉಳಿಸ್ಕೊಂಡ್ರು."

"ಇರಲಿ, ಬಿಡು. (ತಂದೆಯತ್ತ ಹೊರಳಿ) ಇವನ ಹೆಸರು ಗಜಾನನ, ಅಣ್ಣಯ್ಯ."

"ಗೊತ್ತಾಯ್ತು. ಹೇಳ್ದ," ಎಂದರು, ಮಗನ ಮಾತಿನ ವೈಖರಿಗೆ ಬೆರಗಾದ ಶ್ರೀನಿವಾಸಯ್ಯ.

ಗೋವಿಂದ ಜಾಕೀಟನ್ನೂ ಟೋಪಿಯನ್ನೂ ಗೋಡೆಗೂಟಕ್ಕೆ ತೂಗಹಾಕಿ, ಗಜಾನನಿಗೆ ಸಮೀಪವಾಗಿ ಕುಳಿತುಕೊಂಡು, "ವಾಪ್ಸು ಯಾವಾಗ ಬರೋಕೆ ಹೇಳಿದಾರೆ ವಿಷ್ಣುಮೂರ್ತಿಗಳು? " ಎಂದು ಕೇಳಿದ.

"ಸಾಧ್ಯವಾದರೆ ಇವತ್ತು ಸಾಯಂಕಾಲ, ಇಲ್ಲವಾದರೆ ನಾಳೆ," ಎಂದ ಗಜಾನನ.

"ಹೋಟೆಲಿನ ಕಟ್ಟಡ ಇತ್ಯಾದಿ ಇತ್ಯರ್ಥ ಮಾಡ್ಕೊಂಡೇ ಹೋಗ್ತೀಂತ ಕಾಣುತ್ತೆ."

"ಹೌದು, ಹೌದು."

"ಸರಿ, ನಾಳೆ ನಾನೂ ಬರ್ತೀನಿ. ಪಟೇಲರದೊಂದು ಕೆಲಸ ಇದೆ. ಮಾಡಿಸ್ಕೊಡ್ಬೇಕು."

ಪಟೇಲರ ಮಾತು ಬಂದೊಡನೆ ಗೋವಿಂದ ಶಾಮೇಗೌಡರ ಮನೆಗೆ ಹೋಗಿದ್ದ ನೆನಪಾಗಿ,

ಶ್ರೀನಿವಾಸಯ್ಯ ಮಗನನ್ನು ಕೇಳಿದರು :

"ಯಾಕಂತೆ ಶಾಮಣ್ಣ ಬರಹೇಳಿದ್ದು ?"

ಗೋವಿಂದ ತಾತ್ಸಾರದಿಂದ ಅಂದ :

"ಅದೇ ಆ ಮುನಿಯನ ವಿಷಯ, ಅಣ್ಣಯ್ಯ..."

"ಏನದು ?"

"ಕೊಲೆಗಡಕ ಬಂದಿದಾನೆ. ಅವನಿಗೆ ಪಟೇಲರು ರಕ್ಷಣೆ ಕೊಡಬೇಕೂಂತಿದಾರೆ. ಅದಕ್ಕೆ ನನ್ನ ಸಹಾಯಬೇಕಂತೆ."

ಶ್ರೀನಿವಾಸಯ್ಯನವರ ಹುಬ್ಬುಗಳು ಗಂಟಿಕ್ಕಿದುವು. ಅವರು ಧ್ವನಿ ಏರಿಸಿ ಅಂದರು :

"ಹಾಗಂದರೇನು ಗೋವಿಂದ ?"

"ಅಬ್ದುಲ್ಲ, ಅಣ್ಣಯ್ಯ. ಬಂದಿದಾನೆ. ಮುನಿಯನನ್ನ ಕತ್ತು ಹಿಸುಕಿ ಕೊಂದದ್ದು ಅವನೇ. ಈಗ ಕ್ಷಮೆ ಕೇಳ್ತಿದಾನೆ. ಹೊಲ ನಿಂಗಿಗೆ ಬಿಟ್ಕೊಡ್ತೀನಿ ಅಂತಾನೆ. ರಾಜೀಪತ್ರ ತಗೊಂಡು ನಗರಕ್ಕೆ ಹೋಗಿ ಕೋರ್ಟಿಂದ ಆ ಮೊಕದ್ದಮೇನ ನಾನು ತೆಗೆಸಿ ಹಾಕ್ಬೇಕಂತೆ."

ಮಗನ ಸ್ವರ ಏರಿದುದು ಕೇಳಿಸಿದೊಡನೆ ದೊಡ್ಡಮ್ಮ ಪಡಸಾಲೆಯ ಒಳಬಾಗಿಲಿಗೆ ಬಂದಿದ್ದರು. ಮೊಮ್ಮಗ ಹೇಳಿದುದೆಲ್ಲ ಅವರ ಕಿವಿಗೆ ಬಿತ್ತು.

ಗೋವಿಂದನ ಮಾತಿಗೆ ಉತ್ತರ ನೀಡಲು ಶ್ರೀನಿವಾಸಯ್ಯನೂ ಏನನ್ನೋ ಹೇಳಲು ದೊಡ್ಡಮ್ಮನೂ ಏಕಕಾಲದಲ್ಲಿಯೇ ಬಾಯಿ ತೆರೆದರು. ತಾಯಿಯ ಧ್ವನಿ ಕೇಳಿಸಿದೊಡನೆ, ಆ ಕಡೆಗೊಮ್ಮೆ ತಿರುಗಿ ಶ್ರೀನಿವಾಸಯ್ಯ ಸುಮ್ಮನಾದರು.

ದೊಡ್ಡಮ್ಮ ದೃಢವಾದ ಸ್ವರದಲ್ಲಿ ಪದಗಳನ್ನು ಬಿಡಿ ಬಿಡಿಯಾಗಿ ಆಡುತ್ತ ಅಂದರು :

"ಸಾರಾಸಾರ ವಿವೇಚನೆ ಇಲ್ದೆ ಹೀಗೆಲ್ಲ ಮಾತಾಡಬಾರ್ದು, ಗೋವಿಂದ. ದೆವ್ವ ಬಡಿದು ಮುನಿಯ ಸತ್ತ ಅಂತ ಹಳ್ಳಿಯ ಜನ ತಿಳಕೊಂಡಿದಾರೆ. ಅದಕ್ಕೆ ವ್ಯತಿರಿಕ್ತವಾಗಿ ನೀನು ಏನೂ ಹೇಳ್ಬಾರ್ದು. ತಿಳೀತೇ?"

ಗೋವಿಂದ ಅಧೀರನಾಗದೆ ವ್ಯಂಗ್ಯ ಬೆರೆತ ಸ್ವರದಲ್ಲಿ ಅಂದ :

"ಆಗಲಿ ದೊಡ್ಡಮ್ಮ. ಹಳ್ಳಿಗೆ ಪಟೇಲರು ದೊಡ್ಡವರು. ಅವರ ಮಾತು ಮೀರೋಕಾಗುತ್ತಾ?"

ಶ್ರೀನಿವಾಸಯ್ಯ ಸಿಟ್ಟಾಗಿ ಅಂದರು :

"ಬುದ್ಧಿ ಇಲ್ವೇನೋ ನಿಂಗೆ ?"

ದೊಡ್ಡಮ್ಮನೆಂದರು:

"ಶಾಮಣ್ಣನ ವಿಷಯದಲ್ಲಿ ನೀನು ಹೀಗೆಲ್ಲ ಹೇಳಬಾರ್ದು, ಗೋವಿಂದಾ. ಅಬ್ದುಲ್ಲ ಪಾಪ ಕಾರ್ಯ ಮಾಡಿದ್ರೆ ದೇವರು ನೋಡ್ಕೋತಾನೆ. ಶಾಮಣ್ಣ ಹೇಳಿದ ಕೆಲಸ—ಆ ರಾಜೀಪತ್ರದ್ದು—ಮಾಡ್ಕೊಂಡ್ಬಾ. ಬೇಕಾದರೆ ಇವತ್ತೇ ಹೋಗು."

ಗೋವಿಂದ ನಿಟ್ಟುಸಿರುಬಿಟ್ಟ.

"ಮಾಡ್ಕೊಂಡ್ಬರೋಣ, ಅದಕ್ಕೇನು ? ಆದರೆ ಈಗಲೇ ಹೋಗ್ಬೇಕಾದ ಅಗತ್ಯವಿಲ್ಲ. ನಾಳೆ ಬೆಳಗ್ಗೆ ಗಜಾನನ ಜತೆ ಹೊರಡ್ತೀನಿ."

"ಹಾಗೇ ಮಾಡು, ಹಾಗೇ ಮಾಡು," ಎಂದರು ದೊಡ್ಡಮ್ಮ.

ಜಾತಕಗಳ ತುಲನೆಯ ಕೆಲಸ ಊಟವಾದಬಳಿಕ ನೆರವೇರಿಸಿದರಾಯಿತೆಂದು ಶ್ರೀನಿವಾಸಯ್ಯ ಎದ್ದರು.

ಮನೆಯಲ್ಲಿ ಅತಿಥಿ ಇರುವುದನ್ನು ಗಮನಿಸಿ ದೊಡ್ಡಮ್ಮ ಅಡುಗೆ ಮನೆಗೆ ಧಾವಿಸಿದರು. ಹೊರಗಿನಿಂದ ಬಂದವನ ಮುಂದೆ ಗೋವಿಂದ ಮುನಿಯನ ಕೊಲೆಯ ವಿಷಯ ಪ್ರಸ್ತಾಪಿಸಿದನಲ್ಲಾ ಎಂದು ಅವರಿಗೆ ಸ್ವಲ್ಪ ಕಸಿವಿಸಿ. ಆದರೆ, ವಿಷ್ಣುಮೂರ್ತಿಯ ಸಂಬಂಧಿಕ ಎಂದ ಮೇಲೆ ತಮಗೆ ಬೇಕಾದವನೇ, ದೊಡ್ಡದಲ್ಲ—ಎಂದು ಸ್ವಲ್ಪಮಟ್ಟಿಗೆ ಸಮಾಧಾನಪಟ್ಟುಕೊಂಡರು.

ಗೋವಿಂದ ಗಜಾನನನ ಕಡೆ ನೋಡಿ, ನಕ್ಕು, ಅಂದ :

"ನೋಡಿದಿಯಾ ನಮ್ಮ ಹಳ್ಳೀ ಸಮಾಚಾರ ? ಹ್ಯಾಗಿದೆ ?"

"ಪಟ್ಟಣದ ಸಮಾಚಾರ ಬೇರೆ, ಹಳ್ಳೀದು ಬೇರೆ. ಇನ್ನು ಹ್ಯಾಗೂ ಇಲ್ಲೇ ಇರ್ತೀನಲ್ಲ—"

"ಹುಂ. ಅದೇನು ಚೀಲದಲ್ಲಿ ? ವಿಷ್ಣುಮೂರ್ತಿಗಳು ಬಂದಾಗ ಹಣ್ಣು ತಂದಿದ್ರು."

ಗಜಾನನ ಧ್ವನಿ ತಗ್ಗಿಸಿ ಅಂದ :

"ಮಾವ ಬದಾಮ್ ಹಲ್ವದ ಎರಡು ಪೊಟ್ಟಣ ಕೊಟ್ಟಿದಾರೆ. ಒಂದನ್ನು ಪಟೇಲರಿಗೆ ಕೊಡಬೇಕಂತೆ; ಇನ್ನೊಂದು ಕೃಷ್ಣೇಗೌಡರಿಗಂತೆ. ನಿಮ್ಮನೆಗೆ ಕೊಡೋದು ಚೆನ್ನಾಗಿರೋಲ್ಲ ಅಂದ್ರು."

"ಹೌದಪ್ಪ. ನಮ್ಮ ಅಜ್ಜೀನ ಕಂಡೆಯಲ್ಲ. ಬಹಳ ಮಡಿ."

"ಪೊಟ್ಟಣದ ಜತೆ ಗೌಡರಿಗೆ ಕೊಡೋಕೆ ಮಾವ ಒಂದು ಕಾಗದ ಬರೆಸಿದಾರೆ."

"ಕಾಗದ ಯಾಕೆ? ಕೆಲಸವಿಲ್ಲ. ಎಲ್ಲಿ ತಾ—ಎಂಥ ಕಾಗದ ನೋಡೋಣ."

"ಮಾವ ಹೇಳಿದ್ದು. ನಾನು ಬರೆದು, ಸಹಿ ಹಾಕಿದ್ದು."

"ನೀನು ಅಕ್ಷರಸ್ಥ ಅಂತ ನನಗೆ ಗೊತ್ತು, ಕಣಯ್ಯ. ಕಾಗದ ತಾ."

ಗಜಾನನ ಅಂಗಿಯ ಜೇಬಿನಿಂದ ಲಕೋಟೆಯನ್ನು ತೆಗೆದು ಗೋವಿಂದನ ಕೈಗಿತ್ತ.

"ಅಂಟಿಸಿಲ್ಲ. ಗೋವಿಂದರಾಯರಿಗೆ ತೋರಿಸಿ ಪಟೇಲರಿಗೆ ಕೊಡು ಅಂತ ಮಾವನೇ ಹೇಳಿದಾರೆ."

ಗೋವಿಂದ ಕಾಗದವನ್ನು ಹೊರತೆಗೆದು ಓದಿದ :

॥ ಶ್ರೀ ॥

ಭಾಗ್ಯನಗರ

ತಾ ॥............

ಕಣಿವೇಹಳ್ಳಿ ಪಟೇಲರಾದ ಮಹಾರಾಜೇಶ್ರೀ ಶಾಮೇಗೌಡರವರ ಸನ್ನಿಧಾನಕ್ಕೆ—

ಭಾಗ್ಯನಗರ ನ್ಯೂಗಣೇಶಭವನದ ಎಂ. ಗಜಾನನರಾಯನು ಮಾಡುವ ಅರಿಕೆಗಳು. ತಮ್ಮ ಗ್ರಾಮದಲ್ಲಿ ಕಾಫಿ ಹೋಟ್ಲನ್ನು ನಾನು ತೆರೆಯುವ ಬಗ್ಗೆ, ನಮ್ಮ ನ್ಯೂಗಣೇಶ ಭವನದ ಒಡೆಯರಾದ ಶ್ರೀ ಟಿ. ಎನ್. ವಿಷ್ಣುಮೂರ್ತಿಗಳಿಗೆ ತಾವು ಸಮ್ಮತಿ ನೀಡಿರುವುದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಶ್ರಾವಣ ಮಾಸದಲ್ಲಿ ಹೋಟೆಲನ್ನು ತೆರೆಯಬೇಕೆಂದು ಉದ್ದೇಶಿಸಿದ್ದು, ತಾವು ಅದನ್ನು ಉದ್ಘಾಟಿಸಬೇಕಾಗಿ ಪ್ರಾರ್ಥಿಸುತ್ತೇನೆ. ಹಾಗೂ, ಹೋಟೆಲು ತೆರೆಯಲು ಗ್ರಾಮದ ಪಟೇಲರಾದ ತಾವು ಲೈಸೆನ್ಸನ್ನು ಕರುಣಿಸಬೇಕಾಗಿ ಬೇಡಿಕೊಳ್ಳುತ್ತೇನೆ. ಅದಕ್ಕೆ ತಗಲುವ ಫೀಸನ್ನು ಕೊಡುವುದಕ್ಕೆ

ನಾನು ಬದ್ಧನಿದ್ದೇನೆ.

ಇಂತಿ,

ತಮ್ಮ ವಿಧೇಯ,

**ಎಂ. ಗಜಾನನರಾವ್**

ಓದಿ, ಮಡಚಿ, ಲಕೋಟೆಗೆ ತುರುಕುತ್ತ ಗೋವಿಂದನೆಂದ :

"ಕೆಲಸವಿಲ್ಲ, ಅಂದೆ. ಹಳ್ಳಿಯ ಗೌಡನಿಗೆ ಇಷ್ಟೊಂದು ಗೌರವ ತೋರಿಸೋದಕ್ಕೆ ಅವನೇನು ಭಾಗ್ಯನಗರದ ಕಾರ್ಪೊರೇಷನ್ ಅಧಿಕಾರಿಯೆ? ವಿಷ್ಣುಮೂರ್ತಿಗಳು ಬರೆಸಿದಾರೆ ಅಂದ್ಮೇಲೆ ನನ್ನ ಆಕ್ಷೇಪವಿಲ್ಲ. ಕೊಡು, ಕೊಡು. ಆದರೆ ಲೈಸೆನ್ಸ್–ಹಣ ಇಂಥದ್ದೆಲ್ಲ ಇಲ್ಲಿ ಇಲ್ಲ. ಬದಾಮ್‌ಹಲ್ವವೇ ಫೀಸು."

"ಇರಲಿ ಬಿಡಿ, ಗೋವಿಂದರಾವ್. ನಮಗೇನೂ ನಷ್ಟ ಇಲ್ವಲ್ಲ."

"ಹಂ. ಹಲ್ವ ಹಳೇ ಸ್ಟಾಕೊ ಗಜಾನನ ?"

"ಛೆ! ಛೆ! ತಾಜಾ. ನಿನ್ನೆ ಸಾಯಂಕಾಲ ಮಾಡಿದ್ದು."

"ಸರಿ. ಹೋಟ್ಲಿಗೆ ಏನು ಹೆಸರಿಡ್ತೀಯಾ ?"

"ಯೋಚ್ನೆ ಮಾಡಿಲ್ಲ. ನೀವೇ ಒಂದು ಹೆಸರು ಸೂಚಿಸಿ."

"ನಾನಿಟ್ಟರೆ ನಿನ್ನ ಮಾವ ಒಪ್ಪಬೇಕಲ್ಲ ?"

"ನಾನು ಮಾವ ಅನ್ನೋದು ಗೌರವಕ್ಕೆ. ಇನ್ನು ಅವರು ನಿಜವಾದ ಮಾವ ನಿಮಗೆ ತಾನೇ ? ಅಳಿಯದೇವರು ಇಟ್ಟ ಹೆಸರು ಅಂದರೆ ಅದೇ ಇರಲಿ ಅಂತಾರೆ."

"ಗಜಾನನ ಭವನ ಅಂತಿಡು."

"ನನ್ನ ಹೆಸರೇ ಆಯಿತಲ್ಲ ?"

"ಹೋಗಲಿ. ವಿಘ್ನೇಶ್ವರ ಭವನ ಅಂತ ಕರಿ."

"ಅದಾಗ್ಬಹುದು."

"ಅಂತೂ ಗಜಾನನರಾಯರು ವಿಘ್ನೇಶ್ವರ ಭವನದ ಪ್ರೊಪ್ರೈಟರಾಗ್ತಾರೆ !"

"ಎಲ್ಲಾ ನಿಮ್ಮ ದಯದಿಂದ, ಇಲ್ಲಿ ಹೋಟ್ಲಿಡೋ ಹಾಗೆ ಮಾವನನ್ನು ಒತ್ತಾಯ ಪಡಿಸಿದೋರು ನೀವು. ಆದರೆ ಒಂದೇ ಸಂದೇಹ—"

"ಏನು?" "ಮಗಳನ್ನ ನಿಮಗೆ ಕೊಡೋದು ತೀರ್ಮಾನವಾದ್ಮೇಲಷ್ಟೇ ಈ ಹಳ್ಳೀಲಿ ಹೋಟೆಲಿಡಿಸೋ ವಿಚಾರ ಮಾವನಿಗೆ ಒಪ್ಪಿಗೆಯಾಯ್ತೇ ಅಂತ..."

"ಹೇಗೂ ಇರಲಿ, ನಿನಗೆ ಇದರಿಂದ ಅನುಕೂಲವಾಯ್ತೋ ಇಲ್ಲವೋ?"

"ಆಯ್ತು, ಆಯ್ತು!"

"ಸರಿ, ಮತ್ತೆ."

"ಪಟೇಲರಲ್ಲಿಗೆ ಯಾವಾಗ ಹೋಗೋಣ ?"

"ಅವನೀಗ ರಾಜೀಪತ್ರ ಬರಿಸ್ತಾ ಇದಾನೆ. ಹೋದರಾಯ್ತು ಊಟವಾದ್ಮೇಲೆ."

"ಹೂಂ. ನಿಮ್ಮ ತಂದೆಯವರು ಜಾತಕಗಳ ಕೆಲಸ ಮುಗಿಸೋ ಹೊತ್ತಿಗೆ ಪಟೇಲರನ್ನೂ ಕೃಷ್ಣೇಗೌಡರನ್ನೂ ನೋಡಿ ಬಂದ್ಬಿಡೋಣ."

"ಪಟೇಲ್ನಲ್ಲಿಗೆ ನೀನೊಬ್ನೇ ಹೋಗ್ಬಾ. ಆಳು ಮನೆ ತೋರಿಸ್ತಾನೆ. ಕೃಷ್ಣೇಗೌಡನಲ್ಲಿಗೆ

ನಾನೂ ಬರ್ತೀನಿ."

"ನೀವು ಹೇಗೆ ಹೇಳ್ತೀರೋ ಹಾಗೆ."

ಗೋಪಾಲನ ಮಗ ಶ್ರೀಪಾದ ಅಂಬೆಗಾಲಿಟ್ಟುಕೊಂಡು ಬಂದ.

"ಬಾಪ್ಪ, ಬಾ," ಎಂದ ಗಜಾನನ, ಮಗುವನ್ನು ಕರೆಯುತ್ತ.

"ನಿಮ್ಮ ಅಣ್ಣನ್ದೂಂತ ಕಾಣುತ್ತೆ; ಏನು ಹೆಸರು ?"ಎಂದ, ಗೋವಿಂದನತ್ತ ತಿರುಗಿ.

ಅಪರಿಚಿತನ ಮುಖ ಕಂಡು ಮಗು ಅಳತೊಡಗಿತು.

"ಗೋಪಾಲನ್ದು. ಶ್ರೀಪಾದ ಅಂತ ಹೆಸರಿಟ್ಟಿದ್ದಾರೆ. ಅಂದ ಹಾಗೆ ನಿನ್ನ ಮಗುವಿನ ನಾಮಕರಣ ಆಯ್ತು, ಅಲ್ವೆ ?"

ಮಗುವನ್ನುದ್ದೇಶಿಸಿ, "ಅಳಬೇಡಪ್ಪ. ಬಾ, ಬಾ," ಎಂದು, "ಅವತ್ತೇ ಆಯ್ತು. ವಿನೋದಾಂತ ಇಟ್ಟಿದೆ." ಎಂದು ನುಡಿದ ಗಜಾನನ.

"ಆಧುನಿಕ ಹೆಸರು. ಚೆನ್ನಾಗಿದೆ. ನಮ್ಮದೆಲ್ಲ ನೋಡಿದಿಯೊ ಇಲ್ವೊ. ಗೋಪಾಲ, ಗೋವಿಂದ, ಗೋರಕ್ಷಕಾ..."

ಗೋವಿಂದನ ಮಾತಿನ ರೀತಿಯನ್ನು ಅನುಸರಿಸಿ ಗಜಾನನನೆಂದ :

"ನಿಮ್ಮಲ್ಲಿ ಹೇಳೋದಕ್ಕೇನು ? ನನ್ನ ಅತ್ತೆಮನೇಲಿ ಸುಬ್ಬಲಕ್ಷ್ಮೀಂತ ಇಟ್ಟಿದ್ರು. ಊರು ಬಿಟ್ಟ ತಕ್ಷಣ ನಾವಿದನ್ನು ವಿನೋದಾ ಅಂತ ಮಾಡಿದ್ವಿ."

"ಹೊ ಹ್ಹೊ ! ವಿಘ್ನೇಶ್ವರ ಭವನಕ್ಕಿಂತಲೂ ಸುಖವಿಲಾಸ ಹ್ಯಾಗೊ ? ಚೆನ್ನಾಗಿ ರೊಲ್ವೇನಯ್ಯ ?"

"ಊಹೂಂ, ಕಣಿವೇಹಳ್ಳಿ ಕಾಮಿನೀಪುರ ಆಗೋವರೆಗೂ ನನ್ನ ಹೋಟ್ಲು ವಿಘ್ನೇಶ್ವರ ಭವನವೇ !"

"ಭೇಷ್! ಭೇಷ್ !"

ಅಳುತ್ತಿದ್ದ ಶ್ರೀಪಾದ ಸುಮ್ಮನಾಗಿ ಜಗಲಿಯ ತನಕವೂ ಹೋದ. ಅಲ್ಲಿಂದ ಹಿಂತಿರುಗಿದ. ದಾರಿಯಲ್ಲಿ, ಅಪರಿಚಿತ ಮತ್ತೆ ತನ್ನನ್ನು ನೋಡಿ ಮಂದಸ್ಮಿತನಾದುದನ್ನು ಕಂಡು, ಪುನಃ ಅಳಲಾರಂಭಿಸಿದ.

ಮಗನನ್ನು ಹುಡುಕಿಕೊಂಡು ಭಾಗೀರಥಿ ಬಂದಳು.

"ಇವನ ಹೆಸರು ಗಜಾನನ, ಅತ್ತಿಗೆ. ವಿಷ್ಣುಮೂರ್ತಿಗಳ ಸಂಬಂಧಿಕ. ಇಲ್ಲಿ ಹೋಟ್ಲಿ ಡೋದು ಇವನೇ," ಎಂದ ಗೋವಿಂದ.

ಮಗುವನ್ನೆತ್ತಿಕೊಂಡು ಭಾಗೀರಥಿ, ಬೆಳ್ಳಗೆ ನೀಳವಾಗಿ ಎತ್ತರಕ್ಕಿದ್ದ ಸ್ಫುರದ್ರೂಪಿ ಯುವಕನನ್ನು ನೋಡಿ, "ಹೌದಾ ?" ಎಂದು ಹೇಳಿ, ನೆಟ್ಟಗೆ ಒಳಗೆ ಹೊರಟು ಹೋದಳು.

ಮುಖದ ಮೇಲೆ ಮಂದಹಾಸ ಮೂಡಿಸಬೇಕೆಂದು ಅವಳು ಮಾಡಿದ ಯತ್ನ ವಿಫಲ ವಾಯಿತು.

ಗೋವಿಂದ ಗಜಾನನನ್ನು ಎಬ್ಬಿಸಿ ಹೊರಗಿನ ಕೊಠಡಿಗೆ ಹೋದ. ಪದ್ಮನಾಭ ನದಿಯತ್ತ ತಿರುಗಾಡುತ್ತ ಹೋದವನು ಹಿಂದಿರುಗಿರಲಿಲ್ಲ. ಅಲ್ಲಿದ್ದ ಕಥೆ ಪುಸ್ತಕಗಳ ಸಂಗ್ರಹವನ್ನು ನೋಡಿ ಗಜಾನನ, "ಇದೆಲ್ಲಾ ಯಾರದು ? ನಿಮ್ಮದೋ, ತಮ್ಮನದೋ ?" ಎಂದು ಕೇಳಿದ.

ಗೋವಿಂದನೆಂದ :

"ಅದೆಲ್ಲಾ ಪದ್ಮನಾಭನ ಡಿಪಾರ್ಟ್‌ಮೆಂಟು. ಆ ಮೂಲೇಲಿ ಹಳೇ ದಿನಪತ್ರಿಕೆಗಳು ಇವೆಯಲ್ಲ—ಆ ಆಸ್ತಿ ಮಾತ್ರ ನನ್ನದು. ನೀನು ಹೋಟ್ಲು ಶುರುಮಾಡಿದ್ಮೇಲೆ ನಿನಗೆ ತಿಂಡಿ ಕಟ್ಟೋಕೆ ಬೇಕಲ್ಲ. ಪ್ರತಿ ತಿಂಗಳೂ ಹಳೇ ಪೇಪರ್ ನಿನಗೇ ಮಾರ್‍ತೀನಿ."

"ಹೌದೋ ಗೋವಿಂದರಾವ್ ? ನಾನು ನಗರದಿಂದ ಸೈಕಲು ತಂದರೆ ಹ್ಯಾಗೆ ? ಬೆಳಗ್ಗಿನ ಮೊದಲ್ನೇ ಬಸ್ಸು ನಗರದಿಂದ ಬರೋ ಟೈಮಿಗೆ ಸೈಕಲ್ ಮೇಲೆ ಒಬ್ಬ ಹೋದ್ರೆ ಪೇಪರ್‌ಗೀಪರ್ ಎಲ್ಲಾ ತರಬಹುದು."

"ಒಳ್ಳೇ ಯೋಚನೆ—ಖಂಡಿತ ತಗೊಂಡ್ಬಾ. ಈಗಿರೋ ಕಾಲುದಾರೀಲಿ ಸೈಕಲ್ ಹೋಗುತ್ತೆ. ಗಾಡಿ ಟಾಂಗಾ ಓಡಾಡೋ ಹಾಗೆ ಆ ಹಾದೀನ ಆ ಮೇಲೆ ಅಗಲ ಮಾಡಿಸಿದರಾಯ್ತು."

...ಊಟದ ಹೊತ್ತಿಗೆ ಪದ್ಮನಾಭ ಬಂದ. ಅಲ್ಲಲ್ಲಿ ಉಳುಮೆ ಆರಂಭವಾಗಿದ್ದ ಹೊಲಗಳನ್ನು ದಾಟಿ ನದೀ ದಂಡೆಯುದ್ದಕ್ಕೂ ಹೋಗಿ, ನಿರ್ಜನವಾಗಿದ್ದ ಕಡೆ ಸ್ವಲ್ಪ ಹೊತ್ತು ಕುಳಿತು, ಒಂದೆರಡು ಸಿಗರೇಟು ಬೂದಿಮಾಡಿದ್ದ.

'ಬೇಸಗೆಯ ಈ ಜೈಲುವಾಸ ಸಾಕಾಯ್ತು. ಇನ್ನು ಹೆಚ್ಚು ದಿವಸ ಇಲ್ಲಿರಲಾರೆ,' ಎಂದುಕೊಳ್ಳುತ್ತ, ಹಿಂದಿರುಗಿದ್ದ.

ಮನೆಯಲ್ಲಿ ಗಜಾನನನ ಪರಿಚಯವಾದಾಗ ಆತನೆಂದ :

"ಗಣೇಶ ಭವನಕ್ಕೆ ಒಂದೆರಡು ಸಲ ಬಂದಿದ್ದೆ. ಆದರೆ ನಿಮ್ಮನ್ನು ನೋಡಿದ ನೆನಪಿಲ್ಲ. ಅಂತೂ ನಾಗರಿಕತೇನ ಹೆಡೆಮುರಿ ಕಟ್ಟಿ ಕಣಿವೇಹಳ್ಳಿಗೆ ತರ್‍ತಿದೀರಿ. ಸಂತೋಷ !"

"ಗಜಾನನ, ಪದ್ಮ ರಜಾದಲ್ಲಿ ಇಲ್ಲಿಗೆ ಬಂದರೆ ಹೊತ್ತು ಕಳೀಲಾಗದೆ ಒದಲಾಡ್ತಾನೆ. ಮಸಾಲೆದೋಸೆ ಅಂದರೆ ಅವನಿಗೆ ಪಂಚಪ್ರಾಣ, ನಿನ್ನ ಹೋಟ್ಲು ಶುರು ಆದ್ಮೇಲೆ ತೊಂದರೆ ಇರೋಲ್ಲ."

"ಬೇಜಾರು ಹೋಗ್ನೋರೇ ಬಂದ್ಮೇಲೆ ದೋಸೆ ಯಾತಕ್ಕೆ ?" ಎಂದ ಗಜಾನನ ನಗುತ್ತ.

"ಗೊತ್ತಾಗ್ಲಿಲ್ಲ ನೀವು ಹೇಳಿದ್ದು," ಎಂದ ಪದ್ಮನಾಭ.

"ಮನೇಗೆ ಬಂದ್ಮೇಲೆ ಅವರೇ ಹೇಳ್ಕೊಡ್ತಾರೆ !"

ಒರಟು ಹಾಸ್ಯ.

ಪದ್ಮನಾಭ ಹುಬ್ಬುಗಳನ್ನು ಗಂಟಿಕ್ಕಿದ.

"ಮದುವೆ ಏರ್ಪಾಟು ಬೇರೆ ಇಲ್ಲಿ ಆಗ್ತಿದೆಯೊ ?" ಎಂದು ನುಡಿದು, ಪಡಸಾಲೆಗೆ ಹೋದ.

ಗೋಪಾಲ ಹೊಲಗಳಿಂದ ಬಂದ.

"ಬಿಸಿಲು ಜೋರಾಗಿದೆ. ಇವತ್ತೂ ಮಳೆ ಬರೋ ಹಾಗಿದೆ," ಎಂದ.

"ಅವನು ಗೋಪಾಲ, ನಮ್ಮ ಅಣ್ಣ," ಎಂದು ಗೋವಿಂದ ಗಜಾನನನಿಗೆ ಹೇಳಿದನೇ ಹೊರತು, ಪರಿಚಯ ಮಾಡಿಸಿಕೊಡುವ ಗೊಡವೆಗೆ ಹೋಗಲಿಲ್ಲ.

ಊಟವಾಯಿತು.

ಶ್ರೀನಿವಾಸಯ್ಯ ವಿಶ್ರಾಂತಿಯ ಯೋಚನೆಯನ್ನು ಬಿಟ್ಟುಕೊಟ್ಟು ಜಾತಕಗಳ ತುಲನೆಗೆ ಕುಳಿತರು.

## ೧೪

ಗೋವಿಂದ ಆಳು ಬೀರನನ್ನು ಕರೆದು ಅಂದ :

"ಈ ಸೋಮಿಯೋರಿಗೆ ಪಟೇಲರ ಮನೆ ತೋರ್ಸು. ಅಲ್ಲಿ ಇವರ ಕೆಲಸ ಆದ್ಮೇಲೆ ಕೃಷ್ಣೇಗೌಡರಲ್ಲಿಗೆ ಕರಕೊಂಡ್ಬಾ."

ಗಜಾನನನ ಕಡೆ ತಿರುಗಿ ಗೋವಿಂದನೆಂದ :

"ಮಹಾಪ್ರಭುಗಳಿಗೆ ಖಿಲ್ಲತ್ತು ಸಲ್ಲಿಸಿಬಾರಪ್ಪ, ನಾನು ಕೃಷ್ಣೇಗೌಡನಲ್ಲಿರ್ತೀನಿ."

ಪಟೇಲರನ್ನು ಮಹಾಪ್ರಭು ಎಂದು ಗೋವಿಂದ ಪರಿಹಾಸ್ಯ ಮಾಡ್ತಿದುದು ಕೇಳಿಸುವಷ್ಟು ಸಮೀಪದಲ್ಲಿ ಶ್ರೀನಿವಾಸಯ್ಯ ಇರಲಿಲ್ಲ. ಪದ್ಮನಾಭ ಇದ್ದ. ಆದರೆ ಆತ ಅಣ್ಣನ ಹಾಗೂ ಗಜಾನನನ ಮಾತುಕತೆಯಲ್ಲಿ ಆಸಕ್ತಿ ತೋರಲಿಲ್ಲ.

"ಸರಿ, ಗೋವಿಂದರಾವ್," ಎಂದು ಗಜಾನನ, ಪೊಟ್ಟಣಗಳಿದ್ದ ಚೀಲ ಎತ್ತಿಕೊಂಡು, ಬೀರನ ಹಿಂದೆ ಹೊರಟ.

ಆ ಚೀಲವನ್ನು ತಾನು ಮುಟ್ಟಬಾರದೋ ಏನೋ ಎಂಬ ಶಂಕೆಯುಂಟಾದುದರಿಂದ ಬೀರ "ಕೊಡಿ ಬುದ್ದೀ" ಎಂದು ಹೇಳಲು ಹೋಗಲಿಲ್ಲ.

ಗಜಾನನ ಹೋದ ಕೆಲ ನಿಮಿಷಗಳಲ್ಲಿ ಗೋವಿಂದ ದಿರಸು ಧರಿಸಿದ. ಆತ ತಲೆಬಾಗಿಲಿಗೆ ಬರುವುದಕ್ಕೆ ಸರಿಯಾಗಿ ವೆಂಕಟಪ್ಪನ ಆಗಮನವಾಯಿತು.

ಯಾರಿಗೆ ಎಷ್ಟು ಬೇಕೋ ಅಷ್ಟೇ ಗೌರವ ನೀಡುವವನು ಗೋವಿಂದ. ವೆಂಕಟಪ್ಪನನ್ನು ಒಳಗೆ ಬರಹೇಳುವ, ಕುಳಿತುಕೋ ಎನ್ನುವ ಗೋಜಿಗೆ ಹೋಗದೆ, ಬಾಗಿಲಲ್ಲೇ ನಿಂತು ಆತ ಕೇಳಿದ :

"ರಾಜೀಪತ್ರ ಬರೆದಾಯ್ತೆ, ವೆಂಕಟಪ್ಪನೋರೆ ?"

ಹಳೆಯದಾಗಿ ಒಣಗಿದ್ದ ನೀಳ ಲಕೋಟೆಯೊಂದನ್ನು ಗೋವಿಂದನ ಕೈಯಲ್ಲಿಡುತ್ತ ವೆಂಕಟಪ್ಪನೆಂದ:

"ಆಯಿತ್ರಾ. ಸರಿಯಾಗೈತೋ ಇಲ್ವೋ ಒಸಿ ನೋಡಿ."

ಲಕೋಟೆಯನ್ನು ಮುಚ್ಚಿರಲಿಲ್ಲ.

"ನೀವು ಬರೆದಿದೀರಿ ಅಂದ್ಮೇಲೆ ಸರಿಯಾಗಿಲ್ದೆ ಇರುತ್ತಾ ?" ಎನ್ನುತ್ತ, ಮಡಚಿದ್ದ ಹಾಳೆಯನ್ನು ಬಿಡಿಸಿ ಗೋವಿಂದ ಓದಿದ.

ಅವಸರವಾಗಿ ಕಣ್ಣೋಡಿಸಿ, ಪುನಃ ಮಡಚಿ ಲಕೋಟೆಯೊಳಗಿರಿಸಿ, "ಸಾಕು, ಇಷ್ಟು ಸಾಕು. ಯಾವ ಕಡೆ ನೀವು ?" ಎಂದ.

"ಮನೆಗೇ," ಎಂದ ವೆಂಕಟಪ್ಪ.

"ಒಂದ್ನಿಮಿಷ. ಇದನ್ನ ಒಳಗಿಟ್ಟು ಬರ್ತೀನಿ," ಎಂದು ನುಡಿದು, ಗೋವಿಂದ ಕೊಠಡಿಗೆ ಹೋಗಿ, ಲಕೋಟೆಯನ್ನು ತನ್ನ ಬ್ರೀಫ್ ಕೇಸಿನೊಳಕ್ಕೆ ತುರುಕಿ, ಮರಳಿ, ಅಂಗಳಕ್ಕಿಳಿದ.

ದಾರಿಯಲ್ಲಿ ವೆಂಕಟಪ್ಪನೆಂದ :

"ಈಗ ಒಬ್ಬರು ಸಿಕ್ಕಿದ್ರು, ಗೋವಿಂದಪ್ಪ. ಬೆಳ್ಳಗಿದ್ರು. ಯಾವೂರಾಯ್ತು ?

ಅಂತ ಕೇಳ್ದೆ. ನಗರ ಅಂದ್ರು. ಅವರೇನಾ ನಿಮ್ಮನೆಗೆ ಆಗ ಬಂದೋರು ?"

"ಹೂಂ. ಅವರೇನೇ. ನಗರದ ನ್ಯೂ ಗಣೇಶ ಭವನದ ಮಾಲಿಕರ ಸಂಬಂಧಿಕ."

"ಓ, ಅಂಗಾ ? ಓಟ್ಲಿಡೋದು ಆಯಪ್ಪನೇನಾ ?"

"ಹೌದು."

ಮೌನದ ನಡಿಗೆ ನಾಲ್ಕು ಹೆಜ್ಜೆ. ಬಳಿಕ ಗೋವಿಂದ :

"ನಮ್ಮ ಹಳ್ಳೀಲಿ ಹೋಟ್ಲು ಶುರುಮಾಡೋ ವಿಷಯ ಜನ ಏನಂತಾರೆ ವೆಂಕಟ ಪ್ನೋರೆ ?"

"ಓಟ್ಲಿ ರುಚಿ ಜನಕ್ಕೆ ಏನು ಗೊತ್ತೈತೆ, ಗೋವಿಂದಪ್ಪ? ಶುರು ಆಗ್ಲಿ. ಅಮ್ಯಾಕೆ ನೋಡಾನ. ಅಂದ ಹಾಗೆ—"

"ಏನು ?"

"ಓಟ್ಲಲ್ಲಿ ಆಯಪ್ಪ ಬೀಡಿ ಸಿಗರೇಟೆಲ್ಲ ಮಡಗ್ತಾನಂತಾ ?"

ಆ ಪ್ರಶ್ನೆಗೆ ಯಾವ ವಿಚಾರ ಹಿನ್ನೆಲೆಯಾಗಿತ್ತೆಂಬುದು ಗೋವಿಂದನಿಗೆ ಹೊಳೆಯಿತು.

"ಗೊತ್ತಿಲ್ಲ, ಅದೇನೇನು ಮಡಗ್ತಾರೋ..." ಎಂದ.

ವೆಂಕಟಪ್ಪ ಕತ್ತು ತುರಿಸಿದ. ಬಿಸಿಯುಸಿರು ಬಿಟ್ಟ. ಅವುಡು ಕಚ್ಚಿದ. ಯಾಚನೆಯ ಹೊರತು ಬೇರೆ ಉಪಾಯವಿಲ್ಲ ಎನ್ನುವ ನಿರ್ಧಾರಕ್ಕೆ ಬಂದ.

"ಹಂಗಲ್ಲ ಗೋವಿಂದಪ್ಪ. ಸಣ್ಣಪುಟ್ಟ ಸಾಮಾನುಗೋಳು ಈಗ ನಮ್ಮಂಗ್ಡೀಯಾಗೇ ಸಿಕ್ತವೆ. ಅದೇ ಸಾಮಾನುಗೋಳ ಯಾಪಾರ ಓಟ್ಲಾಗೂ ಮಾಡೋದು ಚೆಂದಾಕಿರ್‍ತದಾ ?" ಎಂದು ರಾಗವೆಳೆದ.

"ಆದ್ರೆ, ಹೋಟ್ಲು ಅಂದ್ಮೇಲೆ ಕಾಫಿ ಕುಡ್ಯೋರು ಸಿಗರೇಟು ಗಿಗರೇಟು ಕೇಳಿಯೇ ಕೇಳ್ತಾರೆ. ಅಲ್ವಾ ?"

"ಆಯಪ್ಪಗೆ ಒಸಿ ಯೋಳ್ಬೋಡಿ ಗೋವಿಂದಪ್ಪ."

"ಆಗಲಿ, ಹೇಳೋಣ. ಹೋಟ್ಲಿನವರು ಸೋಪು ಗೀಪು ಇಡಲಾರ್ರು. ಆದರೆ ಸಿಗರೇಟಿನ ವಿಷಯ ಹ್ಯಾಗೊ ?"

"ಅದೆಲ್ಲ ನಂಗೊತ್ತಿಲ್ಲ. ಅಳ್ಳಿಯಾಗೆ ದ್ವೇಷ ಕಟ್ಕೊಂಡು ಓಟ್ಲು ಮಡಗೋಕಾಗ್ತದಾ? ಅಂಗೂ ಆಟ ಮಾಡಿದ್ರೆ ಇವತ್ತಿನ ಗಂಟ ಒಗ್ಗಟ್ಟಾಗಿದ್ದಳ್ಳೀಲಿ ಪಾರ್ಟಿ ಆದಾತು."

ಯಾಚಕ ದಂಡಪಾಣಿಯಾಗಿ ಮಾರ್ಪಟ್ಟಿದ್ದ.

ಗೋವಿಂದ ಒಳಗಿಂದೊಳಗೆ ನಕ್ಕ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಪಾರ್ಟಿ ಗಳಿರಬೇಕು. ಅವನಿಗೆ ಅಷ್ಟು ತಿಳಿಯದೆ ? ಅಂತಹ ಏರ್ಪಾಟಿಗೆ ವೆಂಕಟಪ್ಪ ಸಹಾಯಕನಾಗುವು ದಾದರೆ ಬೇಡ ಎನ್ನುವುದುಂಟೆ ?

ಆದರೆ ಬಹಿರಂಗವಾಗಿ ನೊಂದವನಂತೆ ನಟಿಸಿ, ಗೋವಿಂದ ನುಡಿದ :

"ಇಷ್ಟು ಸಣ್ಣದಕ್ಕೆ ಪಾರ್ಟಿ ಮಾತೆಲ್ಲ ಯಾಕೆ ವೆಂಕಟಪ್ನೋರೆ ? ಬರೇ ಹೋಟ್ಲೋ, ದಿನಸಿ ಅಂಗಡಿ ಇಡೋ ಯೋಚ್ನೆ ಏನಾದರೂ ಇದೆಯೋ ಅಂತ ಗಜಾನನನ್ನು ಕೇಳಿ ನೋಡ್ತೀನಿ."

"ನಾನು ಯೋಳಿದ್ದು ಮನಸ್ನಾಗಿಟ್ಕೊಳ್ಳಿ."

"ಓಹೋ. ಅದಕ್ಕೇನಂತೆ ? ಸ್ಪಷ್ಟವಾಗಿ ಅವನಿಗೆ ಹೇಳ್ತೀನಿ,"

ದಾರಿ ಕವಲೊಡೆದಿದ್ದಲ್ಲಿಗೆ ಅವರು ತಲಪಿದರು.

"ಹೋಗ್ತೀರಾ ಹಾಗಾದರೆ ?" ಎಂದ ಗೋವಿಂದ.

"ನೀವೆಲ್ಲಿಗೆ? ಕೃಷ್ಣೇಗೌಡರಲ್ಲಿಗೋ ?"

ಸಾಧ್ಯವಿದ್ದರೆ, ತಾನು ಹೊರಟುದು ಎಲ್ಲಿಗೆ ಎಂಬುದನ್ನು ಹೇಳಬಾರದು —ಎಂದಿದ್ದ ಗೋವಿಂದ.

ಈಗ ಅನಿವಾರ್ಯವಾಗಿ, "ಹೌದು," ಎಂದ.

ಅದು ಸಾಮಾನ್ಯ ವಿಷಯ ಎನ್ನುವಂತೆ, ಅದನ್ನು ಮರೆಸುವುದಕ್ಕಾಗಿ ಗೋವಿಂದ ಕೇಳಿದ:

"ಅಬ್ದುಲ್ಲನಿಂದ ದುಡ್ಡು ಬಂತೆ ನಿಮಗೆ ?"

"ಶಾಮಣ್ಣೋರು ಆ ಜವಾಬ್ದಾರಿ ವಹಿಸ್ಕೊಂಡವರೆ."

"ಈ ರಾಜಿ ಗೀಜಿ ಇರದೇ ಇದ್ದಿದ್ರೆ, ನಿಂಗಿ ಹಣ ವಾಪ್ಸು ಕೊಡಲಾರದೆ ಹೊಲಾನ ನಿಮಗೆ ಕೊಟ್ಬಿಡ್ತಿದ್ಲು ಅನ್ಸುತ್ತೆ."

"ಓಗ್ಲಿ, ಬಿಡಿ."

"ಅದಷ್ಟೆ, ಅದಷ್ಟೆ. ಲೇವಾದೇವಿ ಮಾಡೋರ್‍ಗೇನು–ಹೊಲ ಮಾಡೋ ಮನಸ್ಸಿದ್ದರೆ ಸಿಕ್ಕಿಯೇ ಸಿಗುತ್ತೆ."

"ಅಹ್ಹ ! ಗೋವಿಂದಪ್ಪ, ನಿಮ್ಮ ತಾತ ಹೊಲ ಮಾಡಿದ್ದು ಹೆಂಗೆ ಗೊತ್ತೈತೊ ?"

"ಓಹೋ. ಲೇವಾದೇವಿ ಮಾಡುವವರ್‍ಗೂ ಜಮೀನಿಗೂ ನಂಟು ಅಂತ ನಮ್ಮ ಮನೆತನದ ಅನುಭವದಿಂದ್ಲೇ ಹೇಳಿದ್ನಪ್ಪಾ."

"ಏನೇ ಅನ್ನಿ. ನಿಮ್ಮ ತಾತ ರುಸ್ತುಂ ಮನುಷ್ಯ."

"ಯಾಕೆ ? ನಾವು ಕಳಪೆ ಅಂತಲೋ ?"

"ಉಂಟೆ ? ಚಿಕ್ಕ ಉಡುಗ್ನಾಗಿದ್ದಾಗ್ಲಿಂದ ನೋಡ್ತಾ ಬಂದಿಲ್ವೆ ಗೋವಿಂದಪ್ಪ ? ಈಗ ಓಗಿ ಬನ್ನಿ ಅಂತ ನಾನೇ ಮಾತಾಡಿಸ್ತಾ ಇವ್ನಿ."

"ಅಂತೂ ಪಟೇಲ್ರು ಅಬ್ದುಲ್ಲನಿಗೆ ರಕ್ಷಣೆ ಕೊಟ್ಟರೂಂತಾಯ್ತು."

"ಪಾಪ. ಎಲ್ಲಾದರೂ ಬದುಕ್ಕೊಳ್ತಾನೆ."

"ಹೊಲ ಬಿಟ್ಕೊಟ್ನೊ?"

"ಅಳ್ಳೀ ಒರಗಡೆ ಒಂದು ಗುಡ್ಲು ಕಟ್ತಾನೆ, ಇವತ್ತು. ನಾಳೆ ಅಲ್ಲಿಗೆ ಒಂಟೋಗ್ತಾನೆ."

"ಸರಿ, ಬರ್‍ಲಾ ?"

"ಊಂ ಗೋವಿಂದಪ್ಪ."

ವೆಂಕಟಪ್ಪ ತನ್ನ ಮನೆಯ ದಾರಿ ಹಿಡಿದ. ಬಾಯಲ್ಲಿ ಉಗುಳಿತ್ತು. ಥೂ ಎಂದು ಅದನ್ನು ಹೊರಕ್ಕೆ ತಳ್ಳಿದ. ಅವನ ಹುಬ್ಬುಗಳು ಗಂಟಿಕ್ಕಿಕೊಂಡು, ಹಾದಿಯುದ್ದಕ್ಕೂ ಹಾಗೆಯೇ ಉಳಿದುವು.

ಗೋವಿಂದ, 'ಎಲ್ಲಾ ಕ್ರಮ ಪ್ರಕಾರ ಆಗ್ತಾ ಇದೆ. ಅಣ್ಣಯ್ಯನಾಗಲೀ ದೊಡ್ಡಮ್ಮನಾಗಲೀ ಅಡ್ಡಿ ಬರದಿದ್ರೆ ಸಾಕು' ಎಂದುಕೊಳ್ಳುತ್ತ, ಈ ಜಾತಕ ನೋಡೋದೊಂದು ಗೋಳು, ಏನಿದ್ದರೂ ಕಾಮಾಕ್ಷಿಯೇ ನನಗಿಷ್ಟ ಅಂತ ಹೇಳಿಬಿಡ್ಬೇಕು —ಎಂದು ಯೋಚಿಸುತ್ತ, ಕಾಮಾಕ್ಷಿಯ ಲಾವಣ್ಯವನ್ನೂ ಮಾದಕ ನಗೆಯನ್ನೂ ಕಣ್ಣುಗಳನ್ನು ಆಕೆ ಕಿರಿದುಗೊಳಿಸಿ

ನೋಡುವ ಭಂಗಿಯನ್ನೂ ಮೆಲುಕು ಹಾಕುತ್ತ, ಕೃಷ್ಣೇಗೌಡರ ಮನೆಗೆ ನಡೆದ.........

....ಮನೆಗೆ ಬಂದ ಅಪರಿಚಿತ ಯುವಕನ ವಂದನೆಯನ್ನು ಶಾಮೇಗೌಡರು ಸ್ವೀಕರಿಸಿ, "ಏನಾಗ್ಬೇಕು ?" ಎಂದರು.

ಗಜಾನನ ತನ್ನ ಪರಿಚಯವನ್ನು ಹೇಳಿಕೊಂಡ.

"ಅಯ್ಯನೋರ ಮನೆಗೆ ಇವತ್ತು ಬಂದೋರು ನೀವೇನಾ ?"

"ಹೌದು."

"ಹುಂ."

ಗಜಾನನ ಚೀಲದಿಂದ ಒಂದು ಪೊಟ್ಟಣವನ್ನು ಹೊರತೆಗೆದು ಮುಂದಿರಿಸಿದ. ಶಾಮೇ ಗೌಡರು ಜಮಖಾನದ ಕಡೆಗೆ ಬೊಟ್ಟು ಮಾಡಿ, "ಕೂತ್ಕೊಳ್ಳಿ. ಇದೆಲ್ಲಾ ಯಾಕ್ತನ್ರೀರಿ ?" ಎಂದರು.

ಕುಳಿತುಕೊಳ್ಳುತ್ತ ಗಜಾನನ ಅಂದ:

"ಬದಾಮ್ ಹಲ್ವ. ಪ್ರೀತಿಯಿಂದ ಕೊಡೋ ಅಲ್ಪ ಕಾಣ್ಕೆ. ಸ್ವೀಕರಿಸ್ಬೇಕು."

ಅಂಗಳದಲ್ಲಿ ಬೀರನೊಡನೆ ಮಾತನಾಡುತ್ತ ಕರಿಯ ನಿಂತಿದ್ದ.

"ಕರಿಯ, ಅದನ್ನ ತಕೊಂಡೋಗಿ ಒಳಗ್ಕೊಡು," ಎಂದರು ಗೌಡರು, ಪೊಟ್ಟಣದತ್ತ ಬೊಟ್ಟು ಮಾಡಿ.

ಗಜಾನನನ್ನು ದಿಟ್ಟಿಸಿ ಅವರೆಂದರು :

"ಅಯ್ಯನೋರಲ್ಲಿ ಇಳಕೊಂಡಿದೀರಿ ಅಂದ್ಮ್ಯಾಕೆ ಊಟ ಆಗಿರ್ಬೌದು."

"ಹೌದು. ಆಗಿದೆ."

"ಆಸರೆಗೆ ಏನು ತಕೋಂತಿರಿ ? ಆಲು ಗೀಲು—"

"ಏನೂ ಬೇಡಿ."

"ಅದೆಂಗಾತದೆ ? [ ಪೊಟ್ಟಣ ಒಯ್ದಿಟ್ಟು ಬಂದ ಕರಿಯನತ್ತ ನೋಡಿ ] ಒಳಗ್ಹೋಗಿ ಸೋಮಿಯೋರಿಗೆ ಕುಡಿಯಾಕೆ ಆಲು ತಕಂಬಾ. ಸಕ್ರೆ ಆಕ್ಬೇಕಂತೆ ಅಂತ ಯೋಳು."

ಒಳ್ಳೆಯ ಮನುಷ್ಯ ಎನಿಸಿತು ಗಜಾನನನಿಗೆ. ಆದರೆ ಗೋವಿಂದನಿಗೆ ಮಾತ್ರ ಇವರನ್ನು ಕಂಡರಾಗುವುದಿಲ್ಲವಲ್ಲ—ಎಂದು ವಿಸ್ಮಯವಾಯಿತು. ಹಳ್ಳಿಯ ರಾಜಕಾರಣ, ತನಗೆ ಅರ್ಥವಾಗುವುದು ಕಠಿನ—ಎಂದು ಸುಮ್ಮನಾದ.

ಗಜಾನನ, ಅಂಗಿಯ ಜೇಬಿನಿಂದ ಲಕೋಟೆಯನ್ನು ತೆಗೆದು ಗೌಡರಿಗೆ ಒಪ್ಪಿಸಿದ.

"ಅದೇನು ?" ಎಂದು ಪ್ರಶ್ನಿಸಿದ ಗೌಡರು, ಕಾಗದವನ್ನು ಬಿಡಿಸಿ, ತುಸು ದೂರ ಹಿಡಿದು, ಪ್ರಯಾಸಪಡುತ್ತ ನಿಧಾನವಾಗಿ ಓದತೊಡಗಿದರು.

ಅವರು ಅದನ್ನು ಓದುತ್ತಲಿದ್ದಾಗ ಎತ್ತರದ ಲೋಟದಲ್ಲಿ ಹಾಲು ಬಂತು. ದ್ರವವಲ್ಲ ಎಂಬ ಭ್ರಮೆ ಹುಟ್ಟಿಸುವಷ್ಟು ದಟ್ಟಗಿತ್ತು ಅದು. ಆದರದ ನೋಟದಿಂದ ಗಜಾನನ ಅದನ್ನು ನೋಡಿದ. ಆ ಬಗೆಯ ಅಷ್ಟು ಹಾಲಿನಲ್ಲಿ ಇಪ್ಪತ್ತು ಕಪ್ ಕಾಫಿ ತಯಾರಿಸಬಹುದು—ಎನಿಸಿತು.

ಓದುವುದನ್ನು ನಡುವೆ ನಿಲ್ಲಿಸಿ ತಲೆಯೆತ್ತಿ, "ಆಲು ತಕಳ್ಳಿ," ಎಂದು ಹೇಳಿ, ಗೌಡರು ಓದುವುದನ್ನು ಮುಂದುವರಿಸಿದರು.

ಸವಿಯಾದ ಹಾಲನ್ನು ಕುಡಿದು, ಇಂಥ ಭಾಗ್ಯ ಹಳ್ಳಿಗಳಲ್ಲಷ್ಟೇ ಲಭ್ಯ ಎಂದು ಭಾವಿಸುತ್ತ ಗಜಾನನ ಲೋಟ ಕೆಳಗಿಟ್ಟು, ಅಂಗೈಯ ಹಿಂಬದಿಯಿಂದ ತುಟಿಗಳನ್ನು ಒರೆಸಿಕೊಳ್ಳುತ್ತಿದ್ದಾಗ, ಗೌಡರು ಓದು ಮುಗಿಸಿ ತಲೆ ಎತ್ತಿದರು.

"ಹಿಂಥಾ ಅರ್ಜಿಯೆಲ್ಲ ಯಾತಕ್ಕೆ ? ಫೀಸುಗೀಸು ಒಂದೂ ಕೊಡ್ಬೇಕಾಗಿಲ್ಲ ಸೋಮಿ. ಈ ರೀತಿ ಯವಾರ ಪಟ್ಣದಲ್ಲೇ ಸರಿ. ಕಣಿವೇಹಳ್ಳಿ ಸ್ಥಿತಿ ಅಷ್ಟು ಕೆಟ್ಟಿಲ್ಲ."

ಗೌಡರ ಮಾತು ಕೇಳಿ ಸಂತುಷ್ಟನಾದ ಗಜಾನನ ಅಂದ :

"ತಾವು ಹ್ಯಾಗೆ ಅಪ್ಪಣೆ ಕೊಡಿಸ್ತೀರೋ ಹಾಗೆ. ನನ್ನ ಅರ್ಜಿಗೆ ಉತ್ತರ ಅಂತ ತಾವೇನಾದರೂ—"

"ಉತ್ತರವೂ ಇಲ್ಲ ಏನೂ ಇಲ್ಲ. ನಮ್ಮ ಮಾತು ಸಾಲ್ದೇನೊ ?"

"ಸಾಕು."

"ಈಗಿನ ಕಾಲ ಧರ್ಮ. ಓಟ್ಲು ಬೇಕು ಅಂತಾರೆ. ಇರ್ತದೆ. ಕಾಫಿ ಕುಡೀಬ್ಯಾಡಿ, ಶೋಕಿ ಮಾಡ್ಬ್ಯಾಡಿ—ಅಂತ ಅಳ್ಳಿಯೋರಿಗೆ ಯೋಳೋಕಾತದಾ ?"

ಗೌಡರು ನಕ್ಕರು. ಅವರ ಮೀಸೆ ಆ ಹಾಸ್ಯವನ್ನು ಸವಿದು ಕುಣಿಯಿತು.

ಗೌಡರ ತೃಪ್ತಿಯಲ್ಲಿ ತಾನೂ ಭಾಗಿ ಎಂದು ತೋರಿಸಲು ಗಜಾನನ ಮೌನವಾಗಿ ನಕ್ಕ.

ಉಸಿರೆಳೆದು, ಗಜಾನನನ್ನು ಮತ್ತೊಮ್ಮೆ ದಿಟ್ಟಿಸಿ ನೋಡಿ ಗೌಡರು ಕೇಳಿದರು :

"ಓಟ್ಲಿಗೆ ನೀವೇ ಮಾಲಿಕರೊ ?"

"ಹೌದು."

"ಈ ಮುಂಚೆ ಬಂದಿದ್ರಲ್ಲ, ಅಯಪ್ಪ ನಿಮ್ಮ ಸಂಬಂಧಿಕರೊ ?"

"ವಿಷ್ಣುಮೂರ್ತಿಗಳು ನನಗೆ ದೂರದ ಸಂಬಂಧ."

"ನಿಮಗೆಷ್ಟು ಜನ ಮಕ್ಕಳು ?"

"ಒಂದೇ. ಕೈಗೂಸು."

"ಗಂಡೋ ?"

"ಅಲ್ಲ, ಹೆಣ್ಣು."

[ಗಜಾನನನೆಂದುಕೊಂಡ : ಹೆಸರು ವಿನೋದಾ ಎಂದರೆ ಏನೆನ್ನುವರೊ ಗೌಡರು ?]

"ಹುಂ. ಎಷ್ಟು ವರ್ಷವಾಯ್ತು ಮದುವೆಯಾಗಿ ?"

"ಹೋದ ವರ್ಷ."

ಗೌಡರು ಯೋಚನಾಮಗ್ನರಾದರು. ಗಜಾನನ ಬಗೆಗಲ್ಲ. ತಮ್ಮ ಮಕ್ಕಳ ನೆನಪಾಗಿ.

"ಈಗ ಎಲ್ರೂ ಮದುವೆ ತಡವಾಗೇ ಮಾಡ್ಕೊಂತಾರೆ," ಎಂದರು, ಕ್ಷಣಕಾಲ ನೆಲ ನೋಡಿ.

ಮತ್ತೆ ಮುಖದ ಮೇಲೆ ಗೆಲುವು ತಂದುಕೊಂಡು ಅವರೆಂದರು :

"ಎಲ್ಲಾ ಏರ್ಪಾಟು ಮಾಡ್ಕೊಂಡು ಹೋಗೋಕೆ ಬಂದಿದೀರೋ?"

"ಛೆ, ಹೋಟ್ಲು ಶುರುವಾಗೋಕ್ಮುಂಚೆ ಇನ್ನೊಂದ್ಸಲ ಬಂದು ಹೋಗ್ತೀನಿ. ಸಾಮಾನು ತರಬೇಕಲ್ಲ. ಟಾರು ರಸ್ತೆಯಿಂದ ಇಲ್ಲಿಗೆ ಬರೋದೆ ಕಷ್ಟದ್ದು."

"ಯಾವ ದಿವಸ ಅಂತ ಹೇಳಿ,—ಆಳುಗಳ್ನ ಕಳಿಸಾನ."

"ಅಷ್ಟು ಮಾಡಿದ್ರೆ ದೊಡ್ಡ ಉಪಕಾರವಾಗುತ್ತೆ."

ತಮ್ಮ ಸಹಾಯ ನಿಜವಾಗಿಯೂ ಅನಗತ್ಯವಲ್ಲವೆ ಎನ್ನುವಂತೆ ಗೌಡರೆಂದರು :

"ಆಳುಗಳಿಗೇನು, ಅಯ್ನೋರ ಮನೆಯಿಂದಲೂ ಬರ್ತಾರೆ."

ಮಾತಿನಲ್ಲಿ ವಿಷ್ಣುಮೂರ್ತಿಯವರನ್ನೂ ಮೀರಿಸಲೆತ್ನಿಸುತ್ತ ಗಜಾನನ ಅಂದ:

"ತಮ್ಮೆಲ್ಲರ ಸಹಕಾರದಿಂದಲೇ ಹೋಟ್ಲು ನಡೀಬೇಕು."

ಕುಳಿತಿದ್ದ ಗೌಡರು ಎದ್ದರು.

"ಸರಿ. ಶುರುವಾಗುವಾಗ ಬಂದು ತಿಳಿಸಿ."

ಗಜಾನನನೂ ಎದ್ದು ನಿಂತ :

"ಉದ್ಘಾಟನೆ ಮಾಡೋಕೆ ತಾವು ಒಪ್ಪಿದೀರಿ ಅಂತ ವಿಷ್ಣುಮೂರ್ತಿಗಳು ಹೇಳಿದಾರೆ."

ಹಗ್ಗ ಹರಿದು, ತಮ್ಮ ಅಂಕೆ ಮೀರಿ. ಬಾಲವೆತ್ತಿ ಹೋರಿ ಓಡತೊಡಗಿದಂತೆ ಗೌಡರಿಗೆ ಭಾಸವಾಯಿತು.

ಅರ್ಥವಾಗದ ದುಗುಡವನ್ನು ಹತ್ತಿಕ್ಕಲೆತ್ನಿಸುತ್ತ ಅವರೆಂದರು :

"ಒಳ್ಳೇ ತಮಾಷಿಯಾಯ್ತಲ್ಲಯ್ಯ ಇವನ್ದು. ಹೂಂ. ಆಮ್ಯಾಕೆ ನೋಡಾನ."

ಗಜಾನನ ಚೀಲವನ್ನೆತ್ತಿಕೊಂಡು, "ಬರ್ತೀನಿ, ನಮಸ್ಕಾರ" ಎಂದು ಹೇಳಿ ಹೊರಟ.

ಅಂಗಳದಲ್ಲಿ ಬೀರ, "ಕೃಷ್ಣೇಗೌಡರ ಮನೆಗೆ ಕರಕಂಬಾ ಅಂದವರೆ," ಎಂದ.

"ಹೂಂ, ಅಲ್ಲಿಗೇನೇ........."

......ಅಲ್ಲಿ ಕೃಷ್ಣೇಗೌಡ ಗೋವಿಂದನೊಡನೆ ಮಾತುಕತೆಯಲ್ಲಿ ನಿರತನಾಗಿದ್ದ.

ಗೋವಿಂದ ಆಡಿದ ಒಂದು ಮಾತು ಕೃಷ್ಣೇಗೌಡನನ್ನು ಬಹಳವಾಗಿ ಕಲಕಿತು :

"ಅಬ್ದುಲ್ಲನಿಗೆ ಕ್ಷಮಾದಾನವೋ ಜೀವದಾನವೋ ಏನು ಬೇಕಾದರೂ ಮಾಡ್ಲಿ. ಆದರೆ ಪಟೇಲರು ಪಂಚಾಯಿತಿಯವರನ್ನು ಕರೆದು, ಅಲ್ಲೆ ತಮ್ಮ ಅಭಿಪ್ರಾಯ ಮುಂದಿಟ್ಟು, ಉಳಿದವರ ಮನಸ್ಸು ಒಲಿಸಿಕೊಳ್ಳಬೇಕಾಗಿತ್ತು. ಇಡೀ ಹಳ್ಳಿಗೆ ತಾವೊಬ್ಬರೇ ಯಜಮಾನ ಅನ್ನುವ ಥರ ಮಾಡಿದರೆ ಹಾಗೆ ?"

ಕೃಷ್ಣೇಗೌಡ ಸಿಗರೇಟು ಸೇದುತ್ತ ಮತ್ತೆ ಮತ್ತೆ ಯೋಚಿಸಿದ :

ವಯಸ್ಸಿನಲ್ಲಿ ಚಿಕ್ಕವನಾದರೂ ಗೋವಿಂದ ವಿವೇಕಶಾಲಿ. ಇವನಿಗೆ ಹೊಳೆದದ್ದು ಶಾಮಣ್ಣನವರಿಗೆ ಹೊಳೆಯದೆ ಹೋಯಿತಲ್ಲ !

ಗೋವಿಂದನ ಮುಂದಿನ ಮಾತಿನಲ್ಲಿ ಸಾಸಿವೆಕಾಳು ಗುಡ್ಡವಾಯಿತು :

"ನಗರದಲ್ಲಿ ಎಂ.ಎಲ್.ಎ.ಗಳೂ ಅಧಿಕಾರಿಗಳೂ ನನಗೆ ಗುರ್ತು. ಪತ್ರಿಕೆಯವರ ಪರಿಚಯವೂ ನನಗಿದೆ. ಕಣಿವೇಹಳ್ಳೀಲಿ ಸರ್ಕಾರೀ ಕಾನೂನು ನಡೀತಿಲ್ಲ ಅಂತ ನಾನು ಅಲ್ಲಿಗೆ ಹೋಗಿ ಹೇಳಿದ್ರೆ ಏನಾದಾತು ಗೊತ್ತೊ ? ಆದರೆ ಅಂಥಾ ಕೆಲಸ ನಾನು ಮಾಡೋದಿಲ್ಲ. ಯಾಕೆ ? ಹಳ್ಳಿಯ ಒಗ್ಗಟ್ಟು ನನಗೆ ಮುಖ್ಯ."

ಕೃಷ್ಣೇಗೌಡನ ಸಿಗರೇಟಿನ ಹೊಗೆ ಒಂದಾದರೆ, ಅವನ ಒಳಗೆ ಮಸಕು ಮಸಕಾಗಿ ಹೆಡೆಯಾಡಿಸುತ್ತಿತ್ತು ಇನ್ನೊಂದು ಹೊಗೆ. ಗೋವಿಂದ ಅದನ್ನು ಬಲ್ಲ. ಅವನ ಮಾತು ಗಾಳಿಯಾಗಿ ಹಾಯಬಯಸಿದುದು ಆ ಕೊಳ್ಳಿಯ ಕಡೆಗೆ.

"ತಗೋ ಗೋವಿಂದಪ್ಪ, ಸೇದು ಸಿಗರೇಟು."

" ಬೇಡಿ. ಇವತ್ತು ಬೇಡಿ."

ಈ ದಿನ ಇವನು ಮಾರುತ, ಧೂಮವಾಗಲಾರ.

ಆ ಮಾತೇ ಹಗ್ಗವಾಗಿ ಗೋವಿಂದ ಮತ್ತೂ ಅದನ್ನು ಜಗ್ಗುತ್ತಿದ್ದಾಗ, ಗಜಾನನ ಬಂದ. ಹೊರಗಿನಿಂದ ಗಾಳಿ ಬೀಸಿ, ತುಂಬಿದ ಹೊಗೆಯನ್ನು ಚೆದರಿಸಿದಂತಾಯಿತು.

ಹೋಟೆಲಿಡುವ ಮನುಷ್ಯ ಹಳ್ಳಿಗೆ ಬಂದುದನ್ನು ಗೋವಿಂದನಿಂದ ಆಗಲೆ ತಿಳಿದಿದ್ದ ಕೃಷ್ಣೇಗೌಡ, " ಬರಬೇಕು ಹೋಟೆಲ್ ಮಾಲಿಕರು, ಬರಬೇಕು" ಎಂದ, ನಗುತ್ತ.

ಗಜಾನನನ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಮಾಡಿ, ಆತ ಮುಂದಕ್ಕೆ ನೀಡಿದ ಪೊಟ್ಟಣ ವನ್ನು ಬಿಚ್ಚುತ್ತ ಕೃಷ್ಣೇಗೌಡನೆಂದ :

" ಇದೇನೋ ತಂದಿದ್ದೀರಲ್ಲಪ್ಪ. ಹಲ್ವ ಇದ್ದಂಗೈತೆ. ಎಲ್ಲಿ ಸೋಮಿಯೋರೆ ಇದನ್ನ ಈ ಎಲೆಗಳಲ್ಲಿ ಇಷ್ಟಿಷ್ಟು ಹಾಕ್ಕೊಡಿ."

ಗಜಾನನ ನಗುತ್ತ ಆ ಕೆಲಸ ಮಾಡಿ ಜೇಬಿನಲ್ಲಿದ್ದ ಕರವಸ್ತ್ರಕ್ಕೆ ಕೈ ಒರೆಸಿದ.

" ನೀವೂ ತಗಳಿ," ಎಂದ ಕೃಷ್ಣೇಗೌಡ, ಉದಾರಿಯಾಗಿ.

" ನಾನು ನೋಡಿದೀನಿ ಕೃಷ್ಣೇಗೌಡರೆ, ಹೋಟ್ಲುಗಳಲ್ಲಿ ಸ್ವತಃ ತಿಂಡಿ ಮಾಡೋವರಿಗೆ ಅದನ್ನು ತಿನ್ನೋ ಆಸೇನೇ ಇರೋದಿಲ್ಲ," ಎನ್ನುತ್ತ ಗೋವಿಂದ, ಕೃಷ್ಣೇಗೌಡನ ಜತೆ ತಾನೂ ಹಲ್ವವನ್ನು ಮೆಲ್ಲತೊಡಗಿದ.

ಚಿಕ್ಕ ಹುಡುಗನೊಬ್ಬ ಒಳಗಿನಿಂದ ಬಂದು ಮುಖ ತೋರಿಸಿದಾಗ, " ಬಾ ಪುಟ್ಟ, ಇದ್ನ ತಕಂಡ್ಹೋಗು ; ಒಸಿ ನೀರು ತಾ ಕೈತೊಳೆಯಾಕೆ," ಎಂದ ಕೃಷ್ಣೇಗೌಡ.

ಗೋವಿಂದ ಪೊಟ್ಟಣದ ಕಾಗದದಿಂದ ಒಂದು ಚೂರನ್ನು ಹರಿದು ಬೆರಳೊರೆಸಿ, " ನಗರದಲ್ಲಿ ಮಾಡೋದೇ ಹೀಗೆ," ಎಂದ.

" ಸರಿ ! ನಾವೂ ನಗರದವರೇ ಆದೆವಲ್ಲ !" ಎನ್ನುತ್ತ ಕೃಷ್ಣೇಗೌಡನೂ ಗೋವಿಂದನನ್ನು ಅನುಕರಿಸಿದ.

" ರುಚಿಯಾಗಿದೆಯಪ್ಪ. ಇಲ್ಲೂ ಇಂಥದೇ ನೀವು ಮಾಡಿದ್ರೆ ಹಳ್ಳೀ ಜನ ನೊಣಗಳಂಗೆ ಮುತ್ಕೊಂತಾರೆ," ಎಂದು ಗಜಾನನನ ಕಡೆ ನೋಡಿ ಆತನೆಂದ.

ಗಜಾನನ ಪಾಲಿಗೆ ಇದು ಮಧುರ ವಾತಾವರಣ. ಶಾಮೇಗೌಡರಲ್ಲಿಗೆ ಬರಲು ಗೋವಿಂದ ಇಷ್ಟಪಟ್ಟಿರಲಿಲ್ಲ. ಆದರೆ ಕೃಷ್ಣೇಗೌಡನಲ್ಲೋ ಈತನದು ಪರಮ ಸ್ನೇಹ. ತನಗೆ ಮಾತ್ರ ಪಟೇಲರು–ಕೃಷ್ಣೇಗೌಡರು ಇಬ್ಬರ ವರದ ಹಸ್ತವೂ ಇದ್ದಂತೆ.

ಕೃಷ್ಣೇಗೌಡ ಕೇಳಿದ

" ಏನು ಸೋಮಿ ನಿಮ್ಮ ಎಸರು ?"

" ಗಜಾನನರಾಯ ಅಂತ."

" ಸರಿ ರಾಯರೇ. ಎಲ್ಲಾ ನೋಡ್ಕೊಂಡ್ಹೋಗಿ. ನಿಮಗೆ ಏನು ಆಗಬೇಕಾಗಿದ್ದರೂ ಗೋವಿಂದಪ್ನತ್ರ ಯೇಳ್ಬುಡಿ; ನಾನು ಮಾಡಿಸ್ಕೊಡ್ತೀನಿ."

" ಆಗಲಿ."

ಗೋವಿಂದನೆಂದ :

" ಏಳು ಗಜಾನನ. ಕಟ್ಟಡ ನೋಡ್ಕೊಂಡು ಮನೆಗೆ ಹೋಗೋಣ."

ಗಜಾನನನೊಡನೆ ಗೋವಿಂದ ಹಳ್ಳಿಯಲ್ಲಿ ಸುತ್ತಾಡಿ ಮನೆ ತಲಪುವ ವೇಳೆಗೆ ಶ್ರೀನಿವಾಸಯ ಆಗಲೇ ಜಾತಕಗಳ ಪರಾಮರ್ಶೆಯನ್ನು ಮುಗಿಸಿದ್ದರು. ಅವರೂ ದೊಡ್ಡಮ್ಮನೂ ಗೋವಿಂದನ ಬರವನ್ನೆ ಇದಿರು ನೋಡುತ್ತಿದ್ದರು.

## ೧೫

ಶ್ರೀನಿವಾಸಯ್ಯ ಜಾತಕಗಳನ್ನು ತುಲನೆ ಮಾಡಿ ಯೋಚನಾ ಮಗ್ನರಾದಾಗ, ಭಾಗೀರಥಿ ಅಡುಗೆ ಮನೆಯ ಕೆಲಸದಿಂದ ವಿಮುಕ್ತಳಾಗಿ ಶ್ರೀಪಾದನೊಡನೆ ಕೊಠಡಿಗೆ ಬಂದಳು. ಅವಳ ಗಂಡ ಊಟವಾದ ಬಳಿಕ ಕೆಲವೇ ನಿಮಿಷ ಅಲ್ಲಿದ್ದು ಮತ್ತೆ ಹೊಲಗಳತ್ತ ಹೋಗಿದ್ದ. ಮಗುವನ್ನು ಮಲಗಿಸಿ ತಾನೂ ಅಲ್ಪಕಾಲದ ವಿಶ್ರಾಂತಿಗೆಂದು ಚಾಪೆಯ ಮೇಲೆ ಮೈ ಚೆಲ್ಲಿದಳು.

"ಅಮ್ಮಾ," ಎಂದು ಭಾಗೀರಥಿಯ ಮಾವ ತಮ್ಮ ತಾಯಿಯನ್ನು ಕರೆಯದೇ ಇದ್ದಿದ್ದರೆ, ಈಕೆಗೆ ಜೊಂಪು ಹತ್ತುವುದು ಸಾಧ್ಯವಿತ್ತು.

ಆದರೆ, ದೊಡ್ಡಮ್ಮನೂ ತನ್ನ ಮಾವನೂ ಗಹನವಾದ ಆಪ್ತಾಲೋಚನೆ ನಡೆಸುವರೆಂಬುದನ್ನು ಊಹಿಸಿದ ಭಾಗೀರಥಿ ಮೈಯೆಲ್ಲ ಕಿವಿಯಾದಳು.

ಹೊರಗಿನಿಂದ ಮಾತುಕತೆ ಕೇಳಿಸಿತು.

"ಏನು ಶೀನ? ಎಲ್ಲಾ ನೋಡಿದಿಯಾ ?"

"ಹೂನಮ್ಮ."

"ಹ್ಯಾಗಿದೆ ?"

"ವಿಷ್ಣುಮೂರ್ತಿಗಳ ಎರಡ್ನೇ ಮಗಳದು ಪದ್ಮನಾಭನದಕ್ಕೆ ಕೂಡಿಬರುತ್ತೆ. ಲಾಯರಿ ಮಗಳದೂ ಗೋವಿಂದನದೂ ಅಪೂರ್ವ ಜೋಡಿ."

ಮೌನದ ಅಂತರ.

[ದೊಡ್ಡಮ್ಮನಿಗೆ ಯೋಚನೆಗಿಟ್ಟುಕೊಂಡಿತು. ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ ? ವಿಷ್ಣುಮೂರ್ತಿ ಅಪೇಕ್ಷೆ ಪಟ್ಟಿರುವುದು ಗೋವಿಂದ ತನ್ನ ಅಳಿಯನಾಗಬೇಕೆಂದು. ಅಲ್ಲದೆ, ಪದ್ಮನಾಭನಷ್ಟು ವಿದ್ಯಾವಂತನಲ್ಲದ ಗೋವಿಂದನಿಗೆ ಲಾಯರು ತನ್ನ ಮಗಳನ್ನು ಕೊಡುವುದುಂಟೆ?]

ಭಾಗೀರಥಿಗೆ ದೊಡ್ಡಮ್ಮನ ಧ್ವನಿ ಕೇಳಿಸಿತು :

"ಗೋವಿಂದನ ಮನಸ್ನಲ್ಲಿ ಏನಿದೆಯೊ?"

ಶ್ರೀನಿವಾಸಯ್ಯನವರ ಮರುತ್ತರ :

"ಏನಿರುತ್ತೆ ? ಜಾತಕ ಕೂಡಿಬರೋದಿಲ್ಲಾಂತ ಹೇಳಿದರಾಯ್ತು."

"ಹೇಳಿಬಿಡೋದು ಸುಲಭ, ಶೀನ. ನಮಗೆ ಗೊತ್ತಿಲ್ದೇನೇ ಗೋವಿಂದ ವಿಷ್ಣುಮೂರ್ತಿಗಳ ಸಂಸಾರಕ್ಕೆ ಪರಿಚಿತನಾಗಿದಾನೆ."

"ಅದೇನೋ ನಿಜವೇ. ಈಗ ಹ್ಯಾಗ್ಮಾಡೋಣಾಂತೀಯಾ ?"

"ಗೋವಿಂದ ಬರಲಿ. ಕೇಳಿ ನೋಡೋಣ."

"ಪದ್ಮನ ಹತ್ತಿರ ಮಾತಾಡಿದಿಯಾ ?"

"ಇಲ್ಲ. ಮಾತಾಡಿದರಾಯ್ತು. ಕಾಲೇಜ್ನಲ್ಲಿ ಓದಿರೋನು. ವಿದ್ಯಾವಂತೆ ಹುಡುಗೀನೇ ಬೇಕು ಅಂದಾನು."

"ಹಾಗಾದರೆ ಲಾಯರ್ ಮಗಳೇ ಸರಿ."

"ಆದ್ರೆ ಒಂದು ವಿಷಯ, ಶೀನ. ಓದಿದ ಹುಡುಗೀರು ಈ ಹಳ್ಳೀಲಿ ಮನೆಗೆಲಸ ಮಾಡ್ಕೊಂಡು ಇರ್ತಾರೆಯೆ ?"

"ಅದೊಂದೂ ನನಗೆ ಗೊತ್ತಿಲ್ಲಮ್ಮ. ನನಗೇನೋ ಓದೋಕ್ಬಾರದ ಹುಡುಗಿಯನ್ನೇ ತಂದು ಗಂಟು ಹಾಕಿದ್ರಿ."

"ಆಗಿನ ಕಾಲ್ದಲ್ಲಿ ಹುಡುಗಿಗೆ ಓದು ಬರತ್ಯೆ ಅಂತ ಯಾರು ಕೇಳ್ತಿದ್ರು ?"

"ನಿಜ, ಅನ್ನು. ಈಗ ಈ ಗೊಂಬೆ ನಿನಗೆ ಒಪ್ಪಿಗೇನಾ ಅಂತ ಹುಡುಗರ್ನ ಕೇಳೋ ಸ್ಥಿತಿಗೆ ಬಂದಿದೀವಿ."

ಮತ್ತೆ ನೀರವತೆ.

"ಪದ್ಮ ಇದಾನಾ ಶೀನ?"

"ಮಲಕೊಂಡಿರಬೇಕು. ಇನ್ನೆಲ್ಲಿಗೆ ಹೋಗ್ತಾನೆ ?"

[ಈಗಲೇ ಮಾತನಾಡಿಸಬಹುದು ಎಂದುಕೊಂಡರು ದೊಡ್ಡಮ್ಮ. ಆದರೂ ಹಿಂಜರಿದರು. ಆದಷ್ಟು ದಿನ ಕಳೆಯಲಿ, ಅವನ ಮನುಸ್ಸು ಸರಿಹೋಗಲಿ—ಎಂಬ ಅಪೇಕ್ಷೆ ಅವರದು. ಲಾಯರ್ ಮಗಳು ಸುಂದರಿಯೂ ಆಗಿದ್ದರೆ ಪದ್ಮನನ್ನು ಒಪ್ಪಿಸುವುದು ಕಷ್ಟವಾಗದು—ಎಂಬ ವಿಶ್ವಾಸ.]

"ಒಂದು ಮಾಡು, ಶೀನ. ಗಂಗಾಧರ ಶಾಸ್ತ್ರಿಗಳಿಗೂ ಜಾತಕಗಳ್ನ ಒಮ್ಮೆ ತೋರ್ಸು."

"ಆಗಲಮ್ಮ."

ಮತ್ತೆ ಬಹಳ ಹೊತ್ತು ಮಾತಿಲ್ಲ. ಶ್ರೀನಿವಾಸಯ್ಯ ಎದ್ದು ಶತಪಥ ತುಳಿದ ಸದ್ದು ಭಾಗೀರಥಿಗೆ ಕೇಳಿಸಿತು. ದೊಡ್ಡಮ್ಮ ಆಗಲೇ ಒಳಮನೆಗೆ ಹೋಗಿರಬೇಕು ಎನಿಸಿತು ಅವಳಿಗೆ.

ಅವಳೆಂದುಕೊಂಡಳು :

ಎಂಥ ತಮಾಷೆ ! ಹೋಟೆಲಿನವರು ಬಯಸಿರುವುದು ಗೋವಿಂದ ಅಳಿಯನಾಗಲಿ ಎಂದು. ಆದರೆ ಜಾತಕಗಳು ಸರಿಹೋಗುವುದಿಲ್ಲ. ಅಂದರೇನು ? ಈ ಸಂಬಂಧ ಕುದುರುವುದಿಲ್ಲ ಎಂದೊ ?

ಭಾಗೀರಥಿಗೆ ಒಂದು ಬಗೆಯ ಸಂತೋಷವಾಯಿತು. ತಾನು ಬಡ ಶಾನುಭೋಗರ ಮಗಳು. ಆ ಹೋಟೆಲಿನವನ ಹಾಗೆ ಅತಿ ಮಾತಿಲ್ಲದ ಗತ್ತುಗಾರಿಕೆಯಿಲ್ಲದ ಸಾತ್ವಿಕರು ತನ್ನ ತಂದೆ. ಶ್ರೀಮಂತ ಕುಟುಂಬದವಳು ಎಂಬ ಹೆಮ್ಮೆಯಿಂದ ಆ ಹೋಟೆಲಿನ ಹುಡುಗಿ ತನ್ನ ಮೇಲೆ ಸವಾರಿ ಮಾಡತೊಡಗಿದರೆ? ಅಲ್ಲದೆ, ತನಗೆ ತಿಳಿಯದೆ ? ಮೈದುನ ಗೋವಿಂದನೂ ಜೋರಿನವನೇ. ಹೊಲಗಳನ್ನು ನೋಡಿಕೊಂಡು, ದುಡಿದು ಸಂಪಾದಿಸುವುದು ತನ್ನ ಗಂಡ. ಈತ ಸೊಸೈಟಿ—ನಗರ ಅಂತ ಮಾತಿನ ಗುಡ್ಡ ಕಡಿದೇ ದಿನ ತಳ್ಳುವವನು. ಹೋಟೆಲ್ ಮಾವನೂ ಇವನೂ ಜತೆಯಾದರೆ ಏನು ತಾನೇ ಮಾಡಲಾರರು !

ಅಥವಾ, ಲಾಯರ್ ಮಗಳೇ ಗೋವಿಂದನ ಕೈ ಹಿಡಿದರೆ? ಸೋಮಪುರಕ್ಕೊಮ್ಮೆ

ಒಬ್ಬ ಲಾಯರ್ ಬಂದುದು ಭಾಗೀರಥಿಗೆ ನೆನಪಿತ್ತು. ಆತ ಶಾನುಭೋಗರ ಮನೆಯಲ್ಲೇ ಇಳಿದುಕೊಂಡಿದ್ದರು, ಒಂದು ಹೊತ್ತಿನ ಮಟ್ಟಿಗೆ. ಕಪ್ಪು ಕೋಟು, ಬಿಳಿಯ ಪೇಟ. ಭಾಗೀರಥಿಗೆ ಅವರನ್ನು ನೋಡಿ ಭಯವಾಗಿತ್ತು. "ಬಾ ಮಗೂ," ಎಂದು ಅವರು ಎಷ್ಟು ಕರೆದರೂ ಭಾಗೀರಥಿ ಅವರ ಹತ್ತಿರಕ್ಕೆ ಹೋಗಿರಲಿಲ್ಲ. ಅವರ ಮಗಳೇ ಇರಬಹುದೇ? ಆದರೆ ಅದು ಹದಿನಾಲ್ಕು, ಹದಿನೈದು ವರ್ಷಗಳಿಗೆ ಹಿಂದಿನ ಮಾತು. ಆಗ ಆ ಲಾಯರಿಗೆ ಎಷ್ಟು ವಯಸ್ಸಾಗಿತ್ತೊ? ಅವಳು ಬಲ್ಲಳು: ಚಿಕ್ಕಮಕ್ಕಳ ದೃಷ್ಟಿಯಲ್ಲಿ ದೊಡ್ಡವರಿಗೆಲ್ಲ ಒಂದೇ ವಯಸ್ಸು..... ಅವರೇ ಯಾಕಿರಬೇಕು ? ನಗರದಲ್ಲಿ ಎಷ್ಟೊಂದು ಲಾಯರುಗಳೋ ಏನೋ... ಲಾಯರ ಮಗಳು. ಲ್ಹು ! ವಿದ್ಯಾವಂತ ಹುಡುಗಿ ಅಂತ ದೊಡ್ಡಮ್ಮ ಅದೇನೋ ಅಂದರಲ್ಲ ? ಟಿಸ್ ಪಿಸ್ ಇಂಗ್ಲಿಷ್ ಮಾತಾಡೋದಕ್ಕೆ ಗೊತ್ತಿರಬಹುದು. ಪದ್ಮನಿಗೆ ಅವಳೇ ಹೆಂಡತಿಯಾದರೆ ಅವರಿಬ್ಬರೂ ಇಂಗ್ಲಿಷಿನಲ್ಲಿ ಮಾತಾಡಿ ತನ್ನನ್ನು ಗೇಲಿ ಮಾಡಬಹುದು. ಎಲ್ಲ ವ್ಯವಹಾರವೂ ಇಂಗ್ಲಿಷಿನಲ್ಲೇ, ತನಗೇನೂ ತಿಳಿಯುವಂತಿಲ್ಲ. ದೊರೆಸಾನಿ. ಆಕೆಯೂ ಆತನೂ ಏಕಾಂತದಲ್ಲಿದ್ದಾಗ, ಅದೂ ಇದೂ ಮಾಡುವಾಗ. ಆಗಲೂ ಇಂಗ್ಲಿಷಿನಲ್ಲೇ ಮಾತಾಡುವರೇನೋ...

ತಾನು ಮನೆಯ ಹಿರಿಯ ಸೊಸೆ. ಬರುವವರು ಶ್ರೀಮಂತ ಪುತ್ರಿಯರಾದರೇನಾಯಿತು ? ವಿದ್ಯಾವತಿಯರಾದರೇನಾಯಿತು? ಅವರು ಕಿರಿಯ ಸೊಸೆಯಂದಿರು. ದೊಡ್ಡಮ್ಮ ಇರುವ ತನಕ ಅವರ ಹಿರಿತನ ಎಲ್ಲರಿಗೂ ಮಾನ್ಯ. ಅವರ ಅನಂತರ, ತನ್ನ ಅತ್ತೆ ಇಲ್ಲದ ಕಾರಣ ತಾನೇ ಮನೆಗೆ ಒಡತಿ. ಉಳಿದವರು ತನ್ನ ಮಾತು ಕೇಳಬೇಕು.

ಕೇಳದೇ ಇದ್ದರೆ...?

ಇದ್ದಕ್ಕಿದ್ದಂತೆ ಭಾಗೀರಥಿಗೆ ತಾನು ಅಸಹಾಯಳು ಏಕಾಕಿನಿ ಅಬಲೆ ಎನಿಸಿತು. ಗಂಡನಿಗೋ ದುಡಿಮೆಯಾಯಿತು, ತಾನಾಯಿತು. ಹೆಂಡತಿಯಾದವಳು ಹೇಳುವ ಮಾತನ್ನು ಇಷ್ಟು ಆಲಿಸಬೇಕು ಎಂಬ ವಿವೇಚನೆಯಾದರೂ ಬೇಡವೆ?

ಭಾಗೀರಥಿಗೆ ತನ್ನ ತಾಯಿಯ ನೆನಪಾಯಿತು, ತಂದೆಯ ನೆನಪಾಯಿತು. ಅವರ ಸಲಹೆಯನ್ನಾದರೂ ಪಡೆಯಬಹುದಿತ್ತು ತಾನು ಸೋಮಪುರಕ್ಕೆ ಹೋಗುವುದು ಸಾಧ್ಯವಿದ್ದಿದ್ದರೆ. ಆದರೆ ಈ ವರ್ಷ ಅದು ಆಗದ ಮಾತು.

ಮದುವೆಗಳೇನಾದರೂ ನಿಷ್ಕರ್ಷೆಯಾಗಿ ಬೇಗನೆ ನಡೆಯಲು ಏರ್ಪಾಟಾದರೆ, ಆಗ ತನ್ನ ತಂದೆ ತಾಯಿ ಕಣಿವೇಹಳ್ಳಿಗೆ ಬರಲೂಬಹುದು. ಮದುವೆಗಳು ನಗರದಲ್ಲಿ ಎಂದಾದರೆ ಅಲ್ಲಿಗೆ ಬರುವರೋ ಇಲ್ಲವೋ. ಬನ್ನಿ ಎಂದು ಆಗ್ರಹಿಸಿ ತಾನೊಂದು ಕಾಗದ ಬರೆಯಬೇಕು.

ಟಿಸ್ ಪಿಸ್ ವಿದ್ಯಾವತಿಯಲ್ಲ ನಿಜ. ಆದರೆ, ಒಂದು ಕಾಗದ ಬರೆಯುವಷ್ಟು ವಿದ್ಯೆ ಶಾನುಭೋಗರ ಮಗಳಾದ ತನಗೆ ಇದೆ, ಇದೆ.

ಸೋಮಪುರಕ್ಕಾದರೆ ಅಂಚೆಯವರು ಎರಡು ಸಲ ಬರುತ್ತಾನೆ; ಇಲ್ಲಿಗೆ ವಾರಕ್ಕೆ ಒಂದೇ ಸಲ. ಆದರೂ, ತಂದೆ ತನಗೆ ಒಂದು ಸಲವೂ ಬರೆದುದಿಲ್ಲ. ತಾನೂ ಬರೆದವಳಲ್ಲ. ತನ್ನ ಗಂಡನೂ ಬರೆದವನಲ್ಲ. ಏನಿದ್ದರೂ ಕ್ಷೇಮಸಮಾಚಾರದ ಪತ್ರ ವಿನಿಮಯ ವರ್ಷಕ್ಕೆ ಒಂದೆರಡು ಬಾರಿ ನಡೆಯುತ್ತಿದ್ದುದು, ಮಾವ ಹಾಗೂ ತಂದೆಯ ನಡುವೆ ಮಾತ್ರ.

ಇನ್ನು ಕ್ರಮೇಣ ಕಣಿವೇಹಳ್ಳಿಯೂ ಸೋಮಪುರದ ಹಾಗಾಗುತ್ತದೆ. ಅಲ್ಲಿರುವ ಹಾಗೆ

ಇಲ್ಲಿಯೂ ಒಂದು ಹೋಟ್ಲು. ಮೈದುನ ಬೇರೆ ಟಾರು ರಸ್ತೆಯವರೆಗೆ ಗಾಡಿದಾರಿ ಮಾಡಿಸಬೇಕು ಎನ್ನುತ್ತಾನಲ್ಲ. ಟಾಂಗಾ ಇಡಬೇಕಂತೆ.

ಮಲಗಿದ್ದ ಭಾಗೀರಥಿಯ ತುಟಿಗಳನ್ನು ಮಂದಹಾಸ ಅಲಂಕರಿಸಿತು. ಹಾಗೆಯೇ ಅವಳಿಗೆ ಮಂಪರು ಕವಿಯಿತು.

ಆ ಹಗಲು ನಿದ್ದೆಯಲ್ಲೊಂದು ಕನಸು.

ಎತ್ತರದ ಬಿಳಿಯ ಕುದುರೆ ಕಟ್ಟಿದ ಒಂದು ಟಾಂಗಾ. ಕುದುರೆಯ ಕಡಿವಾಣ ಹಿಡಿದು ಹೈ ಹೈ ಎನ್ನುತ್ತಿದ್ದವನು ಆಕೆಯ ಗಂಡ. ಅವನ ತೋಳುಗಳ ಮಾಂಸಖಂಡಗಳು ಪುಟಿಯುತ್ತಿವೆ. ಟಾಂಗಾದಲ್ಲಿ ತಾನು ಹಾಗೂ ಶ್ರೀಪಾದ. ಎಷ್ಟೊಂದು ವೇಗವಾಗಿ ಕಣಿವೇಹಳ್ಳಿಯ ರಸ್ತೆಗಳಲ್ಲೆಲ್ಲ ಟಾಂಗಾ ಧಾವಿಸುತ್ತಿದೆ ! ದಾರಿಗೆ ಅಡ್ಡವಾಗಿ ಬಂದ ಕೋಳಿಗಳು, ಹಂದಿಗಳು, ನಾಯಿಗಳು ದಿಕ್ಕಾಪಾಲಾಗಿ ಓಡುತ್ತವೆ. ಅವುಗಳ ಕೂಗಿನ ಜತೆಗೆ ಸಾಲುಗಟ್ಟಿ ನಿಂತ ಜನರ ಹರ್ಷಧ್ವನಿ.

"ಅಮ್ಮಾವ್ರು ! ಅಮ್ಮಾವ್ರು!"

ಅಷ್ಟರಲ್ಲಿ ಎರಡು ಪುರುಷ ಕಂಠಗಳಿಂದ ಕೇಳಿ ಬರುತ್ತದೆ :

"ನಿಲ್ಸೆ! ನಿಲ್ಸು!"

ತನ್ನ ಮೈದುನಂದಿರು.

ವೇಗ ಕಡಮೆ ಮಾಡಿದ ಟಾಂಗವನ್ನು ಹಿಡಿದು ನಿಲ್ಲಿಸುತ್ತಾರೆ, ಗೋವಿಂದ ಮತ್ತು ಪದ್ಮನಾಭ. ಹಿರಿಯವನೊಂದು ಮಗ್ಗುಲಲ್ಲಿ, ಕಿರಿಯವನೊಂದು ಮಗ್ಗುಲಲ್ಲಿ.

ಅವರು ಅರಚುತ್ತಾರೆ :

"ಇಳಿ ಕೆಳಗೆ !"

ಅಷ್ಟರಲ್ಲಿ ತನ್ನ ಎಡಬಲಗಳಲ್ಲೂ ಕಾಣಿಸಿಕೊಳ್ಳುತ್ತಾರೆ, ಇಬ್ಬರು ಹುಡುಗಿಯರು.

"ಇಳಿಯೇ ಕೆಳಗೆ !"

"ಕೆಳಗೆ ಇಳಿಯೇ !"

ಒಬ್ಬಳು ಬಂಗಾರದ ಆಭರಣಗಳನ್ನು ಧರಿಸಿದ್ದ ಧಡೂತಿ ವ್ಯಕ್ತಿ. ಇನ್ನೊಬ್ಬಳು ಲಂಗ ತೊಟ್ಟ ದೊರೆಸಾನಿ.

ಈಕೆಗನ್ನಿಸುತ್ತಿದೆ : ಯಾಕೆ ಇಳಿಯಲಿ ನಾನು ? ಇದು ನನ್ನ ಟಾಂಗಾ. ಇಳಿಯಲಾರೆ, ಇಳಿಯಲಾರೆ.

ಬಾಯಿ ತೆರೆದು ಹಾಗೆ ಹೇಳೋಣವೆಂದರೆ ಗಂಟಲಿನಿಂದ ಧ್ವನಿ ಹೊರಡುತ್ತಿಲ್ಲ.

ಒಬ್ಬಳು ತನ್ನ ಬಲಗೈಯನ್ನು, ಇನ್ನೊಬ್ಬಳು ತನ್ನ ಎಡಗಾಲನ್ನು ಹಿಡಿದು ಎಳೆಯುತ್ತಿದ್ದಾರೆ.

"ಇಳೀ ಕೆಳಕ್ಕೆ !"

ತಾನು ಟಾಂಗಾದಿಂದ ಕದಲಬಾರದು. ಆದರೆ, ಜಗ್ಗುತ್ತಿರುವರಲ್ಲ ? ಶ್ರೀಪಾದ ಬಿದ್ದರೆ ? ಅಯ್ಯೋ—ಶ್ರೀಪಾದ ಬಿದ್ದ !

ಉರುಳಿದ ಶ್ರೀಪಾದ ಚೀರಿದ...

......ಭಾಗೀರಥಿ ಗಡಬಡಿಸಿ ಎದ್ದಳು. ಮಗ್ಗುಲಲ್ಲಿ ಮಲಗಿದ್ದ ಶ್ರೀಪಾದ ಎಚ್ಚರಗೊಂಡು ಧ್ವನಿತೆಗೆದು ಅಳತೊಡಗಿದ್ದ.

ಒಳಗಿನಿಂದ ದೊಡ್ಡಮ್ಮನ ಸ್ವರ ಕೇಳಿಸಿತು :

" ಭಾಗೀರಥೀ, ಶ್ರೀಪಾದೂನ ಎತ್ಕೊಂಡ್ಬಾ."

ತಾಯಿ ಎದ್ದು ಎತ್ತಿಕೊಂಡೊಡನೆ ಶ್ರೀಪಾದ ಸುಮ್ಮನಾದ.

ಆಕೆ ಒಳ ಹೋದಾಗ ದೊಡ್ಡಮ್ಮ ಅಂದರು :

" ಗೋವಿಂದನೂ ಅವನ ಸ್ನೇಹಿತನೂ ಬರೋ ಹೊತ್ತಾಯ್ತು. ಒಂದಿಷ್ಟು ಉಪ್ಪಿಟ್ಟು ಕಾಫಿ ಮಾಡ್ಬೇಕಮ್ಮ."

ಭಾಗೀರಥಿ ಶ್ರೀಪಾದನನ್ನು ನೆಲಕ್ಕೆ ಇಳಿಬಿಟ್ಟಳು. ಆತ, ಕೊಬ್ಬರಿ ತುರಿದು ಬದಿಗಿರಿಸಿದ್ದ ಬರಿದು ಕರಟವೊಂದನ್ನು ಎತ್ತಿಕೊಂಡ, ಆಟಕ್ಕೆ.

ಭಾಗೀರಥಿಯ ಮೈ ಬೆವತಿತ್ತು. ಆ ಕೆಟ್ಟ ಕನಸು ಮತ್ತೆ ಮತ್ತೆ ಅವಳ ಕಣ್ಣೆದುರು ಕಟ್ಟಿತು. ಅದನ್ನು ಮರೆಯಲೆತ್ನಿಸುತ್ತ ಭಾಗೀರಥಿ, ಅಡುಗೆ ಒಲೆಯ ಸೌದೆ ಚೂರುಗಳನ್ನು ಸರಿಪಡಿಸಿದಳು.

...ಗುಡಿಯ ತನಕ ಹೋಗಿ ಬರೋಣ ಎಂದುಕೊಂಡ ಪದ್ಮನಾಭ. ಆದರೆ, ಹೊರಗೆ ಹಗಲು ಬಾಡಿತ್ತು. ಮಳೆ ಬರುವ ಲಕ್ಷಣ. ಬಂದರೆ ಬರಲಿ, ಗುಡಿಯ ಕಲ್ಲುಮಂಟಪದಲ್ಲಿ ಕುಳಿತರಾಯಿತು—ಎಂದು ಯೋಚಿಸಿದ. ಆದರೆ ಹಿಂದಿನ ಸಂಜೆಯ ಹಾಗೆ ಧಾರಾಕಾರವಾಗಿ ಮಳೆ ಸುರಿದರೊ ? ಕತ್ತಲಾದ ಮೇಲೆ ದಿಬ್ಬ ಇಳಿದು ಬರುವುದು ಕಷ್ಟವಾದೀತು. ಮುನಿಯನ ಆ ಶವ. ಅಲ್ಲೇ ಊಟವಿಲ್ಲದೆ ಮಲಗಿ ನಿದ್ದೆ ಹೋದರೇನಾದೀತು? ಉಂಟು ಮಾಡಿದ ದೇವರು ಊಟ ಕೊಡಲಾರನೆ ? ಕೊಡದಿದ್ದರೆ ಅಷ್ಟೇ ಹೋಯಿತು. ಆದರೆ ಇರಿಚಲನ್ನೂ ಚಳಿಗಾಳಿಯನ್ನೂ ಸಹಿಸುವುದು ಹೇಗೆ?

ಹೊರಬೀಳುವ ಯೋಚನೆಯನ್ನು ಬಿಟ್ಟುಕೊಟ್ಟು, ಒಂದು ಬಾರಿ ಓದಿದ್ದ ಆಂಗ್ಲ ಕಾದಂಬರಿಯೊಂದನ್ನು ಪದ್ಮನಾಭ ಮತ್ತೆ ಎತ್ತಿಕೊಂಡ.

......ಗೋವಿಂದನೂ ಗಜಾನನನೂ ಕೃಷ್ಣೇಗೌಡನ ಮನೆಯಿಂದ ಹೊರಟು, ಹೋಟೆಲಿಗಾಗಿ ದೊರೆತ ಕಟ್ಟಡವನ್ನು ನೋಡಿಕೊಂಡು, ನದಿಯ ದರ್ಶನ ಪಡೆದು, ಗೃಹಾಭಿಮುಖರಾದರು.

ದಾರಿಯಲ್ಲಿ ಗೋವಿಂದ, ಹಳ್ಳಿಯ ವಿವಿಧ ಕುಟುಂಬಗಳ ಕಥೆಯನ್ನು ಗಜಾನನನಿಗೆ ತಿಳಿಸಿದ. ತಾನು ಕಟ್ಟಿದ ಸಹಕಾರ ಸಂಘದ ಕಾಲ್ಪನಿಕ ಚಟುವಟಿಕೆಗಳನ್ನು ಬಣ್ಣಿಸಿದ. ಮುನಿಯನ ಪ್ರಕರಣವೇನೆಂಬುದನ್ನು ವಿವರಿಸಿ ["ಅಲ್ಲ ಗೋವಿಂದರಾವ್, ಅಬ್ಸಲ್ಲನ್ಸ್ದು ಅದೇನೋ ಹೇಳಿದಿರಲ್ಲ–ಏನದು?"] " ಹೋಗಲಿ ಪಾಪ–ಅಂತ ಆ ಪಟೇಲನ್ನ ಬಿಟ್ಟಿದೀನಿ," ಎಂದ.

ಅವನ ಕನಸುಗಳೊ !

"ಮುಂದಿನ ತಿಂಗಳಿಂದ ಶಾಲೆ ಶುರುವಾಗುತ್ತೆ ಇಲ್ಲಿ. ಇಬ್ಬರು ಮೇಷ್ಟ್ರುಗಳಿದಾರೆ. ಒಬ್ಬ ಪಕ್ಕದ ಹಳ್ಳಿಯಿಂದ ದಿನಾ ಬಂದು ಹೋಗ್ತಾನೆ. ನಮ್ಮ ಶಾನುಭೋಗರ ಸಂಬಂಧಿಕ. ಶಾನುಭೋಗರು ಹೆಚ್ಚಾಗಿ ಇರೋದು ಆ ಹಳ್ಳೀಲೇ. ಎರಡು ಮನೆಗಳ ಮನುಷ್ಯ ! ಇನ್ನೊಬ್ಬ ಮೇಷ್ಟ್ರು ಪರವೂರಿನವನು. ಶಾಲೆಗೆ ತಗಲ್ಕೊಂಡು ಆ ಹಟ್ಟಿ ಇದೆಯಲ್ಲ ? ಅದರಲ್ಲಿ ತಾನೇ ಅಡುಗೆ ಮಾಡ್ಕೊಂಡು ವಾಸವಾಗಿದಾನೆ. ಬ್ರಹ್ಮಚಾರಿ. ಆ ಹಟ್ಟೀನ

ಖಾಲಿ ಮಾಡಪ್ಪ ಅಂತ ಅವನಿಗೆ ಹೇಳಿ ಅದರಲ್ಲಿ ಒಂದು ವಾಚನಾಲಯ ಶುರು ಮಾಡ್ಬೇಕು. ನಗರದಲ್ಲಿ ಯಾರನ್ನಾದರೂ ಹಿಡಿದು ಈ ಹಳ್ಳಿಗೆ ಸರಕಾರದಿಂದ ಒಂದು ರೇಡಿಯೋ ದೊರಕಿಸ್ಬೇಕು."

"ಒಂದು ಟ್ರಾನ್‌ಸಿಸ್ಟರ್ ತಗೊಂಬರ್‍ತೀನಿ, ಗೋವಿಂದರಾವ್."

"ಅದಿರ್‍ಲಯ್ಯ ! ನಮ್ಮ ಹಳ್ಳೀ ಮಹಾಜನಗಳಿಗೆ ಅಂತ ಬೇರೇನೇ ಒಂದು ಬೇಕು. ಸರಕಾರದ್ದು ಸಿಗದಿದ್ದರೆ ಇಲ್ಲೇ ಚಂದಾ ಎತ್ತಿ ಒಂದನ್ನ ಕೊಂಡು ತರಬೇಕು."

"ನನ್ನ ಗುರುತ್ನೋನು ಒಬ್ಬ ರೇಡಿಯೋ ಡೀಲರ್ ಇದಾನೆ, ಗೋವಿಂದರಾವ್."

"ಕಮಿಷನ್ ಕೊಡ್ತಾನೊ ?" "ಕೊಡಿಸೋಣ, ಅದಕ್ಕೇನು? "

ಇನ್ನು ಆ ರಸ್ತೆ. "ಆ ವಿಷಯ ಯೋಚಿಸಿದಷ್ಟೂ ನನಗೆ ನಿದ್ದೆ ಬರೊಲ್ಲಪ್ಪ. ಬ್ಲಾಕ್ ಡೆವಲಪ್‌ಮೆಂಟ್ನಲ್ಲಿ ಅದನ್ನ ಸೇರ್‍ಸೊಕಾಗುತ್ಯೆ, ನೋಡ್ಬೇಕು."

"ಕಂಟ್ರಾಕ್ಟ್ ನೀವೇ ತಗೊಳೊಕಾಗೊಲ್ವೆ, ಗೋವಿಂದರಾವ್ ?"

"ಹಣ ಸ್ಯಾಂಕ್ಷನ್ನಾಗ್ಲಿ ಮೊದ್ಲು."

"ಏನೋಂತಿದ್ದೆ. ನೀವು ಪ್ರಚಂಡರು ಗೋವಿಂದರಾವ್."

"ಹೀಗೆಲ್ಲಾ ಇದೆ, ನೋಡಪ್ಪ."

ಗಜಾನನ ತಲೆದೂಗಿ, ಮುಗುಳ್ನಕ್ಕು, ಕೇಳಿದ :

"ಈಗ ನೀವು ಕೈಹಿಡಿಯೋದು ಯಾವ ಕನ್ಯಾಮಣೀನ ಅಂತ ? ನಾವು ಹೋಗೋದ ರೊಳಗೆ ನಿಮ್ಮ ತಂದೆ ಜಾತಕಗಳನ್ನು ನೋಡಿ ಇಟ್ಟಿರ್‍ತಾರೆ."

"ಆ ಲಾಯರಿ ಮಗಳ್ನ ಬಿಟ್ಬಿಡು. ಅದು ಪದ್ಮನಿಗೆ. ಅಲ್ಲೋ, ನೀನು ನೋಡಿದಿಯಾ ಅವಳ್ನ ?"

"ಓಹೋ."

"ಹ್ಯಾಗಿದಾಳೆ ?"

"ಅಂದರೆ ?"

"ನೋಡೋಕೆ."

"ನಿಮ್ಹತ್ರ ಹೇಳೋಕೇನಂತೆ ? ಫ್ಯಾಶನ್ ವಿಷಯದಲ್ಲಿ ಪರವಾಗಿಲ್ಲ. ಆದರೆ, ಮೈಯಲ್ಲಿ ಮಾಂಸ ಸಾಲ್ದು."

"ನಿನ್ನ ಕಡೆಯವರದು ಹೇಳಯ್ಯ."

"ಕಾಮಾಕ್ಷಿ, ಕನಕಲತಾ. ಕನಕಲತಾ ಅನ್ನೋದಂತೂ ಸರಿಯಾದ ಹೆಸರೇ ಅಲ್ಲ. ಕನಕವೃಕ್ಷ ಅಂತಿಡ್ಬೇಕು !"

"ಹಹ್ಹ !"

"ಕಾಮಾಕ್ಷೀನೇ ನಿಮಗೆ ಹೇಳಿ ಮಾಡಿಸಿದ ಹೆಣ್ಣು. ಮನೇಲಿ ಅವಳಿಗೊಂದು ಅಡ್ಡ ಹೆಸರಿದೆ. ಗೊತ್ತಾ ಗೋವಿಂದರಾವ್ ?"

"ಏನೂಂತ ?"

"ತಿಂಡಿಪೋತಿ ಅಂತ."

"ಅಷ್ಟೇ ತಾನೆ ? ಏನು ಬೇಕೋ ಅದನ್ನ ಮಾಡ್ಕೊಂಡು ತಿನ್ತಾಳೆ."

"ಮಾಡ್ಕೊಂಡು ಅಲ್ಲ, ಮಾಡಿಸ್ಕೊಂಡು."

"ಇದೆಯಲ್ಲ ವಿಘ್ನೇಶ್ವರ ಭವನ."

"ಆದ್ರಿಂತಿಕೆಟ್ಕೊಳ್ಳಿ."

ಕ್ಷಣ ಕಾಲ ಸುಮ್ಮನಿದ್ದು ಹೆಜ್ಜೆ ಹಾಕಿದ ಮೇಲೆ, ಗೋವಿಂದ ಗೊಣಗಿದ:

"ಈ ಜಾತಕಗಳದೊಂದು ಗೋಳು. ಅಣ್ಣಯ್ಯ ಏನು ಹೇಳ್ತಾರೊ ?"

"ನೀವೊಂದು ತಪ್ಪು ಮಾಡಿದಿರಿ ಗೋವಿಂದರಾವ್. ನಿಮ್ಮದನ್ನ ಮೊದಲೇ ವಿಷ್ಣು ಮಾವನಿಗೆ ಕೊಟ್ಟಿದ್ದರೆ ಕಾಮಾಕ್ಷಿ ಜಾತಕಾನ ಅದಕ್ಕೆ ಸರಿಯಾಗಿ ಅವರು ರೆಡಿ ಮಾಡಿಸಿ ಇಡ್ತಿದ್ರು."

"ಹೊಳೀಲಿಲ್ಲ ಕಣಯ್ಯ. ಇರಲಿ, ಬಿಡು."

......ಗೋವಿಂದ ಗಜಾನನನೊಡನೆ ಮನೆ ತಲಪಿದಾಗ ಕಾಫಿ ತಿಂಡಿ ಸಿದ್ಧವಾಗಿತ್ತು. ತಟ್ಟೆ ಲೋಟಗಳ ಮುಂದೆ ಅವರಿಬ್ಬರೂ ಕುಳಿತಾಗ ಶ್ರೀನಿವಾಸಯ್ಯ ಗಜಾನನನೊಡನೆ, "ಬಂದ ಕೆಲಸವಾಯಿತೊ?" ಎಂದು ಕೇಳಿದರು.

"ಆಯ್ತು. ಪಟೇಲರ ಒತ್ತಾಯಕ್ಕೆ ಅಲ್ಲಿ ಒಂದು ಲೋಟ ಹಾಲು ಕುಡೀಬೇಕಾಯ್ತು," ಎಂದ ಗಜಾನನ.

"ಅಪ್ಪಟ ಎಮ್ಮೆ ಹಾಲು," ಎಂದು ಗೋವಿಂದ ಮಾತು ಕೂಡಿಸಿದ.

"ಶಾಮಣ್ಣ ಒಳ್ಳೆಯವನು," ಎಂದರು ಶ್ರೀನಿವಾಸಯ್ಯ.

....ಅವರಿಬ್ಬರೂ ಕೈತೊಳೆದುಕೊಂಡು ಆದಮೇಲೆ ದೊಡ್ಡಮ್ಮ, "ಗೋವಿಂದೂ. ಸ್ವಲ್ಪ ಒಳಗ್ಬಾ," ಎಂದರು.

ಈ ಕರೆ ಜಾತಕಗಳಿಗೆ ಸಂಬಂಧಿಸಿದ ಮಾತುಕತೆಗೇ ಎಂದು ಊಹಿಸುತ್ತ ಗೋವಿಂದ ಒಳಕ್ಕೆ ಹೋದ.

ಊಟದ ಮನೆಯಲ್ಲಿ ದೊಡ್ಡಮ್ಮ ಗೋಡೆಗೊರಗಿ ಕುಳಿತರು.

"ನೀನೂ ಕೂತ್ಕೊ," ಎಂದರು.

ಗೋವಿಂದ ಅವರ ಆದೇಶವನ್ನು ಪಾಲಿಸಿ, "ಅಣ್ಣಯ್ಯ ಜಾತಕಗಳನ್ನು ನೋಡಿ ಆಯ್ತೋ?" ಎಂದು ಕೇಳಿದ.

"ಹೂಂ ಕಣೋ. ಆ ಲಾಯರಿ ಮಗಳದೂ ನಿಂದೂ ಸರಿಕೂಡುತ್ವೆ–ಅಂದ."

"ಛೆ ! ಛೆ ! ಲಾಯರ್ ಸಾಹೇಬರಿಗೆ ಅಳಿಯ ಗ್ರಾಜ್ಯುಯೇಟ್ ಆದರೂ ಆಗಿರ್ಬೇಕು. ಅದಕ್ಕೆಲ್ಲಾ ಪದ್ಮನೇ ಸರಿ."

"ಏನೋಪ್ಪ. ನೀನೇ ಹೀಗಂದ್ರೆ ಹ್ಯಾಗೊ ಗೋವಿಂದು ?"

"ಹೇಳ್ತೀನಿ ಕೇಳು, ದೊಡ್ಡಮ್ಮ. ನಗರದಲ್ಲಿ ಎಂಥೆಂಥಾ ಜ್ಯೋತಿಷ್ಕರು ಬೇಕಾದರೂ ಇದಾರೆ. ಮಂತ್ರಿಗಳು ಮಹಾರಾಜರೆಲ್ಲ ಬಂದು ಬಾಗಿಲು ಕಾಯುವಂಥ ಜ್ಯೋತಿಷ್ಕರು. ವಿಷ್ಣುಮೂರ್ತಿಗಳು ಬೇಕು ಅಂದರೆ ಜಾತಕಗಳಲ್ಲಿ ಎಂಥ ದೋಷ ಇದ್ದರೂ ನಿವಾರಣೆ ಮಾಡಿಸ್ತಾರೆ."

ದೊಡ್ಡಮ್ಮ ಅವಾಕ್ಕಾದರು.

ಉಸಿರೆಳೆದುಬಿಟ್ಟು ಅವರೆಂದರು :

" ಹೀಗೂ ಮಾಡ್ತಾರೇನೊ ? ಜಾತಕ ಬದಲಾಯಿಸೋದ್ಕಾಗುತ್ತಾ? "

" ಬದಲಾಯಿಸೋದಲ್ವಮ್ಮ ; ಸರಿಪಡಿಸೋದು. ಅದಕ್ಕೆ ರೆಕ್ಟಿಫಿಕೇಷನ್ ಡೀಡ್ ಅಂತಾರೆ. ಬ್ರಹ್ಮ ಅವಸರದಲ್ಲಿ ಏನೋ ಬರೆದ ಅನ್ನು. ಬುದ್ಧಿಪೂರ್ವಕ ಅಲ್ಲ, ಅವಸರದಲ್ಲಿ ಏನೋ ಬರೆದ. ಅದನ್ನ ಅಲ್ಲಿ ಇಲ್ಲಿ ಸುಳಿ ಉಕೊಂಬು ಕೊಟ್ಟು ತಿದ್ದಿದರಾಯ್ತು."

ದೊಡ್ಡಮ್ಮ ಧ್ವನಿ ಏರಿಸಿದರು:

" ಗೋವಿಂದ, ಹೀಗೆಲ್ಲಾ ಮಾತಾಡಬಾರ್ದು."

" ಸರಿ, ನಾನೊಬ್ಬ ಮಾತಿನಮಲ್ಲ. ಹೇಳು ದೊಡ್ಡಮ್ಮ, ನನ್ನಿಂದ ಏನಾಗ್ಬೇಕು ?"

" ಈ ಮದುವೆ ವಿಷಯದಲ್ಲಿ—"

" ನಾನು ತೀರ್ಮಾನ ಮಾಡ್ಬಿಟ್ಟಿದೀನಿ. ದೊಡ್ಡಮಗಳನ್ನ ನನಗೆ ಕೊಡಬೇಕು ಅನ್ನೋದು ವಿಷ್ಣುಮೂರ್ತಿಗಳ ಇಚ್ಛೆ. ಅವರನ್ನ ನಿರಾಶೆಗೊಳಿಸೋದು ನನಗೆ ಸಮ್ಮತವಿಲ್ಲ. ಪದ್ಮನದೇ ನಿದ್ದರೂ ಅವನಿಗೆ ಸಂಬಂಧಿಸಿದ್ದು. ನಾನೇನು ಹೇಳ್ಲಿ ?"

" ಜಾತಕಗಳನ್ನ ಗಂಗಾಧರ ಶಾಸ್ತ್ರಿಗೆ ತೋರಿಸೂಂತ ನಿನ್ನ ಅಣ್ಣಯ್ಯನಿಗೆ ಹೇಳಿದೀನಿ".

" ಓಹೋ ತೋರಿಸಿ. ಧಾರಾಳವಾಗಿ ತೋರಿಸಿ. ಆದರೆ ಒಂದು ಮಾತ್ರ ಮರೀಬೇಡಿ, ದೊಡ್ಡಮ್ಮ. ಜ್ಯೋತಿಷ್ಯದಲ್ಲಿ ಇದೇ ಕೊನೆ ಅನ್ನೋದಿಲ್ಲ. ಈ ಸಂಬಂಧ ಕುದುರಬೇಕೂಂತಿದ್ದರೆ, ಅಣ್ಣಯ್ಯ ನಗರಕ್ಕೂ ಹೋಗಿ ಬೇರೆ ವಿದ್ವಾಂಸರನ್ನ ನೋಡೋದು ಅಗತ್ಯವಾದೀತು."

ದೊಡ್ಡಮ್ಮನ ದೃಷ್ಟಿಗೆ ಗೋವಿಂದನ ಹಿಂಬದಿಯಲ್ಲಿ ಬಾಗಿಲ ಬಳಿ ನಿಂತಿದ್ದ ಶ್ರೀನಿವಾಸಯ್ಯ ಕಣ್ಣಿಗೆ ಬಿದ್ದರು.

" ಕೇಳಿದೆಯೇನೋ ಶೀನ ?" ಎಂದರು, ದೊಡ್ಡಮ್ಮ.

ಶ್ರೀನಿವಾಸಯ್ಯ ಅಂದರು :

" ಇಂಥ ಪುತ್ರರತ್ನಕ್ಕೆ ತಂದೆಯಾಗಿದೀನಲ್ಲಾ—ನಾನು ಧನ್ಯ, ಧನ್ಯ !"

" ಹೋಗಲಿ ಬಿಡು. ಶಾಸ್ತ್ರೀನ ಇಷ್ಟು ನೋಡ್ಕೊಂಡ್ಬಾ."

ಶ್ರೀನಿವಾಸಯ್ಯ ನಿಂತಲ್ಲಿಂದ ಚಲಿಸುವ ತನಕ ಗೋವಿಂದ ಸುಮ್ಮನಿದ್ದ. ತಂದೆ ಪಡಸಾಲೆ ಯತ್ತ ಹೋದರೆಂಬುದು ಖಚಿತವಾದೊಡನೆ, ದೊಡ್ಡಮ್ಮನಿಗೆ ಆತನೆಂದ:

" ನಾಳೆ ಬೆಳಗ್ಗೆ ಗಜಾನನ ನಗರಕ್ಕೆ ಹೋಗ್ತಾನೆ. ಅವನ ಜತೆ ನಾನೂ ಹೋಗ್ಬೇಕಾಗುತ್ತೆ. ಪಟೇಲರ ಕೆಲಸ ಒಂದಿದೆಯಲ್ಲ ? ಅಣ್ಣಯ್ಯನೂ ನಮ್ಮ ಜತೆ ಬಂದರೆ ಚೆನ್ನಾಗಿರುತ್ತೆ. ವಿಷ್ಣುಮೂರ್ತಿಗಳನ್ನು ಕಂಡು, ಆ ಲಾಯರನ್ನ ಭೇಟಿ ಮಾಡಿ, ಯಾವುದಾದರೂ ಇತ್ಯರ್ಥಕ್ಕೆ ಬಂದೇ ಅಣ್ಣಯ್ಯ ವಾಪ್ಸಾಗಬಹುದು. ಏನಂತೀಯಾ ದೊಡ್ಡಮ್ಮ ?"

" ಶಾಸ್ತ್ರಿ ಏನು ಹೇಳ್ತಾನೋ ನೋಡೋಣ," ಎಂದು ನುಡಿದು ದೊಡ್ಡಮ್ಮ ಎದ್ದರು...!

...ಅಜ್ಜಿ ಮತ್ತು ಮೊಮ್ಮಗನ ಸಂಭಾಷಣೆ ಕಿವಿಗೆ ಬಿದ್ದ ಭಾಗೀರಥಿಗೆ, " ಅಬ ಎಂಥ ಧೈರ್ಯ ಗೋವಿಂದನದು !" ಎನಿಸಿತು.

" ಈಗಲೇ ಹೀಗೆ. ಹೆಂಡತಿ ಬಂದ ಮೇಲೆ ಇವನನ್ನು ಹಿಡಿಯೋರುಂಟೆ ?" ಎಂದು ಕೊಂಡಳು.

ಕನಸಿನಲ್ಲಿ ತನ್ನ ಕೈ ಹಿಡಿದೆಳೆದ ಧಡೂತಿ ಹುಡುಗಿಯ ನೆನಪಾಗಿ ಅವಳಿಗೆ ಭಯವಾಯಿತು.

...ರಾತ್ರಿ ಶ್ರೀನಿವಾಸಯ್ಯ ಗಂಗಾಧರ ಶಾಸ್ತ್ರಿಗಳ ಮನೆಯಿಂದ ಮರಳಿದರು. ದೇವರ

ಮನೆಯಲ್ಲಿ ದೀಪ ನಮಸ್ಕಾರಕ್ಕೆಂದು ಕುಳಿತಿದ್ದ ತಾಯಿಯಲ್ಲಿಗೆ ಬಂದರು.

ಆಕೆ ತಲೆ ಎತ್ತಿ ನೋಡಿದಾಗ ಶ್ರೀನಿವಾಸಯ್ಯ ಅಂದರು :

"ನಾನು ಹೇಳಿದ್ದನ್ನೇ ಶಾಸ್ತ್ರಿಗಳೂ ಹೇಳಿದ್ರು."

ದೇವರ ಮುಂದೆ ಕುಳಿತು ಮನಸ್ಸು ಶಾಂತವಾಗಿದ್ದ ದೊಡ್ಡಮ್ಮ ನುಡಿದರು :

"ಇಬ್ಬರೂ ನೋಡಿಯಾಯ್ತು, ಮೂರನೆಯವರೂ ಒಬ್ಬರು ನೋಡ್ಲಿ. ನಾಳೆ ಹುಡುಗರ ಜತೆ ನಗರಕ್ಕೆ ಹೋಗಿ ಬಾ, ಶೀನ."

"ನಾನೇ ? ನಗರಕ್ಕೆ ಹೋಗಿಬರಲಿ ?"

ಭಾಗ್ಯನಗರವೆಂದೂ ಶ್ರೀನಿವಾಸಯ್ಯನವರ ಆಕರ್ಷಿಸಿರಲಿಲ್ಲ. ಮಕ್ಕಳ ದೃಷ್ಟಿಯಿಂದ ಪಟ್ಟಣವಾಸಿಗಳೊಡನೆ ಸಂಬಂಧ ಬೆಳೆಸಲು ಅವರು ಒಪ್ಪಿದ್ದರೇ ಹೊರತು—

ಸುತ್ತಮುತ್ತಲ ಹಳ್ಳಿಗಳಿಂದಲೋ ತಮ್ಮ ಪೂರ್ವಜರು ವಾಸವಾಗಿದ್ದ ಮಲೆನಾಡಿನಿಂದಲೋ ಸೊಸೆಯರನ್ನು ಹುಡುಕಿ ತರುವುದು ಸಾಧ್ಯವಿದ್ದಿದ್ದರೆ—

ದೊಡ್ಡಮ್ಮ ಅಂದರು :

"ಗೋವಿಂದ ಈ ರೀತಿ ಹಟ ಮಾಡ್ತಿರುವಾಗ, ನಿಮ್ಮ ಸಂಬಂಧ ಬೇಡ ಅಂತ ವಿಷ್ಣುಮೂರ್ತಿಗೆ ಹೇಳಿ ಕಳಿಸೋದು ಚೆನ್ನಾಗಿರೋಲ್ಲ, ಶೀನ. ಇವನು ಅಲ್ಲಿ ಏನೇನು ಮಾಡ್ಕೊಂಡಿದಾನೋ ಯಾರಿಗೆ ಗೊತ್ತು ? ಇವನ ಜತೆಗೆ ನೀನೂ ಹೋಗು. ಆಗ ನಿನಗೇ ವಿಷಯ ಗೊತ್ತಾಗುತ್ತಲ್ಲ ?"

ಮುಖವನ್ನು ಅಂಗೈಯಿಂದ ಒರೆಸಿ, ಶ್ರೀನಿವಾಸಯ್ಯ, "ಆಗಲಿ ಹೋಗ್ತೀನಿ" ಎಂದರು.

...ಅಡುಗೆ ಮನೆಯಲ್ಲಿದ್ದ ಭಾಗೀರಥಿ, ದೇವರ ಮನೆಯಿಂದ ಕೇಳಿಸಿದ ಮಾತುಗಳನ್ನು ಮೆಲುಕು ಹಾಕಿ, 'ಬೀಸುತ್ತಿರುವ ಈ ದೊಣ್ಣೆಯಿಂದ ನಾನು ತಪ್ಪಿಸಿಕೊಳ್ಳೋದುಂಟೆ ?' ಎಂದು ಮನಸ್ಸಿನೊಳಗೇ ಗೋಳಾಡಿದಳು.

...ರಾತ್ರೆ ಸೀಮೆ ಎಣ್ಣೆಯ ದೀಪವನ್ನು ಆರಿಸಿದ ಮೇಲೆ, ಗಂಡನ ಹತ್ತಿರಕ್ಕೆ ಸರಿದು, ಭಾಗೀರಥಿ, "ರೀ. ಮಾವ ನಾಳೆ ನಗರಕ್ಕೆ ಹೋಗ್ತಾರಂತೆ," ಎಂದಳು.

"ಹೋಗಲಿ. ಏನೀಗ ?" ಎಂದ, ಗೋಪಾಲ.

"ಅಯ್ಯೋ..." ಎಂದು ಭಾಗೀರಥಿ ನಿಟ್ಟುಸಿರುಬಿಟ್ಟಳು.

## ೧೬

ರಾತ್ರೆ ಆ ಹೋಟೆಲಿನ ಮನುಷ್ಯ ಗಜಾನನ ಪದ್ಮನಾಭನ ಕೊಠಡಿಯಲ್ಲಿ ಮಲಗಿದ್ದ. ಮೊಮ್ಮಗನೊಡನೆ ಮದುವೆಯ ಪ್ರಸ್ತಾಪ ಮಾಡಲು ದೊಡ್ಡಮ್ಮ ಅಳುಕಿರಬಹುದು. ಆದರೆ, ಸಂಕೋಚಪಡುವ ಅಗತ್ಯ ಗಜಾನನನಿಗೆ ಇಲ್ಲವಲ್ಲ.

ಅವನೆಂದ :

"ಮೋಹನರಾಯರು ನಿಮ್ಮ ವಿಷಯ ಬಹಳ ಕೇಳ್ತಾ ಇದ್ರು ಪದ್ಮನಾಭರಾವ್."

ಪದ್ಮ, ಮಲಗಲು ಅಣಿಯಾಗುತ್ತಿದ್ದವನು ಆಕಳಿಸಿ, "ಯಾವ ಮೋಹನರಾಯರು?" ಎಂದು ಕೇಳಿದ.

"ಓಹೋಹೋ ಏನೂ ತಿಳೀದವರ ಹಾಗೆ ಮಾತಾಡ್ತೀರಲ್ಲ! ಮೋಹನರಾಯರು ಗೊತ್ತಿಲ್ವೆ ?"

"ಇಲ್ಲ."

"ಲಾಯರು."

"ಲಾಯರೆ?"

"ಹ್ಞ."

"ಮಗಳ ಜಾತಕವನ್ನ ನಿಮ್ಮ ತಂದೆಯವರಿಗೆ ಕಳಿಸಿಕೊಟ್ಟಿದಾರೆ."

"ಯಾಕೆ ?"

"ಯಾಕೆ? ಮೋಹನರಾಯರು ನಿಮ್ಮ ವಿಷಯ ಬಹಳ ಕೇಳ್ತಾ ಇದ್ರು ಅಂದೆನಲ್ಲ ?"

ಪದ್ಮನಾಭನ ಮುಖ ಸ್ವಲ್ಪ ಕೆಂಪೇರಿತು, ಸಿಟ್ಟಿನಿಂದ. ಇಷ್ಟೊಂದು ಸಲಿಗೆ ವಹಿಸಿ ಮಾತನಾಡುವನಲ್ಲ ಈತ ?

ಪದ್ಮನಾಭ ಸುಮ್ಮನಿದ್ದುದನ್ನು ಕಂಡು ಗಜಾನನನೇ ಮುಂದುವರಿದ :

"ನಿಮ್ಮ ಅಣ್ಣ ಗೋವಿಂದರಾಯರಿಗಂತೂ ವಿಷ್ಣುಮೂರ್ತಿಗಳ ದೊಡ್ಡ ಮಗಳನ್ನ ತರೋದು ಹೆಚ್ಚು ಕಮ್ಮಿ ನಿಷ್ಕರ್ಷೆ ಆದ ಹಾಗೆಯೇ."

ತುಟಿ ಕಚ್ಚಿ ಬೇಕು ಬೇಕೆಂದೇ ಪದ್ಮನಾಭ ಕೇಳಿದ :

"ಯಾವ ವಿಷ್ಣುಮೂರ್ತಿಗಳು ? ನಮ್ಮ ಹಾಸ್ಟೆಲ್ನಲ್ಲಿ ಒಬ್ಬ ಅಡುಗೆ ಭಟ್ಟ ಇದಾನೆ, ವಿಷ್ಣು ಅಂತ."

ಮಾತಿನ ಮೊನೆ ನಾಟಿತಾದರೂ, ಪದ್ಮನಾಭ ಆಡಿದುದು ವ್ಯಂಗ್ಯೋಕ್ತಿ ಎಂಬುದನ್ನು ಒಪ್ಪಿಕೊಳ್ಳಲು ಇಷ್ಟಪಡದೆ ಗಜಾನನ ನುಡಿದ :

"ಛೆ! ಛೆ! ಗಣೇಶಭವನದ ಮಾಲಿಕ ವಿಷ್ಣುಮೂರ್ತಿಗಳು. ಸ್ವಲ್ಪ ದಿವಸದ ಕೆಳಗೆ ನಿಮ್ಮಲ್ಲಿಗೆ ಬಂದಿದ್ದರಲ್ಲ !"

"ಅವರೊ?"

"ಅವರೇ. ಗೋವಿಂದರಾಯರನ್ನ ಅಳಿಯ ಮಾಡ್ಕೊಳ್ತಾರೆ."

"ಹಾಗೋ?"

"ಅಂತೂ ನಿಮ್ಮಿಬ್ಬರ ಮಾವನ ಮನೆಗಳೂ ಒಂದೇ ಊರಲ್ಲಿ".

"ಒಬ್ಬರದು ಮೊದಲಾಗಲಿ. ನೀವು ಮಲಕೊಳ್ಳಿ."

"ನಿದ್ದೆ ಬಂತೆ ?"

"ಹೌದು," ಎಂದು ಪದ್ಮನಾಭ ಮತ್ತೊಮ್ಮೆ ಆಕಳಿಸಿದ. ಈಗಿನದು ನಟನೆ.

ಹೊರಗಿದ್ದ ಗೋವಿಂದ ಒಳಕ್ಕೆ ಬರುತ್ತ, "ದೀಪ ಆರಿಸಿಬಿಡ್ಲಾ ಗಜಾನನ ? ಹೊದ್ದು ಕೊಳ್ಳೋಕೆ ಕೊಟ್ಟಿದಾರಾ ?" ಎಂದು ಕೇಳಿದ.

"ಓಹೋ ಆರಿಸಿ."

ಗೋವಿಂದ ಲಾಂದ್ರದ ಬತ್ತಿ ಆರುವವರೆಗೂ ಕಿರಿದುಗೊಳಿಸಿ, ಮಲಗಿಕೊಂಡು

"ರಾಮು—ಚಂದ್ರು," ಎಂದ.

ಕಿಟಿಕಿಯಿಂದ ಗಾಳಿ ತಣ್ಣಗೆ ಬೀಸಿತು, ಆಕಾಶದಲ್ಲಿ ಮಿಂಚು ಕೋರೈಸಿ, ಅದರ ಪ್ರಭೆ ಕಿಟಿಕಿಯ ಮೂಲಕ ಒಂದು ಕ್ಷಣ ಕೊಠಡಿಯನ್ನು ಹೊಕ್ಕಿತು.

"ಮಳೆ ಬರುತ್ತೆ, ಗಜಾನನ. ಕಿಟಿಕಿ ಈಗ಼್್ಲೇ ಮುಚ್ಕೋಣವೊ, ಆಮೇಲೊ ?" ಎಂದ ಗೋವಿಂದ.

"ಬರಲಿ ಬಿಡಿ. ಇರಿಚಲು ಬೀಸಿದರೆ ಮುಚ್ಚಿದರಾಯ್ತು," ಗಜಾನನ ಉತ್ತರಿಸಿದ.

ಪದ್ಮನಾಭನಿಗೆ ನಿದ್ದೆ ಬರಲಿಲ್ಲ. ತನಗೆ ಹುಚ್ಚು ಹಿಡಿಸಿದ ಕಾಲೇಜಿನ ಪ್ರಮದೆ, ಪ್ರಮದೆಯಂತೆ ಕಂಡ ಕಣಿವೇಹಳ್ಳಿಯ ಸುಬ್ಬಿ... ಅಲ್ಲಾ ಈ ಮೋಹನರಾಯರ ಮಗಳು ಈ ಇಬ್ಬರ ಪ್ರತಿರೂಪವಾಗಬಲ್ಲಳೇನು ? ಮದುವೆ, ಮದುವೆ... ಬೇಡ ನನಗೆ ಎಂದರೇನಾದೀತು ? ಬಲಾತ್ಕಾರದಿಂದ ಬಾಸಿಂಗ ಕಟ್ಟುವರೆ ಇವರು ?

ಈ ಹಳ್ಳಿಯೊಂದು ಸೆರೆಮನೆ. ಇಲ್ಲಿಂದ ಪಾರಾಗಬೇಕು.

ಆದರೆ ಅಧ್ಯಯನದಲ್ಲಿ ತನಗೆ ಆಸಕ್ತಿಯೇ ಉಳಿದಿಲ್ಲವಲ್ಲ ? ಇನ್ನೊಂದು ವರ್ಷವನ್ನು ಕಳೆಯಬೇಕಲ್ಲ ಹೇಗಾದರೂ ! ಒಮ್ಮೆ ಪದವೀಧರನಾದೆನೆಂದರೆ ಗೆದ್ದ ಹಾಗೆ.

ಅಲ್ಲ—ಪದವೀಧರನಾಗದೆ ಇದ್ದರೆ ಏನಂತೆ ?

ತಾವು ಶ್ರೀಮಂತರು. ಆದರೆ ತನ್ನ ಕೈಯಲ್ಲಿ ಹಣವಿಲ್ಲ. ನಗರಕ್ಕಲ್ಲ—ದೂರ ಇನ್ನೆಲ್ಲಿಗಾದರೂ ಹೋಗಿ ಬಿಡಬೇಕು ; ಗಣೇಶಭವನದ ಅಪ್ಪನಂತಹ ಹೋಟೆಲಲ್ಲಿ ರೂಮು ಮಾಡಿಕೊಂಡು ಇರಬೇಕು ...

ಒಬ್ಬನೇ ಹೋಗಲೆ ? ಒಬ್ಬನೇ ? ಪ್ರಮದೆ ಬರುವಳೆ ತನ್ನ ಜತೆ ? ಸುಬ್ಬಿ ?

ಜೋಡಿದಾರರ — ಅಲ್ಲ, ಜಮೀನ್ದಾರರ — ಮನೆಯಲ್ಲಿ ಜೋಡಿ ಮದುವೆ.

ಪ್ರಮದೆಯಂಥದೇ ಹೆಣ್ಣಿನ ಕೈ ಹಿಡಿದು ತಾನು ಈ ಹಳ್ಳಿಯನ್ನೇ ಬಿಟ್ಟುಬಿಟ್ಟರೆ —

ಪಕ್ಕದ ಹಾಸಿಗೆಯಿಂದ ಗುಸುಗುಸು.

ಗಜಾನನ :

"ನಿಮ್ಮ ತಮ್ಮನಿಗೆ ನಿದ್ದೆ ಬಂತೋ ಹ್ಯಾಗೆ ?"

ಗೋವಿಂದ :

"ಅವನು ದಿಂಬಿಗೆ ತಲೆ ಸೋಂಕಿದ ತಕ್ಷಣ ನಿದ್ದೆ ಮಾಡೋ ಪುಣ್ಯ ಪುರುಷ."

"ಅಲ್ರೀ ಗೋವಿಂದರಾವ್ – ಮದುವೆ ಮಾತೆತ್ತಿದರೆ ಸಾಕು, ನಿಮ್ಮ ತಮ್ಮ ಸಿಡಿಮಿಡಿಯಾಗ್ತಾನಲ್ಲ. ಯಾಕೆ ?"

"ಅದೊಂದು ರಾಮಾಯಣ. ಈಗ ಬೇಡ ಆ ವಿಷಯ. ನೀನು ಮಲಕೋ."

"ಬೆಳಗ್ಗೆ ನಿಮ್ಮ ತಂದೇನೂ ಬರ್ತಾರೆ ಹಾಗಾದ್ರೆ."

"ಹ್ಞ. ಒಂಭತ್ತಕ್ಕೆ ಇಲ್ಲಿಂದ ಗಾಡಿ ಬಿಡೋಣ. ಹತ್ತು ಘಂಟೆ ಬಸ್ಸು ಸಿಗಬಹುದು."

"ಹಹ್ಞ. ನಡಕೊಂಡು ಹೋಗೋದಕ್ಕೆ ನೀವು ಗಾಡಿಬಿಡೋದು ಅಂತೀರಲ್ಲ, ಹಹ್ಞ!"

—ಅದೊಂದು ರಾಮಾಯಣ. ಪದ್ಮನಾಭ ತನ್ನನ್ನು ಕೇಳಿದ : ಯಾರು ರಾವಣ ? ನೀನೇ ತಾನೆ ? ಸುಬ್ಬಿಯನ್ನು ಅಪಹರಿಸಿಕೊಂಡು ಅಶೋಕವನಕ್ಕೆ ತೆರಳಿದವನು ನೀನೆಯೆ ?

—ಈಗ ಬೇಡ ಆ ವಿಷಯ. ಮತ್ತೆ ಯಾವಾಗ ? ತಾನಿಲ್ಲದಿದ್ದಾಗ. ಅವರಿಬ್ಬರೇ

ಉಳಿದಾಗ. ಸಂಪೂರ್ಣ ರಾಮಾಯಣವೊ, ವನವಾಸದ ತನಕವೊ ?

ಅಂತೂ ತಾನೊಬ್ಬ ಕೆಟ್ಟವನು. ಒಡಹುಟ್ಟಿದವನೇ ಹಾಗೆ ಹೇಳಬೇಕಾದರೆ ಉಳಿದವರು ಏನೆನ್ನಬೇಡ ?

ಪದ್ಮನಾಭ ನಿಟ್ಟುಸಿರುಬಿಟ್ಟ. ಹೊರಗೆ ಮಳೆ ಸುರಿಯತೊಡಗಿತು.

ನಡುರಾತ್ರಿಯವರೆಗೆ ಮಳೆ ಚೆನ್ನಾಗಿ ಬಂತು. ಆಮೇಲೆ ಕಡಮೆಯಾಗಿ ನಿಂತು ಹೋಯಿತು.

ದೊಡ್ಡಮ್ಮ ನಿದ್ದೆ ಹೋದುದು ಹೊರಗೆ ಸದ್ದೆಲ್ಲವೂ ಅಡಗಿದ ಬಳಿಕ.

ಆವರೆಗೂ ಅವರು ಚಿಂತಿಸುತ್ತಲಿದ್ದರು : ಮದುವೆಯ ವಿಷಯದಲ್ಲಿ ಸ್ವಲ್ಪ ಅವಸರ ಮಾಡಿದಂತಾಯ್ತೆ ?

ಪ್ರಶ್ನೆಗೆ ಅವರೇ ಉತ್ತರವೀಯುತ್ತಿದ್ದರು. ಇಲ್ಲ, ಅವಸರದ ಮಾತೇ ಇಲ್ಲ. ಈ ವರ್ಷವೇ ಇಬ್ಬರ ಮದುವೆಗಳನ್ನೂ ಮಾಡಿ ಮುಗಿಸುವುದು ಲೇಸು.

ಪದ್ಮನೊಡನೆ ಮಾತನಾಡುವುದು ಉಳಿದಿತ್ತು. ಬೆಳಗ್ಗೆ ಎದ್ದೊಡನೆಯೇ ಆ ಕೆಲಸ ವನ್ನು ತಾವು ಮಾಡಬೇಕು......

...ಬೆಳಗ್ಗೆ ಎದ್ದವರು, ಹೊಲದ ಆ ದಿನದ ದುಡಿಮೆಗೆ ಸಂಬಂಧಿಸಿ ಮಗನ ಯೋಚನೆ ಏನೆಂಬುದನ್ನು ಕೇಳಿ ತಿಳಿದು ಸಲಹೆ ನೀಡಿದರು.

"ನೀನು ನಗರಕ್ಕೆ ಹೋಗೋನು. ಸ್ನಾನ ಉಪಾಹಾರ ಮುಗಿಸ್ಕೊಂಡು ಹೊರಡು. ಇಲ್ಲೀದೆಲ್ಲ ಗೋಪು ನೋಡ್ಕೊತಾನೆ," ಎಂದರು ಮಗನೊಡನೆ.

ಅಡುಗೆ ಮನೆಗೆ ತೆರಳಿ ಹಿರಿಯ ಮೊಮ್ಮಗನ ಮಡದಿ ಭಾಗೀರಥಿಗೆ ನಿರ್ದೇಶಗಳನ್ನು ನೀಡಿದರು.

ಬೇಗನೆ ಸ್ನಾನ ಮಾಡಿ ಕಿರಿಯ ಮೊಮ್ಮಗನನ್ನು ದೊಡ್ಡಮ್ಮ ದೇವರ ಮನೆಗೆ ಕರೆದರು. ಅದೇ ಆಗ ಮುಖಮಾರ್ಜನ ಮಾಡಿಕೊಂಡು ಪಡಸಾಲೆಗೆ ಮರಳುತ್ತಿದ್ದ ಪದ್ಮನಾಭ. "ಯಾಕೆ ದೊಡ್ಡಮ್ಮ ? ನನ್ನದಿನ್ನೂ ಸ್ನಾನ ಆಗಿಲ್ಲ," ಎಂದ.

"ಪರವಾಗಿಲ್ಲ. ಒಳಗ್ಬಾ. ಚಿಕ್ಕ ಹುಡುಗರದೇನು ಮಹಾ ಮೈಲಿಗೆ?" ಎಂದರು ದೊಡ್ಡಮ್ಮ.

ಪದ್ಮ ದೇವರ ಮನೆಯೊಳಕ್ಕೆ ಕಾಲಿರಿಸಿದಾಗ, "ಬಾ ಕೂತ್ಕೊ," ಎಂದರು.

ದೊಡ್ಡಮ್ಮ ಈಗ ಮಾತನಾಡಲಿರುವುದು ಇಂಥದೇ ವಿಷಯ ಎಂದು ಊಹಿಸಿದ ಪದ್ಮನಾಭ, "ಏನು ಸಮಾಚಾರ ?" ಎಂದು ಕೇಳಿದ.

"ನಾನೊಂದು ಕೇಳ್ತೀನಿ, ನಡಸ್ಕೊಡ್ತೀಯಾ ಪದ್ಮ ?"

"........."

"ಅಕಾ, ಸುಮ್ಮನಾದೆ. ನಿನ್ನನ್ನ ಯಾವತ್ತಾದರೂ ಏನಾದರೂ ನಾನು ಕೇಳಿದೀನಾ ?"

"ನಾನು ಚಿಕ್ಕೋನು. ನನ್ನಲ್ಲಿ ಏನಿರುತ್ತೆ ದೊಡ್ಡಮ್ಮ ಕೊಡೋಕೆ ?"

"ನಿನ್ನ ತಾಯಿ ಇದ್ದಿದ್ರೆ ಈ ಕೆಲಸ ಅವಳೇ ಮಾಡ್ತಿದ್ಲು. ಅವಳಿಲ್ಲಾಂತ ಈ ಇಳಿ ವಯಸ್ನಲ್ಲಿ......"

"ಅದೇನು ಹೇಳ್ಬಿಡು, ದೊಡ್ಡಮ್ಮ."

"ನಿನ್ನ ತಂದೆ ನಿನಗೋಸ್ಕರ ಹೆಣ್ಣು ಹುಡುಕ್ತಿದಾನೆ."

"ಇದೇನು ಇದ್ದಕ್ಕಿದ್ದ ಹಾಗೆ—"

"ದಿವಸ ಇದ್ದ ಹಾಗೆ ದಿವಸ ಇರುತ್ತಾ ಪದ್ಮ ? ನನಗೆ ವಯಸ್ಸಾಯ್ತು. ಇನ್ನೆಷ್ಟು ವರ್ಷ ನಾನು ಬದುಕಿರೋಕೆ ಸಾಧ್ಯ ಹೇಳು. ಗೋವಿಂದನ್ದೂ ನಿನ್ದೂ ಮದುವೆ ನೋಡಿ ಕಣ್ಣುಮುಚ್ಬೇಕೂಂತ ನನ್ನ ಆಸೆ."

"........."

"ಹುಡುಗಿ ವಿದ್ಯಾವತಿಯಾಗಿರ್ಬೇಕು—ಅಂತ ಶೀನನಿಗೆ ಹೇಳಿದೀನಿ."

"ನನಗಿನ್ನೂ ಓದೋದು ಇದೆಯಲ್ಲ, ದೊಡ್ಡಮ್ಮ ?"

"ನಂಗೊತ್ತಿಲ್ವೆ ? ಅಗತ್ಯ ಓದು. ಓದಿ ಪ್ಯಾಸಾಗು. ಶೀನ ಹೇಳ್ತಿದ್ನಲ್ಲ—ಈಗಿರೋ ಸ್ಕೂಲ್ನ ಹೈಸ್ಕೂಲು ಮಾಡಿ, ಅದಕ್ಕೆ ನೀನು ಹೆಡ್ಮೇಸ್ಟ್ರಾಗಿ......"

"ಸರಿ, ಸರಿ ! ಅಂತೂ ಹುಟ್ಟಿದ ಮಕ್ಕಳು ಸಾಯೋವರೆಗೂ ಅವರಿಗಾಗಿ ಎಲ್ಲ ಏರ್ಪಾಟನ್ನೂ ಹೆತ್ತವರೇ ಮಾಡ್ತಾರೆ ಅನ್ನು !"

"ಹಾಗಂದರೇನೊ ಪದ್ಮ !"

"ಹೋಗ್ಲಿ ಬಿಡು, ದೊಡ್ಡಮ್ಮ."

ಹುಡುಗ ಬೇಸರಗೊಂಡನಲ್ಲ ಎಂದು ದೊಡ್ಡಮ್ಮನಿಗೆ ಕಸಿವಿಸಿ.

"ಪದ್ಮ, ನಾನು ಸಾಕಿದ ಮಗು ಅಲ್ವೇನೊ ನೀನು ? ಹೀಗೆ ಕೇಳಿದೆ ಅಂತ ಬೇಜಾರು ಬೀಳ್ಳೋದೆ ?"

"ಇಲ್ಲ, ಇಲ್ಲ."

"ಎಲ್ಲಿ—ನನ್ನ ಮಗು ಸ್ವಲ್ಪ ನಕ್ಕರೆ ಚೆನ್ನಾಗಿರುತ್ತಪ್ಪ."

"ನಾನು ಏಳ್ಲಾ ದೊಡ್ಡಮ್ಮ?"

"ನಿನ್ನ ತಂದೆ ಇವತ್ತು ನಗರಕ್ಕೆ ಹೋಗ್ತಾನೆ. ನಿಶ್ಚಿತಾರ್ಥದ ಮಾತೆಲ್ಲ ಆಗೋಕ್ಮುಂಚೆ ನೀನೊಮ್ಮೆ ಕನ್ಯೇನ ನೋಡಪ್ಪ."

"ಇದೊಳ್ಳೆ ಪೀಕಲಾಟವಾಯ್ತಲ್ಲಾ !"

"ನಿನ್ನನ್ನ ಈ ಭೂಮಿಗೆ ಇಳಿಸಿ ಬೆಳೆಸಿದ ಈ ಮುದಿಜೀವಕ್ಕೋಸ್ಕರ ಇದೊಂದನ್ನ ಮಾಡೋಕೆ ಆಗೊಲ್ವೇನೋ ಪದ್ಮ ?"

ದೊಡ್ಡಮ್ಮನ ಕಂಠ ಗದ್ಗದಿತವಾಗಿತ್ತು. ಪದ್ಮನಾಭ ಬೆಚ್ಚಿಬಿದ್ದ. ತನ್ನ ಮುತ್ತಜ್ಜಿ ಅತ್ತುದನ್ನು ಎಂದೂ ಆತ ಕಂಡವನಲ್ಲ. ಆ ಕಣ್ಣುಗಳಿಂದ ಕಂಬನಿ ಒಸರಬಹುದೆನ್ನುವುದೂ ಅವನ ಪಾಲಿಗೆ ಕಲ್ಪನಾತೀತವಾಗಿತ್ತು.

ದೊಡ್ಡಮ್ಮ ಅತ್ತಿರಲಿಲ್ಲ. ಆದರೆ ಧ್ವನಿ ಕಂಪಿಸಿತ್ತು.

ಪದ್ಮನಾಭ ಎದ್ದು ಅಂದ :

"ನಿಮಗೆ ಹ್ಯಾಗೆ ಸರಿ ತೋಚುತ್ತೋ ಹಾಗೆ ಮಾಡಿ ದೊಡ್ಡಮ್ಮ."

ದೊಡ್ಡಮ್ಮ ತಲೆ ಎತ್ತಿ, ಎದ್ದು ನಿಂತ ಮೊಮ್ಮಗನನ್ನು ನೋಡಿದರು. ಅವರ ಕಣ್ಣುಗಳು ಮಿನುಗುತ್ತಿದ್ದುವು.

ಮೃದುವಾದ ಧ್ವನಿಯಲ್ಲಿ ಅವರೆಂದರು :

" ನೂರು ವರ್ಷ ಬಾಳು, ಪದ್ಮ. ನನ್ನ ಆಯುಸ್ಸೂ ನಿನಗಿರಲಪ್ಪ."

...ಅಡ್ಡಮಳೆ, ಹಳ್ಳಿಯವರ ಓಡಾಟ–ಸಡಗರ ರಂಗಣ್ಣನಲ್ಲಿ ಸ್ವಲ್ಪಮಟ್ಟಿಗೆ ಹೊಸ ಚೇತನವನ್ನು ತುಂಬಿದುವಾದರೂ, ಅವನೊಳಗೆ ದಟ್ಟೈಸುತ್ತಿದ್ದ ಬೇಸರದ ಕಾರ್ಮೋಡವನ್ನು ಚೆದರಿಸಲು ಅವು ಶಕ್ತವಾಗಲಿಲ್ಲ.

ತರಗತಿಗಳು ಆರಂಭವಾಗುವ ತನಕ ಇಲ್ಲಿಯೇ ಯಾಕಿರಬೇಕು ? ವಸತಿ–ಗೃಹವಂತೂ ತೆರೆದೇ ಇರುತ್ತದೆ. ಸ್ವಲ್ಪ ದಿನ ಮುಂಚಿತವಾಗಿಯೇ ಅಲ್ಲಿ ಬೀಡು ಬಿಡುವುದಲ್ಲವೆ ಮೇಲು? ಎಂದು ರಂಗಣ್ಣ ಯೋಚಿಸಿದ. ಮನಸ್ಸಿಗೆ ಒಪ್ಪಿಗೆಯಾಗುವ– ನಾಲಿಗೆಗೆ ರುಚಿಸುವ– ಒಂದಿಷ್ಟು ಕಾಫಿ ತಿಂಡಿ. ಹೊಗೆ ಕಾಣುವರೆಂಬ. ವಾಸನೆ ಹಿಡಿಯುವರೆಂಬ ಯಾವ ಭಯವೂ ಇಲ್ಲದೆ ಧೂಮಪಾನ; ಗೆಳೆಯರ ಒಡನಾಟ. ಚಲಚ್ಚಿತ್ರ ಮಂದಿರಗಳಿಗೆ ಭೇಟಿ. ನಿರಾತಂಕವಾಗಿ ಅಧ್ಯಯನ...

ಅಂತಹ ವಿಚಾರ ಸರಣಿ ಬಲಗೊಳ್ಳಲು ಹೆಚ್ಚಿನ ಕಾರಣಗಳು ಬೇಕೆ?

ಆದರೆ ತಂದೆಯ ಅನುಮತಿ ಪಡೆದು ರಂಗಣ್ಣ ಹೊರಡಬೇಕು. ಅವರಿಗೆ ತಿಳಿಸುವುದು ಹೇಗೆ? ರಜಾ ಮುಗಿಯಿತು ಎಂದು ಸುಳ್ಳಾಡಲೆ ? ತನ್ನಿಂದಾಗುವ ಕೆಲಸವೆ ಅದು ?

ವಿಚಿತ್ರ. ತಂದೆಗೆ ತಾನೆ ಅಚ್ಚುಮೆಚ್ಚಿನವನು, ಆದರೆ ತನ್ನೊಡನೆ ಅವರು ಮಾತನಾಡುವುದು ಕಡಮೆ. ಅವರ ವಾತ್ಸಲ್ಯ ತುಂಬಿದ ಧ್ವನಿ. ಮಗಳಿಗೇ ಮೀಸಲು. ಮೊನ್ನೆಯಷ್ಟೇ ಅನ್ನಲಿಲ್ಲವೆ ?

" ಸುಬ್ಬೀ..."

" ಏನಪ್ಪ ?"

" ಅರಿದಿರೋ ಸೀರೆ ಯಾಕ್ಮೊಗ ಉಟ್ಕೊಂತೀಯಾ ?"

" ಅತ್ತೆಮ್ಮ ಒಲ್ಕೊಡ್ತೀನಿ ಅಂದವರೆ."

" ಅದೇನು ಒಲೀತೀಯಮ್ಮ ? ಆ ನಿಂಗಿ ಬಂದರೆ ಅವಳಿಗೆ ಕೊಟ್ಬುಡು. ರಂಗಣ್ಣ ನಗರಕ್ಕೆ ಒಂಟಾಗ ಅವನ ಜತೆ ನಾನೂ ಓಗಿ, ನಿಂಗೆ ಎರಡು ಒಳ್ಳೇ ಸೀರೆ ತಕಂಬರ್ತೀನಿ."

" ಊನಪ್ಪ."

ಮೊದಲಾಗಿದ್ದರೆ ಸುಭದ್ರೆ ಅಣ್ಣನ ಕೊಠಡಿಗೆ ಬಂದು ಚಪ್ಪಾಳೆ ತಟ್ಟಿ ಕುಣಿಯುತ್ತಿದ್ದಳು :

" ನನಗೆ ಸೀರೆ ಬತ್ತದೆ ! ಒಸ ಸೀರೆ ಬತ್ತದೆ !"

[ ಅದಕ್ಕೂ ಹಿಂದೆ :

" ನಂಗೆ ಲಂಗ ಬತ್ತದೆ! ಒಸ ಲಂಗ ಬತ್ತದೆ !"]

ತನ್ನಿಂದೇನಾದರೂ ಅಂತಹ ಪ್ರಮಾದ ಆಗಿದ್ದರೆ ಸುಮ್ಮನಿರುತ್ತಿದ್ದರೆ ತಂದೆ ? ಆ ಜ್ವಾಲಾಮುಖಿ ಆರಲು ಬಹಳ ಕಾಲ ಬೇಕಾಗುತ್ತಿತ್ತು, ಬಹಳ ಕಾಲ.

ಆದರೆ ಸುಬ್ಬಿಯ ವಿಷಯದಲ್ಲಿ ಅವರು ದೂರ್ವಾಸನಾಗಲಿಲ್ಲ.

ಹೆಣ್ಣುಮಕ್ಕಳು ಎಂದರೆ ಎಲ್ಲ ತಂದೆಯರೂ ಹೀಗೆಯೋ ಏನೋ.

ಆ ದಿನದ ಬಳಿಕ ರಂಗಣ್ಣ—ಸುಭದ್ರೆಯರ ಸಂಬಂಧವೂ ಹೊಸ ರೂಪ ತಳೆದಿತ್ತು. ಮಾತು ಎಷ್ಟು ಬೇಕೋ ಅಷ್ಟು. ನೋಟದಲ್ಲಿ ನುಡಿಯಲ್ಲಿ ತ್ವೇಷ ದ್ವೇಷಗಳಿರಲಿಲ್ಲವಾದರೂ ಬಾಲ್ಯದಲ್ಲಿದ್ದ ಆತ್ಮೀಯತೆಯ ಹತ್ತು ತಂತುಗಳಲ್ಲಿ ಕೆಲವು ಕಡಿದು ಹೋದಂತಿತ್ತು.

ರಂಗಣ್ಣನಿಗನಿಸುತ್ತಿತ್ತು :

'ಇದು ಅನಿವಾರ್ಯ.'

ಅಲ್ಲದೆ, ಸುಬ್ಬಿ ಇನ್ನೊಬ್ಬರ ಮನೆಯನ್ನು ಬೆಳಗುವ ಹೆಣ್ಣು. ತಂದೆಯ ಮನಸ್ಸಿನಲ್ಲಿ ಏನಾಗುತ್ತಿದೆಯೋ ರಂಗಣ್ಣನಿಗೆ ತಿಳಿಯದು. ಆದರೂ ಅವನಿಗೆ ತೋರುತ್ತಿತ್ತು :

'ಅಪ್ಪ ಈ ವರ್ಷವೇ ಸುಬ್ಬಿಯ ಮದುವೆ ಮಾಡಿಬಿಡೋದು ಖಂಡಿತ.'

ತಾನು ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಬೇಕು. ಒಮ್ಮೆಯೂ ಫೇಲಾಗ ಬಾರದು. ಪದಕಗಳನ್ನು ಗಳಿಸಬೇಕು. ಉಚ್ಚ ಶಿಕ್ಷಣದ ವಿದ್ಯಾರ್ಥಿ ವೇತನ ದೊರಕಿಸಬೇಕು.

ಇಲ್ಲಿ ಇನ್ನೂ ಎಷ್ಟು ದಿನ ಇರೋಣ ?

ಮುಂದಿನ ವರ್ಷದಿಂದಂತೂ ಹಳ್ಳಿಗೆ ಬಂದು ಹೆಚ್ಚು ದಿನ ಇರುವ ಪ್ರಮೇಯವಿಲ್ಲ. ಚುಟುಕು ರಜೆ.

ಈ ಸಲದ ರಜೆಯನ್ನು ತಾನಾಗಿಯೇ ಮೊಟಕುಗೊಳಿಸಿದರಾಯಿತು.

ಯಾವಾಗ ಹೊರಡೋಣ ಹಾಗಾದರೆ ?

ಸುಬ್ಬಿಯನ್ನು ನಾಗಮ್ಮ ಕೇಳಿದರು :

"ಇವತ್ತು ಏನಡಿಗೆ ಮಾಡಾನ ?"

"ಏನಾದರೂ ಮಾಡಿ ಅತ್ತೆಮ್ಮ."

"ಸೊಪ್ಪೈತೆ, ಅಲ್ಲವಾ ?"

"ಊಂ."

"ಸರಿ—ಸಾರು ಮಾಡಾನ."

ನಾಗಮ್ಮನಿಗೆ ಬೇಸರ. ಎಷ್ಟು ಮಾಡಿದರೂ ಸುಬ್ಬಿ ಮೊದಲಿನಂತೆ ಆಗಲಿಲ್ಲವಲ್ಲ. ಒಂದು ಬಗೆಯ ಮಬ್ಬು, ಮಂಕು. ದಿನದಲ್ಲಿ ಸ್ವಲ್ಪ ಹೊತ್ತು ಚುರುಕಾಗಿರುತ್ತಾಳೆ. ಉಳಿದ ವೇಳೆಯಲ್ಲಿ ಯಾವ ಲವಲವಿಕೆಯೂ ಇಲ್ಲ.

ಏನು ಪರಿಹಾರ ಇದಕ್ಕೆ ?

ನಾಗಮ್ಮನಿಗೆ ಅನಿಸುತ್ತಿತ್ತು :

'ಉಡುಗಿ ಸರೋಗ್ಬೇಕಾದ್ರೆ ಮದುವೆ ಮಾಡ್ಬಿಡ್ಬೇಕು.'

ಅಣ್ಣ ಆ ಯೋಚನೆಯನ್ನು ಮಾಡುತ್ತಿರುವನೋ ಇಲ್ಲವೋ.

ನಿಜವಾಗಿ ನೋಡಿದರೆ ಇಷ್ಟು ದಿವಸ ಹೀಗೇ ಬಿಟ್ಟಿರಬಾರದಾಗಿತ್ತು. ಈಗಿನ ಕಾಲವಾದ್ದರಿಂದ ಈ ರೀತಿ. ಹಿಂದೆ ಸಾಧ್ಯವಿತ್ತೆ ಇದು ? ಆದರೂ, ಈಗಲಾದರೂ...

ಅಬ್ದುಲ್ಲನ ಪ್ರಕರಣಕ್ಕೊಂದು ಮುಕ್ತಾಯ ಬರೆದು, ಹೊಲಗಳಲ್ಲಿ ಸುತ್ತಾಡಿ ದಣಿದು, ರಾತ್ರೆ ಉಂಡು ಪಲ್ಲಂಗದ ಮೇಲೆ ಶಾಮೇಗೌಡರು ಒರಗಿದಾಗ, ಒಳಗಿನ ಕೆಲಸವನ್ನೆಲ್ಲ ಮುಗಿಸಿ ನಾಗಮ್ಮ ಅಣ್ಣನ ಹತ್ತಿರ ಕ್ಕೆ ಬಂದು ನೆಲದ ಮೇಲೆ ಕಾಲು ಚಾಚಿ ಕುಳಿತರು.

ಶಾಮೇಗೌಡರು ಕೇಳಿದರು :

"ಏನು ನಾಗು ?"

"ಯಾನಿಲ್ಲ, ಯಾನಿಲ್ಲ," ಎಂದರು, ನಾಗಮ್ಮ.

"ನಿನ್ನ ಮನಸ್ನಾಗೆ ಏನೋ ಐತೆ."

ನೀಳವಾಗಿ ಉಸಿರೆಳೆದುಕೊಂಡು ನಾಗಮ್ಮ ಅಂದರು.

"ಆ... ಅದು... ಅಲ್ಲಣ್ಣ, ಸುಬ್ಬೀ ಮದುವೆ ಈ ವರ್ಸಾನೆ ಮಾಡಿದ್ರೆ ಚೆಂದಾಕಿರಲ್ಲವಾ ?"

ಶಾಮೇಗೌಡರು ಒಂದು ಕ್ಷಣ ಏನನ್ನೂ ಹೇಳಲಿಲ್ಲ.

ಮೌನವಾಗಿದ್ದವರು, ಛಾವಣಿ ನೋಡುತ್ತ ಅಂದರು :

"ನಾನೂ ಅದೇ ಯೋಚ್ನೆ ಮಾಡ್ಕೊಂಡು ಮಲಕ್ಕಂಡಿದ್ದೆ. ನಿಜ ನಾಗೂ. ಈ ವರ್ಸಾನೆ ಮಾಡಿದ್ರೆ ಚೆಂದಾಕಿರ್ತದೆ. ನಾಳೆಯೋ ನಾಡಿದ್ದೋ ಓದಿ ಮಾತಾಡ್ಬರ್ತೀನಿ."

ನಾಗಮ್ಮನವರ ಹೃದಯ ಹಗುರವಾಯಿತು.

## ೧೨

ಗೋವಿಂದ, ಪಟೇಲರು ಕೊಟ್ಟ ರಾಜೀಪತ್ರದೊಡನೆ ಗಜಾನನನ ಜತೆಯಲ್ಲಿ ತಂದೆಯನ್ನು ಕರೆದುಕೊಂಡು ನಗರಕ್ಕೆ ಹೋದ ಮಾರನೆಯ ದಿನ ಮಧ್ಯಾಹ್ನ, ಶ್ರೀನಿವಾಸಯ್ಯನವರೊಬ್ಬರೇ ಕಣಿವೇಹಳ್ಳಿಗೆ ವಾಪಸಾದರು.

ಜಗಲಿಯಲ್ಲಿ ಚಪ್ಪಲಿ ಕಳಚಿ, ಪಡಸಾಲೆಯ ಗೋಡೆಗೂಟಕ್ಕೆ ರುಮಾಲನ್ನು ಸಿಕ್ಕಿಸಿ, ಇನ್ನೊಂದು ಗೂಟಕ್ಕೆ ಕೋಟನ್ನು ತೂಗಹಾಕಿ, ಅಲ್ಲಿಯೇ ಇದ್ದ ಅಂಗವಸ್ತ್ರದಿಂದ ತಲೆ ಮುಖ ಕತ್ತು ಒರೆಸಿ, "ಅಮ್ಮಾ," ಎಂದರು ಶ್ರೀನಿವಾಸಯ್ಯ.

ಹೊರಗಿನ ಹೆಜ್ಜೆ ಸಪ್ಪಳ ಕೇಳಿಯೇ ಮಗ ಬಂದನೆಂದು ಊಹಿಸಿದ ದೊಡಮ್ಮ, ಒಳಮನೆಯಿಂದ ಹೊರಬಂದರು.

ಭಾಗೀರಥಿಯ ಕಿವಿಗಳು ಅವರನ್ನು ಹಿಂಬಾಲಿಸಿದುವು.

"ಗೋವಿಂದು ಬರಲಿಲ್ವೆ ?" ಎಂದು ದೊಡ್ಡಮ್ಮ ಮಗನನ್ನು ಕೇಳಿದರು.

"ಇಲ್ಲ. ಒಂದು ಟ್ರಕ್ನಲ್ಲಿ ಸೀಟು ಮಾಡಿಸ್ಕೊಟ್ಟು ನನ್ನ ಕಳಿಸ್ದ. ಶಾಮಣ್ಣನದೊಂದು ಕೆಲಸ ಇದೆಯಲ್ಲ, ಅದನ್ನ ಮುಗಿಸ್ಕೊಂಡು ಸಾಯಂಕಾಲವೋ ನಾಳೆಯೋ ಬರ್ತಾನಂತೆ."

"ರಾತ್ರಿ ಹೊತ್ನಲ್ಲಿ ಕಾಲುದಾರೀಲಿ ಒಬ್ಬನೇ ಬರೋದಕ್ಕಿಂತ ಅಲ್ಲಿಯೇ ತಂಗಿದ್ದು ಬೆಳಗ್ಗೆ ಬಾ– ಅಂತ ಹೇಳ್ಬೇಕಾಗಿತ್ತು."

"ಹೌದು, ಮರೆತೆ."

"ಹೋದ ಕೆಲಸ ಏನಾಯ್ತು ?"

"ಆಯ್ತಮ್ಮ."

"ಜಾತಕಗಳನ್ನ ಯಾರಾದರೂ ನೋಡಿದರೆ?"

"ಒಬ್ಬರಲ್ಲ, ಇಬ್ಬರು."

"ಏನಂದ್ರು ?"

"ವಿಷ್ಣುಮೂರ್ತಿಗಳ ದೊಡ್ಡ ಮಗಳು ಕಾಮಾಕ್ಷಿಗೂ ಗೋವಿಂದನಿಗೂ ಜೋಡಿ ಆಗ್ಬಹುದಂತೆ."

"ಸರಿ. ಪದ್ಮನ್ದು ?"

"ಆ ಲಾಯರಿ ದೊಡ್ಡ ಮನುಷ್ಯ, ಮಿತಭಾಷಿ. ನಾವು ಹಳ್ಳಿಯವರು, ಈ ಸಂಬಂಧ ಹೇಗಾಗುತ್ತೋ ಅಂತ ನನಗೆ ಸಂಕೋಚವಾಯ್ತು."

"ಜಾತಕ ?"

"ಹೊಂದಾಣಿಕೆ ತೃಪ್ತಿಕರವಾಗಿದೇಂತ ಜ್ಯೋತಿಷ್ಕರು ಅಭಿಪ್ರಾಯಪಟ್ರು."

"ಹುಡುಗಿ ಹ್ಯಾಗಿದಾಳೆ ?"

"ಪಟ್ಟಣದಲ್ಲಿ ಹುಟ್ಟಿ ಬೆಳೆದೋಳು. ಲಕ್ಷಣವಾಗಿದಾಳೆ. ಏನೂ ಊನ ಇಲ್ಲ. ಹೆಸರು ಆರತೀಂತ."

"ಆರತಿನೆ?"

"ಹೂಂ."

"ಈಗಿನ ಕಾಲದ ಹೆಸರು. ನೀನು ಮಾತು ಕೊಟ್ಟು ಬಂದ್ಯಾ?"

"ಛೇ ! ಈಗಿನ ಕಾಲಕ್ಕೆ ತಕ್ಕ ಹಾಗೆ ಉತ್ತರ ಕೊಟ್ಟೆ : ಏನಿದ್ದರೂ ಹುಡುಗನ ತೀರ್ಮಾನವೇ ಕೊನೇದು ಅಂತ. ಹೌದು, ಹೌದು--ಅಂದ್ರು ಮೋಹನರಾಯರು."

"ಪದ್ಮ ಒಪ್ಕೋತಾನೆ. ಅದು ದೊಡ್ಡ ವಿಷಯ ಅಲ್ಲ," ಎಂದರು ದೊಡ್ಡಮ್ಮ. ಕ್ಷಣ ಮೌನದ ಬಳಿಕ, "ಲಾಯರು ಶ್ರೀಮಂತನೆ ?" ಎಂದು ಕೇಳಿದರು.

ತಕ್ಕಮಟ್ಟಿಗೆ ಅನುಕೂಲಸ್ಥರೇ. ವಿಷ್ಣುಮೂರ್ತಿ ಹೇಳಿದ ಪ್ರಕಾರ ಎರಡು ಮೂರು ಮನೆಗಳಿವೆ. ಯಾವುದೋ ಕಂಪನೀಲಿ ಷೇರುಗಳಿವೆ."

"ಅಂದರೆ ?"

"ಅದು ಹೆಚ್ಚಿಗೆ ಇರೋ ದುಡ್ಡನ್ನ ಉದ್ಯಮಗಳಲ್ಲಿ ಹಾಕೋ ವಿಧಾನ."

"ಜಮೀನಿಲ್ವೆ ?"

"ಇಲ್ವಂತೆ. ವಿಷ್ಣುಮೂರ್ತಿ ಏನೆಂದ್ರು ಗೊತ್ತೆ ? ಈಗಿನ ಕಾಲ್ದಲ್ಲಿ ಹೊಲದ ತಂಟೆಗೆ ದುಡ್ಡಿದ್ದೋರು ಬರೋದಿಲ್ಲ ಅಂತ."

"ಅಲ್ಲ, ಅನುಕೂಲವಾಗಿರೋ ಮನುಷ್ಯ ನಮ್ಮ ಈ ಕೊಂಪೆಗೆ ತನ್ನ ಹುಡುಗೀನ ಕೊಡುತಾನ್ಯೆ ?"

"ನಮ್ಮದು ಹಳ್ಳಿಯಾದರೇನಾಯ್ತು ? ಪದ್ಮ ವಿದ್ಯಾವಂತ ಅಲ್ವೆ ? ಅಲ್ದೆ ಆರತಿ ಅವರ ಎರಡ್ನೇ ಮಗಳು. ಮೊದಲ್ನೇ ಅಳಿಯ ಸರಕಾರೀ ಉದ್ಯೋಗದಲ್ಲಿದಾನೆ. ಇನ್ನೂ ಇಬ್ಬರು ಹುಡುಗೀರಿದಾರೆ. ಐದನೇದು ಗಂಡು. ಒಂದೇ. ಇನ್ನೂ ಮೂರು ಜನ ಅಳಿಯಂದಿರು ಬೇಕಾಗಿರುವಾಗ, ದಿಲ್ಲಿಯೇ ಬೇಕು, ಹಳ್ಳಿ ಬೇಡ –ಅಂತ ಕೂತಿರೋಕಾ ಗುತ್ಯೆ ?"

"ನಿಜ, ಅನ್ನು."

ತನ್ನ ಪೃಥಕ್ಕರಣ ತಾಯಿಗೆ ಸರಿಕಂಡಿತೆಂದು ಶ್ರೀನಿವಾಸಯ್ಯನವರಿಗೆ ಸಂತೋಷ ವಾಯಿತು.

ಅವರೆಂದರು:

"ನಿನ್ನೆ ರಾತ್ರೆ ಮೋಹನರಾಯರಲ್ಲೇ ಊಟಕ್ಕಿದ್ದೆ. ಅವರ ಹೆಂಡತೀದೇ ಅಡುಗೆ."

"ಹೂಂ," ಎಂದರು ದೊಡ್ಡಮ್ಮ. ಆದರೆ ಅವರು ತಮ್ಮದೇ ಯೋಚನೆಯ ಜಾಡು ಹಿಡಿದು ಸಾಗಿದ್ದರು.

ಅಡ್ಡಕ್ಕೆ ತಿರುಗಿ ಮತ್ತೆ ಸರಿದಾರಿಗೆ ಬಂದವರಂತೆ ಅವರೆಂದರು:

"ವಿಷ್ಣುಮೂರ್ತಿಯ ಮಗಳ್ನ ನೋಡಿದಿಯಾ ?"

"ನೋಡಿದೆನಪ್ಪ. ಗೋವಿಂದ ಅಲ್ಲಿ ಮನೆಯವರ ಥರಾನೇ ಓಡಾಡ್ತಾನೆ. ನನ್ನ ಎದುರಿಗೆ ಆ ಹುಡುಗಿ ಅಷ್ಟಾಗಿ ಕಾಣಿಸ್ಕೊಳ್ಳಿಲ್ಲ. ಆದರೂ, ಗೋವಿಂದ ಈ ಮೊದಲೇ ಅವಳನ್ನ ಒಪ್ಪಿರಬೇಕು ಅನಿಸ್ತು."

"ಕಲಿಕಾಲ. ಮೊನ್ನೆ ಗೋವಿಂದನೇ ಹೇಳ್ಲಿಲ್ವೆ, ಮದುವೆ ಆದರೆ ಅದೇ ಹುಡುಗೀನ ಅಂತ."

"ಏನೋ. ಗೌರವಸ್ಥನಾಗಿ ಗೋವಿಂದ ಬಾಳಿದರೆ ಸಾಕು."

"ವಿಷ್ಣುಮೂರ್ತಿಯ ಹೋಟ್ಲು ವ್ಯವಹಾರವೆಲ್ಲ ಹ್ಯಾಗೆ ?"

"ಕೈತುಂಬ ಸಂಪಾದ್ನೆ ಇದೆ. ಖರ್ಚೂ ಜೋರಾಗೇ ಇರ್ಬೇಕು."

"ಅವರ ಮನೆ ಬೇರೆ, ಹೋಟ್ಲು ಬೇರೆ–ತಾನೆ ?"

"ಹೌದೌದು : ವಿಷ್ಣುಮೂರ್ತಿಗಳ ಹೆಂಡತೀದೇ ರಾಜ್ಯಭಾರ ಮನೇಲಿ."

"ಮಕ್ಕಳ್ನ ಸೊಂಪಾಗಿ ಬೆಳೆಸಿದಾರೋ ಅಥವಾ—"

"ಅಮ್ಮ, ಹಳ್ಳಿ ಹುಡುಗೀರ ಹಾಗೆ ಅವು ದುಡೀತವೆ ಅಂತ ನೀನು ತಿಳ್ಕೊಂಡಿದ್ರೆ—"

"ಇಲ್ಲವಪ್ಪ ! ಅಂಥ ಆಸೆ ಇಟ್ಕೊಂಡಿಲ್ಲ !"

"ಏನೇ ಇರಲಿ, ನೀರಿಗೆ ಇಳಿದಾಯ್ತಲ್ಲ."

"ದೈವೇಚ್ಛೆ ಇದ್ದ ಹಾಗೆ ಆಗುತ್ತೆ ಶೀನ... ನೀನು ಸ್ನಾನಕ್ಕೇಳು, ಅಡುಗೆ ಆಗ್ತಾ ಬಂತು."

"ಹೂನಮ್ಮ," ಎಂದು ನುಡಿದು, ಶ್ರೀನಿವಾಸಯ್ಯ ಎದ್ದರು.

"ಪದ್ಮ ಮನೇಲಿಲ್ವೆ ?" ಎಂದು ಕೇಳಿದರು. ಕಿರಿಯ ಮಗನ ಬಗೆಗೆ ಅವರು ಆತ್ಮೀಯವಾಗಿ ವಿಚಾರಿಸಿ ಎಷ್ಟೋ ದಿನಗಳಾಗಿದ್ದುವು.

"ಗೋಪೂ ಜತೆ ಹೊಲದ ಕಡೆಗೆ ಹೋದವನು ಇನ್ನೂ ಬಂದಿಲ್ಲ."

"ಹೊಲದ ಕಡೆಗೆ !? ಇದೇನು ಇಂಥಾ ಬುದ್ಧಿ ?"

"ಯಾಕೋ ಬೇಸರ; ಹೋಗ್ಬರ್ತೀನಿ–ಅಂದ."

"ಸರಿ, ಸರಿ !" ಎಂದು ನುಡಿದು, ಶ್ರೀನಿವಾಸಯ್ಯ ಸ್ನಾನದ ಮನೆಗೆ ನಡೆದರು.

ಸಾಧಾರಣವಾಗಿ ಇಂತಹ ಪ್ರವಾಸದಿಂದ ಬಳಲಬೇಕಾಗಿದ್ದ ಅವರು ಈ ದಿನ ಲವಲವಿಕೆಯಿಂದಿದ್ದರು. ಸಂಸಾರಕ್ಕೆ ಸಂಬಂಧಿಸಿ ಮಾಡಲಾದ ಮಹತ್ವದ ನಿರ್ಧಾರಗಳು ಅವರಿಗೆ ಮನಶ್ಶಾಂತಿಯನ್ನು ಒದಗಿಸಿದ್ದುವು.

ತಂದೆ ಮನೆಯಲ್ಲಿಲ್ಲದ ದಿನ ಮನೆ ದೇವರಿಗೆ ಪೂಜೆ ಸಲ್ಲಿಸುವವನು ಗೋಪಾಲ. ಈ ದಿನ ಆ ಕೆಲಸವನ್ನು ಬೆಳಗ್ಗೆ ಎದ್ದೊಡನೆಯೇ ಅವನು ಮಾಡಿ ಮುಗಿಸಿದ್ದ...

...ಮಾವ ಸ್ನಾನದ ಮನೆಗೆ ಹೋದೊಡನೆಯೇ ಭಾಗೀರಥಿ ಒಂದೆರಡು ಒಗ್ಗರಣೆಗಳನ್ನು ಕೊಟ್ಟು ಬಡಿಸಲು ಅಣಿಯಾದಳು.

ಕೆಲ ದಿನಗಳಿಂದ ಅವಳೊಳಗೆ ಭೋರ್ಗರೆಯುತ್ತಿದ್ದ ಬಿರುಗಾಳಿ ಈಗ ಶಾಂತವಾಗಿತ್ತು.

ಮನಸ್ಸು ಪ್ರಶಾಂತವಾಗಲು ಕಾರಣವಿಷ್ಟೆ: ಅಂತೂ ಮೈದುನರಿಗೆ ಮದುವೆ ಖಚಿತ ವಾಯಿತಲ್ಲ. ಇನ್ನೂ ಇಬ್ಬರು ಸೊಸೆಯರು ಈ ಮನೆಗೆ ಬಂದೇ ಬರುತ್ತಾರೆ. ಅವರನ್ನು ಒಳಕ್ಕೆ ಬಿಡಲು ತಾನು ಸಿದ್ಧಳಾಗಲೇಬೇಕು.

ಮುಂದೆ ಹಾಗೆ ಆದರೆ ಹೀಗೆ ಆದರೆ ಎಂದು ಚಿಂತಿಸುತ್ತ, ಸೊರಗುವುದರ ಬದಲು, ಆಪತ್ತುಗಳನ್ನು ಇದಿರಿಸಲು ಅಣಿಯಾಗುವುದಲ್ಲವೆ ಮೇಲು ?

ತಾನು ಕನಸಿನಲ್ಲಿ ಕಂಡಂತೆಯೇ. ಹೋಟೆಲ್ ಮಾಲಿಕನ ಮಗಳು ಒಬ್ಬಳು; ಲಾಯರಿಯ ಮಗಳು ಇನ್ನೊಬ್ಬಳು.

ಆಕೆ ಕಂಡ ಆಕೃತಿಗಳು : ಧಡೂತಿ ಹುಡುಗಿ ಹಾಗೂ ದೊರೆಸಾನಿ. ಇದೂ ನಿಜವೇನೊ?

ನೋಡಬೇಕು.

ವಧು ಪರೀಕ್ಷೆ ಎಲ್ಲಿ ನಡೆಯುವುದೊ ? ದೊಡ್ಡಮ್ಮನಂತೂ ಅದಕ್ಕೋಸ್ಕರ ನಗರಕ್ಕೆ ಹೋಗಲಾರರು. ಹೆಣ್ಣು ಹೆತ್ತವರೇ ಇಲ್ಲಿಗೆ ಕರೆದುಕೊಂಡು ಬರುವರೇನು ? ಯಾಕೆ ಬಂದಾರು ? ಎರಡು ಮೈಲು ದೂರ ನಡೆಯಬೇಕು ಬೇರೆ. ಸ್ವತಃ ತನ್ನ ತಂದೆ ಕಣಿವೇ ಹಳ್ಳಿಗೆ ತನ್ನನ್ನು ಕರೆದುಕೊಂಡು ಬಂದಿರಲಿಲ್ಲ, ತೋರಿಸಲು. ಇವರು ಬರುತ್ತಾರೆಯೆ ?

ನಿಶ್ಚಿತಾರ್ಥ ಯಾವತ್ತು ? ಏನು ? ದೊಡ್ಡಮ್ಮ ಕೇಳಲಿಲ್ಲ, ಮಾವ ಹೇಳಲಿಲ್ಲ.

ಬಹುಶಃ ಊಟಕ್ಕೆ ಕುಳಿತಾಗ ಆ ಪ್ರಸ್ತಾಪ ಬರಬಹುದು.

"ತಾತ, ತಾತ..."

"ಸ್ನಾನ ಮುಗಿಸಿ ಬಂದ ಶ್ರೀನಿವಾಸಯ್ಯನವರ ಗಮನವನ್ನು ಶ್ರೀಪಾದ ಸೆಳೆದ.

"ಬಂದೆ ಮರೀ," ಎನ್ನುತ್ತ ಶ್ರೀನಿವಾಸಯ್ಯ ದೇವರ ಮನೆಗೆ ನಡೆದರು.

ದೇವರ ಸನ್ನಿಧಿಯಲ್ಲಿದ್ದ ಎರಡು ನಿಮಿಷಗಳ ಕಾಲ, 'ನಗರಕ್ಕೆ ಹೋದೆ. ಆದರೆ ಶ್ರೀಪಾದನಿಗೋಸ್ಕರ ಏನೂ ತರಲಿಲ್ಲವೇ' ಎಂದು ಕೆಡುಕೆನಿಸಿತು. ಕೊನೇ ಘಳಿಗೆಯವರೆಗೂ ವಿಷ್ಣುಮೂರ್ತಿ ಜತೆಯಲ್ಲಿದ್ದರು ; ಮಾರ್ಕೆಟಿಗೆ ಹೋಗೋಣವೆ ? ಏನಾದರೂ ಕಟ್ಟಿಸಲೆ ? ಎಂದರು. ತಾನು ಏನೂ ಬೇಡವೆಂದೆ. ಶ್ರೀಪಾದನಿಗಾಗಿ ಒಂದು ಆಟದ ಸಾಮಾನು ತರ ಬಹುದಿತ್ತು. 'ಸರಿ. ಇನ್ನು ಹೇಗೂ ಬರೋದು ಹೋಗೋದು ಇದ್ದೇ ಇರುತ್ತಲ್ಲ'—ಎಂದರು ವಿಷ್ಣುಮೂರ್ತಿ. ತಾನು ನಕ್ಕುಬಿಟ್ಟಿದ್ದೆ...

ಶ್ರೀನಿವಾಸಯ್ಯ ಅಂದುಕೊಂಡರು:

"ಮನೆ ಬಿಟ್ಟು ಹೋಗುವ ಅಭ್ಯಾಸ ಇಲ್ಲದವರ ಗತಿಯೇ ಇಷ್ಟು."

ಹೊರಗೆ ಬಂದ ಅವರು, "ಬಾ ಶ್ರೀಪಾದ, ಬಾ," ಎನ್ನುತ್ತ ಮೊಮ್ಮಗನನ್ನು ಎತ್ತಿ ಕೊಂಡರು.

ಮಾವ ಶ್ರೀಪಾದನನ್ನು ಎತ್ತಿ ಆಡಿಸಿದರೆಂದು ಭಾಗೀರಥಿಗೆ ಸಮಾಧಾನ. ತನ್ನ ಮಗನಿಗಾಗಿ ನಗರಕ್ಕೆ ಹೋದವರೆಲ್ಲ ಏನನ್ನಾದರೂ ತರುತ್ತಾರೆ—ಎಂದು ಅವಳೆಂದೂ ನಿರೀಕ್ಷಿಸಿದವಳಲ್ಲ. ಇದ್ದ ಒಂದೆರಡು ರಬ್ಬರ್ ಬೊಂಬೆಗಳನ್ನು ತಂದುಕೊಟ್ಟವನು ಪದ್ಮ. ಶ್ರೀಪಾದ ಒಂದನ್ನು ಹೊಸತಾಗಿ ಮೂಡಿದ್ದ ಹಲ್ಲುಗಳಿಂದ ಕಚ್ಚಿ ಹರಿದು ಬಿಟ್ಟಿದ್ದ. ತನಗಾಗಿ ಸೀರೆ ಗೀರೆ... ಅದೆಲ್ಲಾ ಮಾವ ತರುತ್ತಾರೆಯೆ ?

ಅಂತಹ ಯಾವ ಯೋಚನೆಯನ್ನೂ ಮಾಡಲಿಲ್ಲ ಭಾಗೀರಥಿ. ಆದರೆ ಮಾವ, ತನ್ನ

ಮಗನನ್ನು ಎತ್ತಿಕೊಂಡರೆಂದು ಅವಳಿಗೆ ಸಂತೋಷವಾಯಿತು.

ದೊಡ್ಡಮ್ಮ ಅಂದರು :

"ಬಾ ಶ್ರೀಪಾದೂ, ನಿನ್ನ ತಾತ ಊಟ ಮಾಡ್ಲಿ..."

"ಗೋಪಾಲು– ಪದ್ಮ ಬರಲಿ ಆಗದೆ ?" ಎಂದರು ಶ್ರೀನಿವಾಸಯ್ಯ.

"ಅವರು ಆಮೇಲೆ ಊಟ ಮಾಡ್ತಾರೆ. ನೀನು ಕೂತ್ಕೋ."

"ಹುಂ. "

ಶ್ರೀಪಾದ ದೊಡ್ಡಮ್ಮನ ಮಡಿಲಿಗೆ ಹೋದ.

ಶ್ರೀನಿವಾಸಯ್ಯ ಎಲೆಯ ಮುಂದೆ ಕುಳಿತರು. [ಮನೆಯಲ್ಲಿ ತಟ್ಟೆಗಳಿದ್ದುವು. ಆದರೆ, ಬೇಕು ಬೇಕೆಂದಾಗ ಎಲೆ ಕತ್ತರಿಸಲು ಬಾಳೆಯ ತೋಟವೇ ಇದ್ದಾಗ ತಟ್ಟೆಗಳನ್ನು ಯಾರು ಮುಟ್ಟುತ್ತಿದ್ದರು ?] ದೊಡ್ಡಮ್ಮ ಶ್ರೀಪಾದನೊಡನೆ ಮಗನ ಎದುರುಗಡೆ ಗೋಡೆಗೊರಗಿ ಕುಳಿತರು.

ಭಾಗೀರಥಿ ಬಡಿಸಿದಳು.

"ನಗರಕ್ಕೆ ಹೋದೆ. ನೋಡ್ಕೊಂಡು ಬಂದೆ. ನಿನಗೆ ತೃಪ್ತಿಯಾಯ್ತು ತಾನೆ?" ಎಂದರು ದೊಡ್ಡಮ್ಮ.

"ತೃಪ್ತಿ ಅಂತಲೇ ಅನ್ನೋಣ. ಕಾಲ ಮೊದಲಿದ್ದ ಹಾಗೆ ಈಗ ಇಲ್ಲ. ಹಳ್ಳಿಯ ಸಂಬಂಧವೇಬೇಕು ಅಂದರೆ ಆಗುತ್ಯೆ ?"

"ನಿಜ, ಅನ್ನು."

"ಹುಡುಗೀರನ್ನ ನೀನು ನೋಡೋದು ಬೇಡ್ವೆ, ಅಮ್ಮ?"

"ನಾನು? ನಾನು ನೋಡಿ ಆಗ್ಬೇಕಾದ್ದೇನು?"

"ಹಾಗಲ್ಲ—"

"ಏನೂ ಬೇಡ. ಪದ್ಮನನ್ನ ನೀನು ಒಮ್ಮೆ ಮೋಹನರಾಯರಲ್ಲಿಗೆ ಕರಕೊಂಡು ಹೋಗು."

ಉಣ್ಣುತ್ತ ಶ್ರೀನಿವಾಸಯ್ಯ ಅಂದರು :

"ಇನ್ನೆರಡು ತಿಂಗಳಾದ ಮೇಲೆ ಮುಹೂರ್ತಗಳಿವೆ. ಆದಷ್ಟು ಬೇಗನೆ ಮದುವೆ ನಡೀಬೇಕೂಂತ ಅವರ ಅಭಿಪ್ರಾಯ."

"ಆಗಲಿ. ಅದಕ್ಕೇನಂತೆ ? ತಯಾರಿಗೆ ಎರಡು ತಿಂಗಳು ಸಾಕು."

"ಮದುವೆಗಳು ಒಟ್ಟಿಗೇ, ನಗರದಲ್ಲೇ, ಯಾವುದಾದರೂ ಒಳ್ಳೆಯ ಕಲ್ಯಾಣ ಮಂಟಪದಲ್ಲಿ ಏರ್ಪಾಟು ಮಾಡ್ತಾರಂತೆ."

"ಹುಂ."

ತುತ್ತನ್ನು ಗಂಟಲೊಳಕ್ಕೆ ಇಳಿಸಿ, ಸಣ್ಣಗೆ ನಕ್ಕು, ಶ್ರೀನಿವಾಸಯ್ಯ ಅಂದರು :

"ಒಂದೇ ದಿವಸದ ಮದುವೆ. ಸಾಂಗೋಪಾಂಗವಾಗಿ ನಡೆಸಿಬಿಡ್ತಾರೆ."

"ನನಗೆ ಗೊತ್ತಿಲ್ವೆ !" ಎಂದರು ದೊಡ್ಡಮ್ಮ, ಒಣಗಿದ್ದ ತುಟಿಗಳ ಮೇಲೆ ಕಿರುನಗೆಯೊಂದನ್ನು ಮೂಡಿಸಿ.

"ಮೋಹನರಾಯರು ಏನೆಂದರು ಗೊತ್ತೆ, ಅಮ್ಮ ?"

"ಏನು ?"

"ಮದುವೆಯಾದ್ಮೇಲೆ ಪದ್ಮ ಹಾಸ್ಟೆಲ್ನಲ್ಲಿ ಇರೋ ಬದಲು ಅವರ ಮನೇಲೇ ಇದ್ಕೊಂಡು ಓದಬಹುದಂತೆ."

"ಅವನು ಓದಿದ ಹಾಗೇ ಇದೆ."

"ಆ ವಿಷಯ ಪದ್ಮನನ್ನೇ ಕೇಳ್ಬೇಕು, ಅಂದ್ಬಿಟ್ಟೆ."

ದೊಡ್ಡಮ್ಮ ನಕ್ಕು ಅಂದರು:

"ಮದುವೆ ಮಾಡ್ಕೊಟ್ಮೇಲೆ ಹುಡುಗೀನ ಇಲ್ಲಿಗೆ ಕಳಿಸ್ತಾರೆ ತಾನೆ ?"

"ಮೋಹನರಾಯರು ದೀಪಾವಳಿ ಆದ್ಮೇಲೆ ಕಳಿಸ್ತೌದೇನೋ. ವಿಷ್ಣುಮೂರ್ತಿಗಳು ಮಾತ್ರ ಮದುವೆ ಆದ ಮಾರನೇ ದಿವಸವೇ ಗೋವಿಂದರಾಯರು ತಮ್ಮ ಹೆಂಡತಿಯ ಮೂಗಿಗೆ ದಾರ ಹಾಕಿ ಕರಕೊಂಡು ಹೋಗ್ಬಹುದು, ಅಂದ್ರು. ಹಹ್ಹ!"

ವಿಷ್ಣುಮೂರ್ತಿಯ ಹಾಸ್ಯೋಕ್ತಿ ಕೇಳಿ ಆಗ ನಕ್ಕಿದ್ದರು ಶ್ರೀನಿವಾಸಯ್ಯ. ಆ ಉಕ್ತಿಯನ್ನು ಪುನರುಚ್ಚರಿಸಿ ಈಗಲೂ ಅವರು ನಕ್ಕರು.

ಮತ್ತೆ ಎರಡು ತುತ್ತು ಮೌನವಾಗಿ ಉಣ್ಣಲು ಮಗನಿಗೆ ಅವಕಾಶವಿತ್ತು, [ರಾಗವೆಳೆಯ ತೊಡಗಿದ ಶ್ರೀಪಾದುವನ್ನು ರಮಿಸಿ] ದೊಡ್ಡಮ್ಮ ಅಂದರು :

"ಹೋಗಲಿ, ಲಗ್ನಪತ್ರಿಕೆ ಬರೆಸೋದಕ್ಕಾದರೂ ಇಲ್ಲಿಗೆ ಬರ್ತಾರೆ ತಾನೆ ?"

"ಓಹೋ. ನೀವು ಹೇಳಿದ ದಿಲವಸ ಹಾಜರಾಗ್ತೀವಿ ಅಂತ ವಿಷ್ಣುಮೂರ್ತಿ ಅಂದ್ರು. ಅಲ್ದೆ ಅವರ ಹುಡುಗನ ಹೋಟ್ಲಂತೂ ಮುಂದಿನ ತಿಂಗಳಿಂದ್ಲೇ ಇಲ್ಲಿ ಶುರುವಾಗುತ್ತೆ."

ಮತ್ತೆ ಸುಮ್ಮನಿದ್ದು ನಿಶ್ಶಬ್ದವಾಗಿ ನಿಟ್ಟುಸಿರುಬಿಟ್ಟು, ದೊಡ್ಡಮ್ಮ ಅಂದರು :

"ಏನೇ ಇರಲಿ, ಶೀನ; ಮನೆ ತುಂಬಿಸೋದು ವಿಜೃಂಭಣೆಯಿಂದ ಆಗ್ಬೇಕು. ಹಳ್ಳಿಯವರು ಏನಂದ್ಕೋತಾರೆ ? ಮನೆತನದ ಘನಸ್ತಿಕೇನ ನಾಲ್ಕು ಜನ ಕೊಂಡಾಡೋ ಹಾಗೆ ಇರ್ಬೇಕು."

"ಹೌದೌದು. [ಭಾಗೀರಥಿಗೆ– "ಸಾಕಮ್ಮ"] ಅಷ್ಟು ಮಾಡದೆ ಇರೋದುಂಟೆ? ಸುಗ್ಗಿ ಆದ್ಮೇಲೆ ಲಗ್ನ ಇಟ್ಕೊಂಡಿದ್ರೆ ಚೆನ್ನಾಗಿರ್‍ತಿತ್ತು. ಈಗ ಅದು ಸಾಧ್ಯವಿಲ್ಲ ಅನ್ನೋದೊಂದೇ ಬೇಸರ. ದೊಡ್ಡದಲ್ಲ. ಮಳೆಗಾಲವಾದರೇನಂತೆ ? ನಡಿಯುತ್ತೆ."

"ದೇವರಿದಾನೆ. ಅಡ್ಡಿ ಆತಂಕ ಏನೂ ಬರೋದಿಲ್ಲ, ಶೀನ." ಎಂದು ನುಡಿದು ಶ್ರೀಪಾದನನ್ನೆತ್ತಿಕೊಂಡು ದೊಡ್ಡಮ್ಮ ಎದ್ದರು. ಪಡಸಾಲೆಯನ್ನು ದಾಟಿ ತಲೆಬಾಗಿಲಲ್ಲಿ ನಿಂತು, "ಹುಡುಗರು ಇಷ್ಟು ಹೊತ್ತಿಗೆ ಬರಬೇಕಾಗಿತ್ತು" ಎಂದುಕೊಳ್ಳುತ್ತ ಅಂಗಳದಾಚೆಗೆ ಹೊಲಗಳುದ್ದಕ್ಕೆ ದೃಷ್ಟಿ ಬೀರಿದರು. ಬಿಸಿಲು ಕಣ್ಣುಗಳನ್ನು ಕುಕ್ಕಿ, ನೀರು ಒಸರುವಂತೆ ಮಾಡಿತು.

...ಭಾಗೀರಥಿ ಮಾವನ ಊಟದೆಲೆಯನ್ನು ಎತ್ತಿ ಎಸೆದು ಗೋಮೆ ಮಾಡಿದಳು. ಮಾವನಿಗಾಗಿ ವೀಳೆಯದೆಲೆ ಅಡಿಕೆಯ ಪೆಟ್ಟಿಗೆಯನ್ನು ಪಡಸಾಲೆಯಲ್ಲಿ ಹಾಸುಗಂಬಳಿಯ ಮೇಲಿರಿಸಿದಳು.

ಒಂದೇ ಹೊತ್ತಿನ ಅವಧಿಯಲ್ಲಿ ಎಷ್ಟೊಂದನ್ನು ತಿಳಿದುಕೊಂಡಂತಾಯಿತು ಅವಳು ! ಶ್ರೀಮಂತ ಬೀಗರು ದೊರೆತರೆ ಆಗುವುದೇ ಹೀಗೆ. ಆ ಹೋಟೆಲ್ ಮಾಲಿಕನೂ

ಲಾಯರೂ ಸೇರಿ ತನ್ನ ಮಾವನನ್ನು ಇನ್ನು ಕುಣಿಸ್ತಾರೆ. ಅವರ ಕುಮಾರಿಯರು ತನ್ನನ್ನು ಮಣಿಸುತ್ತಾರೆ.

ಬರಲಿ, ಬರಲಿ, ತಾನು ನೋಡಿಯೇ ಬಿಡಬೇಕು ಒಂದು ಕೈನ. ಮನೆಯ ಹಿರಿಯ ಸೊಸೆ ತಾನು. ಅತ್ತೆ ಇಲ್ಲದ ಮನೆಯಲ್ಲಿ ತಾನೇ ಯಜಮಾನಿತಿ. ಇನ್ನೆಷ್ಟು ದಿನ ಇರುತ್ತಾರೆ ಈ ದೊಡ್ಡಮ್ಮ ? ಯಾರೂ ತನ್ನ ಅಣತಿಯನ್ನು ಮೀರಿ ನಡೆಯಬಾರದು. ಹಾಗೇನಾದರೂ ನಡೆದರೆ ತಾನು ಬಿಟ್ಟೇನೇ ?

...ಶ್ರೀನಿವಾಸಯ್ಯ ದಿಂಬಿಗೊರಗಿ ವೀಳೆಯದೆಲೆಗೆ ಸುಣ್ಣ ಹಚ್ಚಿ ಬಾಯಲ್ಲಿಟ್ಟರು. ಅವರ ಎಡದವಡೆಯ ಒಂದು ಹಲ್ಲು ತೊಂದರೆ ಕೊಡುತ್ತಿತ್ತು. ಮಡಚಿದ ಎಲೆಯನ್ನೂ ಚೂರಡಿಕೆಯನ್ನೂ ಬಲದವಡೆಯೊಳಕ್ಕೆ ತುರುಕಿ ಮೆಲ್ಲನೆ ಜಗಿದರು.

ದೊಡ್ಡಮ್ಮನಿಗೆ ವರದಿ ಒಪ್ಪಿಸಿ ಆದಮೇಲೆ, ಈಗ, 'ವಿಶ್ರಾಂತಿ ವಿಶ್ರಾಂತಿ' ಎಂದು ಅವರ ಮೈ ಕೂಗಿ ಕರೆಯತೊಡಗಿತು.

ಜಗಿದು ಉಳಿದುದನ್ನು ಪೀಕದಾನಿಯಲ್ಲಿ ಉಗುಳಿ, ಹಾಗೆಯೇ ಶ್ರೀನಿವಾಸಯ್ಯ ಹಾಸುಗಂಬಳಿಯ ಮೇಲೆ ಮೈ ಚಾಚಿದರು.

ಶ್ರೀಪಾದನಿಗೆ ನಿದ್ದೆ ಬಂದಿತ್ತು.

"ಭಾಗೀ, ಇಲ್ಲಿ ಬಾ. ನಿನ್ನ ಮಗ ಕಿರಿಕಿರಿ ಮಾಡ್ತಿದಾನೆ. ಸ್ವಲ್ಪ ಮಲಗ್ಸು," ಎಂದರು ದೊಡ್ಡಮ್ಮ.

ಭಾಗೀರಥಿ ಅವನನ್ನೆತ್ತಿಕೊಂಡು, ಮಲಗಿಸಲು ತನ್ನ ಕೊಠಡಿಗೆ ಹೋಗುತ್ತ," ನೀವು ಊಟ ಮಾಡಿ, ದೊಡ್ಡಮ್ಮ," ಎಂದಳು.

"ನನಗೇನೂ ಅವಸರವಿಲ್ಲ," ಎಂದರು ದೊಡ್ಡಮ್ಮ.

...ಬಂದವನು ಗೋಪಾಲನೊಬ್ಬನೇ.

"ಪದ್ಮ ಎಲ್ಲಿ ?" ಎಂದು ದೊಡ್ಡಮ್ಮ ಕೇಳಿದುದಕ್ಕೆ, "ಅವನನ್ನು ಯಾರು ಕಂಡ? ಬೆಳಗ್ಗೆ ಜತೇಲಿದ್ದ. ಆಮೇಲೆ ಎತ್ತ ಹೋದನೊ ?" ಎಂದು ಗೋಪಾಲ ನುಡಿದು, ಕೈಕಾಲು ತೊಳೆದುಕೊಂಡು ಊಟಕ್ಕೆ ಕುಳಿತ.

ಮಗುವನ್ನು ಮಲಗಿಸಿ ಬಂದ ಭಾಗೀರಥಿಗೆ, "ಗೋಪೂಗೆ ಬಡಿಸಿ ನೀನೂ ಊಟ ಮಾಡ್ಬಿಡು ಭಾಗೀ. ಪದ್ಮ ಬಂದರೆ ನಾನು ನೋಡ್ಕೋತೀನಿ," ಎಂದರು ದೊಡ್ಡಮ್ಮ.

ಪದ್ಮ ಬಂದುದು, ಗೋಪೂ– ಭಾಗೀರಥಿಯರು ಊಟ ಮುಗಿಸಿ ಕೆಲ ನಿಮಿಷಗಳಾದ ಬಳಿಕ.

ದೊಡ್ಡಮ್ಮನ ಕರೆಗೆ ಓಗೊಟ್ಟು, ಪಾದಗಳಿಗೆ ನೀರು ಚಿಮುಕಿಸಿ ಬಂದು, ಪದ್ಮನಾಭ ಊಟಕ್ಕೆ ಕುಳಿತ.

ದೊಡ್ಡಮ್ಮ ತಾವೇ ಬಡಿಸಲು ನಿಂತರು.

"ಗೋಪೂ ಜತೆ ಇದ್ದೆಯೇನೋ ಅಂದ್ಕೊಂಡಿದ್ದೆ."

ಪದ್ಮ ಉಣ್ಣುತ್ತ ಅಂದ:

"ಹಾಗೆ ನದೀ ದಂಡೆ ಉದ್ದಕ್ಕೂ ನಡಕೊಂಡು ಹೋದೆ. ತಡವಾಯ್ತು."

"ನಿನ್ನ ತಂದೆ ನಗರದಿಂದ ವಾಪ್ಸು ಬಂದಿದಾನೆ."

"ನೋಡ್ದೆ. ಪಡಸಾಲೇಲಿ ಮಲಕೊಂಡಿದಾರಲ್ಲ."

"ಲಾಯರು ಮೋಹನರಾಯರ ಮಗಳ ಜಾತಕವೂ ನಿನ್ನೂ ಕೂಡುತ್ವಂತೆ. ಹುಡುಗಿ ಓದಿದವಳು. ಚೆನ್ನಾಗಿದಾಳಂತೆ."

"ಸ್ವಲ್ಪ ಸಾರು, ದೊಡ್ಡಮ್ಮ."

"ನೀನೊಮ್ಮೆ ನಿನ್ನ ಅಣ್ಣಯ್ಯನ ಜತೆ ನಗರಕ್ಕೆ ಹೋಗಿ ಹುಡುಗೀನ ನೋಡ್ಕೊಂಡು ಬರ್ತೀಯಾ ?"

"ಸಾರು ಸಾಕು."

"ನಿಧಾನವಾಗಿ ಊಟ ಮಾಡು. ಏನೀಗ ಅವಸರ ?"

"ಏನೀಗ ಅವಸರ ಅಂತ ನಾನೂ ಕೇಳಿದ್ರೆ ?"

"ಇಲ್ಲ ಶೀನ, ಗೋವಿಂದನ್ದೂ ನಿನ್ದೂ ಮದುವೆ ಇಷ್ಟು ಆಯ್ತೂಂದ್ರೆ–"

"ಆಗಲಿ ದೊಡ್ಡಮ್ಮ, ಪುನಃ ಅದರ ಪ್ರಸ್ತಾಪ ಯಾಕೆ ?"

"ಅದಕ್ಕೇ ಅಂದಿದ್ದು. ಹುಡುಗೀನ ಒಮ್ಮೆ ನೋಡಿ—"

"ಅಣ್ಣಯ್ಯನಿಗೆ ಒಪ್ಪಿಗೆಯಾಗ್ಲಿಲ್ವೆ ?"

"ಛೆ! ನೀನೊಬ್ಬ. ಹುಡುಗೀನ ನೋಡಿ ಬಾ ಅಂದ್ರೆ...ಅನ್ನ ಹಾಕ್ತೀನಿ, ಮಜ್ಜಿಗೆಗೆ."

"ಅನ್ನ ಬೇಡ, ಹಸಿವಿಲ್ಲ. ಆ ಲೋಟದಲ್ಲಿ ಮಜ್ಜಿಗೆ ಕೊಟ್ಬಿಡು."

"ಬೆಳೆಯೋ ಹುಡುಗರು ಹೀಗಂದ್ರೆ ಹ್ಯಾಗೋ? ಒಂದು ತುತ್ತು ಹಾಕ್ತೀನಿ. ಒಂದೇ ತುತ್ತು."

"ಆಗಲಿ, ಬಡಿಸು. ಹ್ಞ, ಸಾಕು."

"ಇಕೋ, ಮಜ್ಜಿಗೆ, ಅನ್ನಕ್ಕೆ ಹಾಕಿ ಉಳಿದದ್ದನ್ನ ಕುಡಿದ್ಬಿಡು... ಅದೇ ಆ ಹುಡುಗಿ ವಿಷಯ..."

"ಕೇಳಿಸ್ತು, ದೊಡ್ಡಮ್ಮ. ಧಾರಾಳವಾಗಿ ನೋಡೋಣ."

"ಬಂಗಾರ ಕಣಪ್ಪ, ನೀನು."

"ಊಟ ಮಾಡು , ದೊಡ್ಡಮ್ಮ. ನಿನ್ನದಿನ್ನೂ ಆಗಿಲ್ಲ ಅಂತ ಕಾಣುತ್ತೆ."

"ನೀನು ಕೊಟ್ಟ ಒಪ್ಪಿಗೆಯಿಂದ಼್ಲೇ ಹೊಟ್ಟೆ ತುಂಬಿದೆ. ಆಗಲಿ, ಒಂದು ತುತ್ತು ನಾನೂ ತಿಂತೀನಿ."

ಪದ್ಮನಾಭ ಎದ್ದು ಕೈ ತೊಳೆಯಲು ಹೋದ.

ಅವನ ಎಲೆಯ ಎದುರು ತಾವೊಂದನ್ನು ಹಾಕಿಕೊಂಡು ದೊಡ್ಡಮ್ಮ ಕುಳಿತರು.

ಕೊಠಡಿಗೆ ಬಂದ ಪದ್ಮನಾಭ ಕಿಟಿಕಿಯಾಚೆಗೆ ಬಿರುನೋಟ ಬೀರುತ್ತ ಒಬ್ಬನೇ ಸ್ವಲ್ಪ ಹೊತ್ತು ಕುಳಿತ.

ಬಳಿಕ ಎದ್ದು ಒಳಗೆ ನಡೆದು, ಊಟದ ಕೊನೆಯ ಹಂತದಲ್ಲಿದ್ದ ದೊಡ್ಡಮ್ಮನನ್ನುದ್ದೇಶಿಸಿ ಅವನೆಂದ :

"ನಿನ್ನ ಹತ್ತಿರ ಒಂದು ವಿಷಯ ಮಾತಾಡ್ಬೇಕಲ್ಲ, ದೊಡ್ಡಮ್ಮ."

## ೧೮

" ಇದು ಕಡೇ ವರ್ಷ ದೊಡ್ಡಮ್ಮ. ಈಗಿನಿಂದಲೇ ಅಭ್ಯಾಸ ಶುರು ಮಾಡ್ಬೇಕು. ಒಂದು ವಾರ ಮುಂಚಿತವಾಗಿಯೇ ಹೋಗಿ ಹಾಸ್ಟೆಲ್ನಲ್ಲಿ ಸೀಟು ಭದ್ರ ಮಾಡ್ಕೋಬೇಕು. ಇಲ್ದೇ ಹೋದ್ರೆ ಮುಂದೆ ಕಷ್ಟ. ಸ್ವಲ್ಪ ಅಣ್ಣಯ್ಯನಿಗೆ ಹೇಳ್ತೀಯಾ ?"

ಪದ್ಮನಾಭ ತಿಳಿಸಿದುದು ಇಷ್ಟೇ.

ದೊಡ್ಡಮ್ಮ ಸಮಾಧಾನದ ನಿಟ್ಟುಸಿರುಬಿಟ್ಟರು. ಹುಡುಗ ಇನ್ನೇನೋ ಹೇಳುತಾನೆ– ಎಂದು ಅವರು ಅಳುಕಿದ್ದರು. ಮದುವೆಯ ವಿಷಯ. ಖಡಾಖಂಡಿತವಾಗಿ ನನಗಿದು ಬೇಡ– ಅಂತ ಹೀಗೇ ಇನ್ನೇನೋ.

ಅವರೆಂದರು :

" ಅದಕ್ಕೇನೀಗ ? ಹೋಗುವಿಯಂತೆ. ನಿನ್ನ ತಂದೆಗೆ ಎಚ್ಚರವಾಗ್ಲಿ. ಹೇಳ್ತೀನಿ."

ಸಂತುಷ್ಟನಾದ ಪದ್ಮನಾಭ ಮುಂದುವರಿದ :

" ಇನ್ನೊ ಒಂದು ದೊಡ್ಡಮ್ಮ. ಈ ಸಲ ಫೀಸುಗೀಸು ಇತರೇ ಖರ್ಚು ಜಾಸ್ತಿ. ಸ್ವಲ್ಪ ಹಣ ಹೆಚ್ಚು ಕೊಟ್ಟರ್ಲಿ."

" ಹೂಂ. ಹೇಗೂ ಈ ವರ್ಷ ಖರ್ಚೂ ಹೆಚ್ಚೇ. ಎರಡು ಮದುವೆ ಅಂದರೆ ಸುಮ್ಮಗಾಗುತ್ಯೆ ? ನಾವು ಗಂಡಿನವರು ಅಂದ ಮಾತ್ರಕ್ಕೆ ಖರ್ಚಿಲ್ಲದೆ ಇರುತ್ಯೆ ?"

" ಅದೇನೋ ನನಗೆ ತಿಳೀದು ದೊಡ್ಡಮ್ಮ. ನೀನುಂಟು, ಅಣ್ಣಯ್ಯ ಉಂಟು."

ದೊಡ್ಡಮ್ಮ ಒಂದು ಕ್ಷಣ ಯೋಚಿಸಿದರು. ಹುಡುಗ ಕನ್ಯೆಯನ್ನು ನೋಡುವ ವಿಷಯ ಹ್ಯಾಗೆ ? ಈ ಸಂಬಂಧದಲ್ಲಿ ಪದ್ಮ ತೋರುವ ಔದಾಸೀನ್ಯಕ್ಕೂ ಈಗ ಈತ ಹೊರಡುತೇನೆ ಎನ್ನುವುದಕ್ಕೂ ನಂಟಿ ? ಊಹೂಂ. ಹಾಗಿರಲಾರದು. ಹೋದರೆ ಎಲ್ಲಿಗೆ ? ನಗರಕ್ಕೆ ತಾನೆ ? ಹೇಗೂ ಹುಡುಗಿ ಇರುವುದೇ ಅಲ್ಲಿ.

ದೊಡ್ಡಮ್ಮ ಸುಮ್ಮನಿದ್ದುದನ್ನು ಕಂಡು ಪದ್ಮನಾಭ ಕೇಳಿದ :

" ಹಾಗಾದರೆ ನಾನು ನನ್ನ ಸಾಮಾನೆಲ್ಲ ಟ್ರಂಕಿಗೆ ತುಂಬಿಸ್ಲೆ ?"

" ಇಷ್ಟೊಂದು ಅವಸರ ! ಯಾವಾಗ ಹೋಗ್ಬೇಕೂಂತಿದೀಯಾ ?"

" ನಾಳೆ ಬೆಳಗ್ಗೆ."

" ನಾಳೆ ತಾನೆ ? ರಾತ್ರೆ ತುಂಬಿಸಿದರಾಯ್ತು."

" ಹೂಂ."

" ಬಿಸಿಲಲ್ಲಿ ತಿರುಗಾಡ್ಕೊಂಡು ಬಂದಿದೀಯಾ. ಸ್ವಲ್ಪ ಹೊತ್ತು ಮಲಕ್ಕೋ."

ಪದ್ಮನಾಭ ತನ್ನ ಕೊಠಡಿಗೆ ಹಿಂತಿರುಗಿದ. ವಿಶ್ರಾಂತಿಯ ಅಗತ್ಯ ಇರಲಿಲ್ಲ ಅವನಿಗೆ ತನ್ನ ಪುಸ್ತಕಗಳನ್ನೂ ಬಟ್ಟೆಬರೆಗಳನ್ನೂ ಒಂದೊಂದಾಗಿ ಜೋಡಿಸಿ ಇಡತೊಡಗಿದ.

...ಊಟವಾದ ಬಳಿಕ ಗೋಪಾಲ ಮನೆಯಲ್ಲಿದ್ದುದು ಸ್ವಲ್ಪವೇ ಹೊತ್ತು. ಆದರೆ ಆ ಕೆಲವೇ ನಿಮಿಷಗಳಲ್ಲಿ ಭಾಗೀರಥಿ ನಗರಕ್ಕೆ ಹೋಗಿ ಮರಳಿದ ಮಾವ ಏನೇನು ಮಾಡಿಕೊಂಡು ಬಂದರೆಂಬುದರ ವಿವರವನ್ನು ಗಂಡನಿಗೆ ನೀಡಿದಳು.

ಗೋಪಾಲ ಯಾಂತ್ರಿಕವಾಗಿ ಹೂಂಗುಡುತ್ತ ಹೊರಡಲು ಅಣಿಯಾದ.

"ಅಬ್ಬ ! ಹೊರಟೇ ಬಿಟ್ರಿ. ಒಂದೆರಡು ನಿಮಿಷ ತಡವಾದ್ರೆ ಏನು ಕೊಳ್ಳೆ ಹೋಗುತ್ತೊ?" ಎಂದು ಭಾಗೀರಥಿ ಕಣ್ಣುಗೊಂಬೆಗಳನ್ನು ಅತ್ತಿತ್ತ ಹೊರಳಿಸಿ ಮೆಲ್ಲನೆ ಕುಟುಕು ಮಾತನ್ನು ಆಡಿದಳು.

ಗೋಪಾಲ ಸುರುಳಿ ಸುತ್ತಿದ ಹಾಸಿಗೆಯ ಮೇಲೆ ಕುಳಿತು, "ಹೇಳೋದು ಇನ್ನೂ ಇದೆಯೇ ?" ಎಂದ.

"ಮೊನ್ನೆ ನನಗೊಂದು ಕನಸು ಬಿತ್ತೂಂದ್ರೆ."

"ಕನಸೆ ? ಫೂಯಿ !"

"ಬೇಡಿ. ನಿಮಗೆ ಇಷ್ಟವಿಲ್ದಿದ್ರೆ ಹೇಳೊಲ್ಲ."

"ಕೂತಿದೀನಿ, ಕೇಳ್ಬಿಟ್ಟೇ ಹೋಗ್ತೀನಿ."

ಭಾಗೀರಥಿ ತನ್ನ ಟಾಂಗಾ ಸವಾರಿಯ ಸ್ವಪ್ನವನ್ನು ಬಣ್ಣಿಸಿದಳು.

ಗೋಪಾಲ ನಸುನಕ್ಕ.

ಮಲಗಿದ್ದ ಶ್ರೀಪಾದನ ಕಡೆಗೊಮ್ಮೆ ಭಾಗೀರಥಿ ನೋಡಿ, ಅಳುಮೋರೆ ಮಾಡಿ, "ನೀವು ನಗ್ತೀರಿ, ಆದರೆ ಆ ಕನಸನ್ನ ಜ್ಞಾಪಿಸಿಕೊಂಡಾಗಲೆಲ್ಲ ನನಗೆ ಭಯವಾಗುತ್ತೇಂದ್ರೆ." ಅಂದಳು.

"ಅದಕ್ಕೊಂದು ಸುಲಭೋಪಾಯ ಹೇಳ್ಕೊಡ್ತೀನಿ. ಜ್ಞಾಪಿಸಿಕೊಳ್ಳದೇ ಇದ್ದರಾಯ್ತು."

"ತನ್ನಿಂತಾನಾಗಿಯೇ ನೆನಪಾಗುತ್ತೆ. ನಾನೇನು ಬೇಕೂಂತ ನೆನಸ್ಕೋತೀನ್ಯೆ ?"

"ಸರಿ. ಹೆಂಗಸರ ಬುದ್ಧೀನೇ ಇಷ್ಟು." ಎಂದು ಗೋಪಾಲ ಎದ್ದ.

"ಇದಕ್ಕೇನು ಹೇಳ್ತೀರಿ ? ಕನಸ್ನಲ್ಲಿ ನಾನು ಕಂಡದ್ದು ನಿಜವಾಗಿದೆಯಲ್ಲ ? ಆ ಹೋಟ್ಲಿನವರ ಮಗಳು ಗೋವಿಂದನ ಹೆಂಡ್ತಿಯಾಗ್ತಾಳೆ. ಲಾಯರ್ ಮಗಳು ದೊರೆಸಾನಿ ಪದ್ಮನ ಕೈಹಿಡೀತಾಳೆ."

"ದೊರೆಸಾನಿಯಂತೆ! ಮೋಹನರಾಯರು ಅಂದರೆ ಕಿರಸ್ತಾನರು ಅಂದ್ಕೊಂಡಿಯಾ? ಅವಳೇನು ಲಂಗ ತೊಟ್ಕೊತಾಳೆಯೆ ?"

"ಹೂಂ ಕಣ್ರೀ. ಲಂಗಾನೇ. ನೋಡಿ ಬೇಕಾದ್ರೆ."

"ಸಾಕು, ಒಳಗ್ಹೋಗು. ಏನಾದರೂ ಕೆಲಸವಿದ್ದರೆ ಮಾಡು."

"ಹೋಗ್ತೀನಿ, ಹೋಗ್ತೀನಿ. ನಾನಿರೋದೇ ಅದಕ್ಕೆ ತಾನೆ?"

ಗೋಪಾಲ ಕೊಠಡಿಯಿಂದ ಹೊರಕ್ಕೆ ಬಂದ. ಮಲಗಿದ್ದ ತಂದೆಯ ಮುಖವನ್ನೊಮ್ಮೆ ನೋಡಿ, ಅಂಗಳಕ್ಕಿಳಿದು ಹೊಲಗಳತ್ತ ನಡೆದ.

ಅಣ್ಣ ಗೋಪಾಲ ಹೋಗುತ್ತಲಿದ್ದುದು ತನ್ನ ಕೋಣೆಯ ಕಿಟಕಿಯ ಮೂಲಕ ಪದ್ಮನಾಭನಿಗೆ ಕಾಣಿಸಿತು. ಮಾಸಿದ ಶರಟು. ಅರ್ಧಕ್ಕೆ ಎತ್ತಿಕಟ್ಟಿದ ಅಡ್ಡ ಪಂಚೆ. ತುಸು ಬಾಗಿದ ಭುಜಗಳು. ಬಹಳ ಭಾರ ಎನ್ನುವಂತೆ ಭೂಮಿಯ ಕಡೆಗೆ ಕುಗ್ಗಿದ್ದ ತಲೆ. ಅನೇಕ ವರ್ಷಗಳವರೆಗೆ ತಮಗೆಲ್ಲ ತಲೆಯ ಮೇಲೆ ನೀಳಗೂದಲಿತ್ತು. ಚಂಡಿಕೆ. ನಗರಕ್ಕೆ ಅಧ್ಯಯನಕ್ಕೆಂದು ಹೋದಾಗ ಮೊದಲು ಅದಕ್ಕೆ ಕತ್ತರಿ ಪ್ರಯೋಗ ಮಾಡಿಸಿಕೊಂಡವನು ಗೋವಿಂದ. ಪದ್ಮನನ್ನು ಸೆಲೂನಿಗೆ ಕರೆದುಕೊಂಡು ಹೋಗಿ ಅವನ ಚಂಡಿಕೆಯನ್ನು ತೆಗೆಸಿದವನೂ ಗೋವಿಂದನೇ.

ದೊಡ್ಡಮ್ಮನಿಗೆ ಅದು ಇಷ್ಟವಾಗಿರಲಿಲ್ಲ.

ಆದರೆ ಶ್ರೀನಿವಾಸಯ್ಯ ಅಂದಿದ್ದರು :

"ಇರಲಿ, ಬಿಡಮ್ಮ, ಈಗ ಎಲ್ಲಿ ನೋಡಿದರೂ ಕ್ರಾಪೇ."

"ಕಾಲಕ್ಕೆ ತಕ್ಕಂತೆ ವೇಷ," ಎಂದು ಹೇಳಿ ದೊಡ್ಡಮ್ಮ ಸುಮ್ಮನಾಗಿದ್ದರು.

ಆ ಬೇಸಗೆಯಲ್ಲಿ ಗೋವಿಂದನೂ ಪದ್ಮನಾಭನೂ ಗೋಪಾಲನನ್ನು ಪೀಡಿಸಿ ಛೇಡಿಸಿ ಹಣ್ಣು ಮಾಡಿದ್ದರು, ಹೊಸಳ್ಳಿಯಿಂದ ಕ್ಷೌರಿಕ ಬಂದಾಗ.

"ನಿನಗೇನಾದರೂ ಕೊಡ್ತೀವಿ. ಗೋಪಾಲಣ್ಣನ ಜುಟ್ಟು ಕತ್ತರಿಸಿ ಬಿಡಪ್ಪ," ಎಂದಿದ್ದರು.

ಗೋಪಾಲ ತನ್ನೆದುರು ಕುಳಿತು ತಲೆ ಬಗ್ಗಿಸಿದಾಗ ಕ್ಷೌರಿಕ, "ಚಿಕ್ಕೋರ ಕ್ರಾಪು ಚೆಂದಾಗೈತೆ. ನಿಮ್ಮದನ್ನ ಅದಕ್ಕಿಂತ ವೈನಾಗಿ ಮಾಡ್ಬುಡ್ಲ ಬುದ್ಧಿ?" ಎಂದ.

ತಲೆಯೆತ್ತದೆಯೇ ಗೋಪಾಲ, "ಹೂಂ," ಅಂದಿದ್ದ.

ಗೋವಿಂದನೂ ಪದ್ಮನಾಭನೂ ಮರೆಯಲ್ಲಿದ್ದರು.

ಕರಕ್ ಕರಕ್. ಗೋಪಾಲನ ಚಂಡಿಕೆ ಗತಪ್ರಾಣವಾಗಿ ಉರುಳಿ ಬಿತ್ತು.

ಅವನ ತಮ್ಮಂದಿರು ಎದುರಿಗೆ ಬಂದು ಚಪ್ಪಾಳೆ ತಟ್ಟಿದರು.

ಗೋಪಾಲ ಕಂಬನಿ ಸುರಿಸಿದ.

ದೊಡ್ಡಮ್ಮ ಹೊರಕ್ಕೆ ಬಂದು, ಗೋಪಾಲನತ್ತ ನೋಡಿ ನಿಟ್ಟುಸಿರು ಬಿಟ್ಟು, "ಅಯ್ಯೋ ಪಾಪಿಗಳಾ !" ಎಂದು ಉದ್ಗರಿಸಿ, ಒಳಕ್ಕೆ ಹೋದರು.

ಜುಟ್ಟು ಹೋಯಿತೆಂದು ನಾಗರಿಕನಾದನೆ ಗೋಪಾಲ ? ಕ್ರಾಪು ಬಿಟ್ಟವರೆಲ್ಲ ಸುಸಂಸ್ಕೃತರಾಗುವುದಾದರೆ ಲೋಕ ಹೀಗೆ ಯಾಕಿರುತ್ತಿತ್ತು ? ಹೊಲದಲ್ಲಿ ದುಡಿಯುವ ರೈತರಿಗೂ ಇವನಿಗೂ ಏನು ವ್ಯತ್ಯಾಸ ಅಂತ ? ಓದು ಬರಹ ಬಲ್ಲ. ಆದರೆ ಒಂದು ಪುಸ್ತಕ ವನ್ನಾದರೂ ಓದೋಣವೆಂದು ಎತ್ತಿಕೊಂಡುದುಂಟೆ ಈತ ?

ಪದ್ಮನಾಭನಿಗೆ ಆಶ್ಚರ್ಯವಾಯಿತು :

'ಗೋಪಾಲನಿಗೂ ನನಗೂ ಯಾವ ಸಾಮ್ಯವೂ ಇಲ್ಲ : ಗೋವಿಂದನ ವಿಷಯದಲ್ಲೂ ಅಷ್ಟೆ. ಅವನೊಂದು ರೀತಿ, ನಾನೊಂದು ರೀತಿ. ಇಷ್ಟೊಂದು ವ್ಯತ್ಯಾಸ ಇರುತ್ತದಲ್ಲ ಒಡಹುಟ್ಟಿದವರಲ್ಲಿ !'

ಕಣಿವೇಹಳ್ಳಿಯಲ್ಲಿ ಹೈಸ್ಕೂಲು ! ಆ ಹೈಸ್ಕೂಲಿಗೆ ತಾನು ಹೆಡ್ಮೇಸ್ಟ್ರು !

ಎಂಥೆಂಥ ಯೋಚನೆ ತಂದೆಯದು, ದೊಡ್ಡಮ್ಮನದು.

ಈಗ ಮನೆ ಬಿಡುತ್ತಿದ್ದೇನೆ, ಒಂದು ವರ್ಷದ ವ್ಯಾಸಂಗಕ್ಕೆ ಅಂತ. ಆ ಮೋಹನರಾಯರು ಯಾರೊ ? ಮತ್ತೆರಡು ವರ್ಷ ಓದಿ ವಕೀಲಿ ಪರೀಕ್ಷೆಗೂ ಯಾಕೆ ನಾನು ಕಟ್ಟಬಾರದು ? ಆಗಾಗ್ಗೆ ಈ ಹಳ್ಳಿಗೆ ಬರುತ್ತ ಹೋಗುತ್ತ ಇದ್ದರಾಯಿತು. ಇಲ್ಲಿಯ ಕೇಸುಗಳೆಲ್ಲಾ ಸಿಕ್ಕಿಯೇ ಸಿಗುತ್ತವೆ...

ತಂದೆ ನೋಡಿ ಬಂದಿರುವ ಆ ಹುಡುಗಿ ಹೇಗಿರುವಳೊ ? ಪ್ರಮದೆಯ ಹಾಗೆ ? ಸುಬ್ಬಿಯ ಹಾಗೆ ?

ಕಿಟಕಿಗೆ ಮರದ ಕಂಬಿಗಳನ್ನು ಹಾಕಿದ್ದರು. ಎರಡು ಕಂಬಿಗಳನ್ನು ಅಂಗೈಗಳಲ್ಲಿ ಹಿಡಿದು

ಪದ್ಮ ಅಮುಕಿದ.

ಅವನ ಸಹಪಾಠಿಗಳಲ್ಲಿ ಕೆಲವರಿದ್ದರು –ಪ್ರಪಂಚ ಸುಖವನ್ನು ಆಗಲೇ ಕಂಡವರು. ಪದ್ಮ ಅವರನ್ನು ಸ್ಮರಿಸಿಕೊಂಡ.

ಅವರಲ್ಲೊಬ್ಬ (ಚಂದು) ಹೇಳಿದ್ದನಲ್ಲ ?

"ನೀನೊಬ್ಬ ಗುಗ್ಗು ಕಣೋ. ಯಾವ ಹುಡುಗೀನೂ ತಾನಾಗಿ ಬಂದು ಕತ್ತಿಗೆ ಆತ್ಕೊಳ್ಳೋಲ್ಲ. ಮೊದಲು ನೀನು ಕತ್ತು ಚಾಚಬೇಕು. Aggressive ಆಗಿ ಎರಡು ಹೆಜ್ಜೆ ಮುಂದಿಡಬೇಕು."

ಪ್ರಮದೆ ಕೈಗೆಟಕಿರಲಿಲ್ಲ. ಸುಬ್ಬಿ ಅವನಿಗೆ ಸಿಗುತ್ತಿದ್ದಳು. ಆದರೆ ಏನೋ ಆಗಿ ಹೋಯಿತು.

ಒಳ್ಳೆಯದಕ್ಕೇ ಆಯಿತು ಎನ್ನಬಹುದಲ್ಲ ? ಮನುಷ್ಯರನ್ನು ಅರ್ಥ ಮಾಡಿಕೊಳ್ಳಲಾರದ ಈ ಹಳ್ಳೀಮುಕ್ಕರ ಮಧ್ಯೆ ಸ್ವಚ್ಛಂದವಾಗಿ ಓಡಾಡುವುದು ಆಗದ ಮಾತು. ಆ ರಂಗಣ್ಣ. ಅವನೊಬ್ಬ ಕಾಡು ಪ್ರಾಣಿ. ಡಾಕ್ಟರಾಗ್ತಾನಂತೆ, ಡಾಕ್ಟ್ರು.

ನಗರದಲ್ಲಿ ಹಾಗಲ್ಲ. ಅಲ್ಲಿ ಇದ್ದಷ್ಟು ದಿವಸ ಸುಖವಾಗಿರಬಹುದು. ಇವಳು ಹೇಗೂ ಓದಿದ ಹುಡುಗಿ. ರಸಿಕತೆಯ ಪಾಠವನ್ನು ಹೊಸದಾಗಿ ಹೇಳಿಕೊಡುವ ಅಗತ್ಯ ಇರಲಾರದು ಎಂದಿಟ್ಟುಕೊಳ್ಳೋಣ. ಕಣಿವೇಹಳ್ಳಿಯಲ್ಲಿ ವಕೀಲನ ಹೆಂಡತಿಯಾಗಿ ಈ ಮನೆಯಲ್ಲಿರಲು ಅವಳು ಒಪ್ಪುತ್ತಾಳೆಯೆ ? ಒಪ್ಪಿದರೆ ಇಲ್ಲೇ ಇರಲಿ. ನನ್ನ ಕೋರ್ಟು ಕಚೇರಿಗಳಿರುವುದು ನಗರದಲ್ಲಿ. ಇಲ್ಲಿಗೆ ಬಂದು ಹೋಗಿ ಮಾಡುತ್ತಿದ್ದರಾಯಿತು.

... ಗೋಪಾಲ ಬರಿಯ ಚುಕ್ಕೆಯಾಗಿ ಆಗಲೇ ಹಲವು ನಿಮಿಷಗಳಾಗಿದ್ದುವು.

ಪದ್ಮನಾಭ, ನೆಲದ ಮೇಲೆ ತಾನು ಹರಡಿದ್ದ ಸಾಮಾನುಗಳತ್ತ ಮತ್ತೆ ಹೊರಳಿದ.

... ಶ್ರೀನಿವಾಸಯ್ಯ ಎದ್ದರು. ಕಣ್ಣುಗಳು ಉರಿಯುತ್ತಿದ್ದುವು. ರಾತ್ರಿಯ ನಿದ್ದೆ ಸಾಲದು–ಎಂದುಕೊಂಡರು. ಹೊಸ ಜಾಗದಲ್ಲಿ ಅವರು ಮಲಗಬೇಕಾದ ಪ್ರಸಂಗ ಬಂದಾಗಲೆಲ್ಲ ಹೀಗೆಯೇ. ನಿದ್ದೆ ಹತ್ತುತ್ತಿರಲಿಲ್ಲ. ಎರಡು ಸಲ ಆಕಳಿಸಿದರು. ಕ್ರಮೇಣ ಕಣ್ಣುಗಳ ಉರಿ ಕಡಮೆಯಾಯಿತು. ಎದ್ದು ನಡುವಿನ ನೆಟಿಕೆ ಮುರಿದು, ತಾಯಿಯನ್ನು ಹುಡುಕಿಕೊಂಡು ಒಳಗೆ ಹೋದರು.

ಮಗ ಹತ್ತಿರ ಬಂದೊಡನೆ, ಮೊಮ್ಮಗನ ಕೋರಿಕೆಯನ್ನು ಈಡೇರಿಸಿದರು ದೊಡ್ಡಮ್ಮ.

ಶ್ರೀನಿವಾಸಯ್ಯ ಅಂದರು :

"ಕನ್ಯೆ ನೋಡೊಲ್ವಂತೊ ? ಮೋಹನರಾಯರಿಗೆ, ಪದ್ಮನನ್ನ ಕರಕೊಂಡ್ಬರ್ತೀನಿ ಅಂತ ಹೇಳಿದೀನಲ್ಲ ನಾನು."

"ನೋಡ್ತಾನೆ, ಶೀನ. ಅಲ್ಲೇ ಇರ್ತಾನಲ್ಲ. ನೀನು ಹೋಗಿ, ಬಾ ಅಂತ ಕರೆದರಾಯ್ತು," ಎಂದರು, ದೊಡ್ಡಮ್ಮ.

ಪದ್ಮ ಸ್ವಲ್ಪ ಜಾಸ್ತಿ ದುಡ್ಡು ಕೇಳಿದಾನೆ ಎಂದು ತಾಯಿ ತಿಳಿಸಿದಾಗ ಶ್ರೀನಿವಾಸಯ್ಯ, "ವಿಷ್ಣುಮೂರ್ತಿ ಸೂಚ್ಯವಾಗಿ ನಿನ್ನೆ ಅಂದ್ರು – ನಗರದಲ್ಲಿ ಒಂದಿಷ್ಟು ಆಸ್ತಿ ಮಾಡ್ಕೊಳ್ಳಿ, ಅಂತ. ನಮಗಾ ಕಷ್ಟ ? ಅಂದೆ. ಮಕ್ಕಳು ಮೊಮ್ಮಕ್ಕಳಿಗಾಗುತ್ತೆ ; ಸಿಕ್ಕಾಗ ಮೂರು ನಾಲ್ಕು ಸೈಟು ಖರೀದಿ ಮಾಡ್ಬಿಡ್ಬೇಕು– ಅಂದ್ರು. ಇಲ್ಲೇ ಬ್ಯಾಂಕ್ನಲ್ಲಿ ಒಂದು ಲೆಕ್ಕ ಇಡೀಂತಲೂ

ಹೇಳಿದ್ರು," ಎಂದರು.

ಅಷ್ಟರಲ್ಲಿ ಅವರಿಬ್ಬರನ್ನೂ ದಾಟಿಕೊಂಡು [ಅವರು ಆಡಿದ ಮಾತುಗಳನ್ನು ಕೇಳಿಸಿ ಕೊಂಡು] ಭಾಗೀರಥಿ ಪಡಸಾಲೆಗೆ ಹೋದಳು.

ದೊಡ್ಡಮ್ಮನೆಂದರು :

"ನೋಡು. ಪೂರ್ವಾಪರ ಯೋಚಿಸಿ ಏನು ಬೇಕೋ ಮಾಡು. ಆದರೂ ಹುಡುಗರ ಕೈಲಿ ಜಾಸ್ತಿ ದುಡ್ಡು ಇಡಬಾರದು. ಪದ್ಮನಿಗೆ, ಲೆಕ್ಕ ಹಾಕಿ ಎಷ್ಟು ಬೇಕೋ ಅಷ್ಟು ಕೊಟ್ಟ ರಾಯ್ತು."

"ಹೂಂ."

"ಆಗಲೇ ಸಾಮಾನು ಕಟ್ಕೋಕೆ ಹೊರಟಿದ್ದ, ಪದ್ಮ. ಕೋಣೇಲಿ ಇದಾನೇಂತ ತೋರುತ್ತೆ."

"ಹೂಂ."

ಶ್ರೀನಿವಾಸಯ್ಯ ಹೊರಗೆ ಬಂದು, ಕಿರಿಯ ಮಗನ ಕೊಠಡಿಯ ಬಾಗಿಲಲ್ಲಿ ನಿಂತರು. ಪುಸ್ತಕಗಳನ್ನೂ ಬಟ್ಟೆಗಳನ್ನೂ ಟ್ರಂಕಿನಲ್ಲಿ ಒಪ್ಪವಾಗಿ ಜೋಡಿಸತೊಡಗಿದ್ದ, ಪದ್ಮನಾಭ.

ಮಗನೊಡನೆ ತಾವು ಮಾತನಾಡಿ ಎಷ್ಟೋ ವರ್ಷಗಳಾದಂತಿದೆಯಲ್ಲ – ಎನಿಸಿತು ಶ್ರೀನಿವಾಸಯ್ಯನವರಿಗೆ. ಅಲ್ಪಾವಧಿಯಲ್ಲಿ ಅನೇಕ ಘಟನೆಗಳು ಜರಗಿ ಹೀಗೆ ಭಾಸವಾಗುತ್ತಿರ ಬೇಕು–ಎಂದುಕೊಂಡರು.

"ಪದ್ಮ," ಎಂದು ಅವರು ಕರೆದರು.

ಬಾಗಿಲಿಗೆ ಬೆನ್ನು ಮಾಡಿ ಟ್ರಂಕಿನೆದುರು ಕುಳಿತಿದ್ದ ಪದ್ಮನಾಭ ತಿರುಗಿ ನೋಡಿದ, ಎದ್ದ.

ತಂದೆಯ ಎದುರು, ವಿನೀತನಾಗಿ ದೃಷ್ಟಿಯನ್ನು ಬಾಗಿಲಿನ ಚೌಕಟ್ಟಿನ ಮೇಲೆ ನೆಟ್ಟು ಆತ ನಿಂತ.

"ನಗರಕ್ಕೆ ನಾಳೆ ಹೊರಡ್ತೀಯೇನು ?"

—ಶ್ರೀನಿವಾಸಯ್ಯ ಕೇಳಿದರು.

"ಹ್ಞು ಅಣ್ಣಯ್ಯ. ನಾಳೆ ಬೆಳಗ್ಗೆ ಹೋಗ್ತೀನಿ."

"ಬೆಳಗ್ಗೆ ಯಾತಕ್ಕೆ ? ಊಟ ಮಾಡ್ಕೊಂಡು ಹೊರಡಬಹುದಲ್ಲ."

"ಇಲ್ಲ. ಬೆಳಗ್ಗೇನೇ ಹೋದರೆ ವಾರ್ಡನ್‌ರನ್ನ ನೋಡಿ ಹಾಸ್ಟೆಲ್ ಸೇರ್ಕೊಳ್ಳೋದು ಸುಲಭವಾಗುತ್ತೆ."

"ನಿಜ. ಹಾಗೇ ಮಾಡು."

"ನಾನು ಹೆಣ್ಣು ನೋಡಿರೋ ವಿಷಯ ನಿನ್ನ ಅಜ್ಜಿ ಆಗ್ಲೇ ಹೇಳಿರ್ಬೇಕು."

"........."

"ನೀನೊಮ್ಮೆ ಮೋಹನರಾಯರ ಮನೆಗೆ ಹೋಗ್ಬೇಕಾಗುತ್ತೆ."

"........."

"ಎಲಾ! ಕಿವುಡನೆ ನೀನು ? ಮೂಕನೆ ? ಕೇಳಿಸ್ಲಿಲ್ವೇನು ನಾನು ಹೇಳಿದ್ದು ?"

"ಕೇಳಿಸ್ತು, ಅಣ್ಣಯ್ಯ."

"ಸರಿ, ಮತ್ತೆ."

"ನೀವು ಯಾವಾಗ ಬರ್ತೀರಿ ?"

"ಬರ್ತೀನಿ, ಒಂದು ವಾರವೋ ಹತ್ತು ದಿವಸವೋ ಬಿಟ್ಕೊಂಡು. ಬೇಕಾದರೆ ವಿಷ್ಣು ಮೂರ್ತಿಗಳನ್ನ ಕರಕೊಂಡು ಮೋಹನರಾಯರಲ್ಲಿಗೆ ನೀನೊಮ್ಮೆ ಹೋಗಿ ಬಾ. ಬೇಡ. ನಾನು ಅಲ್ಲಿಗೆ ಬಂದ್ಮೇಲೆ ನನ್ನ ಜತೇಲೇ ನೋಡುವಿಯಂತೆ."

"ಆಗಲಿ, ಅಣ್ಣಯ್ಯ."

"ಸರಿ, ಟ್ರಂಕಿಗೆ ತುಂಬಿಸು."

ಶ್ರೀಪಾದ ಅಂಬೆಗಾಲಿಡುತ್ತ, "ಅಮ್ಮಮ್ಮಮ್ಮ–ತಾತಾತಾ,"–ಎನ್ನುತ್ತ ಅಲ್ಲಿಗೆ ಬಂದ.

"ಒಳಗ್ಹೋಗ್ಬೇಡ, ಮರಿ, ಪುಸ್ತಕ ಹರೀಬಾರ್ದು. ದೊಡ್ಡೋನಾದ್ಮೇಲೆ ನೀನೂ ಓದೀ," ಎನ್ನುತ್ತ ಶ್ರೀನಿವಾಸಯ್ಯ ಮೊಮ್ಮಗನನ್ನು ಎತ್ತಿಕೊಂಡರು.

ಪದ್ಮ ಮಾತಿಲ್ಲದೆ ಮತ್ತೆ ಟ್ರಂಕಿನೆದುರು ಕುಳಿತ.

...ಬಿಸಿಲು ಬಾಡುತ್ತಲೆ ಪದ್ಮನಾಭ ಮುಖ ತೊಳೆದುಕೊಂಡು, ಶುಭ್ರವಾದ ಉಡುಪು ತೊಟ್ಟು, ಕ್ರಾಪು ಬಾಚಿ, ಅಜ್ಜಿಯ ಬಳಿಗೆ ಹೋಗಿ, "ಗುಡಿಗೆ ಹೋಗ್ಬರ್ತೀನಿ, ದೊಡ್ಡಮ್ಮ," ಎಂದ.

"ಹೂಂ. ಕತ್ತಲಾಗೋದರೊಳಗೆ ಮನೆಗ್ಬಂದ್ಬಿಡು. ದಿಬ್ಬದ ಹೊಂಡದ ಕಡೆಗೆ ಹೋಗ್ಬೇಡ," ಎಂದರು ಆಕೆ.

"ಹ್ಞು, ಹ್ಞು," ಎಂದ ಪದ್ಮನಾಭ.

... ಪದ್ಮ ದಿಬ್ಬವನ್ನೇರತೊಡಗಿದ ಸ್ವಲ್ಪ ಹೊತ್ತಿನಲ್ಲೆ ಗೋವಿಂದ ನಗರದಿಂದ ವಾಪಸಾದ. ಮಗನನ್ನು ನೋಡಿ ಶ್ರೀನಿವಾಸಯ್ಯ ಕೇಳಿದರು :

"ಆಗ್ಹೋಯ್ತೆ ಶಾಮಣ್ಣನ ಕೆಲಸ ?"

ಗೋವಿಂದನೆಂದ:

"ಹ್ಞು. ನಗರದ ವ್ಯವಹಾರಗಳೇ ಹೀಗೆ. ಆದ್ರೆ ಒಂದು ನಿಮಿಷದಲ್ಲಿ ಕೆಲಸವಾಗುತ್ತೆ. ಕೆಟ್ಟ ಘಳಿಗೇಲಿ ಶುರು ಮಾಡಿತೋ ಒಂದು ತಿಂಗಳಾದರೂ ಆಗೋದಿಲ್ಲ. ಗಣೇಶ ಭವನದಿಂದ ಮುನಿಯನ ವಕೀಲರಿಗೆ ಫೋನ್ ಮಾಡ್ದೆ. ಅವರಿದ್ರು. ಬಾ ಅಂದ್ರು. ಕೋರ್ಟಿಗೆ ಹೋದ್ವಿ. ರಾಜೀಪತ್ರಾನ ಮ್ಯಾಜಿಸ್ಟ್ರೇಟರ ಮುಂದೆ ದಾಖಲ್ಮಾಡಿದ್ವಿ. ಆಗ್ಹೋಯ್ತು ಕೆಲಸ."

"ಅಬ್ದುಲ್ಲನ ಮೇಲೆ ಇನ್ನೇನೂ ಇರೋದಿಲ್ಲ ತಾನೆ ?"

"ಸೆಟ್ಲಾಗ್ಹೋಯ್ತಲ್ಲ, ಅಣ್ಣಯ್ಯ. ಪಟೇಲ್ ಶಾಮೇಗೌಡ್ರು ಗೆದ್ರು."

"ಹಾಗಂದ್ರೇನೋ ಗೋವಿಂದ ? ಹಳ್ಳಿಯಲ್ಲಿ ಶಾಂತಿ ಒಗ್ಗಟ್ಟು ಶಾಮಣ್ಣನಿಗೂ ಬೇಕು, ನಮಗೂ ಬೇಕು– ಅಲ್ವೇನೋ ?"

"ಬೇಡ ಅಂದ್ನೆ ನಾನು ?"

ಗೋವಿಂದನ ಧ್ವನಿ ಕೇಳಿ ದೊಡ್ಡಮ್ಮ ಪಡಸಾಲೆಗೆ ಬಂದರು. ಶ್ರೀಪಾದನನ್ನೆತ್ತಿಕೊಂಡು ಭಾಗೀರಥಿಯೂ ಅತ್ತ ಬಂದಳು, ತನ್ನ ಕೋಣೆಗೆ ಹೊರಟವಳಂತೆ ನಟಿಸುತ್ತ.

"ಅದೇನು ಕಟ್ಟು ?" ಎಂದು ಕೇಳಿದರು ದೊಡ್ಡಮ್ಮ, ಗೋವಿಂದ ತಂದಿದ್ದ ಪೊಟ್ಟಣದತ್ತ ಬೊಟ್ಟುಮಾಡಿ.

"ಅದೇ–ವಿಷ್ಣುಮೂರ್ತಿಗಳು ಒಂದು ಬುಟ್ಟಿ ಹಣ್ಣುಹಂಪಲು ಕೊಳ್ಳೋಕೆ ಹೊರಟಿದ್ರು. ನಿಮ್ಮ ತಂದೆ ಕೈಲಿ ಏನೂ ಕಳಿಸ್ಲಿಲ್ಲ; ನೀನಾದರೂ ತಗೊಂಡು ಹೋಗು-ಅಂದ್ರು. ಬಸ್ಸಿನಿಂದಿಳಿದು ಎರಡು ಮೈಲಿ ಹೊರೋದು ಯಾರು ? ಇವತ್ತು ಬೇಡಿ, ಆಳುಗಳು ಬಸ್ ಹತ್ತಿರಕ್ಕೆ ಬರೋದಿಲ್ಲ, ಅಂದೆ. ಕಡೆಗೂ ಹಟ ಮಾಡಿ ಒಂದೆರಡು ಡಜನ್ ಒಳ್ಳೇ ಚಿಕ್ಕು ಹಣ್ಣು ಕಟ್ಟಿಸಿದ್ರು. ಅಂದಹಾಗೆ ಶ್ರೀಪಾದನಿಗೇಂತ ಒಂದು ಗೊಂಬೆ ಕಳಿಸಿದಾರೆ–ಪ್ಲಾಸ್ಟಿಕಿಂದು. ಅವತ್ತು ಏನೂ ಕೊಡದೇ ಬಂದ್ಬಿಟ್ಟೆ–ಅಂದ್ರು. ಅತ್ತಿಗೇ, ಶ್ರೀಪಾದನನ್ನು ಕಳಿಸ್ಕೊಡಿ, ಅತ್ತಿಗೇ."

ಭಾಗೀರಥಿ ಮಗನನ್ನು ಕಳುಹಿಸಿಕೊಡಲಿಲ್ಲ.

ದೊಡ್ಡಮ್ಮ ಕಟ್ಟನ್ನು ಬಿಚ್ಚಿ, ಗೊಂಬೆಯನ್ನು ನೋಡಿ, "ಚೆನ್ನಾಗಿದೆ. ಭಾಗೀ, ಶ್ರೀಪಾದೂನ ಕರಕೊಂಡ್ಬಾ," ಎಂದರು.

ಈಗ ಭಾಗೀರಥಿ ಬರಲೇಬೇಕಾಯಿತು.

ಪ್ಲಾಸ್ಟಿಕ್ ಮಗುವನ್ನು ಮುಟ್ಟಲು ಶ್ರೀಪಾದ ಒಂದು ಕ್ಷಣ ಹಿಂಜರಿದ. ಅದರ ಬಣ್ಣದ ಕಣ್ಣುಗಳನ್ನು, ಮೂಗನ್ನು, ಬಾಯಿಯನ್ನು ಮುಟ್ಟಿ ನೋಡಿದ. ಬಳಿಕ ನಕ್ಕ.

"ತಕೋ," ಎಂದು ದೊಡ್ಡಮ್ಮ, ಗೊಂಬೆಯನ್ನು ಮಗುವಿನ ಕೈಗಳಲ್ಲಿಟ್ಟರು.

ಮಗು ಬಾಯಿ ತೆರೆದು "ಹೊಹೊಹೋ !" ಎಂದು ನಗುವ ಸದ್ದು ಮಾಡಿತು.

"ನಾನೇ ತರಬೇಕಾಗಿತ್ತು. ಅವಸರದಲ್ಲಿ ಹಾಗೇ ಬಂದ್ಬಿಟ್ಟೆ. ವಿಷ್ಣುಮೂರ್ತಿಗಳು ಮರೀಲಿಲ್ಲ. ಲೋಕಾನುಭವಿ ಅನ್ನೋದು ಅದಕ್ಕೆ," ಎಂದರು ಶ್ರೀನಿವಾಸಯ್ಯ.

ಭಾಗೀರಥಿ ಶ್ರೀಪಾದನನ್ನೆತ್ತಿಕೊಂಡು ಒಳಕ್ಕೆ ಹೋದಳು. ಗೊಂಬೆಯನ್ನು ಮಗುವಿನ ಕೈಯಿಂದ ಕಿತ್ತು ಎಲ್ಲಾದರೂ ಎಸೆಯಬೇಕು ಎನಿಸಿತು ಅವಳಿಗೆ. ಗೊಂಬೆಯನ್ನೊಮ್ಮೆ ಹಿಡಿದಳು ಕೂಡಾ. ಆದರೆ ಶ್ರೀಪಾದನ ಹಿಡಿತ ಕಪಿಮುಷ್ಟಿಯಾಗಿತ್ತು.

ಗೋವಿಂದ ಚಿಕ್ಕು ಹಣ್ಣುಗಳನ್ನು ರಟ್ಟಿನ ಪೆಟ್ಟಿಗೆಯಿಂದ ಹೊರ ತೆಗೆದು ಸಾಲಾಗಿ ನೆಲದ ಮೇಲಿಟ್ಟ.

"ದೊಡ್ಡ ಸೈಜು," ಎಂದರು ಶ್ರೀನಿವಾಸಯ್ಯ.

"ಒಂದಕ್ಕೆ ಮೂರಾಣೆ," ಎಂದ ಗೋವಿಂದ.

"ಹೌದೆ ? ಮೂರಾಣೆಯೆ ? ಅಷ್ಟೊಂದು ಬೆಲೆಯೆ ?" ಎಂದು ದೊಡ್ಡಮ್ಮ ಆಶ್ಚರ್ಯ ವ್ಯಕ್ತಪಡಿಸಿದರು.

ನಗುತ್ತ ಗೋವಿಂದನೆಂದ :

"ನಾವೂ ತೋಟದಲ್ಲಿ ಚಿಕ್ಕು ದ್ರಾಕ್ಷೆ ಎಲ್ಲಾ ಬೆಳೆಸಬೇಕಂತೆ. ನಗರದಲ್ಲಿ ಒಳ್ಳೆ ಬೆಲೆ ಸಿಗುತ್ತೇಂತ ವಿಷ್ಣುಮೂರ್ತಿಗಳು ಅಂದ್ರು."

ಶ್ರೀನಿವಾಸಯ್ಯ ಏನೂ ಹೇಳಲಿಲ್ಲ.

ದೊಡ್ಡಮ್ಮ ಎದ್ದು ಒಳಹೋದರು.

ಗೋವಿಂದ ಕೊಠಡಿಗೆ ಹೋದಾಗ ಶ್ರೀನಿವಾಸಯ್ಯ ಅಂದರು :

"ಪದ್ಮ ನಾಳೆ ನಗರಕ್ಕೆ ಹೋಗ್ತಾನೆ. ಕಾಲೇಜು ಶುರುವಾಗೋ ಸಮಯ ಹತ್ತಿರ ಬಂತಂತಲ್ಲ."

"ಕಾಲೇಜು ಬಾಗಿಲು ತೆರೆಯೋಕೆ ಇನ್ನೂ ಹದಿನೈದು ದಿವಸ ಇದೆ. ಹೋಗಲಿ,

ಹಳ್ಳಿ ಬೇಜಾರಾಗಿರ್ಬೇಕು," ಎಂದ ಗೋವಿಂದ.

"ನೀನು ಶಾಮಣ್ಣನಲ್ಲಿಗೆ ಹೋಗಿ, ಕೆಲಸ ಆಯ್ತೂಂತ ತಿಳಿಸಿ ಬಾ."

"ಹೋಗ್ತೀನಿ."

...ಮುಚ್ಚಂಜೆಯಾಯಿತು. ಗಂಡ ಎಂದು ಬರುವರೋ, ನಗರದಲ್ಲಿ ಆಸ್ತಿ ಮಾಡುವ ವಿಷಯ–ಬ್ಯಾಂಕಿನಲ್ಲಿ ಲೆಕ್ಕ ತೆರೆಯೋದು – ಈ ಹಾಳು ಗೊಂಬೆ – ಇದೆಲ್ಲ ಯಾವಾಗ ತಿಳಿಸುವೆನೋ ಎಂದು ಭಾಗೀರಥಿ ತವಕಗೊಂಡಳು.

...ಪದ್ಮ ಗುಡಿಯನ್ನು ಸಮೀಪಿಸಿದಾಗ ಅಲ್ಲಿ ಯಾರೋ ಇದ್ದಂತೆ ಕಂಡಿತು. ಆತ ರಂಗಣ್ಣ ಎಂದು ಪದ್ಮ ಗುರುತು ಹಿಡಿದ. ಅವನೂ ಈತನನ್ನು ಕಂಡಿರಬೇಕು. ಸರಸರನೆ ಇನ್ನೊಂದು ದಿಕ್ಕಿನಿಂದ ಆತ ಇಳಿಯತೊಡಗಿದ.

ಒಮ್ಮೆಲೆ ಪದ್ಮನಿಗೆ ಇಂಥದೇ ಎಂದು ಹೇಳಲಾಗದ ವೇದನೆಯಾಯಿತು. ಬಾಲ್ಯದ ಒಡನಾಡಿಯನ್ನು ತಡೆದು ನಿಲ್ಲಿಸಬೇಕು ಎನಿಸಿತು.

ಅವನನ್ನು ಕರೆಯಲೆಂದು ಪದ್ಮ ಬಾಯಿ ತೆರೆದ.

## ೧೯

ಪದ್ಮನಾಭ ರಂಗಣ್ಣನನ್ನು ಕರೆಯಲೆಂದು ಬಾಯಿ ತೆರೆದನೇನೋ ನಿಜ. ಆದರೆ ಧ್ವನಿ ಹೊರಡುವುದಕ್ಕೆ ಮುನ್ನವೇ ಆತ ಮನಸ್ಸು ಬದಲಾಯಿಸಿದ.

ತಾನು ಕರೆದಾಗ ಅವನು ಓಗೊಡದೇ ಇದ್ದರೆ ? ಬರದೇ ಇದ್ದರೆ ?

ಕಡಿದು ಹೋದ ತಂತುವನ್ನು ಮತ್ತೆ ಕೂಡಿಸಿ ಕಟ್ಟುವುದು ವ್ಯರ್ಥ.

ತಾನು ಮೇಲೆ ಬಂದೆ ; ಅವನು ಕೆಳಗೆ ಹೋದ. ಅದೇ ಸೂಚಿಸುವುದಿಲ್ಲವೆ ? ತನ್ನ ಮುಖ ಒಂದು ದಿಕ್ಕಿಗಾದರೆ ಅವನ ಮುಖ ವಿರುದ್ಧ ದಿಕ್ಕಿಗೆ.

ಈ ಎರಡು ಮನೆಗಳಲ್ಲಿ ತಾತಂದಿರ ಕಾಲದಲ್ಲಿ ಆರಂಭವಾದ ಸ್ನೇಹ ಮೊಮ್ಮಕ್ಕಳ ಕಾಲಕ್ಕೆ ಮುಕ್ತಾಯವಾದಂತೆಯೇ.

ಇಳಿದು ಹೋಗುತ್ತಿದ್ದ ರಂಗಣ್ಣನ ಕಡೆಗೆ ಕೊನೆಯ ಬಾರಿಗೆ ನೋಡಿ, ಗುಡಿಯ ಮುಖಮಂಟಪದತ್ತ ಪದ್ಮನಾಭ ಹೆಜ್ಜೆ ಇರಿಸಿದ.

ದೇವರಿಗೆ ನಮಿಸಿ, ಮಂಟಪದಲ್ಲಿ ಕುಳಿತು, ಎದುರು ಹರಡಿದ್ದ ಹಳ್ಳಿಯನ್ನೂ ಅದಕ್ಕೆ ಬೇಲಿಯಾಗಿದ್ದ ಹಾಲು ಹೊಳೆಯನ್ನೂ ಪದ್ಮನಾಭ ದಿಟ್ಟಿಸಿದ. ಆ ಎತ್ತರದಲ್ಲಿ ಅವನ ಪಾಲಿಗೆ ಪ್ರತಿಯೊಂದೂ ಶಾಂತವಾಗಿತ್ತು.

ಬೆನ್ನ ಹಿಂದೆ ಕೆಳಗೆ ಗೊಂಡಾರಣ್ಯ; ಎದುರು, ಹಸಿರಾಗಿ ಮಾರ್ಪಡಲು ಬೀಜರಾಶಿಯ ದಾರಿ ನೋಡುತ್ತಿದ್ದ ಬಯಲು; ಅದರಾಚೆಗೆ ದೂರದಲ್ಲಿ ಮತ್ತೆ ಹಸಿರು–ಹಸಿರು, ನೀಲಿ–ನೀಲಿ.

ಎಷ್ಟೋ ಕಾಲದಿಂದ ಕುದಿಯುತ್ತಿದ್ದ ಪದ್ಮನ ಮನಸ್ಸು ಆ ತಣುಪಿನಲ್ಲಿ ತೋಯಿಸಿ ಕೊಂಡು ನೆಮ್ಮದಿ ಪಡೆಯಿತು.

'ಇವತ್ತಿನಿಂದ ನನ್ನ ಬದುಕಿನ ಹೊಸ ಅಧ್ಯಾಯ ಆರಂಭ," ಎಂದುಕೊಂಡ ಆತ.

ಕುಳಿತಲ್ಲಿಗೆ ದಿಬ್ಬದ ಹೊಂಡ ಕಾಣಿಸುತ್ತಿತ್ತು. ಆ ಹೊಂಡದಲ್ಲಿದ್ದುವು ಹಳೆಯ ನೆನಪುಗಳು. ಆದರೆ ಅವು ಪದ್ಮನಾಭನನ್ನು ಈಗ ಕಾಡಲಿಲ್ಲ.

'ಅಪ್ರಿಯವಾದದ್ದನ್ನೆಲ್ಲ ಮರೆತುಬಿಟ್ಟಿದೀನಿ,' ಎಂದ ಪದ್ಮ ತನ್ನಷ್ಟಕ್ಕೆ, ತಾನು ಪ್ರಬಲ ಇಚ್ಛಾಶಕ್ತಿಯ ಮನುಷ್ಯ ಎಂದು ಹೆಮ್ಮೆಪಡುತ್ತ.

ಅಲ್ಲಿ ಸ್ವಲ್ಪ ಹೊತ್ತು ಕುಳಿತ ಮೇಲೆ, "ಕತ್ತಲಾಗೋದರೊಳಗೆ ಮನೆಗೆ ಬಂದ್ಬಿಡು ಎಂದಳಲ್ಲ ಅಜ್ಜಿ; ಇನ್ನು ಹೋಗೋಣ' ಎಂದುಕೊಂಡು, ಪದ್ಮ ಎದ್ದ...

...ತಮ್ಮ ಪದ್ಮನಾಭ ಗುಡಿಯನ್ನು ತಲಪಿದಾಗ ಗೋವಿಂದ ಶಾಮೇಗೌಡರ ಮನೆಯನ್ನು ಮುಟ್ಟಿದ್ದ.

"ಬಾ ಗೋವಿಂದಪ್ಪ. ಬಾ ಅನ್ಬೇಕೋ ? ಬನ್ನಿ ಅನ್ಬೇಕೋ ?" ಎಂದರು ಗೌಡರು, ಗೋವಿಂದನನ್ನು ನೋಡಿದೊಡನೆ. ಅಂಗಳದಲ್ಲಿ ಚಾಪೆಯ ಮೇಲೆ ಎಲೆ ಅಡಿಕೆ ಮೆಲ್ಲುತ್ತ ಅವರು ಆಸೀನರಾಗಿದ್ದರು. ಆ ಚಾಪೆಯ ಮೇಲೆಯೇ ಕೂತುಕೊಳ್ಳುವಂತೆ ಕೈಸನ್ನೆಯಿಂದ ಗೋವಿಂದನಿಗೆ ಅವರು ಸೂಚಿಸಿದರು. ಗೋವಿಂದ, ಗೌಡರಿಗಿಂತ ತುಸು ದೂರದಲ್ಲಿ ಚಾಪೆಯ ಅಂಚಿನಲ್ಲಿ ಕುಳಿತ.

ಅವನೆಂದ :

"ನಿಮಗೆ ಹ್ಯಾಗಿಷ್ಟವೊ ಹಾಗೆ ಕರೆದರಾಯ್ತು."

"ನಮ್ಮಿಷ್ಟದ ಹಾಗೇ ಎಲ್ಲಾ ನಡೀತೇತಾ ಗೋವಿಂದಪ್ಪ ?"

"ಯಾಕಿಲ್ಲ ? ಮುನಿಯನ ಪ್ರಕರಣ ನಿಮ್ಮಿಷ್ಟದ ಹಾಗೆಯೇ ಮುಕ್ತಾಯ ಆಗ್ಲಿಲ್ವೆ ?"

"ಏನು ಮಾಡ್ಕಂಬಂದೆ ?"

"ಲಾಯರಿ ಮೂಲಕ ರಾಜೀಪತ್ರ ದಾಖಲ್ಮಾಡಿಸ್ದೆ."

"ಒಕ್ಕಣೆ ಸರಿಯಾಗೈತೆ ಅಂದ್ರೋ ?"

"ಹೂಂ."

"ಕೋರ್ಟಿಂದ ಲೇಖೀ ಯಾನಾರೂ ತಕಂಡ್ಬಂದಾ ?"

"ಇಲ್ಲ. ಅದೆಲ್ಲ ಇನ್ಯಾತಕ್ಕೆ, ಸುಮ್ಮನೆ ದುಡ್ಡು ಖರ್ಚು–ಅಂದ್ರು ಲಾಯರು."

ಇದು ಸರಿಯಾಗಲಿಲ್ಲ; ಕೋರ್ಟಿನಿಂದ ಏನಾದರೂ ತಂದಿದ್ದರೆ ಚೆನ್ನಾಗಿತ್ತು; ಅಥವಾ, ಗೋವಿಂದ ನಾಟಕ ಆಡ್ತಿದಾನೋ ? ರಾಜೀಪತ್ರವನ್ನು ಆತ ಮುಟ್ಟಿಸಿಯೇ ಇಲ್ಲ ಎಂದಾದರೆ? ಛೆ, ಛೆ, ಹಾಗೆ ಮಾಡಿ ಈ ಹಳ್ಳೀಲಿ ಇವನು ಜೀವನ ನಡೆಸೋದುಕ್ಕುಂಟೆ ?–ಎಂದೆಲ್ಲ ಶಾಮೇಗೌಡರು ಯೋಚಿಸಿದರು.

ಗೌಡರ ಮೌನವನ್ನು ಗೋವಿಂದ ಗಮನಿಸಿ ತಾನೇ ಮುಂದುವರಿದ :

"ಲಾಯರ ಮಾತಿಗೆ ವಿರುದ್ಧ ಹೋಗೋದು ನನಗೆ ಸರಿ ಕಾಣ್ಲಿಲ್ಲ. ಕೆಲಸ ಆಗೋದು ಮುಖ್ಯ. ಅಲ್ದೆ ದುಡ್ಡಿನ ಪ್ರಸ್ತಾಪ ಬೇರೆ ಅವರು ಮಾಡಿದ್ರು."

"ಏನು ?"

"ಕೇಸು ಗೆದ್ದುಕೊಟ್ಮೇಲೆ ನೂರು ರೂಪಾಯಿ ಕೊಡ್ತೀನಿ ಅಂತ ಮುನಿಯ ಹೇಳಿದ್ದನಂತೆ."

" ಎಲಾ ! ನೂರು ರೂಪಾಯಿ ಕೊಟ್ಟವ್ನಲ್ಲಾ ! ಎಂಕ್ಟಪ್ಪನಿಂದ್ಲೇ ಸಾಲ ಇಸ್ಕಂಡಿದ್ದ."

" ಅದು ಅಡ್ವಾನ್ಸು."

" ಸರಿ, ಸರಿ. ಈಗೇನ್ಮಾಡೋಕಾಯ್ತದೆ ?"

" ಬಡವ, ಸತ್ಹೋದ; ಗೌಡರ್ನ ಕೇಳಿ ಒಂದೈವತ್ತು ರೂಪಾಯಿ ತಂದ್ಕೊಡ್ತೀನಿ–ಅಂತ ಲಾಯರಿಗೆ ಹೇಳ್ದೆ."

" ಐವತ್ತು ರೂಪಾಯಿ ! ನಾನು ಕೊಡ್ಲೆ ?"

" ಕಣಿವೇಹಳ್ಳಿ ಮಾನದ ಪ್ರಶ್ನೆ. ನನ್ಹತ್ರ ಇದ್ದಿದ್ರೆ ಕೊಟ್ಬಿಡ್ತಿದ್ದೆ."

ಗೌಡರು ಅಂತರ್ಮುಖಿಯಾದರು. ಸರದ ಬೆಲೆಯಾಗಿ ದೊರೆತದ್ದು ಐವತ್ತೇ ರೂಪಾಯಿ. ಬಡ್ಡಿ ಇಲ್ಲವೆಂದರೂ ಅಸಲಾದರೂ ಮುಟ್ಟಿಸಬೇಕಲ್ಲ ವೆಂಕಟಪ್ಪನಿಗೆ ? ಕೈಯಿಂದ ಒಂದೈವತ್ತು ರೂಪಾಯಿ ತಾವು ಹಾಕಬೇಕು. ಮೇಲೆ ಮತ್ತೆ ಐವತ್ತು ರೂಪಾಯಿ ಲಾಯರಿಗೆ ಎಂದರೆ ? ಜಿಪುಣತನದ ಮಾತಲ್ಲ. ಆದರೆ ಅನಗತ್ಯವಾಗಿ ಕೈಯಿಂದ ದುಡ್ಡು ಸುರಿಯಬೇಕಲ್ಲ ? ಅಷ್ಟಕ್ಕೂ ಈ ಹುಡುಗ ಲಾಯರಿಗೆ ದುಡ್ಡು ಮುಟ್ಟಿಸುತಾನೋ ಇಲ್ಲವೋ...

ನೆಟ್ಟನೋಟದಿಂದ ಗೌಡರು ಗೋವಿಂದನನ್ನು ನೋಡಿದರು.

" ಅವರು ಫೀಸು ಕೇಳೋದು ಸಾಜ, ಗೋವಿಂದಪ್ಪ. ಆದರೆ ನಿಂಗಿ ತಾವ ಏನೈತೆ ? ಒಂದು ಮಾತಾನ. ಇಪ್ಪತ್ತೈದು ರೂಪಾಯಿ ನಾನು ಕೊಡ್ತೀನಿ. ಅದನ್ನ ಲಾಯರಿಗೆ ಒಪ್ಪಿಸಿ ನೀನು ಕೈಮುಗಿದ್ಬಿಡು."

ವಿಜಯಿಯ ಮುಗುಳುನಗೆಯನ್ನು ಹತ್ತಿಕ್ಕಿ, ಮುಖವನ್ನು ನೀಳಗೊಳಿಸಿ ಗೋವಿಂದ ನೆಂದ :

" ನಾನು ಐವತ್ತು ಅಂದಿದ್ದೆ. ಲಾಯರು ಬೇಜಾರು ಮಾಡ್ಕೋತಾರೆ. ಒಳ್ಳೇವರು, ಪಾಪ."

" ಒಳ್ಳೇವರೇನೆ. ಒಪ್ಕೊಂತೀನಿ. ಆದರೆ ಈ ಸಲ ದೊಡ್ಡ ಮನಸ್ಸು ಮಾಡಿ ಇಪ್ಪತ್ತೈದು ತಗೊಳ್ಳಿ."

—ಗೌಡರ ಸ್ವರದಲ್ಲಿ ಅಸಹನೆ ಬೆರೆತಿತ್ತು.

ಅವರು ಮನೆಯ ಕಡೆ ನೋಡಿ, " ರಂಗಾ ! ರಂಗಾ !" ಎಂದು ಕರೆದರು.

ನಿಮಿಷ ಬಿಟ್ಟು ಸುಭದ್ರೆ ಕಾಣಿಸಿಕೊಂಡಳು.

" ರಂಗಣ್ಣ ಗುಡಿಗೆ ಓಗವ್ನೆ ಅಪ್ಪ," ಎಂದಳು.

ಮೈ ಕೈ ತುಂಬಿಕೊಂಡು ನೋಡುವಹಾಗಿದ್ದ ಹುಡುಗಿಯನ್ನು ಗೋವಿಂದನ ಕಣ್ಣುಗಳು ಶಕ್ತಿ ಮೀರಿ ಹೀರಿದುವು. ನೆನಪಿನ ಸುಳಿಯಲ್ಲಿ ಪದ್ಮನಾಭನೂ ಕಾಣಿಸಿಕೊಂಡ.

"ಸರಿ !"ಎಂದರು ಗೌಡರು. ಸುಭದ್ರೆ ಒಳ ಹೋದಳು.

ಗೌಡರು ಗಂಟಲಿನಿಂದ ಗೊಣಗಾಟದ ಅಸ್ಪಷ್ಟ ಸ್ವರ ಹೊರಡಿಸಿ, ತುಸು ಕಷ್ಟದಿಂದ ಎದ್ದು [ಗೋವಿಂದ: ' ವಯಸ್ಸಾಯ್ತು ಇವರಿಗೆ. ಅಣ್ಣಯ್ಯನೂ ಕೂತೋರು ಏಳುವಾಗ ಹೀಗೇ ಮಾಡ್ತಾರೆ.' ] ಅಂಗಳದ ಅಂಚಿಗೆ ಹೋಗಿ, ಜಗಿದುದರ ಅವಶೇಷವನ್ನು ಉಗುಳಿದರು.

ದುಡ್ಡು ತರಲು ಹೋದರು ಎಂದು ಗೋವಿಂದ ಊಹಿಸಿದ.

ನಗರದಲ್ಲೆ ಲಾಯರು ಹೇಳಿದ್ದರು :

" ರಾಜೀ ಪತ್ರದ ಫೀಸು ಬರಬೇಕಲ್ಲಪ್ಪ ಗೋವಿಂದರಾವ್ ?"

ನಕ್ಕು ಗೋವಿಂದನೆಂದಿದ್ದ :

" ಈ ಕೇಸ್ನಲ್ಲಿ ಇನ್ನೇನೂ ಇಲ್ಲ, ಸಾರ್. ರೈಟಾಫ್ ಮಾಡ್ಬಿಡಿ."

" ಅದ್ಯಾಕ್ಕಿಗ್ರಿ ಆಗುತ್ತೆ ? ಇಷ್ಟೆಲ್ಲಾ ಮಾಡ್ಕೊಟ್ಟದೀರಿ. ನಿಮಗೂ ಮೂರು ನಾಮಾನೊ ? ಇಷ್ಟೇನೊ ಗೌಡನ ದೊಡ್ಡಸ್ತಿಕೆ ? ಅಥವಾ ಆ ಅಬ್ದುಲ್ನಲ್ಲಿ ಇರೋದೆಲ್ಲಾ ಅವನೇ ಎತ್ಹಾಕಿದ್ನೊ ?"

" ಶಾಮೇಗೌಡ ಅಥರ ಮನುಷ್ಯ ಅಲ್ಲ, ಸಾರ್."

" ಹುಂ. ಪ್ರಪಂಚದಲ್ಲಿರೋರೆಲ್ಲಾ ದೇವತಾ ಮನುಷ್ಯರೇ. ನಿಮಗೋಸ್ಕರ ಮಾಡ್ತಿದೀನಿ. ಮುಂದಿನ ಸಲ ಮಾತ್ರ ನಿಮ್ಮ ಹಳ್ಳಿಯಿಂದ ಜೋರಾಗಿರೋ ಕೇಸ್ ತಗೊಂಡ್ಬನ್ನಿ."

" ಆಗಲಿ, ಸಾರ್."

ಈಗ ಇಲ್ಲಿ, ಬಿದ್ದರೊಂದು ಕಾಯಿ ಹೋದರೊಂದು ಕಲ್ಲು ಎಂದು ಗೋವಿಂದ ಎಸೆದಿದ್ದ. ಅದೃಷ್ಟವಂತ. ಇಪ್ಪತ್ತೈದು ರೂಪಾಯಿ ಬೆಲೆಯ ಕಾಯಿ ಬಿದ್ದಿತ್ತು.

ಗೌಡರು ಹೊರಕ್ಕೆ ಬಂದರು. ಐದೈದು ರೂಪಾಯಿನ ಐದು ನೋಟುಗಳನ್ನು ಎರಡು ಸಲ ಎಣಿಸಿದರು. ಗೌಡರು ಕುಳಿತುಕೊಳ್ಳುವ ಲಕ್ಷಣ ಕಾಣಿಸದಿದ್ದುದರಿಂದ, ಗೋವಿಂದ ಏಳಬೇಕಾಗಿ ಬಂತು.

" ಇಕಾ ಗೋವಿಂದಪ್ಪ. ಆ ಲಾಯರಿಗೆ ಕೊಟ್ಬಿಡು," ಎಂದರು ಗೌಡರು, ಕೈ ಮುಂದಕ್ಕೆ ಚಾಚಿ.

" ನಗರಕ್ಕೆ ನಾನು ಹೋಗೋದು ಇನ್ನೊಂದು ವಾರ ಆಗುತ್ತೋ ಏನೋ. ಹೋಗುವಾಗ ಕೊಟ್ಟೀರಂತೆ."

" ತಕೋ. ನಿನ್ನ ಮ್ಯಾಕೆ ಅಷ್ಟೂ ಇಸ್ವಾಸ ಇಲ್ವಾ ?"

ಗೋವಿಂದ ನೋಟುಗಳನ್ನು ಪಡೆದು ಜಾಕಿಟಿನ ಒಳಜೇಬಿನಲ್ಲಿರಿಸಿದ.

" ಅಯ್ನೋರು ಮನೆಯಾಗವರಾ ?" ಎಂದು ಗೌಡರು ಕೇಳಿದರು.

" ಇದಾರೆ."

" ದೊಡ್ಡಮ್ಮ ಚೆಂದಾಕಿದಾರಾ ?"

" ಹ್ಞ."

" ಆ ಓಟ್ಲಿನೋರ್ದೇನು ಸಮಾಚಾರ ? ಯಾವಾಗ್ಬರ್ತಾರಂತೆ ?"

" ಇನ್ನೇನು ಬೇಗ್ನೆ ಬಂದ್ಬಿಡ್ತಾರೆ."

" ಬರ್ಲಿ, ಪಾಪ."

" ಹಾಗಾದರೆ ನನಗೆ ಅಪ್ಪಣೆ ಕೊಡ್ತೀರಾ ?"

" ಒಳ್ಳೇ ನಾಟಕ್ದೋರು ಆಡ್ದಂಗೆ ಮಾಡ್ತೀಯಲ್ಲ ಗೋವಿಂದಪ್ಪ. ಓಗ್ಬಾ."

ಗೋವಿಂದ ಹಪ್ಪ ಎಂದು ನಕ್ಕ. ವಂದಿಸುವುದು ಸುಲಭ. ಕೈಗಳು ಸಿದ್ಧವಾಗಿದ್ದುವು. ಆದರೆ ಅಂಥ ವಂದನೆ ಇಲ್ಲಿ ತೀರಾ ಔಪಚಾರಿಕವೆನಿಸುವುದಲ್ಲ ?

ಅವನನ್ನು ಬೀಳ್ಕೊಡಲು ಬರುವವರಂತೆ ಗೌಡರು ಎರಡು ಹೆಜ್ಜೆ ಮುಂದಿರಿಸಿದರು.

"ನಾನಿನ್ನು ಬರ್‍ತೀನಿ," ಎಂದು ನುಡಿದು, ಗೋವಿಂದ ಅಲ್ಲಿಂದ ಹೊರಟ. ಗೌಡರು ಅಲ್ಲೇ ನಿಂತು, ತಿರುಗಿ, ಮನೆಯೊಳಕ್ಕೆ ಹೋದರು.

ದಾರಿಯಲ್ಲಿ ಯೋಚಿಸಿದ ಗೋವಿಂದ:

ಗೌಡರಿಂದ ಇಪ್ಪತ್ತೈದು ರೂಪಾಯಿ ಇಸಕೊಂಡುದು ತಂದೆಗೆ ಗೊತ್ತಾದರೊ? ಗೊತ್ತಾದರೇನಂತೆ? ಲಾಯರಿಗೆ ಕೊಡದೆ ಸ್ವಂತಕ್ಕೆ ಅದನ್ನು ಇಟ್ಟುಕೊಂಡೆನೆಂಬುದು ಮಾತ್ರ ಅವರಿಗೆ ತಿಳಿಯದಿದ್ದರಾಯಿತು. ನಗರದ ಲಾಯರೆಲ್ಲಿ, ಕಣಿವೇಹಳ್ಳಿಯ ಶ್ರೀನಿವಾಸಯ್ಯನವರೆಲ್ಲಿ? ಅವರು ಇವರಿಗೆ ಹೇಳಲು ಅವಕಾಶವೇ ಇಲ್ಲವಲ್ಲ? ತನ್ನ ಪರಿಚಿತ ಲಾಯರಿಗೂ ಮೋಹನ ರಾಯರಿಗೂ ಸಂಪರ್ಕ ಸಾಧ್ಯ. ಮೋಹನರಾಯರು ತನಗಿನ್ನು ದೂರದ ಸಂಬಂಧವೆನ್ನುವುದು ಜೋಡಿ ಮದುವೆಯ ದಿನ ತಾನೇ ಆ ಲಾಯರಿಗೆ ಗೊತ್ತಾಗುವುದು? ಗೊತ್ತಾದರೂ ಇಪ್ಪತ್ತೈದು ರೂಪಾಯಿಗಳ ಪ್ರಸ್ತಾಪ ಬಂದೀತೆಂದು ಭಾವಿಸುವುದು, ಗಾಬರಿಯಾಗುವುದು, ಮೂರ್ಖತನ.

ಸಾರ್ವಜನಿಕ ಸೇವೆಗಿಳಿದವರಿಗೆ ಇಷ್ಟು ಸಂಪಾದನೆಯೂ ಇಲ್ಲದಿದ್ದರೆ ಹೇಗೆ? ಜನ ತಾವಾಗಿ ನೀಡಬೇಕು. ಆ ಬುದ್ಧಿ ಅವರಿಗಿಲ್ಲದಿದ್ದರೆ, ಅಂಥ ಸದ್ಬುದ್ಧಿಯನ್ನು ದೇವರು ಅವರಿಗೆ ಕೊಡದಿದ್ದರೆ, ಜನರಿಂದ ದುಡ್ಡನ್ನು ಸಾರ್ವಜನಿಕ ಕಾರ್ಯಕರ್ತರು ಉಪಾಯವಾಗಿ ಕೀಳಬೇಕು.

ಹಾಗೆ ವಿಚಾರದ ಅಲೆಗಳ ಮೇಲೆ ತೇಲುತ್ತ, ಸಾಕಷ್ಟು ಮೀನನ್ನು ಹಿಡಿದು ದಂಡೆಗೆ ಮರಳುವ ಬೆಸ್ತನ ತೃಪ್ತಿಯಿಂದ ಗೋವಿಂದ ಮನೆಯತ್ತ ಸಾಗಿದ.

'ಈಗಿನ ಕಾಲದಲ್ಲಿ ಕಾಸಿಲ್ದೋನು ಕಸಕ್ಕೆ ಸಮ.'

ಅದು ವಿಷ್ಣುಮೂರ್ತಿ ಉವಾಚ. ಅವರು ಅದನ್ನು ಆಡಿದ್ದು ಆ ಮಧ್ಯಾಹ್ನ ಊಟಕ್ಕೆ ಕುಳಿತಾಗ. ಯಾರದೋ ಮಾತು ಬಂದಾಗ ಆ ತಮ್ಮ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದರು. 'ಕಾಸಿಲ್ದೋನು ಕಸಕ್ಕೆ ಸಮ' ಗಾದೆ ಮಾತಾಗಿ, ಚಿರಕಾಲ ಉಳಿಯುವ ಯೋಗ್ಯತೆ ಇರಲಿಲ್ಲವೆ ಅದಕ್ಕೆ?

ಊಟವಾದೊಡನೆ ಗೋವಿಂದನ ಅತ್ತೆಯಾಗುವಾಕೆ ಅಂದಿದ್ದರು:

"ಕಾಮಿ, ಅವರಿಗೆ ತಾಂಬೂಲ ತಗೊಂಡ್ಹೋಗಿ ಕೊಡು."

ಸೋಫಾಗಳಿದ್ದ ಕೊಠಡಿಯಲ್ಲಿ ಗೋವಿಂದ ಕುಳಿತ, 'ವಿಷ್ಣುಮೂರ್ತಿಗಳೂ ಬರುತ್ತಾರೆ; ತಾಂಬೂಲ ಇಬ್ಬರಿಗೆ'—ಎಂದು ಭಾವಿಸುತ್ತ.

—"ನಾನು ಹೋಟ್ಲಲ್ಲಿರ್‍ತೀನಿ, ಗೋವಿಂದರಾವ್. ತಾಂಬೂಲ ಹಾಕ್ಕೊಂಡು ಬನ್ನಿ," ಎಂದು ಹೇಳಿ ವಿಷ್ಣುಮೂರ್ತಿ ಹೊರಟೇಬಿಡಬೇಕೆ?

ಕಾಮಾಕ್ಷಿ ಬರಲಿಲ್ಲ. ಗೋವಿಂದ ಎದ್ದು ಅತ್ತ ನಡೆದ. ಒಂದು ಯೋಚನೆಯಿಂದ ಅವನ ಎದೆಗುಂಡಿಗೆಯ ಬಡಿತ ತೀವ್ರವಾಯಿತು.

ಹೊರಗೆ ಕಾಲುಗಳ ಮೃದುಸಪ್ಪಳ. ಗೋವಿಂದ ಬಾಗಿಲಮರೆಯಲ್ಲಿ ನಿಂತ.

ಕಾಮಾಕ್ಷಿ ಬಂದಳು. ತಟ್ಟೆಯನ್ನು ಟೀಪಾಯ್‌ಯ ಮೇಲಿಟ್ಟಳು.

'ನಾನಿಲ್ಲ ಎಂದು ಅವಳಿಗೆ ನಿರಾಶೆಯಾಗಿರಬೇಕು.'

ಅವಳು ತಿರುಗಿದಂತೆ, ಸರಕ್ಕನೆ ತಾನು ಬಾಗಿಲು ಮುಂದೆ ಮಾಡಿದ. ಗಾಬರಿಯಾದಳು.

ಓಡಿ ಹೋಗಲೆಂದು ಬಾಗಿಲ ಕಡೆಗೇ ಬಂದಳು. ಹಿಡಿದುಕೊಂಡು ತೋಳುಗಳಿಂದ ಅವಳನ್ನು ಬಳಸಿದ. ಆ ಮೃದು ಎದೆಯನ್ನು ತನ್ನೆದೆಗೆ ಒತ್ತಿಕೊಂಡಾಗ ರೋಮಾಂಚವಾಯಿತಲ್ಲ! ಆ ತುಟಿಗಳಿಗೆ ಅಧಿಕಾರದ ಮುದ್ರೆಯೊತ್ತುವ ಆಸೆ ತನಗಿದ್ದದ್ದು. ಅದನ್ನು ಈಡೇರಿಸಿಯೇ ಬಿಡುತ್ತಿದ್ದ. ಆದರೆ ಬಾಗಿಲ ಹೊರಗೆ ಕಿಲಕಿಲ ನಕ್ಕ ಸದ್ದು. ಅಗಣಿ ಹಾಕಿಲ್ಲ. ಕಾಮಾಕ್ಷಿಯ ತಂಗಿಯರು ಬಾಗಿಲು ನೂಕಿ ಬಂದೇ ಬಿಡಬಹುದು. ನಿರುಪಾಯನಾಗಿ ಅವಳನ್ನು ಬಿಟ್ಟು ಕೊಟ್ಟ. ತಪ್ಪಿಸಿಕೊಂಡು ಹೊರಟೇ ಹೋದಳು. ಚೀರಲೆಂದು ಬಾಯಿ ತೆರೆದಿದ್ದಳು. ಆದರೆ ಗಂಟಲು ಸಹಕರಿಸಿರಲಿಲ್ಲ. ಸುಮಾರು ಒಂದು ವರ್ಷಕ್ಕೂ ಹೆಚ್ಚಿನ ಅವಧಿಯ ಕುಡಿನೋಟಗಳ ವಿನಿಮಯ. ತಾನು ಮುತ್ತು ಕೊಟ್ಟಿದ್ದರೆ ಖಂಡಿತ ಅವಳು ಇಷ್ಟಪಡುತ್ತಿದ್ದಳು. ಪ್ರತಿಯಾಗಿ ಅವಳೂ ಕೊಡುತ್ತಿದ್ದಳು. ತಂಗಿಯರು ಬಂದರಲ್ಲ ಎಂದು ಅವಳು ಹೋಗಬೇಕಾಯಿತು.

ಸೋಫಾದ ಮೇಲೆ ಕುಳಿತು ಸುಧಾರಿಸಿಕೊಳ್ಳಲು ತನಗೆ ಎರಡು ಮೂರು ನಿಮಿಷ ಹಿಡಿಯಿತು.

ಕೊಠಡಿಯ ಹೊರಗಿಂದ ಕಾಮಾಕ್ಷಿಯ ಚಿಕ್ಕ ತಂಗಿ ನಾಗಮಣಿಯ ಕೀಟಲೆ ಧ್ವನಿ:

"ತಾಂಬೂಲ ಮಡಚ್ಕೊಡೋಕೆ ಅಕ್ಕನನ್ನ ಕಳಿಸ್ಕೊಡ್ಲೆ ?"

ತಾನು ನಿರುತ್ತರ.

"ಹಾಕ್ಕೊಳ್ಳೋಕೆ ಸಂಕೋಚವಾಗುತ್ತೇನೋ. ಬಾಗಿಲು ಎಳ್ಕೊಳ್ಲೆ ?"

—ಕನಕಲತೆಯ ಸ್ವರ.

ಅದಕ್ಕೂ ತಾನು ಮೌನ.

"ಊರಿಗೆ ಇವತ್ತೇ ಹೋಗ್ತೀರಾ ?"

—ನಾಗವೇಣಿ.

ಒಳಗಿನಿಂದ ಅವರ ತಾಯಿಯ ಧ್ವನಿ ಕೇಳಿಸಿತು :

"ಕಾಮಾಕ್ಷೀ, ಕನಕಾ, ನಾಗೂ, ಬನ್ರೇ ಇಲ್ಲೀ..."

ಹಿಹಿಹಿ ನಗು ದೂರಕ್ಕೆ ಸರಿಯಿತು.

ಮತ್ತೆ ಕೆಲ ನಿಮಿಷ ಗೋವಿಂದ ಕುಳಿತಲ್ಲಿಂದ ಮಿಸುಕಿರಲಿಲ್ಲ. ಕಾಮಾಕ್ಷಿ ಪುನಃ ಬರಬಹುದೆಂಬ ಆಸೆ.

ಬಂದವನು ಹೋಟೆಲಿನ ಒಬ್ಬ ಹುಡುಗ.

"ಸಾಹುಕಾರ್ರು ಹೇಳಿದ್ರು. ಟೈಮಾಯ್ತು, ಬರಬೇಕಂತೆ."

ತಾಂಬೂಲದ ತಟ್ಟೆಯನ್ನು ಮುಟ್ಟದೆಯೇ ಗೋವಿಂದ ಆ ಹುಡುಗನನ್ನು ಹಿಂಬಾಲಿಸಿದ.

...ಅದನ್ನೆಲ್ಲ ಸ್ಮರಿಸಿಕೊಂಡ ಗೋವಿಂದನಿಗೆ, ಮಾಧುರ್ಯವನ್ನು ಸವಿದ ಅನುಭವವಾಯಿತು ಈಗ.

ಅವನ ಎದೆಯಲ್ಲೇನೋ ನೋವು. ಕಾಮಾಕ್ಷಿಯನ್ನು ಬಲವಾಗಿ ತನ್ನೆದೆಗೆ ಒತ್ತಿಕೊಳ್ಳುವ ಆಸೆ... ಕೈಗಳನ್ನು ಎದೆಗಡ್ಡವಾಗಿ ಕಟ್ಟಿಕೊಂಡು ಗೋವಿಂದ ನಡೆದ. ಒಳಜೇಬಿನ ನೋಟುಗಳು ಕೈಗಳ ಒತ್ತಡಕ್ಕೆ ಸಿಲುಕಿದುದರ ಅರಿವೂ ಅವನಿಗಿರಲಿಲ್ಲ...

... ರಂಗಣ್ಣ ದಿಬ್ಬದ ಮೇಲಿಂದ ಇಳಿದು ಬಂದವನು ನದೀ ದಂಡೆಯ ತನಕವೂ ಹೋಗಿ

ಮನೆಗೆ ಹಿಂದಿರುಗಿದಾಗ, ಅತ್ತೆಮ್ಮ ದೀಪ ಹಚ್ಚುತ್ತಿದ್ದರು.

ರಂಗಣ್ಣನ ಕೊಠಡಿಯಲ್ಲಿ ಬೆಳಗ್ಗೆಯೇ ಅಣಿಗೊಳಿಸಿದ್ದ ಟ್ರಂಕು ಪ್ರಯಾಣ ಸಿದ್ಧತೆಯನ್ನು ಸಾರುತಿತ್ತು.

ನಗರಕ್ಕೆ ಹೊರಡುವ ತನ್ನ ಅಪೇಕ್ಷೆಯನ್ನು ರಂಗಣ್ಣ ವ್ಯಕ್ತಪಡಿಸಿದ್ದೇ ತಡ. ಶಾಮೇ ಗೌಡರು ಒಪ್ಪಿಗೆ ಕೊಟ್ಟಿದ್ದರು.

ಅದರಲ್ಲೂ ಹೊಸಳ್ಳಿಗೆ ಹೋಗಿ ಬಂದ ಮೇಲೆ ಅವರ ಮನಸ್ಸು ಪ್ರಸನ್ನವಾಗಿತ್ತು.

ಅವರು ಕೇಳಿದ್ದರು :

"ಯಾವಾಗ ಓಗ್ತೀಯಾ ?"

"ನಾಳೆ."

"ಸರಿ. ಚಂದ್ರಣ್ಣನೂ ಇನ್ನೊಂದು ವಾರದೊಳಗೆ ನಗರಕ್ಕೆ ಓಗ್ತವ್ನಂತೆ."

"ನೀವು ಹೋದದ್ದು ಏನಾಯ್ತು ಅಪ್ಪ ?"

"ಒಪ್ಪಿದ್ರು, ರಂಗ."

"ಒಪ್ಪಿದ್ರೆ ? ಒಳ್ಳೇದಾಯ್ತು."

"ನವರಾತ್ರಿಗ್ಮುಂಚೆ ಒಂದು ಲಗ್ನ ಐತೇಂತ ಅವರ ಜೋಯಿಸ್ರು ಯೋಳವ್ರೆ. ಆ ಟೇಮಿಗೆ ನಿನಗೂ ರಜಾ ಸಿಗಬೌದು. ಅಲ್ಲವಾ ?"

"ಹೂಂ. ದಸರಾ ರಜಾ ಹ್ಯಾಗೂ ಇರುತ್ತಲ್ಲ."

"ಅದಕ್ಕೂ ಮುಂಚೇನೇ ಆದ್ರೆ ವಾಸೀಂತಿದ್ವೆ. ಮಳೆ ಶುರು ಆದ್ಮೇಕೆ ಒಲದ ಕೆಲಸ; ಅದು ಮುಗೀದೇ ಎಂಗಾಯ್ತದೆ ಅಂದ್ರು. ನಿಜ ಅನಿಸ್ತು."

"ಚಂದ್ರಣ್ಣ ಒಪ್ಗೆ ಕೊಟ್ನಾ ?"

"ಆಗೋದಾದ್ರೆ ಈಗ್ಲೇ ಆಗ್ಬೇಕು; ಇಲ್ದೇ ಓದ್ರೆ ಬೇರೆ ಕಡೆ ಗಂಡು ನೋಡ್ತೀನಿ–ಅಂದೆ."

"ಹುಂ."

"ಚಂದ್ರಣ್ಣ ನಗರದಾಗೆ ನಿನಗೆ ಸಿಗ್ತಾನೆ, ಅಲ್ಲವಾ ?"

"ಹೂಂ. ಲಾ ಕಾಲೇಜ್ ಹಾಸ್ಟೆಲ್ನಾಗಿರ್ತಾನೆ."

"ಅಲ್ಲಿಗೆ ಓಗೋದು ಬರೋದು ಮಾಡ್ತಾ ಇರು."

"ಹೂಂ."

—ಆ ಸಂಭಾಷಣೆಯಿಂದ ರಂಗಣ್ಣನಿಗೆಷ್ಟೋ ಸಮಾಧಾನವಾಗಿತ್ತು. ಚಿಕ್ಕವನು ಎಂದು ಉಪೇಕ್ಷೆ ಮಾಡದೆ ಅಷ್ಟೊಂದು ಆತ್ಮೀಯವಾಗಿ ತಂದೆ ಮಾತನಾಡಿದರಲ್ಲ...

ಪದ್ಮನ ಅನುಚಿತ ವರ್ತನೆ ಅಲ್ಲದೆ ಹೋಗಿದ್ದರೆ ತನ್ನ ತಂಗಿಯ ಮದುವೆ ಇನ್ನೂ ಮುಂದಕ್ಕೆ ಹೋಗುತ್ತಿತ್ತೇನೋ...

ಗುಡಿಯಿಂದ ತಾನು ವಾಪಸು ಹೊರಟಾಗ ಆ ಕಡೆಗೆ ಪದ್ಮ ಬಂದ. ತನ್ನನ್ನು ನೋಡಿಯೂ ನೋಡದಂತೆ ಮಾಡಿದ ಆ ದೈವಭಕ್ತ. ಮಾತನ್ನಾದರೂ ಯಾವ ಮುಖದಿಂದ ಆಡಬಲ್ಲ ಆತ ತನ್ನೊಡನೆ ? ತಾನು ಅಲ್ಲಿ ನಿಲ್ಲದೆ ನೇರವಾಗಿ ಇಳಿದು ಬಂದುದು ಒಳ್ಳೆಯದೇ ಆಯಿತು...

...ಮನೆಗೆ ಬಂದ ರಂಗಣ್ಣ, ಟ್ರಂಕಿಗೆ ತುಂಬಿಸಿ ಉಳಿದುದನ್ನೆಲ್ಲ ಸರಿಯಾಗಿ ಜೋಡಿಸಿ

ಇಟ್ಟ.

ಶಾಮೇಗೌಡರು ಉಗ್ರಾಣದಲ್ಲಿದ್ದರು. ಊಟಕ್ಕೆ ಕುಳಿತಾಗ ಮಗನಿಗೆ ಅವರೆಂದರು:

"ದುಡ್ನ ಎಷ್ಟು ಬೇಕೂಂತ ಲೆಕ್ಕ ಹಾಕಿದೀಯಾ ?"

"ಹುಂ."

"ನಿನ್ನ ಫೀಸು, ಮೇಲ್ಖರ್ಚಿಂದು ತಗೊಂಡ್ಹೋಗು. ಇನ್ನು ಒಂದು ತಿಂಗಳು ಬಿಟ್ಕೊಂಡು ನಗರಕ್ಕೆ ಒಮ್ಮೆ ನಾನು ಬರಬೈದು."

"ಹುಂ."

"ನಿಗಾ ಇಟ್ಟು ಓದು."

"ಹುಂ."

ನಾಗಮ್ಮ ಒಂದು ತುತ್ತು ಹೆಚ್ಚು ಬಡಿಸಿದರು. ಅದು ಜಾಸ್ತಿಯಾಯಿತಾದರೂ ಅತ್ತೆಯ ಮನಸ್ಸು ನೋಯಿಸಬಾರದೆಂದು ರಂಗಣ್ಣ ಉಂಡು ಎದ್ದ...

...ಬೆಳಗ್ಗೆ ಕರಿಯ ಚಿಕ್ಕಗೌಡರ ಟ್ರಂಕನ್ನು ಹೊರಲು ಬಂದ.

ಹೊಸದಾಗಿ ಕೊಂಡು ತಂದಿದ್ದ ಡಾಕ್ಟರರ ಬ್ಯಾಗಿನತ್ತ ಬೊಟ್ಟು ಮಾಡಿ,

"ಅದನ್ನ ತಕೊಂಡೋಗೋದಿಲ್ವ ?" ಎಂದು ಶಾಮೇಗೌಡರು ಕೇಳಿದರು.

"ಇಲ್ಲೇ ಇರ್ಲಿ. ಊರಿಗೆ ಬಂದಾಗ ಉಪಯೋಗಿಸ್ತೀನಿ," ಎಂದ ರಂಗಣ್ಣ.

ಆತ ಒಳಹೋಗಿ ಅತ್ತೆಮ್ಮನಿಗೆ ಹೇಳಿ, ತಂಗಿಯೊಡನೆ, "ಓಗ್ಬರ್ತೀನಿ, ಸುಬ್ಬಿ," ಎಂದ.

"ಊಂ," ಎಂದಳಾಕೆ.

ಅಂಗಳ ದಾಟಿ ನಾಲ್ಕು ಹೆಜ್ಜೆ ಒಂದು ಮಗನನ್ನು ಶಾಮೇಗೌಡರು ಕಳುಹಿಕೊಟ್ಟರು.

ಆ ದಾರಿಯಲ್ಲಿ ಆ ದಿನ ಹತ್ತು ನಿಮಿಷಗಳ ಅಂತರದಲ್ಲಿ ನಡೆದು ಹೋದ ಜೋಡಿಗಳು ಎರಡು :

ಪದ್ಮನಾಭ ಹಾಗೂ ಆಳು ಬೀರ; ರಂಗಣ್ಣ ಮತ್ತು ಕರಿಯ.

ಟಾರ್ ರಸ್ತೆಯಲ್ಲಿ ಚಿಕ್ಕ ಧಣಿಗಳು ಒಬ್ಬರೊಡನೊಬ್ಬರು ಮಾತನಾಡಲಿಲ್ಲ. ಅವರನ್ನು ಅನುಸರಿಸಿ ಸೇವಕರೂ ಪರಸ್ಪರ ಮಾತುಕತೆ ಆಡಲಿಲ್ಲ. ಆಳುಗಳು ಬಸ್ ಹೊರಡುವವರೆಗೂ ಕಣ್ನೋಟಗಳ ವಿನಿಮಯದಿಂದಲೇ ತೃಪ್ತರಾಗಬೇಕಾಯಿತು.

ಬಸ್ಸಿನೊಳಕ್ಕೆ ಪ್ರವೇಶ ದೊರೆಯಿತಾದರೂ, ಸೀಟು ಸಿಕ್ಕಿದುದು ಮೊದಲು ಒಳಹೊಕ್ಕ ರಂಗಣ್ಣನಿಗೆ. ಪದ್ಮನಾಭ ಸೀಟುಗಳ ನಡುವಣ ದಾರಿಯಲ್ಲಿ ಮುಂದೆ ಹೋದನಾದರೂ ನಗರದವರೆಗೂ ನಿಂತಿರಬೇಕಾಯಿತು.

ನಗರದಲ್ಲಿ ಬಸ್ಸಿನಿಂದಿಳಿದ ರಂಗಣ್ಣ ಹಾಗೂ ಪದ್ಮನಾಭ, ಒಬ್ಬರ ಮುಖವನ್ನೊಬ್ಬರು ನೋಡದೆ ಬೇರೆ ಬೇರೆ ದಾರಿ ಹಿಡಿದರು.

## ೨೦

ಬೇಸಗೆಯ ದೀಪದಲ್ಲಿ ಎಣ್ಣೆ ತೀರುತ್ತ ಬಂದಿತ್ತು. ಬಿಸಿಲಿನ ಬತ್ತಿ, ಆರುವುದಕ್ಕೆ ಮುನ್ನ

ಅತಿ ಹೆಚ್ಚು ಪ್ರಖರತೆಯಿಂದ ನಾಲ್ಕು ದಿನ ಉರಿಯಿತು.

ಆ ಅವಧಿಯಲ್ಲಿ ಶ್ರೀನಿವಾಸಯ್ಯ ಮತ್ತೊಮ್ಮೆ ನಗರಕ್ಕೆ ಹೋದರು, ಗೋವಿಂದನೊಡನೆ. ಅಲ್ಲಿ ಪದ್ಮನಾಭ ಅವರನ್ನು ಕೂಡಿಕೊಂಡ.

"ಒಂದೆರಡು ದಿನ ನಮ್ಮಲ್ಲಿಯೇ ಇರಬಹುದಲ್ಲ," ಎಂದರು ವಿಷ್ಣುಮೂರ್ತಿ.

"ಅದು ಹ್ಯಾಗಾಗುತ್ತೆ ?" ಎಂದು ಸಂಕೋಚಪಟ್ಟುಕೊಳ್ಳುತ್ತ ಅಂದರು ಶ್ರೀನಿವಾಸಯ್ಯ.

ದೊಡ್ಡಮ್ಮ ಎರಡೆರಡು ಸಲ ಹೇಳಿದ್ದರು :

"ನೀನು ಹುಡುಗರನ್ನ ಕರಕೊಂಡು ಹೋಗ್ತಿರೋದು ಕನ್ಯೆ ನೋಡೋದಕ್ಕೆ. ವಿಷ್ಣುಮೂರ್ತಿಗಳ ಮನೇಲಾಗಲಿ, ಮೋಹನರಾಯರ ಮನೇಲಾಗಲೀ ಉಳಕೋಬಾರ್ದು."

"ಪದ್ಮ, ಇವತ್ತೊಂದು ದಿವಸ ಇಲ್ಲಿರ್‍ತೀವಿ. ನಿನ್ನ ರೂಮ್ನಲ್ಲೇ ಚೀಲ ಇಡ್ತೀವಿ," ಎಂದು ಗೋವಿಂದ ತಮ್ಮನಿಗೆ ತಿಳಿಸಿ, ಬದಲಿ ಏರ್ಪಾಟನ್ನು ಮಾಡಿದ.

ವಿಷ್ಣುಮೂರ್ತಿಯವರ ಮನೆಗೆ ಗೋವಿಂದ ಹೊಸಬನಲ್ಲವಾದರೂ ಪದ್ಮನಾಭ ಅಲ್ಲಿಗೆ ಕಾಲಿಟ್ಟುದು ಅದೇ ಮೊದಲು.

ಮೂವರು ಹೋಗಬಾರದೆಂದು ಪದ್ಮನಾಭನ ಒಬ್ಬ ಗೆಳೆಯನೂ ಜತೆಯಾದ. ಕಾಮಾಕ್ಷಿಯನ್ನು ನೋಡಲು ಬಂದರೆಂದು ಅಲ್ಲಿ ಸಡಗರವೋ ಸಡಗರ.

ನಾಗವೇಣಿ ತಾಯಿಯನ್ನು ಕೀಟಲೆ ಮಾಡಿದಳು:

"ಇದೇನಮ್ಮ ನೋಡೋದು, ಅಂದ್ರೆ ? ಇಷ್ಟು ದಿವಸ ಗೋವಿಂದರಾಯರು ನೋಡೋ ಇಲ್ವೆ ಅಕ್ಕನ್ನ ?"

ಪದ್ಮನಾಭನನ್ನು ಮಾತ್ರ ಮೂವರು ಹುಡುಗಿಯರೂ ಕುತೂಹಲದಿಂದ ನೋಡಿದರು.

ಗಣೇಶ ಭವನದಿಂದ ಬಿಸಿ ತಿಂಡಿಗಳು. ಸತ್ಕಾರ ಸಮರ್ಪಕವಾಗಿಯೇ ನಡೆಯಿತು.

ತಂದೆ ಮಕ್ಕಳಿಗೆ ಎದುರಾಗಿ ಹಾಸಿದ್ದ ರತ್ನಗಂಬಳಿಯ ಮೇಲೆ, ಅಲಂಕೃತೆಯಾದ ಕಾಮಾಕ್ಷಿ ಬಂದು ಕುಳಿತಳು. ಬಲ ಮಗ್ಗುಲಲ್ಲಿ ಕಲಕಲತೆಯೂ ಎಡ ಮಗ್ಗುಲಲ್ಲಿ ನಾಗವೇಣಿಯೂ ಅಕ್ಕನಿಗೆ ಬೆಂಬಲಿಗರಾದರು.

ಆದರೆ ಕಾಮಾಕ್ಷಿಗೆ ಅಂತಹ ಬೆಂಬಲದ ಅಗತ್ಯ ಇದ್ದರಲ್ಲವೆ ? ಗೋವಿಂದನೊಬ್ಬನೇ ತನ್ನನ್ನು ನೋಡುತ್ತಿದ್ದಾನೆ ಎಂಬುದನ್ನು ಖಚಿತಪಡಿಸಿಕೊಂಡು ಒಮ್ಮೆ ಆಕೆ ಕಣ್ಣು ಮಿಟುಕಿಸಿದಳು ಕೂಡಾ. ಅದು ಪದ್ಮನಾಭನ ಅಲೆಯುತ್ತಿದ್ದ ಕಣ್ಣಿಗೆ ಬಿತ್ತು. ಮರ್ಯಾದೆಯ ಕಟ್ಟುಪಾಡುಗಳಿಗೆ ಒಳಗಾಗಿಯೇ ಅವನ ದೃಷ್ಟಿ ವಿಹಾರ ಕೈಕೊಂಡಿದ್ದರೂ, ಕನಕಲತೆಯ ಸಮೀಪಕ್ಕೆ ಸುಳಿದಾಗ ಅದು ಮೈಮರೆಯಿತು. ಇವಳೀಗ ಹೆಣ್ಣು – ಎನಿಸಿತು ಆತನಿಗೆ. ಎಷ್ಟು ಒಳ್ಳೆಯ ಹಾಸಿಗೆ ! ತನ್ನ ಮೂರರಷ್ಟಿರಬಹುದೇನೋ ಇವಳ ಸುತ್ತಳತೆ...

"ಇವರಿಗೆ ಸಂಗೀತದ ಮೇಸ್ಟ್ರನ್ನಿಟ್ಟು ಪಾಠ ಹೇಳಿಸಿದೇನೆ," ಎಂದರು ವಿಷ್ಣುಮೂರ್ತಿ ಹೆಮ್ಮೆಯಿಂದ.

ಮಗಳ ಕಡೆ ನೋಡಿ, "ಒಂದೆರಡು ದೇವರನಾಮ ಹೇಳಮ್ಮ, ಕಾಮಾಕ್ಷಿ," ಎಂದೂ ನುಡಿದರು.

ಕಾಮಾಕ್ಷಿಯ ಮುಖ ಕೆಂಪಗಾಯಿತು. ತಂದೆಯನ್ನು ಅವಳು ದುರದುರನೆ ದಿಟ್ಟಿಸಿದಳು.

ತನ್ನ ತಂದೆ ಸುಮ್ಮನಿದ್ದುದನ್ನು ಕಂಡು ಗಾಬರಿಯಾದ ಗೋವಿಂದ, "ಬೇಡಿ, ಬೇಡಿ,"

ಎಂದ.

ಶ್ರೀನಿವಾಸಯ್ಯ ಎಚ್ಚತ್ತು, "ಹೌದು, ಯಾಕೆ ಅದೆಲ್ಲ ?" ಎಂದರು.

"ನಿಮ್ಮಿಷ್ಟ, ನಿಮ್ಮಿಷ್ಟ," ಎಂದು ನುಡಿದರು ವಿಷ್ಣುಮೂರ್ತಿ.

"ಅಣ್ಣ, ದೇವರನಾಮ ನಾನು ಹೇಳ್ಲಾ ?" ಎನ್ನಬೇಕೆ ನಾಗವೇಣಿ ?

ಎಲ್ಲರೂ ನಕ್ಕರು.

"ನಿನ್ನನ್ನು ನೋಡೋಕೆ ಬರ್‍ತಾರಲ್ಲ. ಆಗ ಹಾಡುವಿಯಂತೆ ಮಗೂ," ಎಂದರು ಶ್ರೀನಿವಾಸಯ್ಯ.

ನಾಗವೇಣಿಗೆ ಅವಮಾನವಾಯಿತು. ಅವಳು ಥಟ್ಟನೆದ್ದು ದಡದಡನೆ ಹೊರಟು ಹೋದಳು.

ಗಂಡಸರೆಲ್ಲ ಮತ್ತೊಮ್ಮೆ ನಕ್ಕರು.

"ನಿಶ್ಚಿತಾರ್ಥಕ್ಕೆ ನಮ್ಮ ಹಳ್ಳಿಗೆ ಮೋಹನರಾಯರ ಜತೆ ತಾವು ಯಾವಾಗ ಬರ್‍ತೀರೋ ತಿಳಿಸ್ಬೇಕು," ಎಂದರು ಶ್ರೀನಿವಾಸಯ್ಯ.

ವಿಷ್ಣುಮೂರ್ತಿ ಉತ್ತರಿಸಿದರು :

"ಈಗ ಬೇಕಾದರೆ ಈಗ. ನಿಮ್ಮ ಜತ್ಲೇಲೇ ಬರೋದಕ್ಕೂ ಸಿದ್ಧ !"

"ಹಷ್ಟ! ಮೋಹನರಾಯರಲ್ಲಿಗೆ ಹೋಗಿ ಆ ಕೆಲಸವನ್ನೂ ಇಷ್ಟು ಮುಗಿಸೋಣ. ಆಮೇಲೆ ಪಂಚಾಂಗ ನೋಡಿ ಒಂದು ಪ್ರಶಸ್ತ ದಿನ ಗೊತ್ತು ಮಾಡಿದರಾಯ್ತು."

"ನಿಮ್ಮಿಷ್ಟ. ನಿಮ್ಮಿಷ್ಟ—ಅಂದೆ. ಟ್ಯಾಕ್ಸಿ ತರಿಸ್ಲೆ ?"

"ನೀವೂ ಬನ್ನಿ."

"ಐದು ಜನ ಆಗ್ತೀವಿ. ಸರಿ. ನಮ್ಮ ಸ್ನೇಹಿತರದೊಂದು ಅಂಬಾಸಡರ್ ಕಾರಿದೆ. ಫೋನ್ ಮಾಡಿ ತರಿಸ್ತೀನಿ."

...ನಾಲ್ಕು ಗಂಟೆಗೆ ಬರುತ್ತೇವೆ ಎಂದು ತಿಳಿಸಿದ್ದರೂ ಶ್ರೀನಿವಾಸಯ್ಯ ಮತ್ತು ಬಳಗದವರು ಅರ್ಧ ಘಂಟೆ ತಡವಾಗಿ ಮೋಹನರಾಯರ ಮನೆಯನ್ನು ತಲಪಿದರು.

ಕಾರಿನಿಂದ ಇಳಿದೊಡನೆಯೇ ಮೋಹನರಾಯರೊಡನೆ ವಿಷ್ಣುಮೂರ್ತಿ ಅಂದರು:

"ಇವರು ಲೇಟಾದ್ದಕ್ಕೆ ನಾನು ಕಾರಣ. ಶಿಕ್ಷೆ ಏನಿದ್ದರೂ ನನಗೆ ವಿಧಿಸ್ಬೇಕು."

"ಏನೂ ಪರವಾಯಿಲ್ಲ," ಎಂದರು ಮೋಹನರಾಯರು, ಅತಿಥಿಗಳನ್ನು ಇಲ್ಲಿಗೆ ತಲಪಿಸಿ ಈತ ಪ್ರಾಯಶಃ ಹೊರಡಬಹುದು ಎಂದು ಯೋಚಿಸುತ್ತ.

"ಇನ್ನೊಂದು ವಿಷಯ. ಆಮಂತ್ರಣವಿಲ್ಲದೆಯೇ ಇವರ ಜತೆ ಬಂದಿದೇನೆ. ಇದು ನನ್ನ ಎರಡನೇ ತಪ್ಪು."

"ಏನೂ ಪರವಾಯಿಲ್ಲ," ಎಂದರು ಮೋಹನರಾಯರು ಇದಕ್ಕೂ ಮಾಡಿರುವ ತಿಂಡಿಯನ್ನೇ ಹಂಚಿದರಾಯಿತು ಎಂದು ಭಾವಿಸುತ್ತ.

ಪದ್ಮನಾಭ ಯಾರು ಎಂಬುದನ್ನು ಕೇಳಿ ತಿಳಿದರು ಮೋಹನರಾಯರು. ಸದ್ಯಃ ಪುಢಾರಿ ಗೋವಿಂದನಿಗೂ ಇವನಿಗೂ ಹೋಲಿಕೆ ಇಲ್ಲ—ಎಂದು ಸಮಾಧಾನದ ನಿಟ್ಟುಸಿರು ಬಿಟ್ಟರು. ಒಳಗಡೆ ಹೋಗಿ, ಇಣಿಕಿ ನೋಡುತ್ತ ನಿಂತಿದ್ದ ಹೆಂಡತಿಗೂ ಮಕ್ಕಳಿಗೂ "ವುಲ್ಲನ್ ಪ್ಯಾಂಟು, ಬುಶ್ ಶರ್ಟು ಹಾಕ್ಕೊಂಡಿದಾನಲ್ಲ ಕೆಂಪಗಿನ ಹುಡುಗ, ಅವನೇ," ಎಂದರು.

ಅಡುಗೆಯವನು ಟ್ರೇಯಲ್ಲಿ ಉಪಾಹಾರದ ತಟ್ಟೆಗಳನ್ನು ತಂದ.

ಹೇಳಲೋ ಬೇಡವೋ ಎಂದು ಎರಡು ಮೂರು ಸಲ ಯೋಚಿಸಿದ ಬಳಿಕ ಧೈರ್ಯ ತಂದುಕೊಂಡು, "ವಿಷ್ಣುಮೂರ್ತಿಗಳೇ, ನೀವು ಎರಡು ತಪ್ಪುಗಳು ನಿಮ್ಮಿಂದ ಆಗಿವೆ ಅಂದಿರಿ. ಇನ್ನೊಂದನ್ನೂ ಹೇಳಬೇಕಾಗಿತ್ತು!" ಎಂದರು ಶ್ರೀನಿವಾಸಯ್ಯ.

ತಟ್ಟೆಗಳನ್ನು ನೋಡಿದೊಡನೆ ವಿಷ್ಣುಮೂರ್ತಿಯವರಿಗೂ ಅದು ಹೊಳೆದಿತ್ತು.

"ಹೌದಲ್ಲ ! ಶಕ್ತ್ಯಾನುಸಾರ ಭಕ್ತಿ ಅಂತ ಏನೋ ತಿಂಡಿತೀರ್ಥ ಮಾಡಿದ್ರಿ. ರಾಯರಲ್ಲೂ ಈ ಕಾರ್ಯಕ್ರಮ ಇದೆ ಅನ್ನೋದನ್ನ ಮರೀಬಾರದಾಗಿತ್ತು."

ಮೋಹನರಾಯರು ನಸುನಕ್ಕು ಅಂದರು :

"ದೊಡ್ಡದಲ್ಲ ವಿಷ್ಣುಮೂರ್ತಿಗಳೇ. ಇದು ಅಲ್ಪೋಪಹಾರ. ಯಾವ ಲೆಕ್ಕಕ್ಕೆ ? ತಗೊಳ್ಳಿ ಶ್ರೀನಿವಾಸಯ್ಯನವರೇ. ತಗೊಳ್ಳಿ ಪದ್ಮನಾಭರಾವ್. ತಗೊಳ್ಳೀಪ್ಪಾ."

ನೀಡಿದುದನ್ನು ಸ್ವೀಕರಿಸುವುದರ ಹೊರತು ಬೇರೆ ದಾರಿ ಇರಲಿಲ್ಲ.

ಮೋಹನರಾಯರ ಪತ್ನಿ ಮಗಳೊಡನೆ ಬಂದರು. ಆರತಿ ಈಗ ವಿಲಾಸಿನಿಯಲ್ಲ ವಧುಪರೀಕ್ಷೆಯಲ್ಲವೆ ಅದು? ಬಹಳ ಬೆಲೆಯ ರೇಷ್ಮೆ ಸೀರೆಯನ್ನು ಮೈತುಂಬ ಹೊದೆದ. ಕೊಂಡು, ಗಂಭೀರವಾಗಿ ಆ ಲತಾಂಗಿ ಬಂದ ರೀತಿ ಶ್ರೀನಿವಾಸಯ್ಯನವರಿಗೆ ಮೆಚ್ಚುಗೆಯಾಯಿತು. ನಿರಾಶೆಯಾದುದು ಪದ್ಮನಾಭನಿಗೆ. ಅವನೆಂದುಕೊಂಡ. ಒಳ್ಳೆಯ ವಾಕಿಂಗ್‌ಸ್ಟಿಕ್. ಪ್ರಮದೆ-ಸುಬ್ಬಿ-ಕನಕಲತೆಯರಿಗೂ ಈಕೆಗೂ ಧ್ರುವಗಳ ಅಂತರ...

ಆದರೆ ಆ ಕಣ್ಣುಗಳು! ತುಟಿಗಳು!

ಆರತಿ ಕಳ್ಳ ನೋಟದಿಂದ ಅವನನ್ನು ನೋಡುವುದರಲ್ಲಿ ನಿರತಳಾಗಿದ್ದಳು : ವುಲ್ಲನ್ ಪ್ಯಾಂಟ್ ಬುಶ್‌ಶರ್ಟಿನ ಕೆಂಪನೆಯ ಹುಡುಗ...

ಅವರ ನೋಟಗಳು ಸಂಧಿಸಿದಾಗ ಪದ್ಮನಾಭನಿಗೆ ರೋಮಾಂಚವಾಯಿತು. [ಅವಳಿಗೂ ಅಷ್ಟೆ.] ಅವನ ನಿರಾಶೆ ಸಮಾಧಾನಕ್ಕೆ ಎಡೆಮಾಡಿಕೊಟ್ಟಿತು.

"ಆರತೀನ ಏನಾದರೂ ಕೇಳೋದಿದ್ದರೆ ಕೇಳಬಹುದು," ಎಂದರು ಮೋಹನರಾಯರು.

ಲಾಯರ್ ರಾಯರು ಆ ಸನ್ನಿವೇಶದಲ್ಲಿ ವಿಚಾರಣೆಯನ್ನು ಮುನ್ನಡೆಸುವ ನ್ಯಾಯಾಧೀಶರಾಗಿದ್ದರು.

ಆದರೆ ವಕೀಲರಾಗಿ ಪ್ರಶ್ನೆಗಳ ಮಳೆ ಸುರಿಸಲು ಶ್ರೀನಿವಾಸಯ್ಯ ಸಿದ್ಧರಿರಬೇಕಲ್ಲ ?

"ಛೆ ! ಛೆ ! ಕೇಳೋದು ಏನೂ ಇಲ್ಲ," ಎಂದರು.

ಅಷ್ಟರತನಕ ಪ್ರಯಾಸದಿಂದ ತುಟಿಗಳನ್ನು ಬಿಗಿಹಿಡಿದಿದ್ದ ವಿಷ್ಣುಮೂರ್ತಿಯವರಿಗೆ ಮಾತಿನ ಆಕ್ಷಿ ಬಂತು.

"ನಾನೊಂದು ಹೇಳ್ಲಾ ಶ್ರೀನಿವಾಸಯ್ಯನವರೇ. ಈಗಿನ ಕಾಲ್ದಲ್ಲಿ ಹುಡುಗ-ಹುಡುಗಿ ಮದುವೆಗೆ ಮುಂಚೆ ಪರಸ್ಪರ ಮಾತನಾಡೋದು ತಪ್ಪಲ್ಲ. ಬೇಕಿದ್ದರೆ ಪದ್ಮನಾಭರಾಯರೂ ಮೋಹನರಾಯರ ಮಗಳೂ ಒಂದೈದು ನಿಮಿಷ..."

ಶ್ರೀನಿವಾಸಯ್ಯ ಅಂದರು :

"ಛೆ ! ಛೆ ! ಅದರ ಅಗತ್ಯ ಏನು? ... ಅಲ್ಲಾ, ಅದೂ ಸರೀನೇ ಅನ್ನಿ."

ಶೀರ್ಪಿತ್ತರು ಮೋಹನರಾಯರು :

"ಮದುವೆ ನಿಶ್ಚಯವಾದ್ಮೇಲೆ ಹುಡುಗ ಹುಡುಗಿ ಕಲೆತು ಮಾತಾಡೋದು ತಪ್ಪಲ್ಲ. ಇವತ್ತಲ್ದೆ ಹೋದ್ರೆ ಇನ್ನೊಂದು ದಿವಸ. ಪದ್ಮನಾಭರಾವ್ ಹಾಸ್ಟೆಲ್ನಲ್ಲೇ ಇರ್ತಾರಲ್ಲ. ಪುರಸೊತ್ತಾದಾಗ ತಿಂಡಿಗೋ ಊಟಕ್ಕೋ ನಮ್ಮಲ್ಲಿಗೆ ಬಂದರಾಯ್ತು."

"ಸರಿ, ಸರಿ," ಎಂದರು ಶ್ರೀನಿವಾಸಯ್ಯ.

ವಿಷ್ಣುಮೂರ್ತಿ ಅಂದರು :

"ತಲೆಬಾಗಿದೆ; ನನ್ನ ಅಪೀಲಿಲ್ಲ!"

ಆರತಿಯ ತಾಯಿ ಮಗಳನ್ನು ಒಳಕ್ಕೆ ಕರೆದೊಯ್ದರು. ವಧುಪರೀಕ್ಷೆ ಅಲ್ಲಿಗೆ ಮುಗಿದಂತಾಯಿತು.

ಮೋಹನರಾಯರೀಗ ವರಪರೀಕ್ಷೆ ನಡೆಸಿದರು. ಪದ್ಮನಾಭನ ಅಭ್ಯಾಸದ ವಿಷಯಗಳು, ಅವರ ಪ್ರಾಧ್ಯಾಪಕರು, ವಿದ್ಯಾರ್ಥಿನಿಲಯದಲ್ಲಿರುವ ಅನುಕೂಲಗಳು ... ಪದ್ಮನಾಭ ಎಲ್ಲ ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿದ. ಅಲ್ಲಿಗೆ ಅವರೊಡನೆ ಬಂದಿದ್ದ ಪದ್ಮನ ಗೆಳೆಯನ ಕುಲಗೋತ್ರಗಳನ್ನೂ ಮೋಹನರಾಯರು ವಿಚಾರಿಸಿಕೊಂಡರು.

ಪದ್ಮನಾಭನ ಬಗೆಗೆ "ಹುಡುಗ ಪರವಾಗಿಲ್ಲ" ಎಂದು ಮೋಹನರಾಯರು ಮನಸಿನೊಳಗೇ ಅಂದುಕೊಂಡರೂ, ಬಹಿರಂಗವಾಗಿ ಏನನ್ನೂ ಹೇಳಲಿಲ್ಲ...

ಮತ್ತೆ ಕೆಲ ನಿಮಿಷಗಳಾದ ಮೇಲೆ ಬಂದವರು ಎದ್ದರು.

"ಕಣಿವೇಹಳ್ಳಿಗೆ ನಾನೊಮ್ಮೆ ಬರಬೇಕಲ್ಲ ಶ್ರೀನಿವಾಸಯ್ಯನವರೇ," ಎಂದರು ಮೋಹನರಾಯರು.

"ನಿಶ್ಚಿತಾರ್ಥಕ್ಕೆ—ನಿಶ್ಚಿತಾರ್ಥಕ್ಕೆ ! ಒಟ್ಟಿಗೇ ಹೋಗೋಣ ಸ್ವಾಮಿ," ಎಂದರು ವಿಷ್ಣುಮೂರ್ತಿ.

ಶ್ರೀನಿವಾಸಯ್ಯನವರೆಂದರು :

"ಯಾವತ್ತು ಯೋಗ್ಯ ಅಂತ ಊರಿಗೆ ಹೋದ್ಮೇಲೆ ತಿಳಿಸ್ತೀನಿ."

ತಮ್ಮ ತಾಯಿಯನ್ನು ಕೇಳಿ ತಿಳಿಸುತೇನೆ—ಎನ್ನಲಿಲ್ಲ ಅವರು, ಪ್ರಕಾಶವಾಗಿ.

... ಆ ರಾತ್ರೆಯನ್ನು ಶ್ರೀನಿವಾಸಯ್ಯನೂ ಗೋವಿಂದನೂ ಪದ್ಮನಾಭನ ಕೊಠಡಿಯಲ್ಲಿ ಕಳೆದರು.

ಬೆಳಗ್ಗೆ ಅವರು ಮುಖ ತೊಳೆಯುವ ವೇಳೆಗೆ ಗಜಾನನ ಸೈಕಲಿನ ಮೇಲೆ ಬಂದ. ಎಲೆಯಲ್ಲಿ ಕಟ್ಟಿದ್ದ ಹತ್ತು ಹದಿನಾರು ಇಡ್ಲಿ, ಗಟ್ಟಿ ಚಟ್ನಿ. ದೊಡ್ಡ ಫ್ಲಾಸ್ಕಿನಲ್ಲಿ ಕಾಫಿ ...

ವಿಷ್ಣುಮೂರ್ತಿ ಕಳುಹಿಸಿಕೊಟ್ಟಿದ್ದರು.

"ತಗೊಳ್ಳಿ ಅಣ್ಣಯ್ಯ," ಎಂದ ಗೋವಿಂದ, ವಿಷ್ಣುಮೂರ್ತಿಗಳ ಭಾವೀ ಅಳಿಯ. ಅವನ ಸೂಚನೆ ಕೃತಿಯಾಗುವಷ್ಟರಲ್ಲಿ ಸ್ವತಃ ವಿಷ್ಣುಮೂರ್ತಿಗಳೇ ಬಂದರು.

"ಬಸ್ಸ್ಟ್ಯಾಂಡಿಗೆ ತಾನೆ ? ಕಾರ್ ತಂದಿದೇನೆ. ಅಲ್ಲಿ ಬಿಡ್ತೀನಿ," ಎಂದರು.

"ರಾಜ ಆತಿಥ್ಯವಾಯಿತಪ್ಪ ನಿಮ್ಮದು," ಎಂದು ಶ್ರೀನಿವಾಸಯ್ಯ ಹೃತ್ಪೂರ್ವಕವಾಗಿ ಆಡಿದರು.

ದಾರಿಯಲ್ಲಿ ವಿಷ್ಣುಮೂರ್ತಿ ಅಂದರು :

"ನಿಶ್ಚಿತಾರ್ಥಕ್ಕೆ ಬರುತೇವಲ್ಲ, ಅದೇ ದಿವಸ ಹೋಟ್ಲು ಉದ್ಘಾಟನೇನೂ ಆದರೆ

ಚೆನ್ನಾಗಿರುತ್ತೇಂತ ಗಜಾನನ ಹೇಳ್ತಾನೆ."

"ಆಗಬಹುದಲ್ಲ."

"ಹಾಗಾದರೆ ಈ ವಾರವೇ ಸಂಸಾರಸಮೇತನಾಗಿ ಹೋಟ್ಲು ಸಾಮಾನೂ ತಕ್ಕೊಂಡು ಗಜಾನನ ಬಂದ್ಬಿಡ್ಲಿ," ಎಂದ ಗೋವಿಂದ.

ವಿಷ್ಣುಮೂರ್ತಿ ಭಾವೀ ಅಳಿಯನ ಕಡೆ ನೋಡಿ, "ಹಾಗೇ ಮಾಡೋಣ, ಗೋವಿಂದ ರಾವ್," ಎಂದರು.

ಯೋಚಿಸುತ್ತಲಿದ್ದ ಶ್ರೀನಿವಾಸಯ್ಯ ಅರ್ಧ ಸ್ವಗತ ಅಂದರು :

"ಏನಿದ್ದರೂ ನಗರ ನಗರವೇ; ಹಳ್ಳಿ ಹಳ್ಳೀನೆ. ಒಂದು ಕಾಗದ ಕೂಡಾ ಬರೆಯೋ ಹಾಗಿಲ್ಲ. ಪ್ರತಿಯೊಂದಕ್ಕೂ ಗೋವಿಂದನೋ ಇನ್ಯಾರೋ ಖುದ್ದಾಗಿ ಬರಬೇಕ.."

ವಿಷ್ಣುಮೂರ್ತಿ ಅವರತ್ತ ಹೊರಳಿ ಅಂದರು :

"ಒಮ್ಮೊಮ್ಮೆ ಆಶ್ಚರ್ಯ ಅನಿಸುತ್ತೆ. ಇಷ್ಟು ದೊಡ್ಡ ಸಿಟಿ ಹತ್ರ ಇದ್ರೂನೂ ನಿಮ್ಮೂರಲ್ಲಿ ಲೈಟಿಲ್ಲ, ಪೋಸ್ಟಾಫೀಸಿಲ್ಲ, ಆಸ್ಪತ್ರೆ ಇಲ್ಲ, ಬಸ್ಸಿಲ್ಲ. ಇದನ್ನೆಲ್ಲಾ ಕಣಿವೇಹಳ್ಳಿ ಯವರು ಹ್ಯಾಗೆ ಸಹಿಸ್ಕೊಂಡಿದಾರೆ ಅಂತ ?"

"ಬಾವಿಯೊಳಗಿನ ಕಪ್ಪೆಗೆ ಹೊರಗಿನ ಯೋಚನೆ ಇಲ್ಲ ವಿಷ್ಣುಮೂರ್ತಿಗಳೇ."

"ಏನೇ ಹೇಳಿ. ನಿಮ್ಮ ಪಟೇಲರು ನೀವು ಎಲ್ಲಾ ಸೇರ್ಕೊಂಡು ಒಂದಿಷ್ಟು ಸರಕಾರದ ಕಿವಿ ಹಿಂಡ್ಬೇಕಪ್ಪ."

"ಹೌದು, ಮಾಡ್ಬೇಕಾದ್ದೇ. ಇದಾನಲ್ಲ ನಮ್ಮ ಗೋವಿಂದ. ಇಂಥಾದ್ದೆಲ್ಲ ಅವನಿಗೆ ಬಹಳ ಇಷ್ಟ."

ಗೋವಿಂದ ಮಾತು ಸೇರಿಸಿದ :

"ಹೆಜ್ಜೆ ಹೆಜ್ಜೆಗೂ ಅಡ್ಡಿ ಮಾಡದೇ ಇದ್ರೆ ಏನು ಬೇಕಾದರೂ ಸಾಧಿಸಬಹುದು."

ಮಗನ ಕಡೆ ತಿರುಗಿ ಶ್ರೀನಿವಾಸಯ್ಯ, "ಯಾರು ಮಾಡ್ತಾರೆ ಅಡ್ಡಿ ?" ಎಂದು ಕೇಳಿದರು.

ಗೋವಿಂದ ಆ ಪ್ರಶ್ನೆಗೆ ನೇರ ಉತ್ತರವೀಯದೆ, ವಿಷ್ಣುಮೂರ್ತಿಯವರತ್ತ ನೋಡಿ, "ನಮ್ಮ ಅಣ್ಣಯ್ಯನಿಗೂ ಪಟೇಲರಿಗೂ ಕಂಠಸ್ಯಗಳಸ್ಯ,"—ಎಂದ.

"ಇರಬೇಕಾದ್ದೇ. ಇರಬೇಕಾದ್ದೇ,"—ಎಂದರು ವಿಷ್ಣುಮೂರ್ತಿ.

ಶ್ರೀನಿವಾಸಯ್ಯನವರಿಗೆ ಗೋವಿಂದನ ಮಾತು ರುಚಿಸಲಿಲ್ಲ. ಆದರೆ, ಬಸ್ ನಿಲ್ದಾಣ ವನ್ನು ಕಾರು ಸಮೀಪಿಸಿದುದರಿಂದ ಅವರೇನನ್ನೂ ಹೇಳಲಿಲ್ಲ.

"ನಿಮಗೆ ಕೆಲಸವಿರುತ್ತೆ. ನೀವು ಹೊರಡಿ, ವಿಷ್ಣುಮೂರ್ತಿಗಳೇ,"—ಎಂದು ಶ್ರೀನಿವಾಸಯ್ಯ ನುಡಿದರೂ, ಅವರೂ ಗೋವಿಂದನೂ ಬಸ್ಸನ್ನೇರುವವರೆಗೂ ವಿಷ್ಣುಮೂರ್ತಿ ಅಲ್ಲಿಯೇ ಇದ್ದರು.

ಕಂಡಕ್ಟರ್ ಬೆಲ್ ಹೊಡೆದುದರ ಜತೆಗೆ "ರೈಟ್" ಎಂದು ಕಿರಿಚಿಕೊಳ್ಳುತ್ತಿದ್ದಂತೆ ವಿಷ್ಣುಮೂರ್ತಿ ಅಂದರು :

"ನಿಶ್ಚಿತಾರ್ಥದ ದಿವಸ ಗೊತ್ತುಮಾಡಿ ತಿಳಿಸ್ಬಿಡಿ, ನಮಸ್ಕಾರ."

"ಹ್ಞ-ಹ್ಞ-ನಮಸ್ಕಾರ," ಎಂದರು, ಶ್ರೀನಿವಾಸಯ್ಯ.

* * * *

ಕಣಿವೇಹಳ್ಳಿಯ ಸುಡು ವಾತಾವರಣದತ್ತ ಕಪ್ಪು ಮೋಡಗಳು ದಾಳಿ ಇಡತೊಡಗಿದ ದಿನ, ವಿಷ್ಣುಮೂರ್ತಿಗಳೂ ಮೋಹನರಾಯರೂ ಬಂದು ತಲಪಿದರು. ಅವರನ್ನು ಸ್ವಾಗತಿಸಲು ಮೋಟಾರು ರಸ್ತೆಯ ಬಳಿಗೆ ಬೀರನನ್ನೂ ಕರೆದುಕೊಂಡು ಗೋವಿಂದ ಹೋಗಿದ್ದ.

"ನಾನೂ ಬರಲೆ ?" ಎಂದು ಕೇಳಿದ್ದ ಗಜಾನನ.

"ನಿನ್ನ ಹೋಟಲಿನ ಕಟ್ಟಡದ ತಳಿರು ತೋರಣ ಇತ್ಯಾದಿ ಮಾಡಿಸು. ಇಲ್ಲೇ ಇರು," ಎಂದಿದ್ದ ಗೋವಿಂದ.

ಮೋಹನರಾಯರೊಂದಿಗೆ ಅವಳ ಕಿರಿಯ ಮಗನೂ ಬಂದಿದ್ದ. ಎಂಥ ಹಳ್ಳಿಯೊ, ಏನು ಕಥೆಯೊ; ನೋಡಿಕೊಂಡು ಬಾ ಎಂದು ಕಳುಹಿಸಿದ್ದಳು ಅಕ್ಕ ಆರತಿ. ಉರಿಬಿಸಿಲಲ್ಲಿ ಎರಡು ಮೈಲು ನಡೆದು, ಮುಖವೆಲ್ಲ ಕೆಂಪಡರಿ, ಕಪ್ಪಿಟ್ಟು, ಹುಡುಗ ಹಣ್ಣಾಗಿದ್ದ.

ದೊಡ್ಡಮ್ಮ ಬಂದವರನ್ನು ಆದರಿಸಿದರು.

ಭಾಗೀರಥಿಗೆ ಅಡುಗೆ ಮನೆಯಲ್ಲಿ ಬಿಡುವಿಲ್ಲದ ದುಡಿಮೆ. ಶ್ರೀಪಾದ ಅಡ್ಡಿಯಾಗುತ್ತಾನೆಂದು ಕೆಲಸದವಳು ಅವನನ್ನು ಹೊರಕ್ಕೆ ಕರೆದೊಯ್ದುಳು. ಆ ಮಧ್ಯೆಯೂ ಭಾಗೀರಥಿ ಒಮ್ಮೆ ಲಾಯರು ನೋಡಲು ಹೇಗಿರುವರೆಂದು ಹಣಿಕಿ ಹಾಕಿದಳು. ಬಾಲ್ಯದಲ್ಲಿ ತನ್ನ ತಂದೆಯ ಮನೆಯಲ್ಲಿ ಆಕೆ ನೋಡಿದ್ದ ಲಾಯರಿಗೂ ಇವರಿಗೂ ಇದ್ದ ಸಾಮ್ಯ ಕರಿಯ ಕೋಟು ಮತ್ತು ಬಿಳಿಯ ಪೇಟ ಮಾತ್ರ. ಹುಡುಗ ಕಣ್ಣಿಗೆ ಬಿದ್ದ. ಕೇಳಿಸಿದ ಮಾತುಕತೆಯಿಂದ ತಿಳಿಯಿತು ಆತ ವಕೀಲರ ಮಗ ಎಂಬುದು. ಅವನ ಹಾಗೆಯೇ ಇರುವಳೇನೋ ಪದ್ಮನ ಕೈ ಹಿಡಿಯುವ ದೊರೆಸಾನಿ ? ಭಾಗೀರಥಿಗೆ ಸ್ವಲ್ಪ ನಿರಾಶೆಯಾಯಿತು.

ಬಂದವರು ಅಲ್ಪೋಪಹಾರ ಸ್ವೀಕರಿಸಿದರು.

ಅವರು ಕಣಿವೇಹಳ್ಳಿಗೆ ಕಾಲಿರಿಸುವ ವೇಳೆಗೆ ಕವಿಯತೊಡಗಿದ್ದ ಕಪ್ಪು ಮೋಡಗಳು ಈಗ ದಟ್ಟವಾಗಿದ್ದುವು.

"ಶುಭ ಲಕ್ಷಣ. ಬರುತ್ತಾ ಮಳೆ ತಂದಿರಿ."—ಎಂದರು ಶ್ರೀನಿವಾಸಯ್ಯ.

ಗಂಗಾಧರಶಾಸ್ತ್ರಿಗಳ ಆಗಮನವಾಯಿತು.

ಲಗ್ನಪತ್ರಿಕೆಗಳನ್ನು ಬರೆಸುವ ಕೆಲಸ ಆರಂಭವಾದಂತೆ ಟಪಟಪ ಎಂದುವು ನಾಲ್ಕು ಮಳೆಯ ಹನಿಗಳು.

ವಿಷ್ಣುಮೂರ್ತಿಯವರು ತಾವಾಗಿಯೇ ಎತ್ತಿದ ವರದಕ್ಷಿಣೆಯ ಮಾತು; ಬಂಗಾರ ....

ದೊಡ್ಡಮ್ಮ ಅಂದರು :

"ಈ ಮನೆಗೆ ಸೊಸೆಯಾಗಿ ಬರುವ ಯಾವ ಹೆಣ್ಣೂ ತನ್ನೊಟ್ಟಿಗೆ ಆಸ್ತಿ ತರಬೇಕಾಗಿಲ್ಲ."

ವಿಷ್ಣುಮೂರ್ತಿ ಚಂಗನೆದ್ದು ದೊಡ್ಡಮ್ಮನ ಪಾದಗಳಿಗೆ ನಮಿಸಿದರು :

"ತಾಯಿ, ನೀವು ಕೇಳ್ತೀರಿ ಅಂತ ನಾವು ಕೊಡೋದಲ್ಲ. ಏನೋ ಇಷ್ಟು ವರ್ಷ ಸಾಕಿ ದೊಡ್ಡದು ಮಾಡಿದ್ವಿ. ಇನ್ನೊಂದು ಮನೆಗೆ ಕೊಡುವಾಗ ನಮ್ಮ ಕೈಲಾದದ್ದು ಒಪ್ಪಿಸೋದು ನ್ಯಾಯ ಸಮ್ಮತ ಅಲ್ವೆ ?"

ದೊಡ್ಡಮ್ಮ ಸ್ಪಷ್ಟವಾಗಿ ಅಂದರು :

"ನಮ್ಮ ಶೀನ ವರದಕ್ಷಿಣೆ ತಗೊಂಡಿಲ್ಲ. ಅವನ ಮಗ ಗೋಪಾಲ ತಗೊಂಡಿಲ್ಲ.

ಬೇರೆ ಅವನ ಮಕ್ಕಳೂ ತೊಗೊಳೋದಿಲ್ಲ. ವಧುವಿನ ಮೈಮೇಲೆ ಬಂಗಾರ ಹಾಕಿದರೆ ಅದು ಅವಳ ಸೊತ್ತಾಗಿಯೇ ಉಳಿಯುತ್ತೆ. ಅಷ್ಟೆ."

ಮೋಹನರಾಯರು ವಿಷ್ಣುಮೂರ್ತಿಯವರಿಗೆ ಅಂದರು :

"ಹಿರಿಯರ ಅಭಿಪ್ರಾಯ ಹೇಗಿದೆಯೋ ಹಾಗೆ ನಡಕೊಳ್ಳೋಣ ಮೂರ್ತಿಗಳೇ."

ತಾವು ಕುಳಿತಿದ್ದ ಸ್ಥಳಕ್ಕೆ ಮರಳಿ ವಿಷ್ಣುಮೂರ್ತಿ ನುಡಿದರು :

"ಆಗಲಿ, ಹಾಗೆಯೇ, ಆಗಲಿ."

ಶಾಸ್ತ್ರಿಗಳು ಲಗ್ನಪತ್ರಿಕೆಗಳನ್ನು ಬರೆದು ಮುಗಿಸುವ ವೇಳೆಗೆ ಮಳೆ ಸುರಿಯತೊಡಗಿತು.

"ಹೋಟೆಲು ಶುರು ಮಾಡೋ ದಿವಸವೇ ಹೀಗಾಯಿತಲ್ಲಾ,"—ಎಂದು ಗಜಾನನ ಗೋವಿಂದನೊಡನೆ ತನ್ನ ಸಂಕಟವನ್ನು ತೋಡಿಕೊಂಡ.

ಗೋಪಾಲ ಬಂದ.

ಊಟವಾಯಿತು.

ಮೊದಲ ಆ ಭಾರೀ ಮಳೆಗೆ ಮನೆ ಮೂರು ನಾಲ್ಕು ಕಡೆ ಸೋರತೊಡಗಿತು.

ಪದ್ಮನಾಭನ ಕೊಠಡಿಯಲ್ಲಿ ಹಾಸಿಗೆಗಳನ್ನು ಹಾಸಿದರು, ಬಂದವರು ವಿಶ್ರಾಂತಿ ಪಡೆಯಲೆಂದು.

ದೃಷ್ಟಿ ಹರಿಯುವವರೆಗೂ ನೀರು, ನೀರು ಸುರಿಯುವ ಮಳೆಯ ಜೋರೋ ಸದ್ದು ಹೊರಗೆ. ಗಟ್ಟಿಯಾಗಿ ಮಾತಾಡದಿದ್ದರೆ ಯಾರಿಗೆ ಏನೂ ಕೇಳಿಸುವಂತಿರಲಿಲ್ಲ.

ಆ ದಿನವೇ ಹಿಂತಿರುಗಬೇಕು ಎಂದುಕೊಂಡಿದ್ದರು ಮೋಹನರಾಯರು. ಈಗ ದಾರಿ ? ಅವರ ಮುಖ ನಿಸ್ತೇಜವಾಯಿತು.

ವಿಷ್ಣುಮೂರ್ತಿ ಸ್ಥಿರ ಮಂದಹಾಸದ ಮುಖವಾಡ ಧರಿಸಿದರು.

ಆದರೆ, ಶ್ರೀನಿವಾಸಯ್ಯನವರ ಮನೆಯವರಲ್ಲಿ ಮಾತ್ರ ಮಳೆ ಬಂತೆಂದು ಸಂಭ್ರಮ, ಗೋವಿಂದನೂ ಅದಕ್ಕೆ ಹೊರತಾಗಿರಲಿಲ್ಲ.

ಅವರು ಮಲಗಿದ್ದೆಡೆ ಇದ್ದಕ್ಕಿದ್ದಂತೆ ಹಂಚಿನಿಂದ ನೀರು ಸುರಿಯತೊಡಗಿತು. ಹಾಸಿಗೆಗಳನ್ನು ಸರಿಸಿದರು. ಬೀಳುತ್ತಿದ್ದ ನೀರನ್ನು ಹಿಡಿಯಲೆಂದು ಭಾಗೀರಥಿ ಒಂದು ಪಾತ್ರೆ ತಂದಿಟ್ಟಳು, ಸಂತಸ ಕುಣಿಯುತ್ತಿತ್ತು ಅವಳ ಮುಖದಮೇಲೆ.

ಪಾತ್ರೆಗೆ ನೀರು ತೊಟ್ಟಿಕ್ಕಿದಾಗಲೆಲ್ಲ ತಳಂಕೆಂದು ಸದ್ದಾಗಿ ಹನಿಗಳು ಆ ಕಡೆಗೂ ಈ ಕಡೆಗೂ ಜಿಗಿದುವು.

ಅದನ್ನೇ ನೋಡುತ್ತ ಮಲಗಿದ ಮೋಹನರಾಯರ ಮಗ ತಂದೆಯತ್ತ ಹೊರಳಿ ಕೇಳಿದ :

"ಮದುವೆ ಆದ್ಮೇಲೆ ಅಕ್ಕ ಇದೇ ಮನೇಲಾ ಇರೋದು ?"

## ೨೧

"ನಿನ್ನ ಹೋಟ್ಲಿನ ಉದ್ಘಾಟನೆಯಾಯ್ತೂಂತ ಪೇಪರ್‍ನಲ್ಲಿ ಹಾಕ್ಸೋಣ ಗಜಾನನ. ವಂದನಾರ್ಪಣೆ ನಾನು ಮಾಡ್ತೀನಿ," ಎಂದಿದ್ದ ಗೋವಿಂದ.

ಆದರೆ, 'ವಿಜೃಂಭಣೆಯಿಂದ ಜರಗಿತು' ಎಂದು ಬರೆಯಲು ಮಳೆ ಬಿಡಬೇಕಲ್ಲ.

ಶ್ರೀನಿವಾಸಯ್ಯನವರ ಮನೆಯಲ್ಲಿ ಊಟವಾದೊಡನೆಯೇ ಗಜಾನನ ಹೊಗೆಯಟ್ಟದಿಂದ ಕೆಳಗಿಳಿಸಿದ ಕೊಡೆಯನ್ನು ಪಡೆದು, ಹೆಂಡತಿಯನ್ನೂ ಮಗುವನ್ನೂ ಕರೆದುಕೊಂಡು, "ನೀವು ಸ್ವಲ್ಪ ಮುಂಚೇನೇ ಬಂದ್ಬಿಡಿ, ಗೋವಿಂದರಾವ್" ಎಂದು ಹೇಳಿ ತನ್ನ ಭವನಕ್ಕೆ ಹೋದ.

ಕಾವಲಿಗೆಂದು ಗೋವಿಂದನ ಮನೆಯ ಬೀರನನ್ನು ಅಲ್ಲಿ ಬಿಟ್ಟಿದ್ದ ಗಜಾನನ.

ಮಳೆ ಹನಿಯತೊಡಗಿದಾಗ ಸುತ್ತುಮುತ್ತಲಿಂದ ಮೂವರು ನಾಲ್ವರು ಬಂದು ಬೀರನಿಗೆ ಜತೆಯಾಗಿದ್ದರು; ವೆಂಕಟಪ್ಪನಲ್ಲಿಂದ ಕೊಂಡುತಂದಿದ್ದ ಬೀಡಿಗಳನ್ನು ಸೇದಿ ಮುಗಿಸಿದ್ದರು.

ವಿಘ್ನೇಶ್ವರನ ಹೆಸರು ಹೊತ್ತ ಭವನವೆಂದು ಮಳೆಗೆ ಕನಿಕರವೆ? ಮನೆಯೊಳಗೆಲ್ಲ ನೀರು.

ಕೈಗೂಸಿಗೆಲ್ಲಿ ನೆಗಡಿಯಾಗುವುದೋ ಎಂಬ ಭಯ ಗಜಾನನ ಹೆಂಡತಿ ಜಲಜೆಗೆ.

ಸ್ವಲ್ಪ ಹೊತ್ತಿಗೆ ಹಿಂದೆ ಶ್ರೀನಿವಾಸಯ್ಯನವರ ಮನೆಯಲ್ಲಿ ನಗರದಿಂದ ಬಂದವರನ್ನು ನೋಡುತ್ತ ಸಂತುಷ್ಟಳಾಗಿದ್ದ ಜಲಜಾ, ಈಗ ಅತ್ಯಂತ ವ್ಯಥಿತೆ.

"ಇದೆಂಥಾ ಗ್ರಹಾಚಾರ ಅಂದ್ರೆ...... ಹೀಗೂ ಉಂಟೆ? ನಗರದಲ್ಲೇ ಇದ್ದಿದ್ರೆ ಇಂಥಾ ಅವಸ್ಥೆಯಾಗ್ತಿತ್ತೆ? ಅಯ್ಯೋ......"

ಗಜಾನನನಿಗೆ ಸಿಟ್ಟು ಬಂತು.

"ಒಳ್ಳೇ ದಿವಸ ಅಬದ್ಧ ಮಾತಾಡ್ಬೇಡ. ನನಗೋಸ್ಕರ ಈ ಸ್ವರ್ಗಕ್ಕೆ ಬಂದದ್ದು ಅಂದ್ಕೊಂಡಿಯಾ? ಮಗೂಗೆ ಬೆಚ್ಚಗೆ ಹೊದಿಸಿ ಒಳಗೆ ಎಲ್ಲಾದರೂ ಮಲಗಿಸು. ಸೋರಿರೋ ನೀರೆಲ್ಲಾ ಹಿಂಡಿ ತೆಗಿ. ಉಪ್ಪಿಟ್ಟು ಕೇಸರೀಭಾತಾದರೂ ಮಾಡ್ಬೇಕಲ್ಲ?"

ಜಲಜೆ ಒಳಹೋಗಿ ಮಗುವಿನ ಒದ್ದೆ ಫ್ರಾಕನ್ನು ತೆಗೆದು ಇನ್ನೊಂದನ್ನು ಹಾಕಿದಳು. ತೋಯ್ದಿದ್ದ ತನ್ನ ಸೀರೆಯನ್ನು ಬಿಚ್ಚಿ ಆ ಸಂಜೆ ಉಡಬೇಕೆಂದು ಯೋಚಿಸಿದ್ದ ರೇಶಿಮೆ ಸೀರೆಯನ್ನು ಟ್ರಂಕಿನಿಂದ ಹೊರತೆಗೆದು ಉಟ್ಟಳು. ಮೂಲೆಯಲ್ಲಿ ಕುಳಿತು ಮಗುವಿಗೆ ಮೊಲೆಯೂಡಿಸಿದಳು. ಅಲ್ಲಿಯೇ ತಟ್ಟಿ ಮಲಗಿಸಿ, ಕಂಬಳಿ ಹೊದಿಸಿ, ಸೀರೆಯ ನೆರಿಗೆ ಹಿಡಿದು ಮೊಣಕಾಲುಗಳ ಮೇಲಕ್ಕೆ ಎತ್ತಿ ಕಟ್ಟಿ, ಕೆಲಸಕ್ಕೆ ಅಣಿಯಾದಳು.

ಬೀರ ಗಜಾನನನಿಗೆ ಅಂದ:

"ಈಗ ಯಾನೂ ಮಾಡ್ಬೇಡಿ, ಬುದ್ದಿ. ಈ ಮಳೆ ಚಂಜೇಮಟ ಸುರೀತೈತೆ. ಆಮ್ಯಾಕೆ ಎಲ್ಲಾ ಸರಿಮಾಡಿದ್ರಾಯ್ತು."

"ಈ ಮಳೆ ಇನ್ನೊಂದರ್ಧ ಘಂಟೇಲಿ ನಿಲ್ಲೋದಿಲ್ಲ, ಅಂದ್ಯಾ?" ಗಜಾನನ ಕೇಳಿದ.

"ಒರಗ್ನೋಡಿ. ಕಾಣ್ಸಾಕಿಲ್ವ? ಏಸು ಕಪ್ಪಾಗೈತೆ!"

ಮಳೆ ನಿಲ್ಲದೇ ಇದ್ದರೆ ಆಮಂತ್ರಿತರು ಬರುವ ಬಗೆ ಹೇಗೆ? ಬರುತ್ತಾರೆ ಎಂದಿಟ್ಟು ಕೊಳ್ಳೋಣ. ಅವರಿಗೆ ಒಂದೊಂದು ಗುಟುಕು ಬಿಸಿ ಕಾಫಿ ಮಾಡಿಕೊಡಲು ಹಾಲು?

ಗೋವಿಂದ ಹಾಲಿನ ಸರಬರಾಜಿಗೆ ಒಬ್ಬನನ್ನು ಗೊತ್ತುಮಾಡಿ ಕೊಟ್ಟಿದ್ದ. ಆದರೆ ಆ ಮನುಷ್ಯ ಹಾಲು ತರುವನೆಂಬ ಭರವಸೆ ಏನು?

"ಅಲ್ಲ ಬೀರ, ಹಾಲು ತಂದ್ಕೊಡ್ಬೇಕಲ್ಲಪ್ಪ ?"

"ನಿಮುಗ್ಯಾಕೆ ಆ ಯೇಚ್ನೆ ? ಟೇಮಿಗ್ಸರಿಯಾಗಿ ಲಕ್ಕ ಬಂದ್ಬಿಡ್ತವನೆ," ಎಂದ ಬೀರ.

"ಬರದೇ ಇದ್ರೆ ?"

"ಅಯ್ಯೋ ಬುದ್ದಿ ನಾ ಇಲ್ಲವಾ ? ಓಗಿ ತಕಂಬತ್ತೀನಿ."

"ಇಲ್ಲಿಂದ ಎಷ್ಟು ದೂರ ಲಕ್ಕನ ಮನೆ ?"

"ಓ ಇಲ್ಲೇ."

"ನೀವೇನಪ್ಪ. ಹಳ್ಳೀಲಿ 'ಓ ಇಲ್ಲೇ' ಅಂದ್ಬಿಡ್ತೀರಾ ! ನಡಕೊಂಡ್ಹೋದ್ರೆ ಎರಡು ಮೂರು ಮೈಲಿಗಿಂತ ಕಮ್ಮಿ ಇರೋಲ್ಲ. ನಗರದಲ್ಲಾದ್ರೆ ಗಿರಾಕಿ ಕೂತಿರೋ ಹಾಗೇನೇ ಸೈಕಲ್ನಾಕ್ಕೊಂಡೋಗಿ ಒಂದ್ನಿಮಿಷ್ದಲ್ಲಿ ಹಾಲು ತರ್ಬಹುದು."

ಬೀರ ಏನನ್ನೂ ಹೇಳಲಿಲ್ಲ. ಎದ್ದು, ಕಸಬರಿಕೆ ಹಿಡಿದು. ಪಡಸಾಲೆಯನ್ನೂ ಜಗಲಿ ಯನ್ನೂ ಗುಡಿಸಿದ. ಬಾಗಿಲಿಗೆ ಕಟ್ಟಿದ್ದ ಬಾಳೆಯ ಗಿಡಗಳು ಗಾಳಿಗೆ ಬಾಗಿದ್ದುವು. ಅವು ಗಳನ್ನು ಸರಿಯಾಗಿ ನಿಲ್ಲಿಸಿದ.

ಸೋರುವುದು ಕಡಮೆಯಾಗಲಿಲ್ಲ.

"ನಾನು ಯೋಳ್ಳಿಲ್ವ ? ನಿಂತ್ಮ್ಯಾಕೆ ಗುಡಿಸೋದೇ ಸೈ," ಎಂದ ಬೀರ.

ನಗರದಿಂದ ತಂದಿದ್ದ ಹಳೆಯ ಟೈಂಪೀಸು ಆ ಭವನದಲ್ಲಿತ್ತು. ಹೊಗೆ ಹೇಗೋ ಒಳಕ್ಕೆ ಸೇರಿಕೊಂಡು ಮಾಸಿದ್ದ ಅಂಕೆಗಳು. ಸ್ವಲ್ಪ ನಿಧಾನವಾಗಿಯಾದರೂ ಅವರೊಳಗಿನ ಯಂತ್ರ ಚಲಿಸುತ್ತಿತ್ತು.

ಮೂರು ಘಂಟೆ.

ಮೂರೂವರೆ.

ನಾಲ್ಕು.

ಆಮಂತ್ರಣ ಪತ್ರಿಕೆಯನ್ನು ಅಚ್ಚು ಹಾಕಿಸಿದ್ದರೆ ಚೆನ್ನಾಗಿತ್ತು ಎಂಬ ಒಳಗುದಿ ಗಜಾನನನಿಗೆ. ನಗರ ಬಿಡುವ ಮುನ್ನ ವಿಷ್ಣುಮೂರ್ತಿಯವರು ಆ ಬಗೆಗೆ ಏನೂ ಹೇಳಿರಲಿಲ್ಲ. ಅವರು ಮರೆತು ಬಿಡುವಂಥ ವಿಷಯವಲ್ಲ ಅದು. ಬೇಡ ಅಂತ ನಿರ್ಧರಿಸಿರ ಬೇಕು — ಎಂದು ಗಜಾನನ ಭಾವಿಸಿದ್ದ.

ಆದರೂ ಕಣಿವೇಹಳ್ಳಿ ತಲಪಿದ ದಿನ ಗೋವಿಂದನೆದುರು ತನ್ನ ನಿರಾಶೆಯನ್ನು ವ್ಯಕ್ತಪಡಿಸಲು ಗಜಾನನ ಹಿಂಜರಿಯಲಿಲ್ಲ.

"ನಿನಗೆ ಕೆಲಸವಿಲ್ಲ. ಅಕ್ಷರ ತಿಳೀದವರಿಗೆ ಆಮಂತ್ರಣ ಪತ್ರಿಕೆ ಬೇರೆ ! ಪ್ರೊಪ್ರ್ಯಾಟರ್ —ಗಜಾನನರಾವ್ ಅಂತ ಪ್ರಿಂಟಾಗೋದು ತಾನೆ ನಿನಗೆ ಮುಖ್ಯ ? ನನ್ನ ಮದುವೇ ಇನ್ವಿಟೇಷನ್‌ನಲ್ಲಿ ನಿನ್ನ ಹೆಸರನ್ನೂ ಸೇರಿಸ್ತೀನಿ. ಸವಿನಯ ಆಮಂತ್ರಣ ಅಂತ ಬರೆದು, ವಿಘ್ನೇಶ್ವರ ಭವನದ ಪ್ರೊ. ಶ್ರೀ ಶ್ರೀ...... ಅಂತ ಹಾಕಿಸ್ತೀನಿ. ಸಾಕೇನಯ್ಯ ?"

"ಹೆಹ್ಹೆ !"

"ಬೋರ್ಡು ಬರೆಸಿ ತಂದಿದೀಯೊ ?"

"ಓಹೋ."

"ತೋರಿಸು, ನೋಡೋಣ."

ಕಟ್ಟುಗಳನ್ನು ಬಿಚ್ಚಿ ಗಜಾನನ ಬೋರ್ಡನ್ನು ಹೊರಕ್ಕೆ ತೆಗೆದಿದ್ದ. ನಾಲ್ಕಾರು ಬಣ್ಣಗಳನ್ನು ಬಳಸಿ ಬರೆದಿದ್ದ ಅಕ್ಷರಗಳು: ಮೇಲೆ ॥ಶ್ರೀ॥ ದಪ್ಪಗೆ **ವಿಘ್ನೇಶ್ವರ ಭವನ ಕಾಫೀ ಕ್ಲಬ್,** ಕೆಳಗೆ ಮಾಲಿಕರ ಹೆಸರು. ಮೂಲೆಯಲ್ಲಿ 'ಪೇಂಟರ್: ವಿ. ಎಸ್. ರಾವ್.'

"ಚೆನ್ನಾಗಿದೆ," ಎಂದಿದ್ದ ಗೋವಿಂದ.

"ಗಣೇಶ ಭವನದ ಬೋರ್ಡೂ ಇವನೇ ಬರೆದದ್ದು. ಶ್ರೀಪತಿ ಅಂತ."

"ಸರಿ."

ಯಾವುದೋ ಸಾಮಾನು ತಗಲಿ ಬೋರ್ಡಿನ ಎಡ ಮೂಲೆಯಲ್ಲಿ ಸ್ವಲ್ಪ ತರಚಿಕೊಂಡಿತ್ತು. ಗಜಾನನ ಅದನ್ನು ಬೆರಳುಗಳಿಂದ ಮೃದುವಾಗಿ ಮುಟ್ಟಿದ್ದ, ಒಳಗಿನ ಕಸಿವಿಸಿಯನ್ನು ತೋರ್ಪಡಿಸದೆ.

ಅದನ್ನು ಗಮನಿಸಿದ ಗೋವಿಂದ ಅಂದಿದ್ದ:

"ಮೂಲೇಲಿ ಬಣ್ಣ ಹೋಗಿರೋದು ಕಾಣಿಸೋದಿಲ್ಲ. ಫಸ್ಟ್‌ಕ್ಲಾಸಾಗಿದೆ ಬೋರ್ಡು. ತೂಗಹಾಕೋಕೆ ಕೊಂಡಿಗಳನ್ನೂ ಇಟ್ಟಿದ್ದಾನೆ. ಎಷ್ಟು ರೂಪಾಯಿ?"

"ಗೊತ್ತಿಲ್ಲ. ವಿಷ್ಣುಮೂರ್ತಿ ಮಾವನೇ ಕೊಟ್ರು. ಹತ್ತು ರೂಪಾಯಿಂತ ಕಾಣುತ್ತೆ."

"ಹುಂ. ಕಾಸು ಖರ್ಚಿಲ್ದೆ ಸ್ವಂತದ್ದೊಂದು ಹೋಟ್ಲು ಮಾಡ್ಕೊಂಡೆ, ಅನ್ನು."

"ಹೆಹ್ಹೆ ......"

[ಮಾತನಾಡುತ್ತ ಗೋವಿಂದ ಆಗಾಗ್ಗೆ ಜಲಜೆಯತ್ತ ನೋಡಿದ್ದ. ತಾಯಿಯಾಗಿ ಮರಳಿದ ಮೇಲೆ ಕಣ್ಣಿಗೆ ಹಬ್ಬವಾಗಿದಾಳಲ್ಲಾ ಎನಿಸಿತ್ತು ಅವನಿಗೆ. ನಿರ್ಲಜ್ಜ ನೋಟದಿಂದ ಅವಳನ್ನು ನೋಡುವುದು ತಪ್ಪಲ್ಲ; ಇನ್ನು ಹೇಗೂ ಸಂಬಂಧಿಕರು ತಾನೆ — ಎಂದುಕೊಂಡಿದ್ದ. ತನ್ನ ಹೆಂಡತಿಯ ವಿಷಯದಲ್ಲಿ ಗೋವಿಂದ ತೋರಿದ ಆಸಕ್ತಿ ಗಜಾನನನ ಲಕ್ಷ್ಯಕ್ಕೆ ಬಂದಿರಲಿಲ್ಲ.]

......ಈಗ ಗಜಾನನ ತನ್ನಷ್ಟಕ್ಕೆ ಗೊಣಗಿದ:

"ಈ ಗೋವಿಂದರಾಯನಾದರೂ ಬಂದಿದ್ದರೆ......"

ಗೋವಿಂದ ಬರಲು ಮತ್ತೂ ಒಂದು ಘಂಟೆ ಕಾಲ ಹಿಡಿಯಿತು. ಸರ್ವಾಲಂಕೃತನಾಗಿ ಪಾಯಜಾಮವನ್ನು ಒಂದು ಕೈಯಲ್ಲಿ ಮೇಲಕ್ಕೆತ್ತಿ ಇನ್ನೊಂದರಲ್ಲಿ ಕೊಡೆ ಹಿಡಿದುಕೊಂಡು ಬಂದವನೇ, "ಇದೆಂಥಾ ಕಳೆ ಮುಖದ್ಮೇಲೆ? ಸ್ವಲ್ಪ ನಗೋದಕ್ಕೆ ಕಲಿ ಗಜಾನನ. ಹಾಲು ಬಂತೆ? ಎಲ್ಲಿ ಬೀರ?" ಎಂದ.

ಬೀರನಾಗಲೇ ಎದ್ದು ನಿಂತಿದ್ದ.

"ಹಾಲು ಬರ್ಲಿಲ್ಲ ಗೋವಿಂದರಾವ್, ಐದು ಘಂಟೆ ಆಗ್ಹೋಯ್ತು. ಪಟೇಲರೂ ಕಾಣೆ," ಎಂದ ಗಜಾನನ.

"ಐದಾದರೆ ಏನೀಗ? ಮಳೆ ನಿಲ್ಲೋದು ಬೇಡ್ವೆ ಗಜಾನನ? ನೀನೂ ಸರಿ. ಏ ಬೀರ, ಈ ಕೊಡೇನ ತಗೊಂಡ್ಹೋಗಿ ಮನೇಲ್ಕೊಡು. ಎಲ್ಲಿ ಗಜಾನನ, ಇನ್ನೊಂದಿದೆಯಲ್ಲ ಅದನ್ನೂ ಕೊಟ್ಬಿರು. ಹ್ಞ. ವಾಪ್ಸು ಬರ್ತಾ ಲಕ್ಕನ ಮನೆಗ್ಹೋಗಿ ಹಾಲು ತಂದ್ಬಿಡು, ಬೀರ."

"ಹೂಂ ಬುದ್ದಿ," ಎಂದ ಬೀರ.

"ನಡಿ. ನಿಂತ್ಕೋಬೇಡ ಮುಖ ನೋಡ್ಕೊಂಡು. ಕುದ್ರೆ ಮೇಲ್ಕುಂತಂಗೆ ಹೋಗ್ಬೇಕು ನೋಡು."

ಗೋವಿಂದ — ಗಜಾನನರು ಕೊಟ್ಟ ಕೊಡೆಗಳನ್ನು ಕೈಯಲ್ಲಿ ತೂಗಹಾಕಿಕೊಂಡು ತಾನು ಮಳೆಯಲ್ಲಿ ತೋಯಿಸಿಕೊಳ್ಳುತ್ತ ಬೀರ ಹೊರಟ.

"ಮಳೆ ಸುರೀತಿದೆ. ಹಾಲಿನ ಪಾತ್ರೇನ ಭದ್ರ ಮುಚ್ಚಿ ತಗೊಂಡ್ಹೋಗು," ಎಂದ ಗಜಾನನ.

ಅದಕ್ಕೂ ಬೀರ 'ಹೂಂ ಬುದ್ಧಿ' ಎಂದನಾದರೂ ಮಳೆಯ ಜೋರೋ ಸದ್ದಿನಲ್ಲಿ ಅದು ಕೇಳಿಸಲಿಲ್ಲ.

ಗೋವಿಂದ ಪಡಸಾಲೆಗೆ ಹೋದ. ಅವನೇ ದೊರಕಿಸಿಕೊಟ್ಟಿದ್ದ ಒಂದು ಹಳೆಯ ಮೇಜಿನಮೇಲೆ, ನಗರದಿಂದ ತಂದಿದ್ದ ಲಾಟೀನನ್ನು ಜಲಜೆ ಹಚ್ಚಿ ಇಟ್ಟಿದ್ದಳು.

ಅಲ್ಲೇ ಒಳ ಬಾಗಿಲಲ್ಲಿ ಅವಳು ನಿಂತಿದ್ದಳು. ಲಾಟೀನಿನ ಬೆಳಕು ಆ ಮುಖದಮೇಲೆ ಬಿದ್ದು ಅದು ಅತ್ಯಂತ ಆಕರ್ಷಕವಾಗಿ ಗೋವಿಂದನಿಗೆ ಕಂಡಿತು.

"ಭಾಗ್ಯದ ದೀಪ, ಅತ್ತಿಗೆ" ಎಂದ ಗೋವಿಂದ, ತನ್ನ ಕಣ್ಣುಗಳಲ್ಲೂ ತುಟಿಗಳಲ್ಲೂ ಜೀವ ತುಂಬಿಕೊಂಡು.

ಜಲಜೆ ಮುಗುಳುನಗೆಯ ಪ್ರತಿಕ್ರಿಯೆ ವ್ಯಕ್ತಪಡಿಸಿದಳು.

ಪಡಸಾಲೆಯಲ್ಲಿ ನಾಲ್ಕು ಬೆಂಚುಗಳಿದ್ದುವು, ಗೋಡೆಗಳಿಗೆ ತಾಗಿಕೊಂಡು. ಆ ದಿನದ ಮಟ್ಟಿಗೆ ಉಪಯೋಗಿಸಲೆಂದು ಹಳ್ಳಿಯ ಶಾಲೆಯಿಂದ ಗೋವಿಂದ ಅವುಗಳನ್ನು ಕೊಡಿಸಿದ್ದ.

ಗೋವಿಂದ ಸುತ್ತಲೂ ಒಮ್ಮೆ ನೋಡಿ, ಜಲಜೆಯ ಕಡೆಗೆ ಮುಗುಳುನಗೆ ಬೀರಿ, ಅಂದ:

"ಹುಂ. ತಿಂಡಿಗಳನ್ನಿಡೋಕೆ ಒಂದು ಕಪಾಟು; ನಾಲ್ಕು ಮೇಜುಗಳು, ಕುರ್ಚಿಗಳು. ಒಂದು ರೇಡಿಯೋ. ಹೊರಗೆ ಎರಡು ಬೆಂಚುಗಳು — ಇಷ್ಟು ಬೇಕು, ಅಲ್ವೆ ಗಜಾನನ? ಅಲ್ವೆ ಅತ್ತಿಗೆ?"

ಜಲಜೆ ಏನನ್ನೂ ಹೇಳಲಿಲ್ಲ.

ಗಜಾನನನೆಂದ:

"ಗೋವಿಂದ ದೇವರ ದಯೆ ಒಂದಿದ್ದರೆ ಎಲ್ಲಾ ಆಗುತ್ತೆ!"

"ಹೆಹ್ಹೆ!"

"ಸದ್ಯಃ ಪಟೇಲರು, ನಿಮ್ಮ ಭಾವೀ ಮಾವ, ತಂದೆಯವರು, ವಕೀಲರು ಇವರೆಲ್ಲಾ ಕೂತ್ಕೊಳ್ಳೋಕೆ ಕುರ್ಚಿಗಳು ಬೇಕಲ್ಲ."

"ಅದೇ? ತಂದರೆ ನಮ್ಮನೆಯಿಂದ ತರ್ಬೇಕು. ಪಟೇಲರ ಮನೆಯಿಂದ ತರ್ಬೇಕು... ಒಂದು ಹೇಳ್ಲಾ ಗಜಾನನ? ಆ ಕಡೇದೊಂದು ಬೆಂಚು ಎತ್ತಿ ಈ ಮೇಜಿನ ಹಿಂದೆ ಇಡು. ಇವತ್ತಿಗೆ ಸಾಕು. ಏನ್ಹೇಳೀಯಾ?"

"ಅಪ್ಪಣೆ! ಪಟೇಲರು ಬರಬೌದು, ಅಲ್ವೆ? ಅಥವಾ ಮಳೇಂತ......"

"ಬರ್‍ತಾರೆ ಕಣಯ್ಯ."

"ಅಂತೂ ನಮ್ಮ ಕ್ಲಬ್ಬಿನ ಉದ್ಘಾಟನೆ ಕತ್ತಲಾದ್ಮೇಲೆ ಅನ್ನಿ. ಅನ್ಯಾಯವಾಗಿ ತಿಂಡಿ ಎಲ್ಲ ತಣ್ಣಗಾಗ್ಹೋಯ್ತು."

ಜಲಜೆ ಗಂಡನೊಡನೆ ಅಂದಳು :

"ಒಂದು ಪ್ಲೇಟ್ ತಗೊಂಡ್ಬರ್ಲಾ? ಇವರು ರುಚಿ ನೋಡ್ತಾರೋ ಏನೋ."

ಗಜಾನನ ಧ್ವನಿ ಏರಿಸಿ ಹೆಂಡತಿಯನ್ನು ಛೇಡಿಸಿದ :

"ನೀನೇ ಕೇಳು. ನಾಚ್ಕೇನ ಮಾತಾಡೋಕೆ? ಗೋವಿಂದರಾವ್ ಯಾರು ಅಂದ್ಕೊಂಡೆ? ನಿನ್ನ ಕಾಮಾಕ್ಷಿ ಗಂಡ!"

ಎದೆಯ ಮೇಲಿಂದ ಸೆರಗನ್ನು ತುಸು ಬಿಗಿಯಾಗಿ ಹಿಂದಕ್ಕೆಳೆದುಕೊಂಡು ಜಲಜೆ ನಕ್ಕಳು.

"ತಿಂಡಿಪೋತಿ —ಕಾಮಾಕ್ಷಿ, ನಾನಲ್ಲ ಅತ್ತಿಗೆ! ಈಗ ನನಗೇನೂ ಬೇಡಿ. ಎಲ್ಲರೂ ಬರ್ಲಿ," ಎಂದ ಗೋವಿಂದ.

ಒಳಗೆ ಸೋರುವುದು ನಿಂತಿತು. ಹೊರಗಿನ ಮಳೆ ಕೂಡಾ.

"ಬುದ್ಧಿಯೋರು ಗೆದ್ಬುಟ್ರು," ಎಂದ ಜಗಲಿಯಲ್ಲಿ ಕುಳಿತಿದ್ದವರಲ್ಲಿ ಒಬ್ಬ.

ಹೊರಗೆ ಹೊಲಗಳಲ್ಲಿ ನಿಂತಿದ್ದ ಕೆಂಪು ನೀರು ಇಳಿಯತೊಡಗಿತು. ಏರಿಗಳು ಮತ್ತೆ ಮುಖ ತೋರಿಸಿದುವು.

ಸ್ವಲ್ಪ ಹೊತ್ತಿನಲ್ಲೆ ಕೃಷ್ಣೇಗೌಡ ಇಬ್ಬರು ಜತೆಗಾರರೊಡನೆ ಬಂದ.

ಅವರ ಹಿಂದಿನಿಂದ ಬೀರ ಬಂದು ತಲಪಿದ. ಅವನ ಜತೆಯಲ್ಲಿ ಹಾಲಿನ ಚೆಂಬು ಹೊತ್ತಿದ್ದ ಲಕ್ಕನಿದ್ದ.

"ಅಯ್ನೋರು ಯೋಳಿದ್ರು. ನಗರದಿಂದ ಬಂದವ್ರಲ್ಲ ಅವ್ರೆಲ್ಲಾ ರಸ್ಟು ಬಿಟ್ಕೊಂಡು ಬತ್ತವರಂತೆ," ಎಂದು ಬೀರ ಗೋವಿಂದನಿಗೆ ಸಂದೇಶ ತಲಪಿಸಿದ.

ಶಾಮೇಗೌಡರು ಬಂದಿಲ್ಲವಲ್ಲ ಎಂದು ಗಜಾನನನಿಗೆ ವಿವಂಚನೆಯಾಯಿತು.

ಅವನು ಗೊಣಗುತ್ತಿದ್ದುದನ್ನು ನೋಡಿ, "ಬರದಿದ್ರೆ ಅಷ್ಟೇ ಹೋಯ್ತು. ಕೃಷ್ಣೇ ಗೌಡರಿದಾರೆ. ಅವರ ಕೈಲಿ ಮಾಡಿಸ್ಬಿಡೋಣ," ಎಂದ ಗೋವಿಂದ.

"ಛೆ! ಛೆ! ಶಾಮಣ್ಣ ತಾನೇ? ಬತ್ತಾರೆ, ಬತ್ತಾರೆ," ಎಂದು ಕೃಷ್ಣೇಗೌಡ ನುಡಿದ, ತಾನೂ ಜಲಜೆಯನ್ನು ಬೆರಗಾಗಿ ನೋಡುತ್ತ...

ಒಳಗೆ ಹೋಗೆಂದು ಗಜಾನನ ಸನ್ನೆ ಮಾಡಿದೊಡನೆ, ಮುತ್ತಿಡುವ ನೋಟಗಳು ಬಹಳವಾದುವೆಂದು ಅದೇ ಆಗ ಮನವರಿಕೆಯಾದವಳಂತೆ, ಜಲಜೆ ಅಡುಗೆ ಮನೆಯತ್ತ ಸರಿದಳು.

ಪಿಸುದನಿಯಲ್ಲಿ ಗಜಾನನ ಗೋವಿಂದನನ್ನು ಕೇಳಿದ :

"ಹಾರದ್ದೊಂದು ಮರೆತೇ ಹೋಯಿತಲ್ಲ ಗೋವಿಂದರಾವ್."

"ನಿಂಬೆಹಣ್ಣಿದೆ ತಾನೆ?"

"ಇದೆ."

"ಒಂದನ್ನ ವಿಶ್ವಾಸದಿಂದ ಶಾಮೇಗೌಡರಿಗೆ, ಕೊಡು. ಸಂತೋಷಪಡ್ತಾರೆ. ಸಾಕು."

"ಹ್ಞ."

ಬೀರ ಒಳಕ್ಕೆ ತಲೆ ಹಾಕಿ, "ಪಟೇಲರು ಬತ್ರಾ ಅವರೆ," ಅಂದ.

ಗೋವಿಂದನೂ ಗಜಾನನೂ ಅಂಗಳಕ್ಕಿಳಿದರು. ಹಳೆಯ ಕೊಡೆಯನ್ನು ಮಡಚಿ ಕಂಕುಳಲ್ಲಿಟ್ಟುಕೊಂಡು ಇಬ್ಬರು ಚಾಕರರೊಡನೆ ಬಂದ ಶಾಮೇಗೌಡರನ್ನು ಅವರು ಇದಿರ್ಗೊಂಡರು.

"ತಡವಾಯ್ತೇನಪ್ಪ ?" ಎನ್ನುತ್ತ ಗೌಡರು ಒಳ ಹೊಕ್ಕರು.

"ಏನಿಲ್ಲ, ಏನಿಲ್ಲ."

"ಅಯ್ನೋರು ಬಂದಿಲ್ವ ಇನ್ನೂ ?"

"ಹೊರಟಿದಾರೆ."

ಒಂದ ಬೆಂಚನ್ನಾಗಲೇ ಮೇಜಿನ ಹಿಂದೆ ಇರಿಸಿದ್ದ ಗಜಾನನ ಗೌಡರನ್ನು ಅಲ್ಲಿಗೆ ಕರೆದೊಯ್ದ.

ಶ್ರೀನಿವಾಸಯ್ಯ ವಿಷ್ಣುಮೂರ್ತಿಯವರನ್ನೂ ಮೋಹನರಾಯರನ್ನೂ ಕರೆದುಕೊಂಡು ಬಂದಾಗ ಎಲ್ಲರ ದೃಷ್ಟಿಗಳೂ ಅತ್ತ ಹೊರಳಿದುವು.

ವಿಷ್ಣುಮೂರ್ತಿ ಗೌಡರಿಗೆ ವಂದಿಸಿ, ಮೋಹನರಾಯರ ಪರಿಚಯ ಮಾಡಿಕೊಟ್ಟರು.

"ನಗರದ ಸುಪ್ರಸಿದ್ಧ ಲಾಯರು ಇವರು. ನೋಡಿ ಮೋಹನರಾಯರೇ, ಇವರೇ ಪಟೇಲ್ ಶಾಮೇಗೌಡರು, ದೇವರಂಥಾ ಮನುಷ್ಯ."

ಗೋವಿಂದ ವಕ್ರನೋಟದಿಂದ ವಿಷ್ಣುಮೂರ್ತಿಯವರನ್ನೊಮ್ಮೆ ನೋಡಿ, ಗಜಾನನನ ಕಡೆ ತಿರುಗಿ, "ತಿಂಡಿತೀರ್ಥ ಸರಬರಾಜಾಗಲಿ," ಎಂದ.

ಗೌಡರು ಈ ಲಾಯರಿಗೂ ಮುನಿಯನಿಗೂ ಸಂಬಂಧವಿರದಷ್ಟೆ ಎಂದು ಕ್ಷಣಕಾಲ ಚಿಂತಿಸಿದರು.

ಬಳಿಕ ಶ್ರೀನಿವಾಸಯ್ಯನ ಕಡೆ ತಿರುಗಿ, "ಲಾಯರು ನಿಮ್ಮಲ್ಗೆ ಬಂದಿದ್ರೆ ಅಯ್ನೋರೆ ?" ಎಂದು ಕೇಳಿದರು.

ಶಾಮೇಗೌಡರ ಮಗ್ಗುಲಲ್ಲೆ ಕುಳಿತಿದ್ದ ಶ್ರೀನಿವಾಸಯ್ಯ ಧ್ವನಿ ತಗ್ಗಿಸಿ, "ಬಂದು ಹೇಳೋಣಾಂತಿದ್ದೆ ಶಾಮಣ್ಣ. ಒಂದಲ್ಲ ಒಂದು ಕೆಲ್ಸ. ಆಗ್ಲೇ ಇಲ್ಲ. ಇವರು ಇನ್ನು ನಮ್ಮ ಬೀಗರು. ಇವತ್ತು ನಿಶ್ಚಿತಾರ್ಥ ಆಯ್ತು. ಈ ಮೋಹನರಾಯರ ಮಗಳನ್ನ ನಮ್ಮ ಪದ್ಮನಿಗೆ ತರೋದೂಂತ ಮಾಡಿದೆ," ಎಂದರು.

ಶಾಮೇಗೌಡರು ಕಣ್ಣರಳಿಸಿ, ಗಟ್ಟಿಯಾಗಿ, "ಹಾಗೋ !" ಎಂದುದಷ್ಟೇ ಇತರರಿಗೆ ಕೇಳಿಸಿತು.

"ಈ ವಿಷ್ಣುಮೂರ್ತಿಗಳ ಹಿರೇಮಗಳು ನಮ್ಮ ಗೋವಿಂದನಿಗೇಂತ ಗೊತ್ತಾಗಿದೆ."

"ಒಳ್ಳೇ ಕೆಲಸ ಮಾಡಿದ್ರಿ."

ವಿಷ್ಣುಮೂರ್ತಿ ಅವರತ್ತ ತಲೆಬಾಗಿಸಿ, "ಗೌಡರ ಮನೇದು ಒಂದೆರಡು ಊಟ ನಮಗೆ ಬಾಕಿ ಇದೆ ಅನ್ನುತ್ತೆ." ಅಂದರು.

ನಿಮಿಷ ಮೌನವಾಗಿದ್ದು, ಒಮ್ಮೆಲೆ ಗೌಡರೆಂದರು :

"ನಮ್ಮ ಹುಡುಗಂದಿನ್ನೂ ಡಾಕ್ಟರ್ ಪರೀಕ್ಷೆ ಮುಗಿದಿಲ್ಲ. ಮಗಳದು ಮಾತ್ರ ಈ ವರ್ಷವೇ ನಡೀತದೆ. ಅಳಿಯನಾಗೋ ಹುಡುಗ ಲಾಯರ್ ಪರೀಕ್ಷೆಗೆ ಕಟ್ಟಿದಾನೆ."

"ಸಂತೋಷ ಶಾಮಣ್ಣ," ಎಂದರು ಶ್ರೀನಿವಾಸಯ್ಯ.

" ಲಾಯರ್ ಮೋಹನರಾಯರೇ, ನಿಮ್ಮ ಜಾತಿ ಹುಡುಗನನ್ನೇ ಗೌಡರು ಆರಿಸಿದಾರೆ !"
— ವಿಷ್ಣುಮೂರ್ತಿ ಅಂದರು.

ಗೌಡರ ಬರಿಯ ಪಾದಕ್ಕೆ ಮುಳ್ಳು ನೆಟ್ಟಹಾಗಾಯಿತು. ಮುಗುಳುನಗಲು ಯತ್ನಿಸಿ ಅವರು ವಿಫಲರಾದರು.

ಶ್ರೀನಿವಾಸಯ್ಯ ತುಟಿಪಿಟ್ಟೆನ್ನಲಿಲ್ಲ.

ಆಭಾಸಕರವಾದುದನ್ನು ತಾವು ಆಡಿದೆವೆಂಬ ಪರಿವೆಯೇ ಇಲ್ಲದೆ ವಿಷ್ಣುಮೂರ್ತಿ, ಹೊರಗೆ ಮತ್ತೆ ಯಾರೋ ಬಂದಂತಾಯಿತಲ್ಲ — ಎಂದು, ಆ ಕಡೆಗೆ ನೋಡಿದರು.

" ಬಾ ವೆಂಕಟಪ್ಪ, ಒಳಗ್ಬಾ," ಎಂದರು ಗೌಡರು, ಬಂದವನು ತಮ್ಮ ದೃಷ್ಟಿಗೆ ಬಿದ್ದೊಡನೆ.

ಆತ ಒಳಹೊಕ್ಕು ಖಾಲಿಯಾಗಿದ್ದ ಒಂದು ಕಡೆ ಕುಳಿತುಕೊಂಡ.

......ತಿಂಡಿ ತಣ್ಣಗಾಗಿದ್ದರೂ ಕಾಫಿ ಬಿಸಿಯಾಗಿತ್ತು.

ಮುಚ್ಚಂಜೆಯಾಗುತ್ತ ಬಂದಿತ್ತು. ಮಳೆ ಪೂರ್ತಿ ನಿಂತಿತೆಂದು ಸೂರ್ಯ ಒಂದು ಕ್ಷಣ ನಕ್ಕಂತಾಯಿತು.

ಗಜಾನನ ನಿಂಬೆಹಣ್ಣನ್ನು ಗೌಡರ ಕೈಯಲ್ಲಿಟ್ಟು ವಂದಿಸಿದ. ತಾಂಬೂಲ ಬಂತು.

" ಏಳಬಹುದಲ್ಲ ಇನ್ನು," ಎಂದು ಶಾಮೇಗೌಡರು ಹೇಳುತ್ತಿದ್ದಂತೆ, ಗೋವಿಂದ ಎದ್ದು ನಿಂತು, " ನನ್ನ ಮಿತ್ರರಾದ ಗಜಾನನರಾಯರ ವಿಘ್ನೇಶ್ವರ ಭವನ ಕಾಫೀ ಕ್ಲಬ್ ಶುರುವಾದಂತಾಯ್ತು. ಅದನ್ನು ಉದ್ಘಾಟಿಸಿದ ಕಣಿವೇಹಳ್ಳಿಯ ಪಟೇಲರಾದ ಶ್ರೀಮಾನ್ ಶಾಮೇಗೌಡರಿಗೂ ಅಧ್ಯಕ್ಷತೆ ವಹಿಸಿದ ನಗರದ ಗಣ್ಯ ವಕೀಲರಾದ ಶ್ರೀಮಾನ್ ಮೋಹನ ರಾಯರಿಗೂ ಆಮಂತ್ರಣವನ್ನು ಅಂಗೀಕರಿಸಿ ಇಲ್ಲಿತನಕ ದಯಮಾಡಿರುವ ತಮ್ಮೆಲ್ಲರಿಗೂ ಅನಂತಾನಂತ ವಂದನೆಗಳು," ಎಂದ.

ಕೊನೆಗೂ ಈ ಗೋವಿಂದ ಬಿಡಲಿಲ್ಲ — ಎನಿಸಿತು ಶಾಮೇಗೌಡರಿಗೆ.

......ಸ್ವಲ್ಪ ಹೊತ್ತಿನಲ್ಲೇ ವಿಘ್ನೇಶ್ವರ ಭವನ ಬರಿದಾಯಿತು.

ಸಮಾರಂಭ ಮುಗಿಯುವವೇಳೆಗೆ ಸರಿಯಾಗಿ ಎದ್ದು ಅಳತೊಡಗಿದ ಮಗುವನ್ನು ಜಲಜೆ ಒಳಗೆ ರಮಿಸಿದಳು.

" ನಾನು ಬರ್‍ತೀನಿ ಗಜಾನನ," ಎಂದು ಹೇಳಿ ಗೋವಿಂದ ಹೊರಟು ಹೋದ.

......ಹೊರಗೆ ಚೆನ್ನಾಗಿ ಕತ್ತಲಾದಮೇಲೆ ಗೋಪಾಲ ವಿಘ್ನೇಶ್ವರ ಭವನಕ್ಕೆ ಬಂದ.

" ಅಂತೂ ಬಂದಿರಲ್ಲ, ಗೋಪಾಲರಾವ್. ಕೂತ್ಕೊಳ್ಳಿ, ಅಲ್ಪೋಪಹಾರ ಸ್ವೀಕರಿಸಿ," ಎಂದು ನುಡಿದು ಗಜಾನನ ಒಳಕ್ಕೆ ಹೋದ.

......ಗೋಪಾಲ ಒಂದೆರಡು ಚಮಚ ತಿಂಡಿ ಬಾಯಿಗಿರಿಸಿದ್ದನೋ ಇಲ್ಲವೋ, ಬೀರ ಓಡಿಯೋಡಿ ಬಂದ.

ಏದುಸಿರು ಬಿಡುತ್ತ ಗೋಪಾಲನೊಡನೆ ಅವನೆಂದ.

" ತಕ್ಷಣ ಬರಬೈಕಂತೆ. ಚಿಕ್ಕಮ್ಮಾವ್ರು ಎಂಗೆಂಗೋ ಆಡ್ತಾ ಅವ್ರೆ. ತಕ್ಷಣ ಬರಬೈಕಂತೆ."

## ೨೨

ವಿಘ್ನೇಶ್ವರ ಭವನದಿಂದ ಹೊರಬಿದ್ದ ಶಾಮೇಗೌಡರು ಮನೆಯ ದಾರಿ ಹಿಡಿದರು. ಸೇವಕ ಕರಿಯ ಅವರನ್ನು ಹಿಂಬಾಲಿಸಿದ.

ಸ್ವಲ್ಪ ದೂರದ ತನಕ ಖಿನ್ನತೆ ಅವರ ಮನಸನ್ನು ಆವರಿಸಿತು. ಯಾಕೆ ಬೇಸರ? ಅವರಿಗೆ ತಿಳಿಯದು.

ಮನಸ್ಸು ಸುಮ್ಮನೆ ಚಡಪಡಿಸಿತು. ಅದು ಸಿಕ್ಕುಗಟ್ಟಿತು. ಗೌಡರು ನಿಧಾನವಾಗಿ ಯೋಚಿಸತೊಡಗಿ ಆ ಸಿಕ್ಕನ್ನು ಬಿಡಿಸಲು ಯತ್ನಿಸಿದರು.

ಹೋಟೆಲಿನ ಪರಕೀಯ ವಾತಾವರಣದಲ್ಲಿ ಅನಿರೀಕ್ಷಿತವಾಗಿ ಶ್ರೀನಿವಾಸಯ್ಯ ತಮ್ಮ ಮಕ್ಕಳ ಮದುವೆಯ ವಿಷಯ ಹೇಳಿದರಲ್ಲ? ಹಿಂದೆಯಾದರೆ ಹೀಗಾಗುವುದು ಸಾಧ್ಯವಿತ್ತೆ? ತಮ್ಮ ಕಿವಿಗೆ ಒಂದು ಮಾತು ಹಾಕದೆ ಎಂದೂ ಮುಂದಕ್ಕೆ ಹೆಜ್ಜೆ ಇಟ್ಟವರಲ್ಲ ಅವರು.

ಹಾಗೆ ನೋಡಿದರೆ ತಾವು ಮಾಡುತ್ತಿರುವುದೇನು? ಮಗಳಿಗೆ ವರ ಗೊತ್ತಾಗಿದೆ. ಆ ವಿಷಯ ಮೊದಲು ತಿಳಿಸಿದೆನೆ ಅವರಿಗೆ?

ತಿಳಿಸಬಹುದಾಗಿತ್ತು. ಹಿಂದೆ ಮಾಡುತ್ತಿದ್ದ ಹಾಗೆ ಅಲ್ಲಿಗೆ ಹೋಗಿ ಹರಟೆ ಹೊಡೆದು ಬರಬಹುದಾಗಿತ್ತು.

ಆದರೆ ಆ ರೀತಿ ನಡೆಯುವುದರಿಂದ ತಮ್ಮ ದೌರ್ಬಲ್ಯವನ್ನು ಸಾರಿದಂತಾಗುವುದಲ್ಲ?

ಗೌಡರಿಗೆನಿಸಿತು: ಊಹೂಂ, ಆ ದಿನಗಳು ಕಳೆದೇ ಹೋದುವು. ಇನ್ನೆಂದೂ ಬರುವಂತಿಲ್ಲ.

ಅವರ ದಾರಿ ಬೇರೆ, ತಮ್ಮ ದಾರಿ ಬೇರೆ.

ಈ ಹೋಟೆಲು ಹಳ್ಳಿಗೆ ಬಂದದ್ದು ಒಳಿತಾಗಲಿಲ್ಲವೇನೊ. ಹಳ್ಳಿಯವರಿಗೆ ಇದು ಒಪ್ಪಿಗೆಯಿಲ್ಲ ಎಂದು ತಿಳಿಸಿ ಬಿಡಬಹುದಾಗಿತ್ತು. ಆ ಗಣೇಶ ಭವನದ ಯಜಮಾನ ಅಸಾಧಾರಣ ಮನುಷ್ಯ. ಒಳ್ಳೇ ನಾಜೂಕಯ್ಯ. ತನ್ನ ಹುಡುಗನಿಗೆ ಹೋಟೆಲೂ ಮಾಡಿಕೊಟ್ಟ; ಮಗಳಿಗೊಬ್ಬ ಗಂಡನನ್ನೂ ದೊರಕಿಸಿಕೊಂಡ.

ಗೋವಿಂದಪ್ಪನನ್ನು ಇನ್ನು ಹಿಡಿಯುವವರೇ ಇಲ್ಲ. ನಗರ ಅನ್ನೋದು ಈಗ ಅವನಿಗೆ ನಿಜವಾಗಿಯೂ ಮಾವನ ಮನೆಯೇ. ಆ ಲಾಯರಿ. ಮನುಷ್ಯ ತುಟಿ ಎರಡು ಮಾಡಲಿಲ್ಲ. ಮಾತನಾಡಿದರೆ ಫೀಸು ಕೊಡಬೇಕೇನೊ! ಅಂತೂ ಮುನಿಯನ ಕೇಸು ವಾದಿಸಿ ಲಾಯರಿ ಅವನಲ್ಲವೆಂದಾಯ್ತು. ಹಾಗೇನಾದರೂ ಇದ್ದಿದ್ದರೆ ಹೇಳದಿರುತ್ತಿದ್ದನೆ ಗೋವಿಂದಪ್ಪ? ಇನ್ನು ಈತ ಹಳ್ಳಿಯಲ್ಲಿ ಏನಾದರೊಂದು ಕಿತಾಪತಿ ಎಬ್ಬಿಸಿ ಈ ಲಾಯರಿಗೆ ಕೇಸು ಒದಗಿಸುವ ದಳ್ಳಾಳಿಯಾಗುತ್ತಾನೆ.

ಇರಲಿ. ಸುಬ್ಬಿಯ ಮದುವೆಯಾಗಿ ತಮ್ಮ ಅಳಿಯ ವಕೀಲಿ ಪರೀಕ್ಷೆ ಪ್ಯಾಸ್‌ಮಾಡಿ ಕಪ್ಪು ಕೋಟು ಹಾಕಿಕೊಳ್ಳತೊಡಗಿದಮೇಲೆ ಹೀಗೆಯೇ ಇದ್ದೀತೆ ಪರಿಸ್ಥಿತಿ?......

......ಸ್ವಲ್ಪ ದೂರ ಏನೂ ಯೋಚಿಸದೆ ಗೌಡರು ನಡೆದರು.

ಕತ್ತಲು. ಹುಷಾರಾಗಿ ಕಾಲಿಡಬೇಕು. ಕೊಚ್ಚೆ, ಕೆಸರು.

ಎಲ್ಲೆಡೆಗಳಲ್ಲೂ ಕಪ್ಪೆಗಳ ಸಹಸ್ರ ಕಂಠಗಳಿಂದ ಒಂದೇ ಧ್ವನಿ ಹೊರಡುತ್ತಿತ್ತು:

ವಟರ ವಟರ ವಟರ. ಗೌಡರಿಗೆ ಯಾವಾಗೂ ಆ ಸ್ವರ ಇಷ್ಟ. ಭೂಮಿಯ ಗರ್ಭ ಧಾರಣೆಗೆ ಅದೊಂದು ಮಂಗಳವಾದ್ಯ.

ಇನ್ನು ಮಳೆಗಾಲ. ದುಡಿಮೆಯ ಸಡಗರ.

ಹೇಗೂ ಸುಗ್ಗಿಯ ತನಕ ಕಾಯುವ ಮಾತಿಲ್ಲ. ಬಿತ್ತನೆ ಮುಗಿದಮೇಲೆ ಆಗಲಿ— ಎಂದು ಅವರೂ ಒಪ್ಪಿರುವರಲ್ಲ. ಆ ವೇಳೆಗೆ ಒಂದು ಹದಿನೈದು ದಿವಸವಾದರೂ ರಜಾ ಪಡೆದು ಬರುವ ಹಾಗೆ ರಂಗಣ್ಣನಿಗೆ ಹೇಳಿ ಕಳುಹಿಸಬೇಕು — ಜವಳಿ ಖರೀದಿಗಾಗಿ ತಾವೂ ಒಮ್ಮೆ ನಗರಕ್ಕೆ ಹೋಗಬೇಕು. ಅಳಿಯನಿಗಾಗಿ ಸೂಟು ಹೊಲಿಸಬೇಕು ......

ಅಯ್ಯನವರ ಮಕ್ಕಳ ಮದುವೆ ನಗರದಲ್ಲೇ ನಡೆದೀತು.

ತಾವು ನಗರದಿಂದ ಬ್ಯಾಂಡಿನವರನ್ನು ಕರೆಸಬೇಕು. ಅದ್ದೂರಿಯಿಂದ ನಡೆಯಬೇಕು ಸುಭದ್ರೆಯ ಮದುವೆ.

......ಯೋಚನೆಗಳು ತಿಳಿಯಾಗಿ ಪ್ರತಿಯೊಂದೂ ಸ್ಪಷ್ಟವಾದಂತೆ ಶಾಮೇಗೌಡರ ಮನಸ್ಸನ್ನು ಆವರಿಸಿದ್ದ ಖಿನ್ನತೆ ಕ್ರಮಶಃ ಮಾಯವಾಯಿತು. ದೂರದಲ್ಲಿ ಮನೆಯ ಬೆಳಕು ಕಾಣಿಸಿದಾಗ, ಅವರೊಳಗಡೆ ಸಮಾಧಾನ ಸಂಪೂರ್ಣವಾಗಿ ಮನೆಮಾಡಿತ್ತು......

......"ತಕ್ಷಣ ಬರಬೈಕಂತೆ. ಚಿಕ್ಕಮ್ಮಾವ್ರು ಎಂಗೇಗೋ ಆಡ್ತಾ ಅವ್ರೆ. ತಕ್ಷಣ ಬರಬೈಕಂತೆ," ಬೀರ ತಂದ ಸಂದೇಶ ಕೇಳಿದೊಡನೆ ಗೋಪಾಲ ಗಡಬಡಿಸಿ ಎದ್ದ.

"ನಾನು ಬರ್ತೀನಿ," ಎಂದ. ಕಾಫಿಯೊಡನೆ ಬಂದ ಗಜಾನನನನ್ನು ನೋಡಿ.

ಬೀರ ಹೇಳಿದುದು ಗಜಾನನನಿಗೂ ಕೇಳಿಸಿತ್ತು.

"ಕಾಫಿ ಕುಡಿದ್ಬಿಟ್ಟು ಹೋಗಿ, ಗೋಪಾಲರಾವ್," ಎಂದ ಆತ.

ಹೇಗೂ ಪಾನೀಯ ತಣ್ಣಗಿತ್ತು. ಒಂದೆರಡು ಗುಟುಕು ಗೋಪಾಲ ಕುಡಿದ.

ಒಳಬಾಗಿಲಲ್ಲಿದ್ದ ಜಲಜೆಗೂ ಹೊರಗಿನ ಮಾತೆಲ್ಲ ಕೇಳಿಸಿತ್ತು.

"ಏನಾಯ್ತೋ ಏನೋ, ಪಾಪ," ಎಂದಳಾಕೆ.

"ಕತ್ತಲಾಯ್ತು. ದಾರೀಲೆಲ್ಲ ನೀರು," ಎಂದ ಗಜಾನನ.

ಬೀರನೆಂದ :

"ಲಾಟೀನು ಕಳಿಸ್ಕೊಟ್ಟವರೆ."

ಗಜಾನನ ತಾನೇ ಅದನ್ನು ಹಚ್ಚಿದ.

ಗೋಪಾಲ ಹೊರಕ್ಕೆ ಹೆಜ್ಜೆ ಇಡುತ್ತಿದ್ದಂತೆ, "ನಾವು ಬರೋ ಅಗತ್ಯ ಇದ್ದರೆ ಹೇಳಿ ಕಳಿಸಿ, ಗೋಪಾಲರಾವ್. ಸ್ವಲ್ಪ ಹೊತ್ನಲ್ಲೇ ಬಂದ್ಬಿಡ್ತೀವಿ," ಎಂದ ಗಜಾನನ.

ಏನನ್ನೂ ಹೇಳಲಿಲ್ಲ ಗೋಪಾಲ.

ಬೀರ ವೇಗವಾಗಿ ಮುಂದೆ ನಡೆದ. ಗೋಪಾಲ ನೀಳ ಹೆಜ್ಜೆಗಳನ್ನಿಡುತ್ತ ಅವನನ್ನು ಹಿಂಬಾಲಿಸಿದ.

ಕಪ್ಪೆಗಳ ಹಾಡುಗಾರಿಕೆ ನಡೆದಿತ್ತು. ತನ್ನ ಹೆಂಡತಿ ಏನೋ ಅಪಾಯಕ್ಕೀಡಾಗಿದ್ದಾಳೆ ಎಂದು ಗೋಪಾಲ ವ್ಯಥಿತನಾಗಿದ್ದ ಆ ಘಳಿಗೆಯಲ್ಲಿ ಕಪ್ಪೆಗಳ ಸಂಗೀತ ಕರ್ಕಶವಾಗಿ ಆತನಿಗೆ ಕೇಳಿಸಿತು.

ಹೋಟೆಲಿಗೆ ಬರುವ ಮನಸ್ಸಿರಲಿಲ್ಲ ಅವನಿಗೆ.

"ನೀನು ಹೋಗೊಲ್ವೇನೊ ?" ಎಂದು ದೊಡ್ಡಮ್ಮ ಕೇಳಿದ್ದರು.

"ಮಳೆ," ಎಂದು ಹೇಳಿ ಗೋಪಾಲ ನುಣುಚಿಕೊಂಡಿದ್ದ.

ಆದರೆ ಶ್ರೀನಿವಾಸಯ್ಯ, ಅತಿಥಿಗಳೊಡನೆ ಉದ್ಘಾಟನೆಯ ಕಾರ್ಯಕ್ರಮ ಮುಗಿಸಿ ಹಿಂತಿರುಗಿದಾಗ, ಗೋಪಾಲನ ಕೋಣೆಯಿಂದ ಮಾತು ಕೇಳಿಸಿತೆಂದು ಅಲ್ಲಿತನಕ ಬಂದು, ಮಗನನ್ನು ಕಂಡು, "ಇದೇನೊ ಗೋಪೂ ? ಹೋಗ್ಬರೋದಿಲ್ವೇನೊ ? ಏಳು ನೀನೇನು ಹೆಣ್ಣೆ ಹೀಗೆ ನಾಚೋದಕ್ಕೆ ? ಹೋಗ್ಬಿಟ್ಟು ಬಾ," ಎಂದಿದ್ದರು.

ಅದಕ್ಕೂ ಮೊದಲೇ, "ನನ್ನಾಣೆ. ಆ ಹೋಟ್ಲಿನ ಹತ್ರಕ್ಕೆ ಹೋಗ್ಕೂಡದು ನೀವು," ಎಂದು ಭಾಗೀರಥಿ ಗಂಡನಿಗೆ ಆಣೆ ಹಾಕಿದ್ದಳು.

ಈಗ ತಂದೆ ಹೀಗೆ ಅಂದರೆಂದು ಅನಿವಾರ್ಯವಾಗಿ ಗೋಪಾಲ ಎದ್ದ. ಬೇಗನೆ ಬಂದು ಬಿಟ್ಟರಾಯಿತು ಎಂದುಕೊಂಡ. ಹೆಂಡತಿಯ ಕಡೆ ತಿರುಗಿ ನೋಡದೆ ಹೊರಟು ಬಿಟ್ಟ.

ಅಲ್ಲಿಗೇ ಕೆಲವೇ ನಿಮಿಷಗಳಲ್ಲಿ ಬೀರ ತಂದ ಸಂದೇಶ:

"ಎಂಗೆಂಗೋ ಆಡ್ತಾ ಅವರೆ."

ಏನಾಗಿರಬಹುದು ಭಾಗೀರಥಿಗೆ ? ಏನಾಗಿರಬಹುದು ?

ಅಂಥದೇನಿದ್ದರೂ ದೊಡ್ಡಮ್ಮ ಇಲ್ಲವೆ ? ಔಷಧಿ ಕೊಡುವುದಿಲ್ಲವೆ ?

ಗೋಪಾಲನೆಂದುಕೊಂಡ: ಅವಳು ಆಣೆ ಇಟ್ಟ ಮೇಲೂ ಹೊರಟುಬಂದದ್ದು ತಪ್ಪಾಯಿತು. ಈ ಗಜಾನನನಿಗೂ ತನಗೂ ಇರುವ ಸ್ನೇಹ ಅಷ್ಟರಲ್ಲೇ ಇದೆ. ಈತ ದೂರದ ಸಂಬಂಧವಾದರೆ ಗೋವಿಂದನಿಗೆ. ತನಗಲ್ಲ......

ಬೀರನೂ ಗೋಪಾಲನೂ ಬೇಗ ಬೇಗನೆ ನಡೆದು, ದಾರಿ ನೇರವಾಗಿದ್ದು ಸರಿಯಾಗಿದ್ದ ಕಡೆ ಒಮ್ಮೊಮ್ಮೆ ಓಡಿ, ಮನೆಯನ್ನು ಸಮೀಪಿಸಿದರು.

ಪಡಸಾಲೆಯಲ್ಲಿ ಥಾಳಾಗಿ ಉರಿಯುತ್ತಿದ್ದ ದೀಪ ದೂರದಿಂದಲೇ ಗೋಪಾಲನಿಗೆ ಕಾಣಿಸಿತು.

ಅಂಗಳಕ್ಕೆ ಕಾಲಿರಿಸಿದಾಗ, ಪಡಸಾಲೆಯ ಒಂದು ಮೂಲೆಯಲ್ಲಿ ತಲೆಗೂದಲು ಕೆದರಿ ಕುಳಿತಿದ್ದ ಹೆಂಡತಿಯನ್ನೂ ಆಕೆಗೆ ತುಸು ದೂರದಲ್ಲಿದ್ದ ದೊಡ್ಡಮ್ಮ ಹಾಗೂ ತಂದೆಯನ್ನೂ ಗೋಪಾಲ ಕಂಡ.

ಜಗಲಿಯ ಒಂದು ಕೊನೆಯಲ್ಲಿ ಗುಸುಗುಸು ಮಾತನಾಡುತ್ತ ನಿಂತಿದ್ದ ವಿಷ್ಣುಮೂರ್ತಿ — ಮೋಹನರಾಯರಾಗಲೀ, ಹೊರಗಿನ ಕೊಠಡಿಯಲ್ಲಿ ಅಳುತ್ತಿದ್ದ ಶ್ರೀಪಾದನನ್ನು ರಮಿಸುತ್ತಲಿದ್ದ ಗೋವಿಂದ ಮತ್ತು ಕುರ್ಚಿಯಮೇಲೆ ಮುದುಡಿ ಕುಳಿತಿದ್ದ ಮೋಹನ ರಾಯರ ಮಗನಾಗಲೀ, ಗೋಪಾಲನಿಗೆ ಕಾಣಿಸಲಿಲ್ಲ.

ಮೊಮ್ಮಗ ಬಂದೊಡನೆ ದೊಡ್ಡಮ್ಮ ಅಂದರು:

"ನೋಡು ಭಾಗೀ, ನಿನ್ನ ಗಂಡ ಬಂದಿದಾನೆ."

ಏನೊಂದೂ ಅರ್ಥವಾಗದೆ, ತೆರೆದ ಕಣ್ಣುಗಳನ್ನು ಮುಚ್ಚದೆಯೇ ಗೋಪಾಲ ನಿಂತ.

ಸಾಸಿವೆ ಕಾಳು ಬಿದ್ದರೂ ಸಪ್ಪಳವಾಗುವ ಮೌನವಿತ್ತು ಮನೆಯಲ್ಲಿ ಆ ಒಂದು ಕ್ಷಣ.

ಎದುರು ಗೋಡೆಯ ಕಡೆ ನೆಟ್ಟಿದ್ದ ಭಾಗೀರಥಿಯ ಬಿರುನೋಟ ಬದಲಾಗಲಿಲ್ಲ. ಮುಖ ಭಯಾನಕವಾಗಿತ್ತು. ಸ್ನಾಯುಗಳು ಗಂಟಿಕ್ಕಿಕೊಂಡು ಅದು ವಿಕಾರವಾಗಿತ್ತು. ಆಕೆ

ಗೋಪಾಲನ ಕಡೆ ತಿರುಗಿ ನೋಡಲಿಲ್ಲ. ಮಾತನಾಡಲೂ ಇಲ್ಲ.

ನಿಟ್ಟುಸಿರು ಬಿಟ್ಟು ದೊಡ್ಡಮ್ಮ ಮೊಮ್ಮಗನ ಕಡೆ ಹೊರಳಿ ಅಂದರು :

"ನಿನ್ನ ಹೆಂಡತೀನ ಮಾತಾಡ್ಸು, ಗೋಪೂ."

ಗೊಗ್ಗರ ಧ್ವನಿಯಲ್ಲಿ ಗೋಪಾಲನೆಂದ :

"ಏನಾಗಿದೆಯೆ ? ಏನಾಗಿದೆಯೆ ನಿನಗೆ ?"

ಈಗ ಭಾಗೀರಥಿಯ ಅರಳಿದ ಕಣ್ಣುಗಳು ತಿವಿಯುವ ನೋಟ ಬೀರುತ್ತ ಗಂಡನನ್ನು ನೋಡಿದುವು.

ಅವಳು ಅವುಡುಗಚ್ಚಿ ಬಾಯಿ ತೆರೆದಳು.

ಆಕ್ರೋಶದಂತಿತ್ತು, ಅದರಿಂದ ಹೊರಟ ಸ್ವರ.

"ಗಂಡ ಅಂತೆ ಗಂಡ ! ಗಂಡಸಂತೆ ಗಂಡಸು ! ಹೋಗೋ ಆಚೆಗೆ ! ಹೋಗೋ ! ನನ್ನ ಗಂಡನಾದೋನು ಅವರ ಪಕ್ಷ ಸೇರ್ಕ್ಕೋತಾನೆಯೆ ? ಬಾಯಿಗೆ ಬೆಟ್ಟಿಟ್ರೆ ಚೀಪೋಕ್ಬರುತ್ತಾ ನಿಂಗೆ ! ಮೈಮುಟ್ಬೇಡ ಅಂದೆ ! ಈ ಮೈ ನಿನ್ದಲ್ಲ !"

ಗೋಪಾಲನ ಕಂಠ ಉಮ್ಮಳಿಸಿತು. ಕಣ್ಣುಗಳಲ್ಲಿ ಕಂಬನಿ ಉಕ್ಕಿ ಬಂತು.

ಧ್ವನಿ ಏರಿಸಿ ದೊಡ್ಡಮ್ಮ ಅಂದರು :

"ಭಾಗೀ ! ಭಾಗೀ ! ಗೋಪಾಲ ಎಷ್ಟು ದೂರ ನಿಂತಿದಾನೆ ಕಾಣ್ಸೊಲ್ವೇನೆ ? ಯಾರೂ ನಿನ್ನ ಮೈ ಮುಟ್ತಾ ಇಲ್ವಲ್ಲೇ."

ಭಾಗೀರಥಿಯ ಧ್ವನಿ ಮತ್ತಷ್ಟು ಕಠೋರವಾಯಿತು.

"ಮತ್ಯಾರು ನನ್ನ ಸೀರೆ ಎಳೀತಿರೋರು ? ಯಾರೂ – ಅಂದೆ !" ಎಂದು ನುಡಿದು, ಒಮ್ಮೆಲೆ ಪ್ರಲಾಪಿಸತೊಡಗಿ, "ಮಾವಯ್ಯ ! ಸೀರೆ ಎಳೀಬೇಡಿ ಮಾವಯ್ಯ ! ಅಯ್ಯೋ !" ಎಂದು ಆಕೆ ರೋದಿಸಿದಳು.

ಶ್ರೀನಿವಾಸಯ್ಯ ಉಗುಳು ನುಂಗಿದರು.

ನಾಲ್ಕು ನಿಮಿಷ ಭಾಗೀರಥಿಯ ಅಳಲೊಂದೇ ತೆರೆತೆರೆಯಾಗಿ ಎದುರು ಬಂದುದಕ್ಕೆಲ್ಲ ಅಪ್ಪಳಿಸುತ್ತ ಹರಿಯಿತು.

ಅಳು ನಿಂತು ಮತ್ತೆ ಭಾಗೀರಥಿಯ ಧ್ವನಿ ಕೇಳಿಸಿತು :

"ಸೋಮಪುರದ ತೇರಿಗೆ ಬರ್ತಾರಾ ಇವರು ? ತೇರಿನ ಮೇಲೆ ಇವರು ಕೂತ್ಕೋಬೇಕು, ನಾನು ಎಳೀಬೇಕು–ಅಲ್ವಾ ? ಅಕಾ ತೇರು ! ತೇರು ! ನನ್ನ ಮೇಲೆ ಚಕ್ರ ಹರೀತಿದೆ ! ಅಯ್ಯಯ್ಯೋ ! ಅಪ್ಪಾ–ಅಮ್ಮಾ ! ಇಂಥಾ ಗತಿ ತಂದಿರಲ್ಲ ನನಗೆ... [ಕಂಬನಿ-ಮತ್ತೆ ಒಮ್ಮೆಲೆ ಸಿಡಿದು] ಕಡಿದ್ಹಾಕೇನು ! ಸಿಗದ್ಹಾಕೇನು ! [ಎದೆ ಬಡೆದುಕೊಳ್ಳುತ್ತ] ನಾನು ಚಂಡಿ ! ನಾನು ದುರ್ಗಿ ! ನಾನು ಮಾರಮ್ಮ ! ನಾನು ಮುನಿಯಮ್ಮ !"

ಗೋಪಾಲ ಕುಸಿ ಕುಳಿತು ತಲೆ ಚಚ್ಚಿಕೊಂಡ.

ದೊಡ್ಡಮ್ಮನತ್ತ ಹೊರಳಿ ಆತ ಕೇಳಿದ :

"ಈಗೇನ್ಮಾಡೋಣ ದೊಡ್ಡಮ್ಮ ? ಇದೇನಿದು ದೊಡ್ಡಮ್ಮ ?"

ಎಳೆಯ ಮಗುವನ್ನು ಸಂತೈಸುವಂತೆ ಅವರೆಂದರು :

"ಅಳಬೇಡ, ಗೋಪೂ. ಸರಿಹೋಗ್ತಾಳೆ- ಅಳಬೇಡ."

ಕಿವಿ ಕಿವುಡಾಗುವಂತೆ ಭಾಗೀರಥಿ ಏರಿದ ಧ್ವನಿಯಲ್ಲಿ ಅನ್ನತೊಡಗಿದಳು :

"ಸರಿ ಹೋಗ್ಬೇಕಾ ? ಹೋಗ್ಬೇಕಾ ನಾನು ? ಓಡಿಸ್ಬಿಡ್ತೀರಾ ನನ್ನ ? ಓಹೋ ಹೋ ಹೋ ! ಅಷ್ಟು ಸುಲಭ ಅಂದ್ಕೊಂಡ್ರಾ ? ಬನ್ನಿ. ಬನ್ನೀ ಅಂದೆ. ಹೊಟ್ಲೆನೋರೂ ಬರ್ಲಿ ! ಕಪ್ಪು ಕೋಟಿನೋರೂ ಬರ್ಲಿ ! ನಾನು ಯಾರೂಂತ ಒಮ್ಮೆ ಸರಿಯಾಗಿ ನೋಡಿ. ಸಿಗಿದ್ಬಿಡ್ತೀನಿ ! ಚಕ್ಕಳ ಸುಲೀತೀನಿ ! ಕರುಳು ಕಿತ್ತು ಗುಂಡಿಗೆ ಬಗೆದು ರಕ್ತ ಕುಡೀತೀನಿ."

ದೊಡ್ಡಮ್ಮ ಮೃದುವಾಗಿ ಮಾತುಗಳನ್ನಾಡಿದರು :

"ಹಾಗೆಲ್ಲ ಮಾತಾಡ್ಬಾರದಮ್ಮ, ಭಾಗೀ...... ನೋಡು, ನಾನು ಯಾರೂಂತ ನೋಡು. ದೊಡ್ಡಮ್ಮ ಅಲ್ವಾ...?

"ದಡ್ಡಮ್ಮಾ, ದಡ್ಡಮ್ಮಾ ! ಎಲ್ಲಮ್ಮಾ ನನ್ಮಗು ? ಕಿತ್ಕೊಂಡ್ಬಿಟ್ಯಾ ? ಎಲ್ಲಿ ಶ್ರೀಪಾದ? ನಿಮ್ಮ ಪಾದದಿಂದ ಶ್ರೀಪಾದನ್ನ ತುಳೀತೀರಾ ? ಪಾಪಿಗಳೆ ! ಕರಕೊಂಡ್ಬನ್ರೀ. ಆ ಮಗೂನ ಗಂಡಸು ಮಾಡ್ತೀನಿ !"

ದೊಡ್ಡಮ್ಮ ಕೂಗಿ ನುಡಿದರು :

"ಗೋವಿಂದೂ, ಶ್ರೀಪಾದನ್ನ ಎತ್ಕೊಂಡ್ಬಾ !"

ಮಗುವನ್ನು ನೋಡಿದ ಮೇಲಾದರೂ ಭಾಗೀರಥಿಯ ಚೀರಾಟ ನಿಂತೀತೇನೋ ಎಂಬ ಆಸೆ ಅವರಿಗೆ.

ಗೋವಿಂದ ಶ್ರೀಪಾದನನ್ನು ಕರೆದುಕೊಂಡು ಬಂದ. ಅದರ ಕೈಯಲ್ಲಿ ವಿಷ್ಣುಮೂರ್ತಿ ಕಳುಹಿಸಿದ ಗೊಂಬೆ ಇತ್ತು.

ಭಾಗೀರಥಿ ಅಂದಳು :

"ಥೂ ! ಮುಂಡೇದೇ ! ಯಾರ ಜತೇಲಿದ್ಯೋ ಇಷ್ಟ್ಹೊತ್ತು ? ನಾಚ್ಕೆ ಆಗೋಲ್ವೇನೊ ನಿಂಗೆ ! ಬಾರೋ ಇಲ್ಲಿ !"

ಅಳುಕುತ್ತ ದೊಡ್ಡಮ್ಮ ಮುಸು ಮುಸು ಅಳುತ್ತಿದ್ದ ಶ್ರೀಪಾದನನ್ನು ಮುಂದಕ್ಕೆ ತಳ್ಳಿದರು.

ಭಾಗೀರಥಿ ಸರಕ್ಕನೆ ಮಗುವನ್ನು ತನ್ನೆಡೆಗೆ ಎಳೆದುಕೊಂಡಳು. ಗೊಂಬೆಯನ್ನು ಕಿತ್ತೆಸೆದು ಮಗುವನ್ನು ಬೋರಲಾಗಿ, ನೆಲಕ್ಕೆ ಅಮುಕಿ, ಡಬ್ ಡಬ್ ಡಬ್ಬೆಂದು ಬೆನ್ನಿಗೆ ಗುದ್ದತೊಡಗಿದಳು.

ಮಗು ಚಿಟ್ಟೆಂದು ಚೀರಿ ರೋದಿಸಿತು.

"ಅಯ್ಯೋ ಪಾಪಿ," ಎನ್ನುತ್ತ ದೊಡ್ಡಮ್ಮ ಶ್ರೀಪಾದನನ್ನು ಬಿಡಿಸಿಕೊಳ್ಳಲು ಯತ್ನಿಸಿದರು.

"ಗಂಡ್ನಂತೆ ಗಂಡ ! ಗಂಡ್ಸಂತೆ ಗಂಡ್ಸು !" ಎಂದು ಭಾಗೀರಥಿ ಮಗುವಿಗೆ ಮತ್ತೂ ಗುದ್ದಿದಳು.

ದೊಡ್ಡಮ್ಮ ಅಂದರು :

"ಏನ್ ನೋಡ್ತಿದೀಯಾ ಶೀನ ? ಬಾ, ಹಿಡಿ ಇವಳ್ನ; ಗೋಪೂ ಬಾರೋ ! ಮಗೂನ ಬಿಡಿಸಿ ! ಇವಳ್ನ ಕೋಣೆಗೆ ತಳ್ಳಿ !"

ಜಗಲಿಯಲ್ಲಿದ್ದ ವಿಷ್ಣುಮೂರ್ತಿಯವರೂ ಮೋಹನರಾಯರೂ ಒಳಗೆ ಬಂದರು.

ಗೋವಿಂದ ಅವರ ಪಕ್ಕದಲ್ಲಿ ನಿಂತ. ಮೋಹನರಾಯರ ಮಗನೂ ಪಡಸಾಲೆಗೆ ಬಂದ.

ಮಣಿಗಂಟುಗಳನ್ನು ಹಿಡಿದುಕೊಂಡ ಕೈಗಳಿಗೆ ಭಾಗೀರಥಿ ಕಚ್ಚಿದಳು. ಗೋಪಾಲ ಹೆಂಡತಿಯ ಜಂಡಿಕೆಯನ್ನು ಹಿಡಿದ. ಎದೆಯ ಮೇಲಿನ ಸೆರಗಂತೂ ಎಂದೋ ಬಿದ್ದು ಹೋಗಿತ್ತು.

ಅಂತೂ ಶ್ರೀಪಾದನನ್ನು ದೊಡ್ಡಮ್ಮ ಬಿಡಿಸಿಕೊಂಡರು.

ಗೋಪಾಲನೂ ಶ್ರೀನಿವಾಸಯ್ಯನವರೂ ಭಾಗೀರಥಿಯನ್ನು ದರದರನೆ ಎಳೆದು ಕೊಠಡಿಯೊಳಕ್ಕೆ ಸೇರಿಸಿದರು.

"ಹೊರಗಿನಿಂದ ಕೊಂಡಿ ಹಾಕ್ಕೊಳ್ಳ್ಲೀ ಅಮ್ಮ ?" ಎಂದು ಶ್ರೀನಿವಾಸಯ್ಯ ತಾಯಿಯನ್ನು ಕೇಳಿದರು.

ಶ್ರೀಪಾದನನ್ನು ಎತ್ತಿಕೊಂಡಿದ್ದ ದೊಡ್ಡಮ್ಮ, ತಮ್ಮ ಒಣಗಿದ್ದ ಕಣ್ಣುಗಳನ್ನೊಮ್ಮೆ ಭದ್ರವಾಗಿ ಮುಚ್ಚಿ, ಹಿಂಡಿ, ಕಣ್ಣೀರಿನಎರಡು ಬಿಂದುಗಳನ್ನು ಕೆಳಕ್ಕೆ ಕೊಡವಿ, "ಬೇಡ ಒಳಗಿಂದ ಅವಳು ಚಿಲಕ ಹಾಕ್ಕೊಂಡ್ಬಿಟ್ರೆ ಆ ಮೇಲೆ ತೆಗೆಸೋದು ಕಷ್ಟ. ಬಾಗಿಲ್ಹತ್ರ ಸ್ವಲ್ಪ ಹೊತ್ತು ಕೂತಿರಿ. ನಾನೀಗ ಬಂದ್ಬಿಡ್ತೀನಿ," ಎಂದರು.

ಗೋಪಾಲ ಮಗುವನ್ನೆತ್ತಿಕೊಂಡ.

ದೊಡ್ಡಮ್ಮ ಎದ್ದುನಿಂತರು. ಪಡಸಾಲೆಯ ದೀಪದ ಪ್ರಭೆಯಲ್ಲಿ, ಅವರ ನೆರಳು ಗೋಡೆಯ ಮೇಲೆ ನೀಳವಾಗಿ ಕಂಡಿತು.

ಶಾಂತವಾದ ದೃಢವಾದ ಸ್ವರದಲ್ಲಿ ಅವರೆಂದರು:

"ಲಾಟೀನು ಬೇಕಲ್ಲ..."

ಬೀರ ತಂದಿಟ್ಟುದು ಜಗಲಿಯಲ್ಲಿತ್ತು. ಗೋವಿಂದ ಅದನ್ನು ತಂದ.

ಅತಿಥಿಗಳ ಹೊರತಾಗಿ ಉಳಿದವರೆಲ್ಲ ಬಲ್ಲರು ದೊಡ್ಡಮ್ಮ ಹೊರಟುದು ಎಲ್ಲಿಗೆ ಎಂಬುದನ್ನು.

"ನಾನೂ ಬರಲೆ ದೊಡ್ಡಮ್ಮ ?" ಗೋವಿಂದ ಕೇಳಿದ.

"ಬೇಡ," ಎಂದು ನುಡಿದು ದೊಡ್ಡಮ್ಮ ಲಾಟೀನಿನೊಡನೆ ಅಂಗಳಕ್ಕಿಳಿದು, ಮನೆಯನ್ನು ಬಳಸಿ, ಹಿತ್ತಿಲಲ್ಲಿ ದೂರ ದೂರ ಹೋದರು.

"ದೊಡ್ಡಮ್ಮ ಔಷಧಿ ತರ್ತಾರೆ," ಎಂದ ಗೋವಿಂದ, ಅತಿಥಿಗಳ ಕಡೆ ನೋಡಿ.

"ಪಾಪ ! ಎಂಥ ಸದ್ಗುಣಿ ! ನೋಡಿ, ಇದ್ದಕ್ಕಿದ್ದ ಹಾಗೆ–" ಎಂದು ಆರಂಭಿಸಿದರು ವಿಷ್ಣುಮೂರ್ತಿ.

"ಹಿಸ್ಟೀರಿಯಾ. ನಗರದಲ್ಲಿ ಇದು ಸರ್ವೇಸಾಮಾನ್ಯ," ಎಂದರು ಮೋಹನರಾಯರು.

[ವಾಸ್ತವವಾಗಿ, ಜಗಲಿಯ ಮೂಲೆಯಲ್ಲಿ ಇಬ್ಬರೇ ನಿಂತುಕೊಂಡು ಅವರು ಆಗಲೆ ಮಾತನಾಡಿದ್ದು ಆ ವಿಷಯವನ್ನೇ. ವಿಘ್ನೇಶ್ವರ ಭವನದಿಂದ ಅವರು ಮರಳಿ, ಗೋಪಾಲ ಮನೆಯಿಂದ ಹೊರ ಹೋದ ಸ್ವಲ್ಪ ಹೊತ್ತಿನಲ್ಲೇ ಭಾಗೀರಥಿ ತನ್ನ ಕೊಠಡಿಯಿಂದ ಗಟ್ಟಿಯಾಗಿ ಕೂಗಾಡತೊಡಗಿದ್ದಳು :

"ಟಾಂಗಾ ಸವಾರಿ ಮಾಡಿ ಬಂದ್ರೊ ? ನಿಮ್ಮದೇನೊ ಟಾಂಗಾ? ಹೋಟ್ಲಿನ ಯಜಮಾನಿಯೊ ನೀನು ? ಓ ಹೊಹೊ– ದೊರೆಸಾನೀನೊ ?"

ಪಡಸಾಲೆಯಲ್ಲಿ ರತ್ನಗಂಬಳಿಯ ಮೇಲೆ ಕುಳಿತಿದ್ದವರು ಒಂದು ಕ್ಷಣ ಸ್ತಬ್ಧವಾದರು

ಕೊಠಡಿಯಲ್ಲಿ ಮೌನ.

ಇವರು ಪುನಃ ಮಾತು ಆರಂಭಿಸಬೇಕು ಎನ್ನುವಷ್ಟರಲ್ಲೆ ಅಲ್ಲಿಂದ ಮತ್ತೆ ಧ್ವನಿ :

"ನನ್ನ ಎಳೆದ್ಹಾಕ್ತೀರಿ ಅಲ್ವೆ ? ಟಿಸ್ ಪಿಸ್ ಮಾತಾಡ್ಬಿಟ್ರೆ ಹೆದರ್‍ತೀನಿ ಅಂದ್ಕೊಂಡ್ರಾ ?"

ಶ್ರೀನಿವಾಸಯ್ಯ ಗಾಬರಿಯಾಗಿ ತಾಯಿಯನ್ನು ಕರೆದಿದ್ದರು :

"ಅಮ್ಮಾ, ಇಲ್ಬಾ !"

ಕರೆಯುವ ಅಗತ್ಯವೂ ಇರಲಿಲ್ಲ. ಭಾಗೀರಥಿಯ ಮಾತು ದೊಡ್ಡಮ್ಮನಿಗೆ ಕೇಳಿಸಿತ್ತು. ಅವರು ತಕ್ಷಣವೇ ಅತ್ತ ಬಂದರು.

"ಏನೇ ಅದು ಭಾಗೀ? ಏನಾಯ್ತಮ್ಮಾ ?"

ಬಾಗಿಲಿನ ಚೌಕಟ್ಟಿನಲ್ಲಿ ನಿಂತಿದ್ದ ದೊಡ್ಡಮ್ಮನನ್ನು ಬದಿಗೆ ತಳ್ಳಿ ಭಾಗೀರಥಿ ಪಡಸಾಲೆಗೆ ಧಾವಿಸಿ ಬಂದಿದ್ದಳು, "ಹೊರಡಿ ! ಹೊರಡಿ ಇಲ್ಲಿಂದ !" ಎಂದು ಚೀರುತ್ತ.

ಕುಳಿತಿದ್ದ ಗಂಡಸರು ಥಟ್ಟನೆ ಎದ್ದು ನಿಂತರು.

ಭಾಗೀರಥಿ ಕೂಗಾಡುತ್ತ ಕುಸಿದು ಬಿದ್ದಳು.

ಅತಿಥಿಗಳು, ಶ್ರೀನಿವಾಸಯ್ಯನವರನ್ನು ಅಲ್ಲಿಯೇ ಬಿಟ್ಟು ಜಗಲಿಯತ್ತ ಸರಿದರು. ಶ್ರೀಪಾದನನ್ನು ಗೋವಿಂದ ಕರೆದೊಯ್ದ. ದೊಡ್ಡಮ್ಮನ ಸೂಚನೆಯಂತೆ ಬೀರ ಹೋಟೆಲಿಗೆ ಓಡಿದ, 'ಚಿಕ್ಸದ್ದಿಯೋರನ್ನು' ಕರೆದು ತರಲು.

ಜಗಲಿಯಲ್ಲಿ ವಿಷ್ಣುಮೂರ್ತಿ ಅಂದರು :

"ಇದೊಳ್ಳೇ ಗ್ರಹಚಾರವಾಯ್ತಲ್ಲ."

ಮೋಹನರಾಯರೆಂದರು :

"ಹಿಸ್ಟೀರಿಯಾ."

"ದೊಡ್ಡದಲ್ಲ ಅಂತೀರಾ ?"

"ಹಿಸ್ಟೀರಿಯಾ ವಿಷ್ಣುಮೂರ್ತಿಗಳೇ. ಸೋಂಕು ಜಾಡ್ಯ ಅಲ್ಲ."

"ನಮ್ಮ ಮಕ್ಕಳಿಗೆ–"

"ಸೋಂಕು ಜಾಡ್ಯವಲ್ಲ ಅಂದೆ."

"ಹಾಗಾದರೆ ಪರವಾಗಿಲ್ಲ ಅನ್ನಿ."

"ಇಹ–ಪರ. ಸುಧಾರಿಸ್ಕೊಂಡು ಹೋದರಾಯ್ತು."

"ಗೊತ್ತಾಯ್ತು. ಮನೆಯಳಿಯ ಮಾಡ್ಕೊಳ್ಳೋಣ ಅಂತ ನಿಮ್ಮ ಯೋಚ್ನೆ. ನಗರದಲ್ಲಿ ಅವನೂ ವಕೀಲನಾಗ್ತಾನೆ. ನನ್ನ ಮಗೂನ ಮಾತ್ರ–"

"ಇಂಥಾದ್ದಕ್ಕೆಲ್ಲ ಯಾರಾದರೂ ಹೆದರ್‍ತಾರೆಯೆ ವಿಷ್ಣುಮೂರ್ತಿಗಳೇ ?"

"ಸರಿ, ಬಿಡಿ."]

ಅತಿಥಿಗಳು ಮತ್ತೊಮ್ಮೆ ರತ್ನಗಂಬಳಿಯ ಮೇಲೆ ಆಸೀನರಾದರು.

ಶ್ರೀನಿವಾಸಯ್ಯ ಅಂಗಳಕ್ಕಿಳಿದು, ಮೂಲೆಯಲ್ಲಿ ಕುಳಿತಿದ್ದ ಬೀರನನ್ನು ನೋಡಿದರೂ ಮಾತನಾಡಿಸದೆ, ತಾವೊಬ್ಬರೇ ಅತ್ತ ಇತ್ತ ನಡೆದರು.

ಗಿಡಗಳಿಂದ ತಾವು ಆಯ್ದ ಎಲೆಗಳೊಡನೆ ದೊಡ್ಡಮ್ಮ ಒಳಕ್ಕೆ ಬಂದರು. ನೇರವಾಗಿ ದೇವರ ಮನೆಗೆ ಹೋಗಿ ಅಲ್ಲಿ ಆ ಎಲೆಗಳನ್ನು ತೇದು ರಸ ಹಿಂಡಿದರು. ಅದಕ್ಕಿಷ್ಟು ನೀರು

ಬೆರೆಸಿದರು. ದೇವರಿಗೆ ಕೈ ಜೋಡಿಸಿ ತಮ್ಮ ಮೂಕ ಪ್ರಾರ್ಥನೆಯನ್ನು ಸಲ್ಲಿಸಿದರು. ನಿಟ್ಟುಸಿರು ಬಿಟ್ಟು ಲೋಟದೊಡನೆ ಹೊರಬಂದು, "ಶೀನ, ಗೋಪೂ, ಬನ್ನಿ. ಇದನ್ನು ಕುಡಿಸೋಣ," ಎಂದರು.

ಶ್ರೀನಿವಾಸಯ್ಯ ಒಳಕ್ಕೆ ಬಂದರು. ಭಾಗೀರಥಿಯ ಪ್ರತಿಭಟನೆಯನ್ನು ಮುರಿದು ರಸವನ್ನು ಅವಳಿಗೆ ಕುಡಿಸಿದುದೂ ಆಯಿತು.

ಸ್ವಲ್ಪ ಹೊತ್ತಾದ ಮೇಲೆ ಭಾಗೀರಥಿ ಒಂದೆಡೆಗೆ ವಾಲಿದಳು.

ದೊಡ್ಡಮ್ಮನೂ ಗೋಪಾಲನೂ ಹಾಸಿಗೆ ಬಿಡಿಸಿ, ಭಾಗೀರಥಿಯನ್ನು ಅದರ ಮೇಲೆ ಮಲಗಿಸಿದರು...

...ಮತ್ತೂ ಸ್ವಲ್ಪ ಹೊತ್ತಾದ ಮೇಲೆ ಕಂಬನಿದುಂಬಿದ ಕಣ್ಣುಗಳಿಂದ ಅತಿಥಿಗಳನ್ನು ನೋಡಿ, "ನಿಮಗೆ ತೊಂದರೆಯಾಯ್ತು, ಕ್ಷಮಿಸ್ಬೇಕು. ಏಳಿ, ಊಟಕ್ಕೇಳಿ," ಎಂದರು ಶ್ರೀನಿವಾಸಯ್ಯ.

"ಈಗೇನೂ ಹಸಿವಿಲ್ಲವಲ್ಲ," ಎಂದು ರಾಗವೆಳೆದರು ಮೋಹನರಾಯರು.

ಶ್ರೀನಿವಾಸಯ್ಯ ಅಂದರು :

"ಛೆ ! ಇದೇನೂ ಸಾವಿನ ಮನೆ ಅಲ್ಲವಲ್ಲ ! ಏಳಿ, ಸ್ವಲ್ಪ ಉಣ್ಣುವಿರಂತೆ, ಏಳಿ !"

## ೨೩

ದೊಡ್ಡಮ್ಮನ ಔಷಧಿ ಸೇವಿಸಿ ನಿದ್ದೆ ಹೋದ ಭಾಗೀರಥಿಗೆ ಮಾರನೆಯ ದಿನ ತಡವಾಗಿ ಎಚ್ಚರವಾಯಿತಾದರೂ, ಮೊದಲಿನಂತೆ ಓಡಾಡಲು ಕೆಲ ದಿನಗಳೇ ಹಿಡಿದುವು. ಮೊದಲಿನಂತೆ ಎನ್ನುವುದೂ ಸರಿಯಲ್ಲ. ಮನೆಗೆಲಸದಲ್ಲಿ ಆಕೆ ಆಸಕ್ತಿ ವಹಿಸಿದಳು; ನಿತ್ಯದ ಅಕ್ಕರೆಯಿಂದ ಮಗುವನ್ನು ಕಂಡಳು. ಆದರೂ ದಿನದ ನಡುನಡುವೆ ಒಂದು ಬಗೆಯ ಮಂಕು ಆಕೆಯನ್ನು ಕವಿದಿರುತ್ತಿತ್ತು.

ದೊಡ್ಡಮ್ಮ ಕೇಳುತ್ತಿದ್ದರು :

"ಭಾಗೀ, ಸ್ನಾನ ಮಾಡಿದಿಯಾ ?"

ಬೆಚ್ಚಿಬಿದ್ದವಳಂತೆ ಭಾಗೀರಥಿ ದೊಡ್ಡಮ್ಮನತ್ತ ನೋಡಿ, "ಹ್ನ ?" ಎನ್ನುತ್ತಿದ್ದಳು.

"ಸ್ನಾನ ಮಾಡಿದೆಯಾಂದೆ ?"

"ಇನ್ನೂ ಇಲ್ಲ, ದೊಡ್ಡಮ್ಮ.

"ಮಾಡು ಹಾಗಾದರೆ."

"ಮಾಡ್ತೀನಿ."

ನಿಶ್ಚಿತಾರ್ಥದ ದಿನ ನಡೆದ ಘಟನೆಯನ್ನು ಒಮ್ಮೆಯೂ ದೊಡ್ಡಮ್ಮ ಭಾಗೀರಥಿಯೊಡನೆ ಪ್ರಸ್ತಾಪಿಸಲಿಲ್ಲ.

ಗೋಪಾಲ ಮನಸ್ಸಿನ ದುಗುಡವನ್ನು ದುಡಿಮೆಯ ಮೆದುಮಣ್ಣಿನಲ್ಲಿ ಹೂತುಬಿಟ್ಟ. ಬಿತ್ತನೆಯ ಕಾರ್ಯಕ್ರಮದಲ್ಲಿ ವ್ಯತ್ಯಯವಾಗತೊಡಗಿತು. ಆಳುಗಳನ್ನು ಎರವಲು ತರುವುದು

ಕೊಡುವುದು. ದಿನಗೂಲಿಗೆ ನೇಮಿಸಿಕೊಳ್ಳುವುದು– ಇದೆಲ್ಲ ಸುಲಲಿತವಾಗಿ ಪ್ರತಿ ವರ್ಷ ನಡೆಯುತ್ತಿತ್ತು. ಈ ಸಲ, ಒಂದು ದಿನದ ಕೆಲಸ ಮೂರು ದಿನಗಳಿಗೆ ಬೆಳೆಯಿತು.

"ಯಾಕೊ ಬರಲಿಲ್ಲ ?" ಎಂದು ಕೇಳಿದರೆ, "ಗೌಡರಲ್ಲಿಗೆ ಹೋಗಿದ್ವಿ," ಎಂಬ ಉತ್ತರ ದೊರೆಯುತ್ತಿತ್ತು.

ಗೋಪಾಲ ಎದೆಗುಂದಲಿಲ್ಲ. ಇದ್ದವರೇ ತುಸು ಹೆಚ್ಚು ದುಡಿಯುವಂತೆ ಮಾಡಿದ. ಅವರ ಜತೆ ತಾನು ಮೈ ಮುರಿದು ದುಡಿದ. ಬೆಳಗ್ಗೆ ಹೊಲಕ್ಕೆ ಹೋದವನು ಮರಳುತ್ತಿದ್ದುದು ರಾತ್ರೆಯೇ. ಮಧ್ಯಾಹ್ನದ ಉಪಾಹಾರವನ್ನು ಅವನಿದ್ದೆಡೆಗೇ ದೊಡ್ಡಮ್ಮ ಒಯ್ದು ಕೊಡುತ್ತಿದ್ದರು. ಮನೆಗೆ ಹಿಂದಿರುಗಿದ ಗೋಪಾಲ ಬಿಸಿನೀರನ್ನು ಹೇರಳವಾಗಿ ಹುಯ್ದು ಕೊಂಡು ಸ್ನಾನ ಮಾಡಿ, ಉಂಡು, ಮಲಗಿ ಬಿಡುತ್ತಿದ್ದ. ಸೋತ ದೇಹಕ್ಕೆ ನಿದ್ದೆಯ ಮದ್ದು ಸಿಹಿಯಾಗಿರುತ್ತಿತ್ತು.

ಕೆಲ ದಿನ ಹೆಂಡತಿಯ ಮೇಲೆ ಅವನಿಗೆ ಬಹಳ ಸಿಟ್ಟಿತ್ತು. ಮುಂದೆ ಮಾತು ಎಷ್ಟು ಬೇಕೋ ಅಷ್ಟು.

ಒಂದು ದಿನ ಮಾತ್ರ ಒಳಗಿನ ಸಂಕಟ ತಡೆಯಲಾಗದೆ ಅವನೆಂದ :

"ಅವತ್ತು ಮಾನ ತೆಗೆದೆ. ಅಲ್ಲಾ, ನಿನಗೆ ಏನಾಗಿತ್ತೇ ರೋಗ ?"

ಭಾಗೀರಥಿ ಏನನ್ನೂ ಹೇಳಲಿಲ್ಲ. ಕಣ್ಣೀರು ಮೌನವಾಗಿ ಅವಳ ಕಪೋಲಗಳ ಮೇಲಿಂದ ಹರಿಯಿತು.

ಅಷ್ಟಕ್ಕೆ ಸುಮ್ಮನಾದ ಗೋಪಾಲ.

ಶ್ರೀನಿವಾಸಯ್ಯನವರಿಗೆ ಬಿಡುವಿಲ್ಲ. ಈ ಸಲ ಬೇಸಾಯದ ಭಾರವನ್ನು ಹಿರಿಯ ಮಗನಿಗೆ ಅವರು ಸಂಪೂರ್ಣವಾಗಿ ವರ್ಗಾಯಿಸಿದ್ದರು.

ತಿಂಗಳು ದಾಟಿತು. ಗೋವಿಂದನೊಡನೆ ಎರಡು ಸಾರೆ ಶ್ರೀನಿವಾಸಯ್ಯ ನಗರಕ್ಕೆ ಹೋಗಿ ಬಂದರು.

ಗೋವಿಂದನಿಂದ ವಿಷಯ ಮೊದಲೇ ತಿಳಿದಿದ್ದರೂ, "ನಿಮ್ಮ ಹಿರಿಯ ಸೊಸೆಗೆ ಹ್ಯಾಗಿದೆ?" ಎಂದು ವಿಷ್ಣುಮೂರ್ತಿಯವರೂ "ಈಗ ಚೆನ್ನಾಗಿದಾರೆ, ಅಲ್ವೆ ?" ಎಂದು ಮೋಹನ ರಾಯರೂ ಶ್ರೀನಿವಾಸಯ್ಯನವರನ್ನು ಕೇಳಿದರು.

"ಓಹೋ ! ಪೂರ್ತಿ ಗುಣ, ಪೂರ್ತಿ ಗುಣ," ಎಂದರು ಶ್ರೀನಿವಾಸಯ್ಯ, ಎದೆಯ ಒಳ ಬಡಿತವನ್ನು ಅಂಗಿಯ ಕೆಳಗೆ ಬಚ್ಚಿಟ್ಟುಕೊಂಡು.

ಕಾಮಾಕ್ಷಿ ಭಾಗೀರಥಿಯ ಆ ಕಾಹಿಲೆಗೆ ಮಹತ್ವ ಕೊಟ್ಟಿರಲಿಲ್ಲ. ಆದರೆ ಆರತಿಗೆ ಒಡಹುಟ್ಟಿದವನು ಬಣ್ಣಿಸಿದುದನ್ನು ಕೇಳಿ ಮೊದಲು ಭಯವಾಗಿತ್ತು.

ಆಕೆಯ ತಾಯಿ ಭಯನಿವಾರಣೆ ಮಾಡಿದ್ದರು.

"ನಿನಗ್ಯಾತಕ್ಕೆ ಆ ಯೋಚ್ನೆ ? ನೀನೇನು ಆ ಹಳ್ಳಿಗೆ ಹೋಗ್ಬೇಕೆ ? ಆ ಮನೇಲಿರ್ಬೇಕೆ ? ಅವಳ ಜತೆ ಸಂಸಾರ ಮಾಡ್ಬೇಕೆ ?"

ಈ ಮದುವೆಯೇ ಬೇಡ–ಎಂದುಬಿಡುತ್ತಿದ್ದಳೇನೋ ಆರತಿ. ಆದರೆ ಆಗಲೇ ಒಮ್ಮೆ, ಮನೆಯವರಿಗೆ ತಿಳಿಯದ ಹಾಗೆ ತಮ್ಮನನ್ನೂ ಕರೆದುಕೊಂಡು ಆಕೆ ಮ್ಯಾಟಿನಿಗೆ ಹೋಗಿದ್ದಳು, ಪದ್ಮನಾಭನ ಜತೆ. ಅನಂತರ ಹೋಟೆಲಿಗೆ. ಉದ್ಯಾನಕ್ಕೆ.

ಸ್ವಲ್ಪ ಓಡಾಡಿ ಬೇಸತ್ತ ಮೇಲೆ, "ನಾನೂ ಬರೋಲ್ಲಮ್ಮ, ನೀನೊಬ್ಬಳೇ ಹೋಗು," ಎಂದುಬಿಟ್ಟ ಆರತಿಯ ತಮ್ಮ.

ತೊಲಗಿತಲ್ಲ ಶನಿ, ಒಳ್ಳೇದಾಯ್ತು–ಎಂದುಕೊಂಡ ಪದ್ಮನಾಭ. ಕಾಲೇಜು ಮುಗಿದ ಮೇಲೆ ನೇರವಾಗಿ ಮೋಹನರಾಯರಲ್ಲಿಗೇ ಬರತೊಡಗಿದ್ದ. ಮನೆ ಸಾಕಷ್ಟು ದೊಡ್ಡದು. ಯಾರ ತಂಟೆಯೂ ಇಲ್ಲದೆ ಹರಟೆ ಹೊಡೆಯುತ್ತ, ಸಣ್ಣ ಪುಟ್ಟ ಆಟಗಳನ್ನಾಡುತ್ತ, ಹೊತ್ತು ಕಳೆಯಲು ಅಲ್ಲಿ ಸ್ಥಳವಿತ್ತು, ಅವಕಾಶವಿತ್ತು.

ಪದ್ಮನಾಭ ಯಾವಳೋ ಹುಡುಗಿಯೊಟ್ಟಿಗೆ ಓಡಾಡ ತ್ತಿದ್ದಾನೆ ಎಂಬ ಸುದ್ದಿ ಹಬ್ಬಿತು ಹಾಸ್ಟೆಲಿನ, ಕಾಲೇಜಿನ ವರ್ತುಲದಲ್ಲಿ. ಸ್ನೇಹಿತರು ಪದ್ಮನಾಭನನ್ನು ಗೇಲಿ ಮಾಡಿದರು.

—"ಏನಮ್ಮ ಸಮಾಚಾರ ?"

—"ಇಂಟ್ರಡ್ಯೂಸ್ ಮಾಡು, ದೊರೆ."

ಪದ್ಮನಾಭನಿಗೆ ಅದರಿಂದೆಷ್ಟೋ ಸಮಾಧಾನ. ನಾಳೆ ಮದುವೆಯಾದ ಮೇಲೆ 'ಅದು ಲವ್ ಮ್ಯಾರೇಜ್' ಎನ್ನಬೇಕು ಜನ.

ಇದಕ್ಕಿಂತ ಹೆಚ್ಚು ಬಲವತ್ತರವಾದ ಆಸೆ ಅವನಿಗಿದ್ದುದು, ಆರತಿಯ ಜತೆ ತನ್ನನ್ನು ಪ್ರಮದೆ ನೋಡಬೇಕು–ಎಂಬುದು. ಆರತಿಗೆ ಅದರ ಸುಳಿವು ಹತ್ತದಂತೆ ಒಂದೆರಡು ಸಲ ಪ್ರಯತ್ನಿಸಿದ ಮೇಲೆ, ಒಮ್ಮೆ ಪದ್ಮನಾಭ ಯಶಸ್ವಿಯಾದ.

ಎದುರು ದಿಕ್ಕಿನಿಂದ ಬಂದ ಹುಡುಗಿಯನ್ನು ನೋಡಿ ಈತ ಏನೋ ಒಂದು ತರಹೆ ಮಾಡಿದನಲ್ಲ–ಎಂದು ಆರತಿಗೆ ಸಿಟ್ಟು.

"ಯಾರ್ರೀ ಅವಳು ?"

"ಕ್ಲಾಸ್‌ಮೇಟ್."

"ಓ! ಫ್ರೆಂಡು ಅನ್ನಿ."

"ಫ್ರೆಂಡು ನೀನು. ಅವಳು ಕ್ಲಾಸ್‌ಮೇಟ್."

"ಮಾತು ಗೀತು ಇಲ್ವೊ ?"

"ಛೆ! ಅವಳಿಗೆ ಆರತಿಯಾಗಿದೆ."

"ಏನಂದಿರಿ? "

ತಪ್ಪು ತೊದಲಿದೆನಲ್ಲ ಎಂದು ಪದ್ಮನಾಭನಿಗೆ ಆಶ್ಚರ್ಯ.

"ಮದುವೆಯಾಗಿದೆ ಆರತಿದೇವಿ–ಅಂದೆ."

"ಹಾಗಾದರೆ ಸರಿ. ಅಲ್ಲಾ, ನಾನು ಸ್ಟಡೀಸ್ ಡಿಸ್‌ಕಂಟಿನ್ಯೂ ಮಾಡಬಾರದಾಗಿತ್ತು..."

"ಇರಲಿ, ಬಿಡು."

"ಒಂದು ಕೇಳ್ಲಾ ?"

"ಏನು ?"

"ನಾನು ಕಾಲೇಜಿಗೆ ಪುನಃ ಸೇರ್ಕೊಳ್ತೀನಿ."

"ಸೇರ್ಕೊ."

"ಒಟ್ಟಿಗೇ ಸ್ಟಡೀ ಮಾಡ್ಬಹುದು."

"ಓ ಹೋ !"

ಬಿ. ಎ. ಆದ್ಮೇಲೆ ಲಾ ಎರಡು ವರ್ಷ ಆಗುತ್ತೆ ನಿಮ್ಮದು."

"ನಾನು ಏನಾಗ್ಬೇಕು ಅನ್ನೋದನ್ನ ನಿಮ್ತಂದೆ ಆಗ್ಲೇ ತೀರ್ಮಾನಿಸಿ ಬಿಟ್ಟಿದಾರೊ ?"

"ಮಾತಾಡ್ತಾ ಇದ್ರು ಮನೇಲಿ."

"ಕರೇ ಕೋಟು ಅವರದೇ ಕೊಡ್ತಾರೊ, ಅಥವಾ ಹೊಸದೊ ?"

"ಏನ್ರೀ ಹೀಗಂತೀರಾ ನಮ್ತಂದೆ ವಿಷಯ ? ಸಾರಿ ಅನ್ನಿ."

"Sorry ರೀ."

...ಆಹ್ವಾನ ಪತ್ರಿಕೆಗಳು ಅಚ್ಚಿಗೆ ಹೋದುವು. ಶ್ರೀನಿವಾಸಯ್ಯ ಕನ್ನಡ ಸಾಕೆಂದರು. ಪದ್ಮನಾಭ ಅಣ್ಣನದನ್ನೂ ಸೇರಿಸಿ ಇಂಗ್ಲಿಷಿನಲ್ಲಿ ಒಂದನ್ನು ಅಚ್ಚು ಹಾಕಿಸಿದ. ಮೋಹನ ರಾಯರು ತಮ್ಮ ಮಗಳ ಮದುವೆಯ ಆಮಂತ್ರಣ ಪತ್ರಿಕೆಯನ್ನು ಇಂಗ್ಲಿಷ್‌ನಲ್ಲಿ ಅಣಿ ಗೊಳಿಸಿದರು. ಕಾಮಾಕ್ಷಿಯ ಹೆಸರು ಎರಡು ಭಾಷೆಗಳಲ್ಲೂ ಮುದ್ರಿತವಾಯಿತು.

"ಜವಳಿ ಖರೀದಿಗೆ ಬರ್‍ತೀಯಾ ?" ಎಂದು ಕೇಳಿದರು ಶ್ರೀನಿವಾಸಯ್ಯ, ಗೋಪಾಲನನ್ನು.

"ಇಲ್ಲಿ ಕೆಲಸವಿದೆಯಲ್ಲ ಅಣ್ಣಯ್ಯ. ಹ್ಯಾಗ್ಬರೋಕಾಗುತ್ತೆ? ನೀವೇ ಮಾಡ್ಕೊಂಡ್ಬನ್ನಿ," ಎಂದ ಗೋಪಾಲ.

ದೊಡ್ಡಮ್ಮ ಭಾಗೀರಥಿಗೆ ಕೇಳಿಸುವಂತೆ ಅಂದರು :

"ಭಾಗಿಗೆ ಧರ್ಮಾವರದ ಸೀರೆ ಒಂದು, ನಿತ್ಯ ಉಡೋದಕ್ಕೆಬೇರೆ ಎರಡು, ಕೊಂಡ್ಕೊ. ಶ್ರೀಪಾದನಿಗೆ ಟೋಪಿ ಅಂಗಿ ಬೇಕು. ಸಣ್ಣ ಕಾಲಿಗಾಗೋದು ಬೂಟೀಸೂ ತಕ್ಕೋ."

"ಹೂನಮ್ಮ," ಎಂದರು ಶ್ರೀನಿವಾಸಯ್ಯ.

ಗೋವಿಂದ, "ಗೋಪಾಲಣ್ಣಂದು ಹಳೇ ಶರಟು ತಗೊಂಡಿರ್‍ತೀನಿ. ಹ್ಯಾಗೂ ರೆಡೀ ಮೇಡ್ ಸಿಗುತ್ವೆ. ಬೇಕಿದ್ರೆ ಬುಶ್‌ಕೋಟೂ ಕೊಂಡ್ಕೋಬೌದು," ಎಂದು.

ಗೋಪಾಲ ತಲೆಯಲ್ಲಾಡಿಸಿದ :

"ಕೋಟು ಗೀಟು ಬೇಡ. ಒಂದು ಷರ್ಟು ಸಾಕು."

ಒಳಗಿನಿಂದ ಇದನ್ನು ಕೇಳಿಸಿಕೊಂಡ ಭಾಗೀರಥಿ ಕಣ್ಣೆವೆಗಳನ್ನು ಭದ್ರವಾಗಿ ಮುಚ್ಚಿದಳು.

ಮದುವೆ ಭಾಗ್ಯನಗರದಲ್ಲಿ ಎಂದು ನಿರ್ಧಾರವಾಗಿತ್ತು. ಆದರೇನಂತೆ ? ಶ್ರೀನಿವಾಸಯ್ಯ ಕಣಿವೇಹಳ್ಳಿಯಲ್ಲಿ ಔತಣ ಸಮಾರಂಭವೇರ್ಪಡಿಸಲೇಬೇಕು.

ಗೋಪಾಲನ ಮದುವೆ ಮೂರು ದಿನ ನಡೆದಿತ್ತು ಸೋಮಪುರದಲ್ಲಿ. ನಗರದಲ್ಲಿ ಅದಕ್ಕೆ ಅವಕಾಶವಿಲ್ಲವಲ್ಲ, ಸಾಕಷ್ಟು ಪ್ರಸಿದ್ಧವಾದ ಕಲ್ಯಾಣ ಮಂಟಪವೊಂದನ್ನು ಒಂದು ದಿನದ ಮಟ್ಟಿಗೆ ಬಾಡಿಗೆಗೆ ಹಿಡಿದಿದ್ದರು ಕನ್ಯಾಪಿತೃಗಳು. ಎಲ್ಲ ಶಾಸ್ತ್ರಗಳೂ ಇಪ್ಪತ್ತನಾಲ್ಕು ಘಂಟೆಗಳಲ್ಲಿ ಮುಗಿಯಬೇಕು.

ಏನಿದ್ದರೂ ಮೂರು ದಿನ ನಗರದಲ್ಲಿದ್ದು ಕಣಿವೇಹಳ್ಳಿಗೆ ಹಿಂತಿರುಗಬೇಕು ಎಂಬುದು ದೊಡ್ಡಮ್ಮನ ಅಭಿಮತ. ಅದಕ್ಕೆ ಎಲ್ಲರದೂ ಒಪ್ಪಿಗೆಯೇ.

ಹಳ್ಳಿಗೆ ಹಿಂತಿರುಗಿದ ದಿನವೇ ತಪ್ಪಿದರೆ ಮೂರನೆಯ ದಿವಸ — ವಧೂವರರನ್ನು ಕೂಡಿಸಿ ಆರತಿ ಅಕ್ಷತೆ. ಊರಿನವರಿಗೆಲ್ಲ ಊಟ ...

ವೀರಾಚಾರಿಯಾಗಲೇ ಅಯ್ಯನವರಲ್ಲಿಗೆ ಬಂದು ಬೀಡು ಬಿಟ್ಟಿದ್ದ.

ವೀರಾಚಾರಿಯಾಗಲೇ ಅಯ್ಯನವರಲ್ಲಿಗೆ ಬಂದು ಬೀಡುಬಿಟ್ಟಿದ್ದ.

ಗೌಡರು ಅಂದಿದ್ದರು :

"ನಮ್ಮ ಮನೆ ಕೆಲಸ ಒಸಿ ಐತಲ್ಲ ಆಚಾರಿ."

"ಯಾವಾಗ ಬಾ ಅಂದರೆ ಆಗ ಬರ್ತೀನಿ," ಎಂದಿದ್ದ ವೀರಾಚಾರಿ.

"ಅಯ್ಯನೋರ ಮನೇದು ಯಾವಾಗ ಮುಗೀಬೌದು ?"

"ಒಂದಿಪ್ಪತ್ತು ದಿವಸ..."

"ಸರಿ. ಆ ಮ್ಯಾಕೆ ಇಲ್ಲಿಗ್ಬಂದ್ಬಿಡು."

ವೀರಾಚಾರಿ ಹಲ್ಲು ಕಸಿದು, ಕತ್ತಿನ ಹಿಂಭಾಗ ತುರಿಸಿ, ಅಂದಿದ್ದ :

"ನಮ್ಮನೇದು ಸುಬಕಾರ್ಯ..."

"ಹ್ಞ, ಹ್ಞ. ಸುಬಕಾರ್ಯವೇ..."

"ಹಿ ಹಿ..."

ವರ್ಷದ ಉತ್ಪನ್ನವೆಲ್ಲ ಇಂತಹ ಒಂದೆರಡು ಶುಭಕಾರ್ಯಗಳಿಂದ ಆಗಬೇಕು ವೀರಾಚಾರಿಗೆ.

ಶ್ರೀನಿವಾಸಯ್ಯನವರ ಮನೆಗೆ ವೀರಾಚಾರಿ ಹೋಗದಂತೆ ತಡೆಯುವ ಸಾಮರ್ಥ್ಯ ಶಾಮೇಗೌಡರಿಗೆ ಇತ್ತು.

"ನಮ್ಮನೇ ಕೆಲಸ ಮೊದಲು ಆಗಲಿ," ಎಂದರೆ ಮುಗಿದುಹೋಗುತ್ತಿತ್ತು.

ಹೀಗೆ ಮಾಡಲೆ ?–ಎಂದುಕೊಂಡರು ಗೌಡರು ಒಮ್ಮೆ. ಛೆ! ಛೆ! ಹೇಸಿಕೆ ವಿಚಾರ– ಎಂದು ಮರುಕ್ಷಣವೆ ಅನಿಸಿ, ಅಯ್ಯನವರ ಮನೆಯ ಮದುವೆ ನೆರವೇರುವ ತನಕ ವೀರಾಚಾರಿಯನ್ನು ಮರೆತು ಬಿಡಲು ಅವರು ನಿರ್ಧರಿಸಿದರು.

ಮರೆಯುವುದು ಸುಲಭವಾಗಿತ್ತು. ಬಿತ್ತನೆಯ ಕೆಲಸ ಆಗುವ ತನಕ ಹಿಮ್ಮೆಟ್ಟಿ ತುರಿಸಿಕೊಳ್ಳುವುದಕ್ಕೂ ಬಿಡುವಿರಲಿಲ್ಲ ಅವರಿಗೆ. ಅದಾದಮೇಲೆ ಹೊಸಳ್ಳಿಗೂ ನಗರಕ್ಕೂ ಪ್ರಯಾಣ ಎಂದುಕೊಂಡಿದ್ದರು. ಮದುವೆ ಸಿದ್ಧತೆ ಆಗ. ನವರಾತ್ರಿಯ ವೇಳೆಗೆ ಮುಹೂರ್ತ ಎಂದು ತಾತ್ಕಾಲಿಕವಾಗಿ ಗೊತ್ತಾಗಿತ್ತು. ಅದನ್ನೇ ಗಟ್ಟಿ ಮಾಡಿದರಾಯಿತು.

ಗೌಡರು ಯೋಚಿಸಿದರು : ಅಯ್ಯನವರ ಮನೆಯ ಮದುವೆಗಳೆಲ್ಲ ಹಳ್ಳಿಯ ಹೊರಗೆ. ತಮ್ಮ ಮನೆಯದು ಹಾಗಲ್ಲ. ಇದು ಈ ಊರಿನ ಮದುವೆ. ಕಣಿವೇಹಳ್ಳಿಯ ಮದುವೆ. ಇರುವ ಒಬ್ಬಳೇ ಮಗಳ ವಿವಾಹವನ್ನು ಎಷ್ಟೊಂದು ಸಡಗರದಿಂದ ಆಚರಿಸಬೇಡ ತಾವು! ಮಗನ ವೈದ್ಯಕೀಯ ಶಿಕ್ಷಣಕ್ಕೆ ಒಟ್ಟು ಆಗುವ ಹಲವು ಸಹಸ್ರ ರೂಪಾಯಿಗಳ ವೆಚ್ಚದಷ್ಟೇ ಇದಕ್ಕೂ ಖರ್ಚಾಗಬೇಕು.

ಹೊಸಳ್ಳಿಯಿಂದ ಬಸ್ ರಸ್ತೆಗೆ ದಾರಿ ಮಾಡಿದ್ದರು, ಗಾಡಿಗಳು ಓಡಾಡಲು. ಮೋಟಾರು ಹೋಗುವುದೂ ಸಾಧ್ಯವಿತ್ತು. ಗೌಡರ ಭಾವೀ ಬೀಗರು ಪ್ರಸ್ತಾಪಿಸಿದ್ದರು :

"ಶಾಮಣ್ಣ, ನಮ್ಮುಡುಗ್ನಿಗೆ ನೀವು ಹಣಗಿಣ ಯಾನೂ ಕೊಡ್ಬೇಡಿ. ಒಂದು ಕಾರು ಕೊಡಿಸ್ಬುಡಿ, ಸಾಕು."

ಕ್ಷಣವೂ ತಡಮಾಡದೆ ಗೌಡರೆಂದಿದ್ದರು :

"ಒಪ್ದೆ,"

ಒಳ್ಳೆಯ ಹಳೆಯ ಕಾರು ಎಷ್ಟಕ್ಕೆ ಸಿಗುವುದೋ? ಊಹೂ. ಹಳೆಯದನ್ನು ಕೊಡುವುದು ಗೌರವವಲ್ಲ. ಹೊಸದನ್ನೇ ಕೊಂಡು ಕೊಟ್ಟರಾಯಿತು. ಹೇಗೂ ಆತ ವಕೀಲಿ ಪರೀಕ್ಷೆ ಪ್ಯಾಸ್ ಆಗುವತನಕ ಕಾಲಾವಕಾಶವಿದೆಯಲ್ಲ. ನಗರಕ್ಕೆ ಹೋದಾಗ, ಕಾರಿಗೆ ಎಷ್ಟಾಗುತ್ತದೆ ಎಂದು ವಿಚಾರಿಸಬೇಕು.

ತಮ್ಮ ಅಳಿಯನೂ ಸೊಸೆಯೂ ಕಾರಿನಲ್ಲಿ ಹೋಗುವ ದೃಶ್ಯದ ಕಲ್ಪನೆ ಗೌಡರಿಗೆ ಪ್ರಿಯವಾಗಿತ್ತು. ತಮ್ಮ ಕಾಲದಲ್ಲಾದರೆ ಎತ್ತಿನ ಬಂಡಿ ಏರುವುದೇ ಒಂದು ದೊಡ್ಡ ವಿಷಯ. ಈಗ ಕಾರಿಗಿಂತ ಕಡಮೆ ಏನಿದೆ? ಅಳಿಯನಿಗೆ ತಾವು ಕೊಡುವ ಕಾರು ಹೊಸಳ್ಳಿಯಿಂದ ಕಣಿವೇಹಳ್ಳಿಗೆ ನೇರವಾಗಿ ಬರದು. ದಾರಿಯಿಲ್ಲ. ಆದರೆ ತಮ್ಮೂರಿನಿಂದ ಟಾರ್ ರಸ್ತೆಯ ವರೆಗೆ ದಾರಿ ಕಡಿದರೆ, ಆಗೊಮ್ಮೆ ಈಗೊಮ್ಮೆ ನಗರದಿಂದ ಅಳಿಯ ತಮ್ಮ ಮಗಳೊಡನೆ ಇಲ್ಲಿಗೆ ಬರಬಹುದು. ಅಳಿಯ ಡ್ರೈವರನ್ನು ಇಟ್ಟುಕೊಳ್ಳುತಾನೋ ಅಥವಾ ತಾನೇ ಓಡಿಸುತಾನೋ. ಕಾರು ಎಷ್ಟೆಂದರೂ ಕಾರೇ. ಸುಲಭವಾಗಿ ಅಂಕೆಯಲ್ಲಿಟ್ಟುಕೊಳ್ಳಲು ಅದೇನು ಎತ್ತಿನ ಬಂಡಿಯೇ? ಡ್ರೈವರನನ್ನು ನೇಮಿಸಿಕೋ ಎಂದು ತಿಳಿಸಬೇಕು.

ಹೌದು. ಆ ಗೋವಿಂದಪ್ಪ ಹೇಳುವುದರಲ್ಲಿ ಅರ್ಥವಿದೆ. ಅರ್ಥವೂ ಇದೆ, ಸ್ವಾರ್ಥವೂ ಇದೆ. ರಾಜಮಾರ್ಗಕ್ಕೆ ಹೋಗಿ ಸೇರಲು ಬಂಡಿಗಳೂ ಮೋಟಾರುಗಳೂ ಓಡಾಡುವ ದಾರಿ ಇರುವುದು ಒಳ್ಳೆಯದೇ. ತಮಗೇ ಇದು ಮೊದಲು ಹೊಳೆಯಲಿಲ್ಲವಲ್ಲ! ಸಂದರ್ಭ ಒದಗಬೇಕಲ್ಲ ಅದಕ್ಕೆ. ತನ್ನ ಓಡಾಟಕ್ಕೆ ಸುಲಭವಾಗಲಿ ಅಂತ ಗೋವಿಂದನ ಯೋಚನೆ. ತಾನು ಮಾಡಿಸಿದೆ ಅಂತ ಹೆಸರು ಬೇರೆ. ಪುಢಾರಿ ತಾನೆ? ಊಹೂಂ. ಸರಕಾರದಿಂದ ಹಣ ತೆಗೆದುಕೊಂಡು ಎರಡು ಮೈಲು ಕಚ್ಚಾ ರಸ್ತೆ ಕಡಿಯಬೇಕೆ? ಖಂಡಿತ ಕೂಡದು. ಹೊಲಗಳ ಕೆಲಸ ಮುಗಿದ ಮೇಲೆ ರೈತರನ್ನೆಲ್ಲ ಒಟ್ಟಿಗೆ ಸೇರಿಸಿ ತಾವೇ ಇದನ್ನು ಸಾಧಿಸಬೇಕು. ಖರ್ಚು ಎಷ್ಟಾದರೂ ಸರಿಯೆ. ಅಬ್ದುಲ್ಲನಿಗೆ 'ಮೇಸ್ತ್ರಿಯಾಗು' ಎಂದ ರಾಯಿತು. ಆದರೆ ಈ ರಸ್ತೆಯಲ್ಲಿ ಶ್ರೀನಿವಾಸಯ್ಯನವರ ಮಕ್ಕಳ ಸೊಸೆಯರ ಮೆರವಣಿಗೆ ಬರದು. ಇದು ಸಿದ್ಧವಾಗುವುದು ಆಮೇಲೆ. ಸುಭದ್ರೆಯ ಮದುವೆಗೆ ಮೊದಲು. ಹೊಸಳ್ಳಿಯಿಂದ ನಡೆದುಕೊಂಡು ಯಾತಕ್ಕೆ? ಸ್ವಲ್ಪ ಬಳಸಿ ಬಂದರೂ ಸರಿಯೆ ಟ್ಯಾಕ್ಸಿಗೀಕ್ಸಿ ಮಾಡಿಕೊಂಡೇ ವರನ ದಿಬ್ಬಣ ಕಣಿವೇಹಳ್ಳಿಗೆ ಬರುವಂತಾಗಬೇಕು.

ಯೋಚನೆಯನ್ನು ಕಾರ್ಯಗತಗೊಳಿಸುವ ಆತ್ಮವಿಶ್ವಾಸದಿಂದ ಮೀಸೆಯ ಕುಡಿಗಳನ್ನು ಮೇಲಕ್ಕೆ ಹಾರಿಸಿದರು ಗೌಡರು......

...ವಿಘ್ನೇಶ್ವರ ಭವನಕ್ಕೆ ಜನ ಬರತೊಡಗಿದರು. ಆದರೆ ಕಾಸು ಬಿಚ್ಚುತ್ತಿದ್ದವರು ಕಡಮೆ. ಸಾಲ ಕೇಳುವವರೇ ಎಲ್ಲರೂ.

ನಗರಕ್ಕೆ ಗೋವಿಂದ ಪದೆ ಪದೇ ಹೋಗಿ ಬರುತ್ತಿದ್ದುದರಿಂದ ಸಣ್ಣ ಪುಟ್ಟ ಸಾಮಾನು ಗಳನ್ನು ತರಿಸುವುದು ಗಜಾನನನಿಗೆ ಸುಲಭವಾಗಿತ್ತು. ಅವನದೊಂದೇ ವ್ಯಥೆ. ವಾರದ ಭವಿಷ್ಯ ಸಕಾಲದಲ್ಲಿ ಓದಲು ದೊರೆಯುತ್ತಿರಲಿಲ್ಲ.

ಸಿನಿಮಾ ನೋಡುವ ಚಟವಿದ್ದವಳು ಜಲಜಾ. ಈ ಕೊಂಪೆಗೆ ಬಂದು ಇಂಥ ಸ್ಥಿತಿ ಯೊದಗಿತಲ್ಲಾ ಎಂದು ಗೋಳಾಡಿದಳು ಆಕೆ. ಆದರೆ ಗಂಡನ ಹೊರತಾಗಿ ಯಾರಲ್ಲಿ ತೋಡಿ ಕೊಳ್ಳಬೇಕು ತನ್ನ ಅಳಲನ್ನು? ಅವನೋ, "ಬೇರೆ ಹಾಡು ಇಲ್ವೇನೇ?" ಎಂದ

ನಾಲ್ಕಾರು ಸಾರೆ.

ತಮ್ಮ ಸಂಸಾರದ ಬಂಧುವಾಗಿದ್ದ ಗೋವಿಂದ, ನಸುನಗುತ್ತ ಮಾತನಾಡುತ್ತಿದ್ದ ಕೃಷ್ಣೇಗೌಡ–ಇವರೇ ಈಗ ಜಲಜೆಯ ಪಾಲಿನ ಚಿತ್ರ ನಟರು.

ತನ್ನಂತೆಯೇ ಕಾಮಾಕ್ಷಿಗೂ ಸಿನಿಮಾ ಗೀಳು. ಜಲಜಮ್ಮನಿಗೆ ಅನಿಸುತ್ತಿತ್ತು.

'ಕಾಮಾಕ್ಷಿ ಇಲ್ಲಿ ಹ್ಯಾಗೆ ದಿನ ಕಳೆದಾಳು? ಗಂಡ ನಗರಕ್ಕೆ ಹೋದಾಗಲೆಲ್ಲ ಅವಳೂ ಹೊರಡುವುದು ಖಂಡಿತ'.

ಅವಳು ಅಂದುಕೊಂಡಳು: 'ಏನೇ ಇರಲಿ, ಕಾಮಾಕ್ಷಿ ನಗರಕ್ಕೆ ಹೊರಟಾಗಲೆಲ್ಲ ತಾನೂ ಅವಳಿಗೆ ಅಂಟಿಕೊಳ್ಳಬೇಕು. ತಿಂಗಳಲ್ಲಿ ಒಂದು ವಾರವೋ ಹತ್ತು ದಿವಸವೋ ಇವರೊಬ್ಬರೇ ಹೋಟ್ಲು ನಡೆಸ್ಕೊಂಡು ಹೋಗ್ಲಿ.'

ಆದರೆ ಸದ್ಯಕ್ಕೆ ಶ್ರೀನಿವಾಸಯ್ಯನವರ ಮನೆಯಲ್ಲಾಗುತ್ತಿದ್ದ ವಿವಾಹ ಸಿದ್ಧತೆ ಜಲಜೆಯ ಮನಸ್ಸಿನ ಬೇಸರವನ್ನು ಸ್ವಲ್ಪ ಕಡಮೆ ಮಾಡಿತು.

"ಗೋವಿಂದಣ್ಣ, ಮನೇಲಿ ಕೆಲಸ ಭಾಳ ಅಲ್ವೆ ? ದೊಡ್ಡಮ್ಮ, ಭಾಗಕ್ಕ ಇಬ್ಬರ ಕೈಲಿ ಮಾಡೋಕಾಗುತ್ತಾ ? ನಾನು ಬರ್ಲ್ಲಿ?" ಎಂದು ಗೋವಿಂದನನ್ನು ಆಕೆ ಕೇಳಿದಳು. ಆತ ದೊಡ್ಡಮ್ಮನನ್ನು ಒಪ್ಪಿಸಿದ. ದಿನವೂ ಎರಡು ಮೂರು ಘಂಟೆಗಳ ಕಾಲ ಜಲಜಮ್ಮ ಶ್ರೀನಿವಾಸಯ್ಯನವರ ಮನೆಗೆ ಬರತೊಡಗಿದಳು.

ಬಂಡಿಯನ್ನು ಒಂದು ಎತ್ತು ಎಡ ದಿಕ್ಕಿಗೆ ಇನ್ನೊಂದು ಬಲ ದಿಕ್ಕಿಗೆ ಎಳೆಯುವಂತಾಯಿತು ಪರಿಸ್ಥಿತಿ. ಸಹಾಯಕ್ಕೆ ಬಂದವಳನ್ನು ಮಾತಾಡಿಸುವ ಹೊರೆಯೆಲ್ಲ ದೊಡ್ಡಮ್ಮನ ಮೇಲೆ ಬಿತ್ತು.

ಜವಳಿಯೊಡನೆ ಶ್ರೀನಿವಾಸಯ್ಯ ಮನೆಗೆ ಮರಳಿದ ರಾತ್ರಿಯೇ ಭಾಗೀರಥಿ ಅಸ್ವಸ್ಥಳಾದಳು. ಹಳೆಯ ಆ ಕಾಹಿಲೆ ಮತ್ತೆ ಮರುಕಳಿಸುವ ಲಕ್ಷಣ.

ದೊಡ್ಡಮ್ಮ ಕೇಳಿದರು:

"ನಿನಗೇನು ಬೇಕು ಭಾಗೀ ?"

ಭಾಗೀರಥಿ ಉತ್ತರವಿತ್ತಳು :

"ಸೋಮಪುರಕ್ಕೆ ಹೋಗ್ಬೇಕು, ದೊಡ್ಡಮ್ಮ."

ತಮ್ಮ ಔಷಧಿಯಿಂದ ಗುಣವಾಗುವ ಕಾಹಿಲೆ ಇದಲ್ಲ ಎಂದು ಮನಗಂಡ ದೊಡ್ಡಮ್ಮ ಥಟ್ಟನೆ, "ಅಷ್ಟೇ ತಾನೆ ? ಹೋಗಿ ಬಾ, ಭಾಗೀ. ನಾಳೆ ದಿವಸ ಚೆನ್ನಾಗಿದೆ. ಗೋಪಾಲ ಬಿಟ್ಟು ಬರ್ತಾನೆ. ಮದುವೆಗೆ ಮೂರು ನಾಲ್ಕು ದಿನ ಇರುವಾಗ ಬರುವಿಯಂತೆ," ಎಂದರು.

...ಮೂರನೆಯ ದಿನ ಮಧ್ಯಾಹ್ನ ಬಂದ ಜಲಜಮ್ಮ, ಭಾಗೀರಥಿ ತವರು ಮನೆಗೆ ಹೋದಳೆಂಬುದನ್ನು ಕೇಳಿ, ಮೂಗಿನ ಮೇಲೆ ಬೆರಳಿಟ್ಟಳು.

ತನ್ನ ತಾಯಿ ಮನೆಯ ನೆನಪು ಸ್ವಲ್ಪ ಹೊತ್ತು ಅವಳನ್ನು ಕಾಡಿತು.

...ಪದ್ಮನಾಭ ದಿಬ್ಬಣ ಹೊರಡುವುದಕ್ಕೆ ಎರಡು ದಿನಗಳಿದ್ದಾಗ ಬಂದು ತಲಪಿದ.

ಸೋಮಪುರದಿಂದ ಭಾಗೀರಥಿ ಬರಲೇ ಇಲ್ಲ.

ದೊಡ್ಡಮ್ಮ ಅಂದರು :

"ನೀನು ಹೋಗಿ ಅವಳನ್ನೂ ಮಗುವನ್ನೂ ಹಾಗೇ ಅವಳ ಮನೆಯವರನ್ನೂ

ಕರಕೊಂಡು ನೇರ ನಗರಕ್ಕೆ ಬಂದ್ಬಿಡು, ಗೋಪೂ."

"ಹ್ಞೂಂ," ಎಂದ ಗೋಪಾಲ.

ಗೋವಿಂದ ಅವನಿಗೆ ನಗರದ ಅಡ್ರೆಸ್ ಕೊಟ್ಟ.

ವಿಘ್ನೇಶ್ವರ ಭವನದ ಬಾಗಿಲಿಗೆ ಬೀಗ ಬಿತ್ತು, ಎರಡು ಮೂರು ದಿನಗಳ ಮಟ್ಟಿಗೆ ಎಂದು. ಗಜಾನನನ ಕುಟುಂಬ ದಿಬ್ಬಣದ ತಂಡವನ್ನು ಸೇರಿಕೊಂಡಿತು.

ಶಾಮೇಗೌಡರು, "ನೀವು ಹೋಗಿ. ನಾಳೆ ಬರ್ತೀನಿ," ಎಂದುಬಿಟ್ಟರು.

ಬೀರನನ್ನು ಕರೆದುಕೊಂಡು, ಬೇರೆ ಇಬ್ಬರು ಆಳುಗಳನ್ನು ಮನೆಯ ಕಾವಲಿಗೆ ಗೊತ್ತು ಮಾಡಿ, ತಮ್ಮ ಬಳಗದೊಡನೆ ಶ್ರೀನಿವಾಸಯ್ಯ ಹೊರಟರು.

ಆ ರಾತ್ರೆ ಕಣಿವೇಹಳ್ಳಿಯಲ್ಲಿ ವಿಪರೀತ ಮಳೆ. ಮಾರನೆಯ ದಿನ ಕೂಡಾ.

ಹಾಲು ಹೊಳೆಗೆ ಮಹಾಪೂರ ಬಂತು.

"ಮಲೆನಾಡ್ನಾಗೆ ಮಳೆಯಾಗ್ಯೆತೆ," ಎಂದರು ಎಲ್ಲರೂ.

ಅದೇ ದಿನ ನಗರದಲ್ಲಿ ಮದುವೆ.

ಆ ಹೊತ್ತಿಗೆ ಸರಿಯಾಗಿ ಕಣಿವೇಹಳ್ಳಿಯಲ್ಲಿ ಜನ ಉಸಿರು ಬಿಗಿ ಹಿಡಿಯುವಂತೆ ಮಾಡಿದ ಘಟನೆಯೊಂದು ಜರಗಿತು.

## ೨೪

ನದೀ ದಂಡೆಯಲ್ಲಿ ನಿಂತಿದ್ದ ರೈತರಲ್ಲೊಬ್ಬ, "ಹಾ !" ಎಂದು ಚೀರಿಕೊಂಡ.

ಎಲ್ಲರ ದೃಷ್ಟಿಗಳೂ ಅತ್ತ ತಿರುಗಿದುವು.

ಕಣ್ಣವೆ ಮುಚ್ಚಿ ತೆರೆಯುವುದರೊಳಗೆ ಆಕಸ್ಮಿಕ ನಡೆದು ಹೋಗಿತ್ತು...

...ಆ ದಿನ ಬೆಳಕು ಹರಿದುದು ತಡವಾಗಿ, ಪ್ರಯಾಸದಿಂದ. ರಾತ್ರೆ ಆರಂಭವಾದ ಮಳೆ ನಿಂತಿರಲಿಲ್ಲ. ಮೋಡಗಳ ಕೋಟೆ ಕೊತ್ತಲಗಳನ್ನು ಧ್ವಂಸ ಮಾಡುವ ಆಸೆಯಂತೂ ಸೂರ್ಯನಿಗಿರಲಿಲ್ಲ. ಬಿರುಕು ಮಾಡಿಕೊಂಡು ತೂರಿ ಒಳಕ್ಕೆ ಬರಲು ಅವನು ಪ್ರಯತ್ನಿಸಿದ. ಮಬ್ಬು ಬೆಳಕು ಕಣಿವೇಹಳ್ಳಿಯಲ್ಲಿ ಹರಡಿತಾದರೂ ಜನರ ಕಣ್ಣಿಗೆ ಬೀಳಲು ಸೂರ್ಯ ಶಕ್ತನಾಗಲಿಲ್ಲ.

ಅಬ್ದುಲ್ಲನ ಹೊಸ ಜೋಪಡಿ ಕುಸಿದಿತ್ತು. ಹಾಗೆ ಒಮ್ಮೆ ವಿಪರೀತ ಮಳೆಯಾಗ ಬಹುದೆಂದು ಅವನು ನಿರೀಕ್ಷಿಸಿರಲಿಲ್ಲ. ಹಳ್ಳಿಯಲ್ಲಿ ಇತರ ಎರಡು ಮೂರು ಮನೆಗಳ ಗೋಡೆ ಗಳೂ ಬಿದ್ದಿದ್ದುವು.

"ಭೋ ಮಳೆ ಒಡೆಯಾ," ಎಂದ ಕರಿಯ ಗೌಡರಿಗೆ ವರದಿ ಒಪ್ಪಿಸುತ್ತ.

ಆ ದಿನ ಹೊಲಗಳಲ್ಲಿ ದುಡಿಮೆ ಇಲ್ಲ.

"ನಡಿ, ನೋಡ್ಕಂಡ್ಬರಾನ," —ಎಂದು ನುಡಿದು ಗೌಡರು ಶಾಲು ಹೊದೆದುಕೊಂಡು ಕೊಡೆ ಹಿಡಿದುಕೊಂಡು ಹೊರಟರು.

"ಈ ಪಾಟಿ ಮಳೆಯಾಗೆ ಯಾಕೋಗ್ತೀಯಾ ಅಣ್ಣ ?" ಎಂದು ನಾಗಮ್ಮ ಕೇಳಿದರು.

ತಂಗಿಯತ್ತ ನೋಡಿ ಗೌಡರೆಂದರು :

“ಬಿರ್ನೆ ಬಂದ್ಬುಡ್ತೀನಿ, ನಾಗೂ.”

ಗೋಣಿಚೀಲವನ್ನು ಒಳಮೈ ಮಡಚಿ, ತಲೆಯನ್ನೂ ಬೆನ್ನನ್ನೂ ಮುಚ್ಚಿಕೊಂಡಿದ್ದ, ಕರಿಯ. ಒದ್ದೆಯಾಗಿ ನೀರು ಸುರಿಯುತ್ತಿದ್ದ ತುಣುಕು ಬಟ್ಟೆ ಅವನ ನಡುವನ್ನು ಬಳಸಿತ್ತು. ಸಂಪೂರ್ಣ ತೋಯ್ದು ಮೈ ಕುಟು ಕುಟು ನಡುಗುತ್ತಿತ್ತು.

ಆತ ಗೌಡರನ್ನು ಹಿಂಬಾಲಿಸಿದ.

ನಾಗಮ್ಮ ಬಾಗಿಲಲ್ಲಿ ನಿಂತು, ಮಳೆಯಲ್ಲಿ ಮಸಕಾಗಿ ಹೋದ ಅಣ್ಣನನ್ನೂ ಆಳನ್ನೂ ದಿಟ್ಟಿಸಿದರು.

ವಿಪರೀತ ಮಳೆ. ಮೇಲ್ಗಡೆ ನಿನ್ನೆ ಮೊನ್ನೆಯೂ ಹೀಗೆಯೇ ಸುರಿದಿದ್ದರೆ, ನದಿಯಲ್ಲಿ ಪ್ರವಾಹ ಬರುವುದು ಖಂಡಿತ. ಇಂಥ ಮಳೆಯನ್ನು ತಾವು ನೋಡಿ ಎಷ್ಟು ವರ್ಷವಾಯಿತೊ ? ಎಂದೆಲ್ಲ ಯೋಚಿಸುತ್ತ ನಾಗಮ್ಮ ಒಳಕ್ಕೆ ಹೊರಳಿದರು.

ಸುಭದ್ರೆ ಕಿಟಕಿಯ ದಂಡೆಯ ಮೇಲೆ ಕೈಗಳ ಕಂಬ ನೆಟ್ಟು ಹೊರಗೆ ಸುರಿಯುತ್ತಿದ್ದ ಮಳೆಯನ್ನು ನೋಡುತ್ತ ನಿಂತಿದ್ದಳು.

“ಇವತ್ತೂ ಇಂಗೇ ಉಯ್ದ್ರೆ ಬಿತ್ತನೆಯೆಲ್ಲಾ ಕೊಚ್ಕೋಯ್ತದೆ,” ಎಂದರು ನಾಗಮ್ಮ ಸುಭದ್ರೆಯೊಡನೆ.

ಸುಭದ್ರೆ ಮಾತನಾಡಲಿಲ್ಲ.

ಬಿತ್ತನೆಯಿಂದ ಅಯ್ಯನವರ ಮನೆಯ ಮದುವೆಯತ್ತ ತಿರುಗಿತು ನಾಗಮ್ಮನವರ ಯೋಚನೆ.

“ನಗರದಾಗೂ ಇಂಗೇ ಇರ್ತೇತೋ ಯಾನೋ,” ಎಂದರು.

ಅದು ಮದುವೆಗೆ ಒದಗಬಹುದಾದ ಅಡ್ಡಿ ಆತಂಕಗಳ ವಿಷಯ.

ತುಟಿ ಕಚ್ಚಿಕೊಂಡು, ಮಗುವಿನೊಡನೆ ಈ ಮಾತು ಸರಿಯಲ್ಲ—ಎಂದು, “ಸುಬ್ಬೀ, ಬಿಸಿ ಗಂಜಿ ಮಾಡ್ಲಾ ? ಚಳಿಗೆ ಚೆಂದಾಗಿರ್ತೇತೆ,” ಎಂದರು.

ಬಲು ಕ್ಷೀಣವಾಗಿ, “ಹೂಂ,” ಎಂದಳು ಸುಭದ್ರೆ. ಅವಳ ಮುಖ ಸಪ್ಪಗಿತ್ತು.

ನಾಗಮ್ಮ ಒಳಕ್ಕೆ ನಡೆದರು.

ಮುಂದೆ ಅದೆಷ್ಟು ಹೊತ್ತು ಸುಭದ್ರೆ ಅಲ್ಲಿಯೇ ಇದ್ದಳೊ !

ಅವಳಿಗೆನಿಸುತ್ತಿತ್ತು : ಕಾಲ ನಿಂತಿರಬೇಕು. ವೇಳೆ ನಿಲ್ಲುವುದು ಎಂದಿಲ್ಲವೆ ? ದುಡಿದು ದುಡಿದು ದಣಿದಾಗ ಎಂದಾದರೊಮ್ಮೆ ಯಾವ ಚಲನೆಯೂ ಇಲ್ಲದೆ ಪ್ರತಿಯೊಂದೂ ತಣ್ಣಗಾಗುವುದಿಲ್ಲವೆ ?

ಅತ್ತೆ ಕೇಳಿದಳು : ‘ನಗರದಾಗೂ ಇಂಗೇ ಇರ್ತೇತೊ ಯಾನೊ ?’ ತನಗೇನು ಗೊತ್ತು ? ಇರಬಹುದು, ಇಲ್ಲದಿರಬಹುದು. ಆದರೆ ಅಷ್ಟಕ್ಕೇ ನಿಲ್ಲಿಸಿಬಿಟ್ಟರಲ್ಲ, ಅತ್ತೆ ?

ಆ ಘಳಿಗೆಯಲ್ಲಿ ತಾನಾದರೂ ಅದೇ ಯೋಚನೆ ಮಾಡುತ್ತಿದ್ದೆನಲ್ಲ ?

ಆದರೆ ಒಂದು ವಿಷಯ : ನಗರದಲ್ಲಿ ಮಳೆ ಸುರಿದರೇನು ? ಬಿಟ್ಟರೇನು ? ತನಗೂ ಅದಕ್ಕೂ ಏನು ಸಂಬಂಧ ?

ಮಳೆಯ ಘೋರ್ಗರೆತ ವಾಲಗದ ಸದ್ದಿನಂತೆ ಕೇಳಿ ಬರತೊಡಗಿತು ಸುಭದ್ರೆಗೆ.

ಪದ್ಮನ ತಂದೆ ಕರೆಯಲೆಂದು ಬಂದಾಗ ಮನೆಯಲ್ಲಿ ನಿಂತುಕೊಂಡು ಹಿರಿಯರ ಸಂಭಾಷಣೆಗೆ ಕಿವಿಗೊಟ್ಟಿದ್ದಳು ಆಕೆ.

"ಲಗ್ನ ಯಾವ ಟೇಮಿಗೆ ?"

"ಹನ್ನೊಂದೂ ನಾಲ್ವತ್ತೈದು."

"ಸರಿ, ಬುಡಿ. ಎರಡು ಗಂಟೆಗೆಲ್ಲಾ ಊಟ ಆಕ್ಬೌದು."

"ಹೂಂ ಶಾಮಣ್ಣ; ನೀವೆಲ್ರೂ ಬರ್‍ಬೇಕು. ದಿಬ್ಬಣದ ಜತೇಲೇ. ರಂಗಣ್ಣನಂತೂ ಅಲ್ಲೇ ಇರ್‍ತಾನೆ."

"ನೋಡಾನ."

"ನೋಡೋದು ಗೀಡೋದು ಒಂದೂ ಇಲ್ಲ. ಅಮ್ಮ ಅಂದ್ಲು, ಕರೆಯೋಕೆ ನಾನೂ ಬರ್‍ತೀನಿ, ಅಂತ. ಶುಭ ಕಾರ್ಯ. ಚೆನ್ನಾಗಿರೋದಿಲ್ವಲ್ಲ. ನಾನು ಕರೆದ್ಬಿಟ್ಟು ಬರ್‍ತೀನಿ ಅಂದೆ."

"ಒಳ್ಳೇ ಕೆಲಸ ಮಾಡಿದ್ರಿ."

"ಬರ್‍ಲಾ ನಾನು ಹಾಗಾದರೆ ? ಎಲ್ಲಿ, ಸುಬ್ಬಿ ಕಾಣಿಸ್ಲಿಲ್ವೇ..."

"ಒಳಗಡೆ ಎಲ್ಲೋ ಇರ್‍ಬೇಕು."

ಎರಡು ನಿಮಿಷಗಳ ಮೌನ. ತಂದೆ ತನ್ನನ್ನು ಹೊರಕ್ಕೆ ಕರೆಯಬಹುದೆಂದು ಆಯಪ್ಪ ಕುಳಿತರೋ ಏನೋ. ಆದರೆ ತಂದೆ 'ಸುಬ್ಬೀ' ಎನ್ನಲಿಲ್ಲ. ನಿಮಿಷ ಕಾದು ಆಯಪ್ಪ ಎದ್ದಿರಬೇಕು.

"ನಾನು ಬರ್‍ಲೆ ಹಾಗಾದರೆ ?"

"ಊ ಊ ಓಗ್ಬನ್ನಿ."

ತನ್ನ ತಂದೆ ಅವರನ್ನು ಅಂಗಳದ ತನಕ ಹಿಂಬಾಲಿಸಿದರು. ಅಂಗಳಕ್ಕಿಳಿದ ಮೇಲೂ ಸಣ್ಣ ಪುಟ್ಟ ಮಾತುಗಳಿರಲೇಬೇಕು, ಸಾಧಾರಣವಾಗಿ. ಯಾರು ಬಂದರೂ ಅಷ್ಟೆ. ಆದರೆ ಈ ಸಲ ಮಾತ್ರ ಮಾತಿಲ್ಲ.

—ಲಗ್ನ ಯಾವ ಟೇಮಿಗೆ ?

—ಹನ್ನೊಂದೂ ನಾಲ್ವತ್ತೈದು.

[ನಗರದಲ್ಲಿ ಮದುವೆ. ನಿರ್ದಿಷ್ಟವಾಗಿ ನಿಮಿಷಗಳನ್ನೂ ತಿಳಿಸಿದ್ದರು ಶ್ರೀನಿವಾಸಯ್ಯ! ]

ಹನ್ನೊಂದೂ ನಾಲ್ವತ್ತೈದು ಅಂದರೆ ? ಹನ್ನೆರಡಕ್ಕಿಂತ ಕಡಮೆ. ಅಂದರೆ ಮಧ್ಯಾಹ್ನದ ಹೊತ್ತು.

ಇವತ್ತು ಮಧ್ಯಾಹ್ನ.

ಹೊರಗೆ ಮಳೆಯ ಗೆರೆಗಳು. ಆಕಾಶದಿಂದ ಭೂಮಿಗೆ ನೇರವಾಗಿ. ಸೂಜಿಯ ಹಾಗೆ. ಕೋಟಿ ಕೋಟಿ ಸೂಜಿಗಳು. ಹಾಗೆ ಚುಚ್ಚಿದರೆ ಭೂಮಿಗೆ ಎಷ್ಟು ನೋವಾಗುವುದೊ ?

ಆ ಗೆರೆಗಳಿಗಿಂತ ಭಿನ್ನವಾಗಿತ್ತು ಮೇಲ್ಛಾವಣಿಯಿಂದ ಅಂಗಳಕ್ಕೆ ಸುರಿಯುತ್ತಿದ್ದ ನೀರು. ಸದ್ಯಃ ಸೋರುವುದೆಲ್ಲ ಮೊದಲ ಮಳೆಗೆ ಮಾತ್ರ.

ಆಶ್ಚರ್ಯ. ಅವತ್ತು ಎಷ್ಟೊಂದು ಅತ್ತೆ ! ಈಗ ಅಳು ಬರುವುದಿಲ್ಲ.

ಮಳೆ ಎಂದರೇನು ? ಎಲ್ಲಿಂದ ಬರುತ್ತಿದೆ ಈ ನೀರು ? ಸ್ವರ್ಗದಲ್ಲಿರುವ ದೇವತೆಗಳೆಲ್ಲ ಅಳುತ್ತಿರುವರೊ. ಅವರ ಕಣ್ಣೀರೇ ಈ ಜಲಧಾರೆಯೊ ?

ಮುನಿಯ ಸತ್ತ ಆ ದಿವಸ ಬಿಸಿಲಿತ್ತು. ರಣರಣ ಬಿಸಿಲು.

ಆಗ ದೇವತೆಗಳು ಅಳುವ ಬದಲು ನಗುತ್ತಿದ್ದರೇನೊ. ಅಥವಾ, ಸಿಟ್ಟಿನಿಂದ ಕೂಗಾಡುತ್ತಿದ್ದರೊ ?

"ನೀ ನನ್ನ ಮದುವೆಯಾಗ್ತೀಯಾ, ಸುಬ್ಬಿ ?"

ಎಷ್ಟು ಇಂಪಾಗಿತ್ತು ಧ್ವನಿ. ಎದೆಯೊಳಗೇನೋ ಕುಪ್ಪಳಿಸಿದ ಹಾಗಾಯಿತು ತನಗೆ. ತಾನು ಕೇಳಿದ್ದೆ :

"ಏ, ಅದೆಂಗಾತದೆ !"

"ಯಾಕೆ ? ನೀನು ಯಾರ ಹೆಂಡತೀನೂ ಅಲ್ವಲ್ಲ ?"

"ಇಸ್ಸಿ !"

ಮಾತಿಗೆ ಅರ್ಥ ಬೇಡವೆ ?

ಅವರು ಕೇಳಿದ್ದರು :

"ಅಂದರೆ ? ನಾನು ಒಪ್ಪಿಗೆ ಇಲ್ಲ ಅಂತಲಾ ?"

"ನಿಮ್ಮನ್ನ ನಾನು ಒಪ್ಕಂಡು ಎಷ್ಟೋ ವರ್ಸ ಆಯ್ತು."

ಅದು ನಿಜ. ಸಾವಿರ ಬಾರಿಗೂ ನಿಜ. ಚಿಕ್ಕವಳಿದ್ದಾಗಿಂದ ಅವರನ್ನೇ ಅಲ್ಲವೆ ತಾನು ಗಂಡ ಎಂದು ಭಾವಿಸಿದ್ದುದು ?

ಅವರೆಂದಿದ್ದರು :

"ಎಲಾ ಕಳ್ಳಿ ! ಇಷ್ಟು ದಿನ ಹೇಳೇ ಇರ್ಲಿಲ್ಲ..."

"ನಾಚ್ಕೆ."

"ಹಾಗಾದರೆ ನಡಿ. ದಿಬ್ಬದ ಹೊಂಡಕ್ಕೆ ಹೋಗೋಣ. ನಾಚ್ಕೆ ಬಿಟ್ಟು ಒಪ್ಪಿಗೆ ಅನ್ನೋದನ್ನ ತೋರಿಸ್ಕೊಡು."

ಡವಡವನೆಂದಿತ್ತು ತನ್ನ ಎದೆಗುಂಡಿಗೆ. ತುಸು ಕಂಪಿಸುವ ಸ್ವರದಲ್ಲಿ ತಾನು ಪ್ರಶ್ನಿಸಿದ್ದೆ :

"ಹೆಂಗೆ ?"

"ತುಟಿಗೆ ತುಟಿ..."

"ಥುತ್ ! ಥುತ್ !"

"ಹಾಗಾದರೆ ತೂ ಬಿಟ್ಟೆ."

"ನೀವು ಕೆಟ್ಟೋರು."

ತನ್ನ ಪಾದಗಳು ನೆಲಕ್ಕೆ ಅಂಟಿಕೊಂಡುವು ಒಂದು ಕ್ಷಣ.

"ಯಾಕೆ ? ನಿಂತುಬಿಟ್ಟೆಯಲ್ಲ ! ಎತ್ಕೊಂಡು ಹೋಗ್ಲೇನು ?"

"ನನಗೆ ಭಯ ."

"ನಾನಿದೀನಿ ಸುಬ್ಬೀ."

ಶವ. ಹದ್ದುಗಳು. ತಾವು ಓಡಿ ಬಂದೆವು...

ನಾನಿದೀನಿ ಸುಬ್ಬಿ—ಎಂದು ಅವರು ನುಡಿದಾಗ ಎಷ್ಟೊಂದು ಧೈರ್ಯವಂತರಂತೆ ಕಂಡರು !

ನಾನಿದೀನಿ ಸುಬ್ಬಿ. ಅದೇ ಕೊನೆಯ ಮಾತು. ಅದೇ ಕೊನೆಯ ಮಾತು.

...ಕಿಟಕಿಯ ಬಳಿ ನಿಂತು ಯೋಚಿಸುತ್ತಿದ್ದ ಸುಭದ್ರೆಯ ಕಣ್ಣುಗಳು ಭಾರವಾದುವು.

ಹಾಗೆಯೇ ನಿದ್ದೆ ಬಂದು ತಾನು ಕೆಳಗೆ ಉರುಳಬಹುದು ಎನಿಸಿತು.

ಆದರೆ ಮರುಕ್ಷಣವೇ ಮಂಪರಿನ ಪರದೆ ಸರಿದು ಎಲ್ಲವೂ ಸ್ಪಷ್ಟವಾಗತೊಡಗಿತು ಸುಭದ್ರೆಗೆ.

ನಾನಿದ್ದೀನಿ ಸುಬ್ಬೀ— ಎಂದು ಆತ ಹೇಳಿದುದು ಆಡಂಬರದ ಮಾತು. ನಟನೆ. ಕೃತ್ರಿಮ.

ಅದು ನಿಜವಾಗಿದ್ದರೆ ಬೇರೆ ಮದುವೆಯಾಗುತ್ತಿದ್ದರೆ ಅವರು ? ಬೇರೆ ಮದುವೆ ? ಬೇರೆ ಎನ್ನುವುದು ಸರಿಯೆ ? ನನ್ನನ್ನು ಅವರು ಮದುವೆಯಾಗಲಿಲ್ಲ ? ತನಗೆ ತಾಳಿ ಕಟ್ಟಿರಲಿಲ್ಲವಲ್ಲ ? ಹೊಸಳ್ಳಿಯಿಂದ ಮುನಿಸಾಮಿ ಬಂದು ವಾಲಗ ಬಾರಿಸಲಿಲ್ಲವಲ್ಲ ?

ಈಗ ತನಗೆ ಕೇಳಿಸುತ್ತಿರುವುದು ವಾಲಗದ ಸದ್ದು. ನಗರದಿಂದ. ರಂಗಣ್ಣನಿಗೆ ಇನ್ನೂ ಚೆನ್ನಾಗಿ ಕೇಳಿಸುತ್ತಿರಬಹುದು. ರಂಗಣ್ಣ—

ಅಣ್ಣನಾದವನೇ ಕತ್ತು ಹಿಸುಕಿದ.

ಆದರೆ, ಅಣ್ಣನ ತಪ್ಪೇನಿದೆ ಇದರಲ್ಲಿ ? ಹೆತ್ತವರಿಗೆ ಹೆದರಿಕೊಂಡು ತನ್ನನ್ನು ಮರೆತವರು ಅವರೇ ಅಲ್ಲವೆ ?

ಅತ್ತೆ ಹೇಳಿದ್ದಾರೆ : ಈ ವರ್ಷವೇ—ನವರಾತ್ರಿಗೆ ಎಂದರಲ್ಲವೆ? ತನ್ನ ಮದುವೆ. ಹೊಸಳ್ಳಿಯ ಗೌಡರ ಮಗ ವರ. ಮುನಿಸಾಮಿ ಅವರ ಜತೆಯಲ್ಲೇ ಬರುವನೊ ? ಮುಂಚಿತ ವಾಗಿಯೆ ಹಾಜರಾಗುವನೊ ?

ಆ ವರನನ್ನು ತಾನು ನೋಡಿದ್ದುಂಟು. ಆದರೆ, 'ನಿಮ್ಮನ್ನ ನಾನು ಒಪ್ಕಂಡು ಎಷ್ಟೋ ವರ್ಸ ಆಯ್ತು' ಎನ್ನುವ ಹಾಗಿಲ್ಲ.

ತಾನು ಒಪ್ಪಿಕೊಂಡವರಿಗೆ ಬೇರೆ ಮದುವೆ. ಇನ್ನು ತನಗೂ ಬೇರೆ ಮದುವೆ.

...ಸುಭದ್ರೆಯ ಗಂಟಲೊಳಗೇನೋ ಗೊರಗೊರ ಸದ್ದಾಗುತ್ತಿತ್ತು. ಬಾಯಿ ತೆರೆದು ಗಟ್ಟಿಯಾಗಿ ಅರಚಬೇಕು ಅನ್ನಿಸಿತು ಆಕೆಗೆ. ಆದರೆ ಕೊರಳಿನ ಸೆರೆಗಳು ಉಬ್ಬಿಕೊಂಡಿದ್ದುವು. ತನ್ನ ಕತ್ತನ್ನು ಬಲಿಷ್ಠ ಕೈಗಳು ಒತ್ತುತ್ತಿದ್ದಂತೆ ಭಾಸವಾಯಿತು.

ಸುಭದ್ರೆಯ ಮೈಯೆಲ್ಲ ಒಮ್ಮೆ ನಡುಗಿತು. ಕಂಕುಳಲ್ಲಿ ಬೆವರ ಹನಿ ಮೂಡಿತು. ಮೈ ತಣುಪೇರಿತು.

ವಾಲಗದ ಸದ್ದಿಲ್ಲ. ಎಲಾ! ಇದೇನು ? ಏನಾಗಿರಬಹುದು ? ನಗರದಲ್ಲಿ—

ಸುಭದ್ರೆ ಕಣ್ಣುಗಳನ್ನು ಅರಳಿಸಿ ಕಿಟಿಕಿಯಿಂದ ಹೊರಕ್ಕೆ ನೋಡಿದಳು. ಮಳೆ ನಿಂತಿತ್ತು. ಪೂರ್ತಿಯಾಗಿ.

ಕಡಮೆಯಾಗಿ, ಹನಿಯಾಗಿ, ಅದು ನಿಂತೇ ಹೋದುದನ್ನು ತಾನು ಕಾಣಲಿಲ್ಲವಲ್ಲ— ಎಂದು ಸುಭದ್ರೆಗೆ ಆಶ್ಚರ್ಯವಾಯಿತು.

ಹಾಗಾದರೆ ತಾನು ಕೇಳುತ್ತಿದ್ದುದು ವಾಲಗದ ಸದ್ದನ್ನಲ್ಲ, ಮಳೆಯ ಸಪ್ಪಳವನ್ನು.

ಅಲ್ಲಿ ಮದುವೆ ನಿಂತಿಲ್ಲ... ಜುಟ್ಟಿನ ಭಟ್ಟರು ಮಂತ್ರ ಹೇಳುತ್ತಿರಬೇಕು ಈಗ...

ಕಿಟಿಕಿಯ ಕಂಬಿಗಳಿಂದ ಕೈಗಳನ್ನು ಕಿತ್ತು, ಕೊಠಡಿಯಿಂದ ಹೊರಬರಲು ಸುಭದ್ರೆ ಯತ್ನಿಸಿದಳು. ಎಡಗಾಲಿಗೆ ಜೋಮು ಹಿಡಿದಿತ್ತು. ಬೀಳುವ ಹಾಗಾಯಿತು. ಮತ್ತೆ ಕಿಟಿಕಿಯ ದಂಡೆಗೆ ಆತು ನಿಂತಳು.

ಈ ಜೋಮು ದೇಹವನ್ನೆಲ್ಲ ಆವರಿಸಿ, ಸಹಸ್ರ ಸಹಸ್ರ ಸೂಜಿಗಳು ಶರೀರವನ್ನು

ಚುಚ್ಚಿ, ಹಾಗೆಯೇ ಸಾವು ಬಂದರೆ ?

ರಂಗಣ್ಣ ಯಾವತ್ತೋ ಅಂದ ನೆನಪು :

"ಸೂಜಿಮದ್ದು ಸಾಮಾನ್ಯ ಅಂದ್ಕೊಂಡಿಯಾ ? ಒಂದು ಚುಚ್ಚಿದರೆ ಸಾಕು ಪ್ರಜ್ಞೆ ತಪ್ಪೋರು ಎದ್ದು ನಿಂತ್ಕೋತಾರೆ. ಇನ್ನೊಂದು ಚುಚ್ಚಿದರೆ ತಿಂಗಳುಗಟ್ಲೆ ನಿದ್ದೆ ಮಾಡ್ತಾರೆ. ಮತ್ತೊಂದು ಚುಚ್ಚಿದರೆ ಸತ್ತೇ ಹೋಗ್ತಾರೆ."

ತಾನು ಕೇಳಿದ್ದೆನಲ್ಲ ?

"ಸತ್ತೋರ್‍ಗೆ ಸೂಜಿಮದ್ದು ಚುಚ್ಚಿ ಬದುಕ್ಸೋಕಾಯ್ತದಾ ?"

"ಊಹೂಂ. ಅದೊಂದು ಮಾತ್ರ ಆಗಾಕಿಲ್ಲ."

ಒಳ್ಳೆಯದೇ. ಇಲ್ಲದೆ ಹೋದರೆ ತಾನು ಸತ್ತರೂ ರಂಗಣ್ಣ ಸೂಜಿಮದ್ದು ಚುಚ್ಚಿ ಬದುಕಿಸಬಹುದು. ಆ ಶಕ್ತಿ ಅವನಿಗಿಲ್ಲ. ಆ ವಿದ್ಯೆ ಅವನಿಗೆ ತಿಳಿಯದು.

...ನಿಮಿಷಗಳು ಕಳೆದಂತೆ ಕಾಲಿನ ಜೋಮು ಬಿಟ್ಟಿತು.

ಕಾಲು ನಿದ್ದೆ ಮಾಡಿತ್ತು, ಪಾಪ. ಈಗ ಎದ್ದಿದೆ.

ಇನ್ನು ನಡೆದು ಹೋಗಬಹುದು. ಎಲ್ಲಿಗೆ ?

ಕೊಠಡಿಯಿಂದ ಹೊರಗೆ ಪಡಸಾಲೆಗೆ. ಅಲ್ಲಿಂದ ಜಗಲಿಗೆ. ಮುಂದೆ ಅಂಗಳಕ್ಕೆ.

ನೀರಿಗೆ ಕಲ್ಲೆಸೆಯಬಹುದು. ಯಾವುದಾದರೂ ಪಾತ್ರೆ ತಂದು ದೋಣಿ ಬಿಡಬಹುದು.

ಕಾಲುವೆಗೆ ಇಳಿದರೆ, ತಾನೇ ತೇಲಿ ಹೋಗಬಹುದು !

ಸುಭದ್ರೆಯ ಮೈ ಜುಮ್ಮೆಂದಿತು.

ಅಂಥ ಕೆಲಸ ತಾನು ಯಾತಕ್ಕೋಸ್ಕರ ಮಾಡಲಿ ? ಊಹೂಂ. ತಾನದನ್ನು ಮಾಡಬಾರದು.

ಅಪ್ಪಾ, ಅಪ್ಪಾ...

ತಂದೆ ತನ್ನನ್ನು ಕರೆದುಕೊಂಡು ಹೋಗಬಾರದಿತ್ತೆ ?

ಮೊದಲಾಗಿದ್ದರೆ ತನ್ನ ತಂದೆಗೆ ತಾನು ಬಾಲ. ಈಗಲೊ ? ತಾನು ದೊಡ್ಡವಳು...

"ಬಿರ್‍ನೆ ಬಾ."

ಮಾದನ ಮಗ ತನ್ನ ತಮ್ಮನನ್ನು ಕರೆಯುತ್ತಿದ್ದ. ಅವರ ಹಿಂದಿನಿಂದ ತಾಯಿ ನೀಲಿಯೂ ಬರುತ್ತಿದ್ದಳು.

ಹೊರ ಬಾಗಿಲಲ್ಲಿ ನಿಂತಿದ್ದ ಸುಭದ್ರೆ ಬಾಯಿ ತೆರೆದಳು.

"ಎಲ್ಗೆ ?"

ಆ ಪ್ರಶ್ನೆ ಅವಳ ಗಂಟಲಿನಿಂದಲೆ ಹೊರಬಿತ್ತು.

ನೀಲಿ ಅಂದಳು :

"ಒಳೀಗಂಟ ಒಗ್ತೀವಮ್ಮಾ. ಕಾಯಿ ಇಡೀತವ್ರೆ."

ಅದು ವರ್ಷದ ಆಟ. ನದಿಯಲ್ಲಿ ಪ್ರವಾಹ ಬಂದಾಗ ಕಾಯಿಯೋ ಕೊರಡೋ ಮರವೋ ಮೋಪೋ ಗಂಟುಗದಡಿಯೊ—ಮೇಲಿನಿಂದ ಏನು ತೇಲಿ ಬಂದರೂ ಹಳ್ಳಿಯವರು ಅದನ್ನು ಹಿಡಿಯುವರು. ಅವರ ಕೈಗೆ ಸಿಗದೇ ಇದ್ದುದು ಕೆಳಗಿನ ಜನರ ಸೊತ್ತು. ಅಲ್ಲಿ ಉಳಿದುದು ಮುಂದಿನ ಹಳ್ಳಿಯವರಿಗೆ.

ಈಸು ಚೆನ್ನಾಗಿ ಬಲ್ಲ ಧೀರರಿಗೆ ಮಾತ್ರ ಆ ಆಟ. ಉಳಿದವರೆಲ್ಲ ದಂಡೆಯ ಮೇಲೆ ನಿಂತು ನೋಡುವ ಪ್ರೇಕ್ಷಕರು.

ಒಮ್ಮೆಲೆ ಸುಭದ್ರೆ ಅಂದಳು :

"ಇರು ನೀಲಿ, ನಾನೂ ಬತ್ತೀನಿ."

ಅತ್ತೆಗೆ ಹೇಳಿದರೆ ಅವರು ಬೇಡವೆನ್ನಬಹುದು. ಗಂಜಿ ಕುಡಿದ ಮೇಲೆ ಹೋಗು ಎಂದು ತಡೆಯಬಹುದು.

ಸುಭದ್ರೆ ಬಾಗಿಲೆಳೆದುಕೊಂಡಳು.

"ಅಮ್ಮಾವ್ರಿಗೆ ಯೋಳ್ಬನ್ನಿ," ಎಂದಳು ನೀಲಿ.

"ಶ್!"

ಸುಭದ್ರೆ ಮೂಗಿನ ತುದಿ ತುಟಿಗಳ ಮೇಲೆ ಬೆರಳಿಟ್ಟಳು.

ನೀಲಿಯನ್ನೂ ಆಕೆಯ ಮಕ್ಕಳನ್ನೂ ಸುಬ್ಬಿ ಹಿಂಬಾಲಿಸಿದಳು. ಪಾದಗಳನ್ನು ತೋಯಿಸುವಷ್ಟು ನೀರು ನಿಂತಿದ್ದ ಕಾಲುದಾರಿ. ನಡೆಯಲು ಹೊಲದ ಏರಿಗಳು.

ನೀಲಿಯ ಮಕ್ಕಳಿಗೆ ಸಂಭ್ರಮ.

ದಿಗಂತ ಮುಟ್ಟಿದಂತೆ ಹಳ್ಳಿಯಿಂದಾಚೆಗೆ ಚಾಚಿತ್ತು ಕೆಂಪು ನೀರು.

"ಮೂರಾಳೆತ್ತರ ನೀರು ಬಂದೈತೆ ಅವ್ವಾ."

ನೀಲಿಯ ಮಾತುಗಳೇನೋ ಸುಭದ್ರೆಯ ಕಿವಿದಂಡೆಗಳನ್ನು ತೋಯಿಸಿದುವು. ಆದರೆ ಒಳಕ್ಕೆ ಇಳಿಯಲಿಲ್ಲ.

"ಈ ಪಾಟಿ ನೀರಾಗೆ ಕಾಯಿ ಎಂಗಿಡೀತಾರೊ ?"

—ನೀಲಿಯದೇ ಧ್ವನಿ.

ಮಧ್ಯ ವಯಸ್ಸಿನ ಗಂಡ ಮಾದ ಆ ಕೆಲಸಕ್ಕೆ ಹೋಗುವುದಿಲ್ಲ, ಎಂದು ನೀಲಿ ಬಲ್ಲಳು. ಆದರೂ, ಹಳ್ಳಿಯ ಜವ್ವನಿಗರ ಹುಚ್ಚು ಸಾಹಸದ ಬಗೆಗೆ ಅವಳಿಗೆ ವಿವಂಚನೆ.

ಆ ಮಾತೂ ಸುಭದ್ರೆಯ ಮೆದುಳನ್ನು ಮುಟ್ಟಲಿಲ್ಲ.

ಹಳ್ಳಿಯ ಹೆಂಗಸರು ಇತರ ದಿನಗಳಲ್ಲಿ ಬಟ್ಟೆಯೊಗೆಯುವ ತಾಣಕ್ಕೆ ಅವರು ಬಂದರು. ಅಲ್ಲೊಂದು ಮಾವಿನ ಮರವಿತ್ತು. ಈಗ ಕಾಣಿಸುತ್ತಲಿದ್ದುದು ಅದರ ಕೆಲವು ಕೊಂಬೆಗಳು ಮಾತ್ರ. ಹಳ್ಳಿಯ ಜನ ಉದ್ದಕ್ಕೂ ನಿಂತಿದ್ದರು, ಪ್ರವಾಹದಲ್ಲಿ ತೇಲಿ ಬರುತ್ತಿದ್ದುದನ್ನು ನೋಡುತ್ತ.

ನೀರಿಗಿಳಿಯುವ ಹವಣಿಕೆಯಲ್ಲಿ ಕೆಲವರಿದ್ದರು.

"ಬ್ಯಾಡ್ರೋ, ಬ್ಯಾಡ್ರೋ," ಎಂಬ ಹಿರಿಯರ ಎಚ್ಚರಿಕೆ ಅವರನ್ನು ತಡೆಯುತ್ತಿತ್ತು.

ಗೌಡರ ಮಗಳು ಬಂದುದು ಆ ಗದ್ದಲದಲ್ಲೂ ಇತರರ ಗಮನಕ್ಕೆ ಬಂದಿರಲಿಲ್ಲ.

ಸ್ವತಃ ಶಾಮೇಗೌಡರಿನ್ನೂ ನದೀ ದಂಡೆಯನ್ನು ಮುಟ್ಟಿರಲಿಲ್ಲ.

ಹೋ—ಎಂದರು ಜನ. ಮನೆಯ ಛಾವಣಿಗಳೇ ತೇಲಿ ಬರತೊಡಗಿದವು ಮೇಲಿನಿಂದ. ಯಾವುದೋ ಹಳ್ಳಿಯನ್ನು—ಒಂದು ಹಳ್ಳಿಯೋ ಎರಡೋ ಮೂರೋ—ಹಾಲು ಹೊಳೆ ಕೊಚ್ಚಿಕೊಂಡು ಬರುತ್ತಿತ್ತು.

ನದಿಯ ನಡುವೆ ಬೆಳ್ಳಗೆ ಅದೇನೋ ಕಾಣಿಸಿದಂತಾಯಿತು ಸುಭದ್ರೆಗೆ.

"ಅಕಾ!"

ಆಕೆ ಅಂದಳು, ಕೈ ಮುಂದಕ್ಕೆ ಚಾಚಿ.

ಕೈಯ ಜತೆಗೆ ಕಾಲುಗಳೂ ಮುಂದುವರಿದಿದ್ದುವು.

"ಇಂದಕ್ಕನ್ನಿ !" ಎಂದು ಸುತ್ತಲಿದ್ದವರು ಕೂಗಿಕೊಳ್ಳುತ್ತಿದ್ದಂತೆಯೇ "ಹಾ!" ಎಂದು ಒಬ್ಬ ರೈತ ಚೀರಿದ.

—"ಅಯ್ಯೋ! ಹಯ್ಯೋ!"

—"ಗೌಡರ ಮಗಳು ! ಯಪ್ಪಾ ! ಯಪ್ಪಾ !"

ಗದ್ದಲ. ಕೂಗಾಟ.

ಒಂದೆರಡು ನಿಮಿಷ ಮಾತ್ರ.

ಸಂದಣಿಯಿಂದ ಮುಂದಕ್ಕೆ ನುಗ್ಗಿ ಮೂವರು ನಾಲ್ವರು ನೀರಿಗೆ ಹಾರಿದರು.

ಅಲ್ಲಿ ಸೆಣಸಾಟ, ಹುಡುಕಾಟ.

ಮೇಲೆ ಸದ್ದಿಲ್ಲ. ಯಾರೋ ಎತ್ತಿಕೊಂಡಿದ್ದ ಮಗುವೊಂದೇ ಗಟ್ಟಿಯಾಗಿ ಅತ್ತಿತು. ಅದಕ್ಕೆ ಹಿನ್ನೆಲೆಯಾಗಿತ್ತು ಬುಸುಗುಟ್ಟುತ್ತಿದ್ದ ಹಾಲು ಹೊಳೆಯ ಘೂತ್ಕಾರ ಧ್ವನಿ.

ಒಂದು ಯುಗದಂತೆ ಕಂಡ ಐದು ನಿಮಿಷಗಳು.

ಇಬ್ಬರು ಸುಭದ್ರೆಯನ್ನೆಳೆದುಕೊಂಡು ದಡದತ್ತ ಈಸಿದರು. ಉಳಿದಿಬ್ಬರು ಅವರನ್ನು ಹಿಂಬಾಲಿಸಿದರು. ನಿಂತಿದ್ದವರು ಅವರನ್ನು ಮೇಲಕ್ಕೆಳೆದುಕೊಂಡರು.

...ಆ ದಿಕ್ಕಿಗೆ ಬರುತ್ತಿದ್ದ ಗೌಡರಿಗೆ ಕರಿಯನೆಂದ:

"ಯಾರೋ ನೀರಿಗೆ ಬಿದ್ದಂಗೈತೆ."

ಹಾಗೆ ಹೇಳುತ್ತ, ಗೌಡರು ಮಡಚಿಕೊಟ್ಟಿದ್ದ ಕೊಡೆಯನ್ನು ಒಂದು ಕಂಕುಳಿಂದ ಇನ್ನೊಂದಕ್ಕೆ ಆತ ವರ್ಗಾಯಿಸಿದ.

"ಗೌಡ್ರು ಬಂದ್ರು! ದಾವಿ ಬಿಡಿ! ದಾರಿ!"

ಜನರ ಗುಂಪು ತುಟಿ ತೆರೆದು, ಗೌಡರನ್ನು ಒಳಕ್ಕೆ ಬಿಟ್ಟು, ಮತ್ತೆ ಮುಚ್ಚಿಕೊಂಡಿತು.

ಅಂಗಾತ ಮಲಗಿದ್ದ ಮಗಳನ್ನು ಗೌಡರು ಕಂಡರು.

## ೨೫

ಗೌಡರ ಮಗಳು ಬದುಕಿ ಉಳಿದಳು. ಜಠರವನ್ನೂ ಶ್ವಾಸಕೋಶಗಳನ್ನೂ ಹೊಕ್ಕಿದ್ದ ಕಲಕು ನೀರನ್ನು ಹೊರಕ್ಕೆ ತೆಗೆದ ಮೇಲೆ, ಆ ಎಳೆಯ ಜೀವಕ್ಕೆ ಪ್ರಜ್ಞೆ ಮರಳಿತು.

ಸೂರ್ಯನ ಬೆಳಕನ್ನು ಕಣಿವೇಪಳ್ಳಿಯ ಜನ ಮತ್ತೆ ಕಂಡರು. ಮಳೆ ನಿಂತ ಮೇಲೂ ಎರಡು ದಿನ ಹಾಲು ಹೊಳೆ ತನ್ನ ಅಬ್ಬರವನ್ನು ಕಡಮೆ ಮಾಡಲಿಲ್ಲ. ಮೂರನೆಯ ದಿನ ಬಳಲಿಕೆಯ ಲಕ್ಷಣಗಳು ತೋರಿದುವು.

ಮಗಳನ್ನು ಎತ್ತಿಕೊಂಡು ಮನೆಗೆ ತಂದು ಬೆಚ್ಚಗೆ ಹೊದಿಸಿ ಮಲಗಿಸಿದ ಮೇಲೆ, ಜೋಲು ಮೋರೆ ಹಾಕಿಕೊಂಡು ಗೌಡರು ಆಕೆಯ ಮಗ್ಗುಲಲ್ಲೇ ಗಂಟೆಗಟ್ಟಲೆ ಕುಳಿತರು.

ನಾಗಮ್ಮ ಆಡಿದ್ದನ್ನೇ ಆಡಿದರು :

"ಓಗ್ತೀನಿ ಅಂತ ಒಂದು ಮಾತು ಯೋಳಿದ್ದಿದ್ರೆ ನಾ ಬಿಡ್ತಿದ್ನಾ ?"

ಬೇಸತ್ತ ಗೌಡರೆಂದರು :

"ಓಗ್ಲಿ ಬುಡು. ಏಟು ಸಾರೆ ಅದನ್ನೇ ಅಂತಿಯಾ ?"

ದಂಡೆಯಲ್ಲಿ ನೆರೆದಿದ್ದವರೆಲ್ಲ ನುಡಿದುದಿಷ್ಟೆ : ಅಡಿ ಜಾರಿ ಪ್ರಮಾದವಾಯಿತು.

ನಿಜ, ನಿಜ. ಉದ್ದೇಶಪೂರ್ವಕವಾಗಿ ಸುಬ್ಬಿ ನೀರಲ್ಲಿ ಬಿದ್ದಳೆಂಬ ಯೋಚನೆ ಕೂಡಾ ಸರಿಯಲ್ಲ. ಆದರೂ ಮರಿಚೇಳೊಂದು ಬಾಲದ ಕೊಂಡಿ ಎತ್ತಲು ನೋಡುತ್ತಿತ್ತು. ಇರಬಹುದೆ ? ತಾನಾಗಿಯೇ ಸುಬ್ಬಿ–? ಥೆಕ್ !–ಎಂದು ಧ್ವನಿ ಹೊರಡಿಸಿ ಗೌಡರು ಮನಸ್ಸಿನಿಂದ ಆ ಚೇಳನ್ನು ಕಿತ್ತು ದೂರ ಎಸೆದರು.

ನಗರಕ್ಕೆ ಹೇಳಿ ಕಳುಹಿಸಿ ಮಗನನ್ನು ಕರೆಸುವುದು ಮೇಲಲ್ಲವೆ ?–ಎಂದು ಒಮ್ಮೆ ಗೌಡರಿಗೆ ಅನಿಸಿತು. ಬಹಳ ಹೊತ್ತಿನ ನಿದ್ದೆಯ ಬಳಿಕ ಎಚ್ಚೆತ್ತು ತಂದೆಯ ಮುಖ ನೋಡಿ ಸುಭದ್ರೆ ನಸುನಕ್ಕಾಗ, ಮಗನನ್ನು ಕರೆಸುವ ಯೋಚನೆಯನ್ನು ಗೌಡರು ಬಿಟ್ಟುಕೊಟ್ಟರು.

ಒಂದಿಷ್ಟು ಬಿಸಿ ಗಂಜಿ ಸೇವಿಸಿದ ಮೇಲೆ ಸುಭದ್ರೆ ಅಂದಳು :

"ನದೀಲಿ ಏನೋ ಬೆಳ್ಳಗೆ ಕಾಣಿಸ್ತು, ಅಪ್ಪ. ಅಕಾ ಅಂದೆ. ಅಡಿ ಜಾರ್ತು."

ತಾನು ಒಂದು ಹೆಜ್ಜೆ ಮುಂದಿಟ್ಟುದನ್ನು ಅವಳು ಬಲ್ಲಳು. ಯಾಕೆ ? ಯಾಕೆ ಇಟ್ಟಳು ? ಅವಳಿಗೆ ತಿಳಿಯದು. ತಾನು ಮಾಡಿದ ತಪ್ಪನ್ನು ಒಪ್ಪಿಕೊಳ್ಳಲಾರಳು ಆಕೆ.

ಗೌಡರೆಂದರು :

"ಓಗ್ಲಿ ಬುಡು. ಪರಮಾತ್ಮ ಕಾಪಾಡ್ದ."

"ಒಂದೆರಡು ದಿನಗಳಲ್ಲಿ ಸುಬ್ಬಿ ಓಡಾಡತೊಡಗಿದಳು. ನದಿಯ ಪ್ರವಾಹ ಕಡಮೆಯಾದ ದಿನ ಅವಳು ಅಂಗಳಕ್ಕಿಳಿದು, ಹಗಲು ಬೆಳಕಿನಲ್ಲಿ ತನ್ನ ಪರಿಸರವನ್ನು ದಿಟ್ಟಿಸಿದಳು. ಎಲ್ಲವೂ ಹೊಸದಾಗಿ ಆಕೆಗೆ ಕಂಡಿತು.

ನಗರದಲ್ಲಿ ಮದುವೆ ಮುಗಿಸಿಕೊಂಡು ಶ್ರೀನಿವಾಸಯ್ಯ ತಮ್ಮ ಪರಿವಾರದೊಡನೆ ಆ ದಿವಸ ಕಣಿವೇಹಳ್ಳಿಗೆ ವಾಪಸಾದರು.

ಹಳ್ಳಿಯ ಜನ ಕೆಲಸ ಬೊಗಸೆಗಳನ್ನು ಬಿಟ್ಟು ಅಯ್ಯನವರ ಸೊಸೆಯರನ್ನು ನೋಡಲು ಹೋದರು.

ವಿಷ್ಣುಮೂರ್ತಿಯವರ ಸಂಧಾನದ ಫಲವಾಗಿ ಕಾಮಾಕ್ಷಿ ಆರತಿಯರಿಬ್ಬರೂ ತಮ್ಮ ಗಂಡಂದಿರನ್ನು ಹಿಂಬಾಲಿಸಿದ್ದರು, ಕಣಿವೇಹಳ್ಳಿಗೆ. ನಾಲ್ಕು ದಿನ ಬಿಟ್ಟು ಹಳ್ಳಿಯಲ್ಲಿ ಆರತ್ಯಕ್ಷತೆ ಎಂದು ಗೊತ್ತಾಗಿತ್ತು.

"ನೀವೇನೂ ಯೋಚಿಸ್ಬೇಡಿ ಶ್ರೀನಿವಾಸಯ್ಯನವರೇ, ದಂಡು ಬಂದ ಹಾಗೆ ಬರ್ತೀವಿ ಅವತ್ತು." ಎಂದಿದ್ದರು ವಿಷ್ಣುಮೂರ್ತಿ.

ದುಃಖಿ ಗೋಪಾಲನೊಬ್ಬನೇ. ಹೆಂಡತಿಯನ್ನು ಕರೆದುಕೊಂಡು ನಗರಕ್ಕೆ ಹೋಗಲೆಂದು ಆತ ಸೋಮಪುರ ತಲಪಿದ್ದ. ಭಾಗೀರಥಿ ಅಲ್ಲಿ ಹರ್ಷಚಿತ್ತಳಾಗಿದ್ದಳು.

ಗೋಪಾಲ ವಿಳಂಬವಿಲ್ಲದೆ, "ನಾಳೆ ಬೆಳಗ್ಗೆ ಹೊರಡ್ಬೇಕಲ್ಲ," ಎಂದ ಹೆಂಡತಿಯೊಡನೆ. ಅವಳ ದೃಷ್ಟಿ ಗಂಡನನ್ನು ನೇರವಾಗಿ ಸಂಧಿಸಿತು.

" ನಾನು ಬರೋದಿಲ್ಲ."

" ಅದು ಹ್ಯಾಗಾಗುತ್ತೆ ?"

" ಬರೋದಿಲ್ಲ, ಅಂದೆ. ನೀವು ಬೇಕಾದರೆ ಹೋಗ್ಬಹುದು."

" ದೊಡ್ಡಮ್ಮ ಏನೆಂದಾರು ?"

" ಏನು ಬೇಕಾದರೂ ಅನ್ಲಿ. ನಾನು ಬರೋದಿಲ್ಲ."

" ಇಷ್ಟು ದಿವಸವಾದರೂ ನಗರ ನೋಡ್ಲಿಲ್ಲ ಅಂತಿದ್ದೆ."

" ಮಗ ದೊಡ್ಡವನಾದ್ಮೇಲೆ ಕರಕೊಂಡು ಹೋಗ್ತಾನೆ. ಮದುವೆಗೆ ನಾನು ಬರೋದಿಲ್ಲ."

ಗೋಪಾಲ ನಿಟ್ಟುಸಿರುಬಿಟ್ಟ.

ಅವನ ಮಾವ ಅಳಿಯನನ್ನು ಪಕ್ಕಕ್ಕೆ ಕರೆದು, " ಓರಗಿತ್ತಿಯರು ಮನೆಗೆ ಬರೋಕ್ಮುಂಚೇನೆ ಹೀಗೆ. ಮುಂದೆ ಏನಾಗುತ್ತೋ ಏನೋ.' ಸುಮ್ನೆ ಮನಸ್ಸಿಗೆ ಹಚ್ಕೊಂಡಿದಾಳೆ. ಮದುವೆಗೆ ಬರ್ಲೇ ಬೇಕೂಂತ ಒತ್ತಾಯ ಮಾಡ್ಬೇಡಿ," ಎಂದರು.

ಗೋಪಾಲ ಕೇಳಿದ :

" ನೀವು ?"

" ಅವಳ್ನ ಇಲ್ಲಿ ಬಿಟ್ಬಿಟ್ಟು ಹ್ಯಾಗ್ಬರ್ಲಿ ?"

" ಅದ್ನಿಜ. ನಾನೊಬ್ನೇ ಹೋಗ್ತೀನಿ."

...ದಾರಿಯುದ್ದಕ್ಕೂ ತಲೆ ಕೆರೆದುಕೊಂಡ ಗೋಪಾಲ. ನಗರ ತಲಪಿ, ಕಲ್ಯಾಣ ಮಂಟಪಕ್ಕೆ ಬಂದು, " ಅವಳಿಗಿನ್ನೂ ಆರೋಗ್ಯ ಸರಿಯಿಲ್ಲ. ಅವತ್ತು ಇದ್ದ ಹಾಗೇ ಇದಾಳೆ," ಎಂದ.

ಮೊಮ್ಮಗ ಆಡಿದುದು ಎಷ್ಟು ನಿಜವೋ ಎಷ್ಟು ಸುಳ್ಳೋ. ಮನೆಯ ಹಿರಿಯ ಸೊಸೆ ಮೈದುನಂದಿರ ಮದುವೆಗೆ ಬರಲಿಲ್ಲ ಎನ್ನುವುದಷ್ಟೇ ತಥ್ಯ, ದೊಡ್ಡಮ್ಮನ ಪಾಲಿಗೆ. ಚಿಂತೆಯಿಂದ ಅವರ ಹುಬ್ಬುಗಳು ಭಾರವಾದವು.

ಮದುವೆ ಮನೆಯಲ್ಲಿ 'ಅಸ್ವಸ್ಥ'ಳಾಗುವುದಕ್ಕಿಂತ ಬರದಿದ್ದುದೇ ಒಳಿತಾಯಿತು—ಎಂದುಕೊಂಡರು ಕೊನೆಯಲ್ಲಿ.

ಗೋಪಾಲನೊಬ್ಬನೇ ಬಂದುದನ್ನು ಕಂಡ ವಿಷ್ಣುಮೂರ್ತಿಯವರೂ ಮೋಹನರಾಯರೂ ಸಮಾಧಾನದ ನಿಟ್ಟುಸಿರುಬಿಟ್ಟರು.

...ಈಗ ಅಯ್ಯನವರ ಹೊಸ ಸೊಸೆಯರು ಮನೆಗೆ ಬಂದಾಗ ಹಿರಿಯವಳು ಕಣ್ಣಿಗೆ ಬೀಳದುದನ್ನು ಕಂಡು ಹಳ್ಳಿಯವರಿಗೆ ವಿಸ್ಮಯವಾಯಿತು.

ಮಾತುಗಳಿಗೇನು ಕಡಮೆ ?

—" ತವರಿಗೆ ಹೋದಾಕೆ ಬಂದೇ ಇಲ್ಲ."

—" ಆವತ್ತಿಂದೇ ಕಾಯಿಲೆ. ಭೂತಚೇಷ್ಟೆ."

[ಗೌಡರ ಕಿವಿಗೂ ಅದು ಬಿತ್ತು. ತಮಗೆ ದಿನಗಳು ಯಾತನಾಮಯ ಎನಿಸಿದಾಗ, ಅವರಿಗೆ ಸಂತೋಷ–ಸಂಭ್ರಮ ಎಂದುಕೊಂಡಿದ್ದರು. ಅದು ವಿಚಿತ್ರವಾಗಿ ಕಂಡಿತ್ತು. ಆದರೆ ಈಗ, ಒಂದಿಷ್ಟು ಕಹಿಯನ್ನು ದೇವರು ಅವರಿಗೂ ಬಡಿಸಿದ್ದಾನೆ –ಎಂದು ತಮ್ಮನ್ನು ತಾವೇ ಸಂತೈಸಿದರು.]

ಗಜಾನನ ಹೋಟೆಲಿನ ಒಲೆಗೆ ಮತ್ತೆ ಉರಿಹಾಕಿದ.

"ನೀನು ಇಲ್ಲೇ ಇರ್ಬೇಕು ಜಲ್ಜಾ," ಎಂದು ಕಾಮಾಕ್ಷಿ ದುಂಬಾಲು ಬಿದ್ದುದರಿಂದ, "ಆರತ್ಯಕ್ಷತೆ ಆಗೋತನಕ ಇರ್ತೀನಮ್ಮ," ಎಂದು ಜಲಜಮ್ಮ ತನ್ನ ಮಗುವಿನೊಡನೆ ಶ್ರೀನಿವಾಸಯ್ಯನವರಲ್ಲಿಯೇ ಉಳಿದಳು.

ಆರತಿಗೆ ಆ ಬದುಕು ಒಗ್ಗುವುದು ಸಾಧ್ಯವೇ ಇರಲಿಲ್ಲ. ತನ್ನ ತಂದೆಗೂ ವಿಷ್ಣುಮೂರ್ತಿಯವರಿಗೂ ಇರುವ ಸಖ್ಯವನ್ನು ಸ್ಮರಿಸಿಕೊಂಡು, ಕಾಮಾಕ್ಷಿಯೊಡನೆ ಸ್ನೇಹದಿಂದಿರಲು ಅವಳು ಪ್ರಯತ್ನಪಟ್ಟಳು. ವಿದ್ಯೆಯಲ್ಲಿ ಸಂಸಾರದಲ್ಲಿ ಅಂತಸ್ತಿನಲ್ಲಿ ಹೋಟೆಲು ಮಾಲಿಕನ ಆ ಮಗಳು ತನಗಿಂತ ಕೀಳು ಎಂಬ ಆರತಿಯ ಖಚಿತಾಭಿಪ್ರಾಯ ಅವರೊಳಗೆ ಆತ್ಮೀಯತೆ ಬೆಳೆಯಲು ಅಡ್ಡಿಯಾಯಿತು. ನಿಷೇಕ ಪ್ರಸ್ತದ ಶಾಸ್ತ್ರವೂ ಮುಗಿದಿದ್ದ ದಂಪತಿಗಳು. ಆರತಿ ಪದ್ಮನಾಭನ ಕೊಠಡಿಯನ್ನು ತನ್ನ ಕೋಟೆಯಾಗಿ ಮಾಡಿಕೊಂಡಳು. ಅಗಣಿ ಹಾಕಿಕೊಂಡು ಹಗಲೋ, ಇರುಳೋ, ಹೆಣ್ಣುಗಂಡಿನ ಆಟ ಅವರು ಆಡಿದ್ದೇ ಆಡಿದ್ದು.

ಗೋಪಾಲನಿಗೆ ಪಡಸಾಲೆಗೆ ವರ್ಗವಾಗಿತ್ತು. ಗೋವಿಂದ ಕಾಮಾಕ್ಷಿಯರ ಚೆಲ್ಲಾಟಕ್ಕೆ ಅವನ ಕೊಠಡಿ ಸ್ಥಳಾವಕಾಶವಿತ್ತಿತು.

ಕಾಮಾಕ್ಷಿ ಗಂಡನನ್ನು ಕೇಳಿದಳು :

"ಯಾವುದ್ರೀ ನಿಮ್ಮ ರೂಮು ?"

"ಅದೇ – ಪದ್ಮ ಇರೋದು."

"ಆ ರೂಮು ಇದಕ್ಕಿಂತ ಚೆನ್ನಾಗಿದೆ. ಅಲ್ಲೇ ಇರೋಕಾಗ್ತಿರ್ಲಿಲ್ವ ನಾವು ? ಈ ಕತ್ತಲೆ ಕೋಣೇಲಿ–"

"ಕತ್ತಲೆ ಕೋಣೇನೇ ಮೇಲು ಅಲ್ವಾ ?"

"ಅದೇನು ಮೇಲು, ಬೆಳಕಿಲ್ದೆ ?"

"ದೀಪ ಹಚ್ಕೊಂಡರಾಯ್ತು."

"ದೀಪ ? ಹಗಲು ?"

"ಅಲ್ಲ, ರಾತ್ರೆ."

"ಹೋಗ್ರಿ ನೀವು. ನಾನು ಹೇಳಿದ್ದು ನಿಮಗೆ ಅರ್ಥವಾಗೊಲ್ಲ."

"ಬಿಚ್ಚಿ ಹೇಳು," ಎಂದು ಹೆಂಡತಿಯ ಉಡಿಯತ್ತ ಕೈಚಾಚಿ ಗೋವಿಂದನೆಂದ.

ಕಾಮಾಕ್ಷಿ ಗಂಡನಿಗೆ ಆತುಕೊಂಡು ಅವನ ಭುಜವನ್ನು ಕಚ್ಚಿದಳು.

ಆ ವಿಷಯದಲ್ಲಿ ಅವಳು ಮದವೇರಿದ ಹೆಣ್ಣಾನೆ. ಹೊರಗೆ ಜನರಿದ್ದಾರೆ; ಘೀಳಿಡಬೇಡ– ಎಂದು ಎಷ್ಟು ಹೇಳಿದರೂ ಕಿವಿಗೆ ನಾಟುವಂತಿರಲಿಲ್ಲ. ಗಟ್ಟಿ ಉಸಿರಾಡ್ಬೇಡ–ಎನ್ನುತ್ತಿದ್ದ ಗೋವಿಂದ ಪದೇ ಪದೇ. ಗಂಟಲಿನಿಂದ ಸ್ವರ ಹೊರಬೀಳದಿರಲೆಂದು ತನ್ನ ಬಾಯಿಯಿಂದ ಅವಳ ಬಾಯಿಯನ್ನು ಒತ್ತಿ ಹಿಡಿಯುತ್ತಿದ್ದ.

ದಣಿವು ಎಂಬುದಿರಲಿಲ್ಲ ಕಾಮಾಕ್ಷಿಗೆ. ಮತ್ತೆ ಕೆಲ ನಿಮಿಷಗಳಲ್ಲೇ ಮಾತು.

"ಅಲ್ರೀ, ಆ ಸಣಕಲಮ್ಮ ಏನ್ಮಾಡ್ತಿದಾಳೇಂತ ಆ ರೂಮ್ನಲ್ಲಿ ಬಚ್ಚಿಟ್ಕೊಂಡು."

"ಇನ್ನೇನ್ಮಾಡ್ತಾಳೆ ? ಕಥೆ ಪುಸ್ತಕ ಓದ್ತಿರ್ಬೇಕು."

"ಅವಳು ಅದಕ್ಕೇ ಲಾಯಕ್ಕು. ಓದೋದು ಅಂದರೆ ನನಗೆ ತಲೆನೋವು."

"ಇನ್ನಾವುದು ನಿನಗಿಷ್ಟ ?"

"ಇದು !"

ತೋರು ಬೆರಳಿನಿಂದ ಗೋವಿಂದನ ಹೊಟ್ಟೆಯನ್ನು ತಿವಿದಳು ಕಾಮಾಕ್ಷಿ.

"ಜಲಜ ಪಾಪ, ದೊಡ್ಡಮ್ಮನೊಟ್ಟಿಗೆ ಒಬ್ಬೇ ಇದಾಳೆ. ಹೋಗಿ ಅವಳ ಜತೇಲಿರು."

"ಯಾಕಪ್ಪ ಅವಳ ಮೇಲೆ ನಿಮಗಿಷ್ಟೊಂದು ಕನಿಕರ ?"

"ಸುಮ್ನೆ ಹೇಳ್ದೆ. ಮಗು ಚಿಕ್ದು."

"ಮಗೂಗೇನು, ಮಲ್ಕೊಂಡಿರುತ್ತೆ."

"ಕೆಲಸ್ದಲ್ಲಾದರೂ ಸಹಾಯ ಮಾಡು."

ಕಾಮಾಕ್ಷಿ ಗಟ್ಟಿಯಾಗಿ ನಕ್ಕಳು.

"ನಾನೆ ? ನಾನು ಕೆಲಸ ಮಾಡ್ಲೆ ? ಹಹ್ಹಹ್ಹ..."

"ಶ್ !" ಎಂದ ಗೋವಿಂದ. ಪ್ರಯೋಜನವಾಗಲಿಲ್ಲ. ಮಾತು ನಿಲ್ಲಿಸಬೇಕಾದರೆ ಆಟವಾಡಬೇಕು. ಕಾಮಾಕ್ಷಿ ಸಿದ್ಧವಾಗಿದ್ದಳು.

ಗೋವಿಂದ ಮನಸ್ಸಿಲ್ಲದ ಮನಸ್ಸಿನಿಂದ ಕಣ್ಣುಕ್ಕಿಳಿದ.

...ಹಳ್ಳಿಗೆ ಬಂದ ಮಾರನೆಯ ದಿನ ಕಾಮಾಕ್ಷಿ ಗಂಡನನ್ನು ಕೇಳಿದಳು :

"ಅಲ್ರೀ, ಅಮ್ಮಾವ್ರು ಯಾವಾಗ್ಬರ್ತಾರಂತೆ ?"

ಗೋವಿಂದನೆಂದ :

"ಗೊತ್ತಿಲ್ಲ. ಅರತ್ಯಕ್ಷತೆ ದಿವಸ ಹಾಜರಾಗ್ಬಹುದೂಂತ ಕಾಣುತ್ತೆ. ಕರಕೊಂಡ್ಬರೋಕೆ ಗೋಪಾಲನ್ನ ಕಳಿಸ್ತಾರಂತೆ."

"ಆಕೆ ಬಂದ್ಮೇಲೆ ನಮಗೆ ರೂಮು ?"

"ಪದ್ಮನಿಗೆ ಕಾಲೇಜಿಲ್ವೆ ? ಹೊರಟ್ಹೋಗ್ತಾನೆ."

"ಸಣಕಲಮ್ಮ ?"

"ಹಾಗನ್ಬಾರ್ದು ಕಾಮೂ. ಅವಳಿಗೇನು ಹೆಸರಿಲ್ವೆ ?"

"ಇದೆ. ಆ–ರತಿ ದೇವಿ; ಕಾಮನರಗಿಣಿ."

"ಅವನ ಹಿಂದೆ ಅವಳೂ ಹೋಗ್ತಾಳೆ."

"ಆಮೇಲೆ ಆ ರೂಮು ನನ್ದೊ ?"

"ಹ್ಞ."

"ಅಲ್ರೀ... ಈ ಮನೆ ಒಂದು ಹಳೇಕಾಲದ ಹೋಟ್ಲು ಥರ ಇಲ್ವೆ ?"

"ಏನು ಹಾಗಂದೆ ?"

"ಒಂದೊಂದು ರೂಮ್ನಲ್ಲಿ ಒಂದೊಂದು ಸಂಸಾರ. ರೂಮುಗಳಿಗೆ ನಂಬರ್ ಹಾಕ್ಬೌದು.

"ಗಣೇಶ ಭವನದ ಜ್ಞಾಪಕ ಬರುತ್ತೊ ?"

"ಹೂಂದ್ರೆ..."

"ಸರಿಹೋಯ್ತು. ಅಮ್ಮನ ನೆನಪಾಗುತ್ತೇನೊ ?"

"ಊಹೂಂ. ಕೇಸರಿಭಾತಿಂದು. ಆ ಜಲಜೆಗೆ ಹೇಳಿ ಬೆಳಗ್ಗೆ ಮಾಡಿಸ್ಬೇಕು."

"ಮಾಡ್ಸು, ಅದಕ್ಕೇನು ?"

"ಆಸೆ ಏನಿದ್ರೂ ಆ ಅಮ್ಮಾವ್ರು ಬರೋದರೊಳಗೆ ತೀರಿಸ್ಕೋಬೇಕೇನೊ ?"

"ಅಂಥಾದ್ದೇನು ?"

"ಮತ್ತೆ ? ನಮ್ಮಮ್ಮ ಹೇಳಿದಾರೆ, ಈ ಅರಮನೇಲಿ ಅವಳೇ ಯಜಮಾನಿತಿ ಅಂತ. ನಮ್ಮ ಮೇಲೆ ಸವಾರಿ ಮಾಡ್ದೆ ಇರುತಾಳೆಯೆ ?"

"ನಿಮ್ಮಮ್ಮನ ಹಿತೋಪದೇಶ ಆಗಿದೆ ಅನ್ನು."

"ಹ್ನು. ನಮ್ಮ ರಕ್ಷಣೆ ನಾವು ಮಾಡ್ಕೋಬೇಕೋ ಬೇಡ್ವೋ ?"

"ಅವಳೇನು ನಿನ್ನ ಮಾನಭಂಗ ಮಾಡ್ತಾಳೆಯೆ ?"

"ಮಾನಭಂಗ ಅಂದರೆ ?"

"[ಹೆಂಡತಿಯ ಮೈ ಮೇಲೆ ಕೈ ಹಾಕಿ] ಇದು, ಹೀಗೆ."

"ಥೂ ಹೋಗ್ರಿ !"

"ಮತ್ತೇನು ? ನಿನ್ನ ಮೇಲೆ ಸವಾರಿ ಮಾಡ್ಬಹುದೂಂತ ಯಾರಾದರೂ ಭಾವಿಸಿಕೊಂಡಿದ್ದರೆ ಅದು ಭ್ರಾಂತಿ."

"ನಿಮ್ಮೊಬ್ಬರನ್ನು ಬಿಟ್ಟು."

"ಧನ್ಯ."

ಸ್ವಲ್ಪ ಹೊತ್ತಿನ ಬಳಿಕ–

"ಏನೇ ಹೇಳಿ, ಒಂದು ಕೆಲಸ ಲೀಡರಾದ ನೀವು ಮಾಡಿಸ್ಬೇಕು. ಕೇಳಿಸ್ತ ?"

"ಎರಡು ಕಿವೀನೂ ಆಗ್ಲೇ ಕೊಟ್ಟು ಕೇಳ್ತಿದೀನಿ."

"ಅಂಗಳ ದೊಡ್ಡದಾಗಿದೆ. ಈ ಮನೆ ಪಕ್ಕದಲ್ಲಿ ಒಂದು ತಾರಸಿ ಮನೆ ಕಟ್ಟಿಸ್ಬೇಕು."

"ಬರೇ ತಾರಸಿ ಮನೆ ಯಾಕೆ? ಪತ್ರಿಕೆಗಳಲ್ಲಿ ಗಗನ ಚುಂಬಿ ಅಂತ ಬರೀತಾರಲ್ಲ. ಅದನ್ನೇ ಕಟ್ಸೋಣ."

"ಗಗನ ಚುಂಬಿ ಎಂದರೆ ? "

ಕಾಮಾಕ್ಷಿಯ ತುಟಿಗಳ ಬಳಿಗೆ ತನ್ನವನ್ನೊಯ್ದು ಗೋವಿಂದನೆಂದ :

"ಆಕಾಶಕ್ಕೆ ಮುತ್ತು ಕೊಡುವಂಥ ಕಟ್ಟಡ. ಎತ್ತರದ್ದು. ಅಲ್ಲಿಂದ ಸ್ವರ್ಗ ಸಮೀಪ."

"ರಸ್ತೆ ಮೊದಲು ಮಾಡಿಸಿ. ಬಸ್ಸು ಇಲ್ಲಿವರೆಗೂ ಬರ್ಬೇಕು. ನಡೆಯೋಕಾಗೊಲ್ಲ ವನ್ಕೈಲಿ."

"ಅಪ್ಪಣೆ."

"ಮಾಡಿಸ್ದೇ ಇದ್ರೆ ನೋಡಿ ಮತ್ತೆ. ಹೊರಟ್ಹೋದವಳು ಮತ್ತೆ ಬರೋದೇ ಇಲ್ಲ."

"ಮಧ್ಯೆ ಮಧ್ಯೆ ಒಂದಷ್ಟು ದಿವಸ ನೀನು ಇಲ್ಲಿ ಇಲ್ಲದೇ ಇದ್ದರೇ ಒಳ್ಳೇದೇನೊ."

ಕಾಮಾಕ್ಷಿಗೆ ಸಿಟ್ಟು ಬಂತು. ಮೂಗಿನ ಹೊಳ್ಳೆಗಳು ಅದುರಿದುವು.

"ಹಾಂ. ನನ್ನ ಕಳಿಸ್ಬಿಡೋಕೆ ನೋಡ್ತಿದೀರಾ ?"

"ಅಳ್ಬೇಡ ಕಾಮೂ, ನನ್ನ ಚಿನ್ನ ಅಳಬೇಡ ಅಂದ್ರೆ..."

...ಅಂತೂ ಅವರ ಪಾಲಿಗೆ ಹೊತ್ತು ಹೀಗೆ ನಿಧಾನವಾಗಿ ಕಳೆಯಿತು.

...ಚಪ್ಪರ. ತಳಿರು ತೋರಣ. ಆಳುಗಳಿಗೆ ಕೆಲಸ.

"ಗೋಪೂ, ನಿನ್ನ ಮಾವನಿಗೆ ಕಾಗದ ಬರ್ಕೊಡ್ತೀನಿ. ಹೋಗಿ ನಿನ್ನ ಹೆಂಡತೀನ ಕರ

ಕೊಂಡು ಬಂದ್ಬಿಡಪ್ಪ. ಆರತ್ಯಕ್ಷತೆ ದಿವಸ ಅವಳು ಇಲ್ಲಿ ಇಲ್ದಿದ್ರೆ ಚೆನ್ನಾಗಿ ಕಾಣ್ಸೊಲ್ಲ..." ಎಂದರು ಶ್ರೀನಿವಾಸಯ್ಯ.

"ಹೂಂ," ಎಂದ ಗೋಪಾಲ.

ಅಷ್ಟೊಂದು ಹೆಂಗಸರು ಓಡಾಡುತ್ತಿದ್ದುದನ್ನು ನೋಡಿ ನೋಡಿ, ತನ್ನ ಹೆಂಡತಿಯ ಅಗತ್ಯ ಗೋಪಾಲನಿಗೂ ಮನವರಿಕೆಯಾಗಿತ್ತು.

...ಹಳ್ಳಿಗೆ ಬಂದ ದಿನವೇ ನವದಂಪತಿಗಳು ಗುಡ್ಡ ಹತ್ತಿ ದೇವರ ದರ್ಶನ ಮಾಡಿ ಬಂದಿದ್ದರು.

ಮತ್ತೆ ಒಂದು ದಿನ ಬಿಟ್ಟು ಪದ್ಮನಾಭ ಪತ್ನಿಗೆ ಹೇಳಿದ :

"ಬಾ, ವಾಕಿಂಗ್ ಹೋಗ್ಬರೋಣ."

"ಈ ಬಿಸಿಲಲ್ಲಿ ?" ಎಂದು ರಾಗವೆಳೆದು ಕೇಳಿದಳು ಆರತಿ.

"ಇದು ಮಳೆಗಾಲದ ಬಿಸಿಲು. ಸಾಯಂಕಾಲ ಹುಯ್ದರೂ ಹುಯ್ಯಿತೇ."

"ಈಗಿನ್ನೂ ಮೂರು ಗಂಟೆ."

"ಏಳು, ಏಳು."

ಆರತಿ, ಕಥೆ ಪುಸ್ತಕವನ್ನು ಓದುತ್ತಿದ್ದಲ್ಲಿಗೇ ಬೋರಲು ಮಲಗಿಸಿ, ಎದ್ದಳು. ಸಿಂಗರಿಸಿ ಕೊಳ್ಳಲು ಇಪ್ಪತ್ತು ನಿಮಿಷ ಹಿಡಿಯಿತು.

ಪದ್ಮನಾಭನ ಸೂಚನೆಯಂತೆ ಆರತಿ, ಒಳಕ್ಕೆ ಹೋಗಿ, "ಗುಡಿಗೆ ಹೋಗ್ಬರ್ತೀವಿ, ಅಜ್ಜಿ," ಎಂದಳು ದೊಡ್ಡಮ್ಮನೊಡನೆ.

ವಾಸ್ತವವಾಗಿ ತಾವು ಅಜ್ಜಿಯೇ ಎಂಬುದು ತಿಳಿದಿದ್ದರೂ, ಈ ಹೊಸಬರು ಕೂಡಾ ತಮ್ಮನ್ನು ದೊಡ್ಡಮ್ಮ ಎನ್ನಬಾರದೇ ಎಂಬ ಆಸೆ ಅವರಿಗೆ. ಅಲ್ಲದೆ, ಸಿಂಗರಿಸಿಕೊಂಡ ಆರತಿ ನಗರದ ಬಿನ್ನಾಣಗಿತ್ತಿಯಾಗಿದ್ದಳು. ಚಿಕ್ಕವರು, ಇನ್ನೂ ತಿಳೀದು —ಎಂದುಕೊಂಡರು.

ಗುಡಿಯೊಂದು ನೆಪ. ಕಳೆದ ಎರಡು ದಿನಗಳಿಂದ ಪದ್ಮನಾಭನ ಮನಸ್ಸಿನ ಆಳದಲ್ಲಿ ಮೊಳೆತು ಹೆಮ್ಮರವಾಗಿ ಹೊರಕ್ಕೆ ಚಾಚ ಬಯಸಿತ್ತು ಒಂದು ಬಯಕೆ.

ಅದೂ ಇದೂ ಆಡುತ್ತ ಮಾತನಾಡುತ್ತ ಆರತಿಯನ್ನು ಗುಡ್ಡದ ದಾರಿಯಲ್ಲಿ ಆವನು ಕರೆದೊಯ್ದ.

ಈಗ ಆತನ ಮಗ್ಗುಲಲ್ಲಿರುವವಳು ಆರತಿಯಲ್ಲ, ಸುಭದ್ರೆ.

"ಆರತಿ, ನಾನು ನಿನಗೆ ಇಷ್ಟವಾ ?"

"ಈಗ ಓದ್ತಾ ಇರೋ ಕಥೆ ಪುಸ್ತಕದಲ್ಲಿ ಒಬ್ಬ, 'ನಾನು ನಿನಗೆ ಇಷ್ಟವಾ?' ಅಂತ ಹುಡುಗೀನ ಕೇಳ್ತಾನೆ."

"ಅವಳು ಏನು ಉತ್ತರ ಕೊಡ್ತಾಳೆ ?"

"ಹೂಂ. ರಾಜ."

"ರಾಣಿ, ಇಲ್ಲೊಂದು ಹೊಂಡ ಇದೆ. ದಿಬ್ಬದ ಹೊಂಡ. ಒಳಗೆ ಕೂತರೆ ಯಾರಿಗೂ ಕಾಣಿಸೋಲ್ಲ."

['ಇದು ವಧಸ್ಥಾನವೆನ್ನುವುದು ಈ ಹುಡುಗಿಗೆ ತಿಳಿಯದು. ವಧಸ್ಥಾನವೆನ್ನುವುದೇ ಸುಳ್ಳು. ಮುನಿಯ ಇಲ್ಲಿ ಮಲಗಿದ್ದುದು; ಗಿಡುಗ–ಹದ್ದುಗಳು– ಎಲ್ಲಾ ಸುಳ್ಳು. ತಾನೊಮ್ಮೆ

ಇಲ್ಲಿ ಪರಾಜಿತನಾದುದಷ್ಟೇ ಸತ್ಯ. ಅದೊಂದು ಕಳಂಕ. ತಾನು ಗಂಡಸು. ಅದನ್ನು ತಾನು ತೊಡೆಯಬೇಕು. ತೊಡೆ–']

"ಅಯ್ಯೋ ಆ ಮೂಲೇಲಿ ನೀರಿದೆಯಲ್ರೀ."

"ಅದೇನ್ಮಾಡುತ್ತೆ ? ಈ ಕಡೆ ನೋಡು ಹುಲ್ಲಿನ ಹಾಸಿಗೆ."

"ಇಳಿಯೋದು ಯಾತಕ್ಕೇಂತ ?"

"ಬಾ, ಹೇಳ್ತೀನಿ."

"......"

"ಇಲ್ಲಿ ಕೂತ್ಕೊಳ್ಳೋಣ."

"......"

"ನನ್ನ ಎದೆಗೆ ಒರಕ್ಕೋ..."

"ಎಂಥ ಆಸೆಯಪ್ಪ ನಿಮ್ಮದು. ಭಯವಾಗುತ್ತಲ್ರೀ ಇಲ್ಲಿ..."

"ನಾನಿದೀನಿ ಸಾರತೀ..."

"ಹೆಸರು ಬದಲಾಯಿಸ್ತೀರಲ್ರೀ ನೀವು..."

"ಸಮ್ಮೂ, ಸಾರೂ... ಯಾವ ಹೆಸರಿಟ್ಟರೂ ನೀನು ನನ್ನ ಗುಲಾಬಿಯೇ..."

ತುಟಿಗಳಿಗೆ ತುಟಿ. ಎದೆಯ ಮೇಲೆ ಕೈ. ಕೊರಳಿಗೆ ಕೈಗಳ ಹಾರ.

"ಸ್ವಲ್ಪ ಹೊತ್ತು ಮಲಕೊಂಡಿರೋಣ."

"ಥೂ, ಬೇಡ."

"ಸುಮ್ನೆ ಒಂದೈದ್ನಿಮಿಷ...."

"ಯಾರಾದರೂ ನೋಡೊಲ್ವೆ ಅಂದ್ರೆ ?"

"ಒಂದು ನರಹುಳವೂ ಇಲ್ಲಿಗೆ ಬರೋಲ್ಲ."

ಹುಲ್ಲಿನ ಹಾಸಿಗೆ ಕಾವೇರಿತು. ಪದ್ಮನಾಭನ ಉಸಿರು ಬಿಸಿಯಾಯಿತು. ಗಂಟಲು ಗೊರಗೊರವೆಂದಿತು. ಆರತಿಯನ್ನು ಸುಭದ್ರೆಯಾಗಿ ಮಾಡಿ ಆ ದೇಹವನ್ನು ಆತ ಬಿಗಿದಪ್ಪಿಕೊಂಡ.

ಆರತಿಯ ಬೇಡ ಬೇಡ ಪದ ಕ್ರಮೇಣ ಕ್ಷೀಣವಾಯಿತು...

...ಮೂರು ಲೋಕಗಳನ್ನು ಗೆದ್ದ ದೊರೆಯಾಗಿ ಪದ್ಮನಾಭ ಹೆಂಡತಿಯೊಡನೆ ಗುಡ್ಡ ಇಳಿಯತೊಡಗಿದ.

"ಸೀರೆಯೆಲ್ಲಾ ಪುಡಿ, ಪುಡಿ. ನೀವು ನಿರ್ಲಜ್ಜರು. ಕತ್ತಲೆಯಾಗೋವರೆಗೂ ಇಲ್ಲಿಯೇ ಇರೋಣ. ಮನೇಲಿ ಮುಖ ತೋರಿಸೋಕಾಗೊಲ್ಲ," ಎಂದಳು ಆರತಿ.

"ಬಾ ಬಾ, ನೀನೊಬ್ಬಳು. ಯಾರಿಗೆ ಏನು ಗೊತ್ತಾಗುತ್ತೆ ?" ಎಂದು ಪದ್ಮನಾಭ ಮುಂದಕ್ಕೆ ಹೆಜ್ಜೆ ಇರಿಸಿದ.

...ಮನೆಯಲ್ಲಿ ಅವರಿಬ್ಬರನ್ನೂ ಕಾಮಾಕ್ಷಿ ದುರದುರನೆ ನೋಡಿದಳು.

ಆ ರಾತ್ರೆ ಪದ್ಮನಾಭನಿಗೆ ಗಾಢ ನಿದ್ದೆ. ಆರತಿ ಪಿಳಿಪಿಳಿ ನೋಟದಿಂದ ಛಾವಣಿ ದಿಟ್ಟಿಸುತ್ತ ನಡುರಾತ್ರೆಯವರೆಗೂ ಕಾಲ ಕಳೆದಳು.

ಮಾರನೆಯ ದಿನ ಗೋಪಾಲ ಸಂಸಾರ ಸಮೇತನಾಗಿ ಸೋಮಪುರದಿಂದ ಬಂದ.

ಭಾಗೀರಥಿ ಉಲ್ಲಸಿತಳಾಗಿದ್ದಳು.

ಕಾಮಾಕ್ಷಿಯೇನೋ ಧಡೂತಿ ವ್ಯಕ್ತಿಯೇ. ಆರತಿ ಮಾತ್ರ ಸೀರೆ ಉಟ್ಟ ದೊರೆಸಾನಿ.

ಶ್ರೀಪಾದನನ್ನು ಅವರ ಕೈಗೆ ಕೊಡದೆ, "ನನ್ನ ಕಾಯಿಲೆಯಿಂದ ಮದುವೆ ತಪ್ಪೋಯ್ತು," ಎಂದಳು ಭಾಗೀರಥಿ ಓರಗಿತ್ತಿಯರೊಡನೆ.

ದೊಡ್ಡಮ್ಮ ಅವಳನ್ನು ಒಳಕ್ಕೆ ಕರೆದು, "ಆರತ್ಯಕ್ಷತೆ ಮುಗಿಸ್ಕೊಂಡು ಹೆಂಡತಿ ಜತೆ ಪದ್ಮ ನಗರಕ್ಕೆ ಹೋಗ್ತಾನೆ. ಅಷ್ಟರವರೆಗೆ ನನ್ಜತೆ ಮಲಕೊ, ಭಾಗೀ. ಸಹಾಯಕ್ಕೆ ಇರ್ಲೀಂತ ಜಲಜೇನ ಇಲ್ಲಿ ಇರಿಸ್ಕೊಂಡಿದೀನಿ. ಆಮೇಲೆ ಅವಳೂ ಹೊರಟ್ಹೋಗ್ತಾಳೆ," ಎಂದರು.

"ಆಗಲಿ ದೊಡ್ಡಮ್ಮ," ಎಂದಳು ಭಾಗೀರಥಿ.

ಆರತ್ಯಕ್ಷತೆಯ ದಿನ ಬೆಳಗ್ಗೆ ವಿಷ್ಣುಮೂರ್ತಿಯವರು ಹೇಳಿದ್ದಂತೆ ನಗರದಿಂದ 'ದಂಡು' ಬಂದಿಳಿಯಿತು.

ದಂಡಿನವರು ನಾಲ್ಕು ಗ್ಯಾಸ್ ದೀಪಗಳನ್ನು ತಂದಿದ್ದರು.

ಆ ಜನ ಆ ಸಡಗರ–ನಗರದ ಥಳಕು. ಕಣಿವೇಹಳ್ಳಿಯವರು ಬೆರಗಾಗಿ ನೋಡಿದರು.

ಆರತ್ಯಕ್ಷತೆ, ಭೂರಿ ಭೋಜನ.

ಶಾಮೇಗೌಡರು ಬಂದರು.

"ಏನು ಶಾಮಣ್ಣ? ನಾಗಮ್ಮ–ಸುಬ್ಬಿ ಬರಲಿಲ್ವಲ್ಲ," ಎಂದರು ದೊಡ್ಡಮ್ಮ.

ಮುಗುಳುನಗೆ ಬೀರಿ, "ನಾನೊಬ್ನೇ ಬಂದೆ," ಎಂದರು ಗೌಡರು.

"ನಗರದಲ್ಲಿ ಧಾರೆಗೆ ರಂಗಣ್ಣನೂ ಬರ್ಲಿಲ್ಲ," ಎಂದು ದೊಡ್ಡಮ್ಮ ತಮ್ಮ ಬೇಸರವನ್ನು ತೋಡಿಕೊಂಡರು.

ಗೌಡರು ಸುಳ್ಳಾಡಬೇಕಾಯ್ತು :

"ರಂಗನಿಗೆ ತಿಳಿಸಿದ್ದೆ. ಅದೇನು ತೊಂದರೆಯಾಯ್ತೊ ?"

"ನಾವು ನಗರಕ್ಕೆ ಹೋದ ಸಮಯ ಸುಬ್ಬಿ ನೀರಿಗೆ ಬಿದ್ಲೂಂತ ಕೇಳ್ದೆ..."

"ಊಂ. ಕಾಲು ಜಾರ್ತು."

"ಈಗ ಚೆನ್ನಾಗಿದಾಳಾ ?"

"ಓ..."

ಗೌಡರು ಎರಡು ಜೋಡಿಗೂ ಐವತ್ತು ಐವತ್ತು ರೂಪಾಯಿಗಳ ಉಡುಗೊರೆ ಓದಿಸಿದರು.

ದೊಡ್ಡಮ್ಮ ಸಿಹಿ ಭಕ್ಷ್ಯಗಳನ್ನು ಪಾತ್ರೆಯಲ್ಲಿಟ್ಟು ಗಜಾನನನ ಕೈಲಿ ಗೌಡರ ಮನೆಗೆ ಕಳುಹಿಸಿದರು.

... ಈ ಎಲ್ಲ ಸಂಭ್ರಮದಲ್ಲಿ ಭಾಗೀರಥಿಯನ್ನು ಕೇಳುವವರೇ ಇರಲಿಲ್ಲ. ಅಡುಗೆ ಮನೆಯ ಉಸ್ತುವಾರಿ ಅವಳದು.

ದೊಡ್ಡಮ್ಮ ತನ್ನದೊಂದು ದೃಷ್ಟಿಯನ್ನು ಆಕೆಯ ಮೇಲೆಯೇ ಇಟ್ಟಿದ್ದರು.

೨೬

ಹವಾಮಾನ ಅನುಕೂಲವಾಗಿತ್ತು ಶ್ರೀನಿವಾಸಯ್ಯನವರಿಗೆ. ಮಳೆ ಬರಲಿಲ್ಲವಷ್ಟೇ ಅಲ್ಲ, ಕೋಟಿ ನಕ್ಷತ್ರಗಳು ಕಣಿವೇಹಳ್ಳಿಯನ್ನು ನೋಡಿ ನಕ್ಕುವು. ಸಂಭ್ರಮವೆಲ್ಲ ಮುಗಿದು ನಗರದವರೂ ಶ್ರೀನಿವಾಸಯ್ಯನವರ ಮನೆಯವರೂ ಮಲಗಿದಾಗ ಮಧ್ಯರಾತ್ರಿ.

"ಕೋರ್ಟ್ನಲ್ಲಿ ಒಂದು ಕೇಸಿದೆ. ನಾಳೆ ಮಧ್ಯಾಹ್ನದೊಳಗೆ ನಗರದಲ್ಲಿ ನಾನಿರ್ಲೇಬೇಕು," ಎಂದಿದ್ದರು ಮೋಹನರಾಯರು.

ಬೆಳಗಾದೊಡನೆಯೇ ಅವರು ಹೊರಡುವ ಆತುರ ತೋರಿದರು.

ಅಷ್ಟರಲ್ಲಿ ವಿಷ್ಣುಮೂರ್ತಿಯವರ ಹೆಂಡತಿಯ ಕಿರಿಚಾಟ ಕೇಳಿಸಿತು :

"ನನ್ನ ಕಾಸಿನ ಸರ ಕಳವಾಗಿದೆ ! ಕಾಸಿನ ಸರ ! ನನ್ನದೂ... !"

ಬಹಿರ್ದೆಶೆಗೆ ಹೋಗಿದ್ದ ವಿಷ್ಣುಮೂರ್ತಿ ಅರ್ಧದಲ್ಲಿಯೇ ಓಡಿ ಬಂದು, ಪತ್ನಿಯನ್ನು ಸಂತೈಸಲು ಯತ್ನಿಸಿದರು.

"ಸಿಗುತ್ತೆ. ನಿಧಾನವಾಗಿ ಹುಡುಕು."

"ಇನ್ನೆಲ್ಲಿಂದ್ರೆ ಹುಡುಕೋದು ? ಕದ್ದಿದಾರೆ ! ಖಂಡಿತ ! ಎಲ್ರನ್ನೂ ಕರೆಸಿ ! ತನಿಖೆ ಮಾಡೋಣ !"

ಕಾಮಾಕ್ಷಿ ತಂದೆಯನ್ನು ಸಮೀಪಿಸಿ, ಕಿವಿಯಲ್ಲಿ, "ಭಾಗೀರಥೀನೆ ಕದ್ದಿರೋದು ಗ್ಯಾರಂಟಿ. ಬೆಳಗ್ಗೆ ನಾವು ಮುಖ ತೊಳ್ಕೊಂಡು ವಾಪ್ಸು ಬರ್‍ತಿದ್ದಾಗ ಇಲ್ಲಿಂದ್ಲೇ ಅವಳು ಒಳಕ್ಕೆ ಹೋದ್ಲು. ನಾನು ನೋಡಿದೀನಿ," ಎಂದಳು.

"ಸುಮ್ನಿರು ನೀನು !" ಎಂದು ಗದರಿಸಿದರು, ವಿಷ್ಣುಮೂರ್ತಿ.

ಪಡಸಾಲೆಯಲ್ಲಿ ಈ ಗದ್ದಲ ಆರಂಭವಾದೊಡನೆಯೇ ಭಾಗೀರಥಿ ಬಿಂದಿಗೆ ಎತ್ತಿಕೊಂಡು ಬಾವಿಯ ಬಳಿಗೆ ಹೋದಳು.

"ಇವರ ಮನೆ ಹಾಳಾಗ. ಹಾರಿಬಿಡಲೆ ಬಾವಿಗೆ ?" ಎಂದುಕೊಂಡಳು, ಕಟ್ಟೆಯ ಬಳಿ ನಿಂತು.

ಬೇಡ, ಇಷ್ಟಕ್ಕೆಲ್ಲ ಯಾಕೆ? – ಎಂದು, ಮಡಿಲಿಗೆ ಕೈ ಹಾಕಿ ಅಂಗೈಯನ್ನು ಬಾವಿಯತ್ತ ಚಾಚಿದಳು.

ಗೋವಿಂದನ ಅತ್ತೆಯ ಕೂಗಾಟದಿಂದ ದೊಡ್ಡಮ್ಮನಿಗೆ ಖೇದವಾಯಿತು. ಒಳ್ಳೆಯ ಲಕ್ಷಣವಲ್ಲ ಇದು, ಎನಿಸಿತು.

"ಈಗೇನ್ಮಾಡೋಣ ಅಮ್ಮ?" ಎಂದು ಕೇಳುತ್ತ ತಮ್ಮ ಬಳಿಗೆ ಬಂದ ಮಗನಿಗೆ ಅವರೆಂದರು:

"ಶೀನ, ಅದೇನು ಕಳವಾಗಿದ್ರೂ ನಾವು ಅದಕ್ಕೆ ಜವಾಬ್ದಾರಿ. ಎಷ್ಟು ಖರ್ಚಾದರೂ ಸರೀನೇ, ಬೇರೆ ಕಾಸಿನ ಸರ ಮಾಡಿಸಿಕೊಡ್ತೀವಿ ಅಂತ ಹೇಳು. ಗಲಾಟೆ ಬೇಡ."

"ಹೂಂ," ಎಂದು ಶ್ರೀನಿವಾಸಯ್ಯ ವಿಷ್ಣುಮೂರ್ತಿಯವರ ಬಳಿ ಸಾರಿ, ಅವರ ಪತ್ನಿಗೂ ಕೇಳಿಸುವಂತೆ, "ಕಾಸಿನ ಸರ ಸಿಗದೇ ಹೋದರೆ ಹೊಸದು ನಾವು ಮಾಡಿಸಿಕೊಡ್ತೇವೆ" ಎಂದರು.

"ಯಾವ ಅಕ್ಕಸಾಲಿಗನಿಂದಾಗುತ್ತೆ ಅಂಥ ಕಾಸಿನ ಸರ ಮಾಡೋದು ಈಗಿನ ಕಾಲ್ದಲ್ಲಿ ?

ಇಷ್ಟಿ ಇಷ್ಟಿ ಹೀ..." ಅಳತೊಡಗಿದರು ಗೋವಿಂದನ ಅತ್ತೆ.

"ಸುಮ್ನೆ ಯಾಕಳ್ತೀಯಾ ? ನನ್ನ ಮಾತಿಷ್ಟು ಕೇಳು," ಎಂದರು ವಿಷ್ಣುಮೂರ್ತಿ.

"ನಿಮ್ಮ ಮಾತಿಗೆ ಬೆಂಕಿ. ಕಳ್ಳರಿರೋ ಮನೇಲಿ ನನ್ನ ಮಗು ಹ್ಯಾಗೆ ಜೀವನ ಮಾಡು ತ್ತೇಂದ್ರೇ..."

ಅಲ್ಲಿಗೆ ಬಂದ ದೊಡ್ಡಮ್ಮ, ಪರಿಸ್ಥಿತಿ ಮತ್ತಷ್ಟು ಕೆಡುತ್ತಿದ್ದುದನ್ನು ಕಂಡು, "ನೀವು ಹಾಗೆಲ್ಲ ಅನಬಾರ್ದಮ್ಮಾ. ನಮ್ಮ ಯಜಮಾನರ ಕಾಲದಿಂದ ಈ ಮನೇಲಿ ಒಂದು ಸೊತ್ತೂ ಕಳವಾಗಿಲ್ಲ," ಎಂದರು.

"ಈಗ ಆಗಿದೆಯಲ್ರೀ. ಒಬ್ಬೊಬ್ಬರನ್ನೂ ಕರೆಸಿ ಝಡ್ತಿ ಮಾಡೀಂತ ಹೇಳ್ತಿದೀನಿ." ಕಾಮಾಕ್ಷಿಯ ತಾಯಿ ಪಟ್ಟು ಹಿಡಿದರು.

"ನೀವು ಬೇಜಾರು ಮಾಡ್ಕೋಬೇಡಿ, ದೊಡ್ಡಮ್ಮ. ಎಲ್ಲಾ ಸರ್ಹೋಗುತ್ತೆ," ಎಂದರು ವಿಷ್ಣುಮೂರ್ತಿ.

"ಸರ ಹೋಗ್ಬಿಟ್ಟಿದೆ ಆಗ್ಲೇ. ಸರ್ಹೋಗುತ್ತೆ ಅಂತೆ! ಸರ್ಹೋಗೋದು, ಪಿಂಡ..."

—ಧ್ವನಿ ಏರಿಸಿದರು ಅವರ ಸಹಧರ್ಮಿಣಿ.

ಕೈಲಾಗದವನ ಸಿಟ್ಟಿನಿಂದ ವಿಷ್ಣುಮೂರ್ತಿಯವರ ಮುಖ ಅದುರಿತು. ಅವರು ಮೋಹನರಾಯರ ಬಳಿ ಸಾರಿ, "ಈಗೇನ್ರೀ ಮಾಡೋದು ?" ಎಂದು ಕೇಳಿದರು.

ತಮ್ಮ ಪತ್ನಿಯೊಡನೆ ಮಾತನಾಡುತ್ತ, ಆರತಿಯ ಕೊಠಡಿಯಲ್ಲಿದ್ದ ಮೋಹನರಾಯರು, ಈಚೆ ಬಂದು, ಪಿಸುದನಿಯಲ್ಲಿ, "ಇಂಥಾದ್ದರಲ್ಲೆಲ್ಲ ಹೆಂಗಸರ ಬಾಯಿ ಮುಚ್ಚಿಸೋದಕ್ಕಾಗುತ್ಯೆ ? ಸುಮ್ನಿದ್ಬಿಡಿ. ಸರಕ್ಕೆ ಸರ ಕೊಡ್ತೇವೀಂತ ಶ್ರೀನಿವಾಸಯ್ಯ ಹೇಳಿದಾರಲ್ಲ ?" ಎಂದು ನುಡಿದು, ಕೈಗಡಿಯಾರದತ್ತ ನೋಡಿ, "ಇನ್ನು ಹೊರಡ್ತೇವಿ. ನೀವೂ ತಡ ಮಾಡ್ಬೇಡಿ. ಹನ್ನೆರಡು ಗಂಟೆಗೆಲ್ಲಾ ಏದ್ಬಿಡಿ. ಎಲ್ಲಿ ಗೋವಿಂದರಾವ್ ? ರಸ್ತೆ ತನಕ ಬರ್ತಾರೋ, ಅಥವಾ..." ಎಂದು ಅತ್ತಿತ್ತ ನೋಡಿದರು ಮೋಹನರಾಯರು.

ತಂದೆಯೊಡನೆ ಗೋವಿಂದ ಬಂದ.

ದೊಡ್ಡಮ್ಮನಿಗೆ ಹೇಳಿ ಬರಲೆಂದು ಮೋಹನರಾಯರು ಒಳಗೆ ಹೋದರು.

"ನೀವು ಹೊರಡೋ ಹೊತ್ತಿಗೆ ಸರಿಯಾಗಿ ಇದೊಂದಾಯ್ತು," ಎಂದರು ದೊಡ್ಡಮ್ಮ.

"ಸಣ್ಣ ವಿಷಯ. ಮದುವೆ ಮನೇಲಿ ಇಂಥಾದ್ದೆಲ್ಲ ಸರ್ವೇಸಾಮಾನ್ಯ. ನಾನು ಹೋಗ್ಬ ರ್‍ತೀನಿ," ಎಂದರು ಮೋಹನರಾಯರು.

"ಆಗಲಪ್ಪ."

ಹೊರಡುತ್ತಲಿದ್ದ ತಂದೆಯ ಬಳಿಗೆ ಆರತಿ ಬಂದಳು.

"ಅಮ್ಮನ ಜತೆ ನಾನೂ ಬಂದ್ಬಿಡ್ತೀನಿ, ಅಣ್ಣಾ..."

"ಏನವಸರ ? ನಾಳೆಯೋ ನಾಡಿದ್ದೋ ನಿನ್ನ ಗಂಡ ಹೊರಡ್ತಾರೆ..."

"ಆಗ ಇವರು ಬಿಡ್ತಾರೋ ಇಲ್ವೋ... ಸ್ವಲ್ಪ ಹೇಳ್ಬಿಟ್ಟು ಹೋಗಣ್ಣ."

ಮೋಹನರಾಯರು ನಕ್ಕು, ಮಗಳ ತಲೆಯನ್ನು ಒಂದು ಬೆರಳಿನಿಂದ ತಟ್ಟಿದರು.

"ಏನಂತೆ ? ಏನಂತೆ ?" ಎಂದರು ಶ್ರೀನಿವಾಸಯ್ಯ, ಅವರನ್ನು ಸಮೀಪಿಸಿ.

ಆರತಿ ನಾಚಿಕೊಂಡು ತನ್ನ ಕೊಠಡಿಗೆ ಓಡಿದಳು.

"ಏನಿಲ್ಲ. ಈ ಮನೆ ಬಿಟ್ಟು ಬರೋಕೆ ಅವಳಿಗೆ ಇಷ್ಟ ಇಲ್ವಂತೆ. ಇಲ್ಲೇ ಇರ್‍ತಾಳಂತೆ," ಎಂದು ಮೋಹನರಾಯರು ನಕ್ಕರು.

"ಹಹ್ಹ ! ಪದ್ಮ ನಗರಕ್ಕೆ ಹೋದ್ಮೇಲೆ ಇವಳು ಇಲ್ಲಿರ್‍ತಾಳೆ ಅಂದ್ರೆ ನಂಬೋದು ಸ್ವಲ್ಪ ಕಷ್ಟವೇ," ಎಂದರು ಶ್ರೀನಿವಾಸಯ್ಯ.

"ಬರ್‍ತೀನಿ !" ಎಂದು, ನಮಸ್ಕರಿಸಿ, ಮೋಹನರಾಯರು ಹೊರಬಿದ್ದರು.

ಕಾಮಾಕ್ಷಿಯ ಕೊಠಡಿಯಿಂದ ಆಕೆಯ ತಾಯಿಯ ಸ್ವರ ಕೇಳಿಸುತ್ತಲೇ ಇತ್ತು.

ಮೋಹನರಾಯರನ್ನು ಬೀಳ್ಕೊಡಲು ಶ್ರೀನಿವಾಸಯ್ಯ ಚಪ್ಪರಕ್ಕಿಳಿದ ಮೇಲೆ ವಿಷ್ಣು ಮೂರ್ತಿಯೊಬ್ಬರೇ ದಿಕ್ಕು ತೋಚದವರಂತೆ ಬಾಗಿಲಲ್ಲಿ ನಿಂತರು.

ಒಳಕೆ ಕಾಮಾಕ್ಷಿ ಜಲಜೆಯನ್ನು ಕರೆದಳು.

"ಎಲ್ಲೂ ಸಿಗ್ಲಿಲ್ವೇನೇ ಜಲಜಾ ?"

"ಎಲ್ಲಿ ಬಚ್ಚಿಟ್ಟಿದಾಳೊ ಹುಚ್ಚಿ..."

"ಥುತ್ ! ಎಂಥ ಮನೆಯಮ್ಮ ಇದು."

"ಸಿಕ್ಕೀತು ನೋಡೋಣ."

ಕಾಮಾಕ್ಷಿಯ ತಾಯಿ ಗದರಿದರು :

"ಸಿಗುತ್ತೆ ಇದು ! ಯಾರು ಕದ್ದಿದ್ದು ಅನ್ನೋದು ಇತ್ಯರ್ಥ ಆಗೋವರೆಗೂ ಈ ಮನೇಲಿ ನಾನು ನೀರು ಮುಟ್ಟೋಲ್ಲ."

ಆರತಿಯ ತಮ್ಮ ಒಳಗೆ ಹಣಿಕಿ ನೋಡಿ, "ಕಾಫಿ ತಿಂಡಿ ಸಿದ್ಧವಾಗಿದೆ. ಬರಬೇಕಂತೆ," ಎಂದ.

ಕಾಮಾಕ್ಷಿಯ ತಾಯಿಗೆ ರೇಗಿತು.

"ಓ ಹೊ ಹೊ ಹೊ ! ಬಂದ ಇವನು ! ನೀನ್ಯಾರಪ್ಪ ಈ ಮನೇಲಿ..."

ಆಕೆ ಆಡಿದುದನ್ನು ತನ್ನ ತಾಯಿಗೆ ವರದಿ ಮಾಡಲು ಹುಡುಗ ಹೊರಟು ಹೋದ.

ವಿಷ್ಣುಮೂರ್ತಿ ಪತ್ನಿಯಿದ್ದ ಕೊಠಡಿಗೆ ಬಂದರು.

"ನೀವೆಲ್ಲ ಹೊರಗ್ಹೋಗಿ," ಎಂದರು ಮಕ್ಕಳಿಗೆ.

ಮಕ್ಕಳು ಹೊರಕ್ಕೆ ನಡೆದೊಡನೆ, ವಿಷ್ಣುಮೂರ್ತಿ ಬಾಗಿಲು ಮುಚ್ಚಿ ಒಳಗಿನಿಂದ ಅಗಣಿ ಹಾಕಿದರು.

ಪಡಸಾಲೆಯಲ್ಲಿದ್ದ ಕಿರಿಯರಿಗೆ ಕೆಲವು ಮಾತುಗಳಷ್ಟೇ ಕೇಳಿಸಿದುವು.

ಹೆತ್ತವಳೆದುರು ತಂದೆ ಮಂಡಿಯೂರಿ ಕೈ ಜೋಡಿಸಿದುದನ್ನು ಅವರು ಕಾಣರು. ಥಪ್ ಥಪ್ ಸದ್ದಾಯಿತು. ತಾಯಿಯ ಮುಷ್ಟಿ ತಂದೆಯ ಮೈ ಮುಟ್ಟುತ್ತಿದೆ–ಎಂದು ಕಾಮಾಕ್ಷಿ ಊಹಿಸಿಕೊಂಡಳು.

ಪಿಸುದನಿಯಲ್ಲಿ ವಿಷ್ಣುಮೂರ್ತಿಯವರ ಪ್ರಾರ್ಥನೆ.

ಅಂಗಳಕ್ಕೂ ಕೇಳಿಸುವಂತೆ ಅವರ ಪತ್ನಿಯ ಉತ್ತರ.

"ನನ್ನ ಮಾನ ಕಳೀಬೇಡ, ಸಾತೂ..."

"ಇದ್ದರೆ ತಾನೆ ಮಾನ ?"

"ಸಾತೂ!"

ಥಪ್ ಥಪ್ ಸದ್ದು.

"ಹೊಡಿ, ಪರವಾಗಿಲ್ಲ. ಮಾನ ಕಳೀದಿದ್ದರೆ ಸಾಕು."

"ಮಾನಕ್ಕೆ ಬೆಂಕಿ. ನನಗೆ ಸರ ಬೇಕು."

"ಬದಲಿ ಮಾಡಿಸ್ಕೊಡ್ತಾರೆ."

"ನಾಲ್ಕೆಳೇದು ಬೇಕು. ಸುಬ್ಬನರಸಯ್ಯನ ಹೆಂಡ್ತಿ ಹಾಕ್ಕೋತಾಳಲ್ಲ ಅಂಥಾದ್ದು."

[ಅದು ಬಹಳ ದಿನಗಳ ಬಯಕೆ ಕಾಮಾಕ್ಷಿಯ ತಾಯಿಯದು. ಹಳೆಯ ಕಾಲದ ಕಾಸಿನ ಸರದ ಮೇಲೆ ಅವರಿಗೆಂದೋ ಬೇಸರ ಬಂದಿತ್ತು. ಆಸೆ ಕೈಗೂಡಲು ಎಂಥ ವೇಳೆ ಒದಗಿತು. ಈಗ!]

"ಹಾಗೆಲ್ಲ ಕೇಳಬಾರ್ದು, ಸಾತೂ. ಕಾಸಿನಸರಕ್ಕೆ ಕಾಸಿನಸರ."

"ಆಗೋಲ್ಲ. ಆಗೋದಿಲ್ಲ, ಅಂದೆ. ಸುಬ್ಬನರಸಯ್ಯನ ಹೆಂಡ್ತಿ ಹಾಕೋತಾಳಲ್ಲ, ಅಂಥಾದ್ದೇ ಬೇಕು."

"ಆಗಲಿ, ಸಾತೂ. ಆಗಲಿ..."

"ನಗರದಲ್ಲಿ ನಮ್ಮನೇಲೇ ಮಾಡಿಸ್ಬೇಕು."

"ಹೂಂ."

"ಅಶ್ವತ್ಥನಾರಾಯಣ ಶೆಟ್ರು ಅಕ್ಕಸಾಲಿಗ ಇದಾನಲ್ಲ..."

"ಆಗಲಿ. ಅವನನ್ನೇ ಕರೆಸೋಣ."

"ನಗರಕ್ಕೆ ಹೋದ್ಮೇಲೆ ಅಂಬಿಗರ ಮಿಂಡ ಅಂದಿರೋ ಧೂಳೆಬ್ಬಿಸಿಬಿಟ್ಟೇನು !"

"ಉಂಟೆ ಸಾತೂ ?"

"ಕರಕೊಂಡ್ಬನ್ನಿ ನಿಮ್ಮ ಬೀಗರ್ನ ಮಾತು ಕೊಡ್ಲಿ."

"ಛೆ ! ಛೆ ! ಬೇಡ ಸಾತೂ. ಆತ ಮಾಡಿಸ್ಕೊಡ್ದೇ ಇದ್ರೆ ಗೋವಿಂದರಾಯ ಇಲ್ವೆ ? ಕಾಮಾಕ್ಷಿ ಇಲ್ವೆ ?"

"ಅವರ್ಯಾತಕ್ಕೆ ? ಜವಾಬ್ದಾರಿ ಗಂಡಸಾದ ನನ್ನದೂಂತ ಹೇಳ್ರಿ."

"ಹೂಂ. ಸಾತೂ. ನನೇ ಜವಾಬ್ದಾರ. ಆಯ್ತೆ?"

ಮತ್ತೆ ಕೆಲ ನಿಮಿಷಗಳ ಮೌನ. ಕಾಮಾಕ್ಷಿ ಬಲ್ಲಳು : ಗೆದ್ದ ಸಂತೋಷದಲ್ಲಿ ತಾಯಿ ಒಂದು ನಿಮಿಷ ಕಣ್ಣೀರು ಸುರಿಸಿರಬೇಕು.

ಕದ ತೆರೆಯಿತು.

ಅಂಗೈಯಿಂದ ಮುಖದ ಬೆವರೊರೆಸಿಕೊಳ್ಳುತ್ತ ವಿಷ್ಣುಮೂರ್ತಿ ಮಕ್ಕಳನ್ನು ನೋಡಿ ಅಂದರು :

"ಇನ್ನೂ ಇಲ್ಲೇ ಇದೀರಾ? ಹೋಗಿ. ತಿಂಡಿಗೆ ನಿಮ್ಮಮ್ಮನೂ ಬರ್ತಾಳೆ."

ಉಪಾಹಾರ ನೀಡುವ ಹೊಣೆಯನ್ನು ಜಲಜಾ ನಿರ್ವಹಿಸಿದಳು.

ಕಾಮಾಕ್ಷಿಯ ತಾಯಿ ಏಳುವ ಲಕ್ಷಣ ಕಾಣಿಸಲಿಲ್ಲ.

"ಗಜಾನನನ ಹೋಟ್ಲಿಗಿಷ್ಟು ಹೋಗ್ಬರ್ತೀನಿ," ಎಂದು ನುಡಿದು, ವಿಷ್ಣುಮೂರ್ತಿ ಹೊರಬಿದ್ದರು. ಆ ಒಂಟಿ ನಡಿಗೆಯಿಂದ ತಮಗೆ ಹಿತವಾಗುವುದೆಂದು ಅವರ ಭಾವನೆ.

ದೊಡ್ಡಮ್ಮ ಬೀಗತಿಯ ಬಳಿಗೆ ಬಂದು, ತಮ್ಮ ವಯೋಮಾನವನ್ನು ಮರೆತು,

"ನಮ್ಮ ತಪ್ಪೇನಿದ್ದರೂ ಉಡೀಲಿ ಹಾಕ್ಕೊಳ್ಳಿ," ಎಂದರು.

ಕಂಬನಿ ಒಣಗಿದ್ದ ಎರಡು ಕಣ್ಣುಗಳು ಅವರನ್ನೇ ನೋಡಿದುವು.

"ಬದಲಿ ಸರ ಮಾಡಿಸ್ಕೊಡ್ತೀನೀಂತ ಮಾತು ಕೊಟ್ಟಿದಾರಂತೆ."

"ಹೌದು. ಹಾಗೇಂತ ನಾನೇ ಶೀನನಿಗೆ ಹೇಳ್ದೆ."

"ನಿಮ್ಮಂಥ ದೊಡ್ಡವರ ಮನೇಲೂ ಹಾವುಗಳು ಸೇರ್ಕ್ಕೋತಾವಲ್ಲ. ಆಶ್ಚರ್ಯ!"

"ಇರಲಿ, ಬಿಡಿ. ಬನ್ನಿ... ಅಥವಾ ಇಲ್ಲಿಗೇ ತರಲೊ ?"

"ತನ್ನಿ. ಅದೇ ವಾಸೀಂತ ಕಾಣುತ್ತೆ."

ದೊಡ್ಡಮ್ಮ ಕಾಫಿ ತಿಂಡಿ ತಾವೇ ತರಲೆಂದು ಒಳಕ್ಕೆ ಹೋದರು. ಹೋಗುತ್ತ ನೀಳವಾದ ಉಸಿರೊಂದು ಅವರಿಂದ ಹೊರಬಿತ್ತು.

ಭಾಗೀರಥಿ ಸರ ಕದ್ದಿರಬಹುದೆಂಬುದು ಅವರ ಊಹೆಗೆ ನಿಲುಕದ ವಿಷಯ. ಬಾರಿ ಬಾರಿಗೂ ಎರಡು ಪದಗಳು ಅವರ ನಾಲಿಗೆಯ ಮೇಲೆ ಕುಣಿದುವು :

'ಅವಳು ಅಂಥವಳಲ್ಲ'; 'ಅವಳು ಅಂಥವಳಲ್ಲ.'

ಜಲಜೆಯ ಮೇಲೆ ಮಾತ್ರ ಅವರಿಗೆ ತುಸು ಶಂಕೆ.ಏನೇನೋ ಆಸೆಗಳಿರುವ ಹುಡುಗಿ. ಆದರೆ ವಿಷ್ಣುಮೂರ್ತಿ ಅವಳ ಸಂಸಾರಕ್ಕೆ ಅನ್ನದ ದಾರಿ ತೋರಿಸಿರುವ ಮನುಷ್ಯ. ಆತನ ಮನೆಯ ಒಡವೆಯನ್ನು ಆಕೆ ಕದಿಯುವುದುಂಟೆ ?

ಯಾರಿಗೆ ಗೊತ್ತು? ಸ್ವರ್ಣದ ಮೇಲಿನ ಮೋಹ ಇಂಥದನ್ನು ಮಾಡಿಸೀತು, ಇಂಥ ದನ್ನು ಮಾಡಿಸಲಾರದು ಎಂದು ಕರಾರುವಾಕ್ಕಾಗಿ ಹೇಳುವುದಾದರೂ ಹೇಗೆ ?

ಏನಿದ್ದರೂ ತನಿಖೆ ಆ ಮನೆಯಲ್ಲಿ ಎಂದೂ ನಡೆಯದು. ಸಾವಿರ ರೂಪಾಯಿಯೊ, ಅದೆಷ್ಟೊ– ಕೈಯಿಂದ ಹಾಕುವುದೇ ಸರಿ.

ಹಣ ವ್ಯಯವಾಗುವುದಲ್ಲಾ ಎಂದು ದೊಡ್ಡಮ್ಮ ಚಿಂತಿಸಲಿಲ್ಲ. ಬದಲು, ಬೀಗತಿಯಾದ ವಳ ವರ್ತನೆಯಿಂದ ಅವರಿಗೆ ಅಪಾರ ನೋವಾಯಿತು. ಇನ್ನು ಇಂಥವಳ ಮಗಳು ಈ ಮನೆಯಲ್ಲಿ ಹೇಗೆ ನಡೆದುಕೊಳ್ಳುವಳೊ ? ಏನು ಬರೆದಿದೆಯೊ ಗೋವಿಂದನ ಹಣೆಯಲ್ಲಿ ?

ಕಾಮಾಕ್ಷಿಯ ತಾಯಿಗೆ ತಿಂಡಿತೀರ್ಥಗಳ ಸರಬರಾಜು ಮಾಡಿ ದೊಡ್ಡಮ್ಮ ಪದ್ಮನಾಭನ ಕೊಠಡಿಯತ್ತ ಹೋದರು. ಎಲ್ಲರೂ ಒಟ್ಟಾಗಿ ಬಿದ್ದು ಬಿದ್ದು ನಗುವ ಸದ್ದು ಅಲ್ಲಿಂದ ಕೇಳಿಸು ತಿತ್ತು. ಬಾಗಿಲಲ್ಲಿ ನಿಂತು ದೊಡ್ಡಮ್ಮ ಒಳಕ್ಕೆ ನೋಡಿದರು. ಹಾಸಿಗೆಗಳು ತೆರೆದೇ ಇದ್ದುವು. ಎಲ್ಲಾ ಚೆಲ್ಲಾಪಿಲ್ಲಿ. ಅವುಗಳ ಮೇಲೆ ವೃತ್ತಾಕಾರವಾಗಿ ಕುಳಿತಿತ್ತು ಮೋಹನರಾಯರ ಸಂಸಾರ. ಪದ್ಮನಾಭ ಇರಲಿಲ್ಲ.

ದೊಡ್ಡಮ್ಮ ಬಾಗಿಲಲ್ಲಿ ನಿಂತುದನ್ನು ಮೊದಲು ಕಂಡ ಆರತಿ ತನ್ನ ತಾಯಿಗೆ ಸನ್ನೆ ಮಾಡಿದಳು. ಉಳಿದವರ ದೃಷ್ಟಿಗಳೂ ದೊಡ್ಡಮ್ಮನತ್ತ ತಿರುಗಿದುವು. ನಗೆಯ ಅವಶೇಷವನ್ನು ಹೊರಸೂಸುತ್ತಿದ್ದ ಅರೆತೆರೆದ ಬಾಯಿಗಳು.

ಆರತಿ ಎದ್ದು ನಿಲ್ಲಲಿಲ್ಲ. ಉಳಿದವರೂ ಕುಳಿತಲ್ಲಿಂದ ಕದಲಲಿಲ್ಲ.

ಯಾರೋ ಅಪರಿಚಿತರ ಮನೆಗೆ ದಾರಿತಪ್ಪಿ ಕಾಲಿಟ್ಟಂತಾಯಿತು ದೊಡ್ಡಮ್ಮನ ಪರಿಸ್ಥಿತಿ.

"ಖುಷೀಲಿದೀರಿ ಸಂತೋಷ. ಸುಮ್ನೆ ಬಂದೆ. ಹೊರಡ್ತೀನಿ," ಎಂದರು ದೊಡ್ಡಮ್ಮ.

ಯಾರೂ ಬೇಡವೆನ್ನಲಿಲ್ಲ.

ತನ್ನನ್ನು ಯಾರೋ ಚುಚ್ಚಿ ತಿವಿದಂತಾಗಿ ದೊಡ್ಡಮ್ಮ ತಲೆಯ ಮೇಲಿನ ಸೆರಗನ್ನು ಸರಿಪಡಿಸಿಕೊಂಡು, "ಒಬ್ಬೊಬ್ಬರಾಗಿ ಸ್ನಾನ ಮಾಡಿ. ಅಡುಗೆ ತಡವಾಗೊಲ್ಲ," ಎಂದು ನುಡಿದರು.

"ಒಂದನ್ನ ಸಾರು ಸಾಕು," ಎಂದರು ಆರತಿಯ ತಾಯಿ.

ಮುತ್ತು ಉದುರಿತಲ್ಲ ಎಂದು ಅಷ್ಟಕ್ಕೇ ಸಮಾಧಾನ ಪಟ್ಟುಕೊಂಡು ದೊಡ್ಡಮ್ಮ ಬೇಗಬೇಗನೆ ಒಳಗಡೆ ಹೆಜ್ಜೆ ಇಟ್ಟರು.

ಹೆಣ್ಣು ಕೊಟ್ಟವರಿಗೆ ಇಷ್ಟೊಂದು ಧಿಮಾಕು ? ಆಕೆಯ ಸ್ಥಾನದಲ್ಲಿ ತಾವೇ ಇದ್ದಿದ್ದರೆ ತಮ್ಮ ವರ್ತನೆ ಹೇಗಿರುತ್ತಿತ್ತು ? ಮನೆಯವರು ಬೇಡವೆಂದರೂ ತಾವು ಮಡಿಯುಟ್ಟು ಅಡುಗೆ ಕೆಲಸದಲ್ಲಿ ನೆರವಾಗುತ್ತಿದ್ದರು. ಅವರು ಹೋಗಲಿ, ಆ ಹುಡುಗಿಯಾದರೂ ಸಹಕರಿಸಬೇಡವೆ?

ಕೊಳವೆಯನ್ನು ಕೈಗೆತ್ತಿಕೊಂಡು ಒಲೆಯ ಬೆಂಕಿಯೂದುತ್ತ, ತಮ್ಮ ಮೆದುಳನ್ನು ಆವರಿಸಿದ್ದ ಬೇಸರವನ್ನು ದೊಡ್ಡಮ್ಮ ಝಾಡಿಸಿದರು...

...ಮಧ್ಯಾಹ್ನದ ಹೊತ್ತಿಗೆ ಶ್ರೀನಿವಾಸಯ್ಯನವರ ಮನೆ ಬಿಕೋ ಎನ್ನುವಂತಾಯಿತು. ಮನೆಗೆ ಬಂದ ಭಾಗ್ಯಲಕ್ಷ್ಮಿಯರಿಬ್ಬರ ಹೊರತಾಗಿ ಉಳಿದವರೆಲ್ಲ ಹೊರಟು ಹೋದರು. ಅಲ್ಲಿಯೇ ಬಸ್‌ನಿಲ್ದಾಣವಿದ್ದಿದ್ದರೆ ಆರತಿಯೂ ಹೋಗುತ್ತಿದ್ದಳು ಟಾಟಾ ಮಾಡಲು. ಕಾಮಾಕ್ಷಿ ಕೂಡಾ. ಆದರ ಹೋಗುತ್ತ ಬರುತ್ತ ಎರಡೆರಡು ಮೈಲಿ ನಡೆಯುವವರು ಯಾರು? ಬಸ್ಸು– ಲಾರಿ–ಕಾರು ಯಾವುದಾದರೂ ವಾಹನ ಹತ್ತಿಸಲು ಹೇಗೂ ಅವರ ಗಂಡಂದಿರಿದ್ದರಲ್ಲ ?

ಗೋವಿಂದನ ಜತೆಗೆ ಪದ್ಮನಾಭ; ಅವರಿಗೆ ಸಂಗಡಿಗನಾಗಿ ಗಜಾನನ.

ಜಲಜಾ ದೊಡ್ಡಮ್ಮನಿಗೆ ಅಂದಳು :

"ನಾನು ಹೋಗ್ಬರ್ತೀನ್ರೀ."

ಇವರಿಗೆ ವಿಸ್ಮಯ. ಇಷ್ಟು ಬೇಗನೆ ಹೊರಡುವ ತವಕ ಈ ಹುಡುಗಿಗೆ ?

"ನಗರಕ್ಕೆ ನೀನೂ ಹೋಗ್ತೀಯಾ ?" —ದೊಡ್ಡಮ್ಮ ಕೇಳಿದರು.

"ಇಲ್ಲವಪ್ಪ. ನಾನಿನ್ನು ನಗರಕ್ಕೆ ಹೊರಡೋದು ಕಾಮಾಕ್ಷಿ ಜತೆಗೆ. ನಮ್ಮನೆಗೆ ಹೋಗ್ತೀನಿ. ಯಾವನೋ ರೈತ ಕಾವಲಿದಾನಂತೆ. ನಮ್ಮವರೂ ರಸ್ತೆತನಕ ಹೋಗಿದಾರೆ."

"ಸರಿಯಮ್ಮ ಒಬ್ಬಳೇ ಹೋಗ್ಬೇಡ. ಬೀರನನ್ನ ಜತೆಗೆ ಕಳಿಸ್ತೀನಿ."

ತಮ್ಮ ಆಗಿನ ಮನಸ್ಥಿತಿಯಲ್ಲೂ ಜಲಜೆಗೆಂದೇ ಕೊಂಡು ತಂದಿದ್ದ ಹೊಸ ಸೀರೆಯನ್ನು ಅವಳಿಗೆ ನೀಡಲು ದೊಡ್ಡಮ್ಮ ಮರೆಯಲಿಲ್ಲ.

ಪಡಸಾಲೆಯಲ್ಲಿ ತಂದಿಟ್ಟು, ತಾವು ದೂರ ನಿಂತು,

"ತಗೊಮ್ಮ," ಎಂದರು.

ಜಲಜೆ ಬೇಡವೆನ್ನಲಿಲ್ಲ.

ಕಾಮಾಕ್ಷಿ ಅಂದಳು:

"ನಾಳೆ ಬೆಳಗ್ಗೆ ಬಂದ್ಬಿಡು, ಜಲ್ಜಾ. ಇಲ್ಲಿ ನನಗೆ ಬೇಜಾರು."

"ಆಗಾಗ್ಗೆ ಬರ್ತಿರ್ತಾಳೆ ಇಲ್ಲಿಗೆ," ಎಂದು ಹೇಳಿ ದೊಡ್ಡಮ್ಮ ಸುಮ್ಮನಾದರು.

ಮಗುವನ್ನೆತ್ತಿಕೊಂಡು ಬೀರನನ್ನು ಹಿಂಬಾಲಿಸಿ ಹೋದ ಜಲಜೆಯನ್ನು ಜೋಲು ಮೋರೆಯೊಡನೆ ನಿಂತ ಅವರು ಬಹಳ ಹೊತ್ತು ದಿಟ್ಟಿಸಿದರು......

...ಮನೆಯಲ್ಲಿ ಇಷ್ಟು ಗದ್ದಲವಾದರೂ ದೊಡ್ಡಮ್ಮ ತನ್ನನ್ನು ವಿಚಾರಿಸಲಿಲ್ಲ ಎಂಬ ಅಲ್ಪ ಸಮಾಧಾನ ಭಾಗೀರಥಿಗೆ.

ಮಧ್ಯಾಹ್ನದ ಅನಂತರ ಶ್ರೀಪಾದನನ್ನು ತಟ್ಟಿ ಮಲಗಿಸಿ ಆದ ಮೇಲೆ, ಭಾಗೀರಥಿಯೂ ಅಡ್ಡಾದಳು.

"ಕೊಂಚ ಹೊತ್ತು ಮಲಕೋ ಭಾಗೀ," ಎಂದರು ದೊಡ್ಡಮ್ಮ.

ಭಾಗೀರಥಿ ಕಣ್ಣು ಮುಚ್ಚಿಕೊಂಡಳು. ನಿದ್ದೆ ಬರಲಿಲ್ಲ.

ಅಲ್ಲಾ, ಯಾಕೆ ತಾನು ಆ ಸರವನ್ನೆತ್ತಿಕೊಂಡೆ ?

ಆ ಕೊಠಡಿಯಲ್ಲಿ ತನಗೆ ಕೆಲಸವಿರಲಿಲ್ಲ. ಆದರೂ ಪಾದಗಳು ಅತ್ತ ಸಾಗಿದ್ದುವು. ಅದೂ ಅವರಿಲ್ಲದ ವೇಳೆ.

ಸೀರೆ ಆಭರಣಗಳ ಟ್ರಂಕು ತೆರೆದಿತ್ತು. ಒಂದೆಡೆ ಥಳಥಳನೆಂದಿತು ಸರ. ಯಾಕೋ ಏನೋ ತನ್ನ ನಡು ಬಗ್ಗಿತ್ತು. ಗೊತ್ತಿದ್ದೋ ಗೊತ್ತಿಲ್ಲದೆಯೋ ತಾನು ಅದನ್ನು ಎತ್ತಿಕೊಂಡಿದ್ದೆ. ತನ್ನ ಎದೆಯ ಮೇಲೆ ಅದನ್ನೊಮ್ಮೆ ಇಟ್ಟುಕೊಳ್ಳಬೇಕು ಎನಿಸಿತಲ್ಲ ? ಅಷ್ಟರಲ್ಲಿ ಕಾಮಾಕ್ಷಿಯ ಧ್ವನಿ. ಮುಖ ತೊಳೆಯಲು ಹೋದವರು ಎಷ್ಟೊಂದು ಬೇಗ ಬಂದು ಬಿಟ್ಟಿದ್ದರು ! ಸರವನ್ನು ಅದಿದ್ದ ಸ್ಥಳದಲ್ಲೇ ಪುನಃ ಇಡಬೇಕು. ಆಗಲಿಲ್ಲ. ತನ್ನ ಕೈಯಲ್ಲಿದ್ದುದನ್ನು ಅವರು ಕಂಡರೆ ? ಸರ ತನ್ನ ಮಡಿಲನ್ನು ಸೇರಿತು. ತಾನು ಅಲ್ಲಿಂದ ಪಾದ ಕೀಳಬೇಕು. ಅಂತೂ ಹೊರಟೆ. ಆದರೆ ದಾರಿಯಲ್ಲೆ ಅವರೆಲ್ಲ ತನ್ನನ್ನು ಸಂಧಿಸಿದರು. ಅಬ್ಬ! ತಾನು ಕಳ್ಳಿಯೇ ಎನ್ನುವ ಹಾಗೆ ನೋಡಿದರಲ್ಲ ಅವರು ?

ಮುಂದೆ ಸ್ವಲ್ಪವೇ ಹೊತ್ತಿನಲ್ಲಿ ಸರ ತೆವಳಿಕೊಂಡು ತೆವಳಿಕೊಂಡು ಬಾವಿಯ ನೀರಿನೊಳಕ್ಕೆ ತಳಕ್ಕೆ ಇಳಿಯಿತು. ಅಲ್ಲಿ ಅದು ಭದ್ರ, ಸುರಕ್ಷಿತ. ಯಾರೂ ಅದನ್ನು ಕಾಣುವಂತಿಲ್ಲ, ಕದಿಯುವಂತಿಲ್ಲ.

ಕಳವಾಯಿತು ಎಂದು ಕೂಗಾಡಿದರು. ಎಂಥ ಸುಳ್ಳು ? ಯಾರು ಕದ್ದರು ? ಯಾರಿಗೆ ಬೇಕು ಆ ಸರ ? ಪೆಟ್ಟಿಗೆಯಲ್ಲಿದ್ದುದನ್ನು ಬಾವಿಯೊಳಗಿಟ್ಟೆ. ಇಲ್ಲಿ ಇದ್ದದ್ದನ್ನು ಅಲ್ಲಿ. ಆ ಮಹಾತಾಯಿಗೆ ತೊಟ್ಟುಕೊಳ್ಳೋದಕ್ಕೆ ಈಗ ಸರ ಇಲ್ಲ ಅಂತಲೊ ? ಹೊಹ್ಹೊ–ಹೊಹ್ಹೊಹ್ಹೊ... ಅದಕ್ಕೆ ಯಾರೇನು ಮಾಡೋಕಾಗುತ್ತೆ ? ಅನುಭವಿಸಬೇಕು, ಅನುಭವಿಸಬೇಕು.

ವಿಚಾರಣೆ ನಡೆಸಿ–ಅಂದಳಲ್ಲ ಆ ಆಕೆ ? ತನ್ನ ತಂಟೆಗೇನಾದರೂ ಬಂದಿದ್ದರೆ ಒಂದು ಕೈ ತೋರಿಸಿಯೇ ಬಿಡುತ್ತಿದ್ದೆ...

ದೊಡ್ಡಮ್ಮ, ಜಲಜೆಯ ಚಿತ್ರ ತಮ್ಮ ದೃಷ್ಟಿಯಿಂದ ದೂರವಾದ ಮೇಲೆ ತಾವೇ ಒಮ್ಮೆ ಸರ ಅಲ್ಲಿರಬಹುದೆ ಇಲ್ಲಿರಬಹುದೆ ಎಂದು ಹುಡುಕಿದರು. ಆಳುಗಳು ಯಾರಾದರೂ ಒಳಗೆ ಬಂದರೇನೊ ಎಂಬ ಸಂದೇಹ ಒಂದು ಕ್ಷಣ ಅವರನ್ನು ಕಾಡಿತು.

'ಸಲಿಗೆ ವಹಿಸಿ ಒಳಗೆ ಯಾರೂ ಹಾಗೆ ಓಡಾಡೋದೇ ಇಲ್ಲವಲ್ಲ,' ಎಂದುಕೊಂಡರು.

ದೇವರ ಮನೆಗೆ ಬಂದವರು ಅಲ್ಲಿ ನಿಂತು ಬಿಟ್ಟರು. ಗೋಡೆಗೆ ತುಸು ಒರಗಿ ನಿಶ್ಚಲವಾಗಿ

ಅದೆಷ್ಟೋ ಹೊತ್ತನ್ನು ದೇವರ ಎದುರಲ್ಲಿ ಅವರು ಕಳೆದರು.

o o o o

ಅಯ್ಯನವರ ಬೀಗರದೊಂದು ಕಾಸಿನ ಸರ ಕಳವಾಯಿತೆಂಬ ಸುದ್ದಿ ನಿಧಾನವಾಗಿ ಹೆಜ್ಜೆ ಇಡುತ್ತ ಹಳ್ಳಿಯ ನಾಲ್ಕು ದಿಕ್ಕುಗಳಿಗೆ ಹಬ್ಬಿತು.

ಬಿತ್ತನೆಯ ಏರ್ಪಾಟಿಗಾಗಿ ಆಳುಗಳಿಗೆ ನಿರ್ದೇಶವೀಯುತ್ತ ಕುಳಿತಿದ್ದ ಶಾಮೇಗೌಡರು ಆ ಸುದ್ದಿ ಕೇಳಿ ಸಣ್ಣನೆ ನಕ್ಕು, ಮರುಕ್ಷಣವೆ ಗಾಂಭೀರ್ಯ ತಳೆದರು.

ಆಳುಗಳು ವೇತನ ಪಡೆದು ತೆರಳುತ್ತಿದ್ದಂತೆ ಗೌಡರು ಒಬ್ಬನ ಕಡೆ ನೋಡಿ ಅಂದರು :

"ಅಬ್ದುಲ್ಲ, ನೀನು ಒಸಿ ಇದ್ದೋಗು."

## ೨೭

ಮಳೆಗೆ ಕುಸಿದ ಗುಡಿಸಲನ್ನು ಮತ್ತೆ ಎತ್ತಿ ನಿಲ್ಲಿಸಿ ಅಬ್ದುಲ್ಲ ಜೀವನ ನಡೆಸಿದನಾದರೂ, ತಾನಿನ್ನು ಈ ಊರಿಗೆ ಹೊರಗಿನವನು, ಹೆಚ್ಚು ದಿನ ಇಲ್ಲಿ ತಾನು ಇರಲಾರೆ –ಎಂಬ ಭಾವನೆ ಅವನಲ್ಲಿ ಬೆಳೆದು, ಎಲ್ಲಿಗೆ ಹೋಗಲಿ ? ಹೇಗೆ ಹೋಗಲಿ ? ಎಂಬ ಚಿಂತೆಯಾಗಿ ಮಾರ್ಪಟ್ಟಿತು.

ಅಬ್ದುಲ್ಲನ ಆ ಚಿಂತೆಗೆ ಮುಖ್ಯ ಕಾರಣ ಆತ ತೀರಿಸಬೇಕಾದ ಗೌಡರ ಋಣ. ಹೇಳದೆ ಕೇಳದೆ ಕಣ್ಮರೆಯಾದರೊ ? ಸಾಧ್ಯವಿತ್ತು. ಆದರೆ ಅಬ್ದುಲ್ಲ ಅದನ್ನು ಮಾಡಲಾರ. ಮತ್ತೆ ಮತ್ತೆ ಸುಳಿದ ಆ ಯೋಚನೆಗಾಗಿ ತನ್ನನ್ನು ತಾನೇ ಆತ ನಿಂದಿಸಿದ.

'ಅಬ್ದುಲ್ಲ, ನೀನು ಒಸಿ ಇದ್ದೋಗು,' ಎಂದು ಗೌಡರೆಂದಾಗ, ಸಾಲ ತೀರಿಸುವ ವಿಷಯ ಪ್ರಸ್ತಾಪಿಸುವರೇನೋ ಎಂದು ಅಬ್ದುಲ್ಲ ಅಳುಕಿದ.

ಆದರೆ, ಗೌಡರು ಆಡಿದ ಮಾತು ಅವನಲ್ಲಿ ಹೊಸ ಚೇತನವನ್ನು ತುಂಬಿತು.

ಕಣಿವೇಹಳ್ಳಿಯಿಂದ ಮೋಟಾರು ರಸ್ತೆಯತನಕ ಎರಡು ಮೈಲುದ್ದದ ಗಾಡಿ ಹೋಗುವ ದಾರಿ...

"ಬಿತ್ತನೆ ಮುಗಿಯೊತ್ಲೆ ಕೆಲಸ ಶುರುವಾಗ್ಬೇಕು. ನವರಾತ್ರಿಗೆ ಮನೆಯಲ್ಲಿ ಮದುವೆ. ಅಷ್ಟರೊಳಗೆ ಮುಗಿದಿರ್ಬೇಕು. ಏನಂತೀಯಾ ?"

—ಹಾಗೆ ಹೇಳಿ ಉತ್ತರಕ್ಕಾಗಿ ತನ್ನನ್ನು ದಿಟ್ಟಿಸಿದ ಗೌಡರೆದುರು, ಮುಖವರಳಿಸಿ ಅಬ್ದುಲ್ಲನೆಂದ :

"ನನಗೆ ಬುಟ್ಬುಡಿ, ಒಡೆಯಾ. ನಾನೊಬ್ನೇ ಆದ್ರೂ ಸರಿ, ಮಾಡಿ ಮುಗಿಸ್ತೀನಿ."

"ಊಚ ! ಒಬ್ನಿಂದ ಆತದಾ ? ಒಂದೈವತ್ತು ಅರುವತ್ತು ಜನ ರೈತರ್ನ ಜಮೆ ಮಾಡಾನ. ನೀನು ಮೇಸ್ತ್ರಿಯಾಗು. ದುಡ್ದೋರ್ಗೆ ಕೂಲಿಗೀಲಿ ಕೊಡಾನ. ಏನಂತೀಯಾ ?"

"ಊಂ, ಒಡೆಯಾ. ಅಂಗೇ ಆಗ್ಲಿ..."

ಗೌಡರಿಗೆ ಸಮಾಧಾನವಾಯಿತು. ಅಬ್ದುಲ್ಲ ಆ ಕೆಲಸ ಮಾಡಿಯೇ ಮಾಡುವನೆಂಬ ವಿಶ್ವಾಸ ಅವರಿಗಿತ್ತು...

...ಒಂದು ದಿನ ಇದ್ದಕ್ಕಿದ್ದಂತೆ ಹಳ್ಳಿಯವರು ದಾರಿ ಕಡಿಯತೊಡಗಿದಾಗ ಶ್ರೀನಿವಾಸಯ್ಯ

ನವರಿಗೆ ಆಶ್ಚರ್ಯವಾಯಿತು. ಪಂಚಾಯತಿಯಲ್ಲಿ ಆ ಮಾತು ಬಂದಿರಲಿಲ್ಲ. ಯಾರ ಸಲಹೆಯನ್ನೂ ಶಾಮೇಗೌಡರು ಪಡೆದಿರಲಿಲ್ಲ.

ಶ್ರೀನಿವಾಸಯ್ಯ ಬಲ್ಲರು : ತಮ್ಮೊಡನೆ ಶಾಮಣ್ಣ ಆಪ್ತಾಲೋಚನೆ ನಡೆಸುವುದಂತೂ ಗತಯುಗದ ಮಾತು.

ರಸ್ತೆ ನಿರ್ಮಾಣದ ಕಾರ್ಯ ಕ್ರಮ ರೈತರ ಮೂಲಕ ಗೋಪಾಲನಿಗೆ ತಿಳಿದಿತ್ತು. ಆದರೆ ತಂದೆಗೆ ಅದನ್ನು ವರದಿ ಮಾಡುವ ಅಗತ್ಯ ಅವನಿಗೆ ಕಂಡಿರಲಿಲ್ಲ.

ಅಂಥ ಯೋಚನೆ ಗೌಡರಿಗೆ ಇದೆ ಎಂಬುದು ಗೋವಿಂದನಿಗೆ ಗೊತ್ತಿದ್ದಿತಾದರೂ ಕಾರ್ಯಾರಂಭ ಇಷ್ಟು ಬೇಗನೆ ಆಗಬಹುದೆಂದು ಅವನು ನಿರೀಕ್ಷಿಸಿರಲಿಲ್ಲ. ಒಮ್ಮೆ ನಗರಕ್ಕೆ ಹೋದ ಆತ ಹಿಂತಿರುಗಿದಾಗ ನಾಲ್ಕು ದಿನಗಳಾಗಿದ್ದುವು. ಮಧ್ಯಾಹ್ನ ಹಳ್ಳಿಯನ್ನು ಸಮೀಪಿಸುತ್ತಿದ್ದಂತೆ ಆತ ದಾರಿ ಕಡಿಯುತ್ತಿದ್ದ ರೈತರನ್ನು ಕಂಡ.

ಗೋವಿಂದನನ್ನು ನೋಡಿದೊಡನೆ ರೈತರು ಕೆಲಸ ನಿಲ್ಲಿಸಿ. ಎಲೆ ಹಾಕಿಕೊಳ್ಳಲು, ಬೀಡಿ ಸೇದಲು ತೊಡಗಿದರು.

ಅಬ್ದುಲ್ಲನಿಗೆ ಗೋವಿಂದನೆಂದ :

"ನೀನೇ ಮೇಸ್ತ್ರೀಂತ ಕಾಣುತ್ತೆ."

ಹಣೆಯ ಬೆವರನ್ನು ಬೆರಳಿನಿಂದ ಬಾಚಿ ತೆಗೆದು ಅಬ್ದುಲ್ಲನೆಂದ :

"ಊಂ. ಗೋವಿಂದಪ್ನೋರೆ."

"ಹ್ಯಾಗೆ ಗೊತ್ಮಾಡಿದಾರೆ ? ಕಂಟ್ರಾಕ್ಟೊ. ದಿನಗೂಲಿನೊ ?"

"ಅದ್ಯಾವುದೂ ತಿಳೀದು."

"ಹುಚ್ಚಪ್ಪ ! ಹಾಗಂದ್ರೇನೋ ? ಸರಕಾರಕ್ಕೆ ಹೇಳಿ ಅವರಿಂದ್ಲೇ ಈ ಕೆಲಸ ಮಾಡಿಸೋಣಾಂತಿದ್ದೆ ನಾನು. ನೀನೇ ಕಂಟ್ರಾಕ್ಟ್ ಹಿಡೀಬೌದಾಗಿತ್ತು. ಸರಕಾರದ ದುಡ್ಡು. ರೈತರಿಗೂ ಚೆನ್ನಾಗಿ ಸಂಪಾದ್ನೆಯಾಗ್ತಿತ್ತು."

"ನನಗೆ ಅದೊಂದೂ ಗೊತ್ತಿಲ್ಲ ಅಯ್ನೋರೆ."

"ಕತ್ತೆ ದುಡಿದ ಹಾಗೆ ದುಡಿಯೋದೊಂದೇ ಗೊತ್ತು ನಿಮಗೆ."

"ಅಂಗನ್ಬ್ಯಾಡಿ. ನೂರು ವರ್ಸ ನಾನು ದುಡಿದ್ರೂ ಗೌಡರ ಸಾಲ ತೀರಾತಾ ?"

"ಪಾಪ, ಪಾಪ ! ಅಲ್ವೆ ? ನೀನೊಂದು ಮಗು ಕಣಯ್ಯ. ಬೆಟ್ಟು ಬಾಯಿಗಿಟ್ಕೊಂಡ್ರೆ ಚೀಪ್ತಿಯೊ ಇಲ್ವೊ ?"

"ಎಂಗಾದ್ರೂ ಯೋಳಿ ಪರವಾಗಿಲ್ಲ !"

"ಅಲ್ಲಾ, ನೀನು ಅವನನ್ನ—" ಗೋವಿಂದನ ಮಾತು ಅರ್ಧಕ್ಕೆ ನಿಂತಿತು. '—ಹ್ಯಾಗೆ ಕತ್ತು ಹಿಸುಕಿ ಕೊಂದೇಂತ?' ಎಂದು ಹೇಳಬೇಕೆಂದಿದ್ದ ಆತ. ವಿವೇಕೋದಯವಾಗಿ, ನಾಲಿಗೆಯ ತುದಿಗೆ ಬಂದಿದ್ದ ಪದಗಳು ಅಲ್ಲಿಯೇ ಇಂಗಿಹೋದುವು.

ಉಗುಳು ನುಂಗಿ ನಿಧಾನವಾಗಿ ಗೋವಿಂದನೆಂದ :

"ಗೌಡರಿಗೆ—ಪಾಪ— ಏನಾದರೂ ಮಾಡ್ಬೇಕೂಂತ ಆಸೆ."

"ಅವರ ಮನೆಯಾಗೆ ಸುಬಕಾರ್ಯ—"

"ಗೊತ್ತು ಕಣಯ್ಯ. ನೀರಿಗೆ ಬಿದ್ಲಲ್ಲ, ಆ ಸುಬ್ಬೀ ಮದುವೆ."

ಅಬ್ದುಲ್ಲನ ಮುಖ ರಕ್ತರಂಜಿತವಾಯಿತು. ಗೋವಿಂದನ ಮಾತಿನ ರೀತಿ ಅವನಿಗೆ ಹಿಡಿಸಲಿಲ್ಲ. ಏನನ್ನೋ ಹೇಳಬಯಸಿ ತುಟಿಗಳು ಅಲುಗಿದುವಾದರೂ ಆತ ಸುಮ್ಮನಿದ್ದ.

"ಅಂತೂ ಸರಕಾರ ಮಾಡೋದನ್ನ ಗೌಡರು ಮಾಡ್ತಿದಾರೆ. ತಾವೇ ಸರಕಾರ ಅಂತ ತಿಳ್ಕೊಂಡಿದಾರೆ, ಪಾಪ."

ಅದಕ್ಕೂ ಅಬ್ದುಲ್ಲ ಸುಮ್ಮನಿದ್ದ.

"ಒಂದಿಷ್ಟು ದುಡ್ಡು ಬರ್‍ತಿತ್ತು. ನಿನ್ನ ಸಾಲ ತೀರಿಸೋಕಾದ್ರೂ ಆಗ್ತಿತ್ತು. ಹೋಯ್ತು."

ಅಬ್ದುಲ್ಲ ತೊದಲಿದ:

"ಬ್ಯಾಡಿ ಗೋವಿಂದಪ್ನೋರೆ. ಅಂಗನ್ಬ್ಯಾಡಿ. ಗೌಡರು ನನಗೆ ಅಲ್ಲಾನ ಸಮಾನ. ಮೈ ಚರ್ಮ ಕಿತ್ಕೊಡು, ಎಕ್ಕಡ ಮಾಡ್ತೀನಿ—ಅಂತ ಅವರು ಅಂದ್ರೆ ಕಿತ್ಕೊಟ್ಟೇನು."

"ಅಲ್ಲವೆ ! ಅಲ್ಲವೆ !"

"ಓಗಿ. ಊಟದೊತ್ತಾಯ್ತು."

ಗೋವಿಂದ ದುರದುರನೆ ಅವನನ್ನು ನೋಡಿ ಮುಂದಕ್ಕೆ ಹೆಜ್ಜೆ ಇರಿಸಿದ.

ಆಳುಗಳ ತಂಡವನ್ನು ಅವನು ದಾಟುತ್ತಲಿದ್ದಂತೆ ಒಬ್ಬ ರೈತನೆಂದ :

"ಗೋವಿಂದಪ್ನೋರು ಮನೀಗೋತ್ತೀರೋ, ಓಟ್ಲಿಗೊ ?"

ಗೋವಿಂದನಿಗೆ ರೇಗಿತು :

"ಯಾಕಯ್ಯ?"

"ಇ ಹ್ಹಿ ಹ್ಹಿ. ನಿಮ್ಮ ಅಮ್ಮಾವ್ರು ಓಟ್ಲಾಗವ್ರೆ."

"ಮುಚ್ಚು ಬಾಯಿ!"

"ಇಹ್ಹಿ. ಅದಕ್ಯಾಕೆ ಕೋಪ ? ಓಟ್ಲಿಗೋಗಿದ್ದೆ... ಅಲ್ನೋಡ್ದೆ..."

ಗೋವಿಂದ ಅವಾಕ್ಕಾದ. ಮದುವೆಯಾದ ಮೇಲೆ ನಾಲ್ಕೈದು ಸಾರೆ ಆತ ನಗರಕ್ಕೆ ಹೋಗಿದ್ದ. ಪ್ರತಿ ಸಲವೂ 'ನಾನೂ ಬರ್‍ತೀನಿ,' ಎಂದಿದ್ದಳು ಕಾಮಾಕ್ಷಿ. 'ಈಗಲ್ಲ, ಇನ್ನೊಂದ್ಸರ್ತಿ' 'ಈ ಸಲವಲ್ಲ, ನವರಾತ್ರಿಗೆ'—ಎಂದು ದಿನ ಕಳೆದಿದ್ದ ಗೋವಿಂದ.

"ಹೋಗಲಿ, ನೀವಿಲ್ದೇ ಇದ್ದಾಗ ಗಜಾನನಣ್ಣನ ಹೋಟ್ಲಿಗಾದರೂ ಹೋಗ್ತಿರ್‍ತೀನಿ," ಎಂದಿದ್ದಳು ಕಾಮಾಕ್ಷಿ.

ಅಣ್ಣನೊ, ತಮ್ಮನೊ ಹೆಂಡತಿಯ ಹೊಟ್ಟೆಯ ಹಾಗೂ ದೇಹದ ಹಸಿವನ್ನು ಚೆನ್ನಾಗಿ ಅರಿತಿದ್ದ ಗೋವಿಂದ ಅದಕ್ಕೆ ಒಪ್ಪಿರಲಿಲ್ಲ.

"ಬೇಡ."

"ಯಾಕ್ಬೇಡ ? ನೀವು ಇಷ್ಟ ಬಂದಾಗ ಹೋಗೊಲ್ವೊ ! ಜಲ್ಜಾ ಜತೆ ಮಾತಾಡೊಲ್ವೊ ?"

"ನಾನು ಹೋಗೋದು ಜಲಜಾ ಜತೆ ಮಾತಾಡೋದಕ್ಕಲ್ಲ."

"ಮತ್ತೇನು ? ಖರೀ ಮುಖ ನೋಡ್ಕೊಂಡು ಬರ್‍ತೀರೊ ?"

"ಕಾಮೂ ! ಏನೇ ಇದು ?"

"ಶ್! ಏನು, ಸ್ವರ ಏರಿಸ್ತಿದೀರಲ್ಲ ?"

"ಅಲ್ಲ, ಕಾಮೂ. ಇದೇನು ಶುರು ಮಾಡ್ದೇಂತ ?"

"ಬೇಜಾರಾದಾಗ ನಾನು ಜಲ್ಜಾ ಮನೆಗೆ ಖಂಡಿತ ಹೋಗ್ತೀನಿ."

"ಹೋಗ್ಕೂಡ್ದು ಅಂದೆ. ಬೇಕಾದರೆ ಅವಳ್ನೇ ಇಲ್ಲಿಗೆ ಕರೆಸು."

"ನಾನು ಹೋದ್ರೆ ಏನ್ತಪ್ಪು ?"

"ಆಗಲಿ, ಆಗಲಿ. ಒಂದು ದಿವಸ ನಾವಿಬ್ರೂ ಒಟ್ಟಿಗೇ ಹೋಗ್ಬರೋಣ."

"ನೀವಿಲ್ಲಿರುವಾಗ ನನಗೆ ಬೇಜಾರಿಲ್ಲಾಂದ್ರೆ..."

"ನಾನಿಲ್ದೇ ಇದ್ದಾಗ ಜೋಡಿ ಬೇಕು ಅನ್ನು."

"ಹೌದ್ರೀ," ಎಂದಳು ಕಾಮಾಕ್ಷಿ, ಗಂಡನ ಮಾತಿನ ಸೂಕ್ಷ್ಮ ವ್ಯಂಗ್ಯವನ್ನು ಅರ್ಥ ಮಾಡಿಕೊಳ್ಳದೆ.

"ಕಾಮೂ, ನೀನು ಈ ಮನೆ ಹೊಸಲು ದಾಟಿದ್ರೆ ದೊಡ್ಡಮ್ಮ ಏನಂದಾರು ಗೊತ್ತೆ ?"

"ಅಂದ್ರೆ ಅಂದ್ಕೋತಾರೆ. ಮುದುಕ್ರು. ನಮ್ಮ ಕಷ್ಟ ನಮಗೆ."

"ಏನೇ ಇರ್ಲಿ. ಗಜಾನನನ ಹೋಟ್ಲಿಗೆ ನೀನು ಹೋಗೋದು ಬೇಡ."

"ಊಹೂಂ. ಹೋಗೋದು ಖಂಡಿತ."

"ಎಲಾ ಹಟ ಮಾರಿ ! ಹೇಳ್ಲೇನು ನಿನ್ನ ತಂದೆಗೆ ?"

"ಹೇಳಿ. ನಮ್ತಂದೆ ಗಜಾನನನಿಗೆ ಇಲ್ಲಿ ಹೋಟ್ಲು ಇಡಿಸ್ಕೊಟ್ಟಿರೋದು ಯಾಕೆ ಅಂದ್ಕೊಂಡ್ರಿ ?"

"ನಿನ್ನ ಹತ್ತಿರ ವಾದಿಸಿ ಜಯಿಸೋದು ಕಷ್ಟ."

"ಹಾಗ್ಬನ್ನಿ ದಾರಿಗೆ."

"ಇಷ್ಟು ನೆನಪಿಟ್ಕೊ. ನಾನಿಲ್ದೇ ಇರುವಾಗ ನೀನು ಮನೆ ಬಿಟ್ಟು ಹೋಕ್ಕೂಡದು."

—ಈ ದಿನ ರೈತ ಅಂದುದನ್ನು ಕೇಳಿದ ಮೇಲೆ ಗೋವಿಂದ ಸ್ವಲ್ಪ ನಿಧಾನವಾಗಿ ನಡೆದ. ಎಡಕ್ಕೆ ಹೊರಳಿದರೆ ಮನೆಗೆ. ನೇರ ನಡೆದರೆ ವಿಘ್ನೇಶ್ವರ ಭವನಕ್ಕೆ.

ಒಂದು ವೇಳೆ ರೈತ ಸುಳ್ಳಾಡಿದ್ದರೊ ?

ಮನೆಗೆ ಹೋಗುವುದೇ ಸರಿ ಎಂದುಕೊಂಡ ಗೋವಿಂದ.

...ಅಲ್ಲಿ ದೊಡ್ಡಮ್ಮ ಕಳೆಗುಂದಿದ ಮುಖದಿಂದ ಮೊಮ್ಮಗನನ್ನು ಇದಿರ್ಗೊಂಡರು.

ಉಡುಪು ಬದಲಾಯಿಸುವ ಗೋಜಿಗೆ ಹೋಗದೆ ಬಾಗಿಲಲ್ಲೇ ನಿಂತು, "ಎಲ್ಲಿ ಕಾಮಾಕ್ಷಿ ?" ಎಂದು ಕೇಳಿದ ಗೋವಿಂದ.

"ಜಲಜೇನ ನೋಡ್ಕೊಂಡು ಬರ್ತೀನಿ—ಅಂದ್ಲು ನಿನ್ನೆ ಸಾಯಂಕಾಲ. ನಾನು ಬೇಡ ಅಂದೆ. ಆದ್ರೂ ಹೋದ್ಲು."

"ರಾತ್ರೆ ಬರ್ಲಿಲ್ವೆ ?"

"ಇಲ್ಲ. ಬೀರನನ್ನ ಕಳಿಸಿದ್ದೆ. ನಾಳೆ ಬರ್ತೀನಿ ಅಂದ್ಲಂತೆ."

"ವಿಚಿತ್ರವಾಗಿದೆ. ಅಲ್ಲ ದೊಡ್ಡಮ್ಮ, ಜಗಳ ಗಿಗಳ ಏನಾದರೂ ಆಯ್ತು ?"

"ಯಾಕಪ್ಪ ಜಗಳ ? ಸುಮ್ನೆ ಕೂತಿರ್ಬೇಡ, ಸ್ವಲ್ಪ ಅದೂ ಇದೂ ಕೆಲಸ ಮಾಡು—ಅಂದೆ."

" ಸರಿ ! ಅಷ್ಟೇ ಸಾಕು ಅವಳಿಗೆ. ತಾಳು! ಹೋಗಿ ಎಳಕ್ಕೊಂಡ್ಬರ್‍ತೀನಿ. "

" ಬಯ್ಯೋದು ಗಿಯ್ಯೋದು ಮಾಡ್ಬೇಡ, ಗೋವಿಂದ ಎಳೇ ಹುಡುಗಿ. ಕರಕೊಂಡ್ಬಾ."

ಗೋವಿಂದ ವಿಘ್ನೇಶ್ವರ ಭವನದ ದಾರಿ ಹಿಡಿದ...

...ದೊಡ್ಡಮ್ಮನಿಗೋ ಸಹಿಸಲಾರದ ಮಾನಸಿಕ ಯಾತನೆ. ಏನಾಗಿ ಹೋಯಿತು! ಮೊಮ್ಮಕ್ಕಳು ದೊಡ್ಡವರಾದಾಗ, ತಮ್ಮ ಇಳಿವಯಸ್ಸಿನಲ್ಲಿ, ಇಂತಹ ದುರ್ಗತಿ ಪ್ರಾಪ್ತವಾದೀತೆಂದು ಯಾರು ಭಾವಿಸಿದ್ದರು ? ಗಂಗಾಧರ ಶಾಸ್ತ್ರಿಯ ಮಾತನ್ನು ಮೀರಬಾರದಿತ್ತು. ಜಾತಕಗಳು ಕೂಡಿ ಬರಲಿಲ್ಲ ಎಂದು ಗೊತ್ತಿದ್ದೂ ನಗರದ ಸಂಬಂಧಕ್ಕೆ ಒಪ್ಪಬಾರದಿತ್ತು. ಕಿರಿಯವಳಾದ ಆರತಿ ಈ ಮನೆ ಬೆಳಗುವ ವಿಷಯದಲ್ಲಂತೂ ಅವರಿಗೆ ಯಾವ ಭ್ರಮೆಯೂ ಇರಲಿಲ್ಲ. ಪದ್ಮನಾಭ ಹಳ್ಳಿಯ ಉಪಾಧ್ಯಾಯನಾಗಲು ಒಪ್ಪಿದರೆ ತಾನೆ ? ಇಲ್ಲಿ ಬಂದು ನೆಲೆಸಿದ ಮೇಲಲ್ಲವೆ ಅವನ ಮಕ್ಕಳನ್ನು ಎತ್ತಿ ತಾವು ಆಡಿಸುವ ಸಾಧ್ಯತೆ ? ಆರತ್ಯಕ್ಷತೆಯ ಬಳಿಕ ಎರಡೇ ದಿನ ಆಕೆ ಇಲ್ಲಿದ್ದುದು.

" ಇನ್ನೂ ಒಂದ್ನಾಲ್ಕು ದಿವಸ ಇದ್ದು ಹೋಗ್ಬಾರ್‍ದೇನೋ ಪದ್ಮ ?" ಎಂದಿದ್ದರು ದೊಡ್ಡಮ್ಮ.

" ಊಹೂಂ. ಫೈನಲ್ ಯಿಾಯರು. ಹೀಗೆಲ್ಲಾ ಚಕ್ಕರ್ ಹಾಕಿದ್ರೆ ಪಾಸಾಗೊಲ್ಲ, " ಎಂದು ಉತ್ತರವಿತ್ತಿದ್ದ ಪದ್ಮ.

" ನಿನ್ನ ಹೆಂಡತಿ ಇಲ್ಲೇ ಇರ್‍ಲಿ. ರಜಾ ಇದ್ದಾಗ ಬರುವಿಯಂತೆ."

" ಅದೆಲ್ಲಾ ಆಗೊಲ್ಲ, ದೊಡ್ಡಮ್ಮ. ಈ ಕೊಂಪೇಲಿ ಅವಳಿರ್‍ತಾಳೆಯೇ ?"

" ಹುಟ್ಟಿ ಬೆಳೆದ ಹಳ್ಳೀನ ಕೊಂಪೆ ಅನ್ಬಾರ್‍ದು, ಪದ್ಮ."

" ಇನ್ನೇನು ಶಹರ ಅನ್ಲೆ ? ಚೆನ್ನಾಗಿದೆ !"

" ಕರಕೊಂಡ್ಹೋಗು. ನಿನ್ನಿಷ್ಟ."

ಆರತಿ ಬಂದು, " ಹೋಗ್ತೀನಿ, ಅಜ್ಜೀ," ಎಂದಳು.

ಪ್ರಯಾಸಪಟ್ಟು, ದೊಡ್ಡಮ್ಮನ ಪಾದಗಳಿಗೆ ಆಕೆ ನಮಿಸಿದಳು ಕೂಡಾ.

ದೊಡ್ಡಮ್ಮನೆಂದರು :

" ಹೋಗ್ತೀನಿ ಅನ್ಬಾರ್‍ದು, ಮಗೂ. ಹೋಗ್ಬರ್‍ತೀನಿ– ಅನ್ಬೇಕು. ಹೋಗಿ ಬಾ. ಇದು ನಿನ್ನದೇ ಮನೆ. ಮರೀಬೇಡ,"

ತುಟಿಗಳ ಮೇಲೆ ಕಿರುನಗೆ ಮೂಡಿಸಿ, " ಹೂಂ," ಎಂದಳು ಆರತಿ.

" ಇನ್ಯಾವಾಗ ಬರ್‍ತೀರಿ ? ನವರಾತ್ರಿಗೋ ?"

" ದಸರಾಕ್ಕೆ ಪ್ರವಾಸ ಹೋಗ್ಬೇಕು, ಅಜ್ಜಿ. ದೀಪಾವಳಿಗಂತೂ ನಮ್ಮನೇಲೇ."

ದೊಡ್ಡಮ್ಮ ನೋವಿನ ನಗೆ ನಕ್ಕು, ನುಡಿದರು:

" ನಮ್ಮನೇಲೇ ಅಂದ್ರೆ?"

" ಅಂದ್ರೆ ನಮ್ಮನೇಲೇ ! ನಗರದಲ್ಲಿ."

ಆಕೆಯನ್ನು ತಿದ್ದಲು ಹೋಗಲಿಲ್ಲ ದೊಡ್ಡಮ್ಮ.

" ಇದೂ ನಿನ್ಮನೇನೇ. ಮರೀಬೇಡ. ಭಾಗೀರಥಿಗೂ ಕಾಮಾಕ್ಷಿಗೂ ಹೇಳಿ ಹೋಗು ಪದ್ಮನ್ನ ನೋಡ್ಕೊ," ಎಂದಷ್ಟೇ ನುಡಿದರು...

ಆರತಿ ಮಾವನಿಗೆ ವಂದಿಸಿ ಬಂದಳು.

ಅವರು ಹೊರಡುವುದು ನಿಶ್ಚಿತವಾದೊಡನೆಯೇ ತನ್ನ ಸಾಮಾನುಗಳನ್ನು ಆ ಎದುರು ಕೊಠಡಿಗೆ ಕಾಮಾಕ್ಷಿ ಸಾಗಿಸತೊಡಗಿದ್ದಳು.

ಆರತಿ ಓರಗಿತ್ತಿಯರನ್ನು ಮಾತನಾಡಿಸುವ ಗೊಡವೆಗೆ ಹೋಗಲಿಲ್ಲ.

ಬೀರ ಟ್ರಂಕ್ ಹೋಲ್ಡಾಲ್‌ಗಳನ್ನು ಹೊತ್ತುಕೊಂಡ.

ಕಾಮಾಕ್ಷಿ ಕಿಟಕಿಯ ಬಳಿ ನಿಂತು, ಹೋಗುತ್ತಲಿದ್ದ ಅವರನ್ನೇ ಸ್ವಲ್ಪ ಹೊತ್ತು ನೋಡುತ್ತ ಲಿದ್ದು, ಥೂ ಎಂದು ಅಂಗಳಕ್ಕುಗುಳಿ, ಮುಖ ತಿರುಗಿಸಿದಳು.

ಭಾಗೀರಥಿ ಶ್ರೀಪಾದನನ್ನೆತ್ತಿಕೊಂಡು ಮತ್ತೆ ತನ್ನ 'ಮನೆ'ಗೆ ಕಾಲಿರಿಸಿ, ಬರಿದು ಗೋಡೆ ಗಳನ್ನು ನೋಡಿ, ತನ್ನಷ್ಟಕ್ಕೆ ನಕ್ಕಳು.

ಹೊರಗಿನ ಆ ದೃಶ್ಯಗಳನ್ನು ದೊಡ್ಡಮ್ಮ ಕಾಣಲಿಲ್ಲ. ಆದರೆ ಕಾಮಾಕ್ಷಿ ಬಂದು ಎದುರಲ್ಲಿ ನಿಂತಾಗ, ಏನಾಗಿರಬಹುದು—ಎಂಬುದನ್ನು ಅವರು ಊಹಿಸಿಕೊಂಡರು.

"ಅಜ್ಜೀ..."

"ಏನಮ್ಮಾ?"

"ಹೋಗ್ಬರ್ತೀನೀಂತ ಒಂದು ಮಾತು ಕೂಡಾ ಹೇಳ್ಲಿಲ್ವಲ್ಲ ಅವಳು ?"

"ಪಾಪ, ಇನ್ನೂ ಎಳೇ ಹುಡುಗಿ."

"ಓ ಹೋ ಹೋ ಗಂಡಂದಿರನ್ನ ಅರೆದು ಆಪೋಶನ ತಗೋಳೋಕೆ ಗೊತ್ತಿರುತ್ತೆ ಇಂಥ ಎಳೇ ಹುಡುಗೀರಿಗೆ ! ಗೊತ್ತಾ ?"

"ಹೋಗಲಿ, ಬಿಡು. ಮನಸ್ಸಿಗೆ ಹಚ್ಕೋಬೇಡ ."

"ನಾನು ಹಚ್ಕೊಳ್ಳೋದಿಲ್ಲ. ಅವಳು ಎಂಥವಳೂನ್ನೋದು ನಿಮಗೆ ತಿಳಿದಿರ್ಲೀಂತ ಹೇಳ್ದೆ."

ದೊಡ್ಡಮ್ಮ ನೆಲ ನೋಡಿ ನೀಳವಾಗಿ ಉಸಿರು ಬಿಟ್ಟರು.

ಅಂದಿನಿಂದ ನಿಟ್ಟುಸಿರೊಂದೇ ಅವರ ಸಂಕಟಗಳ ಗಂಟನ್ನು ಸಡಿಲಿಸುವ ಸಾಧನವಾಯಿತು.

...ದಾರಿಯುದ್ದಕ್ಕೂ ಗೋವಿಂದ ಹೆಂಡತಿಯೊಡನೆ ತಾನು ಆಡುವ ಮಾತುಗಳನ್ನು ಮತ್ತೆ ಮತ್ತೆ ರೂಪಿಸಿದ. ಜಲಜೆ—ಗಜಾನನರ ಎದುರಲ್ಲೇ ಕಾಮಾಕ್ಷಿಗೆ ಛೀಮಾರಿ ಹಾಕಬೇಕು. ತನ್ನ ಗಂಡಸುತನವನ್ನು ತೋರಿಸಿ ಕೊಡಬೇಕು. ಅವಳ ಜಡೆ ಹಿಡಿದು ಎಳೆಯುವುದಕ್ಕೂ ಹಿಂಜರಿಯಬಾರದು... ಆ ಯೋಚನೆಯ ಬಳಿಕ ತೋರಿತು ಅಲ್ಲಿ ಮಾತನ್ನೇ ಆಡದೆ ಹೊರಗೆ ಕರೆದುಕೊಂಡು ಬಂದು, ಎಲ್ಲಾದರೂ ನಿರ್ಜನ ಪ್ರದೇಶದಲ್ಲಿ ಮರದ ಕೆಳಗೆ ಚೆನ್ನಾಗಿ ಉಗುಳು ವುದಲ್ಲವೆ ಮೇಲು ?...ಅದೂ ಯಾಕೆ ? ಮನೆಗೇ ಕರೆದುಕೊಂಡು ಬಂದು ಎಲ್ಲರೆದುರಲ್ಲಿ— ಅಥವಾ ಕೊಠಡಿಯ ಬಾಗಿಲು ಹಾಕಿ— ಮೈಕೈ ಮುದ್ದೆಯಾಗುವ ತನಕ ಒದೆದು, ಹೊಡೆದು...

ಕುದಿಯುತ್ತ ಗೋವಿಂದ ವಿಘ್ನೇಶ್ವರ ಭವನದೊಳಕ್ಕೆ ಕಾಲಿರಿಸಿದ.

ಅಲ್ಲಿ ಕುಳಿತಿದ್ದ, ಕೃಷ್ಣೇಗೌಡ,

"ಬಾ, ಗೋವಿಂದಪ್ಪ," ಎಂದ ಆತ ಸಲಿಗೆಯಿಂದ.

ಏಕವಚನ ಗೋವಿಂದನನ್ನು ಕುಟುಕಿತು. ಆದರೂ ಅದನ್ನು ತೋರ್ಪಡಿಸದೆ, "ಹೆಹ್ಹೆ ! ಇಷ್ಟು ಹೊತ್ನಲ್ಲಿ, ನೀವು— ಇಲ್ಲಿ—" ಎಂದ.

“ಬೇಜಾರಾಯ್ತು. ಬಿಸಿ ಕಾಫಿ ಕುಡ್ಕೊಂಡೋಗಾನ ಅಂತ ಬಂದೆ. ಅಂಗೇ ಮಾತಾಡ್ತಾ ಕುಂತೆ.”

“ಒಳ್ಳೆ ಕೆಲಸ ಮಾಡಿದ್ರಿ.”

ಗೋವಿಂದನ ದೃಷ್ಟಿ ಮನೆಯೊಳಗಿನ ಮಬ್ಬು ಬೆಳಕಿನತ್ತ ಅಲೆಯಿತು. ಕಿವಿಗಳೂ ಆ ಕಡೆಗೆ ವಾಲಿದುವು. ಕಾಮಾಕ್ಷಿಯೂ ಜಲಜೆಯೂ ಸಣ್ಣ ದನಿಯಲ್ಲಿ ಮಾತನಾಡುತ್ತಿದ್ದರು. ಕಿಲ ಕಿಲ ನಗು ಕೇಳಿಸಿತು.

ಗೋವಿಂದನ ಮೈ ಉರಿಯಿತು. ಕೃಷ್ಣೇಗೌಡನನ್ನು ಉದ್ದೇಶಿಸಿ ಆತನೆಂದ :

“ಮನಸ್ನಲ್ಲಿರೋದನ್ನ ನಾನು ಹೇಳ್ಬಿಡ್ತೀನಿ. ನೀವು ಏನು ಬೇಕಾದರೂ ತಿಳ್ಕೊಳ್ಳಿ, ಪರವಾಗಿಲ್ಲ. ಅಲ್ರೀ, ರಸ್ತೆ ಮಾಡ್ತಿದಾರಲ್ರೀ ಪಟೇಲ್ರು ! ಏನ್ರೀ ಕಾರುಭಾರು ಇದು ! ಇಲ್ಲಿ ಸರ್ಕಾರ ಇದೆಯೋ ಇಲ್ವೋಂತ ಕೇಳ್ತೀನಿ ನಾನು ! ಇದೇನು ಪಾಳೆಯಗಾರ ರಾಜ್ಯ ಕೆಟ್ಹೋಯ್ತು ! ಅಲ್ಲ ಕೃಷ್ಣೇಗೌಡ್ರೆ, ಈ ಊರ್ನೋರೇನಾದ್ರೂ ಸರ್ವಾಧಿಕಾರ ಪಟ್ಟ ಕಟ್ಟಿದಾರಾ ಅವರಿಗೆ? ಮಗಳ ಮದುವೆ ಆಗ್ಬೇಕು. ಆಗ್ಲಿ, ಬೇಡ ಅಂದೋರು ಯಾರು? ಮಾಡ್ಕೊಳ್ಳೋ ಮಗ ಇದ್ರೆ ಖಂಡಿತ ಆಗ್ಲಿ. ಅದಕ್ಕೋಸ್ಕರ ರಸ್ತೆ ಕಡಿಸೋದೆ ? ಅದೂ ಬಡ ರೈತರಿಂದ ಬಿಟ್ಟಿ ಕೆಲಸ ಮಾಡ್ಸೋದೆ ? ಆ ಅಬ್ದುಲ್ಲನೊಬ್ಬ ಶತಮೂರ್ಖ. ಜೀವ ಉಳಿಸಿದ್ರು ಅಂತ ಜೀತದ ಆಳಿನ ಹಾಗೆ ದುಡೀತಿದಾನೆ. ನಮ್ಮನೇಲೂ ಮದುವೆಯಾಯ್ತು, ನಾವು ಮಾಡಿಸಿದ್ವೆ ರಸ್ತೆ?”

ಸಿಡಿ ಮದ್ದನ್ನು ಒಂದೇ ಸಮನೆ ಸುಟ್ಟು ಬಳಲಿದ ಗೋವಿಂದ ಒಂದು ಕ್ಷಣ ಸುಮ್ಮನಾದ.

ಕೃಷ್ಣೇಗೌಡ ನಕ್ಕು ಅಂದ :

“ಓಗ್ಲಿ ಬುಡು, ಗೋವಿಂದಪ್ಪ. ಮಾಡ್ಕೊಳ್ಳಿ. ನಾವೊಂದು ಕಾರು ಮಡಗಾನ. ನಮ್ಮಂಗಿಸ್ರೀಗೆ ಓಡಾಡಾಕಾಯ್ತದೆ. ನಗರದಾಗೆ ಸಿನಿಮಾ ನೋಡ್ಕೊಂಡು ಆ ರಾತ್ರೀನೇ ವಾಪ್ಸು ಬರಬೌದು. ಏನಂತೀರಿ ಗಜಾನನಪ್ಪ ?”

“ಹೌದು, ಹೌದು,” ಎಂದ ಗಜಾನನ.

ಹೇಳಿದುದನ್ನು ಬೇರೆ ರೀತಿಯಲ್ಲಿ ಮತ್ತೆ ಹೇಳತೊಡಗಿದ ಗೋವಿಂದ.

ಸದ್ದು ಚೆಲ್ಲಾಪಿಲ್ಲಿಯಾಯಿತು. ಸಿಡಿಮದ್ದು ಬರಿಯ ಪಟಾಕಿಯಾಯಿತು. ಹೊತ್ತು ಕಳೆಯಿತು.

“ಒತ್ತಾಯ್ತು, ಬತ್ತೀನಿ,” ಎಂದ ಕೃಷ್ಣೇಗೌಡ.

ಇನ್ನೂ ಸ್ವಲ್ಪ ಹೊತ್ತು ಕೂತ್ಕೊಳ್ಳಿ—ಎಂದು ಯಾರೂ ಒತ್ತಾಯಿಸಲಿಲ್ಲ.

ತಾವಿಬ್ಬರೇ ಉಳಿದಾಗ ಗಜಾನನನೆಂದ :

“ಊಟಕ್ಕೇಳಿ ಗೋವಿಂದರಾವ್. ಮೀಲ್ಸ್ ರೆಡಿ.”

“ಇಲ್ಲ. ಮನೆಗ್ಹೋಗ್ಬೇಕು.”

“ನಿಮ್ಮ ಶ್ರೀಮತಿಯವರು ಬೆಳಗಿನಿಂದ ನಿಮಗಾಗಿ ಕಾದಿದಾರೆ ಬರೀ ಹೊಟ್ಟೇಲಿ. ಊಟವಾದ ತಕ್ಷಣ ನಿಮ್ಜತೇಲಿ ಹೊರಡ್ತಾರೆ. ಏಳಿ, ಲೀಡರ್ ಡ್ರೆಸ್ ಬಿಚ್ಚಿಡಿ.”

ಆ ವೇಳೆಗಾಗಲೇ ತಣ್ಣಗಾಗಿದ್ದ ಮುಂದಾಳು ಗೋವಿಂದ, ಅರ್ಧ ಉಡುಪು ಕಳಚಿ ಹಿಂಬಾಲಕನಾದ......

...ಅಪರಾಹ್ನ ಗಂಡ ಹೆಂಡತಿ ಮನೆ ಸೇರಿದರು.

ದಾರಿಯಲ್ಲಿ ಗೋವಿಂದ ಇಷ್ಟೇ ಅಂದ :

"ನಿನ್ನ ಹಟ ನೀನು ಬಿಡಲಿಲ್ಲ."

ಮಧುರತಮ ಧ್ವನಿಯಲ್ಲಿ ಕಾಮಾಕ್ಷಿಯೆಂದಳು :

"ಏನು ಮಹಾ ! ಜಲ್ಸಾ ನಮಗೆ ಸಂಬಂಧವಲ್ವೇಂದ್ರೆ... ನಗರದ ಸಮಾಚಾರ ಹೇಳಿ ಏನೇನು ಮಾಡ್ಕೊಂಡ್ಬಂದ್ರಿ ? ನಮ್ಮ ತಾಯಿ, ಸರದ ವಿಷಯ ಹೇಳಿದ್ಲೋ ಇಲ್ವೊ ?"

"ಓಹೋ."

"ಅಲ್ಲಿ ಯಾವ್ಯಾವ ಪಿಕ್ಚರ್ ನಡೀತಿದೆ ?"

"ಯಾವ್ಯಾವುದೋ ನಡೀತಿದೆ. ನೆನಪಿಲ್ಲ."

"ನೀವು ಎಷ್ಟು ನೋಡಿದ್ರಿ ?"

"ಹೌದ್ಹೌದು, ಬೇರೇನೂ ಕೆಲಸವಿಲ್ಲ ನನಗೆ ಅಂದ್ಕೊಂಡಿಯಾ ? ಅಲ್ದೆ ನಿನ್ನ ಬಿಟ್ಬಿಟ್ಟು ಒಬ್ನೇ ನೋಡ್ತೀನಾ ನಾನು ?"

"ಎಷ್ಟು ನಿಜವೋ ಎಷ್ಟು ಸುಳ್ಳೋ. ಮುಂದಿನ ಸಲ ನಿಮ್ಜೊತೆ ಜತೆ ಬಂದೇ ಬಿಡ್ತೀನಿ. ಬೇಡ ಅಂದರೆ ಎಲ್ಲಿಗಾದರೂ ಓಡ್ಹೋಗ್ತೀನಿ."

"ಸ್ವಲ್ಪ ಸಹಿಸ್ಕೊ, ಕಾಮಾಕ್ಷಿ. ರಸ್ತೆ ಕೆಲಸ ಶುರುವಾಗಿದೆ. ನವರಾತ್ರಿಗೆ ಟ್ಯಾಕ್ಸಿ ತರಿಸ್ಕೊಂಡು ಅದರಲ್ಲಿ ಕೂತು ಹೊರಟ್ಹೋಗೋಣ."

"ಹೌದೆ ? ಹಾಗಾದ್ರೆ ಪರವಾಗಿಲ್ಲ!"

ಮನೆಯಲ್ಲಿ ದೊಡ್ಡಮ್ಮ ಕಿರಿಯರನ್ನು ಮಾತನಾಡಿಸಲಿಲ್ಲ.

ಶ್ರೀನಿವಾಸಯ್ಯ ಮಗನನ್ನು ಕರೆದು ಅಂದರು :

"ನಿನ್ನ ಹೆಂಡ್ತಿ ನಿನ್ನೆ ಅವಳ ನೆಂಟರಲ್ಲಿಗೆ ಹೋಗಿ, ರಾತ್ರಿ ಅಲ್ಲೇ ಇದ್ಲು."

"ಗೊತ್ತು," ಎಂದ ಗೋವಿಂದ.

"ಹಾಗೆಲ್ಲಾ ಹೋಗೋದು ಚೆನ್ನಾಗಿ ಕಾಣ್ಸೋದಿಲ್ಲ."

"ಇರಲಿ ಬಿಡಿ, ಅಣ್ಣಯ್ಯ. ನೀವು ಸುಮ್ನೆ ತಲೆ ಕೆಡಿಸ್ಕೋಬೇಡಿ."

...ಆ ರಾತ್ರೆ ಗೋವಿಂದನ 'ಮನೆ'ಯಲ್ಲಿ ದಂಪತಿ ನಿದ್ದೆ ಮಾಡಿದುದೇ ಕಡಮೆ.

...ಬೆಳಗ್ಗೆ ಶಾಮೇಗೌಡರ ಆಳು ಕರಿಯ ಬಂದು ನಿರೂಪ ಮುಟ್ಟಿಸಿದ :

"ಗೋವಿಂದಪ್ನೋರು ಬಂದು ಕಾಣ್ಬೇಕೂಂತ ಪಟೇಲ್ರು ಯೋಳವ್ರೆ."

## ೨೮

"ಬಾ, ಗೋವಿಂದಪ್ಪ," ಎಂದರು ಗೌಡರು, ಕುಳಿತಲ್ಲಿಂದಲೆ.

ಗೋವಿಂದ ಇಲ್ಲದ ವಿನಯ ನಟಿಸಿ ಪಟೇಲರಿಗೆ ನಮಸ್ಕರಿಸಿದ.

"ಕುಂತ್ಕೊ," ಎಂದರು ಗೌಡರು ಮೀಸೆಯ ತುದಿಗಳನ್ನು ಮುಟ್ಟಿ.

ಕರೆ ಬಂದಾಗಲೇ ಗೋವಿಂದ ಊಹಿಸಿಕೊಂಡಿದ್ದ, ಸನ್ನಿವೇಶ ಇಂಥದೇ ಎಂದು.

ಪಟೇಲರ ಮುಖಭಾವ ನೋಡುತ್ತಲೆ, ಊಹೆ ಸರಿ ಎಂಬುದು ಅವನಿಗೆ ಖಚಿತವಾಯಿತು.

ಒಂದೇ ಉಸಿರಿಗೆ ಅವನೆಂದ :

"ನಾನೇ ಬಂದು ಅಭಿನಂದಿಸೋಣಾಂತಿದ್ದೆ. ತಾವಾಗಿ ಅವಕಾಶ ಮಾಡಿಕೊಟ್ರಿ."

ಗೌಡರ ಹುಬ್ಬುಗಳು ಒಂದನ್ನೊಂದು ಸಮೀಪಿಸಿದುವು.

"ಏನದು ?"

"ಹಿಂದಿನ ಕಾಲದಲ್ಲಾದರೆ ಲೋಕಸೇವಾನಿರತ ಅಂತ ಬಿರುದು ಬಂದಿರೋದು. ಈಗಲಾದರೂ ಏನಂತೆ ? ನಮ್ಮ ಮಿನಿಸ್ಟರುಗಳಿಗೆ ಹೇಳಿ ಪದ್ಮಶ್ರೀ ಕೊಡಿಸ್ಬೌದು. ಅದ್ಭುತ ! ಅದ್ಭುತ ! ಒಬ್ಬ ವ್ಯಕ್ತಿ ಇಷ್ಟು ಮಾಡೋದು ಸಾಮಾನ್ಯವೇ ? ವರ್ಷಗಟ್ಲೆ ಯೋಜನೆ ತಯಾರ್ಸಿ, ಲಕ್ಷಗಟ್ಲೆ ದುಡ್ಡು ಸುರ್ಸಿ ಸರ್ಕಾರ ಮಾಡೋ ಕೆಲಸವನ್ನ ಒಬ್ಬ–ಒಬ್ಬ ಮನುಷ್ಯ–ಸಾಧಿಸೋಕೆ ಟೊಂಕ ಕಟ್ಟೋದು ಅಂದರೇನು ?"

"ಏನಪ್ಪ ಯೋಳ್ತಿದೀಯಾ ?"

"ಅದೇ, ರಸ್ತೆಯ ವಿಷಯ."

"ನಿನ್ನೆ ಏನೋ ಅಂದ್ಯಂತೆ."

"ಇದನ್ನೇ, ಸರ್ಕಾರದ ಕೆಲಸವನ್ನ ಗೌಡರು ಒಬ್ಬಂಟಿಗರಾಗಿ ಮಾಡ್ತಿದಾರೆ ಅಂತ ಹೊಗಳ್ದೆ."

ಆಡುತ್ತಿರುವುದು ಸುಳ್ಳಲ್ಲವೆ? –ಎಂದು ಪ್ರಶ್ನಿಸುವವರ ದೃಷ್ಟಿಯಿಂದ ಗೌಡರು ಗೋವಿಂದನನ್ನು ನೋಡಿದರು.

ಕೆದಕಿ ಮಾತನಾಡುವುದರಲ್ಲಿ ಅರ್ಥವಿಲ್ಲ ಎಂಬ ತೀರ್ಮಾನಕ್ಕೆ ಬಂದು ಹುಬ್ಬಿನ ಗಂಟು ಗಳನ್ನು ಸಡಿಲಿಸಿದರು.

ಅದನ್ನು ಗಮನಿಸಿ ಗೋವಿಂದನೆಂದ :

"ಗೌಡರ ಮನೆಯ ಶುಭಕಾರ್ಯ ಅಂದರೆ ಇಡೀ ಹಳ್ಳಿಯ ಶುಭಕಾರ್ಯವೇ. ಅಪ್ಪಣೆ ಯಾಗಲಿ ನಗರದಿಂದ ತರೋದು ಮಾಡೋದು ಏನೇ ಕೆಲಸವಿದ್ದರೂ ಹೇಳಿ. ಸಂತೋಷದಿಂದ ಮಾಡ್ತೀನಿ."

"ನಗರದ್ದು–ಹಾಂ, ರಂಗ ಹ್ಯಾಗೂ ಅಲ್ಲೇ ಇದಾನಲ್ಲ."

"ಅದ್ನಿಜ ಅನ್ನಿ. ಅಂಥ ಕೆಲಸವೆಲ್ಲ ರಂಗಣ್ಣ ಮಾಡಿಯೇ ಮಾಡ್ತಾನೆ... ಒಂದು ವಿಷಯ. ಯಾರಾದರೂ ಮಿನಿಸ್ಟರನ್ನ ಆ ದಿವಸ ಕರಕೊಂಡ್ಬರ್ಲೆ ? ರಸ್ತೆಯ ಉದ್ಘಾಟನೋ ತ್ಸವವನ್ನೂ ಅವತ್ತೇ ಇಟ್ಕೋಬೌದು."

"ಬ್ಯಾಡಪ್ಪ ಅದೆಲ್ಲ, ಅವರಿಗ್ಯಾಕೆ ತೊಂದರೆ ? ರಸ್ತೆ ಅದರ ಪಾಡಿಗೆ ಅದಿರುತ್ತೆ."

"ನಿಮ್ಮಿಷ್ಟ, ನಿಮ್ಮಿಷ್ಟ."

"ಅಬ್ದುಲ್ಲ ಮೇಸ್ತ್ರಿಯಾಗಿ ನಿಂತು ಕೆಲಸ ಮಾಡಿಸ್ತಾ ಅವನೆ. ಎಂಗಾರ ಮಾಡಿ ನವರಾತ್ರಿ ಒತ್ಗೆ ಮುಗಿಸ್ತವ್ನೆ ಅನ್ನು."

"ಓಹೋ, ಸಂಶಯವಿಲ್ಲ ! ಅಬ್ದುಲ್ಲ ಅಂದ್ಮೇಲೆ ಕೇಳ್ಬೇಕೇ ?"

ಗೌಡರು ವಿಷಯಾಂತರಗೊಳಿಸಿದರು :

"ಮನೆಯಾಗೆಲ್ರೂ ಚೆಂದಾಕವರಾ ?"

" ಹ್ಞ, ಮಕ್ಕಳಿಗೆಲ್ಲಾ ಮದುವೆಯಾಯ್ತು. ಸಂಸಾರ ಬೆಳೀತು. ಅಣ್ಣಯ್ಯ ಹಾಯಾಗಿದಾರೆ."

ಒಂದು ಕ್ಷಣ ಗೌಡರು ಅಂತರ್ಮುಖಿಯಾದರು. ಹಾಯಾಗಿರುವ ಶ್ರೀನಿವಾಸಯ್ಯ, ತಾವಿಬ್ಬರೂ ಅನ್ಯೋನ್ಯವಾಗಿದ್ದ ಆ ಕಾಲ. ಆತ ಒಳ್ಳೆಯವನೇ ಆದರೂ ಪರಿಸ್ಥಿತಿ ಬದಲಾಯಿತಲ್ಲ. ಆ ಜೀವ ಸಿಂಹವೇ. ಸಾಧು ಸಿಂಹ. ಅದರ ಹೊಟ್ಟೆಯಲ್ಲಿ ಹುಟ್ಟಿದ ಈತನೋ–ನರಿ, ಗುಳ್ಳೇನರಿ.

ನೆಲ ನೋಡುತ್ತಿದ್ದ ದೃಷ್ಟಿಯನ್ನು ಗೌಡರು ಮೇಲಕ್ಕೆತ್ತಿದರು.

ಗೋವಿಂದನೇ ಮುಂದುವರಿದ :

" ನಮ್ಮ ಕಷ್ಟಗಳು ಗೊತ್ತಿಲ್ಲ ನಿಮಗೆ. ದೊಡ್ಡಮ್ಮನಿಗೆ ವಯಸ್ಸಾಯ್ತು. ಚಿಕ್ಕವರನ್ನು ಇನ್ನೂ ಅವರು ಅರ್ಥ ಮಾಡಿಕೊಳ್ಳೋದು ಕಷ್ಟ. ನಮ್ಮ ಅತ್ತಿಗೆಗಂತೂ ಮೈಲಿ ಹುಷಾರಿಲ್ಲ. ನಿಶ್ಚಿತಾರ್ಥದ ದಿವಸ ಶುರುವಾದ ಕಾಹಿಲೆ ಪೂರ್ತಿ ವಾಸಿಯಾಗೇ ಇಲ್ಲ. ಪದ್ಮನ ಹೆಂಡ್ತಿಯಂತೂ ತಂದೆ ಮನೇಲೆ ಇರ್‍ತಾಳೆ. ಇವನೂ ಅಲ್ಲೇ ಮುಂದಿನ ವರ್ಷ ಲಾ ಓದ್ತಾನಲ್ಲ."

ಗೌಡರು ಹೂಂಗುಟ್ಟದೆ ಕಿವಿಗೊಟ್ಟರು.

ಲಾ ಅಂದರೆ ಲಾಯರಿಯಾಗೋದು. ಅದನ್ನು ಗೌಡರು ಬಲ್ಲರು. ಅಯ್ಯನವರ ಕಿರಿಯ ಮಗನೂ ಲಾಯರಿ, ತಮ್ಮ ಅಳಿಯನೂ ಲಾಯರಿ...

ಒಳಗೆ ಕರಗತೊಡಗಿದ್ದ ಅವರ ಮನಸ್ಸು ಮತ್ತೆ ಹೆಪ್ಪುಗಟ್ಟಿತು.

ಇದ್ದಕ್ಕಿದ್ದಂತೆ ಗೋವಿಂದನೆಂದ :

" ತಾವು ಬರಹೇಳಿದ ವಿಷಯ..."

ಗೌಡರು ಗೋವಿಂದನನ್ನು ದಿಟ್ಟಿಸಿ ನೋಡಿ, ಕಣ್ಣು ಮುಚ್ಚಿ ತೆರೆದು, ಅಂದರು :

" ಇಸ್ಯ ಯಂಥದೂ ಇಲ್ಲ, ಗೋವಿಂದಪ್ಪ. ನಿನ್ನ ನೋಡಿ ಶಾನೇ ದಿವಸ ಆಯ್ತೂಂತ ಕರೆಸ್ದೆ. ಪುಢಾರಿಗ್ಳು ನಮ್ನ ಮರತ್ರೂ, ನಾವು ಅವರ್ನ ಮರಿಯೋಕಾತದಾ ?"

" ಛೆ ! ಛೆ! ದೊಡ್ಡ ಮಾತು ಹೇಳಿದಿರಿ. ಏನಿದ್ರೂ ಬಂದು ಊರಿನ ಪ್ರಮುಖರಿಗೆ ವರದಿ ಮಾಡೋದು ನನ್ನ ಕರ್ತವ್ಯ. ಇನ್ನು ಬರಲೇ ?"

" ಅಂಗೇ ಮಾಡು".

ಗೋವಿಂದನೆದ್ದು ಮತ್ತೆ ಕೈಜೋಡಿಸಿ ಅಂದ :

" ರಸ್ತೆ ಮುಗಿಯೋ ಹೊತ್ತಿಗೆ ಪತ್ರಿಕೆಗಳಲ್ಲೆಲ್ಲಾ ಸುದ್ದಿ ಬರೋ ಹಾಗೆ ಮಾಡ್ತೀನಿ."

" ಸುಮ್ನೆ ಹಂಥಾದ್ದೆಲ್ಲ ಯಾಕೆ ಗೋವಿಂದಪ್ಪ ?"

" ಛೆ ! ಛೆ ! ಅದು ನನ್ನ ಕರ್ತವ್ಯ. ಈ ಮಣ್ಣಿನಲ್ಲಿ ಹುಟ್ಟಿ ಬೆಳೆದಿರೋನು ಈ ಹಳ್ಳಿಗಾಗಿ ಇಷ್ಟು ಮಾಡದಿರ್‍ತೀನ್ಯೆ ?"

ಗೌಡರು ನಕ್ಕು, ಇನ್ನು ತೊಲಗು–ಎನ್ನುವಂತೆ ಕೈ ಆಡಿಸಿದರು.

ಗೋವಿಂದ ಹೊರಟು ಹೋದ ಮೇಲೆ ಗೌಡರೆದ್ದು ಒಳ ಮನೆಗೆ ಹೋದರು. ಅಲ್ಲಿ ಸುಬ್ಬಿ ತರಕಾರಿ ಹೆಚ್ಚುತ್ತ ಕುಳಿತಿದ್ದಳು.

" ಏನ್ಬೇಕಪ್ಪ ?" ಎಂದಳು ಆಕೆ ತನ್ನ ತಂದೆಯನ್ನು ನೋಡಿ.

ನಗೆಯಿಲ್ಲ, ಸರಸವಿಲ್ಲ; ಮಗಳು ಬೆಳೆದಿದ್ದಾಳೆ; ಇವಳಿನ್ನು ಎಳೆಗೂಸಲ್ಲ.

" ನಾಗೂ ಎಲ್ಲಿ ?"

"ಇತ್ಲಾಗವ್ರೆ...ಕೂಗ್ಲಾ ?"

"ಬ್ಯಾಡ," ಎಂದು ನುಡಿದು, ಗೌಡುರ ಪಡಸಾಲೆಗೆ ಮರಳಿದರು, ತಂಗಿಯ ಅಡುಗೆ ಕೆಲಸ ಮುಗಿದ ಮೇಲೆ ಮದುವೆಯ ಸಿದ್ಧತೆಯ ವಿಷಯ ಅವಳೊಡನೆ ಮಾತನಾಡಿದರಾಯಿತು ಎಂದುಕೊಳ್ಳುತ್ತ....

...ಶಾಮೇಗೌಡರ ಮನೆಯಿಂದ ಹೊರಟ ಗೋವಿಂದ ವಿಘ್ನೇಶ್ವರ ಭವನಕ್ಕೆ ಬಂದ.

ಹಳ್ಳಿಶಾಲೆಯ ಇಬ್ಬರು ಉಪಾಧ್ಯಾಯರಲ್ಲೊಬ್ಬ, ಕಿರಿಯವನು —ಚಂದ್ರಶೇಖರ, ಅಲ್ಲಿ ಕುಳಿತಿದ್ದ, ಕಾಫಿ ಹೀರುತ್ತ.

"ನಮಸ್ಕಾರ," ಎಂದ ಆತ, ಗೋವಿಂದನನ್ನು ನೋಡಿ.

ಗೌರವಸೂಚಕವಾಗಿ ಆತ ಎದ್ದು ನಿಲ್ಲದೇ ಇದ್ದರೂ, "ಕೂತ್ಕೊಳ್ಳಿ, ಕೂತ್ಕೊಳ್ಳಿ," ಎನ್ನುತ್ತ ಗೋವಿಂದ ತಾನೂ ಅದೇ ಬೆಂಚಿನ ಮೇಲೆ ಆಸೀನನಾದ.

ಮೂವರು ರೈತರು ನೆಲದ ಮೇಲೆ ಗೋಡೆಗೊರಗಿ ಕಾಫಿಯ ಗ್ಲಾಸುಗಳನ್ನು ಕೈಗಳಲ್ಲಿ ಹಿಡಿದುಕೊಂಡು ಕುಳಿತಿದ್ದರು.

ಗೋವಿಂದ ಕೇಳಿದ :

"ಹ್ಯಾಗೆ ನಡೀತಿದೆ ಮೇಸ್ಟ್ರೆ ಸ್ಕೂಲು ?"

"ನಡೀತಿದೆ; ಪರವಾಗಿಲ್ಲ."

"ಕುಂಟ್ತಾ ನಡೀತಿದೆ, ಅನ್ನಿ."

"ಹ ಹ್ಹ !"

"ನಿಮ್ಮ ಹೆಡ್ಮೇಸ್ಟ್ರು ಹೊಸಳ್ಳಿಯಿಂದ ದಿನಾ ಬರ್‍ತಿರ್‍ತಾರೊ ?"

"ಯಾಕೆ, ತಮಗೆ ಸಿಗೋದೇ ಇಲ್ವೆ ?"

ಗಜಾನನನೆಂದ :

"ಗೋವಿಂದರಾಯರೆಲ್ಲಿರ್‍ತಾರೆ ಸಾರ್, ಹಳ್ಳೀಲಿ ? ಬೆಳಗಾದರೆ ಸಾಕು ನಗರಕ್ಕೆ ಹೊರಟ್ಬಿಡುತ್ತೆ, ಸವಾರಿ."

"ಹ ಹ್ಹ ಹ್ಹ !" ಎಂದು ಗೋವಿಂದ, ಹೊಗಳಿಕೆಯನ್ನು ಸ್ವಾಗತಿಸಿದ ಬಳಿಕ, ಕುಳಿತಿದ್ದ ರೈತರಲ್ಲಿ ಒಬ್ಬನ ಕಡೆಗೆ ತಿರುಗಿ, "ಏನು ಅಯ್ಯಣ್ಣ, ರಸ್ತೆ ಕೆಲಸಕ್ಕೆ ಹೋಗ್ಲಿಲ್ವೆ ?" ಎಂದು ಕೇಳಿದ.

"ಓಗ್ತೀವಿ ಅಯ್ನೋರೆ, ಒಸಿ ಕಾಫಿ ಕುಡ್ಕಂಡು—" ಎಂದ ಆ ರೈತ.

"ಹೋಟ್ಲು ಬಂದು ಅನುಕೂಲವಾಯ್ತು, ಅನ್ನು. ಹೆಂಡಕ್ಕಿಂತ ಇದೇ ವಾಸಿ, ಅಲ್ವಾ ?"

ಇನ್ನೊಬ್ಬ ರೈತನೆಂದ :

"ಎರಡೂ ಒಂದೇ, ಬುದ್ಧಿ."

ಗಜಾನನ ತಂದುಕೊಟ್ಟ [ಸ್ಪೆಷಲ್] ಕಾಫಿಯನ್ನು ಸ್ವಲ್ಪ ಸ್ವಲ್ಪವೇ ಕುಡಿಯುತ್ತ ಗೋವಿಂದ, ಉಪಾಧ್ಯಾಯರೊಡನೆ ವಾಚನಾಲಯದ ವಿಷಯ ಪ್ರಸ್ತಾಪಿಸಿದ :

"ಮಿಸ್ಟರ್ ಚಂದ್ರಶೇಖರ್, ಎರಡು ವರ್ಷಗಳಿಂದ ರಸ್ತೆಯಾಗ್ಬೇಕು ಆಗ್ಬೇಕೂಂತ ನಾನು ಬಡಕೊಂಡು ಬಡಕೊಂಡು ಈಗ ಅಂತೂ ಆಗ್ತಿದೆ. ಇನ್ನು ಪ್ರಯತ್ನ ಮಾಡಿ ಯಾವು ದಾದರೊಂದು ಬಸ್ ಸರ್ವೀಸು ಇಲ್ಲಿವರೆಗೂ ಬರೋ ಹಾಗೆ ಮಾಡ್ತೇನೆ. ಆ ಮೇಲೆ ಪೇಪರುಗಳ ತೊಂದರೆ ಇಲ್ಲ. ವಾರದ ಭವಿಷ್ಯ ಯಾಕೆ, ನಮ್ಮ ಗಜಾನನ ನಿತ್ಯ ಭವಿಷ್ಯವನ್ನೂ ಓದಬಹುದು.

ಅಲ್ವೇನೋ ಗಜಾನನ ?"

"ಹೆಹ್ಹೆ. ಹೌದು, ಗೋವಿಂದಣ್ಣ,"

ಗಜಾನನನೆಂದ:

"ಮಿಸ್ಟರ್ ಚಂದ್ರಶೇಖರ್, ನಿಮ್ಮ ಹತ್ತಿರ ಪತ್ರಿಕೆಗಳ ವಿಷಯ ಯಾಕೆ ಹೇಳ್ತಿದೀನಿ ಅಂದ್ರೆ, ಈಗ ನೀವಿರೋ ರೂಮಿದೆಯಲ್ಲ ಅಲ್ಲೇ ವಾಚನಾಲಯ ಮಾಡೋಣ ಅಂತ."

ಚಂದ್ರಶೇಖರ್, ಗಜಾನನ ತಂದುಕೊಟ್ಟ ಸಿಗರೇಟು ಹಚ್ಚಿ, "ನಾನೇನ್ಮಾಡ್ಲಿ ? ಹೋಟ್ಲಿಗೆ ಬಂದ್ಬಿಡ್ಲೊ ?" ಎಂದು ಕೇಳಿದ.

"ಯಾಕಾಗ್ಬಾರ್ದೂಂತ ? ರಾತ್ರೆ ಅಲ್ಲಿ ಮಲಕೊಳ್ಳಿ. ಹಗಲು ನಿಮಗೇನ್ಕೆಲಸ? ಮೇಷ್ಟ್ರು ಪಾಠ ಹೇಳ್ಕೊಡೋದು ಬಿಟ್ಟು ಅಡುಗೆ ಮಾಡ್ತಾ ಇರ್ತಾರೆ ಅಂತ ಅಪವಾದ ಯಾಕೆ ? ಗಜಾನನ ಇಲ್ವೆ ? ನಿಮಗೆ ಒಬ್ಬರಿಗೆ ಊಟ ಬಡಿಸೋದು ಅವನಿಗೆ ಕಷ್ಟವಾಗುತ್ಯೆ ?"

"ಏನೂ ಕಷ್ಟವಿಲ್ಲ. ಹಾಗೇ ಮಾಡಿ, ಮೇಷ್ಟ್ರೆ," ಎಂದ ಗಜಾನನ.

ಚಂದ್ರಶೇಖರ್ ಸಿಗರೇಟಿನ ಹೊಗೆಯನ್ನೊಮ್ಮೆ ಛಾವಣಿಯತ್ತ ಊದಿ, "ಆಗಲಿ, ನೋಡೋಣ," ಎಂದ.

"ನನಗೂ ಒಂದು ಸಿಗರೇಟು ಕೊಡೊ."

—ಗೋವಿಂದನೆಂದ ಗಜಾನನನಿಗೆ.

"ಹೆಹ್ಹೆ. ಗೋವಿಂದಣ್ಣ ಸೇದೋದೇ ಅಪರೂಪ," —ಎನ್ನುತ್ತ, ಗಜಾನನ ಗೋವಿಂದನ ಆಜ್ಞೆಯನ್ನು ಪಾಲಿಸಿದ, ಬೆಂಕಿ ಕಡ್ಡಿಯನ್ನು ತಾನೇ ಕೊರೆದು ಗೋವಿಂದ ತುಟಿಗಳ ನಡುವೆ ಕಚ್ಚಿದ ಸಿಗರೇಟಿಗೆ ಹಚ್ಚಿ.

ಗೋವಿಂದ ಒಮ್ಮೆ ಕೆಮ್ಮಬೇಕಾಯಿತು. ಬಳಿಕ ಅವನೆಂದ :

"ಜೋರಾಗಿದೆ ಸಿಗರೇಟು. ಏನಾಮಾ ಹೀಗೇನೇ... ಹಂ... ನಿಮಗೆ ಗೊತ್ತೆ, ಮಿಸ್ಟರ್ ಚಂದ್ರಶೇಖರ್ ? ಈ ಸಲ ನಗರಕ್ಕೆ ಹೋದಾಗ ಒಂದು ವರ್ತಮಾನ ಸಿಕ್ತು. ಹಳ್ಳಿಗಳಲ್ಲೆಲ್ಲಾ ಪಂಚಾಯತ್ ರಾಜ್ಯ ಸ್ಥಾಪಿಸ್ಬೇಕೂಂತಿದಾರಂತೆ ನಮ್ಮ ಸರಕಾರದೋರು. ಹೋದ್ಸರ್ತಿ ಬಂದಿದ್ದಾಗ ನೆಹರೂ ಇವರ್ನ ತರಾಟೆಗೆ ತಗೊಂಡ್ರಂತೆ : ಇನ್ನೂ ಯಾತಕ್ಕೆ ತಡಮಾಡ್ತಿದೀರಿ—ಅಂತ. ಒಂದು ಮಸೂದೆ ತಯಾರ್ಮಾಡ್ತಾರಂತೆ...

[ಗೋವಿಂದ ಮಾತನಾಡುತ್ತಲೇ ಇದ್ದ. ರೈತರು ಎದ್ದುಹೋದರು. ಕಾಸಿಲ್ಲ. ಗಜಾನನ ಒಂದು ಪುಸ್ತಕದಲ್ಲಿ ಗುರುತು ಹಾಕಿಕೊಂಡ.]

"...ಪಂಚಾಯತಿ ರಾಜ್ಯ ಬಂದ್ಮೇಲೆ, ವಂಶಪಾರಂಪರ್ಯ ಹುದ್ದೆಗಳಿರೋದಿಲ್ಲ. ಎಲ್ಲಾ ಪ್ರಜಾಪ್ರಭುತ್ವ. ಪ್ರತಿಯೊಂದೂ, ಡಿಸ್ಟ್ರಿಕ್ಟ್ ಬೋರ್ಡ್ ತಾಲ್ಲೋಕ್ ಬೋರ್ಡ್‌ಗಳ ಅಧೀನಕ್ಕೆ ಅಧಿಕಾರದ ವಿಕೇಂದ್ರೀಕರಣ. ಹಳೇ ಪಾಳೆಯಗಾರ ವ್ಯವಸ್ಥೆಯೆಲ್ಲ ನಿರ್ನಾಮವಾಗುತ್ತೆ..."

ಗೋವಿಂದ ತನ್ನ ಮಾತಿನ ಗುಂಗಿಗೆ ತಾನೇ ಮಾರುಹೋಗಿದ್ದ. ವಿಷ್ಣುಮೂರ್ತಿಯವರ ಅಳಿಯನಾದ ಮೇಲೆ ಇವನ ಎತ್ತರ ಸ್ವಲ್ಪ ಹೆಚ್ಚಿದ ಹಾಗಿದೆ—ಎನಿಸಿತು ಗಜಾನನನಿಗೆ.

ಚಂದ್ರಶೇಖರ ಕಿರಿದಾಗಿದ್ದ ಸಿಗರೇಟಿನ ತುಂಡನ್ನ ಚಪ್ಪಲಿಯ ಕೆಳಗೆ ಹಾಕಿ ತುಳಿದು, ಅಂದ :

"ಆಗ್ಬೇಕು ಸಾರ್. ಎಲ್ಲಾ ನಿಂತ ನೀರಿನ ಹಾಗೆ ಕೆಟ್ಟಿದೆ. ಬರೇ ಬೇಜಾರು. ಬದಲಾವಣೆ

ಆಗ್ದೇ ಇದ್ರೆ, ದೇಶ ಸೊರಗಿ ಸತ್ಹೋಗುತ್ತೆ."

"ಇಲ್ರೀ ಚಂದ್ರಶೇಖರ್. ಕ್ರಾಂತಿಯಾಗ್ಬಿಡುತ್ತೆ, ರಕ್ತಕ್ರಾಂತಿ. ಇದು ನಮ್ಮ ಮುಖಂಡರಿಗೆ ಗೊತ್ತಿರೋದ್ರಿಂದಾನೇ ಈ ಏರ್ಪಾಟು ಮಾಡ್ತಿದಾರೆ."

"ನಿಜ. ಹೊತ್ತೆಷ್ಟಾಯ್ತು ಸ್ವಾಮಿ ?"

—ಚಂದ್ರಶೇಖರ ಗಜಾನನನನ್ನು ಕೇಳಿದ.

"ನಮ್ಮ ಗಡಿಯಾರದಲ್ಲಿ ಒಂಭತ್ತೂ ಕಾಲು. ಹತ್ತು ನಿಮಿಷ ಹಿಂದಿದೆ."

"ನಮ್ಮ ದೇಶ ಹತ್ನಿಮಿಷ ಅಲ್ಲ ಹತ್ತು ವರ್ಷ– ನೂರು ವರ್ಷ– ಹಿಂದಿದೆ ! ಏಳಿ ಮೇಸ್ಟ್ರೆ, ಸ್ಕೂಲಿಗೆ ಹೊತ್ತಾಯ್ತು. ನಾನೂ ಹೊರಡ್ತೀನಿ, ಕೃಷ್ಣೇಗೌಡರನ್ನ ಸ್ವಲ್ಪ ಕಾಣ್ಬೇಕು," ಎನ್ನುತ್ತ ಗೋವಿಂದ, ಗಜಾನನನನ್ನು ಎಬ್ಬಿಸಿ, ತಾನೂ ಎದ್ದ...

...ಸುತ್ತಾಟ ಮುಗಿದು ಗೋವಿಂದ ಮನೆಗೆ ಹಿಂತಿರುಗಿದ. ಅಲ್ಲಿ ಮಹಾಮೌನ ನೆಲೆಸಿತ್ತು. ಗಾಬರಿಗೊಳಿಸುವಂತಹ ನೀರವತೆ.

ಊಟ ಮುಗಿದು ಮಲಗಿಕೊಂಡಿದಾರೇನೋ–ಎಂದುಕೊಂಡ.

ಚಪ್ಪಲಿ ಕಳಚಿ ನೇರವಾಗಿ ಕೊಠಡಿಗೆ ಹೋದ.

ಅಲ್ಲಿ ಕಾಮಾಕ್ಷಿ ಮುದುಡಿ ಮೈಗೆ ರಗ್ ಹೊದೆದುಕೊಂಡು ಹಾಸಿಗೆಯ ಮೇಲೆ ಬಿದ್ದಿದ್ದಳು.

"ಕಾಮೂ, ಕಾಮೂ," ಎಂದು ಕರೆದ.

ಉತ್ತರ ಬರಲಿಲ್ಲವೆಂದು ಹತ್ತಿರ ಹೋಗಿ, ಮಂಡಿಯೂರಿ, "ಊಟವಾಯ್ತೇನೇ?" ಎನ್ನುತ್ತ ಮುಖದ ಮೇಲಿನ ಹೊದಿಕೆಯನ್ನು ಸರಿಸಿದ.

ಒಳಗೆ ಕಾಮಾಕ್ಷಿ ಬುಸುಗುಟ್ಟುತ್ತಿದ್ದಳು. ಮುಸುಕು ಸರಿದದ್ದೇ ತಡ, ಕೈ ಹೊರಹಾಕಿ ಗಂಡನನ್ನು ಆಕೆ ಬಲವಾಗಿ ತಳ್ಳಿದಳು. ಗೋವಿಂದ ಹಿಂದಕ್ಕೆ ಜೋಲಿ ಹೊಡೆದು ಕುಸಿಕುಳಿತ.

"ಈಗ ಬಂದಿರಾ ? ಈಗ ಬಂದಿರಾ ? ಬದುಕಿದೀನೋ ಸತ್ತಿದೀನೋ ಅಂತ ನೋಡೋಕೆ ಬಂದಿರಾ ? ಅಯ್ಯೋ ! ಅಯ್ಯೋ !"

"ಕಾಮೂ ! ಕಾಮೂ !"

"ಮಾತಾಡಿಸ್ಬೇಡಿ ನನ್ನ ! ಅವಳು ನನ್ನ ತುರುಬು ಹಿಡಿದು ಎಳೆದಳಲ್ರೀ!..."

"ಯಾರು ?"

"ಆ ಮುದುಕಿ ?"

"ಆ–"

ಗೋವಿಂದ ಅವಕ್ಕಾದ. ಭಾಗೀರಥಿಗೂ ಇವಳಿಗೂ ಜಗಳವಾಗಿರಬೇಕು ಎಂದುಕೊಂಡಿದ್ದ. ಆದರೆ ತನ್ನ ಹೆಂಡತಿ ಜರೆಯುತ್ತಿದ್ದುದು ದೊಡ್ಡಮ್ಮನನ್ನು !

ವಿಪರೀತಕ್ಕಿಟ್ಟುಕೊಂಡಿದೆ–ಎಂದು, ಮೆಲ್ಲನೆದ್ದು, ಟೋಪಿ ಜಾಕೀಟುಗಳನ್ನು ಬಿಚ್ಚಿ ಗೋವಿಂದ ಒಳಕ್ಕೆ ನಡೆದ. ಮನೆಯಲ್ಲೆಲ್ಲೂ ತಂದೆ ಕಾಣಿಸಲಿಲ್ಲ. ಎಡಗಡೆ ಗೋಪಾಲನ ಕೊಠಡಿಯ ಬಾಗಿಲು ತೆರದಿತ್ತು. ಅತ್ತ ಸರಿದ ಗೋವಿಂದನ ದೃಷ್ಟಿಗೆ, ನೆಲದ ಮೇಲೆ ಗೋಡೆಗೆ ಮುಖ ಮಾಡಿ ಬಿದ್ದಿದ್ದ ಭಾಗೀರಥಿ ಕಾಣಿಸಿದಳು.

ಅಡುಗೆ ಮನೆಯಲ್ಲಿ ದೊಡ್ಡಮ್ಮ ಇದ್ದರು. ತೆಂಗಿನ ಕರಟ ಕೈಯಲ್ಲಿ ಹಿಡಿದುಕೊಂಡು ಶ್ರೀಪಾದ ಅಲ್ಲಿ ಆಟವಾಡುತ್ತಿದ್ದ.

ಗೋವಿಂದ ಬಾಯಿ ತೆರೆಯುವುದಕ್ಕೆ ಮುಂಚೆಯೇ ದೊಡ್ಡಮ್ಮ ಕೇಳಿದರು:

"ನಿನ್ನ ಹೆಂಡತಿ ಎಲ್ಲಾ ಹೇಳಿದ್ಲೇನೋ ?"

"ಇಲ್ಲ, ದೊಡ್ಡಮ್ಮ."

"ಭಾಗೀರಥಿಗೆ ತಿಂಗಳ ರಜಾ. ಒಂದಿಷ್ಟು ಕೆಲಸ ಮಾಡೂಂತ ನಿನ್ನ ಹೆಂಡತೀನ ಕರೆದೆ. ಬಂದವಳು ಪಾತ್ರೆಗಳನ್ನು ಎತ್ತಿ ಎತ್ತಿ ಕುಕ್ಕೋಕೆ ಶುರು ಮಾಡಿದ್ಲು. ಹಾಗ್ಮಾಡ್ಬಾರ್ದಮ್ಮ ಅಂದೆ. ಶ್ರೀಪಾದ ಹತ್ತಿರಕ್ಕೆ ಬಂದ ಅಂತ ಅವನಿಗೆರಡು ಗುದ್ದಿದ್ಲಪ್ಪಾ. ನಾನು ಎದ್ದು ಅವಳ ಜಡೆ ಹಿಡಿದು ಎಳೆದು ನಿಲ್ಲಿಸ್ಬೇಕಾಯ್ತು. ಹೋಗಿ ಬಿದ್ಕೊಂಡಿದಾಳೆ."

ಗೋವಿಂದ ನಿಟ್ಟುಸಿರು ಬಿಟ್ಟ.

"ಅಣ್ಣಯ್ಯ ಮನೇಲಿದ್ರೆ ?"

"ಇದ್ದ. ನಿನ್ನ ಹೆಂಡತಿಗೆ ನಾವು ಬುದ್ಧಿ ಹೇಳೋಕಾಗುತ್ತೇನಪ್ಪ ? ಅವನಾದರೂ ಎಷ್ಟೂಂತ ಸಹಿಸ್ಕೋತಾನೆ ? ಗಂಗಾಧರಶಾಸ್ತ್ರಿ ಮನೆಕಡೆ ಹೋದಾಂತ ಕಾಣುತ್ತೆ, ಬೇಜಾರು ಪಟ್ಕೊಂಡು. ನೀನು ಸ್ನಾನ ಮಾಡು. ಹೇಗಾದರೂ ಈ ಅಡುಗೆ ಒಂದು ಮುಗಿಸಿಬಿಡ್ತೀನಿ."

"ಆಗಲಿ, ದೊಡ್ಡಮ್ಮ."

ಗೋವಿಂದ ಕೊಠಡಿಗೆ ಮರಳಿ, ಕದ ಮುಚ್ಚಿ ಅಗಣಿ ಹಾಕಿ, ಕಾಮಾಕ್ಷಿಯ ಬಳಿಸಾರಿದ, ಮುಗುಳ್ನಗುತ್ತ. ಆಕೆಯ ಪಿಳಿಪಿಳಿ ಕಣ್ಣುಗಳು ಆತನನ್ನೇ ನೋಡಿದುವು.

"ಇನ್ಮುಂದೆ ಹೀಗ್ಮಾಡ್ಬೇಡ ಅಂತ ಆ ಅಜ್ಜಿಗೆ ಹೇಳಿದೀನಿ," ಎಂದ, ಸರಕ್ಕನೆ ರಗ್ಗನ್ನೆಳೆದು. ಅವಳು ಉಟ್ಟಿದ್ದ ಸೀರೆ ಅಸ್ತವ್ಯಸ್ತವಾಗಿತ್ತು. ತಲೆಗೂದಲು ಕೆದರಿತ್ತು. ಎದೆ ಏರಿಳಿಯುತ್ತಿತ್ತು. ಗೋವಿಂದ ಬಾಗಿ, ಅವಳ ಬೆನ್ನಿನತ್ತ ತನ್ನ ಕೈಗಳನ್ನು ತುರುಕಿ ಬಾಯಿಗೆ ಬಲವಾಗಿ ಮುತ್ತಿಟ್ಟ. ಆಕೆ ಚಡಪಡಿಸಿದಳು. ಅವಳ ಉಗುರುಗಳು ಅವನ ಜುಬ್ಬವನ್ನು ಸೀಳಿ ಬೆನ್ನನ್ನು ಕೆರೆದುವು. ಆಕೆಯ ಗಂಡ ಬಿಟ್ಟುಕೊಡಲಿಲ್ಲ...

...ಗೋವಿಂದ ಸ್ನಾನ ಮಾಡುತ್ತಿದ್ದಾಗ, ಹೊಲದಿಂದ ಗೋಪಾಲ ಬಂದ. ಇನ್ನು ಮೂರು ದಿನ ಅವನ ಶಯನ ಪಡಸಾಲೆಯಲ್ಲಿ. ಶ್ರೀಪಾದ ಬರಿಮೈಯಲ್ಲಿ ಓಡಾಡಬೇಕು.

ಬೆಳಗ್ಗೆ ಏನಾಯಿತೆಂದು ಗಂಡನಿಗೆ ತಿಳಿಸಬೇಕೆಂದು ಭಾಗೀರಥಿ ಆತನಿಗೆ ಕೈಸನ್ನೆ ಮಾಡಿ ಕರೆದಳು, ಕೊಠಡಿಯ ಬಾಗಿಲ ಬಳಿಗೆ ಬರಲು. ಅದು ಕಂಡೂ ಕಾಣಿಸದವನಂತೆ ಗೋಪಾಲ ಜಗಲಿಗೆ ಹೋಗಿ, ಮೆಟ್ಟಿಲ ಮೇಲೆ ಕುಳಿತ...

... ಶ್ರೀನಿವಾಸಯ್ಯ ಗಂಗಾಧರಶಾಸ್ತ್ರಿಗಳ ಮನೆಗೆ ಹೋದವರು ಅಲ್ಲಿ ತಮ್ಮ ಅಳಲನ್ನು ತೋಡಿಕೊಂಡರು.

"ಹೀಗಾಯ್ತಲ್ಲ, ಶಾಸ್ತ್ರಿಗಳೇ..."

ಜಾತಕಗಳ ಮಾತನ್ನಾಡಿ ಶ್ರೀನಿವಾಸಯ್ಯನವರ ಮನಸ್ಸನ್ನು ನೋಯಿಸಲು ಗಂಗಾಧರ ಶಾಸ್ತ್ರಿಗಳು ಇಷ್ಟಪಡಲಿಲ್ಲ.

"ದೊಡ್ಡ ಸಂಸಾರ ಅಂದ್ಮೇಲೆ ಇಂಥದೆಲ್ಲ ಇದ್ದೇ ಇರುತ್ತಲ್ಲ, ಶ್ರೀನಿವಾಸಯ್ಯ. ಅದಕ್ಕೇ ನಾನು ಹೇಳೋದು ವಯಸ್ಸಾದ ಹಾಗೆ ಈ ಐಹಿಕ ಯೋಚನೆಗಳನ್ನ ಕಡಮೆ ಮಾಡ್ಬೇಕೂಂತ."

"ಅಂದರ, ಕಾಡಿಗೆ ಹೋಗ್ಲೇ ಶಾಸ್ತ್ರಿಗಳೇ ?"

"ಮನುಷ್ಯ ಹೋಗೊಲ್ಲ, ಮನಸ್ಸು ಹೋಗುತ್ತೆ."

"ಇನ್ನೆಷ್ಟು ಕಾಲ ಇದನ್ನ ಸಹಿಸ್ಕೊಂಡೇನು ಹೇಳಿ ?"

"ಸಮಯ ಇದ್ದ ಹಾಗೆಯೇ ಇರುತ್ಯೆ, ಶ್ರೀನಿವಾಸಯ್ಯ, ಕ್ರಮೇಣ ಎಲ್ಲಾ ಸರಿಹೋಗುತ್ತೆ."

"ಏನು ಸರಿಹೋಗುತ್ತೋ ನಾನು ಬೇರೆ ಕಾಣೆ."

"ಭಗವಂತನ ಮೇಲೆ ಭಾರ ಹಾಕ್ಬಿಡಿ."

"ಅದೊಂದೇ ನನ್ನ ಪಾಲಿಗೆ ಈಗ ಉಳಿದಿರೋದು."

ಅಲ್ಲಿಂದ ಎದ್ದು ಶ್ರೀನಿವಾಸಯ್ಯ ನದೀ ತಟಕ್ಕೆ ಹೋದರು. ಹೊಲಗಳಲ್ಲಿ ತುಂಟಾಟಗಳನ್ನಾಡುತ್ತಿದ್ದ ಭತ್ತದ ಎಳೆಯ ಸಸಿಗಳು ಅವರ ಮನಸ್ಸನ್ನು ತಣಿಸಿದುವು. ಹಾಗೆಯೇ ಗೊತ್ತು ಗುರಿಯಿಲ್ಲದೆ ಬಹಳ ಹೊತ್ತು ನಡೆದು, ಮೋಡ ಕವಿದ ಆಕಾಶದಲ್ಲಿ ಸೂರ್ಯ ಪಶ್ಚಿಮಾಭಿಮುಖನಾಗಿ ಮೂರು ನಾಲ್ಕು ಘಳಿಗೆಗಳಾದ ಮೇಲೆ ಮನೆಯತ್ತ ತಿರುಗಿದರು.

ಚಿಕ್ಕವರೆಲ್ಲರ ಊಟವಾಗಿತ್ತು.

"ನೀನೂ ಉಣ್ಣಬೇಕಾಗಿತ್ತು," ಎಂದರು ಶ್ರೀನಿವಾಸಯ್ಯ ತಾಯಿಗೆ,

ಸ್ವಲ್ಪವೇ ಸಮಯದಲ್ಲಿ ಹೆತ್ತವಳು ಇಷ್ಟೊಂದು ಮುದುಕಿಯಾದಳಲ್ಲ—ಎನ್ನಿಸಿತು ಅವರಿಗೆ.

ದೊಡ್ಡಮ್ಮ ಅಂದರು :

"ಊಟಕ್ಬಾ, ಶೀನ."

## ೨೯

ಮನೆಯ ಮುಂದೆ ವಿಶಾಲ ಚಪ್ಪರ; ತಳಿರು ತೋರಣ. ಮುನಿಸ್ವಾಮಿಯ ವಾಲಗದ ಜತೆಗೆ ನಗರದಿಂದ ತರಿಸಿದ ಬ್ಯಾಂಡು. ಆ ಜನರ ಬಿಳಿ–ಕೆಂಪು–ಹಸಿರು ದಿರಸು ಹಳ್ಳಿಯವರ ಕಣ್ಣಿಗೆ ಹಬ್ಬ.

ಅಬ್ದುಲ್ಲನಂತೂ ನಿಶ್ಚಿತ ಕಾಲಕ್ಕಿಂತ ಮುಂಚೆಯೇ ರಸ್ತೆಯ ಕೆಲಸ ಮುಗಿಸಿದ್ದ. ಕಣಿವೇಹಳ್ಳಿಯಿಂದ ಹಿಡಿದು ಕಾಲುದಾರಿಯವರೆಗೆ ಒಂದೊಂದು ಫರ್ಲಾಂಗಿನುದ್ದಕ್ಕೂ ಕಮಾನುಗಳನ್ನು ರಚಿಸಿದ್ದರು.

ಗೌಡರ ಮಗಳ ಮದುವೆ—

ಗೌಡರ ಮಗಳ ಮದುವೆ—

ಎಲ್ಲ ರೈತರ ಮನೆಗಳಲ್ಲೂ ಸಡಗರ.

ಸಿದ್ಧತೆಯನ್ನು ಕಂಡು ಶಾಮೇಗೌಡರು ಸಂತೃಪ್ತರು.

ಆ ದಿನ ಸೂರ್ಯ ನಕ್ಕಿದ್ದ. ಹೀಗೆಯೇ ಮೂರು ದಿವಸ ಮಳೆ ಸುರಿಯದೆ ಬಿಸಿಲಿದ್ದರೆ ವಿಶೇಷ ಪೂಜೆ ನಡೆಸುವೆನೆಂದು ಗುಡಿಯ ಈಶ್ವರ ದೇವರಿಗೆ ಗೌಡರು ಹರಕೆ ಹೊತ್ತರು.

ರಂಗಣ್ಣ ಒಂದು ವಾರದ ಮಟ್ಟಿಗೆ ಟ್ಯಾಕ್ಸಿಯೊಂದನ್ನು ಬಾಡಿಗೆಗೆ ಹಿಡಿದಿದ್ದ.

ಭಾವನಾಗಲಿದ್ದ ಶಿವಪ್ಪನೊಡನೆ ಅವನು ಕಣಿವೇಹಳ್ಳಿಗೆ ದಾರಿ ಕವಲೊಡೆಯುವವರೆಗೂ ಆ ವಾಹನದಲ್ಲಿ ಬಂದ. ಅದರಲ್ಲಿ ಶೀನಪ್ಪನ ಸಹಪಾಠಿಗಳು ಮೂವರಿದ್ದರು.

"ನಿಮ್ಮ ಹೊಸ ದಾರಿ ನೋಡ್ದಂಗಾಯ್ತು. ಹಳ್ಳೀವರೆಗೂ ಬಂದ್ಬುಡ್ತೀವಿ," ಎಂದ ಶಿವಪ್ಪ.

"ಬ್ಯಾಡಿ ! ನಾಳೆ ಸಂಜೆ ನೀವು ಬಂದಾಗ್ಲೇ ಈ ರಸ್ತೆಯ ಉದ್ಘಾಟನೆ. ಅಪ್ಪ ಹೇಳ್ಬಟ್ಟಿದಾರೆ. ಓಗ್ಬನ್ನಿ," ಎಂದು ರಂಗಣ್ಣ ಖಚಿತವಾಗಿ ನುಡಿದ.

ಆಲದ ಮರದ ಸುತ್ತಲೂ ಚಿಕ್ಕ ಚಪ್ಪರ ಕಟ್ಟುವ ಕೆಲಸ ಆಗಿನ್ನೂ ನಡೆದಿದ್ದುದರಿಂದ, ಸಾಮಾನುಗಳನ್ನು ಹಳ್ಳಿಗೆ ಹೊರಿಸಲು ರಂಗಣ್ಣನಿಗೆ ಯಾವ ತೊಂದರೆಯೂ ಆಗಲಿಲ್ಲ.

ಮಗ ಒಂದು ದಿನವಾದರೂ ಮುಂಚಿತವಾಗಿ ಬಂದನಲ್ಲ—ಎಂದು ಗೌಡರು ಸಮಾಧಾನ ಪಟ್ಟರು.

ಸುಭದ್ರೆಯ ಮುಖದ ಮೇಲೆ ಒಂದು ಬಗೆಯ ಮಂದಹಾಸವನ್ನು ಇತ್ತೀಚೆಗೆ ಯಾರೋ ಕೊರೆದಂತಿತ್ತು. ಕುಳಿತರೆ ಕುಳಿತಲ್ಲಿಯೇ, ನಿಂತರೆ ನಿಂತುಕೊಂಡೇ, ಆಕೆ ಹೊತ್ತು ಕಳೆಯುತ್ತಿದ್ದಳು. ಮುಗುಳುನಗೆ ಮಾತ್ರ ತಾನು ಕಂಡುದನ್ನೆಲ್ಲ ಮೆಲ್ಲನೆ ಮುಟ್ಟುತ್ತಿತ್ತು.

ರಂಗಣ್ಣನೆಂದ :

"ಒಸ ಸೀರೆ ನೋಡ್ದ ?"

ಅವಳ ಉತ್ತರ :

"ಊಂ."

"ನಾನೇ ಕೊಂಡ್ಕೊಟ್ಟೆ. ಚೆಂದಾಕೈತಾ ?"

"ಊಂ."

"ಸರ, ಬೆಂಡೋಲೆ ಎಲ್ಲ ಒಸ ಫ್ಯಾಶನ್ನು."

"ಊಂ."

ತಂಗಿ ಮೂಕಿಯಾಗಿಲ್ಲ ಎನ್ನುವಷ್ಟರಿಂದಲೇ ರಂಗಣ್ಣ ಸಂತುಷ್ಟನಾಗಬೇಕಾಯಿತು.

ನಾಗಮ್ಮ ಸೋದರ ಸೊಸೆಯನ್ನು ಕರೆದರು :

"ಗಂಡನ ಮನೆಗೆ ಓಗ್ಬೇಕಲ್ಲಾಂತ ಎದರ್ಕೇನಾ ಸುಬ್ಬಿ ?"

ಮುಗುಳುನಗುತ್ತಲೇ ಸುಭದ್ರೆ ಉತ್ತರವಿತ್ತಳು :

"ಇಲ್ಲ, ಅತ್ತೆಮ್ಮ. ಯಾಕೆ ಎದರ್ಕೆ ?"

ನಾಗಮ್ಮನ ಕಣ್ಣುಗಳಿಂದ ಆನಂದಾಶ್ರು ಒಸರಿತು. ಆಕೆ ಸುಭದ್ರೆಯ ಮೈದಡವಿದರು.

ಹೊಸಳ್ಳಿಯಿಂದ ದಿಬ್ಬಣ ಹೊರಟು ಟಾರು ರಸ್ತೆಯನ್ನು ತಲಪಿ ನಗರದ ದಾರಿ ಹಿಡಿದು. ಆಲದ ಮರದ ಬಳಿ ಹೊಸಹಾದಿಗೆ ಹೊರಳಿ, ಕಣಿವೇಹಳ್ಳಿಯನ್ನು ಸೇರಬೇಕು. ಎತ್ತಿನ ಬಂಡಿಗಳು ಬೇಗನೆ ಹಳ್ಳಿ ಬಿಟ್ಟರೂ ಗಾಡಿಗಳೊಂದಿಗೇ ಬಂದು ಮುಟ್ಟುವ ಟ್ಯಾಕ್ಸಿ.

ಆ ವಾಹನವನ್ನು ಅಲಂಕರಿಸಲು ಹೂವಿನ ದೊಡ್ಡ ಬುಟ್ಟಿಯನ್ನು ನಗರದಲ್ಲೇ ಕೊಂಡಿದ್ದ ಶಿವಪ್ಪ.

ರಂಗಣ್ಣ ಬಂದು ಸೇರಿದ ಸಂಜೆಯೇ ಹದಿನೈದು ಗ್ಯಾಸ್ ದೀಪಗಳ ಆಗಮನವೂ ಆಯಿತು.

ಪೌರೋಹಿತ್ಯ ಗಂಗಾಧರಶಾಸ್ತ್ರಿಗಳದೇ.

"ಏನೇನು ಶಾಸ್ತ್ರ ಆಗ್ಬೇಕೋ ಅದನ್ನೆಲ್ಲಾ ಮಾಡುಸ್ಬುಡಿ," ಎಂದಿದ್ದರು ಗೌಡರು ಅವರಿಗೆ.

ದಿಬ್ಬಣ ಬರುವ ದಿನ ಬೆಳಗ್ಗೆ ಗೌಡರು ಮಗನನ್ನು ಕೇಳಿದರು :

" ಚಂಜೇನಾಗೆ ಬರಬೈದು ಅಲ್ಲವಾ ?"

" ಹ್ಞ. ಆರೇಳು ಘಂಟೆ ಆದಾತು," ಎಂದ ರಂಗಣ್ಣ.

ಸಿಹಿ ಅಡುಗೆಯ ಹೊಣೆಯನ್ನು ಹೊತ್ತಿದ್ದ ಗಜಾನನ, ಆಗಲೇ ಕಾರ್ಯನಿರತನಾಗಿದ್ದ. ಗೌಡರ ಮನೆಯಲ್ಲಿ ಮದುವೆ ಇರುತ್ತ ಹೋಟೆಲಿಗೆ ಬರುವವರು ಯಾರು ?

" ಇಷ್ಟರ ಮೇಲೂ ಯಾರಾದರೂ ಬಂದ್ರೆ ಒಂದು ಲೋಟ ಕಾಫಿ ಮಾಡಿ ಕೊಟ್ಬಿಡು," ಎಂದಿದ್ದ ಆತ ಜಲಜೆಗೆ.

ಅವಳೋ, ಕಾಮಾಕ್ಷಿಯಿಂದೇನಾದರೂ ಸಂದೇಶ ಬಂದೀತೇ ಎಂಬ ನಿರೀಕ್ಷೆಯಲ್ಲಿದ್ದಳು. ಗೋವಿಂದರಾವ್ ಹಳ್ಳಿಯಲ್ಲಿರಲಿಲ್ಲ. ನಗರಕ್ಕೆ ಹೋಗಿ ಎರಡು ದಿನಗಳಾಗಿದ್ದುವು. ಈ ಸಲ ಗಂಡ ಟ್ಯಾಕ್ಸಿ ತರುತ್ತಾನೆ; ತಾನು ನಗರಕ್ಕೆ ಹೋಗುತ್ತೇನೆ—ಎಂದಿದ್ದಳು ಕಾಮಾಕ್ಷಿ. ಸಾಧ್ಯವಾದರೆ ತಾನೂ ಅವಳ ಜತೆ ಹೊರಟು ಬಿಡಬೇಕು ಎಂಬ ಆಸೆ ಜಲಜೆಗೆ. ಹೊರಗೆ ಯಾರ ಪಾದದ ಸದ್ದಾದರೂ ಸರಿಯೆ. ಕಾಮಾಕ್ಷಿಯ ಮನೆ ಆಳು ಬೀರ ಬಂದನೇನೋ ಎಂದು ಆಕೆ ಕತ್ತು ಚಾಚಿ ನೋಡುತ್ತಿದ್ದಳು.

'ಚಂಜೆಗೆ ಬರಬೈದು,' ನಿಜ. 'ಆರೇಳು ಘಂಟೆಗೆ'; ನಿಜವೇ. ಆದರೂ, ಮಧ್ಯಾಹ್ನ ಕಳೆದೊಡನೆಯೇ ಗೌಡರು ಆಳುಗಳನ್ನು ದಿಬ್ಬಣ ಇದಿರ್ಗೊಳ್ಳಲೆಂದು ಅಟ್ಟಿದರು.

ಮೂರು ಘಂಟೆ ಸುಮಾರಿಗೆ ದೊಡ್ಡ ಕಾರೊಂದು ನಗರದ ಕಡೆಯಿಂದ ಬಂದು ಟಾರ್ ರಸ್ತೆಯಲ್ಲಿ ನಿಂತಿತು. ಆಲದ ಮರದ ಕೆಳಗೆ ರೈತರಿದ್ದರು. ಬಲದಿಕ್ಕಿನಲ್ಲಿ ಕಮಾನು. ಅದರ ಕೆಳಗಿಂದ ಹಳ್ಳಿಯ ಕಡೆಗೆ ಹರಿದಿತ್ತು ಹೊಸ ದಾರಿ.

ದಿಬ್ಬಣದ ಕಾರೇ ಬಂದು ಬಿಟ್ಟಿತೇನೋ ಎಂದು ಶಂಕಿಸಿದ ರೈತರು, ಮಾತನಾಡಲು ಪ್ರಯತ್ನಿಸುತ್ತಿದ್ದಂತೆ, ಚಾಲಕನ ಮಗ್ಗುಲಲ್ಲಿ ಕುಳಿತಿದ್ದ ಗೋವಿಂದನನ್ನು ಕಂಡರು. ಹಲವರ ಮುಖಗಳರಳಿ ಹಲ್ಲುಗಳು ಕಾಣಿಸಿಕೊಂಡುವು.

" ಗೋವಿಂದಪ್ನೋರು."

ಗೋವಿಂದ ಹಿಂದಿನ ಸೀಟಿನಲ್ಲಿದ್ದವರ ಕಡೆಗೆ ಹೊರಳಿ, " ಬಲಕ್ಕೆ ತಿರುಗಿದರೆ ಕಣಿವೇ ಹಳ್ಳಿ. ಇವರೆಲ್ಲಾ ನಮ್ಮ ರೈತರು," ಎಂದ.

ವಾಹನದ ತೀರಾ ಸಮೀಪಕ್ಕೆ ಬಂದವರನ್ನು ಉದ್ದೇಶಿಸಿ, " ಮುಟ್ಬೇಡ್ರೋ—ದೂರ ನಿಂತ್ಕೊಳ್ಳಿ," ಎಂದು ಹುಬ್ಬು ಹಾರಿಸಿ ನುಡಿದ.

ಹಿಂದೆ ಕುಳಿತಿದ್ದವರು ಮಧ್ಯ ವಯಸ್ಕರು. ಮುಚ್ಚಿದ ಕಾಲರಿನ ಕೋಟುಗಳು. ನೂಲಿನ ಎಳೆಯ ಚಿತ್ತಾರಗಳಿದ್ದ ಟೋಪಿಗಳು. ಒಬ್ಬಾತ ಬಂಗಾರದ ಚೌಕಟ್ಟಿನ ಕನ್ನಡಕ ಧರಿಸಿದ್ದ.

ಆತ ಹಿಂದಿಯಲ್ಲಿ ಡ್ರೈವರನಿಗೆ, " ರಸ್ತೆ ಹ್ಯಾಗಿದೆ ನೋಡು," ಎಂದು ಆಜ್ಞಾಪಿಸಿದ.

" ಪರವಾಗಿಲ್ಲ ಅನ್ಸುತ್ತೆ," ಎಂದು ಡ್ರೈವರ್ ಉತ್ತರವಿತ್ತ.

" ಹೋಗೋಣ ಹಾಗಾದರೆ."

ಕಪ್ಪು ಕಾರು—ಪ್ಲಿಮತ್—ಸದ್ದಿಲ್ಲದೆ ಹೊರಟು ಕಣಿವೇಹಳ್ಳಿಯ ದಾರಿ ಹಿಡಿಯಿತು.

ಕಾಂಕ್ರೀಟ್ ರಸ್ತೆಯ ಮೇಲೆ ಓಡಿ ಅಭ್ಯಾಸವಿದ್ದ ಕಾರು, ಕಚ್ಚಾ ದಾರಿಯ ಹಳ್ಳತಿಟ್ಟುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಸ್ವಲ್ಪ ಎಚ್ಚರದಿಂದ ಮುಂದುವರಿಯಿತು.

ಗೋವಿಂದನೆಂದ :

"ಈ ರಸ್ತೆ ನನ್ನ ಐಡಿಯಾ."

ಆ ಇಬ್ಬರಲ್ಲಿ ಒಬ್ಬರಿಗಷ್ಟೇ ಕನ್ನಡ ಬರುತ್ತಿತ್ತು. ಕಲಿತ ಕನ್ನಡ. ಇನ್ನೊಬ್ಬರು ದಕ್ಷಿಣಕ್ಕೆ ಹೊಸಬರು. ಅವರು ಇವರಿಗೆ ಆಗಾಗ್ಗೆ ಗೋವಿಂದನ ಮಾತುಗಳನ್ನು ಹಿಂದಿಯಲ್ಲಿ ಹೇಳಬೇಕಾಗುತ್ತಿತ್ತು.

ನಗರದಲ್ಲಿ ಆ ಇಬ್ಬರೊಡನೆ ಹೊರಟ ಘಳಿಗೆಯಿಂದ ಗೋವಿಂದ ಚಡಪಡಿಸಿದ್ದ. ಅವನಿಗೆ ಗೊತ್ತಿದ್ದುದು ಹರಕು ಮುರಕು ಜಟಕಾ ಹಿಂದಿ. ಇಂಗ್ಲಿಷೋ 'ಇದ್ದದ್ದೂ ಅಧ್ವಾನ.' ಹೇಳುವ ವಿಚಾರವಿದ್ದರೆ ಭಾಷೆ ಹೇಗಿದ್ದರೇನು ?—ಎಂದು ತನ್ನನ್ನು ತಾನೇ ಆತ ಸಂತೈಸಿದನಾದರೂ, 'ಛೆ ! ಎಂಥ ಅನ್ಯಾಯ!' ಎನಿಸುತ್ತಿತ್ತು ಪದೇ ಪದೇ.

"ದಾರಿ ಉದ್ದಕ್ಕೂ ಕಮಾನುಗಳು !" ಎಂದರು, ಕನ್ನಡ ಬರುತ್ತಿದ್ದ ಒಬ್ಬರು.

ಗೋವಿಂದನೆಂದ :

"ಹೆಹ್ಹೆ ! ನಿಮ್ಮ ಸ್ವಾಗತಕ್ಕೇ ಕಟ್ಟಿದೀವಿ ಅಂತ ಇಟ್ಕೊಳ್ಳಿ !"

"ಇವತ್ತೋ ನಾಳೆಯೋ ಗೌಡರ ಮಗಳ ಮದುವೆ ಅಂದ್ರಲ್ರೀ..."

"ಇದೆ. ಹೌದು. ಆದರೆ ಈ ಕಮಾನುಗಳು ನಮ್ಮ ಸ್ವಾಗತಕ್ಕೆ ಅಂತ ಅಂದ್ಕೊಳ್ಳೋದರಲ್ಲಿ ಏನು ತಪ್ಪು ?"

ಟಾರು ರಸ್ತೆಯ ಕಡೆಗೆ ಹಳ್ಳಿಯಿಂದ ಬರುತ್ತಲಿದ್ದ ರೈತರು ಅಲ್ಲಲ್ಲಿ ಸಿಕ್ಕಿದರು. ಗೌಡರ ಅಳಿಯ ದಯೆಮಾಡಿಸುತ್ತಿದ್ದಾರೆ ಎಂದೇ ಅವರ ಕಲ್ಪನೆ. ತಮ್ಮ ಹಳ್ಳಿಗೆ ಕಾರು ಬರುತ್ತಿದೆ ಎಂದು ಹರ್ಷೋದ್ಗಾರ. ಗೋವಿಂದನ ಗುರುತು ಹತ್ತಿದಾಗಲಷ್ಟೇ, 'ಇದು ಬೇರೆ ಕಾರು' ಎಂಬ ನಿರಾಸೆ. ಮತ್ತೆ, ದೊಡ್ಡ ಮನುಷ್ಯರು ಯಾರೊ? ಎಂಬ ಕುತೂಹಲ.

ಹಳ್ಳಿಯ ದಿಬ್ಬ ಹತ್ತಿರವಾದಾಗ, "ನಿಲ್ಸು," ಎಂದರು ಕನ್ನಡ ಬರದವರು ಡ್ರೈವರನಿಗೆ, ಹಿಂದಿಯಲ್ಲಿ.

"ನಮ್ಮ ಮನೆಗೆ ಮೊದಲು ಹೋಗೋಣ, ಆಗದೆ ?" ಎಂದು ಗೋವಿಂದ ಅವರನ್ನ ಕೇಳಿದ, ಯಾಚಕನಾಗಿ.

ಇನ್ನೊಬ್ಬರೆಂದರು :

"ಇಷ್ಟು ದೂರ ಬಂದು ನಿಮ್ಮ ಮನೆ ನೋಡದೆ ಹೋಗುತ್ತೇವೆಯೆ ಗೋವಿಂದರಾವ್ ? ಸ್ವಲ್ಪ ಇಳೀರಿ ಈಗ."

ಹಿಂದಿಯವರು ಇಳಿದು, ದಿಬ್ಬವನ್ನೇರತೊಡಗಿದರು. ಅವರ ಬಂಧು ಹಿಂಬಾಲಿಸಿದರು.

"ಅಲ್ಲಿ ಕಲ್ಲಿದೆ, ಮುಳ್ಳಿದೆ. ಈ ಕಡೆ ಬನ್ನಿ, ಹೀಗೆ," ಎಂದು ಗೋವಿಂದ ಮಾರ್ಗದರ್ಶಿಯಾದ.

ಸಾಕಷ್ಟು ಎತ್ತರಕ್ಕೆ ಬಂದ ಮೇಲೆ ಅವರು ನಿಂತು, ಹಳ್ಳಿಯ ವಿಸ್ತಾರವನ್ನು ದಿಟ್ಟಿಸಿದರು. ನದಿಯನ್ನು ನೋಡಿದರು. ಬೇಸಗೆಯಲ್ಲಿ ಬತ್ತುವುದಿಲ್ಲವೆ ? ಇದರ ಉಗಮ ಎಲ್ಲಿ ? ನದಿಯ ಆಚೆ ಯಾವ ಯಾವ ಹಳ್ಳಿಗಳಿವೆ ? ಮಗ್ಗುಲಿನ ಗ್ರಾಮ ಯಾವುದು ? ಇತ್ಯಾದಿ ಇತ್ಯಾದಿ ಅನೇಕ ಪ್ರಶ್ನೆಗಳನ್ನು ಕೇಳಿದರು.

ಉತ್ತರಗಳನ್ನು ಕೊಟ್ಟು ಗೋವಿಂದನೆಂದ :

"ಈ ಊರಿನ ದೊಡ್ಡ ಜಮೀನ್ದಾರ್ರು ಅಂದ್ರೆ ನಾವೇ. ನಮ್ಮದಾದ್ಮೇಲೆ ಪಟೇಲ

ಗೌಡರು. ನೋಡಿ, ಓ ಅಲ್ಲಿಂದ ಹಿಡಿದು ನದೀ ದಂಡೆಯವರೆಗೆ ಇರೋ ಭೂಮಿಯೆಲ್ಲ ನಮ್ಮದು. ಈ ಮಣ್ಣೆಲ್ಲ ಬಂಗಾರ. ಗೊಬ್ಬರ ಬೇಡ, ಏನೂ ಬೇಡ. ನದಿಯ ಹೆಸರೇ ಹಾಲು ಹೊಳೆ. ನಿಜವಾಗಿ ಹಾಲೇ. ಅದನ್ನ ಕುಡಿದರೆ ಇನ್ನೇನೂ ಬೇಕಾಗೋದಿಲ್ಲ."

ಗೋವಿಂದನ ಮಾತುಗಳಿಗೆ ಅವರು ಕಿವಿಗೊಡುತ್ತಿದ್ದಂತೆ ಕಂಡರೂ, ಮೌನವಾಗಿ ಅವರೇ ನನ್ನೋ ಯೋಚಿಸುತ್ತಿದ್ದರು.

ಕನ್ನಡ ತಿಳಿದವರೆಂದರು :

"ಮಿಸ್ಟರ್ ಗೋವಿಂದರಾವ್, ನೀವು ಸ್ವಲ್ಪ ಕಾರಿನ ಹತ್ರ ಇರಿ. ನಾವು ಐದು ನಿಮಿಷ ದಲ್ಲಿ ಬರ್‍ತೀವಿ."

ಗೋವಿಂದ ಪೆಚ್ಚಾದ.

"ಆಗಲಿ, ಸರ್. ಆದರೆ ನಿಮಗೆ ದಿಬ್ಬದ ದಾರಿ ತಿಳೀದಲ್ಲ."

"ಇಲ್ಲೇ ಇರ್‍ತೀವಿ, ಕಣ್ರೀ. ಸ್ವಲ್ಪ ಹೀಗೇ ನಿಂತಿದ್ದು ಕೆಳಗೆ ಬರ್‍ತೀವಿ."

"ಹೆ ಹ್ಹೆ ! ಸಂತೋಷ, ಸಂತೋಷ."

ಅವರನ್ನು ಬಿಟ್ಟು ಗೋವಿಂದ ಕಾರಿನ ಬಳಿಗೆ ನಡೆದ.

ಅಲ್ಲಿ ಡ್ರೈವರನನ್ನು ಆತ ಕೇಳಿದ:

"ಸೇಠ್ ಸಾಹೇಬರ ಹತ್ರ ಎಷ್ಟು ವರ್ಷದಿಂದ ಇದೀಯಪ್ಪ ನೀನು ?"

ಡ್ರೈವರ್ ಉತ್ತರಿಸಿದ :

"ಅವರು ನಗರದಲ್ಲಿ ಬಿಸಿನೆಸ್ ಶುರು ಮಾಡಿದಾಗ್ಲಿಂದ ಇದೀನಿ, ಸೋಮಿ. ಹನ್ನೆರಡನೇ ವರ್ಷ ಇದು."

"ತುಂಬಾ ಶ್ರೀಮಂತರು, ಅಲ್ವೆ ?"

"ಓಹೋ."

"ಆ ಇನ್ನೊಬ್ಬರು ಬೊಂಬಾಯಿನಿಂದ ಯಾವಾಗ್ಬಂದ್ರು ?"

"ಮೂರು ವಾರ ಆಯ್ತು."

"ಮೂರು ವಾರ ಆಯ್ತೆ ? ಇನ್ನೂ ತೀರ್ಮಾನ ಮಾಡಿಲ್ಲ ಅಂದ್ರೆ ಆಶ್ಚರ್ಯವೇ! ಬಹಳ ಜಾಗ ಸುತ್ತಿದ್ರೊ ?"

"ಒಂದು ಆರೇಳು ಹಳ್ಳಿ ನೋಡಿದ್ದಾಯ್ತು. ಬೇರೆ ಬೇರೆ ತಾಲ್ಲೋಕುಗಳಲ್ಲಿ."

"ಯಾವುದೂ ಸರಿಹೋಗ್ಲಿಲ್ವಂತೊ ?"

"ಯಾರಿಗೆ ಗೊತ್ತು ? ಅದೆಲ್ಲ ಅವರ ಅಂತರಂಗದ ವಿಷಯ. ಬಹಳ ರಹಸ್ಯ."

"ಬೊಂಬಾಯಿ ಸೇಠು ಶ್ರೀಮಂತನೊ ?"

"ಕೇಳ್ತೀರಾ ! ಹಿಂದೂಸ್ಥಾನದಲ್ಲಿ ಹತ್ತಿಪ್ಪತ್ತು ಕಡೆ ಅವರ ಭಾರೀ ಭಾರೀ ಫ್ಯಾಕ್ಟರಿ ಗಳಿವೆ. ಕೋಟ್ಯಧೀಶರು. ಕಿಷ್ಕಿಂಧೇದು ಬಿಡಿ, ಇಂಥ ನಾಲ್ಕಾರು ಸರಕಾರಗಳನ್ನ ಕೊಳ್ಳೋ ತಾಕತ್ತು ಅವರಿಗಿದೆ."

"ಎಷ್ಟು ಜನ ಮಕ್ಳು ?"

"ಯಾರಿಗೆ, ನನಗೇ?"

"ಅಲ್ಲ, ಅವರಿಗೆ."

" ಮಕ್ಕಳಿಲ್ವಂತೆ."

" ಭಗವಂತ ! ನನ್ನನ್ನ ದತ್ತಕ್ಕೆ ತಗೊಳ್ಳೋ ಬುದ್ಧಿಯಾದ್ರೂ ಅವರಿಗೆ ಬರಬಾರ್ದೆ ಅಂತೀನಿ ! ಸದ್ಯಃ ಹೀಗೆ ಹೇಳ್ದೇಂತ ಅವರ ಕಿವಿಗೆ ಹಾಕಿಯೇ ಎಲ್ಲಾದ್ರೂ."

" ಛಿಛಿ ! ದತ್ತಾದ್ವೇನ್ಮಾಡ್ತಾರೋ. ನಿಮ್ಮ ಅದೃಷ್ಟ ಚೆನ್ನಾಗಿದ್ರೆ ಒಂದೈದಾರ್ಸಾವಿರ ರೂಪಾಯಿ ನಿಮಗೆ ಸಿಗಬಹುದು. "

" ಅಷ್ಟೇ ಅಂತೀಯಾ ? ನಾವು ಈ ಊರಿನ ಜಮೀನ್ದಾರ್ರು ಕಣಯ್ಯ."

" ಊಹೂಂ. ಅದಲ್ಲ, ಸೋಮಿ. ನಾನು ಹೇಳಿದ್ದು ಕಮಿಾಶನ್ನು. ನಿಮಗೆ."

" ಅದಕ್ಕೆಲ್ಲ ನೀನು ಹೇಳಿದ ಹಾಗೆ ಇಲ್ಲಿ ಬರೆದಿರ್ಬೇಕು."

" ಯಾರಿಗ್ಗೊತ್ತು ಸೋಮಿ? ಸಿಕ್ಕಿಂ ಲಾಟ್ರೀಲಿ ನಾನು ನಾಲ್ಕು ತಿಕೀಟು ತಗೊಂಡಿದೀನಿ. ಸಿಕ್ತೋ, ಹತ್ತು ಟ್ಯಾಕ್ಸಿ ಮಡಗ್ತೀನಿ."

" ಸಿಗಲಪ್ಪ. ನನ್ನ ನಾಲಿಗೆ ಒಳ್ಳೇದು. ಸಿಗುತ್ತೆ. ಒಂದು ಟ್ಯಾಕ್ಸೀನ ನನಗೆ ಕೊಟ್ಬಿಡು."

" ಮಾತು ಕೊಡ್ತೀನಿ. ನಾನು ಸೇಠುಗಳ ಥರ ಅಲ್ಲ, ಸೋಮಿ. ಒಂದು ಲಕ್ಷ ರೂಪಾಯಿ ನನಗ್ಬಂದ್ರೆ ನಿಮಗೊಂದು ಟ್ಯಾಕ್ಸಿ ಗ್ಯಾರಂಟಿ."

" ಸೇಠುಗಳನ್ನು ನಂಬೋದು ಕಷ್ಟ ಅಂತೀಯಾ ?"

" ಛೆ ! ಹೆದರ್ಕೋಬೇಡಿ. ಇವರು ಅಂಥವರಲ್ಲ ..."

ಗೋವಿಂದ ದಿಬ್ಬದ ಕಡೆ ನೋಡಿದ. ಅವರಿಬ್ಬರೂ ಇಳಿದನಿಯಲ್ಲಿ ಮಾತನಾಡುತ್ತ ಮೆಲ್ಲನೆ ಇಳಿದು ಬರುತ್ತಿದ್ದರು.

ನಗರದಲ್ಲಿ ವಿಷ್ಣುಮೂರ್ತಿಯವರು ಗೋವಿಂದನಿಗೆ ಅಂದಿದ್ದರು :

" ನೋಡಿ, ಗೋವಿಂದರಾವ್. ಬೊಂಬಾಯಿನಿಂದ ಒಬ್ಬ ದೊಡ್ಡ ಮನುಷ್ಯರು ಬಂದಿದಾರೆ. ಅವರಿಗೆ ಹಳ್ಳಿಗಳನ್ನ ನೋಡೋ ಖಯಾಲಿ. ಕಣಿವೇಹಳ್ಳಿಗೂ ಬರ್ತಾರಂತೆ. ಹೇಗೂ ರಸ್ತೆ ಆಗಿದೆ ಅಂತೀರಲ್ಲ. ಅವರ ಕಾರಿದೆ. ನಾಳೆ ಕರಕೊಂಡ್ಹೋಗಿ."

" ಕಾರಿದೆಯೆ ? ಹಾಗಾದರೆ, ವಾಪಸ್ಸು ಬರುತ್ತ ಕಾಮಾಕ್ಷೀನ ಕರಕೊಂಡ್ಬರ್ಲೆ ? ಬರಬೇಕು ಅಂತಿದ್ಲು."

" ಹುಂ, ಹುಂ. ಅವರಿಗೆ ಹೇಳೋಣ."

ಸ್ವಲ್ಪ ಹೊತ್ತು ಬಿಟ್ಟು ಅಳಿಯನನ್ನು ಸಮಿಾಪಕ್ಕೆ ಕರೆದು ಒಂದು ವಿಷಯ ಪಿಸುನುಡಿ ದಿದ್ದರು ವಿಷ್ಣುಮೂರ್ತಿ.

ಗೋಪ್ಯದ ಮಾತು. ಬೊಂಬಾಯಿ ಮಹನೀಯರ ಗ್ರಾಮಾಂತರ ಪ್ರವಾಸದ ಉದ್ದೇಶಕ್ಕೆ ಸಂಬಂಧಿಸಿದ್ದು.

ಅದನ್ನು ಕೇಳಿ ಗೋವಿಂದನ ಕಣ್ಣುಗಳು ಮಿನುಗಿದ್ದುವು.

... ಆ ಇಬ್ಬರು ಕಾರನ್ನು ಸಮಿಾಪಿಸುವ ವೇಳೆಗಾಗಲೇ ರೈತರು ವಾಹನವನ್ನು ಸುತ್ತು ಗಟ್ಟಿದ್ದರು.

ಗೋವಿಂದನನ್ನು ಎಲ್ಲರೂ ಕೇಳುವವರೇ.

" ಅವರು ಯಾರು ಗೋವಿಂದಪ್ನೋರೇ ?"

" ಸೇಠಗಳು ಕಣ್ರೋ. ದೊಡ್ಮನುಷ್ಯರು."

"ಗೌಡರ ಮನೆಗೆ ಬಂದವ್ರಾ ?"

"ಹೂಂ. ಮದುವೆಗೆ. ಇವರಿಗೆ ನಮಸ್ಕಾರ ಮಾಡಿ."

ರೈತರು ಆ ಇಬ್ಬರಿಗೂ ಬಾಗಿ ವಂದಿಸಿದರು.

"ಇವರೆಲ್ಲ ನಮ್ಮ ರೈತರು. ಬಹಳ ಒಳ್ಳೆಯವರು."

ಕನ್ನಡಕ ಧರಿಸಿದ್ದ ಸೇಠ್, ಕೋಟಿನ ಒಳ ಜೇಬಿಗೆ ಕೈ ಹಾಕಿ, ಪಾಕೀಟು ಹೊರ ತೆಗೆದು ಬಿಡಿಸಿದರು. ಇಂಗ್ಲಿಷಿನಲ್ಲಿ 'ರೈತರು ಎಷ್ಟು ಜನ ಇದಾರೆ ? ' ಎಂದು ಗೋವಿಂದನನ್ನು ಅವರು ಕೇಳಿದರು.

"ಸಿಕ್ಸ್," ಎಂದ ಗೋವಿಂದ.

ಸೇಠರು ಆರು ಒಂದೊಂದು ರೂಪಾಯಿಯ ನೋಟುಗಳನ್ನು ಗೋವಿಂದನ ಕೈಗಿತ್ತು, ಹಿಂದಿಯಲ್ಲಿ, "ಅವರಿಗೆ ಕೊಟ್ಬಿಡಿ "ಎಂದರು.

"ನಿಮ್ಮನ್ನ ನೋಡಿ ಸೇಠ್ ಸಾಹೇಬರಿಗೆ ಸಂತೋಷವಾಗಿದೆ. ಭಕ್ಷೀಸ್ ಕೊಟ್ಟಿದಾರೆ. ತಗೊಳ್ರೀ," ಎಂದು ಹೇಳಿ ಗೋವಿಂದ ಹಣವನ್ನು ರೈತರಿಗೆ ಹಂಚಿದ.

ಕಾರು ಹಳ್ಳಿಯೊಳಕ್ಕೆ ಹೊರಟಿತು.

ದಾರಿ ಇರಲಿಲ್ಲವೆಂದು ಶ್ರೀನಿವಾಸಯ್ಯನವರ ಮನೆಯಿಂದ ಅರ್ಧ ಫರ್ಲಾಂಗು ದೂರದಲ್ಲೆ ಕಾರು ನಿಂತಿತು.

ಅತಿಥಿಗಳು ನಡೆದುಕೊಂಡೇ ಶ್ರೀನಿವಾಸಯ್ಯನವರ ಮನೆಗೆ ಬಂದರು.

"ಇವರು ಬೊಂಬಾಯಿಯಿಂದ ಬಂದಿದಾರೆ. ನಮ್ಮ ಮಾವನ ಸ್ನೇಹಿತರು. ಕಾರು ಅಲ್ನಿಂತಿದೆ. ಕಣಿವೇಹಳ್ಳಿ ವಿಷಯ ಕೇಳಿದ್ರಂತೆ. ನೋಡ್ಕೊಂಡು ಹೋಗೋಣಾಂತ ಬಂದ್ರು," ಎಂದ ಗೋವಿಂದ.

"ಸಂತೋಷ. ಸಾಮಾನುಗಳನ್ನ ತರಿಸು. ಇಲ್ಲೇ ವಾಸ್ತವ್ಯ ಮಾಡ್ಲಿ," ಎಂದರು ಶ್ರೀನಿವಾಸಯ್ಯ, ಅತಿಥಿಗಳಿಗೆ ವಂದಿಸಿ.

"ಇಲ್ಲ ಅಣ್ಣಯ್ಯ. ಸಾಯಂಕಾಲವೇ ಇವರು ವಾಪ್ಸು ಹೊರಡ್ಬೇಕು. ಕಾಮಾಕ್ಷೀನ ಬರಹೇಳಿದ್ದಾರೆ. ಕರಕೊಂಡ್ಹೋಗ್ತೀನಿ."

"ಸಂತೋಷ. ಬಂದವರಿಗೆ ಒಂದಿಷ್ಟು ಕಾಫಿ ಗೀಫಿ ಏನಾದರೂ—"

ಬಂದವರು ಅಂಗಳದಾಚೆಗೆ ತೆಂಗಿನ ಮರಗಳನ್ನು ನೋಡಿದ್ದರು. ಒಬ್ಬರೆಂದರು :

"ಎಳನೀರು ಕೊಡ್ಸಿ, ಸಾಕು."

ಇನ್ನೊಬ್ಬರು ಹೊರಗಿಣಿಕಿ ನೋಡಿ, ಶ್ರೀಪಾದನ ಕೈಗೆ ಹತ್ತು ರೂಪಾಯಿಗಳ ನೋಟನ್ನಿಟ್ಟರು.

ಕೊಠಡಿಯೊಳಕ್ಕೆ ಗಂಡ ಮುಖ ತೋರಿಸಿದೊಡನೆಯೇ ಕಾಮಾಕ್ಷಿ ಅವನನ್ನು ತಬ್ಬಿಕೊಂಡು, "ಇಲ್ಲಿಗೇ ಕಾಣ್ಸುತ್ತೆ. ಚೆನ್ನಾಗಿದೇಂದ್ರೆ ಕಾರು ! ನಾನು ರೆಡಿ. ಊಟಕ್ಕೆ ಮನೆಗೇ ಹೋಗ್ತೀವಿ ಅಲ್ವೆ ?" ಎಂದಳು.

"ಹೂಂ. ಸಿಂಗಾರ ಮಾಡ್ಕೊ," ಎಂದ ಗೋವಿಂದ.

ಅಲ್ಪ ಆತಿಥ್ಯ ಸ್ವೀಕರಿಸಿ ಅತಿಥಿಗಳು ನದಿಯ ತನಕ ಹೋದರು. ದಾರಿಯಲ್ಲೇ ಕೃಷ್ಣೇಗೌಡನನ್ನು ಕಂಡರು.

ಕಾರು ಪಟೇಲರ ಚಪ್ಪರದ ವರೆಗೂ ಬಂದಿತು.

ಯಾರೋ ಅಳಿಯನ ಕಡೆಯವರು ಇರಬಹುದು, ಎಂದುಕೊಂಡರು ಮೊದಲು. ಕರೆದು ತಂದವನು ಗೋವಿಂದ ಎಂದು ತಿಳಿದಾಗ, 'ಎಲಾ ! ದಿಬ್ಬಣದ ಕಾರು ಬರೋಕ್ಮುಂಚೆ ಇವನ ರಥ ಬಂತಲ್ಲ' ಎನಿಸಿತು ಗೌಡರಿಗೆ.

ಆದರೂ, ಬಂದವರನ್ನು ಅವರು ಆದರದಿಂದ ಬರ ಮಾಡಿಕೊಂಡು, "ನಾಳೆ ಬೆಳಗ್ಗೆ ಲಗ್ನ. ಇದ್ದು ಹೋಗ್ಬೇಕು," ಎಂದರು.

ಸೇಠ್‌ಗಳಲ್ಲಿ ಒಬ್ಬರೆಂದರು :

"ದಯವಿಟ್ಟು ಕ್ಷಮಿಸ್ಬೇಕು, ಗೌಡರೆ. ಅರ್ಜೆಂಟು. ನಾವು ಈ ಸಾಯಂಕಾಲ ನಗರದಲ್ಲಿರ ಬೇಕು. ಇನ್ನೊಮ್ಮೆ ನಿಮ್ಮೂರಿಗೆ ಬರ್ತೀವಿ."

"ನನಗೆ ಅದೃಷ್ಟವಿಲ್ಲ. ಊಟವಾದರೂ ಮಾಡ್ಕೊಂಡ್ಹೋಗಿ."

"ಬೇಡಿ, ಬೇಡಿ."

"ಏನೂ ತಗೊಳ್ದೆ ಎಂಗಾಯ್ತದೆ. ರಂಗ, ಏ ರಂಗಾ... ಇವನ ಡಾಕ್ಟ್ರು—ಇಲ್ನೋಡು."

...ಗಜಾನನ ತಯಾರಿಸಿದ ಭಕ್ಷ್ಯಗಳೂ ಹಾಲೂ ಬಂತು. ಅತಿಥಿಗಳು, "ಪಥ್ಯ. ಸಿಹಿಬೇಡ. ಹಾಲು ಇರ್ಲಿ," ಎಂದರು.

ಕನ್ನಡಕದವರು ನೂರು ರೂಪಾಯಿನ ನೋಟೊಂದನ್ನು ತಟ್ಟೆಯಲ್ಲಿಡಲು, ಇನ್ನೊಬ್ಬರು ಕನ್ನಡದಲ್ಲಿ ಅಂದರು :

"ಬೊಂಬಾಯಿ ಸೇಠ್ ನಿಮ್ಮ ಮಗಳಿಗೆ ಓದಿಸಿದಾರೆ."

ಗೌಡರ ಗಂಟಲು ಕಟ್ಟಿತು. ಮಗನಿಗೆ ಅವರೆಂದರು :

"ಸುಬ್ಬೀನ ಕರಕೊಂಡ್ಬಾ. ಇವರಿಗೆ ನಮಸ್ಕಾರ ಮಾಡ್ಲಿ..."

...ಕಾಮಾಕ್ಷಿಯನ್ನು ಎದುರು ಸೀಟಿನಲ್ಲೇ ತನ್ನ ಎಡಕ್ಕೆ ಗೋವಿಂದ ಕೂಡಿಸಿದ.

ಅಂತೂ, ಎತ್ತಿನ ಬಂಡಿಗಳು ಅಡ್ಡ ಬರುವುದಕ್ಕೆ ಮುಂಚೆ ಪ್ಲಿಮತ್ ಕಾರು ಟಾರ್ ರಸ್ತೆಯನ್ನು ತಲಪಿತು. ಅಲ್ಲಿ ನೆರೆದಿದ್ದ ರೈತರಲ್ಲಿ ನೋಟು ಪಡೆದ ಆರು ಜನರಿದ್ದರು. ಉಳಿದವರಿಗೂ ಬೊಂಬಾಯಿ ಸೇಠರು ಸಂತೋಷದಿಂದ ಉಡುಗೊರೆ ಇತ್ತರು.

...ಕಣಿವೇಹಳ್ಳಿಯಲ್ಲಿ ವರೋಪಚಾರ ವಿಜೃಂಭಣೆಯಿಂದ ಜರಗಿತು.

...ನಗರ ತಲಪಿದಾಗ ಗೋವಿಂದನಿಗೆ ಸೇಠ್ ಅಂದರು :

"ನಾಳೆ ಬೆಳಗ್ಗೆ ನಿಮ್ಮ ಮಾವನನ್ನ ಕರಕೊಂಡು ನಮ್ಮನೆಗೆ ಬನ್ನಿ. ಸ್ವಲ್ಪ ಮಾತಾಡ್ಬೇಕು."

...ಮಾರನೆಯ ಬೆಳಗ್ಗೆ ಕಣಿವೇಹಳ್ಳಿಯ ಗೌಡರ ಮನೆಯಲ್ಲಿ ಅದ್ದೂರಿಯ ಮದುವೆ ನಡೆದಿದ್ದಾಗ, ನಗರದಲ್ಲಿ ಸೇಠರ ಮನೆಯನ್ನು ಗೋವಿಂದನೂ ವಿಷ್ಣುಮೂರ್ತಿಯವರೂ ತಲಪಿದರು.

ನಗರಕ್ಕೆ ಹಳಬರಾದ ಸೇಠ್ ಅಂದರು:

"ಸಕ್ಕರೆ ಕಾರ್ಖಾನೆ ತೆರೆಯೋದಕ್ಕೆ ಕಣಿವೇಹಳ್ಳಿಯೇ ಸೂಕ್ತ ಅಂತ ನಮ್ಮ ಭಾಯಿಸಾಬ್ ತೀರ್ಮಾನಿಸಿದಾರೆ. ಹಳ್ಳಿಯ ಅರ್ಧಕ್ಕೂ ಹೆಚ್ಚು ನಮಗೆ ಬೇಕು. ಅಷ್ಟು ಭೂಮಿ ನಮಗೆ ಕೊಡಿಸಿದರೆ ಗೋವಿಂದರಾಯರಿಗೆ ಐದು ಸಾವಿರ ರೂಪಾಯಿ ಇನಾಂ ಕೊಡ್ತೀವಿ. ಏನು ಹೇಳ್ತೀರಿ?

ವಿಷ್ಣುಮೂರ್ತಿ ಅಳಿಯನ ಮುಖ ನೋಡಿದರು.

ಗೋವಿಂದ ಬೊಂಬಾಯಿಯವರನ್ನು ನೋಡಿ, "ದಸ್ ಹಜಾರ್ ಸೇಠ್ ಸಾಬ್; ದಸ್ ಮಾಡ್ಕೊಳ್ಳಿ," ಎಂದ.

## ೩೦

ನಗರಕ್ಕೆ ಹೋಗಿ ಗೊತ್ತು ಗುರಿ ಇಲ್ಲದೆ ದಿನವಿಡೀ ಅಲೆದು, ಬಸ್ ನಿಲ್ದಾಣದ ತಂಗು ಮನೆಯ ಮೂಲೆಯಲ್ಲಿ ಮುದುಡಿ ಮಲಗಿ, ಕೊರೆಯುವ ಚಳಿಯನ್ನು ಸಹಿಸಿ, ಬೆಳಗ್ಗೆ ಎದ್ದು ಹತ್ತಿರದ ಕಾಕಾ ಹೋಟೆಲಿನಲ್ಲಿ ಚಹಾ ಕುಡಿದು, ಅಬ್ದುಲ್ಲ ಒಂದು ಬಸ್ಸು ಹತ್ತಿ ಕಣಿವೇಹಳ್ಳಿಗೆ ಅಭಿಮುಖನಾದ.

ಕವಲು ದಾರಿಯ ಬಳಿ ಇಳಿದಾಗ ಅವನಿಗೆ ಆಶ್ಚರ್ಯವಾಯಿತು. ಅಲ್ಲಿದ್ದ ಹೊಸದೊಂದು ಕೈಕಂಬವನ್ನು ಕಂಡು. ಬುಡದಲ್ಲಿ ಕಪ್ಪು ಬಿಳಿ ಕಪ್ಪು ಬಿಳಿ ಪಟ್ಟೆಗಳು ಮೇಲೆ ಹಳದಿ. ಅಡ್ಡ ಹಲಗೆಯಲ್ಲಿ ಏನು ಬರೆದಿದ್ದರೊ ? ಕನ್ನಡ ಅಕ್ಷರಗಳು. ಕನ್ನಡವೊ, ಇನ್ನೊಂದೊ. ಆ ನಿರಕ್ಷರ ಕುಕ್ಷಿಗೆ ಎಲ್ಲವೂ ಒಂದೇ. ಆದರೂ ಆತ ಊಹಿಸಿಕೊಳ್ಳಬಲ್ಲ. ಕಣಿವೇಹಳ್ಳಿ ಎಂದಿರಬೇಕು ಅದರಲ್ಲಿ.

ನಿನ್ನೆ ಖಾಲಿ ಜಾಗ. ಇವತ್ತು ಅಲ್ಲೊಂದು ಕಂಬ. ಊರಿನ ಬಡಗಿ ಮಾಡಿದ್ದಲ್ಲ. ನಗರದಲ್ಲೇ ಮಾಡಿಸಿರಬೇಕು. ಅಯ್ಯನವರ ಮಗನ ಕೆಲಸವೇ. ಅದರಲ್ಲೇನು ಸಂಶಯ? ಸೋಮಪುರಕ್ಕೆ ಹೋಗುವ ಲಾರಿಯಲ್ಲಿ ತಂದಿಳಿಸಿ ನೆಟ್ಟಿರಬೇಕು ನಿನ್ನೆ.

—ಅಬ್ದುಲ್ಲ ಕಂಬವನ್ನು ಮುಟ್ಟಿ ನೋಡಿದ. ಕಣ್ಣುಗಳನ್ನು ಕಿರಿದುಗೊಳಿಸಿ ಅಕ್ಷರಗಳನ್ನು ದಿಟ್ಟಿಸಿದ. ತಲೆಯಲ್ಲಾಡಿಸಿ, ನಿಟ್ಟುಸಿರು ಬಿಟ್ಟು, ದಾರಿ ನಡೆದ.

ತಾನು ಬೆವರು ಸುರಿಸಿ ಕಡಿದು ಮಾಡಿದ, ಮಾಡಿಸಿದ ದಾರಿ. ಗೌಡರ ಮಗಳ ಮದುವೆಯ ದಿನದಿಂದ ಇವತ್ತಿನವರೆಗೆ ಸುಮಾರು ಎರಡು ಎರಡೂವರೆ ತಿಂಗಳು ದಾಟಿತಲ್ಲ ? ಈ ಅವಧಿಯಲ್ಲಿ ಕಾರು ಟ್ಯಾಕ್ಸಿಗಳು ಅದೆಷ್ಟು ಸಾರೆ ಕಣಿವೇಹಳ್ಳಿಗೆ ಬಂದು ಹೋದವು! ಗೌಡರು ಅಳಿಯನಿಗೆ ಕಾರು ಕೊಡಿಸಿದರು ; ತಮ್ಮ ಉಪಯೋಗಕ್ಕೆ ಜೋಡೆತ್ತು ಎಳೆಯುವ ಗಾಡಿ ಕೊಂಡರು. ವಾಹನಗಳು ಓಡಿ ಓಡಿ ದಾರಿಯುದ್ದಕ್ಕೂ ಸಮಾನಾಂತರದಲ್ಲಿ ಎರಡು ಚರಂಡಿಗಳಾಗಿದ್ದುವು. ಅವುಗಳ ನಡುವೆ ಮಣ್ಣು ದಿಬ್ಬವಾಗಿತ್ತು.

ಕೆಲ ದಿನಗಳಗೆ ಹಿಂದೆ ಗೋವಿಂದ ಹೇಳಿದ್ದ :

"ನಿನ್ನಿಂದಾಗಿ ಕಣಿವೇಹಳ್ಳಿಯ ಹೆಸರು ಹಿಂದೂಸ್ಥಾನದಲ್ಲೆಲ್ಲಾ ಹಬ್ಬೋ ಹಾಗಾಯ್ತು, ಅಬ್ದುಲ್ಲ."

ಅಬ್ದುಲ್ಲ ಕೇಳಿದ :

"ಅದೆಂಗೆ ಸೋಮಿಯೋರೆ ?"

"ಹೆಂಗೆ ಅಂದ್ರೆ ? ಹರಿಭಾಯಿ ಸೇಠ್ ಬಂದ ದಿವಸ ನಿನ್ನ ರಸ್ತೆ ಇರದೇ ಹೋಗಿದ್ರೆ ಈ ಹಳ್ಳಿಯ ಭಾಗ್ಯದ ಬಾಗಿಲು ತೆರೀತಿತ್ತೇನಯ್ಯ ?"

"ಏನೋ ಗೌಡರು ಯೋಳಿದ್ರು, ಮಾಡ್ದೆ."

" ಎಷ್ಟು ಬಂತು ?"

" ಯಾವುದು ?"

" ಹಣ."

" ಆ ಮಾತು ಬ್ಯಾಡಿ ಗೋವಿಂದಪ್ನೋರೆ."

" ನೀನೊಬ್ಬ ಪೀರ್ ಕಣಯ್ಯ. ಪೀರ್ ಅಬ್ದುಲ್ಲ. ನೀನು ಸತ್ಮೇಲೆ ನಿನ್ನ ಗೋರೀನ ಹಿಂದೂಗಳೂ ಮುಸಲ್ಮಾನರೂ ಪೂಜಿಸ್ತಾರೆ... ಈಗ, ಸ್ವತಃ ನೀನೇ, ಮುನಿಯನನ್ನ ಕೊಂದ ದ್ದುಂಟೂಂತ ಹೇಳಿದ್ರೂ ನಾನು ನಂಬಲಾರೆ."

[ಅಬ್ದುಲ್ಲನ ಮುಖದ ಸ್ನಾಯುಗಳು ಮಿಸುಕಿದವು. ಗೋವಿಂದ ಅದನ್ನು ಗಮನಿಸಿದ. ಎಲಾ ! ಎಷ್ಟೊಂದು ಗೆರೆಗಳು ! ಈ ಆರೆಂಟು ತಿಂಗಳಲ್ಲೆ ಇವನು ಮುದುಕನಾಗಿ ಹೋದನಲ್ಲ– ಎನಿಸಿತು ಅವನಿಗೆ.]

ಅಬ್ದುಲ್ಲನೆಂದ :

" ಈಗ ಆ ಮಾತು ಯಾಕೆ ಸೋಮಿಯೋರೆ..."

" ನಿಜ ಅನ್ನು ... ನೋಡು ಅಬ್ದುಲ್ಲ— ನಾವು ಯಾವಾಗ್ಲೂ ನಿನ್ನೇದನ್ನ ಮರೆತು ನಾಳೆಯ ಯೋಚ್ನೆ ಮಾಡ್ಬೇಕು. ಇನ್ನು ಒಂದು ವರ್ಷ ಕೂಡಾ ಬೇಡ. ಸಕ್ಕರೆ ಕಾರಖಾನೆ ಇಲ್ಲಿ ಶುರುವಾಗುತ್ತೆ. ಫ್ಯಾಕ್ಟರಿಯಿಂದ ನಗರದವರೆಗೆ ಮೂವತ್ತು ಮೈಲಿ ದಾರಿ ಹಾಕಿಸ್ತಾರೆ. ಕಾಲನಿ ಕಟ್ಟಿಸ್ತಾರ. ಕಾಲನಿ ಅಂದ್ರೆ ವಾಸಕ್ಕೆ ಬಂಗ್ಲೆಗ್ಳು, ಸಿನಿಮಾ ಬರುತ್ತೆ. ಪೇಟೆ, ಹೈಸ್ಕೂಲು ಕಾಲೇಜು, ಆಸ್ಪತ್ರೆ, ಪೋಸ್ಟಾಫೀಸು ತಂತಿ ಕಛೇರಿ, ಪೊಲೀಸ್ ಪಡೆ, ಜಿಗಿ ಜಿಗಿ ಜನ—ನಾಗರಿಕತೆ ಅಬ್ದುಲ್ಲ, ನಾಗರಿಕತೆ ! ಇದಕ್ಕೆಲ್ಲ ಮೂಲ ಕಾರಣ ನಾನು, ಮರೀಬ್ಯಾಡ."

ಅಬ್ದುಲ್ಲ ನಕ್ಕ.

ಸಂತೃಪ್ತಿಯ ಮಂದಹಾಸ ಬೀರಿ ಗೋವಿಂದನೆಂದ :

" ನನ್ನನ್ನ ಲೇಬರ್ ಆಫೀಸರ್ ಮಾಡ್ತೀವೀಂತ ಹರಿಭಾಯಿ ಸೇಠ್ ಹೇಳಿದಾರೆ. ನಾನು ರಾಜಕೀಯದವನು. ಸರಿಹೋಗುತ್ತೋ ಇಲ್ವೋ. ಸದ್ಯಕ್ಕೆ ಇರಲಿ ಅಂತ ಒಪ್ಪಿಕೊಂಡಿದೀನಿ. ಸಾವಿರಾರು ಜನಕ್ಕೆ ಕೆಲಸ ಕೊಡಿಸಬಲ್ಲೆ. ಒಂದೊಂದು ಉದ್ಯೋಗಕ್ಕೆ ಒಂದೊಂದು ಸಾವಿರ ರೂಪಾಯೀ ಕೊಡೀಂತ ನಾನು ಕೇಳ್ತೀನ್ಯೆ ? ಥೆ! ವಿಷಯ ಇಷ್ಟೆ : ನೀನು ನನ್ನ ಕೆಳಗೆ ಮೇಸ್ತ್ರಿಯಾಗ್ಬೇಕು, ಅಬ್ದುಲ್ಲ."

ಗೋವಿಂದನ ಕೈಯಿಂದ ಪಾರಾಗುವುದಕ್ಕೋಸ್ಕರ ಅಬ್ದುಲ್ಲನೆಂದ :

" ನೋಡಾನ ಸೋಮಿ. "

" ಈ ಸಲ ಹರಿಭಾಯಿ ಸೇಠ್ ಬಂದಾಗ ಅವರಿಗೆ ನಿನ್ನ ಪರಿಚಯ ಮಾಡಿಸ್ತೀನಿ."

ಹ್ಞ ಅನ್ನಲಿಲ್ಲ ಅಬ್ದುಲ್ಲ; ಹ್ಞೂ ಅನ್ನಲಿಲ್ಲ.

... ದಾರಿ ನಡೆಯುತ್ತ ಅದನ್ನೆಲ್ಲ ಆತ ಸ್ಮರಿಸಿಕೊಂಡ.

ಅವನನ್ನು ಬಹಳವಾಗಿ ದುಃಖಕ್ಕೀಡುಮಾಡಿದುದೆಂದರೆ ಗೌಡರಿಗೆ ಒದಗಿದ ಸ್ಥಿತಿ. ಅಬ್ದುಲ್ಲ ಬಲ್ಲ. ಕಣಿವೇಹಳ್ಳಿಯಲ್ಲಿ ಸಕ್ಕರೆ ಕಾರಖಾನೆಯಾಗುವುದು ಅವರಿಗೇನೂ ಸಮ್ಮತವಿರಲಿಲ್ಲ. ಆದರೆ ಆ ಸೇಠ್ ಒಬ್ಬ ಮಂತ್ರಿಯನ್ನೇ ಕರರೆದುಕೊಂಡು ಬಂದಿದ್ದರು. ಮಂತ್ರಿಯವರು ಶಾಮೇ ಗೌಡರ ಮನೆಯಲ್ಲಿ ಒಂದು ದಿನ ತಂಗಿದ್ದರು. ಅವರ ಜನವೇ. ಒಳ್ಳೆಯವರು, ಪಾಪ ...

ಮುಂದೆ ಗೌಡರು ಕಾರಖಾನೆಯ ವಿಷಯದಲ್ಲಿ ಬಹಿರಂಗ ವಿರೋಧವನ್ನು ವ್ಯಕ್ತಪಡಿಸಿರಲಿಲ್ಲ. ಸೇಠ್ ಮತ್ತೊಮ್ಮೆ ಬಂದಾಗ ಕಾಗದಗಳ ಕಂತೆಯನ್ನೇ ತಂದರು. ಗೌಡರ ಹೊಲಗಳಲ್ಲಿ ಮನೆಗಳನ್ನು ಕಟ್ಟುವರಂತೆ. ಒಂದೊಂದು ಮನೆಯ ಜಾಗಕ್ಕೂ ಅದೆಷ್ಟೋ ಅಂದರಲ್ಲ–ಅದೆಷ್ಟೋ ಸಹಸ್ರ ರೂಪಾಯಿ ಬೆಲೆ. ಹಣ ಗೌಡರಿಗೆ. ಉ ! ಕೃಷ್ಣೇಗೌಡರದಂತೂ ಸೇಠರಿಗೆ ಪೂರ್ಣ ಬೆಂಬಲ. ಉಸ್ಸಪ್ಪ ...

ಹಳ್ಳಿಯಲ್ಲೆಲ್ಲ ಅದೇ ಮಾತು ನಡೆದಿದ್ದರೂ ಅಬ್ದುಲ್ಲನಿಗೆ ಅದರಲ್ಲಿ ಆಸಕ್ತಿ ಇಲ್ಲ.

ಅವನೆಂದುಕೊಂಡ : ನಾನು ಪೀರನಲ್ಲ ಖದೀಮ–ಕೊಲೆಪಾತಕಿ. ಗಲ್ಲಾಗಬೇಕಿತ್ತು. ಗೌಡರು ಉಳಿಸಿದರು. ಒಂದು ರಸ್ತೆ ಕಡಿಸಿಕೊಟ್ಟೆ. ಋಣ ಸ್ವಲ್ಪವಾದರೂ ತೀರಿತಲ್ಲ. ಇನ್ನು–ಇನ್ನು ನಾನಿಲ್ಲಿಂದ ಹೊರಡಬಹುದು. ಎಲ್ಲಿಂದಲೋ ಬಂದೆ. ನಾಲ್ಕು ದಿನ ಇಲ್ಲಿ ನಿಂತೆ. ಇನ್ನೆಲ್ಲಿಗೋ ಹೋಗ್ತೇನೆ."

ಇದೇನು ? ಎಷ್ಟು ನಡೆದರೂ ದಾರಿ ಮುಗಿಯುದಲ್ಲ. ಅಥವಾ, ತಾನು ನಡೆಯುತ್ತಲೇ ಇಲ್ಲವೊ ? ಹೆಜ್ಜೆಯ ಮೇಲೆ ಹೆಜ್ಜೆ... ತನಗೆ ಶಕ್ತಿ ಇಲ್ಲ. ವಯಸ್ಸಾಯ್ತು. ಮುದುಕನಾದೆ ತಾನು...

ಅಬ್ದುಲ್ಲ ಅಂತೂ ಹಳ್ಳಿಯ ಹೊರವಲಯದಲ್ಲಿದ್ದ ಗುಡಿಸಲನ್ನು ಸೇರಿದ. ಅಲ್ಲಿಂದ ಆತನಿಗೆ ಕಾಣಿಸಿತ್ತು : ಕಣಿವೇಹಳ್ಳಿಯ ಏಕಮಾತ್ರ ಬೀದಿಯಲ್ಲಿ ಎರಡು ಮೂರು ಕಾರುಗಳು ನಿಂತಿದ್ದುವು......

... ಎರಡು ಕಾರುಗಳಲ್ಲಿ ಬಂದವರು ಹರಿಭಾಯಿ ಸೇಠ್ ಮತ್ತು ಸಂಗಡಿಗರು, ಅವರ ಪ್ರೈವೇಟ್ ಲಿಮಿಟೆಡ್ ಕಂಪನಿಯ ಡೈರೆಕ್ಟರುಗಳು, ವಕೀಲರು. ಇನ್ನೊಂದರಲ್ಲಿ ಬಂದಿಳಿದವರು ವಿಷ್ಣುಮೂರ್ತಿ, ಮೋಹನರಾಯರು ಹಾಗೂ ಗೋವಿಂದ.

ಇವರೆಲ್ಲ ಶ್ರೀನಿವಾಸಯ್ಯನವರ ಮನೆಗೆ ನಡೆದರು.

ದೂರದಲ್ಲಿದ್ದಾಗಲೇ ಇವರನ್ನು ನೋಡಿ, "ಅಮ್ಮಾ ಅವರೆಲ್ಲಾ ಬಂದ್ಬಿಟ್ರು. ಗೋವಿಂದ ನಮ್ಮ ಬೀಗರನ್ನೂ ಕರೆದುಕೊಂಡು ಬಂದಿರೋ ಹಾಗಿದೆ," ಎಂದರು ಶ್ರೀನಿವಾಸಯ್ಯ, ಒಳಕ್ಕೆ ಓಡಿ.

ದೊಡ್ಡಮ್ಮ ಅಡುಗೆಮನೆಯಲ್ಲಿದ್ದವರು ಹೊರಗೆ ಬಂದರು. ಮಗನ ಕಾತರದ ನೋಟ ಕಂಡು ಅರ್ಧ ಕ್ಷಣ ಕಣ್ಣುಮುಚ್ಚಿ ತೆರೆದರು.

ಉಸಿರೆಳೆದುಕೊಂಡು ಅವರೆಂದರು :

"ಧೈರ್ಯ ತಂದುಕೋ ಸೀನ. ಹೊರಗೆ ಹೋಗಿ ಅವರನ್ನು ಬರಮಾಡ್ಕೊ. ಹೀಗೆ ಆಗ್ಬೇಕು ಅನ್ನೋದು ದೈವೇಚ್ಛೆಯಾದರೆ ಯಾರಿಂದ ತಾನೇ ಅದನ್ನು ತಪ್ಪಿಸೋಕಾಗುತ್ತೆ ?"

"ಹೂಂ, ಅಮ್ಮ."

ಶ್ರೀನಿವಾಸಯ್ಯ ಹೊರಬಾಗಿಲಿಗೆ ನಡೆದರು.

ಒಳಗೆ ಭಾಗೀರಥಿ ಶ್ರೀಪಾದನನ್ನು ತಬ್ಬಿಕೊಂಡು ಒಂದೇ ಸಮನೆ ಮುದ್ದಿಸುತ್ತಿದ್ದಳು; ಸಾಕಷ್ಟು ಗಟ್ಟಿಯಾಗಿಯೇ ನಗುತ್ತಿದ್ದಳು.

ದೊಡ್ಡಮ್ಮ ಕ್ಷಣ ನಿಂತು ಅವಳನ್ನು ನೋಡಿದರು. ಬಳಿಕ, "ಭಾಗೀ, ಒಲೆ ಮೇಲೆ ನೀರು ಮರಳ್ತಿದೆ, ಒಂದು ಅಚ್ಚೇರು ಅಕ್ಕಿ ಜಾಸ್ತಿ ಹಾಕ್ಬಿಡಮ್ಮ," ಎಂದು ನುಡಿದು, ದೇವರ

ಮನೆಗೆ ಹೋಗಿ ಮನೆದೇವರೆದುರು ಕುಳಿತು ಬಿಟ್ಟರು.

ಹೃದಯದ ಅಳಲನ್ನು ತೋಡಿಕೊಳ್ಳಲು ಆ ಮೂರ್ತಿಯಲ್ಲದೆ ಬೇರೆ ಯಾರಿದ್ದರು ಅವರಿಗೆ ?

—ಒಂದು ಲಕ್ಷ ರೂಪಾಯಿಯಂತೆ. ಅದೆಷ್ಟಾಗುವುದೊ ? ಭಾರೀ ಹಣ, ನೂರು ಸಾವಿರ ಅಲ್ಲವೆ ? ಗೋವಿಂದ ಅಂದನಲ್ಲ– ಒಬ್ಬೊಬ್ಬರಿಗೆ ಮೂವತ್ತು ಸಾವಿರ. ಉಳಿದ ಹತ್ತು, ತಂದೆಗೆ ಹಾಗೂ ದೊಡ್ಡಮ್ಮನಿಗೆ. ತಮಗೆ ಯಾಕೆ ಬೇಕು, ಆ ಹಣ? ಆದರೆ ಇಷ್ಟನ್ನು ಕೈಯೊಡ್ಡಿ ಪಡೆದ ಮೇಲೆ–ಈ ಮಕ್ಕಳ ತಲೆಗೊಂದು ಸೂರಿಲ್ಲ. ಇವರು ಬೀದಿ ಪಾಲು. ಭೂಮಿ ತಾಯಿಗೆ ಸಮ್ಮತವಾದೀತೇ ಈ ಮಾರಾಟ ? ಭತ್ತ ಬೆಳೆಯುವ ಕಡೆ ಇನ್ನು ಕಬ್ಬು. ಶಾಮಣ್ಣ ಒಪ್ಪದೇ ಇದ್ದದ್ದು ದೊಡ್ಡ ವಿಷಯವೇ. ಆದರೆ ಮನೆಗಳನ್ನು ಕಟ್ಟುವುದ ಕ್ಕೋಸ್ಕರ ಅವನ ಹೊಲಗಳನ್ನು ಈಗ ಕೊಳ್ಳುವರಂತಲ್ಲ ? ಏನು ಆದಂತಾಯಿತು ಅಲ್ಲಿಗೆ? ಬೇರೆ ಯಾವುದಾದರೂ ಹಳ್ಳಿಯ ಮೇಲೆ ಎರಗಬಾರದಿತ್ತೆ ಈ ಕಾರಖಾನೆಯ ದೆವ್ವ ? ತಮ್ಮ ವರು, ತಮ್ಮ ಯಜಮಾನರು, ದುಡಿದು ಸಂಪಾದಿಸಿದ ಈ ಆಸ್ತಿ ಆ ದೆವ್ವಕ್ಕೆ ಬಲಿಯಾಗಬೇಕಾ ಯಿತೆ ?

—ಉಳಿದ ಹುಡುಗರ ಮದುವೆಯಾದ ಮೇಲೆ ಮನೆ ಮಸಣವಾಯಿತಲ್ಲ ? ಆ ಸರವನ್ನು ನಿಜವಾಗಿಯೂ ಯಾರು ಕದ್ದರು ? ಪದ್ಮನ ಹೆಂಡತಿ ಅಂದು ಬಂದವಳು ಈ ಕಡೆಗೆ ಮತ್ತೆ ಒಮ್ಮೆಯೂ ಹಾಯಲಿಲ್ಲವಲ್ಲ ? ಆ ಕಾಮಾಕ್ಷಿಯೊ, ಕುಲದ ಮಾನ ಕಳೆಯುವ ಹುಡುಗಿ. ಭಾಗೀರಥಿಯ ಅವಸ್ಥೆ ಹೀಗೆ. ಓ ದೇವರೇ, ನನ್ನ ಮೊಮ್ಮಕ್ಕಳ ಗತಿ ಏನು ಇನ್ನು ? ನನ್ನ ವಂಶದ ಗತಿ ಏನು ?

ಈ ಬೀಗರು ಈಗ ಯಾಕೆ ಬಂದರು ? ತಮ್ಮ ತಮ್ಮ ಅಳಿಯಂದಿರ ಪಾಲನ್ನು ಸುರಕ್ಷಿತ ಗೊಳಿಸುವುದಕ್ಕೆ ಅಲ್ಲವೆ ? ಇದೇನು ಕಾಗದ ಪತ್ರಗಳೊ ? ಏನು ಸಮಾಚಾರ ? ಗೋವಿಂದನ ದುಡುಕಿನಲ್ಲಿ ಶೀನ ಯಾವು ಯಾವುದಕ್ಕಾದರೂ ಸಹಿ ಹಾಕಿದರೊ ? ಮೋಹನರಾಯ ಇಲ್ಲವೆ ? ತನ್ನ ಅಳಿಯನ ಸಂರಕ್ಷಣೆಯನ್ನಾದರೂ ಆತ ಮಾಡಿಕೊಳ್ಳುವುದಿಲ್ಲವೆ?

ಸಂರಕ್ಷಕ, ಓ ಜಗದ್ರಕ್ಷಕ, ಮನೆದೇವರೇ, ನನ್ನ ಸೇವೆ ಸಾಕಾಯಿತೇನಪ್ಪ ? ಈ ಮನೆಯನ್ನ ಉಳಿಸಿಕೊಳ್ಳೋದಕ್ಕೂ ನಿನ್ನಿಂದ ಆಗದೇ ಹೋಯಿತಲ್ಲ......

"ಅಮ್ಮಾ, ಅಮ್ಮಾ......"

ಚಿಕ್ಕವನಿದ್ದಾಗಿನಿಂದಲೂ ಶೀನ ಕರೆಯುತ್ತಿದ್ದುದೇ ಹೀಗೆ.

"ಅಮ್ಮಾ, ಸಹಿ ಮಾಡ್ಬೇಕು ಅಂದ್ರು. ಒಂದು ಲಕ್ಷ ಇಲ್ಲವಲ್ಲಮ್ಮ. ತೊಂಭತ್ತೇ ಸಾವಿರ."

ತಗ್ಗಿಸಿದ್ದ ತಲೆಯನ್ನು ದೊಡ್ಡಮ್ಮ ಎತ್ತಿದರು. ["ಆಟಕ್ಬಾರೋ ಅಂದೆ. ಬರೋಲ್ಲ ಅಂತಾನೆ ಶಾಮಣ್ಣ," ನಲ್ವತ್ತು ವರ್ಷಗಳಿಗೆ ಹಿಂದೆಯೋ, ಐವತ್ತು ವರ್ಷಗಳಿಗೆ ಹಿಂದೆಯೋ ? ಯಾವಾಗ ಶೀನ ಹಾಗೆ ದೂರಿತ್ತುದು ? ಮಗನ ಸಪ್ಪೆ ಮುಖವನ್ನು ಅವರು ನೋಡಿದರು. ಈತ ಅಳುಬುರುಕನಾದನಲ್ಲ ಎಂದು ಒಮ್ಮೆಲೆ ಎಲ್ಲಿಲ್ಲದ ಸಿಟ್ಟು ಅವರಿಗೆ. ಆದರೂ, ಒಬ್ಬನೇ ಮಗ; ಸಿಟ್ಟನ್ನು ನುಂಗಿಕೊಳ್ಳಬೇಕು ತಾವು.]

"ಏನೋ ಅದು ?"

ಶೀನ, ಅವನಾಚೆಗೆ ಮೋಹನರಾಯ. ಹಿಂದೆ ಗೋವಿಂದ, ಅವನಿಗೆ ಅಂಟಿಕೊಂಡು ವಿಷ್ಣುಮೂರ್ತಿ. ಶಾಮಣ್ಣನಿಲ್ಲ.

"ಸೇಠ್ ಅಂತಾರೆ. ಹತ್ತು ಸಾವಿರ ಈ ಲೆಕ್ಕದಲ್ಲಿ ಇಲ್ವಂತೆ. ಅದನ್ನ ಗೋವಿಂದೂಗೆ ಕೊಡ್ತಾರಂತೆ."

ಗೋವಿಂದ :

"ನಾನು ಹೇಳ್ದೆ ದೊಡ್ಡಮ್ಮ—ನೀವು ನನಗೆ ಕೊಡೋ ದಸ್ ಹಜಾರಿಗೂ ಈ ಲಕ್ಷಕ್ಕೂ ಸಂಬಂಧವಿಲ್ಲ ಅಂತ. ಆತ ಒಪ್ಪೋದಿಲ್ಲ. ಕೈ ಬಿಗಿ."

ಮೋಹನರಾಯ :

"ಸಣ್ಣ ವಿಷಯ. ವಾದವಿವಾದ ಸರಿತೋರೋದಿಲ್ವಪ್ಪ."

ವಿಷ್ಣುಮೂರ್ತಿ :

"ನನಗೂ ಹಾಗೇ ಅನಿಸುತ್ತೆ."

ದೇಹದ ಗವಿಯೊಳಗಿಂದ ದೊಡ್ಡಮ್ಮನ ಸ್ವರ ಬಹಳ ಕ್ಷೀಣವಾಗಿ ಕೇಳಿಸಿತು.

"ಮುಗಿದ್ಹೋಗ್ಲಿ ಶೀನ. ಒಪ್ಕೊಂಡ್ಬಿಡು."

"ಹೂನಮ್ಮ."

ಅವರು ತೆರಳಿದರು. ದೊಡ್ಡಮ್ಮನ ತಲೆ ಮತ್ತೆ ದೇವರೆದುರು ಬಾಗಿತು.

ಗೋಪೂಗೆ ಮೂವತ್ತು ಸಾವಿರ. ಪಕ್ಕದ ಹೊಸಹಳ್ಳಿಯಲ್ಲಿ ಹೊಲ ಕೊಂಡು ಅಲ್ಲಿಯೇ ಮನೆಕಟ್ಟಿ ನೆಲೆಸುತ್ತೇನೆ ಎಂದನಲ್ಲ ? ದೊಡ್ಡ ಮರವನ್ನು ಉರುಳಿಸಿ ಆದ ಮೇಲೆ ಅದರ ಬುಡದಲ್ಲಿ ಬೆಳೆದ ಚಿಕ್ಕದೊಂದನ್ನು ಕಿತ್ತು ಬೇರೆ ತಾಣದಲ್ಲಿ ನೆಡುವ ಹಾಗೆ. ಗೋವಿಂದನಿಗೆ ಮೂವತ್ತು ಸಾವಿರ ಮತ್ತು ಹತ್ತು. ಕಾಮಾಕ್ಷಿಯ ವಿಲಾಸಕ್ಕೆ ಅದು ಎಷ್ಟು ವರ್ಷಕ್ಕೆ ಸಾಕೊ ? ನಮ್ಮ ಮನೆ ಇರುವಲ್ಲೇ ಇದನ್ನು ಕೆಡವಿ, ಕಾರಖಾನೆಯ ಕಚೇರಿ ಕಟ್ಟಿಸುತ್ತಾರಂತಲ್ಲಾ ? ಉಚಿತ ವಾಸಕ್ಕೆ ಒಂದು ಮನೆಯನ್ನು ಕಾರಖಾನೆಯವರು ಗೋವಿಂದನಿಗೆ ಕೊಡುತ್ತಾರಂತಲ್ಲ ? ಈ ಹಳ್ಳಿಯಲ್ಲಿ ಚಿಗುರುವ ವಂಶದ ಕುಡಿ ಅವನೊಬ್ಬನೇ. ಪದ್ಮನದಂತೂ ಇನ್ನು ಬೇರೆಯೇ ಕಥೆ. ಮಾವನ ಹಾಗೆ ಅಳಿಯ.

—ಬಾಗಿ ಕುಳಿತ ದೊಡ್ಡಮ್ಮ ಬಳಲಿ, ಹಾಗೆಯೇ ದೇವರ ಕಡೆಗೆ ತಲೆಮಾಡಿ ನೆಲದ ಮೇಲೆ ಒರಗಿದರು.

ಅಲ್ಲಾ ಈ ಕಾರಖಾನೆ ಜನ ಕಣಿವೇಹಳ್ಳಿಗೆ ಬರದೇ ಇರುತ್ತಿದ್ದರೆ ಇವರೆಲ್ಲರ ಗತಿ ಏನಾಗು ತ್ತಿತ್ತು ? ಸೊಸೆಯರೊಳಗಿನ ಜಗಳ. ಸೋದರ ಕಲಹ. ಪರ್ಯವಸಾನ ? ಈ ಕುಟುಂಬ ಮೂರಾಬಟ್ಟೆಯಾಗುತ್ತಿತ್ತು. ಈಗಲೂ ಮೂರಾಬಟ್ಟೆಯೇ. ಹಣದ ಝಣಝಣ ಸದ್ದೊಂದೇ ವಿಶೇಷ.

ದೇವರೇ ದೇವರೇ ಇನ್ನೂ ಯಾಕೆ ಇಲ್ಲಿಯೇ ಉಳಿಸಿದೀಯಾ ನನ್ನನ್ನು ? ಸಾಲದೆ ? ಈ ಭೂಮಿಯ ಮೇಲೆ ಅನುಭವಿಸಿದ್ದು ಸಾಲದೆ ?

ಹೊರಗೇನೋ ಸದ್ದು. ಅಸ್ಪಷ್ಟ ಮಾತುಗಳು, ನಗೆ. ನಾಲ್ಕಾರು ಮುಖಗಳಿಂದ ಹೊರಟು ಅಲೆ ಅಲೆಯಾಗಿ ನಾಲ್ಕು ದಿಕ್ಕುಗಳಿಗೆ ವ್ಯಾಪಿಸಿದ ನಗೆ.

ಶೀನ ಏನಂದೆ ?"ಇನ್ನು ಇಲ್ಲೇನು ಕೆಲಸ ನಮಗೆ ? ಬಾ, ಕಾಶಿಗೆ ಹೋಗೋಣ.

ತೀರ್ಥಾಟನ ಮಾಡೋಣ: ದೇಶ ಸುತ್ತುತಾನೇ ಇರೋಣ. ಆಸ್ತಿ ಮಾರಿ ಹಂಚಿಕೊಂಡು ಇವರು ಸುಖವಾಗಿರ್ಲಿ. ನಮಗೆ ಬೀದಿ ಬೀದಿಯ ಛತ್ರ ಇರುತ್ತೆ, ಸಾಕು."

ಯಾತ್ರೆ ಹೊರಡುವ ಮಗ ಮತ್ತು ತಾಯಿ. ಏನು ತಪ್ಪು ? ಜೀವದಲ್ಲಿ ಕಸುವಿದೆ ಎಂದಾದರೆ, ಆ ಪುಣ್ಯದ ಯೋಗ ಈ ಹಣೇಲಿ ಬರೆದಿದೆ ಎಂದಾದರೆ...

... ಬಾಗಿಲ ಬಳಿ ಗೋವಿಂದ ಮಧುರ ಕಂಠದಲ್ಲಿ ಕರೆದ :

"ದೊಡ್ಡಮ್ಮಾ ..."

"........."

"ಏ ದೊಡ್ಡಮ್ಮಾ..."

ಗೊಗ್ಗರ ಗಂಟಲಲ್ಲಿ ದೊಡ್ಡಮ್ಮ ಕೇಳಿದರು :

"ಏನು ಮರಿ ?"

"ಹರಿಭಾಯಿ ಸೇಠ್ ಇನ್ನು ಶಾಮೇಗೌಡರ ಮನೆಗೆ ಹೋಗ್ತಾರೆ. ನಿನ್ನನ್ನ ನೋಡ್ಬೇಕಂತೆ."

"........."

"ಬರ್‍ತೀಯಾ ?"

"ಮೈಲಿ ಚೆನ್ನಾಗಿಲ್ಲ; ಮಲಕೊಂಡಿದ್ದಾಳೆ—ಅಂತ ಹೇಳು."

"ಸರಿ, ಬಿಡು."

ಮೊಮ್ಮಗನನ್ನು ಕಳುಹಿಸಿ ದೊಡ್ಡಮ್ಮ ತಮಗಾಗಿ ಕಾದಿದ್ದ ಯೋಚನೆಗಳನ್ನು ಮತ್ತೆ ಕೂಡಿಕೊಂಡರು...

... ಗೌಡರ ಮನೆಗೆ ಅದೇ ಆಗ ಅವರ ಅಳಿಯ ಶಿವಪ್ಪ, ನಗರದ ವಕೀಲರೊಬ್ಬರೊಡನೆ ಕಾರಿನಲ್ಲಿ ಬಂದು ತಲಪಿದ್ದ. ಜತೆಯಲ್ಲಿ ರಂಗಣ್ಣನೂ ಇದ್ದ.

ಕಾರಖಾನೆಯ ವಸತಿ ಪ್ರದೇಶದ ನೀಲಿನಕಾಶೆಯನ್ನೂ ಇತರ ಕಾಗದ ಪತ್ರಗಳನ್ನೂ ಹರಿಭಾಯಿ ಸೇಠ್ ಶಾಮೇಗೌಡರ ಕೈಗಿತ್ತರು. ಗೌಡರು ಅಷ್ಟನ್ನೂ ತಮ್ಮ ವಕೀಲರಿಗೆ ಒಪ್ಪಿಸಿದರು.

ಸೇಠ್, ರಂಗಣ್ಣನೊಡನೆ ಇಂಗ್ಲಿಷಿನಲ್ಲಿ ಕುಶಲ ಮಾತುಕತೆಗಳನ್ನು ಆರಂಭಿಸಿ, "ನೀವು ಫಿಸಿಷಿಯನಾದರೂ ಸರಿ, ಸರ್ಜನಾದರೂ ಸರಿ, ಫಾರೀನ್‌ನಿಂದ ಬಂದ್ಮೇಲೆ ಫ್ಯಾಕ್ಟರಿಯವರು ಕಟ್ಟಿಸೋ ಆಸ್ಪತ್ರೇಲೇ ಇಲ್ಲಿಯೇ ಮೆಡಿಕಲ್ ಆಫೀಸರ್ ಆಗುವಿರಂತೆ" ಎಂದರು.

"ಆಗಲಿ, ನೋಡೋಣ," ಎಂದು ನುಡಿದು ರಂಗಣ್ಣ, ಅವರು ಏನು ಹೇಳಿದರೆಂಬುದನ್ನು ತಂದೆಗೆ ತಿಳಿಸಿದ.

ಅರ್ಥವಾಯ್ತು ಎನ್ನುವಂತೆ ಗೌಡರು ಮೌನವಾಗಿ ತಲೆಯಾಡಿಸಿದರು...

... ವಿಕ್ರಯ ಪತ್ರಕ್ಕೆ ತನ್ನ ಗಂಡನೂ ಸಹಿ ಹಾಕಿದುದನ್ನು ಭಾಗೀರಥಿ ಒಳ ಬಾಗಿಲ ಬಳಿ ಬಂದು ನಿಂತು ನೋಡಿದ್ದಳು. ಆ ಘಳಿಗೆಯಿಂದ ಅವಳ ಮುಖದಲ್ಲಿ ಶಾಂತತೆ ಮನೆ ಮಾಡಿತು.

ಮೋಹನರಾಯರೂ ವಿಷ್ಣುಮೂರ್ತಿಯವರೂ ಅಲ್ಲಿಯೇ ಊಟಕ್ಕಿದ್ದರು. ಅವರಿಬ್ಬರೂ ಆಡಿದುದು ಕಣಿವೇಹಳ್ಳಿಯ ಸ್ಥಳದಲ್ಲಿ ನಾಳೆ ಉದಿಸುವ ಶಹರದ ಮಾತನ್ನು, ಉಂಡದ್ದು

ಸಡಗರದ ಊಟವನ್ನು.

ಶ್ರೀನಿವಾಸಯ್ಯ ಹೂಂಗುಟ್ಟಿದರು.

ಸ್ವಲ್ಪ ಹೊತ್ತಿನ ಮೇಲೆ ದೊಡ್ಡಮ್ಮನೂ ಭಾಗೀರಥಿಯೂ ಊಟಕ್ಕೆ ಕುಳಿತಿದ್ದಾಗ ಗೋವಿಂದ ಬಂದು, "ಸರದ ವಿಷಯ ಅತ್ತೆ ಕೇಳಿದ್ರು. ಇಷ್ಟು ತಿಂಗಳಾದರೂ ಮಾಡಿಸ್ಕೊಟ್ಟಿಲ್ಲಾಂತ ಕೋಪಿಸ್ಕೊಂಡಿದಾರೆ," ಎಂದ.

ದೊಡ್ಡಮ್ಮ ಅಂದರು :

"ಎಷ್ಟಪ್ಪ ಬೇಕು ನಿನಗೆ? ಸಾವಿರ ರೂಪಾಯಿನೆ ?"

"ನನಗ್ಯಾಕೆ ದೊಡ್ಡಮ್ಮ? ಸರ ಮಾಡಿಸೋಕೆ..."

"ಅದಕ್ಕೇ ಕಣೋ..."

"ಈಗಿನ ಕಾಲ್ದಲ್ಲಿ ಒಂದು ಸಾವಿರಕ್ಕೆ ಎಲ್ಲಾಗುತ್ತೆ? ಒಂದೂವರೆನೋ ಎರಡೋ. ಈಗಲೇ ಇತ್ಯರ್ಥವಾಗದೇ ಹೋದ್ರೆ ನಾವು ಮೂರು ಜನ ಹಂಚ್ಕೋಬೇಕಾಗುತ್ತೆ ಆಮೇಲೆ. ಸುಮ್ಮನೆ ಜಗಳ..."

"ಆಗಲಿ ಗೋವಿಂದೂ, ನಿನ್ನಪ್ಪಂದೆಗೆ ಹೇಳ್ತೀನಿ."

ಗೋವಿಂದ ಪಡಸಾಲೆಗೆ ಹೋದ. ದೊಡ್ಡಮ್ಮ ಕಷ್ಟಪಟ್ಟು ಉಣ್ಣತೊಡಗಿದರು.

ಎರಡು ತುತ್ತು ಬಾಯಿಗಿರಿಸಿ ಆದ ಮೇಲೆ ಭಾಗೀರಥಿ ಶಾಂತವಾದ ಸ್ವರದಲ್ಲಿ, "ಅವರ ಕಾಸಿನ ಸರ ಬಾವೀಲಿದೆ, ದೊಡ್ಡಮ್ಮ. ನಾನು ಹಾಕಿದ್ದು," ಎಂದಳು.

ದೊಡ್ಡಮ್ಮ ಯಾವ ಭಾವನೆಯನ್ನೂ ತೋರ್ಪಡಿಸದೆ, "ಇರಲಿ, ಬಿಡು. ತೆಗೆಸಿಕೊಟ್ಟರಾಯ್ತು," ಎಂದು ಹೇಳಿ ಊಟ ಮುಂದುವರಿಸಿದರು.

... ಸಂಜೆ ನಗರಕ್ಕೆ ಮರಳುವ ಮುನ್ನ ವಿಷ್ಣುಮೂರ್ತಿ ವಿಘ್ನೇಶ್ವರ ಭವನವನ್ನು ಸಂದರ್ಶಿಸಿದರು.

ಗಜಾನನನ ಹೆಂಡತಿಯೊಡನೆ ಅವರು, "ಜಲಜಾ, ನೀನು ಮಹಾ ಮುತ್ತೈದೆ ನೋಡು. ಈ ಹಳ್ಳಿಗೆ ಕಾಲಿಟ್ಟದ್ದೇ ಇಟ್ಟದ್ದು. ಇದರ ಅದೃಷ್ಟ ಖುಲಾಯಿಸ್ತು," ಎಂದರು.

"ಮಾವ, ಕಾರ್ಖಾನೆಯವರು ಕ್ಯಾಂಟೀನ್ ಇಡುತಾರಲ್ಲ. ಅದನ್ನ ನನಗೆ ಕೊಡ್ಸಿ," —ಎಂದು ಗಜಾನನ ಕತ್ತು ತುರಿಸಿಕೊಳ್ಳುತ್ತ ಪ್ರಸ್ತಾಪಿಸಿದ.

"ಹುಚ್ಚ ! ಅವರ ಹಂಗ್ಯಾಕೆ ? ಇಲ್ಲೊಂದು ಜೋರಾದ ಬಿಲ್ಡಿಂಗ್ ನಾನು ಕಟ್ಟಿಸ್ತೀನಿ. ಭಾರೀ ಹೋಟ್ಲಿಡು. ಕ್ಯಾಂಟೀನ್ ನಡೆಸೋಕೆ ನಿನ್ನ ಕೆಲಸದ ಹುಡುಗರ್ನ ಬಿಟ್ಟರಾಯ್ತು," ಎಂದರು ವಿಷ್ಣುಮೂರ್ತಿ.

... ಕತ್ತಲಾಯಿತು. ತನ್ನ ಆಯುಸ್ಸಿನಲ್ಲಿ ಇನ್ನು ಉಳಿದಿರುವ ಹಗಲಿರುಳು ಕೆಲವೇ ಎಂದು ಅರಿತ ಕಣಿವೇಹಳ್ಳಿ ಬೇಗನೆ ನಿದ್ದೆ ಹೋಯಿತು.

ಭಾಗೀರಥಿಗೆ ಆ ರಾತ್ರೆ ಗಾಢನಿದ್ದೆ. ಶ್ರೀನಿವಾಸಯ್ಯನಾಗಲೀ ದೊಡ್ಡಮ್ಮನಾಗಲೀ ಎವೆ ಮುಚ್ಚಲಿಲ್ಲ.

* * * *

ಅದೇ ತಿಂಗಳು ಶ್ರೀನಿವಾಸಯ್ಯನವರ ಮನೆ ಬರಿದಾಯಿತು.

ಗೋಪಾಲ ಸಕುಟುಂಬನಾಗಿ ಹೊಸಹಳ್ಳಿಗೆ ಹೋಗಲು ಅಣಿಯಾದ.

ಗೋವಿಂದ ತನ್ನ ಸಾಮಾನುಗಳನ್ನು ವಿಘ್ನೇಶ್ವರಭವನದಲ್ಲಿಟ್ಟ.

ಪದ್ಮ ಬಂದು ಪುಸ್ತಕಗಳ ಗಂಟನ್ನು ನಗರಕ್ಕೆ ಹೊರಿಸಿಕೊಂಡು ಹೋದ.

ಹರಿಭಾಯಿ ಸೇಠರ ನೌಕರರು ಬಂದು ಆ ಮನೆಯಲ್ಲಿ ಬೀಡುಬಿಟ್ಟರು.

ಕಣಿವೇಹಳ್ಳಿಯ ಪರಿಣತ ಈಜುಗಾರರಿಬ್ಬರು ಅಯ್ಯನವರ ಮನೆಯ ಬಾವಿಗಿಳಿದು, ಪ್ರಯಾಸಪಟ್ಟು, ['ನೀರು ಸೇದೋವಾಗ ಬಿದ್ದಿರ್ಬೇಕು'] ಕಾಸಿನ ಸರವನ್ನು ಹುಡುಕಿ ತಂದರು.

ಗಂಗಾಧರಶಾಸ್ತ್ರಿ ಗೊತ್ತು ಮಾಡಿದ ದಿನ ದೊಡ್ಡಮ್ಮನೂ ಶ್ರೀನಿವಾಸಯ್ಯನವರೂ ಗುಡಿಗೆ ಹೋಗಿ ಬಂದರು. ವಿಷ್ಣುಮೂರ್ತಿ ಕಳುಹಿಸಿದ ಟ್ಯಾಕ್ಸಿ ಕಣಿವೇಹಳ್ಳಿಯನ್ನು ತಲಪಿತು. ಹಳ್ಳಿಯ ರೈತರೆಲ್ಲ ಅಯ್ಯನವರನ್ನೂ ದೊಡ್ಡಮ್ಮನವರನ್ನೂ ಬೀಳ್ಕೊಡಲು ನೆರೆದರು.

ಶಾಮಣ್ಣ, ನಾಗಮ್ಮ, ಸುಬ್ಬಿ...

ತಮ್ಮ ಪಾದಗಳಿಗೆ ನಮಿಸಿದ ಸುಭದ್ರೆಯನ್ನು ದೊಡ್ಡಮ್ಮ ಮುಟ್ಟಿ ಆಶೀರ್ವದಿಸಿದರು.

"ಸೌಭಾಗ್ಯವತಿಯಾಗು ಮಗೂ."

ಮಂಜಾದ ಕಣ್ಣುಗಳು.

"ಅಪ್ಪಣೆ ಕೊಡಬೇಕು ಶಾಮಣ್ಣ..."

"ಹೋಗ್ಬನ್ನಿ ಅಯ್ನೋರೆ."

ದೊಡ್ಡಮ್ಮ ನೆಲದಿಂದ ಪಾದಗಳನ್ನು ಕಿತ್ತು ಟ್ಯಾಕ್ಸಿಯೊಳಕ್ಕೆ ಕುಳಿತರು. ಎಷ್ಟು ತಡ ಹೊರಡುವುದು ! ವಾಹನವನ್ನು ಜನ ಬಿಡಬೇಕಲ್ಲ.

ದಾರಿಯಲ್ಲಿ ಗೋವಿಂದನೆಂದ :

"ಅಣ್ಣಯ್ಯ, ಒಂದೆಡು ದಿನವಾದರೂ ನಗರದಲ್ಲಿ ಇದ್ದು ಹೋಗ್ಬೇಕೂಂತ ಮಾವ ಹೇಳಿದಾರೆ. ಬ್ಯಾಂಕಿನ ಕೆಲಸ ಒಂದಿದೆಯಲ್ಲ, ಅದನ್ನ ಮುಗಿಸ್ಬೇಕು."

"ಹೂಂ." ಎಂದರು ಶ್ರೀನಿವಾಸಯ್ಯ.

ಟಾರ್ ರಸ್ತೆಯನ್ನು ತಲಪಿದಾಗ, ಆಲದ ಮರದ ಕೆಳಗೆ ಅಬ್ದುಲ್ಲ ತನ್ನ ಹೆಂಡತಿ ಮಕ್ಕಳೊಡನೆ ನಿಂತಿದ್ದುದನ್ನು ಕಂಡರು.

ಶ್ರೀನಿವಾಸಯ್ಯ ಕೇಳಿದರು :

"ಏನಿದು? ಇಲ್ಲಿ?"

ಅವರೂ ಹೊರಟರೆಂಬುದನ್ನು ಅರಿತಿದ್ದ ಅಬ್ದುಲ್ಲನೆಂದ :

"ಕಣಿವೇಹಳ್ಳಿಯ ನೀರಿನ ಋಣ ಮುಗೀತು ಒಡೆಯಾ. ಒಂಟಿದೀವಿ. ಅಲ್ಲಾ ಎಲ್ಲಿಗೆ ಕರಕೊಂಡೋಯ್ತಾನೋ ಅಲ್ಲಿಗೆ ಓಗ್ತೀವಿ."

ಟ್ಯಾಕ್ಸಿ ಮುಂದುವರಿದಾಗ ಗೋವಿಂದ ಆರಂಭಿಸಿದ :

"ನಿನ್ನನ್ನ ಮೇಸ್ತ್ರಿ ಮಾಡ್ತೀನೀಂತ ಅಬ್ದುಲ್ಲನಿಗೆ ಹೇಳಿದ್ದೆ..."

ಶ್ರೀನಿವಾಸಯ್ಯ ಮಗನಿಗೆ ಅಂದರು :

"ಇವತ್ತು ಒಂದು ದಿವಸವಾದರೂ ಸುಮ್ನಿರ್ಬಾರ್ದೇನೋ..."

---

-೨೪



ಸಾಯಲು ನಿರಾಕರಿಸುವ ಹಳತು
ಹುಟ್ಟಲು ತಡಮಾಡುತ್ತಿರುವ
ಹೊಸತು
ಇದು ಅಸಹನೀಯ ನೋವು

ಬದಲಾಗಲು ಚಡಪಡಿಸುತ್ತಿರುವ
ಗ್ರಾಮೀಣ ಸಮಾಜ –ಸಮಸ್ಯೆಗಳ ಹುತ್ತ

ಜಾತಿಮತಗಳು ಬಡತನ ಸಿರಿತನ
ನಗರದ ಸೂಜಿಗಲ್ಲು ಸೆಳೆತ

* *

ಆ ಮಾನವ ಸಂಬಂಧಗಳ
ಸೂಕ್ಷ್ಮ ಕಲಾತ್ಮಕ ಚಿತ್ರಣ

* * *

**'ನೋವು': ನಿರಂಜನರ**
**'ನೂರು ಜುಟ್ಟು ಮೂರು ಜಡೆ'**
**ಕಾದಂಬರಿಯ ನೂತನ ಆವೃತ್ತಿ**
**ಒಂದೇ ಸಂಪುಟದಲ್ಲಿ**

AKRUTI
₹ 70.00 2015